# ಪ್ರಸ್ತಾವನೆ

ಕನ್ನಡದಲ್ಲಿ ದೊರೆಯುವ ಜನಪದ ಕಥನಗೀತೆಗಳಲ್ಲಿ ಸಾಮಾಜಿಕ ಕಥನಗೀತೆಗಳದ್ದು ಸಿಂಹಪಾಲು, ಇಂಥ ಬಹಳಷ್ಟು ಗೀತೆಗಳು ಜನಪ್ರಿಯವಾಗಿದ್ದು, ಅನೇಕ ಪಾಠಾಂತರಗಳನ್ನು ಹೊಂದಿವೆ. ಕರ್ನಾಟಕದ ಪರಂಪರಾಗತ ಸಾಮಾಜಿಕ, ಸಾಂಸ್ಕೃತಿಕ ಜೀವನವನ್ನು ಅರಿಯಲು ಇವು ಸಹಾಯಕಾರಿಯಾಗಿವೆ.

ಸಮಾಜದಲ್ಲಿ ಬೇರೂರಿದ್ದ ಅನೇಕ ಅನಿಷ್ಟ ಸಂಪ್ರದಾಯಗಳು ಜನಪದ ಹೆಣ್ಣಿನ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದನ್ನು ಅನೇಕ ಕಥನ ಗೀತೆಗಳು ತಿಳಿಸುತ್ತವೆ. ಜೀವಂತವಾಗಿ ಸತ್ತ ಗಂಡನ ಚಿತೆಏರಿ, ತನ್ನ ಜೀವನವನ್ನೇ ಸುಟ್ಟುಕೊಳ್ಳುವ ಕ್ರೂರಪದ್ಧತಿ ಸತಿ ಆಚರಣೆಯಲ್ಲಿದೆ. ಇದಕ್ಕೆ ಬಲಿಯಾದವರು ಲೆಕ್ಕವಿಲ್ಲದಷ್ಟು ಹೆಣ್ಣುಮಕ್ಕಳು. ಒಂದು ಕಾಲದಲ್ಲಿ ಭಾರತದ ತುಂಬೆಲ್ಲ ಈ ಆಚರಣೆ ರೂಢಿಯಲ್ಲಿದ್ದಿತು. ಪ್ರವಾಸಿ ಬರಹಗಳು ಇಂಥ ಘಟನೆಗಳನ್ನು ಅಮಾನವೀಯ ವರ್ತನೆಯೆಂದು ಗುರುತಿಸಿ ಬಣ್ಣಿಸಿವೆ. ಈ ಸಂಕಲನದ "ಈರೋಬಿ' ಅಂಥ ಒಂದು ಕಥನಗೀತೆ. ಗಂಡ ಸತ್ತಾಗ ಅವನ ಶವದೊಡನೆ ಜೀವಂತವಾಗಿ ಚಿತೆ ಏರುವುದಲ್ಲದೆ, ಸತ್ತ ಸುದ್ದಿ ಬರಿದೆ ಕೇಳಿ, ಉರಿಯಕೊಂಡ ನಿರ್ಮಿಸಿ ಚಿತೆ ಹೋಗುವುದು ಮತ್ತೊಂದು ಬಗೆ. ಕೆಲವೊಮ್ಮೆ ಮದುವೆಯೇ ಆಗಿರಬೇಕೆಂದಿಲ್ಲ; ನಿಶ್ಚಿತಾರ್ಥವಾಗಿದ್ದರೂ ಸಾಕು, ಈ ಪದ್ಧತಿಯನ್ನು ಜಾರಿಗೊಳಿಸುತ್ತಿದ್ದರು. "ನಾಗವ್ವ' ಅಂಥ ಒಂದು ಘಟನೆಯನ್ನು ಹೃದಯವಿದ್ರಾವಕವಾದ ರೀತಿಯಲ್ಲಿ ಬಣ್ಣಿಸುತ್ತದೆ. ತವರವರು ಅವಳನ್ನು ಕೊಂಡಕ್ಕೇ ಧಾರೆ ಎರೆದುಕೊಡುತ್ತಾರೆ.

ಮಧ್ಯಕಾಲೀನ ಯುಗದಲ್ಲಿ ಸತಿಪದ್ಧತಿ ಅತ್ಯಂತ ಪ್ರಚುರವಾಗಿತ್ತು ಮತ್ತು ಸಾಮಾಜಿಕ ಮನ್ನಣೆಯನ್ನೂ ಪಡೆದಿತ್ತು. ಸತಿಯಾದ ಹೆಣ್ಣು ಸತ್ತ ಗಂಡನೊಂದಿಗೆ ಸ್ವರ್ಗಸೇರಿ ಸರ್ವಸುಖವನ್ನು ಅನಂತಕಾಲ ಅನುಭವಿಸುತ್ತಾಳೆ ಎಂದು ನಂಬಿಸಲಾಗಿತ್ತು. ಒಲ್ಲದ ಹೆಣ್ಣುಗಳನ್ನು ಹಿಡಿದುತಂದು ಚಿತೆಗೆ ದೂಡಲಾಗಿತ್ತೆಂದೂ ಹೇಳಲಾಗುತ್ತದೆ. ಈ ಪದ್ಧತಿಗೆ ಸಂಬಂಧಿಸಿದ ಎಲ್ಲ ಕಥನಗೀತೆಗಳನ್ನು ಅಧ್ಯಯನ ಮಾಡಿದಾಗ, ಅಂಥ ದುರವಸ್ಥೆಗೆ ಈಡಾದ ಹೆಣ್ಣು ಮಕ್ಕಳ ಅಸಹಾಯಕತೆ ನಮ್ಮ ಕಣ್ಣಿಗೆ ಕಟ್ಟುತ್ತದೆ. ಅದನ್ನು ಅವರು ತಮ್ಮ ಮೌನದ ಮೂಲಕ, ಕೆಲವೊಮ್ಮೆ ಪ್ರತಿಭಟನೆಯ ಮಾತುಗಳ ಮೂಲಕ ವ್ಯಕ್ತಪಡಿಸಿದ್ದನ್ನು ಕಾಣುತ್ತೇವೆ. ಇಂಥ ಗೀತೆಗಳಲ್ಲಿಯ ತ್ಯಾಗವನ್ನು ವೈಭವೀಕರಿಸಿ, ಬಲಿದಾನದ ಗೀತೆಗಳು ಎನ್ನುವುದಕ್ಕಿಂತ, ದುರಂತ ಗೀತೆಗಳು ಎಂದು ಕರೆಯುವುದು ಹೆಚ್ಚು ಸಮಂಜಸ. ಹಾಡುಗಾರರ ಅಭಿಪ್ರಾಯವೂ ಅದೇ ರೀತಿಯಾಗಿದೆ. "ನಾಗವ್ವ' ಕಥನಗೀತೆಯಲ್ಲಿ ಹಾಡುಗಾರ್ತಿ ಕೊನೆಯಲ್ಲಿ;

*"ಹೆಣ್ಣೀಗೆ ಮಣ್ಣು ಬಿದ್ದೊ ಕಣ್ಣೀಗೆ ಸೆತ್ತೆ ಬಿದ್ದೊ*
*ಸಣ್ಣಸೀರೆಯಮ್ಯಾಲೆ ಕಿಡಿಬಿದ್ದೊ । ನಾಗವ್ವನ*
*ಹಣೆಗಂಟು ನಲುಗಿ ಉರಿದ್ಹೋದೋ ॥'*

ಎಂದು ನಿಟ್ಟುಸಿರು ಬಿಟ್ಟಿದ್ದಾಳೆ.

ಹೆಣ್ಣನ್ನು ಊರು, ಸಮಾಜ, ಇವುಗಳ ರಕ್ಷಣೆಗಾಗಿ ಬಲಿಕೊಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದಂತಿದೆ. ಗಂಡಿನ ಸ್ವಾರ್ಥ, ತಾನು ಸತ್ತ ನಂತರವೂ ತನ್ನ ಹೆಂಡತಿ ತನಗೆ ನಿಷ್ಠಳಾಗಿರಬೇಕು, ಅದಿಲ್ಲದಿದ್ದರೆ, ತನ್ನೊಂದಿಗೆ ಅವಳೂ ಜೀವನವನ್ನು ಕೊನೆಗೊಳಿಸಿಕೊಳ್ಳಬೇಕು ಎಂದು ಆಗ್ರಹಪಡಿಸುತ್ತದೆ. ಸತಿಪದ್ಧತಿಯಲ್ಲಿ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಇದರಂತೆ ಕೆರೆ, ಕೋಟೆಗಳ ರಕ್ಷಣೆಗೆ ಬಲಿಯಾಗಿ ಹೆಣ್ಣನ್ನೇ ಆಯ್ಕೆ ಮಾಡಿಕೊಂಡಿರುವುದು ಆಕಸ್ಮಿಕವೇನಲ್ಲ. "ಕೆರೆಗೆ ಹಾರ', "ಕೋಟೆಕಿಲ್ಲೆ ಕಥೆ' ಮುಂತಾದ ಕಥನಗೀತೆಗಳು ಈ ಅಂಶವನ್ನು ಹೊರಹಾಕುತ್ತವೆ. "ಕೆರೆಗೆ ಹಾರ' ಅತ್ಯಂತ ಜನಪ್ರಿಯವಾದ ಒಂದು ಕಥನ ಗೀತೆ. ಸುಮಾರು ೨೫ಕ್ಕೂ ಹೆಚ್ಚು ಪಾಠಾಂತರಗಳು ಇದಕ್ಕೆ ಲಭ್ಯವಿವೆ. "ಮದಗದಕೆಂಚಮ್ಮ', "ಕೆರೆ ಹೊನ್ನಮ್ಮ'ಗಳಂತಹ

ಸುದೀರ್ಘಕಾವ್ಯಗಳೂ ಹುಟ್ಟಿಕೊಂಡಿವೆ. ಕೆರೆ, ಕೋಟೆಗಳ ಬಲಿಗಳಲ್ಲಿ ಒಂದರಲ್ಲಿ ನೀರು ಮಾಧ್ಯಮವಾದರೆ ಮತ್ತೊಂದರಲ್ಲಿ ಕಲ್ಲು, ಮಣ್ಣು ಮಾಧ್ಯಮ ಎಂಬುದನ್ನು ಬಿಟ್ಟರೆ ಬಲಿಯ ಆಶಯ ಎರಡರಲ್ಲೂ ಒಂದೇ ಆಗಿದೆ.

ಬಹುತೇಕ ಸಂದರ್ಭಗಳಲ್ಲಿ ಮನೆಯಲ್ಲಿ ಗಂಡನ ಅನುಪಸ್ಥಿತಿಯನ್ನು ಗಮನಿಸಿಯೇ, ಅವನು ದಂಡಿಗೆ ಹೋದ ಸನ್ನಿವೇಶದ ಲಾಭವನ್ನು ಪಡೆದೇ ಹೆಣ್ಣನ್ನು ಬಲಿಪಶುಮಾಡುವ ಕೆಲಸ ಕಾರ್ಯಗತವಾಗುವುದನ್ನು ಗುರುತಿಸಬಹುದು. ಆದರೆ ಮಾತೃಮೂಲೀಯ ಸಮಾಜ ವ್ಯವಸ್ಥೆ ಜಾರಿಯಲ್ಲಿರುವ ಅಥವಾ ಅದರ ಪ್ರಭಾವ ಸ್ವಲ್ಪಮಟ್ಟಿಗಾದರೂ ಉಳಿದಿರುವ ಸಾಮಾಜಿಕ ಪ್ರದೇಶದಲ್ಲಿ ಈ ಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣುತ್ತೇವೆ. “ನಿಗಳಬಲಿ’ ಕಥನ ಗೀತೆಯಲ್ಲಿ ಹೆಣ್ಣನ್ನು ಕೆರೆಗೆ ದೂಡಿದ್ದರೂ ಅಣ್ಣ ಹೋಗಿ ತಂಗಿಯನ್ನು ನಿಗಳದ ಕೈಯಿಂದ ಬಿಡಿಸಿಕೊಂಡು ಬಂದ ಚಿತ್ರಣವಿರುವುದು ಗಮನಾರ್ಹ.

ಒಂದು ಕಾಲದಲ್ಲಿ “ನರಬಲಿ’ ಅತ್ಯಂತ ವ್ಯಾಪಕವಾದ ಆಚರಣಾ ಪದ್ಧತಿಯಾಗಿತ್ತು. ಈ ಕುರಿತು ಅಪಾರವಾದ ನಂಬಿಕೆ ಹಾಗೂ ಭಯ ಜನರಲ್ಲಿತ್ತು. ಇದಕ್ಕೆ ನಿದರ್ಶನವಾಗಿ ಅಪೂರ್ವವಾದ ಗೀತೆಯೊಂದು ಕನ್ನಡ ಜಿಲ್ಲೆಯಲ್ಲಿ ದೊರೆತಿದೆ. “ಬಾರ್ಕೂರ ಹಿರಿಯಣ್ಣ ಶೆಟ್ರು’ ಗೀತೆಯಲ್ಲಿ ಹಡಗು ಚಲಿಸದೇ ಇದ್ದಾಗ, ಹಡಗಿನ ಆದೇಶದಂತೆ ಒಬ್ಬ ಹುಡುಗನನ್ನು ಬಲಿಕೊಡುವ ಪ್ರಯತ್ನ ಮಾಡಿದ್ದನ್ನು ಕಾಣುತ್ತೇವೆ. ಆದರೆ ಇಲ್ಲಿ ಆ ಹುಡುಗನ ಪೂರ್ಣ ಬಲಿಯಾಗದೇ ಅವನ ತೊಟ್ಟು ರಕ್ತದಿಂದಲೇ ಹಡಗು ಸಂತುಷ್ಟಗೊಂಡು ಚಲಿಸಿದ್ದನ್ನು ಅರುಹಲಾಗಿದೆ.

ಹೆಣ್ಣು ಬಲಿಯ ವಿಷಯದಲ್ಲಿ ಹೆಣ್ಣು, ಅದರಲ್ಲೂ ಗರ್ಭವತಿಯಾದ ಹೆಣ್ಣು ಬಲಿಗೆ ಶ್ರೇಷ್ಠ ಎಂಬ ಪರಿಕಲ್ಪನೆ ಬೆಳೆಸಿಕೊಂಡು ಬಂದಿರುವಾಗ, ಹಾಗೂ ಅವಳು ಪೂರ್ಣವಾಗಿ ಬಲಿ ಅಥವಾ ಹಾರವಾದಂತೆ ಚಿತ್ರಿತವಾಗಿದ್ದರೆ, ಗಂಡುಮಗುವಿನ ವಿಷಯದಲ್ಲಿ ತೊಟ್ಟು ರಕ್ತ ಸಾಕೆಂಬಂತೆ ಚಿತ್ರಿತವಾಗಿರುವುದು ಮತ್ತೆ ಪುರುಷಪ್ರಧಾನ ಸಮಾಜದ ಪಕ್ಷಪಾತ ದೃಷ್ಟಿಯೇ ಇಲ್ಲಿ ಕಾರ್ಯಗತವಾಗಿರುವುದು ಎದ್ದು ಕಾಣುತ್ತದೆ.

ಕೆರೆಯಲ್ಲಿ ನೀರು ಬಾರದಿದ್ದಾಗ ಹಾರ (ಆಹುತಿ) ನೀಡುವಂತೆ, ಹೊಳೆ-ನದಿಗಳಿಗೆ ನೆರೆ ಬಂದಾಗಲೂ ಆಹುತಿ ಕೊಡುವ (ಹೊಳೆ ಅಳೆಯುವ) ಪರಂಪರೆ ಇದ್ದುದು “ಗರತಿ ಗಂಗವ್ವ’ ಹಾಡಿನಿಂದ ತಿಳಿದುಬರುತ್ತದೆ. ನದಿ ಉಕ್ಕಿ ಬಂದಾಗ, ಅಡ್ಡ ನಿಂತು ಜೀವತೆತ್ತು ಊರನ್ನು ಉಳಿಸಿದವಳು ಗರತಿ ಗಂಗವ್ವ. ಹೆಣ್ಣಿನ ಶೀಲಶಂಕೆಯಿದ್ದಾಗಲೂ ಪಾತಿವ್ರತ್ಯದ ಪರೀಕ್ಷೆಯಾಗಿ ಅಳೆಯುವುದನ್ನು ಬಳಸಿಕೊಂಡಿರುವುದು “ಅತುಮವ್ವಿ’ ಹಾಗೂ ಅದರ ಪಾಠಾಂತರ ಕಥನ ಗೀತೆಗಳಲ್ಲಿ ಕಂಡುಬರುತ್ತದೆ. ಮೊದಲು ಅನೇಕ ಅಸಾಧ್ಯ ಕೆಲಸಗಳನ್ನು ಹೆಣ್ಣಿಗೆ ಮಾಡಲು ಹೇಳಿ, ಅದನ್ನೆಲ್ಲ ಯಶಸ್ವಿಯಾಗಿ ಈಡೇರಿಸಿದಾಗ, ಕೊನೆಯಲ್ಲಿ ತೆರೆ ಅಳೆಯಲು ಹೇಳುವುದು ಈ ಎಲ್ಲ ಗೀತೆಗಳ ಸಮಾನ ಆಶಯ. ಗಂಡನ ಸಂಶಯ ಪ್ರವೃತ್ತಿಯಿಂದ ಮನನೊಂದ ಹೆಣ್ಣುಗಳು ತೆರೆ ಅಳೆಯುತ್ತಲೇ ಅದೃಶ್ಯರಾದ ದುರಂತ ಗಮನಾರ್ಹ. ಇದೊಂದು ರೀತಿಯ ಹೆಣ್ಣಿನ ಪ್ರತಿಭಟನೆಯ ಸ್ವರೂಪವೂ ಹೌದು.

“ಧರಣಿಮಂಡಲ ಮಧ್ಯದೊಳಗೆ’ ಎಂದು ಪ್ರಾರಂಭವಾಗುವ “ಗೋವಿನ ಹಾಡು’ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾದುದು. ಇದರೊಂದಿಗೆ ಅನೇಕ ಜನಪದ ಗೋವಿನ ಹಾಡುಗಳೂ ಪ್ರಚಲಿತವಿವೆ. ಕುಟ್ಟುವ, ಬೀಸುವ, ಮೊಸರು ಕಡೆಯುವ, ಕೋಲಾಟದ ಹೀಗೆ ನಾನಾ ಕ್ರಿಯೆಗಳಲ್ಲಿ ಬಳಸಿಕೊಳ್ಳುವ ವೈವಿಧ್ಯಮಯ ಧಾಟಿಯ ಕೌಲೆ ಹಾಡುಗಳನ್ನು ಇಲ್ಲಿ ಉಲ್ಲೇಖಿಸಬಹುದು. ಧಾಟಿಯ ಭಿನ್ನತೆಯೊಂದಿಗೆ, ಆಶಯ ಭಿನ್ನವಾಗಿರುವುದು ಇವುಗಳಲ್ಲಿ ಗಮನಿಸಬೇಕಾದ ಅಂಶವಾಗಿದೆ. “ಕವುಲಿ’ ಹಾಡಿನಲ್ಲಿ ಹುಲಿ ತಿನ್ನದೇ ಬಿಟ್ಟ ಹಸುವಿನ ಚಿತ್ರ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ಕ್ರೂರತೆಯ ಬದಲಾಗಿ ಮೃದುತ್ವವನ್ನು ಅಂತಸ್ಥಗೊಳಿಸಿರುವುದು, ಮುಗ್ಧ, ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಸಂದ ಗೌರವವಾದರೆ, “ಸಿರಿಕವಲಿ’ಯಲ್ಲಿ ಹುಲಿತಿನ್ನದೇ ಬಿಟ್ಟರೂ, ಹಸಿರು ಹುಲ್ಲಿನ ಆಸೆಗಾಗಿ ಎತ್ತರದ ಗುಡ್ಡಕ್ಕೆ ಹೋಗಿ ಕಾಲುಜಾರಿ ಪ್ರಪಾತಕ್ಕೆ ಬಿದ್ದು, ಜೀವಕಳೆದುಕೊಳ್ಳುವುದು - “ವಿಧಿ’ಯನ್ನು ಕುರಿತು ಜನಪದರಿಗಿರುವ ಲೋಕದೃಷ್ಟಿಗೆ ನಿದರ್ಶನ. ಈ ಮೇಲಿನ ಎರಡು ಬಗೆಯ ಕತೆಗಿಂತಲೂ ಭಿನ್ನವಾದ ಘಟನೆ, “ಹೆಬ್ಬುಲಿಗೆ ನಾನು ಕೊಟ್ಟೆನು ಭಾಷೆ’ ಎಂಬ ಕಥನ ಗೀತೆಯಲ್ಲಿದೆ. ಇಲ್ಲಿ ಹಿಂತಿರುಗಿಬಂದ ಹಸುವನ್ನು ಹುಲಿ ತಿಂದು ಬಿಡುತ್ತದೆ. ಮುಗ್ಧ ಗೋವನ್ನು ನಾಶಮಾಡಿದ್ದಕ್ಕಾಗಿ ಹುಲಿಮರಿ

ತಾಯಿಯನ್ನು ಆಕ್ಷೇಪಿಸುತ್ತದೆ. ಹಾಲು ಕುಡಿಸುತ್ತಿರುವಾಗ ಹೊಟ್ಟೆ ಬಗಿದು ತಾಯಿಯನ್ನೇ ಕೊಲ್ಲುತ್ತದೆ. ಅಷ್ಟೇ ಅಲ್ಲ; ತಬ್ಬಲಿ ಕರುವಿಗೆ ಸಮಾಧಾನ ಮಾಡಿ, ಹಿಂಡನ್ನು ಸೇರಿಕೊಳ್ಳಲು ಉಪದೇಶಿಸುತ್ತದೆ. ಹಿರಿಯರು ಮಾಡಿದ ಅನ್ಯಾಯವನ್ನು ಮುಂದುವರಿಸದೇ ಸರಿಪಡಿಸಲು ಮಾಡುವ ವಿಶಿಷ್ಟ ಪ್ರಯತ್ನ, ಈ ಪ್ರಾಣಿ ಲೋಕದ ಹಾಡಿನಲ್ಲಿದೆ.

"ಆದರ್ಶ ಗೆಣೆತನ' ಅಪೂರ್ವವಾದುದು. ಅದನ್ನು ಕೊನೆಯತನಕ ನಿಭಾಯಿಸಲು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. "ಸೋಮರಾಯ ಭೀಮರಾಯ' ಅಂಥ ಅಪರೂಪದ ಗೆಳೆತನವನ್ನು ಎತ್ತಿ ತೋರಿಸುವ ಕಥನಗೀತೆ. ತಾನು ಇಷ್ಟಪಟ್ಟ ಹೆಣ್ಣು, ಸ್ನೇಹಿತನ ಹೆಂಡತಿಯೇ ಎಂದು ತಿಳಿದಾಗ ಪಶ್ಚಾತ್ತಾಪಪಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಮುಂದೆ ಅದು ಸ್ನೇಹಿತನ ಹೆಂಡತಿಯ ಆತ್ಮಹತ್ಯೆಗೂ ಕಾರಣವಾಗುತ್ತದೆ. ದುರಂತದಲ್ಲಿ ಪರ್ಯವಸಾನವಾಗಬೇಕಾಗಿದ್ದ ಈ ಕಥನಗೀತೆಯಲ್ಲಿ ಶಿವಕೃಪೆಯ ಮೂಲಕ ಎಲ್ಲರೂ ಬದುಕಿಬರುತ್ತಾರೆ. ಇದು ಸ್ನೇಹಕ್ಕೆ ದೊರೆತ ನೈತಿಕ ಜಯವಾಗಿದೆ. ಜನ್ನನ ಅನಂತನಾಥ ಪುರಾಣದ ಚಂಡಶಾಸನ ಕಥೆಯನ್ನು ಹೋಲುವ ಈ ಕಥೆ, ಜನಪದ ಕಥಾಲೋಕದ ಒಂದು ಅಪೂರ್ವ ಕಥನಗೀತೆಯಾಗಿದೆ.

ಬಾಲ್ಯ ವಿವಾಹದ ದುಷ್ಪರಿಣಾಮವನ್ನು ಸಾರುವ ಕೆಲವು ಕಥನಗೀತೆಗಳು ಕನ್ನಡ ಜನಪದ ಸಾಹಿತ್ಯದಲ್ಲಿವೆ. ಪಾಳೆಯಗಾರರ ಆಡಳಿತ ಕಾಲದಲ್ಲಿ ಪ್ರತಿಯೊಂದು ಊರಿನಿಂದಲೂ ಕೆಲವರು ಸೈನ್ಯಕ್ಕೆ ಸೇರಬೇಕಾಗುತ್ತಿತ್ತು. ದಂಡಿಗೆ ಹೋಗುವ ಯುವಕರನ್ನು ಸಾಮಾನ್ಯವಾಗಿ ಮದುವೆ ಮಾಡಿ ಕಳಿಸುತ್ತಿದ್ದರು. ಮದುವೆಯ ಜವಾಬ್ದಾರಿಯಿಂದ ಅವರನ್ನು ನಿಯತ್ತಿನಲ್ಲಿರಿಸಬಹುದು ಎಂಬ ಭಾವನೆ ಇಂಥ ಮದುವೆಗಳ ಹಿನ್ನೆಲೆಯಲ್ಲಿ ಇದ್ದಂತಿದೆ. ದಂಡಿಗೆ ಹೋದವರು ದೀರ್ಘಕಾಲ ಹಿಂತಿರುಗಿ ಬರುತ್ತಿರಲಿಲ್ಲ. ಮದುವೆಯಾದ ಎಳೆಹೆಣ್ಣಿಗೆ ಗಂಡನ ಮುಖದ ಕಲ್ಪನೆಯೂ ಮೂಡಿರುತ್ತಿರಲಿಲ್ಲ. ಇದರಿಂದಾಗಿ ಅವನೇ ಸ್ವತಃ ಎದುರಿಗೆ ಬಂದು ನಿಂತರೂ ಗುರುತು ಹಿಡಿಯುವುದು ಸಾಧ್ಯವಾಗುತ್ತಿರಲಿಲ್ಲ. "ದಾಂಬ್ರಿವುವುs ಆಗಿ ಅವ್ವ ವುಟ್ಟಿದ್ದಾಳೋs' ಹಾಗೂ ಸಮಾನ ಆಶಯದ ಇನ್ನು ಕೆಲವು ಗೀತೆಗಳಲ್ಲಿ ಈ ಸಮಸ್ಯೆಯ ಭಿನ್ನ ಮುಖಗಳನ್ನು ಚಿತ್ರಿಸಲಾಗಿದೆ. ದಂಡಿಗೆ ಹೋದ ಗಂಡ ಹಿಂತಿರುಗಿಬಂದಾಗ ಗುರುತು ಹಿಡಿಯದೇ ಪುರುಷನೆಂದು ಭಾವಿಸಿ ಒರಟಾಗಿ ವರ್ತಿಸುತ್ತಾಳೆ. ನಿಜ ತಿಳಿಯುತ್ತಲೇ ನಾಚಿಕೆಯಿಂದ ವಾಸ್ತವವನ್ನು ಎದುರಿಸಲಾರದೇ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಬಾವಿಯಲ್ಲಿ ದಾಳಿಂಬರ ಹೂವಾಗಿ ಅರಳುತ್ತಾಳೆ. ದೈವಕೃಪೆಯಿಂದ ಹದಿನಾರರ ತರುಣಿಯಾಗಿ ಮಾರ್ಪಟ್ಟು ಗಂಡನೊಂದಿಗೆ ಸುಖಸಂಸಾರ ಮಾಡುತ್ತಾಳೆ.

ಪ್ರಾಚೀನ ಸಂಪ್ರದಾಯಗಳಲ್ಲಿ ಕೆಲವು ಕಟ್ಟು-ಕಟ್ಟಳೆಗಳು ವಿಚಿತ್ರವೆನ್ನಿಸುವಂತಿವೆ. ಕನ್ಯೆಗೆ ಮೈನೆರೆಯುವ ಮೊದಲೇ ಮದುವೆಮಾಡಬೇಕೆಂಬುದು ಅಂಥ ಒಂದು ಸಂಪ್ರದಾಯ. ಅಕಸ್ಮಾತ್ ಮುಂಚೆಯೇ ಮೈನೆರೆದರೆ, ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಅಟ್ಟಬೇಕೆಂದು ಕಟ್ಟಳೆ. ಇಂಥ ಕ್ರೂರ ಆಚರಣೆಯಿಂದ ಹೆಣ್ಣು ಮಕ್ಕಳು ಹಾಗೂ ಅವರ ಕುಟುಂಬ ಹೇಗೆ ದುಃಖ ಅನುಭವಿಸುತ್ತಿದ್ದರು ಎಂಬುದನ್ನು "ತೋಳನಿಗೆ ಬಲಿ' ಕಥನಗೀತೆಯಲ್ಲಿ ಚಿತ್ರಿಸಲಾಗಿದೆ. ತಂಗಿಯ ಮೇಲೆ ಅತೀವ ಪ್ರೀತಿ-ವಾತ್ಸಲ್ಯವಿದ್ದ ಅಣ್ಣ ಯುಕ್ತ ಕಾಲಕ್ಕೆ ಮದುವೆ ಮಾಡದೇ ಅವಳು ಮೈನೆರೆದಾಗ, ಅನಿವಾರ್ಯವಾಗಿ ಕಾಡಿನಲ್ಲಿ ಬಿಟ್ಟು ಬರಬೇಕಾದ ದುರಂತ ಪ್ರಸಂಗ ಅದರಲ್ಲಿದೆ. ಕಾಡುಪಾಲಾದ ಆ ಹೆಣ್ಣು ತೋಳನಿಗೆ ಬಲಿಯಾಗುವುದು ಇಲ್ಲಿನ ದುರಂತ.

ಕೆಲವು ದುಷ್ಟ ಸಂಪ್ರದಾಯಗಳ ಹಿಂದೆ ಬಲವಾದ ನಂಬಿಕೆ ಇದೆ. ಗಂಡು ಮದುವೆಯಾಗದೇ ಸತ್ತರೆ ಸ್ವರ್ಗ ಸಿಗದೆಂಬುದು ಅಂಥ ಒಂದು ನಂಬಿಕೆ. ಅಕಸ್ಮಾತ್ ಯಾವುದಾದರೂ ಒಂದು ಕಾರಣಕ್ಕಾಗಿ ಗಂಡು ಮದುವೆಯಾಗದೇ ಸತ್ತರೆ, ಹೆಣ್ಣೊಂದನ್ನು ತಂದು ಶವಕ್ಕೆ ಮದುವೆಮಾಡಿಸುತ್ತಿದ್ದರು. "ಕರ್ತಿರಾಯ' ಕಥನಗೀತೆಯಲ್ಲಿ ಶ್ರೀಮಂತ ಮಗ ಮಡಿದಾಗ, ಸಾಕಷ್ಟು ಹೊನ್ನು ಸುರಿದು ಬಡವನ ಮಗಳನ್ನು ತಂದು ಮದುವೆ ಮಾಡುತ್ತಾರೆ. ಆದರೆ, ಹೆಣ್ಣು ತನ್ನ ನಿಷ್ಠೆ ಸಾಮರ್ಥ್ಯಗಳಿಂದಾಗಿ ಸತ್ತ ಗಂಡನನ್ನು ಮರಳಿ ಪಡೆಯುತ್ತಾಳೆ. "ಕಾಳಿಂಗರಾಯನ ಹಾಡು' ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ. "ಸತ್ಯವಾನ ಸಾವಿತ್ರಿ' ಪುರಾಣ ಕಥೆಯ ಆಶಯವೇ ಈ ಬಗೆಯ ಗೀತೆಗಳಲ್ಲಿದೆ.

ಹೆಣ್ಣಿನ ಬಂಜೆತನ ಮತ್ತೊಂದು ಶಾಪ. ಬಂಜೆತನದಲ್ಲಿ ಹೆಣ್ಣಿನ ಪಾಲು ಎಷ್ಟು ಎಂಬುದು ಪ್ರಶ್ನಾರ್ಹವಾಗಿದ್ದರೂ, ಸಮಾಜದಲ್ಲಿ ಹೆಣ್ಣನ್ನೇ ಹೆಚ್ಚಾಗಿ ದೂಷಿಸಲಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಗೊರವರ ಕಥೆಗಳಲ್ಲಿ ಗಂಡನ್ನೂ "ಬಂಜೆ' ಎಂದು ಜರಿದದ್ದೂ ಇದೆ. ಆದರೂ ಸಾಮಾಜಿಕವಾಗಿ ತಿರಸ್ಕಾರಕ್ಕೆ ಒಳಗಾಗುವ ಬಂಜೆ ಹೆಣ್ಣಿನ ಮಾನಸಿಕವೇದನೆ ಕರುಣಾಪೂರಿತವಾದುದು. ಈ ಕೊರಗು ಕೆಲವೊಮ್ಮೆ ಹೆಣ್ಣಿನ ವರ್ತನೆಯನ್ನು ಕ್ರೂರವಾಗಿಯೂ, ಒರಟಾಗಿಯೂ ಪರಿವರ್ತಿಸುತ್ತದೆ. ಬಂಜೆತನಕ್ಕಾಗಿ ಸಮಾಜ ಅಂಥ ಹೆಣ್ಣನ್ನು ಕ್ರೂರವಾಗಿ ನಡೆಸಿಕೊಳ್ಳುತ್ತಿರುವುದಕ್ಕೆ ಸಾಂತ್ವನ ವ್ಯಕ್ತವಾದರೂ ಬಂಜೆಯ ದುಷ್ಟ ವರ್ತನೆಗಳು ಕಟು ಟೀಕೆಗೆ, ವಿಮರ್ಶೆಗೆ ಒಳಗಾಗಿವೆ. ಶಿವನೂ ಅಂಥ ಬಂಜೆಯನ್ನು ನಿಂದಿಸುತ್ತಾನೆ. "ಬಂಜೆ ಹೊನ್ನಮ್ಮ' ಮತ್ತು ಈ ಆಶಯದ ಕಥನ ಕವನಗಳಲ್ಲೂ ಇಂಥ ವಿಚಾರಗಳು ಚರ್ಚಿತವಾಗಿದೆ.

"ಸೌಂಸಾತೇರಿ"ನಲ್ಲಿ ಬಂಜೆ ಹೆಣ್ಣೊಬ್ಬಳು ತನ್ನ ಸವತಿಯ ಮಗುವನ್ನು ಕುದಿಯುವ ಎಣ್ಣೆ ಕೊಪ್ಪರಿಗೆಯಲ್ಲಿ ಹಾಕಿ ಕೊಂದ ಘಟನೆ ಇದ್ದು, ಹೆಣ್ಣಿನ ಕ್ರೂರತನಕ್ಕೆ ನಿದರ್ಶನವನ್ನು ಒದಗಿಸುತ್ತದೆ.

ಮದುವೆಯಾದ ಹೆಣ್ಣನ್ನು ಗಂಡು ಕೆಲವೊಮ್ಮೆ ಕೆಣಕುವ, ವಶಪಡಿಸಿಕೊಳ್ಳಲು ಪ್ರಯತ್ನಿಸುವ ನಾನಾ ಬಗೆಯ ಹುನ್ನಾರಗಳನ್ನು ಮಾಡುತ್ತಾನೆ. ಅವನೊಡ್ಡುವ ಯಾವುದೇ ಆಸೆ-ಆಮಿಷಗಳಿಗೆ ಒಳಗಾಗದೇ ಪತಿಯ ಮೇಲಿನ ನಿಷ್ಠೆ, ದೃಢ ಮನಸ್ಸನ್ನು ಉಳಿಸಿಕೊಂಡವರು ಕೆಲವು ಲಲನಾಮಣಿಯರು. ಅಂಥ ಕಾಮುಕ ಗಂಡೊಬ್ಬನನ್ನು ಮುಲಾಜಿಲ್ಲದೇ ತರಾಟೆಗೆ ತೆಗೆದುಕೊಂಡಿದ್ದನ್ನು "ಒಬ್ಬರಿಗಟ್ಟುಡುಗೆ' ಗೀತೆಯಲ್ಲಿ ಕಾಣಬಹುದು. "ಎಳ್ಳಮಾಸೆಯ ಹಾಡು' ಕಾಮುಕನೊಬ್ಬನ ಹಿಡಿತದಿಂದ ಉಪಾಯವಾಗಿ ತಪ್ಪಿಸಿಕೊಂಡು ಬಂದುದನ್ನು ಕಲಾತ್ಮಕವಾಗಿ ನಿರೂಪಿಸುತ್ತದೆ.

ಹೆಣ್ಣು ಶೀಲಕ್ಕೆ ನೀಡುವ ಮಹತ್ವವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಅರುಹುವ ಕಥನ ಗೀತೆ "ಕಡ್ಲಿಮಟ್ಟಿ ಕಾಶಿಬಾಯಿ ಹಾಡು'. ಹೆತ್ತ ಮಗುವನ್ನಾದರೂ ಬಲಿಕೊಟ್ಟು ಶೀಲವನ್ನು ಕಾಪಾಡಿಕೊಂಡ ಕಾಶಿಬಾಯಿಯ ಧೈರ್ಯಮೆಚ್ಚುವಂತಿದೆ. ಮದುವೆಯಾದ ಗಂಡು-ಹೆಣ್ಣು ಇಬ್ಬರೂ ಸಮಾನ ನೀತಿಯ ತಳಹದಿಯ ಮೇಲೆ ಬಾಳು ನಡೆಸಿದಾಗ ಅಂಥ ದಾಂಪತ್ಯ ಸುಖವಾಗಿರುತ್ತದೆ. ಅದರಲ್ಲಿ ಒಬ್ಬರು ದೂರ ಸರಿದರೂ ದಾಂಪತ್ಯ ರಥ ಒಗ್ಗಲಾಗುತ್ತದೆ. ಗಂಡು ಅಡ್ಡ ದಾರಿ ಹಿಡಿದಾಗ ಅವನನ್ನು ಹೇಗಾದರೂ ಸರಿ ದಾರಿಗೆ ತರುವ ಪ್ರಯತ್ನವನ್ನು ಹೆಣ್ಣು ಮಾಡುತ್ತಾಳೆ. "ಬಣಜಿಸೆಟ್ಟರ ಕಥೆ' ಹಾಗೂ ಸಮಾನ ಆಶಯದ ಕಥನಗೀತೆಗಳು ಪರಸ್ತ್ರೀಯ ವ್ಯಾಮೋಹಕ್ಕೆ ಒಳಗಾದ ಗಂಡನ್ನು ಮತ್ತೆ ಪ್ರಯತ್ನಪಟ್ಟು ಮನೆಗೆ ಮರಳಿಸಿದ್ದನ್ನು ಅರುಹುತ್ತವೆ.

ಗಂಡು ಪರಸ್ತ್ರೀಯ ವ್ಯಾಮೋಹಕ್ಕೆ ಒಳಗಾದಾಗ ಆ ಸ್ತ್ರೀಯೇ ಮುಂದಾಗಲಿರುವ ಅಪಾಯ ತಪ್ಪಿಸಿ, ಅವನ ಹೆಂಡತಿಯ ಸಹಾಯದಿಂದ ಕುಟುಂಬ ಸೇರಿಸುವ ಪ್ರಯತ್ನ "ಕೊರಾತಿಕಂಚಿ' ಕಥನ ಗೀತೆಯಲ್ಲಿದೆ. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಘೋಷಣೆಗೆ ವಿರುದ್ಧವಾದ ಸೋದರಿತ್ವದ ಆಶಯ ಇಲ್ಲಿ ದಲಿತ ಹೆಣ್ಣೊಬ್ಬಳ ಮೂಲಕ ಪ್ರತಿಪಾದಿತವಾಗಿದೆ.

ತಾನು ಇಷ್ಟಪಟ್ಟದ್ದನ್ನು ಹೇಗಾದರೂ ಮಾಡಿ ಪಡೆಯುವ ಪ್ರಯತ್ನ, ಗಂಡಿನ ಸಾಹಸಗಳಲ್ಲಿರುತ್ತದೆ. "ಬೆದರೆಲೆ ಚದುರೆ' ಕಥನಗೀತೆಯಲ್ಲಿ ತಮ್ಮ ರಾಮಯ್ಯ "ಬೆದರೆಲೆ ಚದುರೆ'ಯನ್ನು ಹೆಂಡತಿಯಾಗಿ ತರಬೇಕೆಂದು ಬಯಸಿ ಅಡವಿಗೆ ಹೋಗುತ್ತಾನೆ. ಅಜ್ಜಿಯೊಬ್ಬಳ ಸಹಾಯದಿಂದ ಅವಳನ್ನು ಪಡೆಯುತ್ತಾನೆ. ದಾರಿಯಲ್ಲಿ ಬಂದ ಕಷ್ಟಗಳನ್ನೆಲ್ಲ ನಿವಾರಣೆ ಮಾಡಿಕೊಂಡು ತನ್ನ ಕಾರ್ಯದಲ್ಲಿ ಯಶಸ್ಸು ಪಡೆಯುತ್ತಾನೆ. ಕಿರಿಯ ತಮ್ಮನ ಸಾಹಸ ಪ್ರದರ್ಶನದ ಜನಪದ ಆಶಯ ಇಲ್ಲಿದೆ.

ಅತ್ತೆ-ಸೊಸೆಯ ಜಗಳ ಮಲತಾಯಿ ಧೋರಣೆ ಇವೆಲ್ಲ ಜನಪದ ಸಾಹಿತ್ಯದ ಮಹತ್ವದ ಆಶಯಗಳು. ಪುರುಷ ಪ್ರಧಾನ ಸಮಾಜ ಮೌಲ್ಯಗಳು ಇಂಥ ಪರಿಸ್ಥಿತಿಗೆ ಕಾರಣವಾಗಿರುವುದು ಸುವಿದಿತ. ಆರ್ಥಿಕತೆಯ ದೃಷ್ಟಿಯಿಂದ ಮಗನ ಮೇಲೆ ಅವಲಂಬಿತವಾಗುವ ತಾಯಿ, ತನ್ನ ಅಧಿಕಾರವನ್ನು ಚಲಾಯಿಸಿ ಸೊಸೆಯನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಾಳೆ. ಈ ಹಿನ್ನೆಲೆಯಲ್ಲಿ ಅತ್ತೆ, ಅತ್ತಿಗೆ, ನಾದಿನಿಯರು ನೀಡುವ ನಾನಾ ಬಗೆಯ ಕಿರುಕುಳಗಳನ್ನು ಸೊಸೆ ಸಹಿಸಬೇಕಾಗುತ್ತದೆ. ಇದರ ಜೊತೆಗೆ ಅತ್ತೆಗೆ ಯಾವುದೇ

ಕಾರಣಕ್ಕಾದರೂ ಸೊಸೆಯ ಮೇಲೆ ಸಂಶಯ ಬಂದರಂತೂ ಮುಗಿದೇ ಹೋಯಿತು. “ಉತ್ತರದೇವಿ'ಯಂತೆ ಮನೆ, ಜಗತ್ತುಗಳನ್ನು ತೊರೆಯಬೇಕಾಗುತ್ತದೆ. ಉತ್ತರದೇವಿ ಹಾಡು ಜನಪ್ರಿಯವಾದುದು. ಅತ್ತೆಗೆ ಬೇಡವಾದ ಸೊಸೆ, ಗಂಡ, ತಂದೆ, ತಾಯಿ, ಬಂಧು-ಬಳಗದವರಿಂದಲೂ ತಿರಸ್ಕೃತಳಾಗಿ ಕೊನೆಗೆ ಆತ್ಮಹತ್ಯೆಗೆ ಶರಣಾಗುವುದು ಈ ಕಥನ ಗೀತೆಯ ವಸ್ತು.

“ಹಾವಿನಪದ'ದಲ್ಲಿ ಹಾವು ಕಂಡು ಭಯಪಟ್ಟ ಸೊಸೆಗೆ, ಅತ್ತೆ, ಹಾವು ಹೊಡೆದು, ಅಡಿಗೆ ಮಾಡಲು ಹೇಳಿ ಅದನ್ನು ಸೊಸೆಯೇ ಉಣ್ಣುವಂತೆ ಮಾಡಿ, ಅವಳ ಸಾವಿಗೆ ಕಾರಣಳಾಗುತ್ತಾಳೆ. ಆದರೆ ಜನಪದ ಆಶಯದಂತೆ ಮುಗ್ಧರನ್ನು, ಪ್ರಾಮಾಣಿಕ ವ್ಯಕ್ತಿಗಳನ್ನು ದೈವಕೃಪೆ ಬದುಕಿಸಿಕೊಳ್ಳುತ್ತದೆ. ಆದರೂ ಅತ್ತೆಯ ದುಷ್ಟತನವನ್ನು ಇಲ್ಲಿ ಗುರುತಿಸಬೇಕಾಗುತ್ತದೆ.

ಅತ್ತೆ ಹಾಗೂ ಅವಳಿಗೆ ಸಹಾಯಕರಾಗಿ ಅತ್ತಿಗೆ, ನಾದಿನಿಯರು, ಕೆಲವೊಮ್ಮೆ ಸವತಿಯರು ಹೆಣ್ಣಿಗೆ ಕಿರುಕುಳ ಕೊಟ್ಟು ಅವಳ ಜೀವನವನ್ನು ದುರ್ಭರಗೊಳಿಸುತ್ತಾರೆ. “ತಂಗಿಮಾದಿ' ಹಾಗೂ ತತ್ಸಮಾನ ಆಶಯದ ಕಥನ ಗೀತೆಗಳಲ್ಲಿ ಇಂಥ ಕಷ್ಟ ಕಂಡುಬರುತ್ತದೆ. ಕೊನೆಯಲ್ಲಿ ಕಷ್ಟಕೊಟ್ಟವರಿಗೆ ಶಿಕ್ಷೆ ದೊರೆತರೂ ಹೆಣ್ಣಿನ ದುಃಖಕ್ಕೆ ಕೊನೆ ಇಲ್ಲವೆನ್ನಿಸುತ್ತದೆ.

ರಕ್ತ ಸಂಬಂಧ ಬಹಳ ಗಾಢವಾದುದೆಂಬ ನಂಬಿಕೆ ಇದ್ದರೂ, ಅಣ್ಣ-ತಂಗಿಯರ ಸಂಬಂಧ ಮಧುರವೆಂದು ಭಾವಿಸಿದರೂ ಹಣ, ಈ ಬಗೆಯ ಸಂಬಂಧವನ್ನು ಹೊಸಕಿಹಾಕಬಲ್ಲದೆಂಬುದನ್ನು “ಸತ್ಯವಂತ ನಾಗಮಣಿ'ಯಂತಹ ಗೀತೆ ತಿಳಿಸಿಕೊಡುತ್ತದೆ. ತಂಗಿಯ ಆಭರಣದಾಸೆಗಾಗಿ, ಅಣ್ಣ ಆಕೆಯನ್ನು ಕೊಲ್ಲಬಯಸುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ “ತಾಯಿ ತಂದಿ ಹೊಟ್ಟಿಲೆ ಮಹಾ ಒಬ್ಬಿದ್ದನೇಳ್ರಿ ಒಬ್ಬನ' ಕಥನ ಗೀತೆಯಲ್ಲಿ ಅಕ್ಕ, ಹಣದಾಸೆಗಾಗಿ ತಮ್ಮನನ್ನು ಕೊಲ್ಲುತ್ತಾಳೆ. “ಸಣ್ಣ ಗಂಗೆ'ಯಲ್ಲಿ ದಂಡಿಗೆ ಹೋದ ಅಣ್ಣ ತನ್ನ ಅನುಪಸ್ಥಿತಿಯಲ್ಲಿ ತಂಗಿ ಮದುವೆಯಾದಳೆಂದು ಬೇಸರಗೊಂಡದ್ದುಂಟು. ತಾನು ದಂಡಿಗೆ ಹೋಗುವ ಮುನ್ನ ಪರಪುರುಷನ ಸಂಗಮಾಡಿದ ತಂಗಿಯನ್ನು ಕೊಂದ ಕತೆ “ಸಂಗವ ಮಾಡ್ಯಾಳೆ ನಿಮ್ಮ ತಂಗಿ'ಯಲ್ಲಿದೆ. ಅದೇ ರೀತಿ, ಅವಳಿಗೆ ಇಷ್ಟವಾದವನ ಜೊತೆಗೆ, ಮದುವೆ ಮಾಡಿದ ಅಪರೂಪದ ಅಣ್ಣನೂ ಇದ್ದಾನೆ.

ಅಣ್ಣ-ತಮ್ಮಂದಿರು ಹೊಡೆದಾಡಿ ತಮ್ಮ ಸತ್ತಾಗ, ತಾಯಿಯು ಬೇಸರಗೊಂಡು ಮಗನನ್ನು ಪೋಲೀಸರಿಗೊಪ್ಪಿಸಿದ್ದಾಳೆ. “ತಮ್ಮನ ಕೊಲೆ' ಅಂಥ ಒಂದು ಗೀತೆ. ಕೊನೆಯಲ್ಲಿ ಜಿಗುಪ್ಸೆಗೊಂಡ ತಾಯಿ, ವಿಷ ಸೇವಿಸಿ ತಾನೂ ಸಾಯುತ್ತಾಳೆ.

ಜೀವನದ ಅದಮ್ಯ ಚೇತನ ಶಕ್ತಿಯಾಗಿರುವ ಕಾಮ, ಜನಪದ ಜೀವನದಲ್ಲಿ ಮಹತ್ವದ ಪಾತ್ರವಾಡಿರುವುದರಲ್ಲಿ ಸಂಶಯವಿಲ್ಲ. ಆದರೆ ಕುಟುಂಬದ ಚೌಕಟ್ಟಿನಲ್ಲಿ ಲೈಂಗಿಕ ಸಂಬಂಧಗಳಿಗೆ ಕೊಡುವ ಮಹತ್ವ ಸಾಂಪ್ರದಾಯಿಕ ಜೀವನದಲ್ಲಿ ಅನೈತಿಕ ಸಂಬಂಧಗಳಿಗೆ ಸಿಗಲಾರದು. ಗಂಡು-ಹೆಣ್ಣುಗಳ ಅನೈತಿಕ ಸಂಬಂಧಗಳು ದುರಂತದಲ್ಲಿ ಪರ್ಯವಸಾನವಾಗಿರುವುದು ಅನೇಕ ಕಥನ ಗೀತೆಗಳ ಅಧ್ಯಯನದಿಂದ ತಿಳಿದುಬರುತ್ತದೆ. ತಾನು ದಂಡಿಗೆ ಹೋದಾಗ ಹೆಂಡತಿ ಅನೈತಿಕ ಸಂಬಂಧ ಹೊಂದಿರುವ ವಿಷಯ ತಿಳಿದು, ಹಿಂತಿರುಗಿಬಂದ ಗಂಡ, ಅವಳನ್ನೂ ಅವಳ ಪ್ರಿಯಕರನನ್ನೂ ಕೊಂದ ವಿಷಯ “ಜಾಯುಮಾಯದ ಗಾಣಿಗ' ಕಥನ ಗೀತೆಯಲ್ಲಿದೆ. ಕೆಲವೊಮ್ಮೆ ಮಕ್ಕಳು ವಿಷಯ ಬಹಿರಂಗ ಮಾಡುತ್ತಾರೆಂದು ಅವರನ್ನು, ಸಾಧ್ಯವಾದರೆ ಗಂಡನನ್ನು ಕೊಲ್ಲುವ ಹೆಣ್ಣುಗಳು ಕಥನ ಗೀತೆಗಳಲ್ಲಿ ಚಿತ್ರಿತರಾಗಿದ್ದಾರೆ. ಇಂಥ ದುಷ್ಟ ಹೆಣ್ಣನ್ನು ಕಂಡು ಪ್ರಿಯಕರನೇ ಅಸಹ್ಯಪಟ್ಟುಕೊಂಡ ಕತೆ “ಗಂಡ್ನ ಕೊಂದ ಹೊನ್ನಮ್ಮನ' ಹಾಡಿನಲ್ಲಿದೆ. ದ್ರೋಹ ಬಗೆದ ಹೆಂಡತಿಯನ್ನು ಕೊಂದರೂ ಕಾನೂನಿನ ಕೈಯಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಪರಪುರುಷನೊಂದಿಗೆ ಸಂಬಂಧ ಹೊಂದಿದ, ಹೆಣ್ಣೊಬ್ಬಳನ್ನು ಅವಳ ಗಂಡ, ಬಂಧುಗಳು ತಿರಸ್ಕರಿಸಿದಾಗ ನೇಣುಹಾಕಿಕೊಂಡು ಜೀವ ತೆತ್ತ ಹೆಣ್ಣಿನ ಕತೆ “ವಲ್ಲಣದೇವಿ' ಯಲ್ಲಿದೆ.

ದಂಡಿಗೆ ಹೋದರೂ ವೇಷ ಮರೆಸಿ ಹಿಂತಿರುಗಿ ಬಂದು ಹೆಂಡತಿಯನ್ನು ಪರೀಕ್ಷೆ ಮಾಡುವ “ಕುಸುಮಾಲೆ'ಯಂತಹ ಕಥನಗೀತೆಗಳೂ ಇವೆ. “ರಡ್ಡೇರ ಅವ್ವಣ್ಣಿ' ಗೀತೆಯಲ್ಲಿ ತಾನು ಪ್ರೀತಿಸಿದ ಹೆಣ್ಣು ಬೇರೊಬ್ಬನನ್ನು ಮದುವೆಯಾದರೂ ಆಳಬೇಕೆಂದು ಬಯಸಿದ ಗಂಡು ತಾಳ್ಮೆಯಿಂದಿದ್ದು, ಅವಳು ವಿಧವೆಯಾದಾಗ ಮತ್ತೆ ಹಿಂದಿನ ಪ್ರೀತಿಯನ್ನೇ ತೋರಿಸಿ, ಅವಳೊಂದಿಗೆ ಬಾಳ್ವೆ ಮಾಡುತ್ತಾನೆ. ಇಂಥ,

ಪ್ರೇಮದ ಪರಾಕಾಷ್ಠೆಯನ್ನು ನಾವು "ಯಲುರಾಜನ ಮಡದಿ'ಯಲ್ಲಿ ನೋಡುತ್ತೇವೆ. ತಾನು ಅಪಾರವಾಗಿ ಪ್ರೀತಿಸುತ್ತಿದ್ದ ಹೆಂಡತಿ, ಪರಪುರುಷನ ಸಂಗ ಮಾಡಿದರೂ ವಿಚಲಿತನಾಗದೇ ಪ್ರಿಯಕರನೊಂದಿಗಿರುವ ಅವಕಾಶ ಮಾಡಿಕೊಟ್ಟು, ಅವಳು ಸತ್ತನಂತರ ಅವಳ ತಲೆಬುರುಡೆ ಪಡೆದು ಆರಾಧಿಸಿದ ವಿಶಿಷ್ಟ ಘಟನೆ "ಯಲುರಾಜನ ಮಡದಿ' ಗೀತೆಯಲ್ಲಿದೆ.

ಪರಪುರುಷನೊಂದಿಗಿನ ಸಂಬಂಧಗಳಲ್ಲದೇ ಕುಟುಂಬದ ಒಳಗೂ ಗಂಡು-ಹೆಣ್ಣುಗಳ ನಡುವೆ ಅನೈತಿಕ ಸಂಬಂಧವೇರ್ಪಡುವುದಿದೆ. ಇಂಥ ಸಂಬಂಧಗಳೆಲ್ಲ ದುರಂತದಲ್ಲಿ ಪರ್ಯವಸಾನವಾಗಿರುವುದು ಗಮನಾರ್ಹ. "ಮಹಾದೇವಿ' ಕಥನ ಗೀತೆಯಲ್ಲಿ ಅಣ್ಣ ದಂಡಿಗೆ ಹೋದಾಗ, ತಮ್ಮ ಅಣ್ಣನ ಹೆಂಡತಿಯನ್ನು ಬಯಸುತ್ತಾನೆ. ಸುದ್ದಿ ತಿಳಿದ ಅಣ್ಣ ದಂಡಿನಿಂದ ಬಂದು, ತಮ್ಮನನ್ನು ಉಪಾಯವಾಗಿ ಅರಣ್ಯಕ್ಕೆ ಕರೆದೊಯ್ದು ಕೊಲ್ಲುತ್ತಾನೆ. ಮೈದುನನ ಕಾಟ ತಾಳಲಾರದೇ ಉರುಲುಹಾಕಿಕೊಂಡು ಸತ್ತ ಘಟನೆ "ಏಟಕ ಏಳ ತುಂಡು ಆದ ಶಂಕರದೇವ'ದಲ್ಲಿದೆ. ಕೆಲವೊಮ್ಮೆ ಅತ್ತಿಗೆಯು ಮೈದುನನ್ನು ಪ್ರೀತಿಸಿ, ಅವನು ಒಪ್ಪದಿದ್ದಾಗ, ಬಲತ್ಕಾರದ ಸುಳ್ಳು ಆರೋಪ ಹೊರಿಸಿ, ಮೈದುನನನ್ನು ಕೊಲ್ಲಿಸಿದ್ದಿದೆ. ಆದರೆ ಸತ್ಯವಂತರಿಗೆ ಗೆಲವು ಎಂಬ ಜಾನಪದ ನೀತಿಯ ಪ್ರಕಾರ ಸತ್ತ ತಮ್ಮನನ್ನು ಮೂಕ ಪ್ರಾಣಿಗಳಾದ ಅವನ ಎತ್ತುಗಳು ಬದುಕಿಸಿಕೊಳ್ಳುತ್ತವೆ. "ಚಿತ್ತುರಾಣಿ' ಅಂಥ ಒಂದು ಕಥನ ಕವನ. ಇಲ್ಲಿನ ತಪ್ಪಿತಸ್ಥರಿಗೆ ಕೊನೆಗೆ ಶಿಕ್ಷೆಯೂ ಆಗುತ್ತದೆ. ಕೆಲವೊಮ್ಮೆ ಹೆಂಡತಿ, ಹಾಗೂ ತಮ್ಮರ ಮೇಲೆ ಸಂಶಯಪಟ್ಟು ಅಣ್ಣ ಅವರಿಬ್ಬರನ್ನು ಕೊಂದದ್ದಿದೆ. ಹೆಂಡತಿ ಮೈದುನನ ಮೇಲೆ ಸಂಶಯಪಟ್ಟಾಗ ಸಮಾಧಾನ ಮಾಡಿದ ಗಂಡಂದಿರೂ ಇದ್ದಾರೆ. "ಆಳು ಕೂಗಿನ ಹಕ್ಕಿ'ಯಲ್ಲಿ ಅಣ್ಣಂದಿರು ತಮ್ಮನ ಹೆಂಡತಿಯನ್ನು ಬಯಸುವುದನ್ನು ಕಾಣುತ್ತೇವೆ. ತಮ್ಮನನ್ನು ನಾನಾ ರೀತಿಯಲ್ಲಿ ಹಿಂಸಿಸಿ ಕೊಂದರೂ, ಅವನು ಆಳು ಕೂಗಿನ ಹಕ್ಕಿಯಾಗಿ ಬಂದು ಅಣ್ಣ-ಅತ್ತಿಗೆಯರನ್ನು ಕೊಂದು ಸೇಡು ತೀರಿಸಿಕೊಳ್ಳುತ್ತಾನೆ. ಈ ಕತೆಯ ಆಶಯ ವಿಶಿಷ್ಟವಾಗಿದೆ.

ತಮ್ಮನ ಹೆಂಡತಿಯನ್ನು ಊರಿಗೆ ಕರೆದೊಯ್ಯುವ ನೆಪದಲ್ಲಿ ಅಣ್ಣ, ಮಾರ್ಗಮಧ್ಯದಲ್ಲಿ ಅವಳನ್ನು ಬಲಾತ್ಕಾರ ಮಾಡಿದ ಘಟನೆ "ನೀಲಗಂಗಾ'ನ ಹಾಡಿನಲ್ಲಿದೆ. ಆಘಾತಗೊಂಡ ಅವಳು ಮಡುವು ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

"ಬಯಲುಸೀಮೆಯ ಗೌಡನ ಮಗಳು' ಹಾಡಿನಲ್ಲಿ ಗೌಡನ ಮಗಳು ಗೊಲ್ಲರ ಹುಡುಗನನ್ನು ಪ್ರೀತಿಸಿ, ತಿರಸ್ಕಾರಕ್ಕೆ ಒಳಗಾದಾಗ, ಗೊಲ್ಲರ ಹುಡುಗನನ್ನು ಕೊಲ್ಲಿಸಿ ಸೇಡುತೀರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಗೊಲ್ಲನ ಹಸುಗಳು ತಂದೆ-ಮಗಳನ್ನು ಕೊಂದು ಗೊಲ್ಲನನ್ನು ಬದುಕಿಸಿಕೊಳ್ಳುತ್ತವೆ. ಅಧಿಕಾರ-ಸಂಪತ್ತಿನಿಂದ ಪ್ರೀತಿಯನ್ನು ಪಡೆಯಲು ಸಾಧ್ಯವಿಲ್ಲ. ಬದಲಾಗಿ ಸರ್ವನಾಶ ಖಂಡಿತ ಎಂಬುದನ್ನು ಈ ಕಥನಗೀತೆ ಪರ್ಯಾಯವಾಗಿ ಅರುಹುತ್ತದೆ. ಬೇಡರ ಹುಡುಗ ಬೊಮ್ಮಲಿಂಗ ಚಿಕ್ಕ ಹುಡುಗಿ ಹಿರಿದಿಮ್ಮಳನ್ನು ಕಾಡುತ್ತಾನೆ. ಬೇರೆಯವರೊಂದಿಗೆ ಅವಳ ಮದುವೆಯಾದಾಗ ಗಂಡನನ್ನೇ ಕೊಂದು ಅವಳನ್ನು ಪಡೆಯಬಯಸುತ್ತಾನೆ. ಉಪಾಯದಿಂದ ಅವನ ಇಂಗಿತವನ್ನರಿತ ಹಿರಿದಿಮ್ಮವ್ವ ಬೊಮ್ಮಲಿಂಗನನ್ನು ಕೊಂದು ತಾನು ಗಂಡನ ಚಿತೆ ಏರುತ್ತಾಳೆ. ಹೀಗೆ ದುರಂತದಲ್ಲಿ ಪರ್ಯವಸಾನಗೊಳ್ಳುವ ಕತೆ ಇದು.

ಜನಪದ ಸಂಸ್ಕೃತಿಯಲ್ಲಿಯೇ ಜಾತಿ ವ್ಯವಸ್ಥೆ ಆಳವಾಗಿ ಬೇರುಬಿಟ್ಟಿರುವಾಗ, ಭಿನ್ನ ಜಾತಿಯ ಗಂಡು-ಹೆಣ್ಣುಗಳು ಪರಸ್ಪರ ಪ್ರೀತಿಸಿ ವಿವಾಹವಾಗುವುದು ಒಂದು ಅಪರಾಧವೇ ಆಗಿರುತ್ತದೆ. ಇವುಗಳ ಪರಿಣಾಮ ದುರಂತವಾಗಿರುವುದೇ ಹೆಚ್ಚು. ಬೇರೆ ಜಾತಿಯ ಹೆಣ್ಣನ್ನು ಪ್ರೀತಿಸಿದ ಉಚ್ಛ ಕುಲದ ಗಂಡು, ಆ ಸಮಾಜದ ಕೋಪಕ್ಕೆ ಎರವಾಗಿ ಪ್ರಾಣಕಳೆದುಕೊಂಡ ದುರಂತ ಘಟನೆ, "ಎಳೆಯನು ಕೆಂಗಪ್ಪ ಎಳೆಗನಾತಗರಸಾಕಿ' ಕಥನಗೀತೆಯಲ್ಲಿ ನೋಡಬಹುದು. ಪಂಥದಲ್ಲಿ ಗೆದ್ದ ಬಪ್ಪಿಂಗ ಎಂಬ ಬ್ರಾಹ್ಮಣ ಯುವಕನ ತಂಗಿಯನ್ನು ಬಮ್ಮಿಂಗ ಎಂಬ ಹೊಲೆಯರ ಯುವಕ ಮದುವೆಯಾಗುತ್ತಾನೆ. ಆದರೆ ತಂಗಿ ಅವನೊಂದಿಗೆ ಬಾಳಲಾರದೇ ಬಾವಿಗೆ ಹಾರಿ ಪ್ರಾಣಕಳೆದುಕೊಳ್ಳುತ್ತಾಳೆ. ಸ್ನೇಹದಲ್ಲಿ ಜಾತಿ ಅಡ್ಡ ಬರದಿದ್ದರೂ ವಿವಾಹ ಮತ್ತಿತರ ಸಂಬಂಧದಲ್ಲಿ ಜಾತಿಯ ಕಟ್ಟುಪಾಡುಗಳನ್ನು ಅನುಸರಿಸಲು ಸಾಧ್ಯವಾಗದ ಮಾನಸಿಕ ಸ್ಥಿತಿಯನ್ನು ಇಲ್ಲಿ ಗಮನಿಸುತ್ತೇವೆ.

ಸಾಮಾಜಿಕ ಕಟ್ಟು-ಕಟ್ಟಳೆಗಳು ಬಿಗಿಯಾಗಿ ಇದ್ದಾಗಲೂ ಅದನ್ನು ಮೀರಿ, ಯಾರಿಗೂ ತಿಳಿಯದಂತೆ, ಅನೈತಿಕ ಸಂಬಂಧಗಳನ್ನು ಇಟ್ಟುಕೊಂಡ ಹೆಣ್ಣುಗಳೂ ಸಮಾಜದಲ್ಲಿ ಇದ್ದಾರೆ. "ಸೂಳೇರ ಬ್ರಮ್ಮಣ್ಣ ಸತ್ತ ಸುದ್ದಿ ಕೇಳಿ' ಗೀತೆಯಲ್ಲಿ ಪ್ರಿಯಕರ ಸತ್ತಾಗ ಕೊಡ ಒಡೆದ

ನೆಪ ಮಾಡಿಕೊಂಡು ಹೆಣ್ಣೊಬ್ಬಳು "ಅತ್ತೆ ಕಾಣದಂತೆ ಮಾವ ನೋಡದಂತೆ ಯಾರೊಂದ ಕಾಣದಾಂಗ ಮಡಗಿದ್ದೆ' "ಇಂದು ಆ ಕೊಡ ಒಡದೋಯ್ತು' ಎಂದು ದುಃಖಿಸುವುದನ್ನು ಕಾಣುತ್ತೇವೆ.

ಮಾಟ ಮಂತ್ರಗಳ ಮೂಲಕ ಮುಗ್ಧಹೆಣ್ಣುಗಳನ್ನು ವಶಪಡಿಸಿಕೊಳ್ಳುವ ಕಾಮುಕ ವ್ಯಕ್ತಿಗಳೂ ಈ ಸಮಾಜದಲ್ಲಿದ್ದಾರೆ. ಪೂಜೆ ಮಾಡಲು ಬಂದ ಗೊರವಯ್ಯ ಮನೆಸೊಸೆ ಕೋಮಲೆಯನ್ನು ಮಾಟ-ಮಂತ್ರದ ಮೂಲಕ ವಶಪಡಿಸಿಕೊಂಡದ್ದನ್ನು "ಗೊರವಯ್ಯ' ಕಥನಗೀತೆಯಲ್ಲಿ ಕಾಣುತ್ತೇವೆ.

ಕೆಲವು ಹೆಣ್ಣುಗಳು ಜೋಗಿಯಂಥವರಿಗೆ ಮರುಳಾಗಿ ಗಂಡ ಮತ್ತು ಮಗುವನ್ನು ಬಿಟ್ಟು ಜೋಗಿಯ ಹಿಂದೆ ಹೋಗಿ ಕಷ್ಟಪಟ್ಟು ಕೊನೆಗೆ ಪಶ್ಚಾತ್ತಾಪಪಡುವುದನ್ನು "ಚಿಕ್ಕಿ ಉಂಗುರಕೆ ನಾರಿ ಮನಸೋತಳೋ' ಮುಂತಾದ ಕಥನಗೀತೆಯಲ್ಲಿ ಕಾಣುತ್ತೇವೆ.

ದಂಡು ಊರಿನಲ್ಲಿ ಬೀಡು ಬಿಟ್ಟರೆ, ಊರ ಹೆಣ್ಣುಮಕ್ಕಳನ್ನು ರಕ್ಷಿಸಿಕೊಳ್ಳುವುದು ಊರವರಿಗೆ ದೊಡ್ಡ ಸವಾಲೇ ಆಗುತ್ತಿತ್ತು. ದಂಡುನೋಡಲು ಹೊರಬಂದ ಸುಂದರವಾದ ಹುಡುಗಿಯೊಂದನ್ನು ದಂಡಿನ ಅಧಿಕಾರಿಗಳು ಬಲಾತ್ಕಾರದಿಂದ ಕೊಂಡೊಯ್ದು ಅತ್ಯಾಚಾರವೆಸಗಿ ಕೊಂದ ಅಮಾನವೀಯ ಘಟನೆಯೊಂದನ್ನು "ದಂಡಬಂತವ್ವಾ ದಂಡು' ಪರಿಣಾಮಕಾರಿಯಾಗಿ ಚಿತ್ರಿಸಿದೆ.

ಕ್ಷುಲ್ಲಕ ಕಾರಣಕ್ಕಾಗಿ ವ್ಯಕ್ತಿಯನ್ನು ದಂಡಿಸುವ ಸೊಕ್ಕು, ಅಧಿಕಾರ ಮದದಲ್ಲಿರುವುದನ್ನು "ಹೂಗಿನ ಮಲ್ಲು' ಕಥನ ಗೀತೆ ಎತ್ತಿ ತೋರಿಸುತ್ತದೆ. ಆನೆಯ ಸರಪಳಿ ದಾಟಿದಳೆಂದು ಆನೆಯಿಂದಲೇ ತುಳಿಸುವ ಶಿಕ್ಷೆ ಕೊಟ್ಟಾಗ, ಮಾಂತ್ರಿಕ ಶಕ್ತಿಯಿಂದ ಹೂಗಿನಮಲ್ಲು ಪಾರಾಗಿ ಬರುತ್ತಾಳೆ. ಮುಗ್ಧರನ್ನು ಕೊನೆಯಲ್ಲಿ ರಕ್ಷಿಸಲಾಗಿದೆ ಎಂಬುದು ಸಮಾಧಾನಕರ ಅಂಶ.

ಜನಪದ ಕವಿಗಳು ಬರಗಾಲವನ್ನೂ ಅದರಿಂದುಂಟಾದ ಬವಣೆಗಳನ್ನು ಚಿತ್ರಿಸಿರುವುದು ಮಹತ್ವದ ಸಂಗತಿ. ಬಡತನದ ಬವಣೆಯಿಂದ ಮೊದಲೇ ಕಂಗಾಲಾದ ಜೀವಗಳು ಬರಗಾಲದಿಂದ ಮತ್ತಷ್ಟು ಗತಿಗೆಟ್ಟು ಹೆಣವಾದ ದುರ್ಘಟನೆ, "ಬರಗಾಲದ ಬವಣೆ' "ಬರದ ಹಾಡು'ಗಳಲ್ಲಿ ಮಾರ್ಮಿಕವಾಗಿ ಚಿತ್ರಿತವಾಗಿದೆ. ಬರಗಾಲದಲ್ಲಿ ವ್ಯಾಪಾರ ಮಾಡಲು ಹೋಗಿ ಆದ ನಷ್ಟದ ವರ್ಣನೆ, ಈ ಸಂದರ್ಭದಲ್ಲಿ ವ್ಯಾಪಾರಿಗಳು ತೋರಿದ ಮಾನವೀಯತೆ, "ಬರಗಾಲ ದೇಶದ ವ್ಯಾಪಾರ'ದಲ್ಲಿದೆ.

ಪರವೂರಿಗೆ ಓದಲು ಬಂದ ಶ್ರೀಮಂತ ಮನೆತನದ ಮುಗ್ಧ ಹುಡುಗನೊಬ್ಬನಿಗೆ ಮೋಸ ಮಾಡಿ, ಅವನ ಬಳಿ ಇರುವ ದುಡ್ಡು-ಆಭರಣ ಕಸಿದುಕೊಂಡು ಬಾವಿಗೆ ದೂಡಿದ ಘಟನೆ, "ತುಂಬಿದ ಬಳ್ಳಾರಿವಳಗೆ' ಕಥನಗೀತೆಯಲ್ಲಿದೆ. ಹಣದ ಮುಂದೆ ಸಂಬಂಧಗಳೂ ಅಮುಖ್ಯವೆನ್ನುವ ವಾಸ್ತವತೆ ಈ ಘಟನೆಯ ಮೂಲಕ ಚಿತ್ರಿತವಾಗಿದೆ.

ಪುಂಡನೊಬ್ಬ ಪೋಲಿಯಾಗಿ ತಿರುಗುತ್ತ ಮನೆಗಳಲ್ಲಿ ಕದಿಯುತ್ತಾನೆ. ಆದರೆ ಎಲ್ಲಿಯೂ ಸಿಕ್ಕಿಬೀಳದೆ ಹಿಡಿಯಲು ಬಂದ ಪೋಲೀಸರನ್ನೇ ಮಣ್ಣು ಮುಕ್ಕಿಸುವ ಅವನ ಠಕ್ಕತನ "ಊರಪೋರ' ಗೀತೆಯಲ್ಲಿ ನಿರೂಪಿತವಾಗಿದೆ. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಕರಬಂದಿ ಚಳವಳಿಯಲ್ಲಿ ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ ವ್ಯಕ್ತಿಗಳು ಪ್ರಸಿದ್ಧಿಯನ್ನು ಹೊಂದಿ ಅವರಿಗೆ ಸಂಬಂಧಿಸಿದಂತೆ ಅನೇಕ ದಂತಕತೆಗಳು ಸೃಷ್ಟಿಯಾದಂತೆ ಸಮಾನ ಆಶಯ "ಊರ ಪೋರ' ನಂತಹ ಕತೆಯಲ್ಲಿಯೂ ವ್ಯಕ್ತವಾಗಿದೆ.

"ಹಲಸಿನಹಕ್ಕಿ' ಒಂದು ಚಿಕ್ಕ ಹಕ್ಕಿ. ದೊಡ್ಡ ವ್ಯಕ್ತಿಗೆ ಸೇರಿದ ಮರವೊಂದರ ಪೊಟರೆಯಲ್ಲಿ ಮರಿಗಳು ಸಿಲುಕಿಕೊಂಡಾಗ, ಹೊರತೆಗೆಯಲು ವಿಫಲವಾಗಿ, ಅನೇಕರನ್ನು ಬೇಡಿಕೊಂಡರೂ ಪ್ರಯೋಜನವಾಗದಿದ್ದಾಗ, ನೇರವಾಗಿ ಅರಸನಿಗೇ ಅವರ ವಿರುದ್ಧ ದೂರು ನೀಡುತ್ತದೆ. ಅದರ ಫಲವಾಗಿ ಕೊನೆಗೆ ಮರಿಗಳು ತಾಯ ರಕ್ಷಣೆ ಪಡೆಯುತ್ತವೆ. ಸಾಂಕೇತಿಕವಾದ ಕಥನಗೀತೆ ಇದಾಗಿದ್ದು, ದೊಡ್ಡವರ ತಂಟೆಗೆ ಹೋಗಬೇಕಾದರೆ ದೊಡ್ಡವರನ್ನೇ ಹಿಡಿಯಬೇಕು ಎಂಬ ತಂತ್ರವನ್ನು ಬೋಧಿಸುವಂತಿದೆ. ಇಲ್ಲಿ ಪುಟ್ಟಹಕ್ಕಿ ನಿರಂತರ ಪ್ರಯತ್ನ, ಧೈರ್ಯಗಳು ಮೆಚ್ಚುವಂತಿವೆ.

ಜನಪದ ನಿತ್ಯ ಜೀವನದಲ್ಲಿ ಹಾಸ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಮನಸ್ಸನ್ನು ಅರಳಿಸುವ ನವಿರಾದ ಹಾಸ್ಯ, ಅವರಿಗೆ ಹೆಚ್ಚುಪ್ರಿಯ. ಹಾಸ್ಯ ಘಟನೆಗಳನ್ನು ಕುರಿತ ಕಥನಗೀತೆಗಳೂ ಜನಪದ ಸಾಹಿತ್ಯದಲ್ಲಿ ಸಾಕಷ್ಟಿವೆ. ಅತ್ತೆಯನ್ನು ಕೊಲ್ಲಲು ಸೊಸೆ ಪ್ರಯತ್ನಪಟ್ಟು, ಕೊನೆಗೆ ತಾನೇ ಆ ತಂತ್ರಕ್ಕೆ ಬಲಿಯಾದ ಸ್ವಾರಸ್ಯಕರ ಘಟನೆ "ಮಾಡಿದಾಕಿ ಉಣತಾಳ ಮಣಿಯಂತ ಕಡಬೂ'ನಲ್ಲಿ ನಿರೂಪಿತವಾಗಿದೆ. ಪ್ರೀತಿಯ ಹೆಂಡತಿ ನೂಲು ತೆಗೆಯಲಿ ಎಂದು ರಾಟೆ ಮತ್ತು ಇತರ ಸಾಮಗ್ರಿಗಳನ್ನು ಕಷ್ಟಪಟ್ಟು ಒದಗಿಸಿದರೆ, ಕೊನೆಯಲ್ಲಿ ಆಕೆಯಿಂದ ಬಂದ ಉತ್ತರ "ನೂಲಲ್ಲಿಕ್ಕೆ ಬರುವುದಿಲ್ಲ' ಎಂಬುದು ! "ನೂಲೊಲ್ಯಾಕೆ ಚೆನ್ನಿ' ಸಂವಾದದ ತಿರುಳು ಈ ಬಗೆಯದು. ಅದೇ ರೀತಿ "ಇಡ್ಲಿ ಮಾದಮ್ಮ', "ಕಿವುಡರು', "ಹೊಗೆಸೊಪ್ಪಿನ ತೆವಲು', "ಮೀನಿನೆಸರು', "ತ್ವಾಡನ್ಗೆ ತೋಳ ಬಂದಿ ಹೆಗ್ಗಣಕೆ ಎಡೆಕಟ್ಟು' ಮುಂತಾದ ಕಥನಗೀತೆಗಳಲ್ಲಿ ತಿಳಿಯಾದ ಹಾಸ್ಯ, ನೀತಿ ಮುಂತಾದವು ಮನಂಬುಗುವಂತಿದೆ. ಕಾಟಿವಕ್ಕಲು ಕೊಣವೇಗೌಡನ ಹಾಡಿನಲ್ಲಿ ಅವನ ಹೊಟ್ಟೆಬಾಕತನವೇ ಅವನಿಗೆ ಮೃತ್ಯುವಾಗುತ್ತದೆ. ಹೊಸ್ಮಣ್ ನಾಯ್ಕನ ಕತೆಯಲ್ಲೂ ನವಿರಾದ ಹಾಸ್ಯವಿದೆ. ಹೀಗೆ ಜನಪದರು ಹಾಸ್ಯ ಮತ್ತು ನೀತಿ ಎರಡನ್ನೂ ಘಟನೆಯಲ್ಲಿ ಬೆರೆಸಿ, ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಳಿಸುವುದನ್ನು ಹಾಸ್ಯಪ್ರಧಾನ ಕಥನ ಗೀತೆಗಳಲ್ಲಿ ನೋಡಬಹುದಾಗಿದೆ.

ಪ್ರಸ್ತುತ ಸಂಕಲನದ ಕಥನ ಗೀತೆಗಳ ಆಯ್ಕೆಗಾಗಿ ಕನ್ನಡದಲ್ಲಿ ಪ್ರಕಟವಾದ ಕಥನಗೀತ ಸಂಕಲನಗಳಲ್ಲಿ ಬಹಳಷ್ಟನ್ನು ಅವಲೋಕಿಸಲಾಗಿದೆ. ಪುಟಗಳ ಪರಿಮಿತಿಯಿಂದ ಕೆಲವು ಮಹತ್ವದ ಕಥನ ಗೀತೆಗೆ ಸಂಬಂಧಿಸಿದಂತೆ ಪಾಠಾಂತರಗಳನ್ನು ಹಾಗೂ ಸಮಾನ ಆಶಯದ ಕಥನಗೀತೆಗಳನ್ನು ಸಂಗ್ರಹಿಸಿ, ಅಧ್ಯಯನ ಮಾಡಿ, ವರ್ಗೀಕರಿಸಿಕೊಳ್ಳಲಾಗಿದೆ. ಗೀತೆಯೊಂದರ ಪಾಠಾಂತರ ಕವನಗಳ ಸಂಖ್ಯೆ ಕೆಲವೊಮ್ಮೆ ೨೫ ಕ್ಕೂ ಮೀರಿರುವುದು ಗಮನಾರ್ಹ.

ವರ್ಗೀಕರಣದಲ್ಲಿ ಸಾಹಿತ್ಯ ಮತ್ತು ಆಶಯ ನಿರೂಪಣೆಯ ದೃಷ್ಟಿಯಿಂದ ಮುಖ್ಯವೆನ್ನಿಸಿದ ಗೀತೆಯ ಪಾಠವನ್ನು ಪ್ರಧಾನವಾಗಿ ಇಟ್ಟುಕೊಂಡು, ಉಳಿದವುಗಳ ಆಕರ ವಿವರಗಳನ್ನು ಆ ಗೀತೆಯ ಪಾಠದ ಕೊನೆಯಲ್ಲಿ ಅಡಿಟಿಪ್ಪಣಿಯ ರೂಪದಲ್ಲಿ ನೀಡಲಾಗಿದೆ. ಇದರಿಂದ ವಿವಿಧ ಬಗೆಯ ಅಧ್ಯಯನ ಮಾಡಬಯಸುವ ಆಸಕ್ತರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆಂದು ಭಾವಿಸುತ್ತೇನೆ. ಗ್ರಂಥದ ಕೊನೆಯಲ್ಲಿ ಈ ಸಂಗ್ರಹಕ್ಕೆ ಬಳಸಿಕೊಂಡ ಎಪ್ಪತ್ತೊಂದು ಕಥನಗೀತೆಗಳ ಸಂಗ್ರಹ ಗ್ರಂಥ ಪಟ್ಟಿಯನ್ನು ನೀಡಲಾಗಿದೆ. ಆ ಸಂಗ್ರಹಗಳ ಸಂಪಾದಕರಿಗೆಲ್ಲ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಸಂಗ್ರಹಿಸಿದ ಕಥನ ಗೀತೆಗಳನ್ನು ಜೆರಾಕ್ಸ್ ಮಾಡಿಸಿ ಮುದ್ರಣಕ್ಕೆ ಸಜ್ಜುಗೊಳಿಸಲು ನೆರವಾದ ಸಂಶೋಧನಾ ವಿದ್ಯಾರ್ಥಿಗಳಿಗೆ, ಮುಖ್ಯವಾಗಿ ಶ್ರೀ ಎಸ್.ಜಿ. ಬಸವರಾಜು ಇವರಿಗೆ ವಿಶೇಷ ಕೃತಜ್ಞತೆಗಳು ಮತ್ತು ಇಂತಹ ಒಂದು ವ್ಯವಸ್ಥಿತ ಸಂಗ್ರಹಕ್ಕೆ ಅವಕಾಶ ಮಾಡಿಕೊಟ್ಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೂ, ಪರಿಶೀಲನಾ ಸಮಿತಿಯವರಿಗೂ ಮುದ್ರಣಾಲಯ ಸಿಬ್ಬಂದಿಯವರಿಗೂ ನನ್ನ ಕೃತಜ್ಞತೆಗಳು.

***– ಶಾಲಿನಿ ರಘುನಾಥ***

# ಶುಭ ಸಂದೇಶ

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿ

ವಿಧಾನ ಸೌಧ
ಬೆಂಗಳೂರು - ೫೬೦ ೦೦೧
ದಿನಾಂಕ : ೧೬-೦೯-೨೦೦೯

**ಶುಭ ಸಂದೇಶ**

ಸಾವಿರಾರು ವರ್ಷಗಳ ಇತಿಹಾಸವಿರುವ, ಎಲ್ಲ ವಿದ್ಯೆಗಳ ತೊಟ್ಟಿಲಾಗಿರುವ, ಕನ್ನಡ ಸಂಸ್ಕೃತಿಯ ಖಜಾನೆಯಾಗಿರುವ ಜಾನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **"ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯವರು ಹೊರತರುತ್ತಿರುವುದು ಸಂತಸದ ಸಂಗತಿ.

**"ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್"** ಎಂಬ ವ್ಯಾಖ್ಯಾನ ನಮ್ಮ ಜಾನಪದ ಸಾಹಿತ್ಯದ ಸಾರವಾಗಿದೆ. ಕನ್ನಡ ನೆಲ-ಜಲ-ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು, ನಿಜಕ್ಕೂ ನಾಡಿನ ಸಾಹಿತ್ಯಕ ಹಾಗೂ ಜಾನಪದ ಲೋಕಕ್ಕೆ ಒಂದು ಕೊಡುಗೆಯಾಗಲಿವೆ.

ಈ ಯೋಜನೆಗೆ ಶ್ರಮಿಸಿರುವ ಎಲ್ಲರಿಗೂ ಅಭಿನಂದನೆಗಳು. "ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ" ಯೋಜನೆಗೆ ಶುಭ ಹಾರೈಕೆಗಳು.

**(ಬಿ.ಎಸ್. ಯಡಿಯೂರಪ್ಪ)**

# ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದ ಅಧ್ಯಯನವೆಂದರೆ ನಮ್ಮ ಸಂಸ್ಕೃತಿಯ ವಿಶ್ಲೇಷಣೆಯೇ ಆಗಿದೆ. ಜನವಾಣಿಯ ಬಹುಮುಖತೆಯ ದಾಖಲು ಕ್ರಮ ಎಷ್ಟು ಮಹತ್ವದ್ದೋ, ಅಷ್ಟೇ ಶ್ರಮದ್ದು ಕೂಡ. ಶಿಷ್ಟ ಸಾಹಿತ್ಯದ ಏಕತಾನತೆಗೆ ದನಿ ಮತ್ತು ಸಂವೇದನೆ ಜೋಡಿಸಿದ್ದು ಜಾನಪದ ಸಾಹಿತ್ಯ. ಹಾಗಾಗಿಯೇ '**ಜನವಾಣಿ ಬೇರು; ಕವಿವಾಣಿ ಹೂ**' ಎಂಬ ಮಾತಿದೆ.

ಇಷ್ಟು ಮಹತ್ವವುಳ್ಳ ಈ ಸಾಹಿತ್ಯದ ಸಂಗ್ರಹ, ದಾಖಲು, ಪ್ರಕಟಣೆಗೆ ಅಗತ್ಯವಾದ ಜನರ ಸಹಕಾರದಂತೆಯೇ ಪ್ರಭುತ್ವದ ಆಸರೆ ಬೇಕು. ಆ ದಿಸೆಯಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ '**ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ**' ಸಂಪುಟದ ಪ್ರಕಟಣೆಯಂತಹ ಮಹತ್ವದ ಕಾರ್ಯ ಕೈಗೊಂಡಿದೆ. ಈ ಯೋಜನೆ ಅಡಿಯಲ್ಲಿ ೯೦ ಸಂಪುಟ ಹೊರತರಲು ತೀರ್ಮಾನಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಈ ಗುರುತರ ಜವಾಬ್ದಾರಿಯ ಮುಖ್ಯ ಪಾಲನ್ನು ಹೊತ್ತು ಈ ಕಾರ್ಯವನ್ನು ನಿರ್ವಹಿಸಿದೆ. ಸಮೃದ್ಧ ಜಾನಪದ ಸಾಹಿತ್ಯದ ಪರಂಪರೆ-ಇತಿಹಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಂಪುಟಗಳು ರೂಪುಗೊಳ್ಳುವಂತೆ ನೋಡಿಕೊಳ್ಳಲಾಗಿದೆ.

ನಾಡಿನ ಉದ್ದಾಮ ಜಾನಪದ ತಜ್ಞರು ಈ ಸಂಪುಟಗಳನ್ನು ಸಿದ್ಧಗೊಳಿಸಿದ್ದಾರೆ. ಸಂಪಾದಕರು ಅತ್ಯಂತ ಶ್ರಮವಹಿಸಿ ಈ ಸಂಪುಟಗಳನ್ನು ರೂಪುಗೊಳಿಸಿರುತ್ತಾರೆ. ಹೀಗೆ ಈ ಬೃಹತ್ ಯೋಜನೆಗೆ ಸಹಕರಿಸಿದ, ಕೈ ಜೋಡಿಸಿದ ಎಲ್ಲ ಮಹನೀಯರನ್ನೂ ನೆನೆಯುವುದು ಸಂತಸದ ಸಂಗತಿಯಾಗಿದೆ.

ಈ ಕಾರ್ಯದಲ್ಲಿ ತೊಡಗಿಕೊಂಡ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಮತ್ತು ಸಂಪಾದಕ ಮಂಡಳಿ ಸದಸ್ಯರಿಗೆ ವಿಶೇಷ ವಂದನೆಗಳು.

ತಮ್ಮ ವಿದ್ವತ್ ನುಡಿಗಳೊಂದಿಗೆ ಕೃತಿಯ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಜಯರಾಮರಾಜೇ ಅರಸು, ನಿರ್ದೇಶಕರಾದ ಶ್ರೀ ಮನು ಬಳಿಗಾರ್, ಸಂಚಾಲಕರಾದ ಶ್ರೀ ಕಾ.ತ. ಚಿಕ್ಕಣ್ಣ, ಶ್ರೀ ಎಚ್. ಶಂಕರಪ್ಪನವರು ಈ ಯೋಜನೆಯ ನಿರ್ವಹಣೆಯಲ್ಲಿ ಅಪಾರ ಸಹಕಾರ ತೋರಿದ್ದಾರೆ, ಅವರಿಗೆ ಹಾಗೂ ಈ ಮಹತ್ವದ ಯೋಜನೆಯನ್ನು ತಮ್ಮದೆಂದು ಭಾವಿಸಿ, ನಿರ್ವಹಿಸಿದ ಕರ್ನಾಟಕ ಜಾನಪದ ಅಕಾಡೆಮಿಯ ಸಿಬ್ಬಂದಿಗೆ ವಂದನೆಗಳು.

**(ಗೊ.ರು. ಚನ್ನಬಸಪ್ಪ)**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಅಧ್ಯಕ್ಷರ ಮಾತು

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಃಕಾಲೀನ ಜ್ಞಾನ - ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'
**– ರಾಘವಾಂಕ**

“ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ” (ಪುರದ ಪುಣ್ಯ ೭೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ - ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; ‘ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ’ ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ ‘ಸಾಹಿತ್ಯವೆಂಬ ಸಾಮಗ್ರಿಗೆ’ ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ

ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ**
**ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು.

ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ

ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ

ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ - ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೭-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಅಧ್ಯಕ್ಷರ ಮಾತು

**ಪೂರ್ವಾಪರ**

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸುಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ - ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ - ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಪೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ

ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು  ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ  ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ  ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ  ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

**ಮಾತಿನ ಸರಣಿ : ಮುತ್ತಿನ ಬೆಲೆ**

**ಬಿ. ಎಂ. ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ  ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ

ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೬)**

**ಬೆಟಗೇರಿ ಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'.

**(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ

ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ.ಪರಮಶಿವಯ್ಯ**

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೮)**

**– ೩ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ

ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕೆ. ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ

ಆಗಮನ ಕಾಲದಿಂದ ಮಾತ್ರವಲ್ಲ ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ - ಜನಪದ - ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ;

ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ - ಜೀಶಂಪ; ಮುನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ - ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ - ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು

ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ. ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು,

ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ - ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ - ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೮೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ

ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು

ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ'

ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

## ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪೊದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ-ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೂಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಬಿ.ವಿ. ವಿವೇಕ ರೈ, ಡಾ. ತೀ.ನಂ. ಶಂಕರನಾರಾಯಣ, ಡಾ|| ಸಿದ್ಧಲಿಂಗಯ್ಯ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು ಮತ್ತು ಡಾ. ಎಂ.ಎಸ್. ಲಠ್ಠೆ (ದಿವಂಗತ) ಹಾಗೂ ಶ್ರೀ ಕೆರೆಮನೆ ಶಂಭು ಹೆಗಡೆ (ದಿವಂಗತ) ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳೂ ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಬಿ.ಆರ್. ಜಯರಾಮರಾಜೇ ಅರಸ್ ಅವರಿಗೆ,

ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ

ಡಾ. ಜಿ.ಎಸ್. ಭಟ್ ಅವರ ಸಲಹೆ-ಸಹಕಾರ ಅಮೂಲ್ಯವಾದುವುದು. ಹಾಗೆಯೇ ಈ

ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪ ಮತ್ತು ರಿಜಿಸ್ಟ್ರಾರ್ ಡಾ. ಎಸ್. ಪ್ರಸಾದಸ್ವಾಮಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಮನು ಬಳಿಗಾರ್)**
ನಿರ್ದೇಶಕರು

## ೧. ಈರೋಬಿ*

ಹುಣಸೆಯ ಕಾಯಿ ಹುಳಿಯೆಂದು ಗೇರುಕಾಯಿ ಮರಕೆಂದು
ಈ ನಾಡಿನ್ಹೆಣ್ಣು ಕರಿದೆಂದು - ಶಂಕರಲಿಂಗರಾಯ
ಆ ನಾಡಿಗ್ಹೋಗಿ ನುಡಿದಾನೆ - ಕೋಲುಮಲ್ಲಿಗೆ ಕೋಲಣ್ಣ

ಬಾಣತೀರೋಬಿ ಬಟ್ಟಲಲ್ಲಣುತಾಳೆಂದು
ಘಟ್ಟದ ಕೆಳಗಲ ಹರಿವಾಣ - ತರಲ್ಹೋಗಿ
ಶೆಟ್ಟಿ ಶಂಕರರಾಯ ಮಡಿದಾನೆ ||ಕೋ||

ಕನ್ನೆ ಈರೋಬಿ ತಣಿಗೆಲುಣುತಾಳೆಂದು
ಕಣಿವೇಯ ಕೆಳಗಲ ಹರಿವಾಣ - ತರಲ್ಹೋಗಿ
ರಾಯ ಶಂಕರರಾಯ ಮಡಿದಾನೆ ||ಕೋ||*

ಮುಂಗೋಳಿ ಕೂಗಿತು ಮೂಡು ಕೆಂಪೇರಿತು
ಏಳೆ ಈರೋಬಿ ಬೆಳಗಾದೊ - ನಿನ್ಹಟ್ಟಿ
ಕೀಲಾರದೆಮ್ಮ ಕರುವುಂಡೊ

ಕೀಲಾರದೆಮ್ಮೆಗೆ ಗಜಮುಟ್ಟಿ ಗೊಂಡ್ಹೇವು
ದಾವುಣಿ ಮೆಟ್ಹಾಲ ಕರೆಯೋಳು - ಈರೋಬಿ
ವಾಲೆಮೇಲಿದ್ದ ಜವರಾಯ

ಅತ್ಯಮ್ಮ ಅತ್ಯಮ್ಮ ಕೆಟ್ಟ ಸ್ವಪ್ನವ ಕಂಡೆ
ದಿತ್ತುಳ್ಳಿಕಾರ ನಿನ ಮಗ - ಮನಗೋ ಮಂಚ
ನಿಟ್ಟೆಲ್ಲ ಕತ್ತಿ ಕವಿಯಾದೊ

ಮಾಗಿಯ ಸ್ವಪ್ನ ಮನೆಗೆ ಮೂಗಂಡುಗ
ನಮಗಲ್ಲ ಕಾಣೆ ಪರರಿಗೆ ಈರೋಬಿ
ಏನು ಕಂಡ್ಹೇಳೆ ಸಪುನವ

ಉತ್ತದ ಮೇಗಲ ಕಾಗೆ ನೆತ್ತರ ಕಾರೋದ ಕಂಡೆ
ಶೆಟ್ಟಿ ಶಂಕರರಾಯ ಬದುಕೋದ - ಸಪುನವ
ಕಂಡೆನಮ್ಮ ಕಾಲುಗಳಿಗೇಲಿ

ಮೂಗುತಿ ಮುರಿಯೋದ ಕಂಡೆ ಮುಂಬಲ್ಲು ಸಿಡಿಯೋದ ಕಂಡೆ
ಗಿಂಡಿ ತುಂಡಾಗಿ ಒಡೆಯೋದ - ಸಪುನವ
ಕಂಡೆನಮ್ಮ ಕಾಲಗಳಿಗೇಲಿ

ಮೂಗುತಿ ಎಂಬೋಳು ನೀನು ಮುಂಬಲ್ಲು ಅನ್ನೋಳು ನಾನು
ಚೆನ್ನದ ಗಿಂಡಿಯ ನಿನ್ನ ಪುರುಷ - ಈರೋಬಿ
ಏನು ಕಂಡ್ಹೇಳೆ ಸಪುನವ

***

ಕಟ್ಟೆಯ ಹಿಂದೆ ಎಂಟೆಮ್ಮೆ ಮೇಸೋಳೆ
ಒಂಟಂಚಿನ ಸೀರೆ ಸೆರಗೋಳೆ - ಈರೋಬಿ
ನಿನ್ನ ಪುರುಷ ಮಡಿದಾನೆ ರಣದಲ್ಲಿ

ದಂಡಿನ್ಹಾದೀಲಿ ಹಿಂದೆಮ್ಮೆ ಮೇಸೋಳೆ
ನಿನ್ನ ಗಂಡನ ತಲೆಯ ಹೊಡೆದಾರೆ - ಈರೋಬಿ
ಹಿಂದೆಮ್ಮೆ ಬಿಟ್ಟು ಮರೆಯಾಗೆ

ಸತ್ತ ಸುದ್ದಿ ಬರಲಿ ನೆತ್ತರದರಬಿ ಬರಲಿ
ಕಿತ್ತುಳ್ಳಿ ಬರಲಿ ಗುರುತೀಗೆ - ಸೋಮವಾರದ
ಹೋತನಂತೆ ಕೊಂಡ ಹೊಗುತೀನಿ

ಸತ್ತ ಸುದ್ದಿಬಂತು ನೆತ್ತರದರಬಿ ಬಂತು
ಕತ್ತಿ ಬಂತು ಅವನ ಗುರುತೀಗೆ - ಈರೋಬಿ
ಹೊತ್ತೋರಿಗೇಳು ನಿಲುಭಾರ

ಸಣ್ಣಬೆತ್ತದ ಕೋಲು ಮಣ್ಣಾದೊ ಕಾಣಮ್ಮ
ಕನ್ನೆ ಕುಂಡುರುವ ಅರಮಲ್ಲಿ - ಗಾಜಿನಕಂಬ
ಮಣ್ಣಾದೊ ಕಾಲಗಳಿಗೇಲಿ

ಹಸುರು ಬೆತ್ತದಕೋಲು ಮಸಿಯಾದೊ ಕಾಣಮ್ಮ
ಹಸುಳೆ ಕುಂಡುರವ ಅರಮಲ್ಲಿ - ಗಾಜಿನಕಂಬ
ಮಸಿಯಾದೊ ಕಾಲುಗಳಿಗೇಲಿ

ಪಾಪಿ ಹೆಣ್ಣುಟ್ಟಿ ತೋಪನ್ನೆ ಸೇರಿದೆ
ತೋಪೆ ನಿಂದುರುದು ಬೆಯ್ತಾದೆ

ಕರ್ಮಿ ಹೆಣ್ಣುಟ್ಟಿ ನೀ ವನವನೆ ಸೇರಿದೆ
ವನವೇ ನಿಂದುರುದು ಬೇಯ್ತದೆ - ನನ್ನಂಥ
ಕರ್ಮಿ ಹೆಣ್ಣುಂಟೆ ಧರೆಯಲ್ಲಿ

ಕತ್ತಿ ಬರುವಾಗ ಹೆತ್ತೋರಿಗೆ ಹೆಚ್ಚಳ
ಕತ್ತಿ ಬಂದೂರ ಹೊಗುವಾಗ - ಈರೋಬಿ
ಹೆತ್ತೋರಿಗೇಳು ನಿಲುಭಾರ

ಬಾಕು ಬರುವಾಗ ಬಾಲದಿರಿಗ್ಹೆಚ್ಚಳ
ಬಾಕು ಬಂದೂರ ಹೋಗುವಾಗ - ಈರೋಬಿ
ಭಾವದಿರ ಗೋಳು ನಿಲುಭಾರ

ಸಾಲು ಬರುವಾಗ ತಾಯಮ್ಮಗೆ ಹೆಚ್ಚಳ
ಸಾಲು ಬಂದೂರ ಹೊಗುವಾಗ - ಈರೋಬಿ
ತಾಯಮ್ನ ಗೋಳು ನಿಲುಭಾರ

ಹಚ್ಚಡ ಬರುವಾಗ ಅವರಪ್ಪಾಜಿಗೆ ಹೆಚ್ಚಳ
ಹಚ್ಚಡ ಬಂದೂರ ಹೊಗುವಾಗ - ಈರೋಬಿ
ಅವರಪ್ಪನ ಗೋಳು ನಿಲುಭಾರ

ಅಂಗಿ ಬರುವಾಗ ತಂಗೋರಿಗೆ ಹೆಚ್ಚಳ
ಅಂಗಿ ಬಂದೂರ ಹೊಗುವಾಗ - ಈರೋಬಿ
ತಂಗ್ಯಮ್ಮನ ಗೋಳು ನಿಲುಭಾರ

ಉಂಗುರ ಬರುವಾಗ ಅವರಣ್ಣಯ್ಯಗೆ ಹೆಚ್ಚಳ
ಉಂಗುರ ಬಂದೂರ ಹೊಗುವಾಗ - ಈರೋಬಿ
ಅವರಣ್ಣನ ಗೋಳು ನಿಲುಭಾರ

ತುಪ್ಪ ಅನ್ನವುಂಡು ಒಪ್ಪುಳ್ಳ ನಡುಕಟ್ಟು
ದಪ್ಪದೊಂದು ಕೊಡಲಿ ಹೆಗಲೊಡ್ಡಿ - ಈರೋಬಿ
ನಿಮ್ಮಪ್ಪದಿರ್‍ಹೊರಟಾರೆ ಕೊರಡೀಗೆ

ಅತ್ತಿಯ ಮರವ ಹತ್ತಿ ಕಡಿಯೊ ಅಪ್ಪದಿರ
ಮತ್ತೊಂದು ಕೊರಡ ಮಿಗಿಲಾಗಿ - ಕಡಿದಾರೆ
ಪುತ್ತರ ಸಂತಾನ ದೊರೆಯೇದು

ಎಣ್ಣೆ ಅನ್ನವುಂಡು ಸಣ್ಣದೊಂದು ನಡುಕಟ್ಟು
ಸಣ್ಣದೊಂದು ಕೊಡಲಿ ಹೆಗಲೊಡ್ಡಿ - ಈರೋಬಿ
ನಿಮ್ಮಣದೀರ್‍ಹೊರಟರೆ ಕೊರಡೀಗೆ

ಆಲದ ಮರವ ಏರಿಕಡಿಯೊ ಅಣ್ಣದೀರ
ಮೇಲೊಂದು ಕೊರಡು ಮಿಗಿಲಾಗಿ - ಕಡಿದಾರೆ
ಬಾಳ ಸಂತಾನ ದೊರೆಯೋದು

ಕೊಂಡ ತಗಿಯೋರು ನೀವು ಚೆಂದಾಗಿ ತಗಿರಯ್ಯ
ಕೊಂಡದ ಮೇಲೆ ಗುಡಿಕಟ್ಟಿ - ತಗಿದಾರೆ
ನಿಮಗೆ ಗಂಡು ಸಂತಾನ ದೊರೆಯೋದು

ಕಿಚ್ಚ ತಗಿಯೋರು ನೀವು ಒಪ್ಪವಾಗಿ ತೆಗಿರಯ್ಯ
ಕಿಚ್ಚಿನ ಮೇಲೆ ಗುಡಿಕಟ್ಟಿ - ತೆಗಿದಾರೆ
ನಿಮಗೆ ಪುತ್ರ ಸಂತಾನ ದೊರೆಯೋದು

ಕೊಂಡಕೆ ಸೌದೆ ಹೊರುವ ಕೋಣನೆ ಚೆಂದ ನೋಡಿ
ಕೊಂಬಿಗೆ ಮುತ್ತು ಕೊರಳಿಗೆ - ಹೂವಿನಮಾಲೆ
ಕೊಂಡಕೆ ಸೌದೆ ಹೊರುತಾರೆ

ಕಿಚ್ಚಿಗೆ ಸೌದೆ ಹೊರುವ ಎತ್ತಿನ ಚೆಂದ ನೋಡಿ
ಕೊಂಬಿಗೆ ಮುತ್ತು ಕೊರಳಿಗೆ - ಹೂವಿನಮಾಲೆ
ಕಿಚ್ಚಿಗೆ ಸೌದೆ ಹೊರುತಾವೆ

ಕೊಂಡ ಕೂಡಿಸ್ಯಾಳೆ ಗಂಡನ ತರಿಸ್ಯಾಳೆ
ಗಂಡನ ಕಷ್ಟವ ಮಾಡ್ಯಾಳೆ - ಈರೋಬಿ
ಮುಂದಕೆ ಹೊರಟಳೆ ಈರೋಬಿ

ನೀರಮಿದೀರೋಬಿ ಹೋದಳಪ್ಪನ ಮನೆಗೆ
ಅಪ್ಪಾಜಿ ನನಗೆ ತರನ್ಬೇಳೋ - ಅನ್ನೋ ಹೊತ್ತಿಗೆ
ನಿನ್ನಂತ ಬಾಳು ತಪ್ಪಿದೋರಿಲ್ಲವಮ್ಮ
ಬಾಳು ತಪ್ಪಿದೋರಿಲ್ಲವೆ ಬಾಲನಾದರು ಇಲ್ಲವೆ
ಯಾರ ಬಾಲನ ಕಂಡು ಇರಲಪ್ಪ - ಅಪ್ಪಾಜಿ
ಬೇಗನೆ ಕೊಡೋ ಒಡೆಗಿಚ್ಚ

ಸೀರೆನುಡುವಮ್ಮ ಕುಪ್ಪಸನೆ ಕೊಡುವಮ್ಮ
ಮಲ್ಲಿಗೆಹೂವ ಮುಡಿಯಮ್ಮ - ಈರೋಬಿ
ತೆಪ್ಪನಿರಮ್ಮ ಅರಮಲ್ಲಿ

ಸೀರೆಯನುಡುವಲ್ಲೆ ಕುಪ್ಪಸವತೊಡುವಲ್ಲೆ
ಮಲ್ಲಿಗೆಹೂವ ಮುಡಿವಲ್ಲೆ - ಅಪ್ಪಾಜಿ
ಬೇಗನೆ ಕೊಡೊ ಒಡೆಗಿಚ್ಚ

ಕಿಚ್ಚು ಎಂಬುದು ಕಚ್ಚಾಟ ತರವಲ್ಲ
ಕತ್ತೋದು ಚೆನ್ನ ವಲುವೋದು-ಈರೋಬಿ
ತೆಪ್ಪನಿರಮ್ಮ ಅರಮಲ್ಲಿ

ಕಿಚ್ಚುಕೊಟ್ಟರೆ ಕೊಡು ಕೊಡದಿದ್ದರೆ ಬಿಡು
ಪಚ್ಚೆ ಕಾಲಾಣೆ ಪತಿಯಾಣೆ - ಕೆಂಪನರಸು
ತೊಟ್ಟಿಲೊಳಗಿರುವ ಶಿಶುವಾಣಿ

ನೀರಮೀದೀರೋಬಿ ಹೋದಳಣ್ಣನ ಮನೆಗೆ
ಅಣ್ಣ ನನಗೆ ತರನೇಳೊ - ಅನ್ನೋವತ್ತಿಗೆ
ನಿನ್ನಂಥ ಬಾಳುಕೆಟ್ಟೋರು ಇಲ್ಲವಮ್ಮ

ಬಾಳುಕೆಟ್ಟೋರಾದರು ಇಲ್ಲವೆ ಬಾಲನಾದರು ಇಲ್ಲವೆ
ಯಾವ ಬಾಲನ ಕಂಡು ಇರಲಣ್ಣ - ಅಣ್ಣಾಜಿ
ಬೇಗನೆ ಕೊಡು ಒಡಗಿಚ್ಚು

ಸೀರೆಯನುಡುವಮ್ಮ ಕುಪ್ಪುಸ ತೊಡುವಮ್ಮ
ಮಲ್ಲಿಗೆಹೂವ ಮುಡಿಯಮ್ಮ - ಈರೋಬಿ
ತೆಪ್ಪನಿರಮ್ಮ ಅರಮಲ್ಲಿ

ಸೀರೆಯನುಡುವಲ್ಲೆ ಕುಪ್ಪುಸ ತೊಡುವಲ್ಲೆ
ಮಲ್ಲಿಗೆಹೂವ ಮುಡಿವಲ್ಲೆ - ಅಣ್ಣಾಜಿ
ಬೇಗನೆ ಕೊಡು ಒಡಗಿಚ್ಚ

ಕಿಚ್ಚೂ ಎಂಬೋದು ಕೆಟ್ಟದು ತರವಲ್ಲ
ಕರ್ಗೋದು ಬೆನ್ನು ಒಲೆಯೋದು - ಈರೋಬಿ
ತೆಪ್ಪನೆ ಇರಮ್ಮ ಅರಮಲ್ಲಿ

ಕಿಚ್ಚುಕೊಟ್ಟರೆ ಕೊಡು ಕೊಡದಿದ್ದರೆ ಬಿಡು
ಪಚ್ಚೆ ಕಾಲಾಣೆ ಪತಿಯಾಣೆ - ಕೆಂಪೇವರಸು
ತೊಟ್ಟಿಲೊಳಗಿರುವ ಶಿಶುವಾಣಿ

ಗಂಡ ಸಾಯೋಕಿಂತ - ಮುಂದ್ಯಾಗೋಕಿಂತ
ಕಂಡೋರ ಮನೆಯ ಕಸನ್ಹಾಕೆ - ಸಾಯೋಕಿಂತ
ಕೊಂಡವನ್ನೋದೆ ಕಡುಲೇಸು

ರಾಗಿ ಮಾಡಿದ ಕಲ್ಲ ಬೀದಿಗೆ ಚೆಲ್ಲೋಳಿ
ನಾದನಿ ನಿನ್ನ ವಿಷವ ಬಿಡಲಿಲ್ಲ - ನಮ್ಮಿಬ್ಬರ
ಗುದ್ದಾಟವಿಲ್ಲಿಗೆ ಸವೆದ್ಹೋದೊ

ಅಕ್ಕ ಮಾಡಿದ ಕಲ್ಲ ಹಟ್ಟೀಗೆ ಚೆಲ್ಲೋಳೆ
ಅತ್ತಿಗೆ ನಿನ್ನ ವಿಷವ ಬಿಡಲಿಲ್ಲ - ನಮ್ಮಿಬ್ಬರ
ಕಿತ್ತಾಟ ಇಲ್ಲಿಗೆ ಸರಿಯಾದೊ

ಬತ್ತ ಮಾಡಿದ ಕಲ್ಲ ಬಚ್ಚಲಿಗೆ ಚೆಲ್ಲೋಳೆ
ಅತ್ಯಮ್ಮ ನಿನ್ನ ವಿಷವ ಬಿಡಲಿಲ್ಲ - ನಮ್ಮಿಬ್ಬರ
ಗುದ್ದಾಟ ಇಲ್ಲಿಗೆ ಸರಿಯಾದೊ

ಹಾಲ ತಕ್ಕಂಡು ನಮ್ಮ ತಾಯನ್ನು ಬರಹೇಳಿ
ತುಪ್ಪಕಿಂತ ಮೇಲು ಜೇನುತುಪ್ಪ - ತಕ್ಕೊಂಡು
ನಮ್ಮಪ್ಪ ಮುದ್ದಯ್ನ ಬರಹೇಳಿ

ಎಣ್ಣೆ ತಕ್ಕೊಂಡು ನಮ್ಮಣ್ಣಯ್ನ ಬರಹೇಳಿ
ಎಣ್ಣೆಗಿಂತ ಮೇಲೆ ಹರಳೆಣ್ಣೆ - ತಕ್ಕೊಂಡು
ಅಣ್ಣ ನಿಂಗಣ್ಣನ ಬರಹೇಳಿ

ಉಪ್ಪರಿಕೆ ಉಪ್ಪರಿಕೆ ಏಳಂತರದುಪ್ಪರಿಗೆ
ಉಪ್ಪರಿಗೆ ಒಳಗೆ ಒರಗಿರುವ - ಈರೋಬಿ
ನಿಮ್ಮ ತಾಯಿ ಬಂದವಳೆ ಮಕ ತೋರೆ

ತಾಯಿ ಬಂದರೆ ಬರಲಿ ಹಾಲು ತಂದರೆ ತರಲಿ
ನನ್ನ ಹಾಲಿನಂಥ ಬದುಕು ಅಡವೀಲಿ - ಈಡಾಡುವಾಗ
ತಾಯಮ್ನಗೊಡವೆ ನಮಗೇನು

ಮಾಳಿಗೆ ಮಾಳಿಗೆ ಏಳಂತರದ ಮಾಳಿಗೆ
ಮಾಳಿಗೆ ಒಳಗೆ ಒರಗಿರುವ - ಈರೋಬಿ
ನಿಮ್ಮಪ್ಪ ಬಂದವನೆ ಮಕತೋರೆ

ಅಪ್ಪ ಬಂದರು ಬರಲಿ ತುಪ್ಪ ತಂದರು ತರಲಿ
ತುಪ್ಪದಂತ ಬದುಕು ಅಡವೀಲಿ - ಈಡಾಡುವಾಗ
ನಮ್ಮಪ್ಪನಗೊಡವೆ ನಮಗೇನು

ಮಂಚದಮೇಲೆ ಮಲಗಿರೊ ಈರೋಬಿ
ನಿಮ್ಮಣ್ಣ ಬಂದವ್ನೆ ಮಕ ತೊರೆ
ಅಣ್ಣ ಬಂದರು ಬರಲಿ ಎಣ್ಣೆ ತಂದರು ತರಲಿ

ಎಣ್ಣೆಯಂಥ ಬದುಕು ಅಡವೀಲಿ - ಈಡಾಡುವಾಗ
ನಮ್ಮಣ್ಣನಗೊಡವೆ ನಮಗೇನು
ಕೊಂಡ ತೆಗೆಸ್ಯಾಳೆ ಕೊಂಡಾ ಕುಡಿಸ್ಯಾಳೆ

ಮುಂದಾಕೊಂಟಾಳೆ ಈರೋಬಿ
ಬಣ್ಣ ಇಟ್ಟುಗಂಡು ಬಂಗಾರ ತೊಟ್ಟುಗಂಡು
ಬೀದೀಲಿ ಹೊರಟಳೆ ಈರೋಬಿ

ಕೊಂಡಕೋಗೋಳ ಕೈಲಿ ಹನ್ನೆರಡು ನಿಂಬೆಹಣ್ಣು
ಹನ್ನೆರಡುದುರುಬು ಕರುವಲ್ಲೆ - ಈರೋಬಿ
ಕೊಂಡಕ್ಹೋಗೋದೆ ಸಡಗರ

ಕಿಚ್ಚಿಗ್ಹೋಗಳಕೈಲಿ ಮುಚ್ಚಳ ನಿಂಬೆಹಣ್ಣು
ಕಿಚ್ಚೇಳುದುರುಬ ಕುರುವಲ್ಲೊ - ಈರೋಬಿ
ಅವಳು ಕಿಚ್ಚಿಗೋಗ್ಹೋದೆ ಸಡಗರ

ನಿಂಬೆಯಹಣ್ಣ ಅಂಬರಕೀಡಾಡುತ
ರಂಬೆ ತನ್ನ ತೋಳ ತಿರುವುತ - ಈರೋಬಿ
ಬಂದೋರಮುಂದೆ ಮೆರೆದಾಳೊ

ಬಾಳೆಯಹಣ್ಣ ಬಾನಿಗೀಡಾಡುತ್ತ
ಬಾಲೆ ತನ್ನ ತೋಳ ತಿರುವುತ್ತ - ಈರೋಬಿ
ಅವರ ಭಾವದೀರಮುಂದೆ ಮೆರೆದಾಳೊ

ಅರಿಸಿಣ ಸೀಗೆಕಾಯ ಸರಸರನೀಡಾಡುತ್ತ
ಅವಳರಸಿ ಈರೋಬಿ ಬರಹೇಳಿ - ಸೀಗೆಕಾಯಿ
ಅವು ಇನವಂದನಾಡಿ ನಗುತಾವೆ

ಎಣ್ಣೆ ಸೀಗೆಕಾಯ ಇನವಂದನಾಡುತಾನೆ
ಕನ್ನೆ ಈರೋಬಿ ಬರಹೇಳಿ - ಸೀಗೆಕಾಯಿ
ಅವು ಇನವಂದನಾಡಿ ನಗುತಾವೆ

ಹುಟ್ಟಿದ್ದಳಿಸಂದ್ರ ಬೆಳೆದಿದ್ದು ನಾಗ್ತಿಹಳ್ಳಿ
ಕೆಟ್ಟು ಬಾಳಿದ್ದು ಬೆಳ್ಳೂರು - ಹೆಣ್ಣು ಮಕ್ಕಳು
ನನ್ನಂಗೆ ನಿಂದು ಉರಿಯಾಲಿ

ಬೆಳ್ಳೂರಲ್ಲಿ ಒಬ್ಬ ಬೇಡರ ಹುಡುಗನ್ನ
ಬಾಗಿಲ ತೆಗಿಸೆ ಇವರೀಗೆ - ನಾನೀಗ
ಕಳಸ ಮುಂದಾಗಿ ಬರುತೀನಿ

ಕಳಸ ಹೊತ್ತುಕೊಂಡು ಬಂದಳು ಈರೋಬಿ
ಕೊಂಡ ಮೂರುಸುತ್ತು ಬಳಸ್ಯಾಳು - ಈರೋಬಿ
ಕಳಸವ ಮಡಗಿ ಕೈಯೆತ್ತಿ ಮುಗಿದಾಳು - ಈರೋಬಿ
ಕೊಂಡಕೆ ಮುಂದಾಗಿ ನಡೆದಾಳು

ಕೋಲುಮಲ್ಲಿಗೆ ಕೋಲಣ್ಣ - ಕೋಲು ಚೆನ್ನದ ಕೋಲಣ್ಣ

***

ಬೆಳ್ಳೂರು ಸುತ್ತಿನಲ್ಲಿ ಸಂಗ್ರಹಿಸಿದ ಮತ್ತೊಂದು ಕೃತಿಯಲ್ಲಿ ಕಥಾಸೂತ್ರ ಒಂದೇ ಆದರೂ ಮೂಲಕಥೆ ಇನ್ನೂ ಸ್ಪಷ್ಟಗೊಳ್ಳುತ್ತದೆ.

ಪತಿ ಶಂಕರರಾಯ ಮಡಿದ ಸುದ್ದಿ ಈರೋಬಿಗೆ ಎಮ್ಮೆ ಕಾಯುವಾಗ ಮುಟ್ಟುತ್ತದೆ. ಹೇಗೆ ಮಡಿದನೆಂಬ ವಿಷಯ ಖಚಿತವಾಗಲಿಲ್ಲ. ಯಾರೊಡನೆಯೋ ಹೋರಾಡಿ ಮಡಿದಿರಬೇಕೆಂಬ ಊಹೆಗಳು ಹರಡುತ್ತವೆ. ಆದರೆ ಈರೋಬಿ ವೀರನಾದ ತನ್ನ ಪತಿ ಮಡಿದನೆಂದೇ ನಂಬಳು !

ಬೆಟ್ಟದ ಸುತ್ತವ ಬಿಟ್ಟೆಮ್ಮೆ ಕಾಯೋಳೆ
ದುಂಡಿ ಕೈಬಳೆ ಹೊಡೆದವು ||ಸುವ್ವಿ||

ಕೊಂಡದ ಸುತ್ತವ ಬಿಟ್ಟೆಮ್ಮೆ ಕಾಯೋಳೆ
ಭದ್ರೆ ಕೈ ಬಳೆ ಹೊಡೆದವು ||ಸುವ್ವಿ||

ಕಡುದ ಕತ್ತಿ ಬರಲಿ ಹಿರಿದ ಈಟಿ ಬರಲಿ
ಜೂಲು ನಾಯಿ ಬರಲಿ ಗುರುತೀಗೆ ||ಸುವ್ವಿ|| ಬೆಳ್ಳೂರ
ಬೋರೆ ಮೇಲೆ ನಾವು ನೆಲೆಗೊಂಡು ||ಸುವ್ವಿ||

ಕಡುದ ಕತ್ತಿ ಬಂದೊ ಹಿರಿದ ಈಟಿ ಬಂದೊ
ಜೂಲುನಾಯ ಬಂದೊ ಗುರುತೀಗೆ ||ಸುವ್ವಿ|| ಬೆಳ್ಳೂರ
ಬೋರೆ ಮೇಲ್ಯವೆ ನೆಲೆಗೊಂಡೊ

ಶಂಕರರಾಯ ಕಡಿದ ಕತ್ತಿ, ಹಿರಿದ ಈಟಿಗಳು ಬಂದುವು. ಅವನ ಜೊತೆಯಲ್ಲಿ ಹೋಗಿದ್ದ ಜೂಲು ನಾಯಿಯೂ ಬಂದಿತು. ನಡೆದ ಘಟನೆಯೇನು ಎನ್ನುವುದೂ ಸ್ಪಷ್ಟವಾಯಿತು.

ಬಸುರಿ ಈರೋಬಿ ಬಟ್ಟಲಲ್ಲುಣುತಾಳೆಂದು
ಗಟ್ಟಿದ ಕೆಳಗಲ ತಣಗೇಯ ||ಸುವ್ವಿ|| ತರಲ್ಹೋಗಿ
ಸುಮ್ಮನಿದ್ದಾ ಗುರುವ ಕೆಣಕೀದ ||ಸುವ್ವಿ|| ಕಾರಣಕಾಗಿ
ಶೆಟ್ಟಿ ಶಂಕರರಾಯ್ನ ತಲೆ ಮಡಿದೊ ||ಸುವ್ವಿ||

ಪತಿಯ ಮರಣದ ವಾರ್ತೆ ಖಚಿತಗೊಂಡ ಕೂಡಲೆ ಈರೋಬಿ ಕೊಂಡವನ್ನು ಏರಲು ಸಿದ್ಧಳಾಗುತ್ತಾಳೆ. ಅತ್ತೆ ಸಮಾಧಾನ ಹೇಳುತ್ತಾಳೆ :

ಗಂಡ ಸುತ್ತೋರಿಲ್ಲವೆ ಮುಂಡೇರಾದೋರಿಲ್ಲವೆ
ಮುಂಡೇರಿಲ್ಲವೇನೆ ಧರೆ ಮೇಲೆ ||ಸುವ್ವೀ||

ಗಂಡ ಸತ್ತೋರವರೆ ಮುಂಡೇರಾದೋರವರೆ
ಹೀನ ಬತ್ತಲ್ಲೆ ಕುಲಕೆಲ್ಲ ||ಸುವ್ವಿ|| ಅತ್ಯಮ್ಮ
ವಾರಾರಗಿತ್ತೀರು ಆಡುಕಾಯ್ತ ||ಸುವ್ವಿ|| ಅತ್ಯಮ್ಮ
ಮೈದಯ್ಯ ಮಾವದೀರು ನಗುತಾರೆ

ಮೇಲಿನ ಪಾಠಭೇದಕ್ಕಿಂತ ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಅಂಶ ಈ ಕಥೆಯಲ್ಲಿ ಬರುವ "ನಿಂಗೇಗೌಡ'ನ ಪ್ರಸಂಗ. ಬಹುಶಃ ಅವಳು ಕೊಂಡವೇರದೆ ಉಳಿದರೆ ತಾನು ""ಕೂಡಾವಳಿ"ಯನ್ನು ಮಾಡಿಕೊಳ್ಳುವ ಪ್ರಲೋಭನೆಯನ್ನು ತೋರುತ್ತಾನೆ.

ಚೆನ್ನಪಟ್ಟಣದಿಂದ ಚೆನ್ನದುಂಗುರ ಬಂದೊ
ಕನ್ನೆ ಈರೋಬಿ ಹಿರಿಯೋಳೆ - ನಿಂಗನಗೌಡ
ಚೆನ್ನದುಂಗುರುವ ಕಳಿಸ್ಯಾನೆ

ಹಟ್ಟಿಕಲ್ಲಡಗಲಿ ಕೊಟ್ಟಿಗೆ ಬರಿದಾಗಲಿ
ಹಿಂಡೆಮ್ಮೆ ಸಾಲು ಅಡಗಲಿ - ನಿಂಗನಗೌಡ
ನನ ಗೋಳು ನಿಮ್ಮೆಣ್ಣಿಗೆ ಮಡಗಿರಲಿ

ಈರೋಬಿಯ ಸ್ಥಿತಿಯನ್ನು ನೆನೆದು ಬಳಗವೆಲ್ಲ ಗೋಳಿಡುವ ಹೃದಯಸ್ಪರ್ಶಿ ಸನ್ನಿವೇಶವೂ ಈ ಕೃತಿಯಲ್ಲಿ ಮುಖ್ಯವಾದುದು -

ವಾಲೆಯಿಕ್ಕುವಾಗ ತಾಯವ್ವೆ ಹೆಚ್ಚಳ
ವಾಲಿಕ್ಕಿ ಈರೋಬಿ ಮೆರೆವಾಗ - ತಾಯಮ್ಮೆ
ಕಂಡುಗ ದುಃಖ ಎರಗಾವೆ

ಕಪ್ಪನಿಕ್ಕುವಾಗ ಅವರಪ್ಪಗೆ ಹೆಚ್ಚಳ
ಕಪ್ಪಿಕ್ಕಿ ಈರೋಬಿ ಮೆರೆವಾಗ - ಅವರಪ್ಪಗೆ
ಕಂಡುಗ ದುಃಖ ಎರಗಾವೊ

ಹೀಗೆಯೇ ಬಣ್ಣವನ್ನುಡುವಾಗ ಅವರ ಅಣ್ಣನಿಗೆ, ಅಕ್ಷತೆಯನ್ನಿಡುವಾಗ ಅವರ ಅಕ್ಕನಿಗೆ ಕಂಡುಗ ದುಃಖ ಎರಗುತ್ತವೆ. ಇನ್ನು ಕೊಂಡ ಹಾಯುವ ಪರಿ -

ಕೊಂಡಕ್ಹೋಗುವಾಗ ಮತ್ತೇನು ಸುಂಗಾರ
ಈಚಲಗರಿ ನಿಂಬೆಹಣ್ಣು - ಹಿಡಕೊಂಡು
ಕೊಂಡಕ್ಹೋಗೋದೆ ಬಾಳ ಲೇಸು

ಕೊಂಡಕ್ಹೋಗುವಾಗ ಇನ್ನೇನು ಸುಂಗಾರ
ನೀಲ ಪತ್ತಲುಟ್ಟುಕೊಂಡು ನಿಲುಗನಡಿ - ಹಿಡಿಕೊಂಡು
ಅವಳು ಕೊಂಡಾಕ್ಹೋಗೋದೆ ಬಾಳ ಲೇಸು

ಬೆಳ್ಳೂರು ಸಮೀಪದ ಕರೀಜೀರಹಳ್ಳಿಯ ಒಕ್ಕಲಿಗರ ಪುಟ್ಟಮ್ಮ (೨೫ ವರ್ಷ) ಹಾಡಿದ ಒಂದು ಕಥನಗೀತೆ.

**ಪಾಠಾಂತರಗಳು ಮತ್ತು ಸಮಾನ ಆಶಯದ ಗೀತೆಗಳು**

೧) ಒಡ್ಡಿಗೆರೆ ನಾಗಮ್ಮ, ಕ.ರಾ.ಕೃ. ಹಾಡಿನಲ್ಲಿ ನಾಡ ಕತೆಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು - ೧೯೬೨, ಪು.ಸಂ.೪೪-೭೨

೨) ಈರೋಬಿ, ನಾಗೇಗೌಡ ಎಚ್.ಎಲ್.; ಸೋಬಾನೆ ಚಿಕ್ಕಮ್ಮನ ಪದಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೭೨ ಪು.ಸಂ. ೧೯೨-೧೯೮

೩) ವಡ್ಡಿಗೆರೆ ನಾಗಮ್ಮ, ಕಾಳೇಗೌಡ ನಾಗವಾರ, ಬಯಲು ಸೀಮೆಯ ಲಾವಣಿಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು - ೧೯೭೩ ಪು.ಸಂ. ೭೩-೮೮

೪) ಧೂಳು ಗವುದಾವೆ ನಾಗಮ್ಮ ದುಕ್ಕಗಳೆದ್ದಾವೆ. ಕಂಬಾಳು ಸಿದ್ದಗಂಗಯ್ಯ ಬಿ. ಮಾತಾಡು ಮಲ್ಲಿಗೆ ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೧೯೭೩ ಪು.ಸಂ. ೫೪-೬೪

೫) ಕೆಂಗಪ್ಪನ ಹಟ್ಟಿ ತಿಮ್ಮವ್ವ, ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೧೯೭೬ ಪು.ಸಂ. ೨೬೯-೨೭೪

೬) ಎತ್ತಿದೆ ನಾಗವ್ವನ ಸ್ಮರಣೆಯಾ, ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೧೯೭೬ ಪು.ಸಂ. ೨೮೪-೨೯೫

೭) ಈರೋಬಿ, ಚಂದ್ರಯ್ಯ ಬಿ.ಎನ್. ಜಾನಪದ ಕಥನ ಗೀತೆಗಳು, ಶರತ್ ಪ್ರಕಾಶನ, ಮೈಸೂರು - ೧೯೭೯ ಪು.ಸಂ. ೩೫-೪೩

೮) ಈರೋಬಿ, ಲಿಂಗಯ್ಯ. ಡಿ ಮತ್ತು ಸಂಧ್ಯಾರೆಡ್ಡಿ ಕೆ.ಆರ್. ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೯ ಪು.ಸಂ. ೨೦೩-೨೧೦

೯) ಮಹಾಸತಿ ವೀರ ತಿಮ್ಮವ್ವ, ಹನೂರು ಕೃಷ್ಣಮೂರ್ತಿ : ಕತ್ತಾಲ ದಾರಿ ದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೮೩ ಪು.ಸಂ. ೭-೩೫

೧೦) ಮಹಾಸತಿ ತಾಡಿನಾಗಮ್ಮ, ಹನೂರು ಕೃಷ್ಣಮೂರ್ತಿ ಕತ್ತಾಲ ದಾರಿ ದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೮೩ ಪು.ಸಂ. ೪೩-೭೯

೧೧) ಮಹಾಸತಿ ಕಾಟವ್ವ, ಹನೂರು ಕೃಷ್ಣಮೂರ್ತಿ ಕತ್ತಾಲ ದಾರಿ ದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೮೩ ಪು.ಸಂ. ೮೪-೯೬

೧೨) ಕೊಂಡಾಟ ಕಾಟವ್ವ ಹನೂರು ಕೃಷ್ಣಮೂರ್ತಿ ಜನಪದ ಮತ್ತು ಬುಡಕಟ್ಟು ಗೀತೆಗಳು : ಸಾಹಿತ್ಯ ಅಕಾಡೆಮಿ ಬೆಂಗಳೂರು - ೧೯೯೮ ಪು.ಸಂ. ೧೦೫-೧೧೭

---

* ಈರೋಬಿ, ಪರಮಶಿವಯ್ಯ ಜೀ.ಶಂ. ಜಾನಪದ ಖಂಡ ಕಾವ್ಯಗಳು ಶಾರದಾ ಮಂದಿರ, ಮೈಸೂರು - ೧೯೬೮ ಪು.ಸಂ.೧೩-೨೧.

# ೨. ನಾಗವ್ವ*

೧

ಕಟ್ಟೆಯ ಹಿಂದೆ ಗಕ್ಕೆನ್ನೊವೇನಮ್ಮ
ಎತ್ತಿನ ಕೊರಳಗಲ ಹುರಿಗೆಜ್ಜೆ । ನಾಗವ್ವನ
ಕೇಳಬಂದವರೆ ದಿಳ್ಳಿದೊರೆಗಳು

ಏರಿಯ ಹಿಂದೆ ಬೋರಾಡೋವೇನಮ್ಮ
ಹೋರಿಕೊರಳಗಲ ಹುರಿಗೆಜ್ಜೆ । ನಾಗವ್ವನ
ಕೇಳ ಬಂದವರೆ ದಿಳ್ಳಿ ದೊರೆಗಳು

ಉಪ್ಪರಿಗೆ ಮುಂದೆ ಹರಳು ಕೇರುವ ಹೆಣ್ಣ
ಸಿರಿವಂತರ ಮನೆಗೆ ಕೊಡಿರಯ್ಯ । ನವಿಲೂರ
ಹರಳು ಹೇರಾಡೋ ಮಗನೀಗೆ

ಮಾಳಿಗೆ ಮನೆಮುಂದೆ ಮುತ್ತು ಕೇರುವ ಹೆಣ್ಣು
ಬಿತ್ತಾರಿ ನಮಗೆ ಕೊಡಿರಯ್ಯ । ನವಿಲೂರು
ಮುತ್ತು ಹೇರಾಡೊ ಮಗನೀಗೆ

ಒಪ್ಪ ಬಂದ ತಂಗಿ ಅಟ್ಟುಣ್ಣಕ್ಹೋಗ್ಯವಳೆ
ಪಟ್ಟ ಸಾಲಾಗೆ ಅವರಣ್ಣ । ಕೂತುಗಂಡು
ಕುಟ್ಟುಣ್ಣೊ ತಂಗಿ ನಾವು ಕೊಡಲಾರೊ

ಚಿಕ್ಕದು ನಮ್ಮ ಹೆಣ್ಣು ಸೀರೆ ಉಡಲರಿಯದು
ಬಟ್ಟಲು ಬೆಳಗೋದ ಕಲಿಯದು । ನವಿಲೂರ
ಗೌಡರಿಗೆ ಹೆಣ್ಣು ನಾವು ಕೊಡಲಾರೊ

ಅರಿಯಾದು ನಮ್ಮ ಹೆಣ್ಣು ಅರಿವೆ ಉಡಲರಿಯದು
ಹರಿವಾಣ ಬೆಳಗೋದೆ ಕಲಿಯದು । ನವಿಲೂರ
ದೊರೆಗಳಿಗೆ ಹೆಣ್ಣ ನಾವು ಕೊಡಲಾರೊ

೨

ಹಟ್ಟಿಗೆ ಬಳೆಬಂದೊ ತೊಟ್ಟುಕೊಳ್ಳೆ ನಾಗವ್ವ
ಬಟ್ಟುಳದಾಗ್ಹೊನ್ನ ಅಳಕೊಳೆ । ನವಿಲೂರ
ಬಟ್ಟುಮುತ್ತಿನಂಥ ಬಳೆಯ ತೊಡುಬಾರೆ

ಬೀದಿಗೆ ಬಳೆಬಂದೊ ತೊಟ್ಟುಕೊಳ್ಳೆ ನಾಗವ್ವ
ತಂಬಿಗೇಲ್ಹೊನ್ನ ಅಳಕೊಡೆ | ನವಿಲೂರ
ಬಟ್ಟುಮುತ್ತಿನಂಥ ಬಳೆಯ ತೊಡಬಾರೆ

ಬಳೆಯ ತೊಡುವಾಗ ಬಲಗಡೆ ಸೀತವರ‍್ಯಾರೆ
ಬಳೆಗಾರ ಶೆಟ್ಟಿ ಬಿಡುಕೈಯ | ನಾಗವ್ವನ
ಅರಬಳೆಗೆ ಲಗುನ ಒದಗ್ಯವೆ

ಬಳೆಯ ತೊಡುವಾಗ ಬೆಕ್ಕೆರಡು ಸೀತಾವು
ಬಳೆಗಾರ ಶೆಟ್ಟಿ ಬಿಡುಕೈಯ | ನಾಗವ್ವನ
ಅರಬಳಿಗೆ ಲಗುನ ಒದಗ್ಯಾವು

ಶೆಟ್ಟಿ ಮೊಲ್ಲೆಗೆರೆಯ ಬಟ್ಟಬಂಡೆಯ ಮೇಲೆ
ಆರುಖಂಡುಗ ಬತ್ತ ಡರಡವೆ | ನಾಗವ್ವಗೆ
ನಿಸ್ಪೇಗೆ ಲಗುನ ಒದಗ್ಯಾವೆ

ರಾಯಮೊಲ್ಲೆ ಗೆರೆಯ ಬೋರೆಂಬರೆಯ ಮೇಲೆ
ಹತ್ತು ಖಂಡುಗ ಬತ್ತ ಹರಡ್ಯವೆ | ನಾಗವ್ವಗೆ
ನಾರಿಗೆ ಲಗುನ ಒದಗ್ಯವೆ

ಕಂಚಿನ ಬಟ್ಟಲಿಗೆ ಮಿಂಚೆಣ್ಣೆ ಹುಯ್ಕೊಂಡು
ಕೆಂಚ ಚೆಂದಯ್ಗೆ ಉಗುರೆಣ್ಣೆ | ಆಗುವಾಗ
ತಂಗೆ ಚೆಲುವಮ್ಮ ಸುಳಿದಳು

ತಂಗೆ ಚೆಲುವಮ್ಮ ಸುಳಿದು ಏನಂದಳು
ಬೇಡಾರು ನಮ್ಮಾಡ ಹೊಡೆದಾರು

ಎದ್ದನೆ ಚೆಂದಯ್ಯ ಬೆದರಿ ಬಿದ್ದೋನಂಗೆ
ಗೆಜ್ಜೆಯ ಬಿಲ್ಲ ಹಿಡಕೊಂಡು | ಮೂಡಲಗಿರಿಗೆ
ಹೋದಾನೊ ಸೀಗೆ ಮೆಳೆದಾಟಿ

ಕಟ್ಟಿದ ಕಂಕಣ ಇಕ್ಕಿದ ಸೆರಗೆಣ್ಣೆ
ಅಪರಂಜಿ ಬಿಲ್ಲು ಬಲಗೈಲಿ | ಹಿಡಕೊಂಡು
ಸೀಗೆಯ ದಾಟಿ ನಡೆದನು - ಚೆಂದಯ್ಯ
ಬೇಡರ ದಂಡನೆಲ್ಲ ಕಡಿದಾನೆ

ತುರುಕರ ಭಾಷೇಲಿ ದನಿಯೆತ್ತಿ ಕರೆದನು
ತುರುಮಂದಿಗಾರ ನಿಲುಗಾರ । ಚೆಂದಯ್ಯ
ಆಡಾಡನೆಲ್ಲ ಕರೆದನು

ಬೇಡರ ದಂಡೆಲ್ಲ ಒಬ್ಬನೆ ಕಡಿದನು
ನೀರ ತತ್ತಾ ಹೋಗೆ ಕಿರುದಂಗೆ

ಗೊಲ್ಲರ ಭಾಷೇಲಿ ಕೊರಳಿಡಿದಾಡ ಕರೆದು
ಬೇಲಿಯ ಒಳಗೆ ನಿಲಗರೆದು । ಎಣಿಸ್ಯಾನೆ
ಕುಂಟಾಡಿನ ಮರಿಯ ಸುಳುವಿಲ್ಲ

ಹೋಗೋದು ಹೊರ ಊರು ಬರುವೋದು ಬೇರೆ ಊರು
ನಾಗಸಂಪಿಗೆ ನಡುವೇಲಿ ಬರುವಾಗ
ಆಡಿನಣ್ಣಯ್ಗೆ ತಲೆನೋವು

ಮುಂಗೋಳಿ ಕೂಗಿತು ಮೂಡು ಕೆಂಪೇರಿತು
ಸೀಗೆಯ ಮೆಳೆಯಲ್ಲಿ ಮಲಗವನೆ । ಚೆಂದಯ್ಯ
ಹಾಳು ಬೇಡರು ಅವನ ಕಡಿದರು

೪

ಬಾಳೆಯ ಗಿಡದಡಿ ಬಾಲಾಗೆ ಗುಂಡಿತೆಗೆದು
ಬಾಳಗೇಡಿ ನಾಗವ್ವನ ಬಳಗವೆ । ಬಂದಳುವಾಗ
ಬಾಳೆ ಚಪ್ಪರವೆ ನೆರಳಾದೊ

ಇಂಬೆಯ ಮರದಡಿ ರೆಂಬೆ ನೆಲಕುರಿದಳು
ನಾರಿ ನಾಗವ್ವನ ಬಳಗವೇ । ಬಂದಳುವಾಗ
ಇಂಬೆ ಚಪ್ಪರವೆ ನೆರಳಾದೆ

ಹಸುವಿನ ಹಾಲಕೊಡಿ ಹಸುವಿನ ಬೆಣ್ಣೆ ಕೊಡಿ
ಹಸುವಿನ ಹಾಲಕೊಡಿ । ಚೆಂದಯ್ನ
ಮದುವಾದ ಋಣಕೆ ಬಿಡುತೀನಿ

ಕಿಚ್ಚಿಗೆ ಸೌದೆ ಹೊರುವ ಎತ್ತಿನ ಚೆಂದನೋಡಿ
ಕತ್ತಿಗೆ ಚೆಲ್ಲವೆ ಹುರಿಗೆಜ್ಜೆ । ಹೂಮಾಲೆ
ಬಂದಾವು ನಾಗವ್ನ ಎದೆಗುಂಡು

ಕೊಂಡಾಕೆ ಸೌದೆ ಹೊರುವ ಕೋಣನ ಚೆಂದನೋಡಿ
ಕೋಡಿಗೆ ಚೆಲ್ಲವೆ ಹುರಿಗೆಜ್ಜೆ। ಹೂಮಾಲೆ
ಆದಾವು ನಾಗವ್ನ ಎದೆಗುಂಡು

ಕೊಂಡದಲ್ಲಿರುವ ಕೆಂಡದ ಚವಲೀಯ
ತಕ್ಕೊಂಡು ಬಾರ್ಹೆಣ್ಣೆ ಇದುರೀಗೆ। ನಾಗವ್ವನ
ಗಂಡನ ಮನೆಗೆ ಕಳುವೋನ

ಕಿಚ್ಚಿನಾಗಿರುವ ಕುಚ್ಚಿನ ಚವರೀಯ
ತಕ್ಕೊಂಡು ಬಾರ್ಹೆಣ್ಣೆ ಇದುರೀಗೆ। ನಾಗವ್ವನ
ಅತ್ತೆಯ ಮನೆಗೆ ಕಳುವೋನ

ಮಾವಿನ ಕೊನೆ ಬಂದು ಮೂಡ್ಲಾಗಿ ನಿಂತವೆ
ಮಾವ ನಿನ್ನೊಡಲು ಉರಿಯಾದೆ। ನೀನು ತಂದ
ಮಾಣಿಕವು ಕೊಂಡ ಹೋಗುವಾಗ

ಅತ್ತೀಯ ಕೊನೆಬಂದು ಹಟ್ಯಾಗೆ ನಿಂದಾವೆ
ಅತ್ತೆ ನಿನ್ನೊಡಲು ಉರಿಯದೇ। ನೀನು ತಂದ
ಮುತ್ತೈದೆ ಕೊಂಡ ಹೊಗುವಾಗ

ಕಿಚ್ಚಿನ ಸುತ್ತ ನುಚ್ಚಕ್ಕಿ ಹಸೆಹುಯ್ದು
ಮುತ್ತೀನ ಕಳಸ ನಡುವಿರಿಸಿ। ನಾಗವ್ವನ
ಕಿಚ್ಚಿಗೆ ಧಾರೆ ಎರೆದರು

ಕೊಂಡದಸುತ್ತ ಕೆಂಡದ ಹಸೆಹುಯ್ದು
ಬಂಗಾರದ ಕಳಸ ನಡುವಿರಿಸಿ। ನಾಗವ್ವನ
ಕೊಂಡಕೆ ಧಾರೆ ಎರೆದಾರು

ಅತ್ತಿತ್ತ ನೋಡ್ಯಾಳೆ ಹತ್ತ್ಯಾಳೆ ಸತಿ ಕಲ್ಲ
ಹತ್ತೀರ ಬರುತಾರೆ ಅವರಪ್ಪ। ತಾಯಮ್ಮ
ನೂರ ಕಟ್ಟೇನು ಇರುಮಗಳೆ

ನೀ ನೂರ ಕೊಟ್ಟರೆ ನನ್ನ ಕೊಪ್ಪಿನ ಬೆಲೆಯಿಲ್ಲ
ಅತ್ತೆಯ ಮಗನೆ ಚೆಂದಯ್ಯ (ನಾ) ಕುಟ್ಟೆ
ನಾ ಹತ್ತೋದೆ ಲೇಸು ಒಡಗಿಚ್ಚ

ಆಗೀಗ ನೋಡ್ಯಾಳೆ ಹತ್ಯಾಳೆ ಸತಿ ಕಲ್ಲ
ದೂರ ಬರುತಾಳೆ ಅವರವ್ವ । ಅಕ್ಕಯ್ಯ
ಹೊನ್ನು ಕೊಟ್ಟೇನು ಇರುಮಗಳೆ

ನೀ ಹೊನ್ನುಕೊಟ್ಟರೆ ನನ್ನ ವಾಲೆಯ ಬೆಲೆಯಿಲ್ಲ
ಮಾವನ ಮಗನೆ ಚೆಂದಯ್ಯ । (ನಾ) ಕುಟ್ಟೆ
ನಾ ಹತ್ತೋದೆ ಲೇಸು ಒಡಗಿಚ್ಚ

ಹೆಣ್ಣೀಗೆ ಮಣ್ಣುಬಿದ್ದೊ ಕಣ್ಣಿಗೆ ಸೆತ್ತೆ ಬಿದ್ದೊ
ಸಣ್ಣಸೀರೆಮ್ಯಾಲೆ ಕಿಡಿಬಿದ್ದೊ । ನಾಗವ್ವನ
ಹೆಣೆಗಂಟು ನಲುಗಿ ಉರಿದ್ಹೋದೊ

---

*     ನಾಗವ್ವ : ಪರಮಶಿವಯ್ಯ ಜೀ.ಶಂ.; ಜಾನಪದ ಖಂಡ ಕಾವ್ಯಗಳು, ಶಾರದಾ ಮಂದಿರ, ಮೈಸೂರು - ೧೯೬೮ ಪು.ಸಂ. ೨೫-೩೨.

## ೩. ಕೋಟಿಕಿಲ್ಲೆದ ಕಥಿ*

ಒಂದೇ ಒಂದು ಕಲ್ಲೀಗಿ ಹೊಂದಲದವ್ವ ಈ ಕ್ವಾಟಿ ಕೋಲೆನ್ನಕೋಲೆ
ಎಡ್ಡೇ ಎಡ್ಡು ಕಲ್ಲೀಗಿ ಏರಲದವ್ವ ಈ ಕ್ವಾಟಿ
ಮೂರೇ ಮೂರು ಕಲ್ಲೀಗಿ ಮುಗಿಯಲದವ್ವ ಈ ಕ್ವಾಟಿ
ಈ ಕ್ವಾಟಿ ಮುಗಿಯಲ್ದರ ತೋರಸಿ ನೋಡಲ ನಡದಾರೆ
ತೋರಾಸಿ ನೋಡಿದರೆ ದೀವರಿಲ್ಲ ದಿಂಡರಿಲ್ಲ
ಆದಿಮೂದೀಯ ಕೂಡಿ ಮನಿಗಾರ ಬಂದರ

ಮನಿಗಾರ ಬಂದರ ಕಟ್ಟಿಮ್ಯಾಲ ಕುಂತಾರ

ಯಾಕ್ಯಾಕ್ರಿ ಮಾವಯ್ಯ ಮಾರ್ಯಾಕ ಬಾಡ್ಯವರಿ
ಒಂದೂರ ಬಿರಾಡ ಬಂದು ಮ್ಯಾಲ ಬಿದ್ದವ್ ಸಂಗಮ್ಮ
ಕೊಳ್ಳಾಗಿನ ವಸ್ತ ಕೊಟ್ಟ ಬಿರಾಡ ಕಟ್ಟರಿ ಮಾವಯ್ಯ

ಮಾವಯ್ಯ ಮಾವಯ್ಯ ಮಾರ್ಯಾಕ ಬಾಡ್ಯವರಿ
ಎದ್ದೂರ ಬಿರಾಡ ಬಂದು ಮ್ಯಾಲ ಬಿದ್ದವು ಸಂಗಮ್ಮ
ಟೊಂಕಿನಾಗನ ಡಾಬ ಕೊಟ್ಟು ಬಿರಾಡ ಕಟ್ಟರಿ ಮಾವಯ್ಯ

ಮಾವಯ್ಯ ಮಾವಯ್ಯ ಮಾರ್‍ಯಾಕ ಬಾಡ್ಯವರಿ
ಮೂರೂರ ಬಿರಾಡ ಬಂದು ಮ್ಯಾಲ ಬಿದ್ದವು ಸಂಗಮ್ಮ
ಕೊರಳಾಗಿನ ವಸ್ತ ಕೊಟ್ಟು ಬಿರಾಡ ಕಟ್ಟರಿ ಮಾವಯ್ಯ
ಅದಗೀಯ ಮನಿಗಿ ಹೋಗಿ ಝಳಕಾರೆ ಮಾಡ್ಯಾರೆ

ದೇವಾರ ಕೊಲ್ಯಾಗ್ ಹೋಗಿ ದೇವರಿಗಿ ಶರಣೆಂದೆ
ದೇವಾರೆ ದೇವಾರೆ ನಮದು ನಿಮದು ಸರಿ ತರಿ
ತೊಟ್ಟ್ಯಾಗ ಕಂದಗ ತೊಗೊಂಡು ತೊಡಿಮ್ಯಾಲೆ ಹೈಕೊಂಡೆ
ಇವತ್ ಮಃಲಿ ಕುಃಡಸಿದಂಗೆ ನಾಳ್ಯಾರ ಕುಡಸ್ಯಾರೊ

ಈವತ್ ಕಟ್ಟಿದ ಕುಲೈ ನಾಳ್ಯಾರ ಕಟ್ಯಾರೊ
ಅಡಗೀಯ ಮನಿಗ್ಹೋಗಿ ಅತ್ಯಮ್ಮಗ ಶರಣಂದ
ಅತ್ಯಮ್ಮ ಅತ್ಯಮ್ಮ ನಮದು ನಿಮದು ಸರಿ ತರಿ
ಅತ್ಯಮ್ಮ ಅತ್ಯಮ್ಮ ಮಾಣಿಕುರಾಯಗ ಜ್ವಾಕೀನೆ
ತೊಟ್ಟ್ಯಾಗ್ಹಾಕಿ ತೂಗರಿ ಬಟ್ಟ್ಯಾಗ್ಹಾಕಿ ಉಣಸರಿ
ಕೇಳ್ಕೋತ ಕೇಳ್ಕೋತ ಹೊರಿಯಾಕ ಬಂದಾಳೆ
ಕಟ್ಟಿನ್ ಮ್ಯಾಗ ಕೂಡ್ಯಾರೆ ಪಟ್ಟನ್ ಮಾಡ ಮಾವಯ್ಯ

ಮಾವಯ್ಯ ಮಾವಯ್ಯ ಮಾಣಿಕುರಾಯರ ಜ್ವಾಕೀರಿ
ಕಡ್ಡೀ ಹೋಳಾಗಿ ಮಾಡಿ ಬಂಡಿ ಬಂಡಿ ತುಂಬ್ಯಾರೆ
ಗವಡಾರ ಸಂಗಮ್ಮ ಹೋಗವ ಕಿಂಡಿ ಕಿಂಡಿ ಮಂದೀನೆ
ಕೇಳಕೋತ ಕೇಳಕೋತ ಅಗಸೀನ್ಯಾರ ದಾಟ್ಯಾರೆ
ಗವಡಾರ ಸಂಗಮ್ಮ ಹೋಗನ ಕಿಂಡಿ ಕಿಂಡಿ ಮಂದೀನೆ

ಗೆಳದೇರೆ ಗೆಳದೇರೆ ಮಾಣಿಕುರಾಯಗ ಜ್ವಾಕೀರೆ
ತೊಟ್ಟ್ಯಾಗ್ಹಾಕಿ ತೂಗಾರಿ ಬಟ್ಟ್ಯಾಗ್ಹಾಕಿ ಉಣಸಾರಿ
ಅಲ್ಲಿಂದು ಹೋಗ್ಯಾರೆ ಕ್ವಾಟಿಕೀಲುಕ ನಿಂತಾರೆ
ಇಷ್ಟೆಲ್ಲ ಆಗಿದ್ದು ತಾಯಿ ಕನಸ ಬಿದ್ದಾವ್ರಿ
ಆತಕೋತ ಕರಕೋತ ಓಡಿ ಓಡಿ ಹೊಂಡಾರೆ

ಒಂದ ಗುಡ್ಡ ಇಳದಾಳೆ ದನಕಾಯ ಅಣದೀರೆ
ದನ ಕಾಯ ಅಣದೀರೆ ದನ ಕಾಯ ತಮದೀರೆ
ಕ್ವಾಟಿಖಿಲ್ಲೇದ ಮ್ಯಾಗ ಮಂದಿ ಯಾಕ ನೆರದಾರ
ಗವಡಾರ ಸೊಸಿ ಸಂಗಮ್ಮ ಕ್ವಾಟೀಖಿಲ್ಲೇಗ್ ಕೊಟ್ಯಾರ
ನಿಮದಃನ ಸಾಯಲಿ ನಿಮ್ಮ ಬಡಗಿ ಮುರಿಯಾಲೋ

ಎಡಗುಡ್ಡ ಸೌರ್‍ಯಾಳೆ ಕುರಿಕಾಯ ಅಣದೀರೆ
ಕುರಿಕಾಯ ಅಣದೀರೆ ಕುರಿಕಾಯ ತಮದೀರೆ
ಕ್ವಾಟೆಖಿಲ್ಯಾದಾಗ ಮಂದಿ ಯಾಕೆ ನೆರುದಾರೊ
ಗವಡಾರ ಸೊಸಿ ಸಂಗಮ್ಮ ಕ್ವಾಟಿಕಿಲ್ಯಾಗ್ ಕೊಟ್ಯಾರ
ನಿಮಕುರಿ ಸಾಯಲಿ ನಿಮ ಬಡಗಿ ಮುರಿಯಲೊ
ಬಿರಿಬೀರಿ ಹೋಗ್ಯಾಳೆ ಕ್ವಾಟೆಖಿಲ್ಯಕ ಮುಟ್ಯಾಳೆ

ಹಡದವ್ವ ಹಡದವ್ವ ಮಾಣಿಕುರಾಯಗ ಜ್ವಾಕೀನೆ
ಮಗಳೀಗಿ ಬಿಡರಪ್ಪ ನನ್ನಗಾರರ್‍ವಾಕಾರೊ
ಹಣಿಬಾರ್‍ಕ ಬಂದಿಂದು ತಪ್ಪಲದ್ಹೋಗ ಹಡದಮ್ಮ
ಹಡದಮ್ಮ ಹಡದಮ್ಮ ಮಾಣಿಕುರಾಯಗ ಜ್ವಾಕೀರೆ
ತೊಟ್ಯಾಗ್ವಾಕಿ ತೂಗಾರಿ ಬಟ್ಯಾಗ್ವಾಕಿ ಉಣಸಾರಿ
ಖಿಲ್ಲೆದಾಗ ಹಾಕ್ಯರೆ ಮಣ್ಣಾರ ಎಳದಾರೆ

ಒಂದೇ ಒಂದು ಕಲ್ಲೀಗಿ ಹೊಂದೀತವ್ವ ಆ ಕ್ವಾಟಿ
ಎಡ್ಡೇ ಎಡ್ಡು ಕಲ್ಲೀಗಿ ಏರಿತವ್ವ ಆ ಕ್ವಾಟಿ
ಮಾರೇ ಮೂರು ಕಲ್ಲೀಗಿ ಮುಗದೀತವ್ವ ಆ ಕ್ವಾಟಿ

**ಪಾಠಾಂತರಗಳು ಮತ್ತು ಸಮಾನ ಆಶಯದ ಗೀತೆಗಳು**

೧) ಧರಣೆಯಮ್ಮನ ಬಲಿದಾನ; ಹನೂರು ಕೃಷ್ಣಮೂರ್ತಿ, ಕತ್ತಾಲು ದಾರಿ ದೂರ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೩, ಪು.ಸಂ. ೧೫೯-೧೮೯.

೨) ರಾಚೂರು ಕೋಟೆಗೆ ಹಾರ; ಕೃಷ್ಣಯ್ಯ, ಎಸ್.ಎ.; ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪೂರದ ಜನಪದ ಗೀತೆಗಳು, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ, ೧೯೯೨ ಪು.ಸಂ. ೧೫೬-೧೬೦.

೩) ಕ್ವಾಟೀಯ ಏರ್‍ಯಾಳ ಕೊಲ್ಲಂತ ಕೂಗ್ಯಾಳ; ನಾಗೇಗೌಡ ಎಚ್.ಎಲ್.. ದುಂಡುಮಲ್ಲಿಗಿ ಹೂವ ಬುಟ್ಟಿಲಿ ಬಂದಾವ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು ೧೯೯೫, ಪು.ಸಂ. ೧೫೨-೧೫೩.

೪) ಸಂಗಮ್ಮನ ಹಾಡು; ಹೆಬ್ಬಾಳೆ ಜಗನ್ನಾಥ, ಬುಲಾಯಿ ಹಾಡುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೭ ಪು.ಸಂ. ೬೬-೬೯.

೫) ಮಲರೆಡ್ಡಿ ಸಾಹುಕಾರನ ಹಾಡು; ಹೆಬ್ಬಾಳೆ ಜಗನ್ನಾಥ; ಬುಲಾಯಿ ಹಾಡುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೯೭, ಪು.ಸಂ. ೫೮-೬೧.

೬) ತಾಳಿಕೋಟೆ ಕಿಲ್ಲಾದ ಹಾಡು; ನಾಯಕ ಡಿ.ಬಿ. ಬುಲಾಯಿ ಹಾಡುಗಳು, ಬಂಜಾರು ಪ್ರಕಾಶನ ಗುಲ್ಬರ್ಗಾ ೨೦೦೧, ಪು.ಸಂ. ೮೦-೮೪

---

* ಕೋಟಿ ಕಿಲ್ಲೆದ ಕಥಿ, ರಾಮಣ್ಣ ಕ್ಯಾತನಹಳ್ಳಿ, ಬೀದರ ಜಿಲ್ಲೆಯ ಜನಪದ ಗೀತೆಗಳು; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೬ ಪು.ಸಂ. ೧೫೭-೧೬೦

# ೪. ಕೆರೆಗೆ ಹಾರ*

೧

ಕಲ್ಲನಕೇರಿ ಮಲ್ಲನಗೌಡಾ ಕೆರೆಯೊಂದ ಕಟ್ಟಿಸ್ಯಾನು*
ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗಿ ತಗಸ್ಯಾರು
ಹೊತ್ತಿಗೆ ತಗಸ್ಯಾರು ಜೋಯಿಸ ಕೇಳ್ಯಾರು
“”ದೇವರಿಲ್ಲ ದಿಂಡ್ರಿಲ್ಲ ದೆವ್ವಲ್ಲ ಭೂತಲ್ಲ
ಹಿರಿಸೊಸೆ ಮಲ್ಲವನ ಹಾರವ ಕೊಡಬೇಕು
ಹಾವರ ಕೊಟ್ಟರೆ ನೀರು ಬೀಳೂವಂ” ದ್ರೂ
“”ಹಿರಿಸೊಸಿನ್ನ ಕೊಟ್ಟರೆ ಹಿರಿತನಕ ಯಾರಿಲ್ಲ
ಕಡೆ ಸೊಸಿ ಭಾಗೀರತಿನ್ನ ಹಾರವ ಕೊಡಬೇಕು”
ಹಾರ ಕೊಡಬೇಕೆಂತ ಮಾತಾತು ಮನೆಯಾಗ
ಸಣ್ಣ ಸೊಸಿ ಭಾಗೀರತಿ ತವರುಮನೆಗೆ ಹೊಂಟಾಳು
“”ಅತ್ತೆವ್ವಾ ನಮ್ಮ ತವರುಮನೆಗೆ ಹೋಗಲೇನು!”
“”ಸರ್‍ರನೆ ಹೋಗವ್ವಾ ಭರ್‍ರನೆ ಬಾರವ್ವಾ”
ಸಣ್ಣ ಸೊಸಿ ಭಾಗೀರತಿ ತವರುಮನೆಗೆ ಹೋದಾಳು
ಮನೆ ಮಂದ ಹೋಗುದಕ ಅವರಪ್ಪ ಬಂದಾನು
“”ಎಂದಿಲ್ಲದ ಭಾಗೀರತಿ ಇಂದ್ಯಾಕ ಬಂದೆವ್ವ ?
ಬಾಡಿದ ಮಾರ್‍ಯಾಕ ಕಣ್ಣಾಗ ನೀರ್‍ಯಾಕ ?”
“”ನಮ್ಮಾವ ನಮ್ಮತ್ತೆ ಬ್ಯಾರೆ ಇಡುತಾರಂತೆ”
“”ಇಟ್ಟರೆ ಇಡಲೇಳು ಹೊಲಮನಿ ಕೊಡತೇನು”
“”ಹೊಲಮನಿ ಒಯ್ದು ಹೊಳಿ ದಂಡ್ಯಾಗ್ಯಾಕಪ್ಪ”
ಅತತ್ತ ಹೋಗುತಲಿ ಅವರವ್ವ ಬಂದಾಳು
“”ಎಂದಿಲ್ಲದೆ ಭಾಗೀರತಿ ಇಂದ್ಯಾಕಳುತಾ ಬಂದೆ?”
“”ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ”
“”ಇಟ್ಟರೆ ಇಡಲೇಳು ವಾಲಿಜೋಡು ಕೊಡುತೇನೆ”
“”ವಾಲಿಯ ಜೋಡುಯ್ದು ಒಲಿಯಾಗ ಹಾಕವ್ವ”
ಮುಂದಕತ್ತ ಹೋಗುತಲೆ ಅವರಕ್ಕ ಬಂದಳು
ಅವರಕ್ಕ ಬಂದಾಲು ಭಾಗೀರತಿನ್ನ ಕೇಳ್ಯಾಳು
“”ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ದುಕ್ಕ ?”
“”ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ”
“”ಇಟ್ಟರೆ ಇಡಲೇಳ ಮಕ್ಕಳ ಜೋಡಿಗೆ ಕಳವತೇನೆ”
“”ಮಕ್ಕಳಿಲ್ಲದ್ದರೇನಕ್ಕ ದುಕ್ಕ ಕಳದಾವೇನ?”
“”ಸಣ್ಣ ಸೊಸಿ ಭಾಗೀರತಿ ತವರುಮನೆಯ ಬಿಟ್ಟು

ತವರ ಮನೆಯ ಬಿಟ್ಟು ಗಣತಿ ಮನೆಗೆ ನಡೆದಳು
ತಲಬಾಗಿಲದಾಗ ಗೆಳತಿನ್ನ ಕಂಡಳು
“”ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ಅಳುವು?”
ಅಂಜಿ “”ಹೇಳಲಿ ಗೆಳತಿ” ಅಳುಕಿ “”ಹೇಳಲಿ ಗೆಳತಿ?”
“”ಅಂಜಬ್ಯಾಡ ಗೆಳತಿ ಅಳುಕಬ್ಯಾಡ ಗೆಳತಿ”
“”ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತೆ”
“”ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕ!”
ಸರ್‍ರನೆ ಹೋದಳು ಭರ್‍ರನೆ ಬಂದಳು.

೨

ಬ್ಯಾಳೀಯ ಹಸ್ತಮಾಡ್ತ ಬಿಟ್ಯಳು ಕಣ್ಣೀರ
“”ಎಂದಿಲ್ಲದ ಭಾಗೀರತಿ ಇಂದ್ಯಾಕ ಕಣ್ಣೀರು ?”
“”ಬ್ಯಾಳಾಗಿನ ಹಳ್ಳು ಬಂದು ಕಣ್ಣಾಗೆರಚಿದವು ಮಾವಾ”
ಅಕ್ಕಿಯ ಹಸಮಾಡ್ತ ಉಕ್ಕಾವು ಕಣ್ಣೀರು
“”ಅಕ್ಕಾಗಿನ ಹಳ್ಳೊಂದ ಕಣ್ಣಾಗ ಬಿತ್ತತ್ತಿ”
ಉಕ್ಕುವ ನೀರಾಗ ಅಕ್ಕಿಯ ಸುರುವ್ಯಾರ
ಸಕ್ಕರಿ ಹಾಲಾಗ ಶ್ಯಾವಿಗಿ ಸುರಿವ್ಯಾರ
ಹತ್ತು ಕೊಪ್ಪರಿಗೆ ನೀರು ಉಕ್ಕಿ ಮಳ್ಳತಿತ್ತು
“”ನಿಂಗವ್ವ ಜಳಕ ಮಾಡ ನೀಲವ್ವ ಜಳಕ ಮಾಡ”
ನಿಂಗವ್ವ “”ನಾವೊಲ್ಲೆ” ನೀಲವ್ವ “”ನಾವೊಲ್ಲೆ”
“”ಸಣ್ಣ ಸೊಸಿ ಬಾಗವ್ವ ನೀನರೆ ಜಳಕೆ ಮಾಡ”
“”ಸಣ್ಣ ಸೊಸಿ ಭಾಗೀರತಿ ಜಳಕವ ಮಾಡ್ಯಾಳು
ಜಳಕವ ಮಾಡ್ಯಾಳು ಬಂಗಾರಬುಟ್ಟಿ ತುಂಬ್ಯಾಳು
ಬಂಗಾರಬುಟ್ಟಿ ತುಂಬ್ಯಾಳು ಸಿಂಗಾರಸಿಂಬಿ ಮಾಡ್ಯಾಳು
ಸಿಂಗಾರಸಿಂಬಿ ಮಾಡ್ಯಾಳು ಮುಂದಮುಂದ ಹೊಂಟಾಳು
ಮುಂದಮುಂದ ಭಾಗೀರತಿ ಹಿಂದಿಂದ ಎಲ್ಲಾರೂ
ಗಂಗಿಪೂಜೆ ಮಾಡ್ಯಾರ ಬೆಲಪತ್ರಿ ಏರಿಸ್ಯಾರ
ಬೆಲಪತ್ತಿ ಏರಿಸ್ಯಾರ ಈಬತ್ತಿ ಧರಿಸ್ಯಾರ
ಸೀರಿಕುಬಸಾ ಏರಿಸ್ಯಾರ ಹೂವಿನ ದಂಡಿ ಮುಡಿಸ್ಯಾರ
ಹೂವಿನ ದಂಡಿ ಮುಡಿಸ್ಯಾರ ನೇವದಿ ಮಾಡ್ಯಾರ
ನೇವದಿ ಮಾಡ್ಯಾರು ಎಲ್ಲರು ಉಂಡಾರು
ಎಲ್ಲರು ಉಂಡಾರು ಉಳಿದದ್ದು ತುಂಬ್ಯಾರು
ಉಳಿದದ್ದು ತುಂಬ್ಯಾರು ಬಂಗಾರಬುಟ್ಟಿ ಹೊತ್ತಾರು
ಬುಟ್ಟಿಹೊತ್ತು ನಡೆದಾರು ಬಂಗಾರ ಬಟ್ಲ ಮರತರು
“”ಗಂಗವ್ವ ನೀ ಹೋಗ ! ಗವರವ್ವ ನೀ ಹೋಗ !”

ಗಂಗವ್ವ “"ನಾವೊಲ್ಲೆ” ಗವರವ್ವ “"ನಾವೊಲ್ಲೆ”
“"ನಿಂಗವ್ವ ನೀ ಹೋಗ” ನೀಲವ್ವ ನೀ ಹೋಗ”
ನಿಂಗವ್ವ “"ನಾವೊಲ್ಲೆ” ನೀಲವ್ವ “"ನಾವೊಲ್ಲೆ”
“"ಸಣ್ಣ ಸೊಸಿ ಭಾಗೀರಥಿ ಬಿರಿಬಿರಿ ನಡೆದಾಳು
ಬಿರಿಬಿರಿ ಹೋದಳು ಬಂಗಾರ ಬಟ್ಲ ತೊಗೊಂಡಳು
ಒಂದು ಮೆಟ್ಲೇರುದಕ ಪಾದಕ ಬಂದಳು ಗಂಗಿ
ಎರಡು ಮಟ್ಲೇರುದಕ ಪಾದ ಮಣಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಳು ಗಂಗಿ
ನಾಕು ಮೆಟ್ಲೇರುದಕ ನಡುಮಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರೆಗ್ಹಾರವಾದಳು.

೩

ಗಂಡ ಮಾದೇವರಾಯ ದಂಡಿನಾಗ್ಯೆದಾನು
ದಂಡಿನಾಗ್ಯೆದಾನು ಕಂಡನು ಕೆಟ್ಟ ಕನಸ
ಸೆಲ್ಯೆ ಸುಟ್ಟಂಗಾತು ಕೋಲು ಮುರಿದ್ಹಾಂಗಾತು
ಕಟ್ಟಿಸಿದ ಮಾಲೆಲ್ಲ ತಟ್ಟನೆ ಬಿದ್ದಂಗಾತು
ಗಂಡು ಮಾದೇವರಾಯ ಹತ್ತಿದ ಬತ್ತಲಿಗುದುರಿ
ಹತ್ತಿದ ಬತ್ತಲಿಗುದರಿ ಒತ್ತಾರ ಬಂದಾನ ಮನೆಗೆ
ಬಂದ ಬತ್ತಲಿಗುದರಿ ಒತ್ತಾರ ಬಂದಾನ ಮನೆಗೆ
ಬಂದ ಮಾದೇವನ ತಂದೆ ತಾಯಿ ನೋಡಿದರು
“ಗಂಗವ್ವ ನೀರ ಕೊಡ ಗವರವ್ವ ನೀರ ಕೊಡ”
“ಗಂಗವ್ವ ನೀರ ಕೊಡುದ್ಯಾಕ ಗವರವ್ವ ನೀರ ಕೊಡುದ್ಯಾಕ?
ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳವ್ವ ?”
“ನಿನ ಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ”

೪

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ
ಹತ್ತಿದ ಬತ್ತಲೆಗುದುರಿ ಹೊಂಟಾನತ್ತೆಯ ಮನೆಗೆ
ಬಂದಿರು ಅಳಿಯನ ನೋಡಿ ಅಂದಳ ಅತ್ತೆವ್ವಾ
“ನಿಂಬೆವ್ವ ನೀರ್ ಕೊಡ ನೀಲವ್ವ ನೀರ್ ಕೊಡ”
“ನಿಂಬೆವ್ವ ನೀರ್ ಕೊಡುದ್ಯಾಕ ನೀಲವ್ವ ನೀರ್ ಕೊಡುದ್ಯಾಕ ?
ನನ ಮಡದಿ ಭಾಗೀರತಿ ಎಲ್ಲಿಗೋಗ್ಯಾಳತ್ತಿ ?”
“ನಿನ ಮಡದಿ ಭಾಗೀರಥಿ ಗೆಣತಿ ಮನೆಗೆ ಹೋಗ್ಯಾಳಪ್ಪ !”

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಗೆಣತಿ ಮನೆಗೆ ಸ್ವಾರಿ
ಬಂದಿರು ಮಾದೇವನ ಕಂಡಾಳು ಗೆಳೆತವ್ವಾ
"ಬಾಳವ್ವ ನೀರ್ ಕೂಡ ಬಸವ್ವ ನೀರ್ ಕೊಡ"
"ಬಾಳೆವ್ವ ನೀರ್ ಕೊಡುದ್ಯಾಕ ಬಸವ್ವ ನೀರು ಕೊಡುದ್ಯಾಕ ?"
ನನ ಮಡದಿ ಭಾಗೀರಥಿ ಎಲ್ಲಿಗೋಗ್ಯಾಳಕ್ಕ ?"
"ನಿನ್ನ ಮಡದಿ ಭಾಗೀರತಿದು ಏನು ಹೇಳಲಿ ಸೂರಿ
ನಿಮ್ಮಪ್ಪ ನಿಮ್ಮವ್ವ ಕೆರೆಗಾರ ಕೊಟ್ಟರಂತ"
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನು ಹೌಹಾರಿ :
ಕೆರೆಯ ಕಡೆಗೆ ಬಂದು ಕಣ್ಣೀರು ಇಟ್ಟಾನು
ಕಣ್ಣೀರು ಇಟ್ಟಾನು ನಿಟ್ಟುಸಿರು ಬಿಟ್ಟಾನು
"ಸಾವಿರ ವರಹ ಕೊಟ್ಟರು ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೋದೆ ?
ಮುನ್ನೂರ ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟ್ಟುಗೊಳ್ಳೊಮುತ್ತೈದೆ ಎಲ್ಲಿಗೋದೆ ?
ಇಷ್ಟು ಮಾತಾಡಿ ಮಾದೇ ಬಿಟ್ಟಾನು ಕಣ್ಣೀರು
ಬಿಟ್ಟಾನು ಕಣ್ಣೀರು ಹಾರೀದ ಕೆರೆ ನೀರಾಗ.

*** ಪ್ರತಿಪಾದದ ಕೊನೆಗೂ "ಕೋಲೆನ್ನ ಕೋಲ' ಎನ್ನಬೇಕು**

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ವಡ್ಡರಬೋಯಿ; ಕ.ರಾ.ಕೃ. ಜಾನಪದ ಕಥನ ಗೀತೆಗಳು, ಜನಪದ ಸಾಹಿತ್ಯ ಅಕಾಡೆಮಿ ಮೈಸೂರು ೧೯೫೯ ಪು.ಸಂ. ೧೬೦-೧೭೨.

೨) ಹುಳಿಯಾರು ಕೆಂಚಮ್ಮ; ಪರಮಶಿವಯ್ಯ, ಜೀ.ಶಂ. ಜಾನಪದ ಖಂಡ ಕಾವ್ಯಗಳು; ಶಾರದಾ ಮಂದಿರ ಮೈಸೂರು, ೧೯೬೮, ಪು.ಸಂ. ೩೫-೪೬.

೩) ಹೊನ್ನಮ್ಮ; ಪರಮಶಿವಯ್ಯ ಜೀ.ಶಂ. ಜಾನಪದ ಖಂಡಕಾವ್ಯಗಳು, ಶಾರದಾ ಮಂದಿರ ಮೈಸೂರು ೧೯೬೮ ಪು.ಸಂ. ೪೭-೫೮.

೪) ಬಾವಿ ನೀರಿಗಾಗಿ ಸೊಸೆಯ ಬಲಿ; ಹೆಗಡೆ, ಎಲ್.ಆರ್. ತಿಮ್ಮಕ್ಕನ ಪದಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೬೯ ಪು.ಸಂ. ೧೧೪-೧೨೩.

೫) ಮದಗದ ಹೊನ್ನಮ್ಮ; ಕಂಬಾಳು ಸಿದ್ಧಗಂಗಯ್ಯ ಬಿ. ಮಾತಾಡು ಮಲ್ಲಿಗೆ ೧೯೭೩ ಪು.ಸಂ. ೭೬-೭೯.

೬) ಕೆರೆ ಹೊನ್ನಮ್ಮ; ರಾಜಪ್ಪ ಟಿ.ಎಸ್. ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೪ ಪು.ಸಂ. ೩-೧೧.

೭) ಕೆರೆ ಪೂಜೆ; ಹಿರಿಯಣ್ಣ ಅಂಬಳಿಕೆ, ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೬.

೮) ಹೊನ್ನಿ ಹಾಡು; ಹಿರಿಯಣ್ಣ ಅಂಬಳಿಕೆ, ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೭೬ ಪು.ಸಂ. ೯೪-೯೮.

೯) ಹೊನ್ನಮ್ಮ-ಹೊಳಲವ್ವ; ರಾಮಸ್ವಾಮಿ ಎಸ್. ಮತ್ತು ನಟರಾಜ್ ಎಂ.ಬಿ. ಹಾಡಾಕೆ ಬೈಗುಂಟೆ. ಬೆಳಗುಂಟೆ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೭೭ ಪು.ಸಂ. ೭೪-೭೭.

೧೦) ಪತಿವರತಿ; ರಾಮಸ್ವಾಮಿ ಎಸ್. ಮತ್ತು ನಟರಾಜ್ ಎಂ.ಬಿ. ಹಾಡಾಕೆ ಬೈಗುಂಟೆ ಬೆಳಗುಂಟೆ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೭, ಪು.ಸಂ. ೧೩-೧೫.

೧೧) ಮದಗದ ಕೆಂಚವ್ವ; ರಾಮಸ್ವಾಮಿ ಎಸ್. ಮತ್ತು ನಟರಾಜ್ ಎಂ.ಬಿ. ಹಾಡಾಕೆ ಬೈಗುಂಟೆ ಬೆಳಗುಂಟೆ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೭ ಪು.ಸಂ. ೬೩-೬೮.

೧೨) ಏನ್ನಲಾದೇವಿ; ಕಂಬಾರ ಚಂದ್ರಶೇಖರ ಮತ್ತು ಬರಗೂರು ಜಯಪ್ರಕಾಶ್, ಮುತ್ತು ಮುತ್ತಿನ ಸ್ವಾತಿ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೧೯೮೧. ಪು.ಸಂ. ೯೭-೧೦೫.

೧೩) ಮಡಗದ ಕೆಂಚವ್ವ; ಹನೂರು ಕೃಷ್ಣಮೂರ್ತಿ ಕತ್ತಾಲ ದಾರಿ ದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೩, ಪು.ಸಂ. ೧೦೭-೧೫೮.

೧೪) ಹೊಸಕೆರೆ; ನಳಿನಿ ಎಂ.ಬಿ. ಕಾಡುಮಲ್ಲಿಗೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨, ಪು.ಸಂ. ೫೯-೬೦.

೧೫) ಹೊನ್ನಮ್ಮನ ಕಥೆ; ಪಾಂಡುರಂಗ. ಡಿ.ಆರ್. ದಕ್ಷಿಣ ಕನ್ನಡ ಜಿಲ್ಲೆಯ ಭೈರರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೪, ಪು.ಸಂ. ೧೮೮-೧೯೪.

೧೬) ಮದಗದ ಕೆಂಚಮ್ಮ ಬಳ್ಳೆಕೆರೆ ಹನುಮಂತಪ್ಪ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೪.

೧೭) ಕೆಂಚಮ್ಮ; ಜಯಲಕ್ಷ್ಮಿ ಸೀತಾಪೂರ, ನಮ್ಮ ಸುತ್ತಿನ ಜನಪದ ಕಥನಗೀತೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೪, ಪು.ಸಂ. ೧೮-೩೮.

೧೮) ನೀಲಮ್ಮ; ಜಯಲಕ್ಷ್ಮಿ ಸೀತಾಪೂರ, ನಮ್ಮ ಸುತ್ತಿನ ಜನಪದ ಕಥನ ಗೀತೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೪, ಪು.ಸಂ. ೬೨-೬೮.

೧೯) ಕೆರೆಗೆ ಹಾರ; ನಾಗೇಗೌಡ ಎಚ್.ಎಲ್. ದುಂಡಮಲ್ಲಿಗಿ ಹೂವು ಬುಟ್ಟಿಲಿ ಬಂದಾವ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು ೧೯೯೫, ಪು.ಸಂ. ೧೩೭-೧೪೧.

೨೦) ಭಾಗೀರಥಿ; ನಾಯಕ ಎಸ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭, ಪು.ಸಂ. ೧೩೩-೧೪೧.

೨೧) ಹೊನ್ನಮ್ಮ ಹರುದೇವಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭ ಪು.ಸಂ. ೧೪೨-೧೫೪.

೨೨) ನಾಮಧಾರ ಹೊನ್ನಮ್ಮ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ೧೯೭೭ ಪು.ಸಂ. ೧೨೪-೧೩೨.

೨೩) ವಿಷ್ಣಮ್ಮ; ಭಾನುಮತಿ ವೈ.ಸಿ. ಪುಟ್ಟಮಲ್ಲಿಗೆ ಹಿಡಿತುಂಬ, ತಾರಾ ಪ್ರಿಂಟಿಂಗ್ ಪ್ರೆಸ್, ಮೈಸೂರು, ೨೦೦೧, ಪು.ಸಂ. ೧೦೨-೧೩೭.

೨೪) ದ.ಕ.ಜಿ. ರತನೀ ದೊನ್ನಮ್ಮ; ಹೆಗಡೆ, ಎಲ್.ಆರ್. ಮಾಚಿಯ ಕಥನಗೀತೆಗಳು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೨ ಪು.ಸಂ. ೫೪-೬೧.

೨೫) ಅಣಜಿ ಹೊನ್ನಮ್ಮ; ಕ.ರಾ.ಕೃ. ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೬೪.

೨೬) ಕೆರೆ ಹೊನ್ನಮ್ಮ ಕಾವ್ಯ; ಸಿ.ಟಿ. ಗುರುಪ್ರಸಾದ ಬ್ಯಾಲದಕೆರೆ ಪ್ರಕಾಶನ, ಬ್ಯಾಲದಕೆರೆ ೨೦೦೩.

---

* ಕೆರೆಗೆ ಹಾರ, ಖಂಡೋಬಾ ಪಿ.ಕೆ. ಜನಪದ ಕಥನ ಗೀತೆಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು - ೧೯೭೯ ಪು.ಸಂ. ೬-೧೧

## ೫. ನಿಗಳ್ ಬಲಿ*

ಒಬ್ಬಾಳೆ ತಾಯೀಗೂ ರಾಮ ರಾಮಾ
ಏಳು ಮಂದಿ ಗಂಡ್ಗಾಳೂ ರಾಮಾ ರಾಮಾ**
ಹೊತ್ತಾರೆ ಮುಂದೆ ಎದ್ದಾರೀಗ
ಅಣ್ಣಾ ತಮ್ಮಾ ಇಬ್ಬಾರೀಗ
ಹೋರಿಗ್ ಅಕ್ಕಚ್ಚ್ ಬಾಯೀರ್ ಹಾಕಿದಾರೀಗ
ಹೋರಿ ಹೆರ್‌ಗೇ ಬಿಟ್ಟಾರೀಗ
ಏಳು ಮಂದೀ ಲಣ್ಣಾ ತಮ್ಮಾ
ಮಲ್ ಗದ್ದೀಗ್ ಹೂಡೀದಾರೂ

ಮನೀ ಹತ್ರ ಮಲ್ ಗದ್ದೆ
ಹೂಡಾನಾರೂ ಕಟ್ಟೀರೀಗ

ಅಣ್ಣಾ ತಮ್ಮಾ ಏಳು ಜನಾ
ಮಳೀನಾರೂ ಹಿಡಿದಾರೀಗ
ಒಂದು ಸುತ್ತಾ ಹೊಡಿದಾರೀಗ
ಸುಡೂ ಧೂಳೇ ಎದ್ದೀತೀಗ
ಮತ್ತೊಂದೇ ಸುತ್ತಾ ಹೊಡಿದಾರೀಗ
ಕೆಮ್ಮಣ್ಣೇ ಎದ್ದಾವೀಗ
ಮತ್ತೊಂದೇ ಸುತ್ತಾ ಹೊಡಿದಾರೀಗ
ಕಡ್ ಮಣ್ಣೆ ಎದ್ದಾವೀಗ
ಇನ್ನೊಂದೇ ಸುತ್ತಾ ಬಂದಾವೀಗ
ನೇಲಾನೆ ಮುರಿದಾವೀಗ
ಮತ್ತೊಂದೇ ಸುತ್ತಾ ಬಂದಾವೀಗ
ನೊಗನಾರೂ ಮುರಿದಾವೀಗ
ಇನ್ನೊಂದು ಸುತ್ತಾ ಬಂದಾವೀಗ
ಜತ್ಕ ಬಳ್ಳೀ ತಿಂದಾವೀಗ
ಹೂಡನಾರೂ ಬಿಟ್ಟೇರೀಗ

ಅಣ್ಣಾ ತಮ್ಮಾ ಏಳೂ ಮಂದೀ
ಹೋರೀ ಹಟ್ಟೀಗ್ ಎಬ್ಬೀರೀಗ
ಒಳ್‌ಗೊಮ್ಮೇ ಬಂದಾರೀಗ
ಅಣ್ಣಾ ತಮ್ಮಾ ಏಳು ಮಂದೀ
ತಾಯೀನ ಕರ್‌ದಾರೀಗ
“”ಮನೀ ಹತ್ರ ಮಲೂಗೆದ್ದೆ
ದೇವೂರ ಹೊಸ್‌ಗದ್ದೆ
ಹೂಡಾನಾರೂ ಕಟ್ಟೀತ್ ತಾಯೀ
ಒಂದ್ ಸುತ್ತು ಎಬ್ಬಿತ್ ತಾಯೀ
ನೇಲಾನಾರೂ ಮುರ್‌ದೋ ತಾಯೀ
ಮತ್ತೊಂದ್ ಸುತ್ತೂ ಎಬ್ಬೀತ್ ತಾಯೀ
ನೊಗಾನಾರೂ ಮುರ್‌ದೋ ತಾಯೀ
ಇನ್ನೊಂದು ಸುತ್ತೂ ಎಬ್ಬೀತು ತಾಯೀ
ಜತ್ಕಾ ಬಳ್ಳೀ ತಿಂದವು ತಾಯೀ
ಏಳು ಮಂದೀ ಅಣ್ಣಾ ತಮ್ಮ
ಹುಟ್ಟೀಗೊಮ್ಮೆ ಬಂದೀತು ತಾಯೀ
ಬಲ್ಲಾ ಜೋಯ್ಸ್ರಿ ಮನೇಗ್ ಹೋಯಿ

ಲೋಟಾನಿಮಿತ್ಯಾ ಕೇಂಡ್ ಬಾರೋ"
ತಾಯೀ ಎಂಬ್ ಅರಳೇದೇವಿ
ಅಪ್ಪನಾರೂ ಕೇಂಡಾಳೀಗ
ಒಕ್ಲ್ ಮಕ್ಕನೇ ಕರ್‌ದಾಳೀಗ
""ಕುದ್ರಿಗೆ ಅಲ್ಲಣೀ ಬಿಗಿಯೋ ಗಂಡೇ"
ಕುದ್ರಿಗೆ ಅಲ್ಲಣೀ ಬಿಗಿದಾ ಗಂಡ್
ತಾಯೀ ಎಂಬ ಅರಳೇದೇವಿ
ತಾಯೀ ಎಂಬ ಅರಳೇದೇವಿ
ಉಪ್ಪರ್ಗೇ ಮೇಲೇ ನಡಿದಾಳೀಗ
ಹಾಡಾದೆಣ್ಣೆ ತೆಗ್ದಾಳೀಗ
ಅಂಗೈಗೇ ಹಾಕೀದಾಳೂ
ನೆತ್ತೀ ತುಂಬಾ ಗೆಡ್ಸೀದಾಳೂ
ಹಣ್‌ಗ್ಯಾರೂ ತೆಗ್‌ದಾಳೂ
ತಲೇನಾರೂ ಬಾಚೀದಾಳೂ

ತಲೇ ಸೂಡ್ಸೇ ಹಾಕೀದಾಳೂ
ಕಣ್ಣೀಗ್ ಕಪ್ಪೊಲಿಟ್ಟಾಳೀಗ
ಹಣೇ ಕೆಂಪೀ ಇಟ್ಟಾಳೀಗ
ಪೆಟ್ಗೇ ಬಾಗಿಲಾ ತೆಗೀದಾಳ್
ಬೇಕೆಂಬ್ ಚಿನ್ನಾ ತೆಗ್ದಿದಾಳು
ಬೇಕೆಂಬ್ ಸೀರಿ ತೆಗ್ದಿದಾಳು
ಬೇಕೆಂಬ್ ಸೀರೀ ಉಟಾಳೀಗ
ಉಪ್ಪರ್ಗೆ ಕೆಳ್ಗೇ ಬಂದಾಳೀಗ
ತಾಯೀ ಎಂಬಾ ಅರಳೇದೇವಿ
ಚಿನ್ನಾದ ಚೌಂತೀ ಹಣ್ಣ
ಶಣ್ಣಕ್ಕೆ ತೆಗೀದಾಳು
ಬೆಳ್ಳೀಯ ಹರಿವಾಣಕೆ
ಇದಾನೆರಡ ಇಟ್ಟಾಳೀಗ
ಇದಾನೆರಡ ಇಟ್ಟಾಳೀಗ
ಇದಾನೆರಡನಾರೂ ಹಿಡೀದಾಳೂ
ಕುದ್ರೀ ಬುಡಕೆ ನಡಿದಾಳೀಗ
ಲೋಟಾ ನಿಮಿತ್ಯಾಕ್ಹೊರಟಾಳೀಗ
ಕುದೂರಿನ್ನಾ ಏರಿದಾಳೀಗ
ಜೋಯ್ಸ್ರ ಮನೀಗ್ ನಡಿದಾಳೀಗ
ಜೋಯ್ಸ್ರ ಮನೀಗ್ ಹೋದಾಳೀಗ
ಕುದ್ರೇ ಹೋಯೀಲೀಗಳೂ

ಜೋಯ್ಸ್ರ ಮನೇ ಅಂಗ್ಳದಲ್ಲೀ
ಅಲ್ಲಾರು ನಿಂತೀತೀಗ
ಅರಳೇದೇವಿ ಅಂಬೌಳೀಗ
ಕುದ್ರೇ ತಗ್ಗೇ ಇಳಿದಾಳೀಗ
ಜೋಯ್ಸ್ರ ಮನೇ ಒಳ್ಗೆಹೋದ್ಲ್
ಅರಳೇದೇವಿ ಅಂಬೌಳೀಗ
ಜೋಯ್ಸನಾರೂ ಕರ್ದಾಳೀಗ
ಜೋಯ್ಸ ಮಕ್ಕಳೆಂಬೌರೀಗ
“”ಸಾನಾಕಾರೂ ಹೋಯೀರೀಗ”
ಚಾವ್ಡೀ ಕುರ್ಸೀಲ್ ಕೂತಾಳೀಗ
ಜೋಯ್ಸ್ರ ಸಾನಾ ಮಾಡೀ ಬಂದಾರೀಗ
ಸಾನಾ ಮಾಡೀ ಬಂದಾ ಜೋಯ್ಸ್ರ
“”ಒಳ್ಗನ್ ದೇವ್ರ ಪೂಜೇ ಮಾಡೀ
ಪೂಜೇ ಮಾಡೀ ಬತ್ತೇ ದೇವಿ
ಹೆರ್ಗೇ ಆರೂ ಕೂತ್ಕೋದೇವಿ”
ಒಳ್ಗಿನ್ ಪೂಜೇ ಮಾಡಿರು ಜೋಯ್ಸ್ರ
ಚಾವ್ಡೀಗಾರೂ ಬಂದ್ರ ಜೋಯ್ಸ್ರ
“”ಏನೂ ಬಂದೇ ದೇವೀ ನೀನೂ
ಎಂದು ಬಾರ್ದಿದ್ ಅರಳೇದೇವಿ
ಇಂದೇನೇ ಬಂದೇ ದೇವಿ
ಬಂದಾ ಕಾರ್ಣ ಬೇಗ ಹೇಳೋ”
“”ಒಂದ್ ಲೋಟಾ ನಿಮಿತ್ಯಾಲಾಯ್ಕ್‌ಸ್ವಾಮೀ”
ಕವ್ಡೀ ಹರ್ಲ್ ತೆಗ್ದ್ರ ಜೋಯ್ಸ್ರ
ಜೋಯ್ಸ್ರ ನಿಮಿತ್ಯಕೆ ಕೂತಾರೀಗ
“”ಮನೀ ಹತ್ರ ಮಲೂಗದ್ದೆ
ಹೊಸಕೆರೇ ಹೊಸಬಾಮೀ
ನಿಗ್ಳಾರೊ ಒಂದ್ಹೊಕ್ಕಿ
ನರ ಹಾವ್ತೀ ಬೇಡ್ತ್ತ”
“”ಕುರಿಯಾರಾ ಕೊಡ್ತೇ ಸ್ವಾಮೀ
ಕೋಣನಾರೂ ಕೊಡ್ತೇ ಸ್ವಾಮಿ”
“”ಕುರಿಯಾರೂ ಬ್ಯಾಡಾ ಅಂತೆ
ಕೋಣನಾರೂ ಬ್ಯಾಡಾ ಅಂತೆ”
“”ಕೋಳೀಯಾರೂ ಕೊಡ್ತೇ ಸ್ವಾಮೀ
ಕೋಳೀಹಾರಾ ಬ್ಯಾಡಂತೇ
ನರ ಹಾವ್ತೀ ಬೇಡ್ತ್ತದ್”
“”ನರ ಹಾವ್ತೀ ಕೊಡುತಾ ಸ್ವಾಮಿ”

“”ಹೆರೀಮಗಾನ್ದೆಂಡತಿಯೌವ್ಳ್
ಮನೀ ಕೆಲ್ಸಕೆ ಬೇಕೋ ಸ್ವಾಮೀ
ಅಡಿಗೇಯಾ ಮಾಡ್ಯವ್ಳು
ನಮಗೆಲ್ಲಾ ಬಡೀಸ್ಯವ್ಳು
ಮತ್ತೊಬ್ಬ ಮಗ್ನಾ ಹೆಂಡಾತಿ
ಗಂಡೇ ಕರ್‍ಗಳರಕೋಲೀಗ್ ಬೇಕು

ಮತ್ತೊಬ್ಬ ಮಗ್ನಾ ಹೆಂಡತಿ
ಹಟ್ಟೀ ಕೆಲ್ಸಕೇ ಬೇಕೌಳ್
ಇನ್ನೊಬ್ಬ ಮಗ್ನಾ ಹೆಂಡತಿ
ಮುಸ್ರಿ ತಿಕ್ಕುಕೆ ಬೇಕೌಳ್
ಮತ್ತೊಬ್ಬ ಮಗ್ನಾ ಹೆಂಡಾತೀ
ಕಸಾಲಾರೂ ತೆಗೊಕೆಬೇಕು
ಯಾರಾನೆ ಕೊಡೂದು ಸ್ವಾಮಿ”
ಇಷ್ಟು ಮಾತು ಆಡಿದಾಳು
ಆರು ಮಂದಿರ್ ಹೆಸ್ರೂ ಹೇಳಿ
ಚೆನ್ನದ ಬೌಂತೀ ಹೆಣ್ಣೆ
ಶಣ್ಣಕ್ಕೀ ಅಕ್ಕೀಲಬ್ದ್
ಆ ಜೋಯ್ಸ್ರ ಅಂಬೌರೀಗೂ
ದಕ್‌ಸೀಣೆ ಕೊಟ್ವಾಳು
“”ನಾ ಮನೀಗ್ ಹೋತೆ ಜೋಯ್ಸ್ರೆ”
“”ಈ ನರಾ ಹಾವ್ತೀ ಕೋಡೂ ನೀನು
ನೀನೂ ಸುಕಾ ಆಗೂದಿಲ್ಲೆ”
ಅಷ್ಟು ಮಾತೂ ಕೇಂಡಾಳ್ ದೇವಿ
ಚಾವ್ಡೀ ತಗ್ಗೆ ಇಳಿದಾಳ್ ದೇವಿ
ಕುದ್ರೀ ಬುಡ್ಕೆ ಬಂದಾಳ್ ದೇವಿ
ಕುದ್ರೀ ಬೆನ್ಮೇಲ್ ಏರಿದಾಳ್ ದೇವಿ
ಮನೀಗೊಮ್ಮೆ ಬಂದಾಳ್ ದೇವಿ
ಅರ್‌ಳೇದೇವಿ ಎಂಬೌಳೀಗ
ಮನೀಕಡೇಗೆ ಬಂದಾಳೀಗ
ಮನೀಗೊಮ್ಮೆ ಬಂದಳ್ ದೇವಿ
ಕುದ್ರೆ ತಗ್ಗೆ ಇಳಿದಾಳ್ ದೇವಿ
ಚಾವೂಡೀಗ್ ಬಂದೀಗ ದೇವಿ
ಏಳೂ ಮಂದೀ ಅಣ್ಣಾ ತಮ್ಮಾ
“”ಜೋಯ್ಸ್ರ ಮನೀಂದ ಬಂದ್ರ್ಯಾತಾಯಿ
ಜೋಯ್ಸಾರೂ ಲಿದ್ದೀದಾರಾ

ಲೋಟಾ ನಿಮಿತ್ಯಾ ಕೇಂಡೀರಾ"
""ಲೋಟಾ ನಿಮಿತ್ಯಾ ಕೇಂಡೆ ಮಗಾ
ಹೊಸ ಕೆರೆ ಹೊಸ ಬಾಮಿ
ನಿಗುಳಾರೊ ಬಂದ್ಲೊಕ್ಕೀ
ನರ ಹಾವ್ತಿ ಬೇಡ್‌ತಂಬ್
ಕುರಿಯಾರಾ ಲಾಗಾ ಆಂಬ್ರೆ
ಕೋಣಾನಾರೂ ಆಗಾ ಅಂಬ್ರೆ
ಯಾರಾನೇ ಕೊಡೂದು ಮಗಾ
ಏಳೂ ಮಂದೀ ಅಣ್ಣಾ ತಮ್ಮಾ
ಏಳೂ ಜನಾ ಹೆಂಡೀರೀಗ
ಯಾರಾನೇ ಕೊಡೊದಂದೇ"
""ಕಿರೀಮಗಾನ್ಹೆಂಡತೀನ
ಅಪ್ಪನಾರೂ ಕೊಡ್ವಾ ತಾಯಿ"
ಇಷ್ಟು ಮಾತೂ ಆಡೀರೀಗ
ಹೆರಿ ಮಗ್ನಾ ಹೆಂಡತೀ
ಬಿಳ್ಗಿಂದ್ ಹೊರ್‌ಗೇ ಬರೂವಂಗೂ
ಇವ್ರ ಮಾತೂ ಕೇಳೂತಿತ್ತು
ಅಡೂಗೀಯಾ ಲನೂವಾಯ್ತು
ಊಟಾಕಾರೂ ಕರ್‌ದಾಳೀಗ
ಉಂಡು ಕೈ ಬಾಯ್ ತೊಳಿದಾರೀಗ
""ಅಣ್ಣಾ ತಮ್ಮಾರ್ಹೆಂಡಾರೀಗ
ಏಳು ಜನಾ ನೀವೀಗ
ಗುಡ್ಡೀ ಸೊಪ್ಪೀಗೆ ಹೋಯ್ತಿಮಗಾ
ಹಟ್ಟೀಗ್ ಸೊಪ್ಪು ತನ್ನೀ ಈಗ"
ಏಳು ಮಂದೀ ಕೂಡಿಕಂಡ್
ಗುಡ್ಡೀ ಸೊಪ್ಪೀಗ್ ನಡಿದಾರೀಗ
ಏಳು ಹೊರೇ ಮಾಡೀರೀಗ
ಏಳು ಹೊರೇ ಕಟ್ಟೀರೀಗ
ಹೊರೆ ಕಟ್ಟೀ ನಿತ್ತ್‌ರೀಗ
""ನನ್ನ ಮಂಡೀದ್ದೊಂದ್ ಹೇನೇತೆಗೆ"
""ಏಳು ಜನಾ ಬಿಟ್ಟೇ ಇತ್
ನಾಳೀಗಾರೇ ಜನಾಲಿದ್ರೆಸ್ಸೈ"
""ಅದು ಎಂತಾ ಮತೂಲಕ್ಕಾ"
""ನಿನ್ನ ಬಾವಾಮಾಯಿ ಈಗ
ಮಾತ್‌ಲಾಡ್‌ತ್ತ್ ಕೇಂಡೆ ನಾನೂ
ಹೊಸ ಕೆರೇ ಹೊಸ ಬಾಮಿ

ನಿಗಳಾರೂ ಹೊಕ್ಕೀತಂಬ್ರ
ನಿಗ್ಗಿಗೆ ನಿನ್ನಾ ಕೊಡೂದಂಬ್ರ
ಮಾತನಾರೂ ಆಡೂತಿದ್ರ"
ಅಷ್ಟು ಮಾತೂ ಕೇಂಡಾರೀಗ
ಮಂಡೀ ಹೇನೇ ಬರ್‌ದಾರೀಗ
ಮಂಡೇ ಸೂಡ್ಯೇ ಹಾಕೀರೀಗ
ಏಳು ಜನಾ ಸೊಪ್ಪ ಹೊತ್ತು
ಹಟ್ಟೀಗ್ ತಂದ್ ಹಾಕೀರೀಗ
ಅಕ್ಕ ತಂಗೀ ಏಳು ಜನಾ
ನನ್ನ ಸೊಪ್ಪು ತೊಳೀನ್ಯಾಕ್ಕಾ
ಒಳ್ಗೆನಾರೂ ನಡೀತ್ ಹೆಣ್ಣ
""ಅಡೀಗೀಯಾ ಮನೆಯಲ್ಲಿ
ಅತ್ಯಮ್ಮಾ ನೀವು ಕೇಳಿ
ನನ್ನಣ್ಣನೊಬ್ಬ ಲಿಂಬಯ್ಯಾ
ಚೆಂಡೀನಾಟಕೆ ಹೋಯಿದ ಅಂಬ್ರ
ಚೆಂಡಡೀ ಬಿದ್ನಂಬ್ರ
ಅಂಗಾಲೇ ಒಡದೀತ್
ಮುಂಗಾಲೇ ಜರ್‌ದಿತ್ತ

ಕಂಡೋಡಿ ನಾಬತ್ತೆ"
""ನನ ಕೈಲಿ ಏನ್‌ಕೇಂತೆ
ನಿನ್ನ ಬಾವ್ನ ಕೈಲೇ ಕೇಣ್ ಮಗೂ".
""ಚಾವೂಡೀಗ್ ನಡೀದಾಳು
ಕುರ್ಸೀ ಮ್ಯಾಲೆ ಕೂತವ್ರೇ
ನನ್ನಣ್ಣನೊಬ್ಬ ನಿಂಬಯ್ಯ
ಚಂಡೀನಾಟಕೆ ಹೋಯಿದ್‌ಅಂಬ್ರ
ಚೆಂಡಾಡಿ ಬದ್ನಂಬ್ರ
ಅಂಗಾಲೇ ಒಡ್‌ದೀತ್
ಮುಂಗೈಯ ಜರ್‌ದೀತ್
ಕಂಡೋಡಿ ನಾ ಬತ್ತೆ"
""ನನ ಕೈಲಿ ಏನ್‌ಕೇಂತೆ
ನಿನ ಮಾವ್ನ ಕೈಲೇ ಕೇಣ್ ಮಗ"
ಅಲ್ಲಿಂದ ಹೊರಟಾಳೂ
ಉಪ್ಪರ್ಗೀಗ್ ನಡಿದಾಳು
ಉಪ್ಪರೀ ಮ್ಯಾಲಿರುವಾ
ಮಾವಯ್ಯ ನೀವ್ ಹೇಳಿ

ನನ್ನಣ್ಣೊಬ್ಬ ನಿಂಬಯ್ಯ
ಚೆಂಡೀನಾಟಕೆ ಹೋಯಿದ ಅಂಬ್ರ್
ಚೆಂಡಾಡೇ ಬದ್ನಂಬ್ರ್
ಅಂಗಾಲೇ ಬಿಡ್‌ದೀತ್
ಮುಂಗೈಯೇ ಮುರ್‌ದೀತ್
ಕಂಡೋಡೀ ನಾ ಬತ್ತೆ
ಕೇಂಡೋಡೀ ನಾ ಬತ್ತೆ”
“”ನನಕೈಲೇ ಏನೂ ಕೇಂತೇ
ನಿನ ಗಂಡ್ನ ಕೈಲೇ ಕೇಣ್”
“”ಹಟ್ಟೀ ಹಣೀಗ್ ನಡಿದಾಳು
ಹಟ್ಟೀ ಹಣೀಗ್ ಕೂತವ್ರೇ
ಜತ್ಕಾ ಬಳ್ಳಿ-ನೇಯ್‌ವವ್ರೇ
ನನ್ನಣ್ಣನೊಬ್ಬ ನಿಂಬಯ್ಯ
ಚೆಂಡೀನಾಟಕೆ ಹೋಯಿದ ಅಂಬ್ರ್
ಚೆಂಡಾಡೀ ಬಿದ್ನಂಬ್ರ್
ಅಂಗಾಲೇ ಒಡ್‌ದೀತ್
ಮುಂಗಾಲೇ ಮುರ್‌ದೀತ್
ಕಂಡೋಡಿ ನಾ ಬತ್ತೇ”
“”ಉಗ್‌ದಾ ಎಂಜಾಲೊಣಗೊದ್ರೊಳ್ಗೆ
ಹಚ್ಚೀದ್ ದೀಪಾ ನೆಂಗೊದ್ರೊಳ್ಗೆ
ನೀನಾರೂ ಬರಾಬೇಕು”
ಅಷ್ಟು ಮಾತೂ ಕೇಂಡಾಳ್ ಹೆಣ್ಣು
ಹಾರೀಬಿದ್ದೇ ಹೋದಾಳ್ ಹೆಣ್ಣು
ಹೆಬ್ಬಾಲ್ ಕಡೀಂದೆ ಹೋಗಾಲಿಲ್ಲೆ

ಕುರ್ಬಾಲ ಕಡೀಂದೆ ಹೋದಾಳು
ಲಿಂಬಯ್ಯಾ ಅಂಬೌನ್
ಅವ್ವಣ್ಣ ನೆಂಬೌನ್
ತಂಗೀಯ ಬರೂ ಹಾದೀ
ದೂರಿಂದೇ ನೋಡೂತ್ತಿದ್ದ
ನನ್ನ ಬಡ ತಂಗೀ ಬರೂವಾಳೂ
ಏನು ಮೇಮೇ ತೂರತಾಳೂ
“”ಹೆಬ್ಬಾಲ ಕಡೀಂದ್ ಬಪ್ಪೌಳ್ ನೀನೂ
ಕುರ್ಬಾಲ ಕಡೀಂದ್ ಏನೂ ಬಂದೆ”
ಒಳ್‌ಗೊಮ್ಮೆ ನಡೆದಾಳೂ
ಅಲ್ಲಷ್ಟೇ ಮರ್ಕೀದಾಳೂ

ಎಮ್ಮೀ ಹಟ್ಟೀಗ್ ನಡೀದಾಳೂ
ಅಲ್ಲಷ್ಟೇ ಮರ್ಕೀದಾಳೂ
“”ತಕ್ಕಂಡ್ ಹೋದಾ ಎಮ್ಮೀ ಸಾಲಾದಿದ್ರೆ
ಇನ್ನೊಂದ್ ಎಮ್ಮೀ ತಕ್ಕಂಡ್ಹೋಗು”
“”ತಕ್ಕಂಡ್ ಹೋದ ಎಮ್ಮೀನಾ
ಹಿಂದಾಕೆ ಹೊಡ್ ತಾರೋ”
ಅಷ್ಟ ಮಾತೂ ನುಡೀದಾಳೂ
ಒಳ್‌ಗೊಮ್ಮೆ ಬಂದಾಳ್ ಹೆಣ್ಣು
“”ಕೆಳ್ ತೋಟಾರ್ಹೋಗಣ್ಣ
ಒಂದ್ ಕೊನೇ ಹೊಗುತಾರೋ”
ಅಣ್ಣಾನೇ ಅಂಬೌನ್
ಒಂದ್ ಕೊನೇ ಹೂಗೇ ತರ್ಸೀದಾ
ತೊಳ್‌ಸೀಯಾ ಬುಡಕೆ ಹೋದಾಳ್
ಒಂದ್ ಕೊನೇ ಹೂಗ್ ಏರ್ಸಿದಾಳ್
ತೊಳ್ಸೀಗ ದೀಪಾ ಹಚ್ಚೀದಾಳ್
“”ಒಡ್ದ್ ಹೂಗೂ ಬಾಡ್ದ್ರಗತೀಗ್
ಹಚ್ಚೀದ ದೀಪಾ ನೆಂಗೀರ್ ಗತೀಗ್
ನನ್ನ ಗಂಡನ ಮನೆಗೆ ಬಂದೇ ಹೋಗೋ”
ಅಷ್ಟು ಮಾತು ನುಡಿದಾಳೀಗ
ಗಂಡನ ಮನೆಗೇ ಹೊರ್‌ಟಾಳೀಗ
ಇವ್ಳಾರೂ ಬರುವ ದಾರಿ
ಮಾಯೀಯೂ ಮಾವನೂ
ಹಾದೀಯೇ ನೋಡುತಿದ್ರ್
ಅಷ್ಟೂ ಹೊತ್ತೀಗ್ ಬಂದೀತ್ ಹೆಣ್ಣು
“”ಬಿಸೂಲೀಗೆ ಬಂದೆ ಮಗಾ
ಮುಕಾ ಮ್ವಾರೀ ತೊಳ್ಕಮಗಾ”
ಮಾಯೀಯೂ ಸೊಸೇಯೂ
ಕೆರೀಗಾರೂ ಇಳೀದಾರೂ
ಮುಕಾ ಮಾರೀ ತೊಳಿದಾರೂ
ಕೆರಿಗ್ ಹಿಡ್‌ದೇ ದೂಡೀದಾಳೂ
ಮಾಯೀಯೂ ಅಂಬೌಳ್
ನಿಗಳಾರೂ ಬಂದೀತೀಗ
ಇವ್ಳನ್ನ್ ಎತ್ತೀ ಹಿಡ್ದೀತೀಗ
“”ನಿನ್ನ ಬಳಿ ಯಾವ್ದು ಮಗಾ”
“”ನನ್ನ ಬಳಿ ನಿಗ್ಳಾ ಬಳಿ”
ಎತ್ತಿಯಾರೂ ಹಿಡ್ದೀತೀಗ

ಇಷ್ಟು ಮಾತೂ ಆಡ್ವಂಗೂ
ಆವ್ಪಣ್ಣಾ ಬಂದಾನೀಗ
“”ನಿನ ತಂಗೀನ್ ಕರ್ಕಂಡ್ ಹೋಗು”
ನಿನ್ನ ಬಳೀ ನನ್ನ ಬಳಿ
ಬಂದೇಯೇ ಆದ್ರಿಂದ
ಅವ್ವ ನಾರೂ ತಿನ್ನೊದಿಲ್ಲೆ
ಅವ್ವನ್ನೇ ಆದಾರೂ
ಮ್ಯಾಲೆತ್ಯೇ ಕೊಟ್ಟೇತ್ ನಿಗ್ಯ್
ತಂಗೀಯ ಕರ್‌ಕಂಡ್
ಅವ್ವ ಮನೀಗ್ ನಡೀದಾನೂ

---

* ಪ್ರತಿಪಾದಾಂತದಲ್ಲೂ “ರಾಮ ರಾಮಾ’ ಎಂದು ಸೇರಿಸಿಕೊಳ್ಳಬೇಕು.

** ನಿಗಳ್‌ಬಲಿ, ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಯ, ಹಾಡಿಗೆ ಹನ್ನೆರಡು ಕಬರು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೭೩, ಪು.ಸಂ. ೧೨೩-೧೩೩.

## ೬. ಬಾರ್ಕೂರ ಹೆರಿಯಣ್ಣ ಸೆಟ್ರು

ಬಾರ್ಕೂರ ಹೆರಿಯಣ್ಣ ಸೆಟ್ರು ತೆಂಗೀನ ಬುರುಡೇ
ಹೊತ್ತಾರೆ ಮುಂಚೆ ಎದ್ದಾರೂ ತೆಂಗೀನ ಬುರುಡೇ*
ಮುತ್ತು ರತ್ನಾ ಲಾಗಾಬೇಕು
ಹಡುಗಾರೂ ಹೂಡ್ಸಾಬೇಕು
ಮಡೂದೀನಾ ಕರೀದಾರೂ
ಹಡೂಗಾರೂ ಹೂಡ್ಸಾಬೇಕು
ಅಷ್ಟು ಮಾತೂ ಲಾಡಿದಾರೂ
ಬಾರ್ಕೂರ ಹೆರಿಯಣ್ಣ ಸೆಟ್ರು
ಹಡೂಗಾರೂ ಹೂಡೂಸೂಕೇ
ಅಲ್ಲಿಗಾರೂ ಹೊರ್‌ಟಾರೂ
ಬಾರ್ಕೂರ ಹೆರಿಯಣ್ಣ ಸೆಟ್ರು
ಹಡುಗಾರೂ ಹುಡೂಸೀರೂ
ಹಡುಗಾರೂ ನೆಡೂದಿಲ್ಲೆ

“”ಇದ್ ಏನೂ ಕತೆ ಆಪ್ಪಾ”
ಅಷ್ಟೂ ಮಾತೂ ಲಾಡಿದಾನೂ
ಬಾರ್ಕೂರ ಹೆರಿಯಣ್ಣ ಸೆಟ್ರು
ಹಡುಗಾರೂ ನೆಡೂದಿಲ್ಲೆ
“”ಇದ್ ಏನೂ ಕತೆ ಅಪ್ಪಾ”
ಅಷ್ಟೂ ಮಾತೂ ಲಾಡಿದಾನೂ
ಬಾರ್ಕೂರ ಹೆರಿಯಣ್ಣ ಸೆಟ್ರು
ಜೋಯ್ಸ್ರ ಮನೀಗ್ಹೋರ್ಟಾರೂ
ಜೋಯ್ಸ್ರ ಮನೀಗ್ಹೋದಾರೂ
ಹರ್‍ವಾರೂ ಲಿಟ್ಟೇದಾರೂ
ನರ ಹಾವ್ತೀ ಬೇಡುತ್ತಾದ್”
ಅಲ್ಲಿಂದೇ ಹೂರ್ಟಾರೂ
ಮನಿಗೊಮ್ಮೆ ಬರುವಾರೂ
ಮನಿಗೊಮ್ಮೆ ಬಂದೀಗ
ಮಡುದೀನಾ ಕರೀದಾರೂ
“”ಮುತ್ತು ರತ್ನಾ ತರಾಬೇಕು

ಹಡುಗಾರೂ ನಡುದಿಲ್ಲೆ
ನರ ಹಾವ್ತೀ ಬೇಡ್ತ್ತಂಬ್ರ
ಲೋಟಾ ನಿಮಿತ್ಯಾ ನೋಡೀದೆ
ಹತ್ತು ಮಕ್ಕೂ ಇದ್ದೊಲ್ದಾ
ಒಂದೆ ಮಗೀನ ಕೊಡ್ ಈಗ”
ಅಷ್ಟೇ ಮಾತೂ ಲಾಡಿದಾರೂ
ಬಾರ್ಕೂರ ಹೆರಿಯಣ ಸೆಟ್ರ
ಹೆರಿಯಣ್ಣ ಸೆಟ್ರ ಮಡೂದೀಯೂ
“”ಹಡೂಗತ್ತೇ ಬಿದ್ದೋಯ್ಲಿ
ಹಡೂಗತ್ತೇ ಮುರೂದ್ಹೋಯ್ಲಿ
ಮಗೀನಾರೂ ಕೊಡುದಿಲ್ಲೆ
ಮುತ್ತು ರತ್ನಾ ಬೇಡನಂಗೆ
ಮಗೀನಾರೂ ಕೊಡುದಿಲ್ಲೆ”
ಅಷ್ಟು ಮಾತೂ ಲಾಡೀದಾಳೂ
ಹೆರಿಯಣ ಸೆಟ್ರ ಮಡೂದೀಯೂ
ಬಾರ್ಕೂರ ಹೆರಿಯಣ ಸೆಟ್ರು
ಅಷ್ಟು ಮಾತೂ ಕೇಂಡಾರೂ
ತಂಗೀ ಮನೇಗ್ಹೊರ್ಟಾರೂ
ದೂರಿಂದೇ ಕಂಡಾಳು

“”ಎಂದೂ ಬಾರ್ದಿದ್ ಅಣ್ಣಯ್ಯ
ಇಂದೇನು ಬಂದೀಯೋ”
“”ಏನೆಂದೇ ಹೇಳೂದ್ ತಂಗೀ
ಎಂತಂದೇ ಹೇಳೂದ್ ತಂಗೀ
ಮುತ್ತು ರತ್ನಾ ತರ್‌ಕಂದ್
ಹಡೂಗಾರೂ ಹೂಡುಸೀದೆ
ಹಡೂಗಾರೂ ನೆಡೂದಿಲ್ಲೆ
ನರ ಹಾವ್ತೀ ಬೇಡ್‌ತ್ತವ್
ಲೋಟಾ ನಿಮಿತ್ಯಾಕಂಡೀದೆ
ಜೋಯಿಸರ್ ಹೇಳೀರ್
ಅಷ್ಟು ಮಾತೂ ಕೇಂಡೆ ತಂಗೀ
ಮನೀಗಾರೂ ಬಂದೇ ತಂಗೀ

ಮಡುದೀನಾ ಕರೀದೇನೂ
ಹತ್ತು ಮಕ್ಳು ಇದ್ದವು ತಂಗೀ
ಒಂದೇ ಮಗೀನ್ ಕೊಡ್ ಅಂದೆ
ಹಡೂಗತ್ತೇ ಬಿದ್ಹೋಯ್ಲಿ
ಹಡೂಗತ್ತೇ ಮುರೂದ್ಹೋಯ್ಲಿ
ಮೂತ್ತೂರತ್ನಾ ನಂಗೇಬೇಡ
ಮಗೀನಾರೂ ಕೊಡುದಿಲ್ಲ
ಎಂದಾರೂ ಹೇಳೀಳು
ಅಷ್ಟೇ ಮಾತೂ ಕೇಂಡೇ ತಂಗೀ
ಇಲ್ಲೀಗೆ ಬಂದೇ ತಂಗೀ”
ಬಾರ್ಕೂರ ಹೆರಿಯಣ್ಣ ಸೆಟ್ರು
ಅಷ್ಟು ಮಾತು ಲಾಡಿದರೂ
ತಂಗೀಯೇ ಹೊನ್ನಮ್ಮಾ
ಅಷ್ಟು ಮಾತು ಕೇಂಡಾಳು
ಒಬ್ಬಾನೇ ಮಗಾನೀಗ
ಗಿಜ್ಜಾಕಾಲ್ ಮಗಾನೀಗ
ನೆರ್ಮ್ನೆ ಆಟಕೆ ಹೋಗೀದ
ಅವ್ನನಾರೂ ಕರೀದಾಳೂ
ಗಿಜ್ಜಾಕಾಲ್ ಮಗಾನೀಗ
ಓಡ್ಯೋಡೀ ಬಂದಾನೂ
“”ಯಾಕೆ ಅಮ್ಮಾ ಕರ್‌ದೀರಿ”
“”ಎಂದೂ ಬಾರ್ದಿದ್ ಮಾವಯ್ಯ
ಇಂದಾರೂ ಬಂದೀರ್ ಮಗಾ

ಹಡ್‌ಗಾರೂ ಹೂಡ್ಸಿರಂಬ್ರ
ನೀನಾರೂ ಬರ್‌ಕಂಬ್ರ"
ಅಷ್ಟೇ ಮಾತೂ ಕೇಂಡಾನೂ
ಗಿಜ್ಜಾಕಾಲ್ ಮಾಗಾನೀಗ
ಅಂಗೀ ಗಿಂಗೀ ಹಾಕಿದಾನೂ
ಸಿಂಗಾರಾರೂ ಆಯೀಗ
ಮಾವ್ನ ಸಂಗಡಾ ಹೊರ್‌ಟಾನೂ
ಗಿಜ್ಜಾಕಾಲಾ ಮಗಾನೀಗಾ
ಮಾವ ಅಳಿಯಾ ಲೊಟ್ಟುಕೂಡೀ
ಹಡ್‌ಗೀನ ಬುಡುಕೆ ಹೊರ್‌ಟಾರೂ
ಮಾವ ಮುಂದಿಂದೆ ಹೊರ್‌ಟಾರೂ
ಅಳಿಯ ಹಿಂದೆಂದೆ ಹೊರ್‌ಟಾರೂ
""ಮಾವಯ್ಯ ಮಾವಯ್ಯ
ಮಾವೀನ ಹಣ್ಣ್ ಆಯೀಕ್"
ಅಷ್ಟೇಮಾತೂ ಕೇಂಡಾರೂ
ಬಾರ್ಕೂರ ಹೆರಿಯಣ್ಣ ಸೆಟ್ರು
ಮಾಯ್ನಣ್ಣೀ ತೆಗ್ಸೀ ಕೊಟ್ಟೀರ್
""ಮಾವಯ್ಯ ಮಾವಯ್ಯ
ಚೂರ್‍ಯಾರೂ ಆಗಾಬೇಕು"
ಅಷ್ಟೇ ಮಾತೂ ಕೇಂಡಾರೂ
ಬಾರ್ಕೂರ ಹೆರಿಯಣ ಸೆಟ್ರು
ಚೂರ್‍ಯಾರೂ ತೆಗ್ಸೀಕೊಟ್ರ
ಮಾವ ಅಳಿಯಾ ಲೊಟ್ಟುಕೂಡೀ
ಹಡ್ಗಿನ ಬುಡಕೆ ಹೊರ್‌ಟಾರೂ
ಹಡ್‌ಗ್ ಹತ್ತೀ ಕುಳಿತಾರೂ
ಹಡ್‌ಗ್ ಹತ್ತೀ ಕುಳೀತಾರೂ
ಮಾವ ಅಳಿಯಾ ಲೊಟ್ಟುಕೂಡೀ
ಅಳಿಯಾ ಎಂಬೌನ್
ಮಾಯ್ನ ಹಣ್ಣ ಅರೀದಾನೂ
ಮಾಯಿನ್ ಹಣ್ಣ ಅರೀವಂಗೂ
ಒಂದೇ ಬೆರ್‌ಲಾರೂ ಅರ್‌ದೇಹೋಯ್ತ್
ರಕ್ತಾ ಹಾರಾಲಾಯೀತ್
ಹಡ್‌ಗಾರೂ ಲೆದ್ದೀತ್
ಹಡ್‌ಗಾರೂ ನಡೀದೀತ್
ಮಾವಯ್ಯ ಅಳಿಯರೂ
ಒಟ್ಟು ಕೂಡೀ ಹಡ್‌ಗ್ ಏಳ್ಸೀ ತಂದಾರೂ

ಬರ್ಕೂರ ಹೆರಿಯಣ ಸೆಟ್ರು
ಮನೀ ಎದ್ರೆ ಮಲೂಗೆದ್ದೆ
ಹಡೂಗಾರೂ ಹೋಯೀತ್

ದೂರಿಂದೆ ಕಂಡಾಳೂ
ಹೆರಿಯಣ ಸೆಟ್ರ ಮಡೂದೀಯಾ
ಮಕ್ಕನಾರೂ ಕರೀದಾಳೂ
“”ಅಪ್ಪಯ್ಯಾ ಹಡ್ಗ್ ಬಂತ್
ಅಲ್ಲಿಗಾರೂ ಹೋಯ್ನಿ ಮಕ್ಕೇ”
ಅಷ್ಟೇ ಮಾತೂ ಕೆಂಡೋ ಆಗ
ಮಕ್ಕಳೆಲ್ಲ ಹೋದೋ ಈಗಾ
ಹಡ್ಗನಾರೂ ತಿರ್ಸಿದಾರೂ
ಬಾರ್ಕೂರ ಹೆರಿಯಣ ಸೆಟ್ರು
ತಂಗೀ ಮನೀಗ ಹೊರ್‌ಟಾರೂ
ಮಡುದೀಯೂ ಮಕ್ಕಳೂ
ಮರ್‍ಕುತಾರೂ ನಿತ್ತೀರೂ
ಹೆರಿಯಣ ಸೆಟ್ರು ಮಡೂದೀಯೂ
ಮುತ್ತೂ ರತ್ನಾ ನೋಡುವಂಗೂ
ಬಾಳಾ ಆಸೆ ಆಯೀತೂ
“”ಒಂದೇ ಮಗನಾರೂ ಕೊಡೂತಿದ್ದೆ”
ಏನು ಹೇಳೀರೂ ಕೇಳಾಲಿಲ್ಲೆ
ಬಾರ್ಕೂರ ಹೆರಿಯಣ ಸೆಟ್ರು
ತಂಗೀ ಮನೀಗ್ಹೋದಾರೂ
ದೂರಿಂದೇ ಕಂಡಾಳೂ
ತಂಗೀಯೇ ಹೊನ್ನಮ್ಮ
“”ಇಲ್ಲಿಗಾರೂ ಏಕೆ ತಂದೇ
ಹುಡುಗಾರೂ ಏಕೆ ತಂದೇ”
“”ಇತ್ತು ಕೇಳೇ ತಂಗಿ ನೀನೂ
ನಿಂಗಿರುವುದೂ ಒಂದೇ ಮಗೂ
ನೀನಾರೂ ಕಳುಸೀದೆ
ಗಿಜ್ಜಾ ಕಾಲೂ ಮಗನಾರೂ
ಹತ್ತು ಮಕ್ಕೇ ಲಿದ್ದೋನಂಗೂ
ಒಂದೇ ಮಗೀನ್ ಕಳ್ಸಾಲಿಲ್ಲೆ
ಮುತ್ತೂ ರತ್ನಾ ನಿಂಗೇ ತಂಗೀ

ಗಿಜ್ಜಾ ಕಾಲೂ ಮಗಾನೀಗೆ
ಹಡೂಗಾರೂ ಅವ್ನಿಗೆ ತಂಗೀ"
""ನಮಗಾರೂ ಬ್ಯಾಡಾ ಅಣ್ಣ
ನಿನ್ನ ಹೆಂಡ್ರ ಮಕ್ಳ್ ಇದ್ದಾರಲ್ಲಾ
ಅವ್ರೀಗಾರೂ ಕೊಡೂ ಅಣ್ಣ
ಏನು ಹೇಳೀರೂ ಕೇಳಾಲಿಲ್ಲೆ
ಬಾರ್ಕೂರ ಹೆರಿಯಣ ಸೆಟ್ರು
ಹಡ್ಗನಾರೂ ಬಿಟ್ಟೇ ಹೋದ್ರ್
ಮುತ್ತೂ ರತ್ನಾ ಬಿಟ್ಟೇ ಹೋದ್ರ್
ತಂಗೀಯೂ ಮನೆಯಲ್ಲಿ
ಬಾರ್ಕೂರ ಹೆರಿಯಣ ಸೆಟ್ರು
ತನ ಮನೇಗ್ಹೋದಾರೂ
ಮಡೂದೀಯಾ ಮಕ್ಕಾಳೂ
""ಹಾದೀಲ್ ಹೋಪೋರ್ ಯಾರಾದ್
ನಮ್ಮನೇಗ್ ಬರಾಬೇಡಿ
ಗಂಡ್ಸ್ಯಾರೂ ಇಲ್ಲಿದ್‌ಮನೇ
ನಮ್ಮನೇಗ್ ಬರಾಬೇಡಿ"
ಅಷ್ಟು ಮಾತುಲಾಡಿದಾರೂ
ಮಡದೀಯೂ ಮಕ್ಕಾಳೂ
ಅಷ್ಟು ಮಾತೂ ಕೇಂಡಾರೂ
ಬಾರ್ಕೂರ ಹೆರಿಯಣ ಸೆಟ್ರು
ಅಲ್ಲಿಂದೆ ಹೊರ್‌ಟಾರೂ
ತಂಗೀಯ ಮನೇಗ್ಹೋದಾರೂ
ಬಾಳಾ ಸಿಟ್ಟು ಬಂದೀತು
ತಂಗೀ ಮನೀಗ್ಹೊರ್‌ಟಾರು
ತಂಗೀ ಮನೀಗ್ ಬಂದಾರೂ
""ಮಾವಯ್ಯಾ ಮಾವಯ್ಯ
ಇವತ್ತೇನೇ ಬಂದೀರೀ"
""ಏನೆಂದೇ ಹೇಳೂದ್ ಮಗೂ
ನಾನ್ ನೀನೇ ಒಟ್ಟು ಕೂಡೀ

ನಿನ್ ಮನೀಲ್ ಇತ್ತೀ ಮಗಾ"
ಅಣ್ಣನೇ ತಂಗೀಯೂ
ಮಾವಾನೇ ಅಳಿಯನೇ
ಮೂರೂ ಜನಾ ಲೊಟೂಕೂಡೀ
ಒಂದೇ ಮನೇಲಿ ಇದ್ದಾರೂ

* ಪ್ರತಿ ಪಾದದ ಕೊನೆಯಲ್ಲೂ "ತೆಂಗೀನ ಬುರುಡೇ' ಎಂದು ಸೇರಿಸಿಕೊಳ್ಳಬೇಕು.

---

* ಬಾರ್ಕೂರ ಹೆರಿಯಣ್ಣ ಸೆಟ್ಟು, ಕೆದ್ಲಾಯ ಕುಂಜಿಬೆಟ್ಟ ಸುಬ್ರಹ್ಮಣ್ಯ, ಹಾಡಿಗೆ ಹನ್ನೆರಡು ಕಬರು ಕ.ಅ.ಸಂಸ್ಥೆ, ಮೈಸೂರು ವಿ.ವಿ. ಮೈಸೂರು-೧೯೭೩, ಪು.ಸಂ.೧೩೩-೧೪೦

## ೭. ಗರತಿ ಗಂಗವ್ವ *

ಅಂಗೈಯಟ ಮುಗಲಾಗ ಲಿಂಗದಟ ಮಾಡಾಗಿ
ಜಂಗಿ ಮಳೆರಾಯ ಸುರದಾನ । ಸೋ । ಭೂತಾಯಿ
ತೊಯ್ದು ಹೊತ್ತಾಳ ಜಲಬಿಂದು ॥ಸೋ॥

ಮಲ್ಲಾಡಕ ಮಳೆಯಾಗಿ ಒಡ್ಲೊಡೆದು ಹಳ್ಳರಿದು
ನಮ್ಮೂರ ಮುಂದ ಹೊರಸೂಸಿ । ಸೋ । ಮಲಪಾರಿ
ಹೊರಚೆಲ್ಲಿ ಊರ ಹೊಕ್ಕಾಳ ॥ಸೋ॥

ಗಂಗ್ಯಳದ ಗರತಿಗೆ ಏಳು ಕೊಪ್ಪರಿಗ್ಹೊನ್ನ
ಆನಿ ಅಂಬಾರಿ ವಾಲಗ । ಸೋ । ದಾರೂತಿ
ಊರ ಓಣ್ಯಾಗ ಸಡಗರ ॥ಸೋ॥

ಊರ ಹಿರಿಯರ ಕೂಡ ಗೌಡ ಸಾರುತ ಬಂದ
ಗರತಿಯಿದ್ದಾಕಿ ಹೊರಬೀಳ । ಸೋ । ಹಡದವ್ವ
ಹೊಳೆಯಳೆದು ಊರ ಉಳಿಸೆಂದ ॥ಸೋ॥

ಓಣಿ ಓಣಿಯ ತಿರುಗಿ ಊರ ಅಗಸಿಗೆ ಬಂದ
ಅಗಸಿ ಮುಂದಾಡು ಬಾಲಯ್ಯ । ಸೋ । ತಾ ಕೇಳಿ
ಗರತಿ ನಮ್ಮವ್ವ ಮನೆಯಾಗೊ ॥ಸೋ॥

ಓಡುತೋಡುತ ಬಾಲ ನಡುಮನೆಗೆ ಬಂದಾನ
ಹಡದವ್ವ ಗರತಿ ಜನಬಂದ । ಸೋ । ಕರೆದಾರ
ಗರತಿ ಗಂಗವ್ವ ಹೊರಬೀಳ ॥ಸೋ॥

ನಮ್ಮೂರ ಹೊಳಿ ಬಂದು ಊರ ಹೊಕ್ಕಳ ತಾಯಿ
ಗರತಿ ಗಂಗವ್ವ ಹೊಳಿ ಅಳಿಯ | ಸೋ | ನಮ್ಮೂರ
ಮುತ್ತೋದಿ ಕಳಸ ಹೊರಬೀಳ ||ಸೋ||

ಅಡಗೀಯ ಮನಿಯಾಗ ಗರತಿ ಬಡವನ ಮಡದಿ
ಅರತೀಲಿ ಕೇಳ ಒಡನುಡಿಯ | ಸೋ | ಹಡದವ್ವ
ಬಾಗೀಣ ಹೊತ್ತು ಹೊರಟಾಳ ||ಸೋ||

ರಂಗ ಪಡಸಾಲ್ಯಾಗ ದಿಂಬದ್ಹಾಸಿಗಿಮ್ಯಾಲೆ
ಇಂಬಿಲೊರಗೀರು ಮಾವಯ್ಯ | ಸೋ | ನಿಮ ಸೊಸಿ
ಗಂಗಿಯಳಿಯಾಕ ಹರಸಯ್ಯ ||ಸೋ||

ಪಗಡಿ ಪಡಸಾಲ್ಯಾಗ ದಗದ ಮಾಡಿಸುವತ್ತಿ
ಮಕ್ಕಳಿಬ್ಬಾರ ಬಲು ಜೋಕೆ | ಸೋ | ಹಡದವ್ವ
ಗಂಗಿಯಳಿಯಾಕ ಹಂಸವ್ವ ||ಸೋ||

ನಡುಮನೆಯ ನಡುಗೀಲ ಒಳಗಿರುವ ನಾದುನಿಯೆ
ಕುಲವಂತಿ ಜೋಕೆ ಒಗತಾನ | ಸೋ | ಗೌರವ್ವ
ಗಂಗಿಯಳಿಯಾಕ ಹರಸವ್ವ ||ಸೋ||

ಎಡಮನೆಯ ಬಾಗಿಲದ ಒಡತಿ ನೀ ನೇಗೆಣ್ಣಿ
ಬಡಿವಾರ ಬ್ಯಾಡ ಮನೆ ಜೋಕೆ | ಸೋ | ಹಡದವ್ವ
ಗಂಗಿಯಳಿಯಾಕ ಹರಸವ್ವ ||ಸೋ||

ಭಾವ ಮೈದುನರಯ್ಯ ನಡು ಹೊಲದ ರೈತಾರ
ಬಿಡುದಿನ ಬ್ಯಾಡ ದರುಮಕ | ಸೋ | ಮನಿಸೊಸಿಗೆ
ಗಂಗಿಯಳಿಯಾಕ ಹರಸರಿ ||ಸೋ||

ಕಡಗೋಲ ಕಂಬದ ನಡುಮನಿಯ ಪಡಿಯಾಗ
ಪಡಿಹೊನ್ನು ಉಂಟು ಎನ್ನರಸ | ಸೋ | ನಾ ಮರಳಿ
ಬರದಿರಕ ನಿಮಗೆ ಬಾಸಿಂಗ ||ಸೋ||

ಚಂದ್ರ ಪಡಸಾಲ್ಯಾಗ ಚಂದ್ರ ಮಂಚದ ಮ್ಯಾಲೆ
ಚಂದ್ರ ನನ ದೊರೆಯೆ ನನ ಮಾತ | ಸೋ | ನಡೆಸರಿ
ಗಂಗಿಯಳಿಯಾಕ ಹರಸರಿ ||ಸೋ||

ಅತ್ತಿಮಾವಗ ಶರಣು ಭಾವ ಮೈದುನ ಶರಣು
ಸುತ್ತಿರುವ ಬಳಗ ನನ ಶರಣ | ಸೋ | ನಮ್ಮೂರ
ಗಂಗಿಯಳಿಯಾಕ ಹರಸರಿ ||ಸೋ||

ಲಿಂಗವಂತರ ಗೆಳತಿ ಶಿವಶರಣಿ ನಾಗಮ್ಮ
ಲಿಂಗದ ಬೆಳಕ ನೀನೀಡ | ಸೋ | ಹಡದವ್ವ
ಗಂಗಿಯಳಿಯಾರ ಚರದವ್ವ ||ಸೋ||

ಹಾದೀಯ ಗೆಳತೇರ ಬೀದೀಯ ಕೆಳದೇರ
ಜಾದಮಲ್ಲೀಗೆ ಮುಡಿಯಾವ | ಸೋ | ಐದೇರ
ಗಂಗಿಯಳಿಯಾಕ ಪರಸರ ||ಸೋ||

ಭೂತನಾಥಗ ಶರುಣ ಪಂಚಲಿಂಗಗ ಶರಣು
ದೈವ-ದೇವರಿಗೆ ನನ ಶರಣು | ಸೋ | ನಮ್ಮೂರ
ಗಂಗಿಯಳಿಯಾಕ ಹರಸರಿ ||ಸೋ||

ಊರ ದೈನರ ಕೂಡ ಊರ ಗೌಡನಕೂಡ
ಗರತಿ ಗಂಗವ್ವ ನಡೆದಾಳ | ಸೋ | ಹೊಳೆದಂಡೆ
ಮಲಪಾರಿ ಚೆಲ್ಲಿ ಹರಿಯೂಳ ||ಸೋ||

ಹೊಳೆ ತಾಯಿ ಗಂಗವ್ವ ಕಿರಿಯಾಗಿ ಹರಿಯವ್ವ
ಮುತ್ತೋದಿ ಬಾಗೀಣ ನಿನಗೀವೆ | ಹೋ | ಮಲಪಾರಿ
ನನ್ನೂರ ಸಲುಹ ಸಿರಿಯಾಳ ||ಸೋ||

ಅಂಗದ ಮೇಲಿರುವ ಲಿಂಗಯ್ಯ ನಿನ ನೆನೆದು
ಗಂಗಿಯಳೆಯೂವೆ ಐಮೊರವ | ಸೋ | ಹೊಳೆಗಂಗಾ
ಸಂಗ ಬಗೆಸೀನೆ ಕಡೆತನಕ ||ಸೋ||

ಉರ್‍ಲೊಕ್ಕ ಹೊಳೆಗಂಗಾ ಗರತೀಯ ಕೊಚಗೊಂಡು
ಒದ್ದಲಕ ಬಿದ್ದು ಹರಿದಾಳ | ಸೋ | ದೇಶಕ
ಗರತಿ ಗಂಗವ್ನ ಹೆಸರಾತ ||ಸೋ||

---

* ಗರತಿ ಗಂಗವ್ವ, ಗದ್ದಗಿಮಠ ಬಿ.ಎಸ್. ಜನತಾಗೀತೆಗಳು ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ ೧೯೫೭, ಪು.ಸಂ.೮೦-೮೩

# ೮. ಅತುಮವ್ವಿ*

ಹತ್ತೇಳು ಗೆಂsssಟ ಬಣ್ಣಿಸಿ ಗೆಂಟನೆ ಕsಟ್ಟಿ
ಸುತ್ತೇಳು ಬೂಲೋಕಕೆ ವಗುದsನೆs

ಸುತ್ತೇಳು ಬೂಲೋಕಕೆ ವಗುದsನೆs
“”ಪತುವರತಿಯಿದ್ದಲ್ಲಿss ಯರುsಗಲಿss”

ಕೇಳ್ವೆನಂಬರಿಗೆs ಹೇಳದಿದ್ದರೆ ದೋಸs
ಕೇಳು ಕೇಳದs ವರುಗsರೆs ಅದು ದೋಸs
ಸುತ್ತೇಳು ಬೂಲೋಕ ತಿರುಗssದೆss ಆಗೆಂಟುss

ಹಿಂತಿರುಗಿ ಮನುಗೇss ಬಂದದೆs ಆಗೆಂಟು
ಅತುಮವ್ವೀ ಬುಡದಲ್ಲಿs ಅರುsಗದೆs

ಅಟ್ಟಂಬೂ ಮಾತss ಕೇಳನೆs ದೊರುರಾಯs
ಏನಂದೀ ನುಡಿಯs ನುಡುದsನೇss ?

ನೀ ಪತುವರತಿಯಾsದರೆs ಹೆಡುಗೆಲಿ ಹೊರದವs
ಗುದ್ಲೀಲಿ ಕಡಿದವ ನೀ ನಿತ್ತಲ್ಲಿ ಬಾsವೀs ತೆಗಿಬೇsಕುs

ನೀ ನಿತ್ತಲಿ ಬಾವೀss ತೆಗಿದದುಂಟಾದsರೇ
ನೀ ಪತುವರತೀ ಶಯ್ಯಿss ದೊರಿಯಲ್ಲೀs”

ಅಟ್ಟಂಬೂ ಮಾತಾsss ಕೇಳದೆs ಅತುಮವ್ವಿs
ಮುತ್ತಿsನ ಕಣ್ಣೀರs ಶಡುದದೆs

ತುತ್ತೆ ತುತ್ತೆ ಜೀವs ತುತ್ತೆ ತುತ್ತೆ ಜೀವsಕೆ
ತುತ್ತೆ ಹೊಣಿಯಾಗೆ ಬಂತುs”

ಅಟ್ಟಂಬೂ ಮಾತsss ಹೇಳದೆ ಅತುಮವ್ವಿss
ಮಾಳುಗಿ ವಳಗೆss ನಡುದsದೇs ಅತುಮವ್ವಿs

ಅಚ್ಚ ಕಂಬೆಣ್ಣೆsss ತಲಿಗೆರುದಿs (ತಲುಗೆರುದಿ) ಅತುಮವ್ವಿs
ಬಾಚಿ ಕಟ್ಟದೆಯೇsss ಶಿರಿಮುಡಿs ಅತುಮವ್ವೀs

ಕತ್ತಿ ಕಾಯ್ಗೊಳsss ತಡುದದೆs ಅತುಮವವೀss
ಯೀಳಿ ಪಟ್ಟೆಯsss ತೊಟ್ಟದೆs

ಅತುಮನ್ವಿ ಮುಂದಾಗಿ ಗೌಡಿರು ಹಿಂದಾಗಿ
ಮೂಡ್ಲನ ಮೊಕವಾಗಿ ನೆಡದಾರೆ

ಮೂಡ್ಲನ ಮೊಕವಾಗಿ ನೆಡದದೆ ಅತುಮವ್ವಿs
ಈಳಿ ಪಟ್ಟೆಯ ಅರುಗದೇs ಅತುಮವ್ವಿs

ಕಾಯೊಡುದಿ ಕಯ್ಯsss ಮುಗುದದೆs
ಕಾಯೊಡುದಿ ಕಯ್ಯss ಏನ್ಹೇಳಿ ಮುಗುದದೆs

“”ಗುದುಲಿಲಿ ಕಡಿಯsದs ಹೆಡುಗಿಲಿ ಹೊರದವs
ನಿತ್ತಲಿ ಬಾವಿs ಆಗಬೇಕುs”

ಗುದುಲೀಲಿ ಕಡಿಯದs ಹೆಡುಗೀಲಿ ಹೊರುದss
ನಿತ್ತಲಿ ಬಾವಿ ಆಗsದೆs

“”ಕೇಳಿ ಕೇಳಿ ಗೌಡಿರs ಶೇದುವ ನೇಣs ಕೊಡುಪಾನs
ಶೇದುವs ನೇಣss ಕೊಡುಪಾನದಲ್ಲೀss

ನೀರೆಲ್ಲs ಇನ್ನೇss ತುಂಬುಕsಳಿss”
ಕೊಡುವನ ಚಂಬುನಾಗೇs ಉದುಕವ ತುಂಬುಕಂಡೀ

ಗೌಡಿರು ಹಿಂದಾಗೀ ಅತುಮವಿ ಮುಂದಾಗೀ
ದೊರುಗಳ ಬಳಿಯಲಿ ನೆಡುದಾರೆs

“”ಉಪ್ಪುರಗಿ ಮೇನೇs ಕುಂತಿರು ದೊರುರಾಯ್ರೇs’
ಕೈಕಾಲು ಮೊಕವs ತೊಳುಕsಳಿs”

“”ಗೆದ್ದೆಗೆದ್ದೇಳೀ ಹೊಸುನೆಗಿs ನುಡಿಬೇಡs
ಮತ್ತೊಂದುs ನುಡಿಯs ನುಡಿತೆನೆs”

ಮತ್ತೊಂದುs ನುಡಿಯss ಏನೇಳಿs ನುಡುದಾನೆs ?
“”ಹೆಡುಗೆಲಿ ಹೊರುದs ಗುದ್ಲಿಲಿ ಕಡಿಯsದs

ನೀ ನಿತ್ತಲಿs ಮನಿಯ ಮಾಡುಬೇಕುs
ನೀ ನಿತ್ತಲಿs ಮನಿಯ ಮಾಡದುಂಟಾದsರೇs

ನೀ ಪತುವರತೀ ಶರಿಯೇss ದೊರುದಲ್ಲಿs”
ಅಟ್ಟಂಬೂ ಮಾತss ಕೇಳದೇss ಅತುಮವ್ವೀs

ಮಾಳುಗೀ ವಳುಗೇ ನಡುದದೆ ಅತುಮವ್ವಿs
ಅಚ್ಚ ಕಂಬೆಣ್ಣೀ ತಲಿಗೆರುದೀs ಅತುಮವ್ವಿs

ಬಾಚಿ ಕಟ್ಟದ್ಯೇs ಶಿರಿಮುಡೀ ಅತುಮವ್ವಿs
ಕತ್ತಿ ಕಾಯ್ಗೊಳಾ ತಡುದsದೇss ಅತುಮವ್ವಿs

ಹಣ್ಣು ಈಳ್ಯಾವಾss ತಡುದದೇs ಅತುಮವ್ವಿs
ಗೌಡೀರ ಬೆನ್ನಿಗೇss ಕರುಕಂಡೀss

ಗೌಡೀರ್ ಹಿಂದಾಗೀ ಅತುಮವ್ವಿ ಮುಂದಾಗೀ
ಮೂಡ್ಲಾನ್ ಮೊಕುವಾಗೀs ನಡುದದೇs ಅತುಮವ್ವಿs

ಹಣ್ಣು ಯೀಳ್ಯವ ಅರುಗದೆs ಅತುಮವ್ವಿs
ಕಾಯೊಡೆದಿ ಕಯ್ಯsss ಮುಗುದದೆss

ಕಾಯೊಡೆದಿ ಕಯ್ಯsss ಏನ್ಹೇಳಿ ಮುಗುದದೆss
“”ನಿತ್ತಲಿ ಮನಿಯೇss ಆಗುಬೇಕು”

ಗುದುಲಲಿ ಹೊರುದವs ಹೆಡುಗಿಲಿ ಕಡಿಯದs
ನಿತ್ತಲಿ ಮನಿಯೇ ಆಗsದೇs

“”ಹನ್ನೆಯ್ಡಂಕಣದ ಮನ್ಯೇs ಮೂರಂಕ್ಣs ಚೌಕೀಯೇs
ತೂಗೂ ಹುಯ್ಯಲss ಶರಿಯಾಗೀss

ತೂಗೂ ಹುಯ್ಯಲss ಶರಿಯಾಗೀss ಆಗುಬೇಕು”
ಹನ್ನೆಯ್ಡಂಕಣದ ಮsನೇs ಮೂರಂಕ್ಣs ಚೌಕೀಯೇ

ತೂಗು ಹುಯ್ಯಲss ಶರಿಯಾಗೀss ಆದದ ನೋಡೀs
ದೊರೆರಾಯ್ನs ಬಳಿಗೇ ಬರುವsದೇs

ದೊರೆರಾಯ್ನs ಬಳಿಗೇ ಬಂದೇನs ಅಂಬೂದೇs ?
“”ಹನ್ನೆಯ್ಡಂಕಣದ ಮನ್ಯೇ ಮೂರಂಕಣ ಚೌಕೀಯೇs

ತೂಗು ಹುಯ್ಯಲs ಶರಿಯಾಗೀs ದೊರುಗೋಳೇ
ಹುಯ್ಯಲಾಡುವss ಬನಿ ನೀವುs”

“”ಗೆದ್ದೆಗೆದ್ದೆಂದೀss ಹೊಸುನೆಗೀ ನೆಗಿಬೇಡs”
ಮತ್ತೊಂದು ನುಡಿಯs ನುಸುದನೇs

ಮತ್ತೊಂದು ನುಡಿಯs ಏನ್ಹೇಳಿ ನುಡುದsನೇ ?
“”ಗುತ್ತಿನಲ್ಲಿರುವssss ಮಣಿನಾಗsssss

“”ಗುತ್ತಿನಲ್ಲಿರುವssss ಮಣಿನಾಗನ ತಂದರೆs
ನೀ ಪತುವರ್ತಿ ಶಯ್ಯೇs ದೊರಿಯಲ್ಲಿs”

ಅಟ್ಟಂಬೂ ಮಾತs ಕೇಳಲೆ ಅತುಮವ್ವೀ
ಮಾಳುಗಿ ವಳಗೇs ನೆಡದಳೇs

ಮಾಳುಗಿ ವಳಗೇs ನೆಡದದೇ ಅತುಮವ್ವಿs
ಅಚ್ಚ ಕಂಬ್ಯೆಣ್ಣೇ ತಲುಗ್ಯೆರದೀs ಅತುಮವ್ವಿs

ಬಾಚಿ ಕಟ್ಟಿದೆs ಶಿರಿಮುಡೀs ಅತುಮವ್ವಿs
ಹಣ್ಣು ಈಳ್ಯವs ತಡುದದೇs ಅತುಮವ್ವಿs

ಕತ್ತಿ ಕಾಯ್ಗೊಳs ಹಿಡುದದೇ ಅತುಮವ್ವಿs
ತಟ್ಯಲ್ ಹಾಲಿನ್ನೇs ಯರುಸ್ಕಂಡೀs ಅತುಮವ್ವಿ

ಗುತ್ತಿನಲ್ಲಿsನ್ನೇ ನಡುದದೇs ಅತುಮವ್ವಿs
ಗುತ್ತಿನಲ್ಲಿsನ್ನೇ ಕಾಯೊಡದಿ ಕಯ್ಯ ಮುಗುದsದೆ

ಗುತ್ತಿನಲ್ ಹಾಲs ಲಿಟ್ಟಿದೆs
“”ಸತಿವಂತ ಮಣಿನಾಗ
ಸತ್ತಿದಿಂದಿನ್ನೆ ಬರುಬೇಕು”

ಈಳಿs ಹಣ್ಣು ಅರುಗದೆ ಅತುಮವ್ವಿs
ಕಾಯೊಡದು ಕಯ್ಯ ಮುಗದದೆ ಅತುಮವ್ವಿ

ಹಾಲಿಟ್ಟ ಹೇಳ್ಕಿ ಮಾಡsದೆ ಅತುಮವ್ವಿ
“”ನೀ ಸತ್ತಿದಿಂದ್ಹಾಲs ಮೆಲಿಬೇಕು”

ಅಬ್ಬೆ ಮರಿಯಿನ್ನೆs ಬಂದ ಆಗಿನ್ನೇss
ಹಾಲೊಂದು ಬಾರಿ ಮೆಲುದದೆs

ಕಾಲಿಗೆ ಗಗ್ರಂದೀ ಲೊಂದೋದೇ ಲಿಟ್ಟದೇ
ಕಯ್ಯಿಗೆ ಬಳ್ಯಂದೀ ಲೊಂದೊಂದೇ ಲಿಟ್ಟದೇ

ಸುರ್ಗಿ ದಂಡ್ಯಂಡೀ ಮುಡಿಮೇನೆ ಮುಡುದದೆ
ಸೊಂಟಗೊಂದು ಪಟ್ಟೇ ಯಿಟ್ಟಳೀ

ಅಟ್ಟಲ್ಲಾ ಹೊತುಕಂಡೀ
ಹಿಂತಿರ್ಗಿ ಮನಿಗೇ ಬರವದುs

ಹಿಂತಿರ್ಗಿ ಮನಿಗೇ ಬರುವಳಿ ಅತುಮವ್ವಿs
ದೊರಿರಾಯ ಬಳುಗೆ ನಡಿದದೇ

ದೊರುರಾಯಿದ್ ಬಳಿಗೆ ಹೋದಗಡೆ ಆಕ್ಷಣ
“”ನೀ ಹಾವಡಿಗಾನs ಮಗುಳೇನೆ?

ಹಾವನೆ ಹೊತ್ತಿದೀ ಹಾವನೆ ಮುಡುದೀದೀ
ನೀ ಹಾವಡಿಗಾನs ಮಗುಳೇನೆ ?

“”ನಾ ಹಾವನೆ ಹೊತ್ತನೇ ನಾ ಹಾವನೆ ಮುಡಿದನೇ
ನಾ ಹಾವಗಡಗನs ಮಗುಳೆ ಶ್ಯೆ ಯಲುಸ್ವಾಮೀ

ನಿಮುಗೊಂದಿಡುತನೇ ವೊಲುಮಲಿಯಾsss
“”ಸಾಕೇ ಸಾಕೆ ಮಡುದೀ ನಿನ್ ಪಾದಕೆ ಶರುಣಂಬೇ

ನೀ ಇಟ್ಟ ವನಮಾಲಿಯುs ತಗಿಬೇಗs
ಅಟ್ಟಂಬೂ ಮಾತs ಕೇಳಳೆ ಅತುಮವ್ವಿs

ಹಿಂತಿರುಗೀ ಗುತ್ಗೇ ನೆಡುದದೆs ಅತುಮವ್ವಿs
ತಾ ಇಟ್ಟ ಮಾಲಿ ತೆಗುದದೆ ಅತುಮವ್ವಿ

“”ನಿಮ್ಮ ಗುತ್ತಿಗೆ ನೀವು ಹೋಗಿನ್ನೆsss
ಅಟ್ಟಂಬೂ ಮಾತs ಹೇಳದೆ ಅತುಮವ್ವಿs

ಅವರವರ ಗುತ್ತಿಗೆ ನೆಡುದವ್ರೇs
ಅವರವರ ಗುತ್ತಿನಲ್ಲಿ ಹೋದದs ನೋಡಿಕಂಡೀ

ಹಿಂತಿರುಗಿ ಮನಿಗೆ ನಡುದದೆ
ಹಿಂತಿರುಗಿ ಮನಿಗೆ ಬಂದದs ನೋಡಿಕಂಡೀ

ಮತ್ತೊಂದು ನುಡಿಯs ನುಡುದನೇs
ಮತ್ತೊಂದು ನುಡಿಯs ಯೇನ್ಹೇಳಿ ನುಡುದನೇ ?

“”ನೀ ತೆರೆಯಳಿದೀ ಮನಿಗೇ ಬರುಬೇಕು
ನೀ ತೆರೆಯಳಿದೀ ಮನಿಗೇ ಬಂದದುಂಟಾದರೆ

ನೀ ಪತುವರ್ತಿ ಶೈಯೇ ದೊರೆಯಲ್ಲಿs”
ಅಟ್ಟಂಬೂ ಮಾತ ಕೇಳದೆ ಅತುಮವ್ವಿs

ಹಿತ್ತಲ ಕಡೆಗೇssss ನಡೆದsದೇ
ಹಿತ್ತಲ ಕಡುಗೇ ನಡುದs ಅತುಮವ್ವಿs

ಮುತ್ತಿನ ಕಣ್ಣೀರsss ಶಡುsssದsಳೇ ಅತುಮವ್ವಿs
ಮಾಳುಗಿ ವಳುಗೇssss ನೆಡುದsಳೇ ಅತುಮವ್ವಿs

ಬಾಚಿ ಕಟ್ಟದೆಯೇs ಶಿರಿಮುಡಿೀsss ಅತುಮವ್ವಿ
ಮುತ್ತಿನ ಕಣ್ಣೀರsss ಶಡುsದದೆಯೇ ಅತುಮವ್ವಿ

ವಸ್ತಲದ ಮೆಟ್ಟs ಲಿಳುದದೆಯೇ
ವಸ್ತಲದ ಮೆಟ್ಟss ಲಿಳಿದು ಹೋೀಗಿನ್ನೆs

ಲತ್ತುಗಿಯರುಮನುಗೇssss ನಡುದದೇss
ಅತುಮನ್ವಿ ಬರುಬರವಾssss ಅಟೂದೂರ ಕಂಡsಳೆ

ತಟ್ಟಳ ತಂಬುಗಿಲಿ ಹನಿಯುದಕs ತಟ್ಟಿಕಂಡೀ
ಕೈಕಾಲ ಸಿರಿಮೊಕವss ತೊಳುದsಳೇ ಅತುಮವ್ವಿs

ಪಟ್ಟೆ ಮಂಚದ ಮೇನೇsss ಕುಳುವಳೇ
“”ಯಾವಾಗ ಬರುವಾಗೆ ನೆಗಿಯುಂಟು ನುಡಿಯುಂಟೇ

ನಿನುಗಾರು ಕೊಲ್ವರೇ ನಿನುಗಾರೆ ಬಯ್ವರೇ ?
ನಿನಗಾರು ಕೊಂದನುಡ್ಯs ನುಡಿದsರೇ ?”

“”ನಂಗ್ಯಾರು ಕೊಲ್ಲೂರೇ, ನಂಗ್ಯಾರುs ನುಡಿಯೂರೇ ?
ನಿನ್ನಷ್ಣೋರು ಕೊಲ್ವ ನುಡಿಯs ನುಡಿದಾರೇ

ನಿನ್ನಿಂದಾನ ಲತ್ತುಗೇ ನಿನ್ನಿಂದೇಗ ಲತ್ತುಗೇs
ನಿನ್ನಿಂದೇ ಇದುವಂದ ನಡಿಯಲೇs”

ಅಟ್ಟಂಬೂ ಮಾತs ಕೇಳದೆ ಲತುಮವ್ವಿs
ಶಣ್ಣಲ್ಗೆ ಮನಿಗೇssss ನೆಡಿದಾಳೇ

ಅತ್ತುಗಿ ಬರುಬರುವಽ ಅಟದೂರ ಕಂಡಳೇ
ತಟ್ಟಳ ತಂಬಿಗಿಲೀ ಹನಿಯುದುಕಽ

ಅತ್ತುಗಿ ಕೊಟ್ಟಽ ನೀರಽ ಬಲುಗೈಲಿ ತೊಟ್ಟಕಂಡೀ
ಕೈಕಾಲು ಶಿರಿಮೊಕುವಾಽ ತೊಳುದಾಳೆ ಅತುಮವ್ವಿ

ಪಟ್ಟೆ ಮಂಚದ ಮೇನೇಽಽಽಽ ಕುಂತಽಳೆ
“”ಯಾವಾಗ ಬರುವಾಗೇಽಽ ನೆಗಿಯುಂಟು ನುಡಿಯುಂಟು

ಇದುವೇನೆ ಅಽತ್ತುಗೀ ಮೊಕಬಾಡೀಽಽ?
ನಿನಗ್ಯಾರು ಕೊಂದಽರೇ ನಿನಗ್ಯಾರು ಬಯ್ದಽರೇ ?

ನಿನಗ್ಯಾರು ಕೊಂದ ನುಡಿಯಽಽಽಽ ನುಡಿದಾರೇ ?”
“”ನಂಗ್ಯಾರು ಬಯ್ವರೇ ನನಗ್ಯಾರು ಬಯ್ವರೇ ?

ನಿನ್ನಣ್ಣೋರು ಕೊಂದಽ ನುಡ್ಯಽಽಽಽ ಬಯ್ವರೇ
ನಿನ್ನಿಂದಾಗ ಲತ್ತುಗೇ ನಿನ್ನಿಂದೇ ಹೋಗ ಲತ್ತುಗೇ

ನಿನ್ನಾದೇ ಇನ್ ವಂದಽಽಽಽ ನೆಡಿಯಽಲೀ
ಅಟ್ಟಂಬೂ ಮಾತಽಽ ಕೇಳದೆ ಅತುಮವ್ವಿಽ

ಹಿಂತಿರುಗಿ ಮನುಗೇ ಬಂದದೇ ಅತುಮವ್ವಿ
ತೆಂಗಿನಽ ಬನುಕೇಽಽಽ ನೆಡುದದೇ

“”ಕಾಯ ತಿನುಬೇಕ್ಡೇಳಿ ತೆಂಗ ನಾನೆಟ್ಟೇಽದ್ದೇ
ತಿಂಗಗೆ ನಂಗೇಽಽಽಽ ರುಣವೆಲ್ಲಽ

ಕಾಯ ತಿಂಬರಽಽವ್ರೇ ಕಾಯಗೆ ನೀರ ಯರವರಿಽಲ್ಲಽಽಽ
ನಾ ಬತ್ತೆ ನಿನ್ನಽಽಽಽ ನೆಳುಲೀಗೇಽಽಽ

ಅಡಕೀ ತೋಟಕ್ಹೋಗೀ ಯೇನಂದೇ ನುಡಿದಽಳೇ ?
“”ಅಡುಕೀಗೆ ನಂಗೇಽಽಽಽ ರುಣವೆಲ್ಲಽಽಽಽ

ಅಡುಕಿ ತಿಂಬರಽಽವ್ರೇ ಲಡುಕೀಗ್ ನೀರ್ ಯರವರಿಽಲ್ಲಽಽಽ
ನಾ ಬತ್ತೇ ನಿನ್ನಽಽಽಽ ನೆಳುಲೀಗೇಽಽಽ”

ಜಾಜೀ ಹೊನಕೋಗಿ ಯೇನಂದೇ ನುಡುದಾಳೇ ?
“”ಜಾಜಿಗೆ ನನಗೇಽಽಽಽ ರುಣವೆಲ್ಲಽಽಽಽ

ಜಾಜಿ ಮುದ್ವsರವ್ರೇ ಜಾಜಿಗ್ ನೀರ್ ಯರವರಿsಲ್ಲsss
ನಾ ಬತ್ತೇ ನಿನ್ನssss ನೆಳುಲೀಗೇsss"

ಜೂಜೀ ಬನುಕ್ಹೋssಗೀ ಯೇನಂದೇ ನುಡುದsದೆss ?
""ಜೂಜಿಗೆ ನನಗೇssss ರುಣವೆಲ್ಲssss

ಜೂಜಿ ಮುದ್ವರವ್ರೇ ಜೂಜಿಗ್ ನೀರ್ ಯರವರಿಲ್ಲsss
ನಾ ಬತ್ತೇ ನಿನ್ನssss ನೆಳುಲೀಗೇsss"

ಅಟ್ಟಂಬೂ ಮಾತsss ನುಡುದದತುಮವ್ವಿs
ಮಾಳೂಗಿ ವಳಗೇsss ನಡುದsದೇ

ಚಿನ್ನದ ಪೆಟ್ಗೆಗ್ಹೋಗೀ ಯೇನಂದೇ ನುಡುದಳೇ ?
""ದೊರೆ ಚಿನ್ನಕೆ ನನಗೇs ರುಣವೆಲ್ಲsss"

""ಚಿನ್ನಗೋಳ ಮೈತುಂಬ ಇಟುಕsಳೇ ಮಡುದೀs
ನಿನ್ ನೋಡಿ ನಾನು ಸಂತೋಸs ಬಿಡತೇನೇ"

""ಪೆಟಿಗೀಯs ಚಿನ್ನs ಗೌಡೀರ್ಗೆ ಇಟುಕsಣೇ
ಗೌಡೀರ ನೋಡಿ ಸಂತೋಸssss ಬಿಡಬೌದುs"

ಪಟ್ಟೆ ಪೆಟ್ಗೆಗ್ಹೋಗಿ ಯೇನಂದೀ ನುಡಿದsದೇ ?
""ಪಟ್ಟೆ ಉಡುವಲ್ಲೀssss ರುಣವಿಲ್ಲs"

ಪಟ್ಟೆಯs ಸೀರೀssss ನೆಡು ತುಂಬಿ ಇಟುಕsಳೇ ಮಡದೀs
ನಿನ್ ನೋಡಿ ಸಂತೋಸs ಬಿಡತೇನೇ"

ಪಟ್ಟೆ ಸೀರಿಯssss ಗೌಡೀರ್ಗೆ ಉಡಿಸ್ಕsssಳೀ
ಅವರ ನೋಡಿ ಸಂತೋಸssss ಬಿಡಬೌದುs"

ಅಟ್ಟಂಬೂ ಮಾತssss ನುಡುದಳತುಮವ್ವೀ
ಮಾಳೂಗಿ ವಳುಗೇsss ನೆಡುದದೇ

ಬಾಚಿ ಕಟ್ಟದ್ಯೇssss ಶಿರಿಮುಡೀ ಅತುಮವ್ವಿs
ಬಿದ್ದ ಮಾರಿಗವssss ಹಿಡಿದsಳೇ ಅತುಮವ್ವಿ

ತೌರ ಮನಿಗಿನ್ನೇsss ನೆಡುದsದೇss
ದನುಕಾವ ಮsಕ್ಕಳಿರಾ, ಕುರಿಕಾವೂ ಮsಕ್ಕಳಿರs

ತೌರ ಮನಿಗ್ಹೋಗು ಹಾದೀ ತೋರಿ ಕೊಡಿ"
ತೌರ ಮನಿಗ್ಹೋಗು ಹಾದೀ ತೋರಿ ಕೊಡಿ ಲಂದೀ

ಈಳಿ ಯೆಡಕಾಗೀ ಬಾಳೀ ಬಲುಕಾಗೀ
ಅಲ್ಲುಂಟು ನಿನ್ನsss ತೌರಮನೀ"

ಅಟ್ಟಂಬೂ ಮಾತsss ನುಡುದರೆ ಆ ಮಕ್ಕಳು
ಅಪ್ಪನ ಮನಿಗಿನ್ನೆ ಓಡ್ ಹೋದ್ರು

ಅಪ್ಪನ ಮನಿಗಿನ್ನೆ ಓಡ್ ಓಡೋಡಿ ಹೋಗೀ
ತಾಯಿ ತಂದೆ ಕೂಡೇ ನುಡಿದಾರೇ

ಮಂದಿ ಮಾರ್ಬಲs ಯೇನೊಂದೂ ತರುಲಿಲ್ಲs
ಕಾಲ್ಹಾದಿಲಿ ನಿನ್ ಮಗಳು ಬರುತsದೆ

ಅಟ್ಟೊಂದು ಮಾತ ಕೇಳಾನೆ ಅಪ್ಪಯ್ಯ
ಬೇಕಾದ ಪಾಲುಕಿ ಕಳುಗನೆ ಅಪ್ಪಯ್ಯ

ಮಂದಿ ಮಾರ್ಬಲವsss ಕಳುಗsನೇ
""ಮಂದಿ ಮಾರ್ಬಲವsss ಬೇಡs ಪಾಲುಕಿ ಬೇಡ ನಂಗೇ

ನಾ ಕಾಲ್ನಡಿಗೀಲೆ ಬತ್ತೆ"ಳಿ ನುಡಿದದೇ
ಕಾಲ್ನಡಿಗೀಲಿನ್ನೆ ಹೋಗದಲಪ್ಪನ ಮನುಗೇ

""ಯಾವಾಗ ಬರವಾಗೆ ನೆಗೆಯುಂಟು ನುಡಿಯುಂಟು
ಇದು ಯೇನೆ ಮಗಳೇ ಮೊಕ ಬಾಡೀ ?"

""ಯೇನಲ್ಲ ತಾಯೇ ಯಂತಲ್ಲ ತಾಯೇs,
ನಾ ತೆರೆಯಳದೀ ಮನೆಗೇ ಬರುಬೇಕೇ

ನಾ ತೆರೆಯಳದೀ ಮನೆಗೇ ಬಂದದುಂಟಾದರೆ
ನಾ ಪತಿವ್ರತಿ ಶ್ಯೆಯೇ ದೊರಿಯಲ್ಲೀ

ನನ್ನಂದೆ ಬಂದುಗೊಂದು ಪತ್ರ ಇನ್ನೇ ವಂದ ಕೊಡುಬೇಕೆ"
ಅಟ್ಟಂಬೂ ಮಾತs ನುಡಿದsದೆ ಯೇನ್ಹೇಳಿs ?

""ದೇವಲೋಕಕ್ ವಂದ್ ವಾಲೀ ಬರಿಬೇಗs
ದೇವಲೋಕದ ಚಿನ್ನs ದೇವಲೋಕದ ಪsಟ್ಟೇ

ದೇವಲೋಕದ ಕೊಳಗsss ಬರುಬೇಕುss
ಅತ್ತಿ ಮರುಕೋಗಿ ಹತ್ತು ಸುತ್ತು ತಿರುಗsದೇ

“”ಇದು ಯೇನೆ ಮಗುಳೇ ವಿಪರೀತ?”
“”ಬೇಡುಕೆ ಬಂದೋರ್ಗೆ ಪಡಿಯನ್ನು ಹಾಕಿದ್ದೇ

ಕುಳ್ಳೆಂದೇ ವಂದ ಮಣಿಯ ಕೊಡಲೆಲ್ಲ
ಕುಳ್ಳೆಂದೇ ವಂದ ಮಣಿಯ ಕೊಡ್ಲೆಲ್ಲೆಂದ್ಹೇಳಿ

ಆ ಪಾಪ್ಕೆ ಹತ್ತು ಸುತ್ತ ತಿರುಗೂತೇss
ಅಸುವಂತs ಮರುಕೋಗೀ ಐದ್ ಸುತ್ತ ತಿರುಗಾದೇ

“”ಇದು ಯೇನೆ ಮಗುಳೇ ವಿಪರೀತs?”
ಬೆಂಕಿಗ್ ಬಂದರ್ಗೆs ಬೆಂಕಿ ಕೊಟ್ಟೆsದ್ದೇ

ಕುಳ್ಳೆಂದೇ ಕವಳsss ಕೊಡುಲಿಲ್ಲs
ಕುಳ್ಳೆಂದೇ ಕವಳsss ಕೊಡುಲೆಲ್ಲ” ಅಂದ್ಹೇಳಿ

ಆ ಪಾಪ್ಕೆ ಐದ್ ಸುತ್ತsss ತಿರುಗೀದೇsss ತಾಯವ್ವ
ಬೇಗದಿಂದಡುಗೀ ಅನುಮಾಡೇsss ತಾಯವ್ವs

ಲೂಟಕ್ಕೆ ನನಗೇs ಅನುಮಾಡೇss ತಾಯವ್ವs
ಯಲ್ಲವ್ರ ನೆಡುಗಿನ್ನೇ ಕುಂತಿನ್ನೆssss

ಯಲ್ಲವ್ರ ನೆಡುಗಿನ್ನೇ ಕುಂತೂಟ ಮಾಡೀ
ಅಟ್ಟಂಬೂ ಹೊತ್ತಿಗೆ ದೇವಲೋಕದ ಸಾಮಾನ ಬರವsದೇ

ದೇವಲೋಕದ ಚಿನ್ನ ದೇವಲೋಕದ ಪಟ್ಟೆ
ದೇವಲೋಕದ ಕೊಳಗss ಬರುವಾದೇss

ದೇವಲೋಕದ ಪಟ್ಟೆ ಉಟಕಂಡ್ತು
ದೇವಲೋಕದ ಚಿನ್ನ ಇಟ್‌ಕಂಡ್ತು

ದೇವಲೋಕದ ಕೊಳಗ ತೊಟ್ಟಕಂಡ್ತು
ದೇವಲೋಕದ ಕೊಳಗ ತೊಟ್ಟೀಯ ಕಂಡೀ

ಮಂದಿ ಮಾರ್ಬಲssss ತೆಗದಕಂಡೀ
ತಾಯೀ ಮುಂದಾಗೀ ಅಪ್ಪ ಹಿಂದಾಗೀ

ತೆರಿಯಳುಕೆ ಲತುಮವ್ವೀ ನೆಡುದsದೇ ಇನ್ನೇ
ಚಿನ್ನದ ಮಣಿಯssss ಲಿಟುಕಂಡೀ

ಚಿನ್ನದ ಮಣಿಯssss ಲಿಟಕಂಡ್ತು ಅತುಮದ್ವಿs
ಮಣಿಮೇನೆ ಇನ್ನೇssss ಕುಂತ್ಕಂತೇsss

ಮಣಿಮೇನೆ ಕುಂತ್ಕಂಡೀ ಚಿನ್ನದ ಕೊಳಗ ಇಟುಕಂಡಿ ಇನ್ನೆ
ಸಂದ್ರದ ಕೆರಿಯssss ಲಿಳುದsದೆ

ಸಂದ್ರದೆ ಕೆರಿಯssss ಲಿಳುದs ಅತುಮವ್ವಿs
ವಂದ ಕೊಳಗೆ ಹೊಯ್ದೀ ಮತ್ತೊಂದ್ ಕೊಳ್ಗ ಅಳಿತು

ಎರಡ ಕೊಳಗ ನೀರ ಅಳದsದೇ ಅತುಮವ್ವಿs
ಮೂರನೆ ಕೊಳಗss ತುಂಬಲೆಲ್ಲ ಅತುಮವ್ವಿs

ಆ ಕೊಳಗದಗೆ ಇನ್ನೇ ಕುಂತದೇ
ಆ ಕೊಳಗದಲ್ಲೆ ಕುಂತದ ನೋಡಿಕಂಡೀ

ಆ ಕೊಳಗ ಇನ್ನೇssss ತುಂಬಿತುs
“”ಕೂಡೆ ನಿತ್ತsರ ಇನ್ನೇನ ನೋಡೀರೀ ?

ಆ ತಾಯ ಕಯ್ಯss ಹಿಡಕಳ್ಳಿ
ಆ ತಾಯ ಕಯ್ಯssss ಹಿಡಿರಪ್ಪ ಕೋಣೇಲಿ ಹಾಕಿನ್ನೇss

ನಾಗಬೂಸಣದ ಕದ ಜಡೀರೀ
ಕೂಡೆ ನಿತ್ತವ್ರsss ನೀವೇನ ನೋಡೂರೀ ?

ಆ ದೊರೆ ಕಯ್ಯssss ಹಿಡಿರಪ್ಪsss ನೀವಿನ್ನೇ
ನಾಗಬೂಸಣದssss ಕದ ಜಡಿರೀ

ನಾಗಬೂಸಣದs ಕದ ಜಡಿದು ಅತುಮವ್ವಿs
ದೇವಲೋಕಕ್ ಅತುಮವ್ವೀssss ನಡಿದದೇss

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧. ಏಳು ಸಮುದ್ರ ಅಳೆದ ನಾರಿ; ಹೆಗಡೆ ಎಲ್.ಆರ್. ತಿಮ್ಮಕ್ಕನ ಪದಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೬೯ ಪು.ಸಂ. ೧೫೪-೧೬೨.

೨. ತೆರೆ ಅಳೆಯುವ ಹಾಡು; ಕೂಡಿಗೆ ಶ್ರೀಕಂಠ, ಅಂಟಿಗೆ ಪಂಟಿಗೆ ಪದಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೭೩, ಪು.ಸಂ. ೬೭-೬೯

೩. ಪತಿವ್ರತೆ ಲತುಮವ್ವ; ಭಟ್ ಎಲ್.ಜಿ. ಹಾಲಕ್ಕಿ ಪಾಯಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು - ೧೯೭೪.

೪. ನನು ತಂಗಿ ತರಿಯಾಗಳೆದಾಳು; ಹಿರಿಯಣ್ಣ ಅಂಬಳಿಕೆ, ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು - ೧೯೭೬ ಪು.ಸಂ. ೨೩೭-೨೪೮.

೫. ಪತಿವರತಿ; ರಾಮಸ್ವಾಮಿ ಎಸ್, ಮತ್ತು ನಟರಾಜ್ ಎಂ.ಬಿ., ಹಾಡಾಕೆ ಬೈಗುಂಟೆ ಬೆಳಗುಂಟೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೭, ಪು.ಸಂ. ೧೩-೧೬.

೬. ಚಿತ್ತಾರಿ ಹಾಡು; ಕಾವ್ಯಜೀವಿ ಹಾಡ್ಹೇಳೆ ತಂಗಿ ದನಿ ಎತ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೯ ಪು.ಸಂ. ೪೫-೪೭.

೭. ಸತ್ಯವಂತೆ; ನಳಿನಿ ಎಂ.ಬಿ. ಕಾಡುಮಲ್ಲಿಗೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೨, ಪು.ಸಂ. ೩೬-೪೩.

೮. ತೆರೆ ಅಳೆಯವ ಪದ; ರಮೇಶ ಜಿ.ಕೆ. ನೀತ್ಯುಳ್ಳ ಜ್ಯೋತಿ ನಡೆಮುಂದೆ, ಚಕೋರ ಪ್ರಕಾಶನ ತೀರ್ಥಹಳ್ಳಿ ೧೯೯೬ ಪು.ಸಂ.೧೨೪-೧೩೦

೯. ನಚುಮವ್ವಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೧೯೯೭, ಪು.ಸಂ.೧೦೪-೧೧೬.

೧೦. ಅತುಮೋವಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು - ೧೯೯೭, ಪು.ಸಂ. ೧೧೭-೧೨೩.

೧೧. ಉತ್ತುಮಾಮಿ; ನಾಯಕ ಎನ್.ಆರ್. ಮುಕ್ರಿಗಳ ಗೀತೆ ಮತ್ತು ಕಥೆಗಳು. ಜಾನಪದ ಪ್ರಕಾಶನ ಹೊನ್ನಾವರ ೨೦೦೦. ಪು.ಸಂ. ೯೫-೯೭.

---

* ಅತುಮವ್ವಿ; ಹೆಗಡೆ ಎಲ್.ಆರ್. ಕೆಲವು ಲಾವಣಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೭೩ ಪು.ಸಂ.೧೨೯-೧೪೦

## ೯. ಕವುಲಿ ಹಾಡು*

ಕಾಜಿನುಂಡೆ ಬಾರೇ ಕಡಗಲ ಮಚ್ಚೆ ಬಾರೆ
ನಾಗ ಚಿಕ್ಕವನ ಸೊಸೆ ಬಾರೆ-ಸುವ್ವಿ
ನಾಗ ಚಿಕ್ಕವನ ಸೊಸೆ ಬಾರೆಯೆಂದ್ದೇಳಿ
ಬಾರೆಂದು ವಚನ ನುಡಿದಳೆ-ಸುವ್ವಿ

ಬಣ್ಣದುಂಡೆ ಬಾರೇ ಚೆನ್ನದ ಮೊಗ್ಗೆ ಬಾರೇ
ನಾಗ ಚಿಕ್ಕವನ ಸೊಸೆಬಾರೆ-ಸುವ್ವಿ
ನಾಗ ಚಿಕ್ಕವನ ಸೊಸೆಬಾರೆಯೆಂದ್ದೇಳಿ
ಬಾರೆಂದು ವಚನ ನುಡಿದಳೆ-ಸುವ್ವಿ

ಒಂದೆಂಬ ತಿಂಗಳು ತುಂಬಿತು ಕವುಲವ್ವಗೆ
ಒಂದೆಲಗುಂದೇ ಮನೆಮಾರೆ-ಸುವ್ವಿ
ಎರಡೆಂಬ ತಿಂಗಳು ತುಂಬಿತು ಕವುಲವ್ವನೆ
ಎರಡೆಲಗುಂಡೇ ಮನೆಮಾರೆ-ಸುವ್ವಿ

ಮೂರೆಂಬ ತಿಂಗಳು ತುಂಬಿತು ಕವುಲವ್ವಗೆ
ಮೂರೆಲಗುಂಡೇ ಮನೆಮಾರೆ-ಸುವ್ವಿ
ನಾಕೆಂಬ ತಿಂಗಳು ತುಂಬಿತು ಕವುಲವ್ವಗೆ
ನಾಕೆಲಗುಂಡೇ ಮನೆಮಾರೆ-ಸುವ್ವಿ

ಐದೆಂಬಾ ತಿಂಗಳು ತುಂಬಿತು ಕವುಲವ್ವಗೆ
ಐದೆಲಗುಂಡೇ ಮನೆಯಮಾರೆ-ಸುವ್ವಿ
ಆರೆಂಬ ತಿಂಗಳು ತುಂಬಿತು ಕವುಲವ್ವಗೆ
ಅರೆಲಗುಂಡೇ ಮನೆಮಾರೆ-ಸುವ್ವಿ
ಏಳೆಂಬಾ ತಿಂಗಳು ತುಂಬಿತು ಕವುಲವ್ವಗೆ
ಏಳಲಗುಂಡೇ ಮನೆಮಾರೆ-ಸುವ್ವಿ
ಎಂಟೆಂಬ ತಿಂಗಳು ತುಂಬಿತು ಕವುಲವ್ವಗೆ
ಎಂಟೆಲಗುಂಡೇ ಮನೆಮಾರೆ-ಸುವ್ವಿ

ಒಂಬತ್ತೆಂಬ ತಿಂಗಳು ತುಂಬಿತು ಕವುಲವ್ವಗೆ
ಜನಿಸ್ಯಾಳೆ ಗಂಡ ಕೊಮರನ-ಸುವ್ವಿ

ಕುರುವನೇ ಬಿಟ್ಟಳು ಮುರುವನೇ ಹಾಕ್ಯಾಳು
ಚಿಟಿ ಚಿಟಿ ಈಗ ಒದಿತಾಳೆ-ಸುವ್ವಿ

ಒಟ್ಟು ಒಂದೇ ಮಾತ ಕೇಳಲು ಮನೆವೊಡತಿ
ಹಿಡಿದ ಚೆಂಬಲ್ಲೇ ಕುಟ್ಯಾಳು-ಸುವ್ವಿ
ಹೋದಲ್ಲಿ ಹವಳೆತ್ತಿ ಬಂದಲ್ಲಿ ಬೂತ್ವೊಡೆಲಿ
ಹೋದಲ್ಲಿ ನಿನ್ನ ಹುಲಿ ತಿನ್ಲಿ-ಸುವ್ವಿ

ಆರು ಸುತ್ತಿನ ಕೋಟೆ ಏಳು ಸುತ್ತಿನ ಬೇಲಿ
ಒಂದೇ ಜಿಗಿತಕ್ಕೆ ಜಿಗಿದಳು-ಸುವ್ವಿ
ಉದ್ದುದ್ದ ಹುಲ್ಲಿನಾಗ ಬಗ್ಗಿ-ಬಗ್ಗಿ ಮೇಯ್ವಾಗ
ಕಿಗ್ಗಣ್ಣಲ್ಲಿ ಕಂಡ ಹುಲಿರಾಯ-ಸುವ್ವಿ

ಯಾರಲ್ಲಿ ಸಿರಿಕವುಲಿ ಕೇಳಿಲ್ಲಿ ನನ್ನ ಮಾತ
ನಿನ್ನ ನಾನೀಗ ತಿನಬೇಕು-ಸುವ್ವಿ
ತಿನ್ನೋದಾದರೆ ತಿನಬಹುದು ಉಣ್ಣೋದಾದರೆ ಉಣಬಹುದು
ಕಂದಗೆ ಮೊಲೆಯ ಕೊಡಲಿಲ್ಲ-ಸುವ್ವಿ

ನಿನ್ನಾವ ಮಾತೇನು ನನಗೆ ಬರ್ವಾಸಿಲ್ಲ
ಈಗ ಕೊಡಬೇಕೇ ಜಾಮೀನು-ಸುವ್ವಿ
ಅಡವಿ ಹುಲ್ಲೆ ಸಾಕಿ ಗಿಡವೆ ಮರವೇ ಸಾಕಿ
ನಾ ಸಾಕಿ ನಿನ್ನ ಮನಸಾಕಿ-ಸುವ್ವಿ

ನಿನ್ನಾದ ಮಾತೇನು ನನಗೆ ಬರ್ವಾಸಿಲ್ಲ
ಈಗ ಕೊಡಬೇಕೇ ಜಾಮೀನು-ಸುವ್ವಿ
ಅಡವಿ ಹುಲ್ಲೇ ಸಾಕಿ ಗಿಡವೆ ಮರವೇ ಸಾಕಿ
ನಾ ಸಾಕಿ ನನ್ನ ಮನಸಾಕಿ-ಸುವ್ವಿ

ಕಂದಾಗೆ ಮೊಲೆಕೊಟ್ಟು ನಿಲ್ಲದೆ ಬರುವೇನೂ
ಸತ್ಯವೇ ಶಿವನು ಶಿವನಾಣೆ-ಸುವ್ವಿ
ಒಟ್ಟು ಒಂದೇ ಮಾತ ಹೇಳಲು ಸಿರಿಕವುಲಿ
ಹೋಗಿ ಬಾರೆಂದಾ ಹುಲಿರಾಯ-ಸುವ್ವಿ

ಆರು ಸುತ್ತಿನ ಕೋಟೆ ಏಳು ಸುತ್ತಿನ ಬೇಲಿ
ಒಂದೇ ಜಿಗಿತಕ್ಕೆ ಜಿಗಿದಾಳೆ-ಸುವ್ವಿ
ಒಂದೇ ಜಿಗಿತಕ್ಕೆ ಜಿಗಿದಾಳೆ ಸಿರಿಕವುಲಿ
ತನ್ನರಮನೆಗೇ ನಡೆದಳೆ-ಸುವ್ವಿ

ಯಾರಲ್ಲೋ ಬಸವಯ್ಯ ಕೇಳಲೋ ನನ್ನ ಮಾತ
ಇಂದಿನ ಪಾಲ ಕುಡಿಮಗನೆ-ಸುವ್ವಿ

ಇಂದಿನ ಹಾಲ ಬೇಗನೀ ಕುಡಿ ಮಗನೆ
ನಾಳೆ ನನ್ನಾಸೆ ಮರೆಮಗನೆ-ಸುವ್ವಿ

ನನ್ನ ಬಿಟ್ಟೆಲ್ಲಿಗೂ ನೀನೀಗ ಹೋಗ್ಬೇಡ
ನಿನ್ನ ಬಿಟ್ಟೀಗ ಗತಿಯಾರು-ಸುವ್ವಿ
ನಿನ್ನ ಬಿಟ್ಟೆನಗೆ ಗತಿಯಿಲ್ಲವದರಿಂದ
ನಿನ್ನ ಹಿಂಬಾಲ ಬರತೀನೊ-ಸುವ್ವಿ

ಮಾತು ತಪ್ಪಲುಬಾರ್ದು ನಾನು ಹೋಗಲೇಬೇಕು
ಹುಲಿಗೆ ನಾ ತಪ್ಪಿ ಇರಬಾರ್ದು-ಸುವ್ವಿ
ಇಂದಿನ ಹಾಲ ಬೇಗನೆ ಕುಡಿಮಗನೆ
ನಾಳೆ ನನ್ನಾಸೆ ಮರಿ ಮಗನೆ-ಸುವ್ವಿ

ಬೆಟ್ಟದ ಹುಲ್ಲಿಗೆ ಮುಂದೆ ಮುಂದೆ ಹೋಗ್ಬೇಡ
ಹಿಂದ ನೀನೀಗ ಇರಬೇಡ-ಸುವ್ವಿ
ಹಿಂದೆ ನೀನೀಗ ಇರಬೇಡ ಎಲೊ ಮಗನೆ
ನಡು ಮಧ್ಯದಲ್ಲಿ ಮೇಯೊ ಮಗನೆ-ಸುವ್ವಿ

ಒಟ್ಟು ಒಂದೇ ಮಾತ ಹೇಳಿತು ಸಿರಿಕವುಲಿ
ಮಗನೆ ನಾನೀಗ ಬರುತೀನೊ-ಸುವ್ವಿ
ಈಗ ನಾ ಬರ್ತೇನೆ ಎಂದ್ಹೇಳಿ ಸಿರಿಕವುಲಿ
ಮೇಯೊ ತಾವಾಗ ನಡೆದಳೊ-ಸುವ್ವಿ

ಆರು ಸುತ್ತಿನ ಕೋಟೆ ಏಳು ಸುತ್ತಿನ ಬೇಲಿ
ಒಂದೇ ಜಿಗಿತಕ್ಕೆ ಜಿಗಿದಳು-ಸುವ್ವಿ
ಕೊಟ್ಟಿರ್ವ ಮಾತಿಗೆ ತಪ್ಪಲಿಲ್ಲ ಎನ್ನುತ್ತ
ಹುಲಿಯ ಹತ್ತಿರಕೆ ಬಂದಳೆ-ಸುವ್ವಿ

ಕೊಟ್ಟಿದ್ದ ಮಾತಿಗೆ ತಪ್ದಾಂಗೆ ಬಂದಿದಿ
ನಿನ್ನಾ ನಾನೀಗ ತಿನ್ನೋದಿಲ್ಲ-ಸುವ್ವಿ
ನಿನ್ನ ನಾನೀಗ ತಿನ್ನೋದಿಲ್ಲವೆನ್ನಲು
ತನ್ನರಮನೆಗೆ ನಡೆದಳು-ಸುವ್ವಿ

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಗೋಪ್ಯಮ್ಮ; ಕರಾ.ಕೃ, ಹಣತಿ ಉರಿಯುತಿದೆ, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೬೩.

೨) ಆಕಳ ಹಾಡು, ಕಾಪಸೆ ರೇವಪ್ಪ, ಮಲ್ಲಿಗೆ ದಂಡೆ ಸಮಾಜ ಪುಸ್ತಕಾಲಯ, ಧಾರವಾಡ, ೧೯೭೦ ಪು.ಸಂ. ೩೪-೩೮.

೩) ಗೋವಿನಹಾಡು; ಐತಾಳ ಶಿವರಾಮ ಕೆ. ದಕ್ಷಿಣ ಕನ್ನಡದ ಜನಪದ ಸಾಹಿತ್ಯ, ಶಾರದಾಮಂದಿರ ಮೈಸೂರು, ೧೯೭೧ ಪು.ಸಂ. ೧೮-೨೭.

೪) ಕೌವಲಿದನ; ಕೆದ್ಲಾಯ ಸುಬ್ರಹ್ಮಣ್ಯ ಕುಂಜಿಬೆಟ್ಟು, ಹಾಡಿಗೆ ಹನ್ನೆರಡು ಕಬರು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩ ಪು.ಸಂ. ೩೨-೪೨.

೫) ಆಕಳಪದ; ಖಾಡೆ ಜಿ.ಬಿ. ಕಾಡು ಹೂಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩.

೬) ಗೋಪ್ಯಮ್ಮ; ಮತಿಘಟ್ಟ ಕೃಷ್ಣಮೂರ್ತಿ, ಕನ್ನಡ ಜನಪದ ಸಾಹಿತ್ಯ ಭಂಡಾರ. ಗುರುಮೂರ್ತಿ ಪ್ರಕಾಶನ, ಬೆಂಗಳೂರು, ೧೯೭೫ ಪು.ಸಂ. ೨೨೫-೨೨೬.

೭) ಸಿರಿಕವುಲಿ; ಹಿರಿಯಣ್ಣ ಅಂಬಳಿಕೆ, ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೬ ಪು.ಸಂ. ೯೧-೯೩.

೮) ಆಕಳಲೀಲಾ; ಹೆಗಡೆ ಎಲ್.ಆರ್. ಮುಕರಿ ಮತ್ತು ಹೊಲೆಯರ ಪದಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೯ ಪು.ಸಂ. ೧೫೨-೧೫೩.

೯) ಗೋಪವ್ವನ ಪದ; ಕೃಷ್ಣಯ್ಯ ಎಸ್.ಎ. ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದ ಗೀತೆಗಳು, ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ ೧೯೯೨, ಪು.ಸಂ. ೧೫೩-೧೫೫.

೧೦) ಚಿರ್ಕವ್ಲಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭ ಪು.ಸಂ. ೧೭೧-೧೭೪.

೧೧) ಸಿರ್ಕವ್ಲಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭, ಪು.ಸಂ. ೧೭೫-೧೭೯.

೧೨) ಹುಲಿಕವ್ಲಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭ ಪು.ಸಂ. ೧೮೦-೧೮೩.

೧೩) ಹುಲಿಕವ್ಲಿ ಹಾಡು; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭ ಪು.ಸಂ. ೧೮೪-೧೮೭.

೧೪) ಗೋವಿನಹಾಡು; ಹನೂರು ಕೃಷ್ಣಮೂರ್ತಿ, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮, ಪು.ಸಂ. ೧೬೦-೧೭೭.

೧೫) ಗೋಪಿತಾಯಿ ಹಾಡು; ನಾವಲಗಿ ಸಿ. ಕೆ. ಮತ್ತು ಶಕುಂತಲ ಚನ್ನಬಸವ, ಕಥನಗೀತ ಸಂಚಯ ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು ೨೦೦೨ ಪು.ಸಂ. ೨೬-೨೭.

---

* ಕವುಲಿಹಾಡು; ಕೇಶವಭಟ್ ಟಿ. ಹಾಡಿನ ಚೂಡಾಮಣಿ, ಚಿರ ಪ್ರಕಾಶನ, ಬೆಂಗಳೂರು, ೧೯೭೧ ಪು.ಸಂ. ೧೯೫-೧೯೮.

## ೧೦. ಸಿರಿಕವಲಿ *

ಹೊತ್ತರ ಮುಂಚೆದ್ದೀsss ಕೌಲೀ ಕೊಡುಗಿಗೆ ಹೋssದೇ
ಯಾಕವ್ವss ಕೌಲೀss ವರುಗೀದೇsss?
ಯಾಕವ್ವss ಕೌಲೀss ವರುಗೀದೇsss ನಿನ್ಪೊಡಿಯಾss
ಹಾಲಿಲ್ಲssದುಣ್ಣss ಹಗಲೂsಟs

ಹಾಲಿಲ್ಲssದುಣ್ಣsss ಹಗಲೂsಟss ಅವರೊಡತೀ
ಗಿಂಡೀ ತುಂಬ್ಹಾಲsss ಕರದsಳು
ಗಿಂಡೀ ತುಂಬ್ಹಾಲsss ಕರದsಳು ಲವ್ರೊಡುತೀ
ಕಾಲ್ಕೊಟ್ಟೀ ಹಾಲs ಕಳಕೊಯ್ದೀsss

ಕಾಲ್ಕೊಟ್ಟೀ ಹಾಲ ಕಳಕೊಯ್ದೀsss ಲವ್ರೊಡಂತೀ
ಗಿಂಡೀ ಗಿಂಡ್ಕೆಲ್ಲs ಜರುದೀತೇss
ಗಿಂಡೀ ಗಿಂಡ್ಯೆಲ್ಲs ಜರುದೀತು ಲವ್ರೊಡುತೀ
ಮುತ್ತಿನ ಕಣಿ ದಾಬ ಕಳುಚೌssದೇss

ಮುತ್ತಿನ ಕಣಿ ದಾssಬ ಕಳುಚೌssದೇss ಲವ್ರೊಡುತೀ
ಮುತ್ತಿನವ್ ಬೇಲಿs ಹೆsರಗ್ಹೊಡುದೀsss
ಮುತ್ತಿsನವ್ ಬೇಲಿss ಹೆರಗ್ಹೊಡುದೀ ಸಿರಿ ಕೌಲಿs
ಗುಡ್ಡಿಮೊಕವಾssಗೀss ನೆಡುದೀತೇss

ಗುಡ್ಡಿಮೊಕವಾssಗೀss ನೆಡುದೀತೇss ಸಿರಿ ಕೌಲಿs
ತಾಮೇವೂ ಹೊಲುಕೇ ನೆsಡುದsಳು
ತಾಮೇವೂ ಹೊಲುಕೇ ನೆsಡುದsಳೇ ಸಿರಿ ಕೌಲಿs
ಗುಡ್ಡೀ ಮೇಲಿನ ಹುಲ್ಲs ಮಡು ಮಡುದೀ ಮೆಲುವಾsಗೇ
ಕಡುಗಣ್ಣಲಿ ಕಂಡsss ಹುಲಿರಾಯ
“”ಮುರಿದರೆ ಮುರಿಯಪ್ಪs ಹುಲಿರಾಯ, ನೀ ಕೇಳೋ

ನನ್ ಬಾಲsಲೈದನಿಯೊ ಮನಿಯಲ್ಲೀ
ನನ್ ಬಾಲಯ್ಯsಹುಟ್ಟಿಲಿಂದೇಳು ದಿವಸ

ನನ್ನ ಬಾಲsನ ಸುಳಿಯೇ ಬಲಿಲಿಲ್ಲs
ನನ್ನ ಬಾಲsನ ಸುಳಿಯೇ ಬಲಿಲಿಲ್ಲs ಹುಲಿರಾssಯ,s
ನನ್ನ ಬಾಲsಗಿಟ್ಟು ಮೊಲಿಯಾss ಕೊಟಿಬತ್ತೇs"
ಅಟ್ಟಂಬೂ ಮಾsತಾ ಕೇಳೀತ್ತೇs ಸಿರಿಕೌಲೀ

ಕಾಳೀ ಮೇವ್ ಹೊಲಕೇss ಬರುವಾssದುs
""ಕಾಳೀ, ಕಾಳೀ, ಕೇಳೇ ಕಾಳೀಯ ಕರು, ಕೇಳೇ
ನನ್ ಬಾಲsಗಿಟು ಮೊಲಿಯ ಕೊಡಿರsವ್ವs
ನನ್ ಬಾಲಯ್ಯsಹುಟ್ಟೀಲಿಂದೀಗೆಳು ದಿವಸs

ನನ್ನ ಬಾಲsನ ಸುಳಿಯೇ ಬಲಿಲಿಲ್ಲs"
ಬಾಲsನ ಸುಳಿಯೇ ಬಲಿಲಿಲ್ಲsಲಂದ್ಹೇಳೀs
ಬೋಳೀ ಮೇವ ಹೊಲಕೆ ನಡೆದಾsಳು
""ಬೋಳೀ ಬೋಳೀ, ಕೇಳೆ ಬೋಳೀಯ ಕರು, ಕೇಳೇ

ನನ್ನ ಬಾಲsಗಿಟ್ಟು ಮೊಲಿಯs ಕೊಡಿರವ್ವs
ಬೋಳೀ ಮುಂದಾssಗೀ ಬೋಳಿ ಕsರು ಹಿಂsದಾಗೀ
ಹಾಳೀ ಮೆನೆ ಮೊಲಿಯss ಕೊsರಿsರವ್ವs
ಹಾಳೀ ಮೆನೆ ಮೊಲಿಯss ಕೊಡಿರವ್ವಾss ನೀವೀಗೇ

ಹುಲಿರಾಯಗೆ ಬಾಶೀ ಕೊsಟ್ಟ ಬಂದೇ"
ಅಟ್ಟಂಬೂ ಮಾತಾs ಹೇಳಿತೇ ಸಿರಿಕೌಲೀss
ಹಿಂತಿರುಗರಮನಿಗೇs ಬsರುವದುss
ಹಿಂತಿರುಗರಮನಿಗೇs ಬsರುವಾssದೇ ಸಿರಿಕೌಲೀ

ಕಣ್ಣಲ್ಲೇ ನೀರುs ತsರುವದು
ಕಣ್ಣಲ್ಲೇ ನೀರುs ಸೊರುದಂತಾ ಕಾಲುದಲ್ಲೀs
ಮುತ್ತೀನವುಬೇಲಿs ವಳುಗೇ ಬಂದೀsss
ಮುತ್ತೀನವುಬೇಲಿs ವಳ್ಗೇ ಬಂದೀ ಲವ್ರೊಡುತೀsss

ಹಂಡೀ ತುಂಬ್ಹಾsಲs ಕsರುsದೀತುs
ಹಂಡೀ ತುಂಬ್ಹಾsಲs ಕರುದೀತೇ ಲವ್ರೊಡುತೀs
ಮುತ್ತೀನ ಕಣಿ ದಾsಬs ಲಿsಡುsವsದುs
""ಇಂದೀನಾs ಹಾಲs ಚೆಂದದಿಂದೇ ಕುಡಿಬಾssಲss,

ನಾಳೀಗನ ಹಾsಲುs ನಿsನsಗಲ್ಲss
ನಾಳೀಗsನ್ಹಾಲೂs ನಿನುಗಲ್ಲss ನನುಬಾsssಲss,
ಹುಲಿರಾssಯಗೆ ಬಾಶೀss ಕೊsಟೀ ಬsಂದೆss"
ಹಾಳೀ ಮೇನಿನ ಹುಲ್ಲ ಮೊಡುಮಡುದೀ ಮೆಲುವಾssಗೇ

ಕಡುಗಣ್ಣಲಿ ಕಂಡss ಸsರುಪರಾsಯss
""ಬಡವರು ಗsದ್ದಿಯ ಮಾಡೀ ಮುಳ್ಳುs ಬೇಲಿಯ ಮಾಡೀss
ಹೋಗsದಿರು ಬಾssಲ, ಕsಳsದೀರುs
ಹೋಗsದಿರು ಬಾssಲ, ಕಳುಬೇಡ ಲವ್ರು ನಿನುಗೇss

ಕವಣೇ ಕವಣ್ಯಲ್ಲೀss ಹೊಡುವಾssರುss
ರಾಗೀ ಕುಮುರಿಯ ಮಾಡೀ ಮುಳ್ಳು ಬೇಲಿಯ ಮಾಡೀss
ಹೊಕ್ಕsಬೇಡ ಬಾssಲ, ಕsಳುಬೇss
ಹೊಕ್ಕsಬೇಡ ಬಾssಲ, ಕsಳುಬೇಡss ಲವ್ರೂ ನಿನುಗೇss

ಗುಂಡುs ಗುಂಡಿನಲ್ಲೀ ಹೊಡುವೋರು
ಚಂದೀ ಮುಂದಾsಗೀss ಚಂದಿ ಕsರs ಹಿಂದಾsಗೀs
ಹಾಳೀ ಮನೆ ಮೊಲಿಯs ಕೊsಡುsವsರೊs
ಹಾಳೀ ಮೆನೆ ಮೊಲಿಯs ಕೊಡುವರು ಮಗುನೇ, ಕೇsಳೊss

ಅಳ್ಳದಿರೊ ನೀನು ಇರಬೇಕು
ಬಸ್ವಾ ಮಂದಾಗೀ ಬಸ್ವನ ಕರು ಹಿಂದಾಗೀ
ಬಾಲ ನನ ಮಗುನೇ ನೆಡುಗಾಗೀ
ಬಾಲ ನನ ಮಗುನೇ ನೆಡುಗಾಗೀ ಹೋಗ್ವಾಗೇ

ಹಾಳೀಮನೆ ಮೊಲಿಯss ಕೊsಡುವsರೊs
ಹಾಳೀಮನೆ ಮೊಲಿಯss ಕೊಡುವsರೊ ಮಗುನೇ, ಕೇsಳೊss
ಕುದ್ದೀ ಸಂsತೊಸಿನಲ್ಲಿರಬೇssಕುs
ಕುದ್ದೀ ಸಂsತೊಸಿನಲ್ಲಿರಬೇssಕು ಮಗುನೇ, ಕೇಳು

ತಾಯsಲ್ಹಂಬಲವಾs ಮsರಿsಬೇಕುss
ತಾಯs ಹಂಬಲವಾ ಮರುತೀ ನೀನಿದ್ದsರೇs
ಸಂತೋಸsಪಡುವೇs ಮsನsದಲ್ಲೀss
ಅಟ್ಟಂಬೂ ಮಾsತಾss ಕೇಳೀsತೆ ಸಿರಿಕೌಲೀs

ಹುಲ್ಯsಪ್ಪಗ್ಯೇsನ ನುsಡುsದದೇs?
""ಮುರುದರೆ ಮುರಿಯsಪ್ಪ ಹುಲಿಯsಣ್ಣs, ನೀ ಕೇಳೋ

ನನ್ ಬಾಲssಗೆss ಮೊಲಿಯs ಕೊsಟ್ಟೆsಬಂsದೇs"
ಅಟ್ಟಂಬೂ ಮಾತs ಕೇಳಿsದ ಹುಲಿರಾssಯs

ಕಣ್ಣೀರ ಸುರಿಸುತ್ತೇ ಬರುವಾನೇssss
""ಕೇಳಲೆ ಕೇಳಲ್ಲೇ ಸತ್ಯುಳ್ಳss ಸಿರಿಕೌಲೀss,
ನಾನೂ ನಿನ್ನೀಗೇsss ಮುsರುsದಿಲ್ಲss
ನಾನೂ ನಿನ್ನೀಗೇsss ಮುsರುsದಿಲ್ಲss ಸಿರಿಕೌಲಿss,

ನಿನ್ ಬಾsಲsಗೇ ಮೊಲಿಯs ಕುsದಿsಸಂ"ದss
""ನಿನ್ ಬಾsಲsಗೆ ಮೊಲಿಯs ಕುಡಿ"ಸಂದs ಹುಲಿರಾssಯs
ತಾ ಮೇವೂ ಹೊಲಕೇs ನಡೆದssನೇss
ಲಟ್ಟಂಬೂ ಮಾsತs ಕೇಳೀತೇs ಸಿರಿಕೌsಲೀs

ಗುಡ್ಡೀ ಮೊಕುವಾಗೀs ನೆಡುsದೀತ್ತೇ
ಗುಡ್ಡೀ ಮೇಲಿನ ಹುಲ್ಲs ಮೊಡುಮೊಡುದೀ ಮೆಲುವಾsಗೇs
ಕಾಲೇ ಜಾsರೀತೇ ಸಿರಿಕೌssಲೀs
ಕಾಲುs ಜಾsರೀತುs ಸಿರಿಕೌಲೀಗೇಗಿನ್ನೇss

ಹಳ್ಳದ ಕೊಡುಲಲ್ಲೇ ಮುರುದೇ ಬಿsತ್ತೇs
ಹಳ್ಳದ ಕೊಡುಲಲ್ಲೀ ಮುರ್ದೆಬಿsತ್ತೆ ಸಿರಿಕೌಲೀs
ಹಂಡ್ಹುಲಿ ತಿಂದಿ ನೀರss ಕುಡಿತಕ್ಕೆs
""ಚೆಂದೀ, ಚೆಂದೀ, ಬಂದೆ ಚೆಂದೀಯಾs ಕರು ಬಂsದೇs

ಸಿರಿಕೌಲಿನ್ಯಾsಕೇ ಬsರಲಿಲ್ಲssss?
ಬೋಳೀ, ಬೋಳೀ, ಬಂದೆ ಬೋಳಿಯs ಕರುಬಂsದೇs
ಸಿರಿಕೌಲಿನ್ಯಾsಕೇs ಬsರಲಿಲ್ಲsss?"
""ನಾವೂ ಕಾಣಲಿಲ್ಲ ನಾವು ನೋಡsಲಿಲ್ಲs

ನಾವ್ ಮೇವೂ ಹೊಲಕೇ ಬsರಲಿಲ್ಲs
ನಾವ್ ಮೇವೂ ಹೊಲಕೇ ಬರುಲೆಲ್ಲs ನಮ್ಮೊಡುತೀss,
ಹುಲಿ ತಿಂದೀ ನೀರs ಕುsಡಿsತಕ್ಕೂs"
""ಬಸ್ವs, ಬಸ್ವs, ಬಂದೆ ಬಸ್ವsನ ಕುರುಬಂsದೇs

ಸಿರಿಕೌಲಿನ್ಯಾsಕೇ ಬsರಲಿಲ್ಲss?"
""ನಾವೂ ಕಾಣsಲಿಲ್ಲ ಸಿರಿಕೌಲಿ ನೋಡsಲಿಲ್ಲs
ನಾ ಮೇವೂ ಹೊಲುಕೇ ಬsರsಲಿಲ್ಲs
ನಾ ಮೇವೂ ಹೊಲುಕೇ ಬರಲಿಲ್ಲ ನನ್ನೊಡುತೀss,

ಹುಲಿತಿಂದು ನೀರಽ ಕುಡಿತಽಕ್ಕೂಽ"
""ನೀವೂ ಇರುವೋರುಽ ಐವಽರು ಮಕ್ಕಳಿರುಽಽ
ನನ್ ಬಾಲಽನಿನ್ನೇಗೇ ಕಾದೆಕಽಣಿಽಽ
ಬಡವರು ಗಽದ್ದಿಯ ಮಡೀ ಮುಳ್ಳುಽ ಬೇಲಿಯ ಮಾಡೀ

ಹೊಕ್ಕಬೇಡ ಬಾಲ, ಕಳುಬೇಡ
ಹೊಕ್ಕಬೇಡ ಬಾಲ, ಕಳುಬೇಡ ಅವ್ರು ನಿನಗೇ
ಗುಂಡು ಗುಂಡಿನಲ್ಲೇ ಹೊಡುವರು
ರಾಗೀ ಕುಮಾರಿಯ ಮಾಡೀ ಮುಳ್ಳು ಬೇಲಿಯ ಮಾಡೀ

ಹೊಽಗಬೇಡ ಬಾಽಽಲಽ ಕಳುಬೇಽಡ
ಹೊಽಗಽಬೇಡ ಬಾಽಽಲಽ ಕಳುಬೇಽಡ ಲವ್ರು ನಿನುಗೇ
ಕಣ್ಣೇ ಕಷ್ಣ್ಯಲ್ಲಿ ಹೊಡುವಽರು"

---

* ಸಿರಿಕವಲಿ; ಹೆಗಡೆ ಎಲ್.ಆರ್. ಪರಮೇಶ್ವರಿಯ ಪದಗಳು. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೯೨ ಪು.ಸಂ. ೧೬೬-೧೭೧.

## ೧೧. ಹೆಬ್ಬುಲಿಗೆ ನಾನು ಕೊಟ್ಟೇನು ಬಾಸೆ *

ಸೊಲ್ಲು : ಗಿಣಿಯೆ ಏ ಗಿಣಿಯೆ ಏ ಗಿಣಿಯೆ
ಸಿರಿಕವಲಿದನಽ ಹುಲಿತಾಯಿ ಕರಿಲಾಗಿ
ಯಾರು ಕುರುದಾರೊ ಎಂಬುದು ಸಿವನೆ
ಕುಡಿಹುಲ್ಲು ಮೇದಾಳು
ಹೊಳಿ ನೀರು ಕುಡುದಾಳು
ಚಾಜ ಜನಿಸ್ಯಾಳು ಹೇ ಗಂಡಾ ಮಗಽನ
ಹೂ ಬಾಲ ಹಣೆ ಚಿಕ್ಕ ಏ ಕಣಬು ಕಾಲು
ಯಾರು ಕುರುದಾರೊ ಎಂಬುದು ಸಿವನೇ
ಬೆಳ್ಳೀಯ ಕೋಡೀನ ಏ ಬಸಾವಣ್ಣಾ
ಚಿನ್ನಾದ ಕೋಡೀನ ಚೆನ್ನೀಗುರಾಮಾ
ಜನಸೀದ ಕಂದಯ್ಯಾಗೆ ಕೊಡುಲಿಲ್ಲ ಮೊಲಿ ಹಾಲಾ
ಮನಿಯಾ ದೇವ್ರಿಗೆ ಮೀಸಲು ಎಂದು
ಬಾಲಾ ಕಂದಯ್ಯ ತಾ ಕರೀಕಂದ

ವಡಿಯಾರ ಮನಿಗೆ ತಾ ಬರುತಾಳ್ರಿ
ಕೆರಿಯಾ ಅಂಗ್ಳಾದಲ್ಲಿ ನಿಂತ್ಯಾಳೆ ಕವಲಿ
ಕವುಲಪ್ಪನ ದನಿಯ ಕೇಳ್ಯಾಳೆ ವಡೆಯ
ಗಡುಬಡಿಸಿ ಮಂಚಾ ತಗ್ಗೀಗೆ ಇಳದು
ಒಂದೆನ್ನ ತೆಗುದಾಳು ಚವುಕೀ ಬಾಗೀಲಾ
ಚವಕೀಯ ವಳಗೆ ಬರುತಾಳೆ ಕವಲಿ?
ಬೆಳ್ಳಿ ಡವಗಣ್ಣೀಲಿ ಕಟ್ಯಾಳೆ ಕವಲೀಯ
ಚಿನ್ನಾದ ಹಗ್ಗದಲಿ ಬಿಗುದಾಳೆ ಬಾಲಯ್ಯುಗೆ
ಹೋಗಿ ಕುಂತಾಳ್ರಿ ಮಂಚಾದ ಮ್ಯಾಲೆ
ತಂಪಾದ ನೆರಳು ಕಂಡಾಳೆ ಕವುಲಿ
ತಾಸೊತ್ತ ನಾವು ಸುಕುನಿದ್ರೀಗೈದು
ತಾಸೀನ ಮೇಲೆ ತಾಯೇಳಬೇಕೆ
ತಾಸೀನ ಮ್ಯಾಲೆ ಠಾಯದ್ದಾಳಯ್ಯಾ
ಕವಲವ್ವನ ದನಿಯ ಕೇಳಿದಳು ವಡತಿ
ಗಡಿಬಡಿಸಿ ಮಂಚಃ ತಗೀಗೆ ಇಳದೂ

ಅಟ್ಟಕ್ಕೆ ಏಣೀ ಹಾಕೀದಳಾಗಾ
ಒಂದು ಎರಡಾನೆ ಮೂರು ಮತ್ತೊಂದೆ
ಮೂರು ಮತ್ತೊಂದೆ ಹುಡೇವ ಇಳಸಿ
ಮೂರು ಮತ್ತೊಂದೆ ಹಂಡೇವ ತೊಳುದಿಟ್ಟು
ಕೊನಿ ಮುಸುರೆ ತಾಯೆ ಕವಲಮ್ಮುಗೆ ಇಟ್ಟು
ಬಾಲಾ ಕಂದಯ್ನ ಬಿಟ್ಟು ಹೊಡುದಾಳ್ರಿ
ಬಾಲಾ ಕಂದಯ್ನ ಬಿಟ್ಟು ಹೊಡಿವಾಗಾ
ಜೋರು ಜೋರೆನ್ನೂತ ಉಣುತಾನೆ ಹೈನಾ
ಬಾಲ ಕಂದಯ್ನಾ ಎಳೆಕಟ್ಯಾಳಾಗಾ
ಹಾಲು ಕರಿಯದಕೆ ಹೋಗಿ ಕುಂತವ್ವೆ
ಒಂದಾ ಹಂಡಿ ಹಾಲು ಕರೆದಾಳು ದೇವಾ
ಎರಡಂಡೆ ಹಾಲೂವ ಕರಿವಾಗಾ
ಎಲ್ಲಿತ್ತು ಸಿವುನೇ ಮಾಯಾದ ಗಂಗೇ
ಬಂದು ಎರಗೈತೆ ಕವಲಮ್ಮನ ಕೆಚುಲೀಗೆ
ಸಾಕು ಮಾಡಮ್ಮಾ ಹಾಲ ಕರಿಯಾಮು
ಗಂಗೇಯ ಉರಿಯು ನಾ ತಾಳಾಲಾರೆ
ಇಂದೂ ಕೊಡೋ ಹಾಲು ನಾಳೆ ಕೊಡತೀನಿ
ಸಾಕು ಮಾಡವ್ವಾ ಹೇ ಮಃನೆ ಮಾತಿ
ಅಸ್ಪಂದೇ ಮಾತಾ ಕೇಳುಲಾರುವೆ
ಹಾಲು ಕರೆಯಾದೆ ಬಿಡುಲಿಲ್ಲ ದೇವಾ

ಗುಂಗೇಯ ಉರಿಯಾ ತಡಿಯಲಾರುವೆ
ಜಾಡೀಸಿ ವದ್ದಾಳೆ ಏ ಕವಾಲವ್ವಾ
ಮನಿಯೊಡತಿ ಆಗಾ ಮಗುಚಿ ಬಿದ್ದಾಳೊ
ಮನಿಯಾಲಿದ್ದಂತಾ ಗೌಡಾರೋಡಿ ಬಂದು
ಮನಿಯ ವಡುತೀಗೆ ಎಬ್ಬುರ್ಸಿದಾರೆ
ಮನಿ ವಡುತಿ ಆಗಾ ಎದ್ದಾಳು ಸಿವನೇ
ತಾಯೀ ಕಮಲಮುಗೆ ಬೈದಾಳೊ ಸಿವನೆ
ಕೊಡುಬಾರದ ಸಾಪಾ ಕೊಡುತಾಳೊ ಸಿವುನೆ
ಬೈಯುಬಾರುದ ಬೈಗಳು ಬೈತಾಳೊ ಸಿವನೆ
ಹಿಡಿಯಾ ಕುಂಟೇಲಿ ಹೊಡಿತಾಳೆ ಸಿವನೆ
ವನಿಕೆ ಮುಂಡೀಲಿ ಬಡಿತಾಳೊ ದೇವಾ
ಜಾಡೀಸೊದ್ದಾಳು ಕವಲಮ್ಮಗೆ ತಾಯೀ

ತಾಯೀ ಕವಲಮ್ಮ ಹೇಳಿದಳಾಗಾ
ಕೊಡುಬಾರದ ಸಾಪಾ ಕೊಡುಬೇಡಿ ತಾಯೀ
ಬೈಯುಬಾರದ ಬೈಗುಳುವ ಬೈಯುಬೇಡಿ ತಾಯೀ
ವನಕೆ ಮುಂಡೀಲಿ ಹೊಡಿಬೇಡಿ ತಾಯಿ
ಇಂದು ಕೊಡೋ ಹಾಲಾ ನಾಳೆ ಕೊಡತೀನಿ
ಕೊಡುಬಾರದ ಸಾಪ ಕೊಡುಬೇಡೀ ತಾಯೀ
ಬೈಯುಬಾರುದ ಬಯೂಗಳ ಬೈಯುಬೇಡೀ ತಾಯೀ
ಅಸ್ಟೊಂದೆ ಮಾತೇ ಹೇಳ್ಯಾಳೆ ಕವಲೀ
ಅಸ್ಟಾ ಮಾತುಗಳೇ ಕೇಳ್ಯಾಳೆ ವಡುತೀ
ಅರುಗಳಿಗೆ ಸರುಪಾ ಕಚ್ಚಾಲೆ ನಿನಗೆ
ಹೆಬ್ಬೂಲಿ ನಿನಗೆ ನಿನ್ನಾಲಿ ತಾಯೆ
ನೀ ಕುಡಿಯೊ ಗಂಗೆ ಜಲ ಬತ್ತಾಲವ್ವಾ
ನೀ ಮೇವೊ ಮೇವಾ ನಸಿಗಾರಿಲವ್ವಾ
ನಾಕಾ ತಿಂಗಳ ಗರುಬಾ ನರಿಗಾರಿಲವ್ವಾ
ಹೋದಂತ ದಾರೀಯ ಹಿಂದಾಕೆ ತಿರಗ್ಬೇಡೆ
ಅಸ್ಟೊಂದು ಸಾಪಾ ಕೊಡುತಾಳೊ ದೇವಾ
ಅಸ್ಟಾ ಸಾಪುವ ಕೇಳುಲಾರದೆ ಕವಲವ್ವಾ
ಕಣ್ಣಾ ನೀರನ್ನೇ ಚಲುತಾಳೊ
ಬಾಲಾ ಕಂದಯ್ಯಗೆ ಹೇಳಿದಳಾಗಾ
ಮುಂದೆ ಬಂದಾರೆ ಹಾಯಲಿ ಬೇಡಾ
ಹಿಂದೆ ಬಂದಾರೆ ಒದಿಯಾಲಿ ಬೇಡಾ
ದಂಡು ದಾಳೀನೆ ಬಿಟ್ಹೋಗಾ ಬೇಡಾ
ಹೆಬ್ಬೂಲಿ ಕಂಡಾರೆ ನಿನ ಬಿಡೋದಿಲ್ಲೊ

ಅಸ್ಟೊಂದೇ ಮಾತು ಹೇಳ್ಯಾಳೊ ಕವಲೀ
ಅಸ್ಟೊಂದೇ ಮಾತಾ ಹೇಳ್ವಾಗ ಕವಲೀ
ಮನ ಒಡತಿ ಬಂದು ಕಣ್ಣಿ ಬಿಚ್ಯಾಳ್ರಿ
ಮನಿಯೊಡುತೀ ಬಂದು ಕಣ್ಣೀ ಬಿಚ್ವಾಗಾ
ತಾಯಾದ ಕವಲೀ ಮಗನೀಗ ಹೇಳುತಾಳ್ರಿ
ಹೋಗಿ ಬರುತೀನೊ ನನು ಮಗನೇ ಈಗಾ
ಅಸ್ಟೊಂದಾ ಮಾತಾ ಹೇಳ್ಯಾಳು ಕವಲೀ
ಗುಡ್ಡಾದ ದಾರೀಯ ಹಿಡಿದಾಳು ಕವಲೀ
ಗುಡ್ಡಾದ ದಾರೀಯು ಹಿಡದೂ ಹೋಗುವಾಗ

ಮದ್ದಾನ ಕಾಲಾವಾಗೀತು ದೇವಾ
ಮದ್ದಾನ ಕಾಲಾ ಆಗಾವಾಗಾ
ತಾಯೀ ಕವಲಮ್ಮಾಗೆ ಬಾಯಾರಿಕೆಯಾಗಿ
ಹರಿಯೂವ ಹೊಳಿಯಾ ಹಾದಿ ಹಿಡುದಾಳ್ರಿ
ಹರಿಯೋ ಹೊಳಿಗೆ ಹೋದಾಳೊ ಕವುಲೀ
ಮೇಲ್ಬದಿಯಲ್ಲಿ ನೀರೇ ಕುಡಿತಾಳ್ರಿ
ಕವುಲಯವ್ವನ ಎಂಜಾಲು ಕೆಳಮಾಕನಾಗಿ
ಆ ಹರಿಯಾ ಹೊಳಿಯಲ್ಲಿ ಬರತಿರುವಾಗಾ
ಅದೇಯ ಹೊತ್ತೀಗೆ ಹೆಬ್ಬೂಲಿ ಬಂದು
ಆ ಹುಲಿಯೂ ಹೊಳಿಗಿನ್ನು ಬಂದಿತು ದೇವಾ
ನೀರನ್ನೇ ಹೆಬ್ಬುಲಿ ಕುಡಿತಿರಾವಾಗಾ
ಕವಾಲವ್ವನ ಎಂಜಾಲು ಸಿಕ್ಕೀತು ದೇವಾ
ಕವುಲವ್ವನ ಎಂಜಾಲು ಸೀಗೂವಾಗಾ
ಒಳ್ಳೇ ರುಚಿಯಾಗಿ ಸಿಕ್ಕೀತು ಸಿವುನೇ
ಹೆಬ್ಬೂಲಿ ಆಗಾ ಏನು ಹೇಳುತ್ತೈತೆ
ಕವುಲವ್ವನ ಎಂಜಾಲೆ ಹೀಗಿರಾವಾಗಾ
ಕವಲವ್ವನ ಮಾಂಸಾ ಹ್ಯಾಗಿರಾವೋದು
ಎಂದು ಹೆಬ್ಬೂಲಿ ಬರುತ್ತೈತೊ ದೇವಾ
ಹೆಬ್ಬೂಲಿ ಅಲ್ಲಿಗೆ ಬರಾತಿರಾವಾಗಾ
ಕವಲವ್ವನ ಎದುರೀಗೆ ಸಿಕ್ಕೀತು ದೇವಾ
ತಡಿಯಮ್ಮ ತಾಯೀ ಏ ಕವಾಲವ್ವಾ
ನಿನ್ನನ್ನು ನೋಡಿದರೆ ತಿನ್ನಂಗಾತ್ತೈತೆ
ಕೇಳವ್ವ ತಾಯೀ ಹೆಬ್ಬುಲಿ ನೀನು
ನನ್ನಾ ಮಗುನಾದ ಬಸುವಣ್ಣ ಇರಾವೋನೆ
ನನ್ನಾ ಮಗುನಾದ ಬಸುವನ್ನಾನೀಗೆ
ಎದಿ ಹಾಲು ಕೊಟ್ಟೂ ನಾ ಬರಾತೀನಿ

ಕೇಳವ್ವ ತಾಯೀ ಏ ಕವಾಲಮ್ಮ
ಬಲಗೈಯಾ ಬಾಸೆ ಕೋಡಮ್ಮ ನನಗೆ
ಎಡಗೈಯ ನಂಬೀಗೆ ಕೋಡವ್ವ ನನಗೆ
ಆ ಮಾತ ಕೇಳ್ಯಾಳೆ ಕವಲೀ
ಬಲಗೈಯ ಬಾಸೆ ಕೊಟ್ಯಾಳೆ ಕವಲೀ
ಎಡಗೈಯ ನಂಬೀಗಿ ಕೊಟ್ಟಾಳೆ ಕವಲೀ
ಬರುತಾಳೊ ತನ್ನಾ ಬಾಲಾ ಕಂದಯ್ನಾ
ಬಾರಪ್ಪಾ ಮಗನೇ ಏ ನನ್ನಾ ಬಸಾವಯ್ಯಾ
ಕಣ್ಣೀರ ಹಾಕುತಾ ಹೇ ಕರಿತಾಳ್ರಿ
ದುಃಕಾವ ಮಾಡುತಾ ಏ ಕರೀತಾಳೊ
ಬಸುವಣ್ಣಾ ಮಗನೂ ಕೇಳೀದನಾಗಾ
ಯಾಕವ್ವಾ ತಾಯೀ ಹೇ ಕವಾಲಮ್ಮ
ಮಾಡುಬಾರುದ ದುಃಕಾ ಮಾಡುತೀಯ ತಾಯೀ
ಕಣ್ಣಾನೀರನ್ನು ಚೆಲ್ಲಾತೀಯ ತಾಯೀ
ಕೇಳಪ್ಪಾ ನನ್ನಾ ಏ ಬಸಾವಣ್ಣಾ
ಹೆಬ್ಬುಲಿಗೆ ನಾನು ಕೊಟ್ಟೇನು ಬಾಸೆ
ಬಾಸೀಗೆ ನಾನು ತೆಪ್ಪೂಲಾರೇನು
ಎಂದೂ-ಮಗನೀಗೆ ಎದಿ ಹಾಲಾ ಕುಡಿಸಿ
ಬರುತಾಳೆ ತಾಯಿ ಏ ಕವಾಲಮ್ಮ
ಬಾರಪ್ಪ ನನ್ನ ಹೆಬ್ಬೂಲಿ ನೀನು
ತಿನ್ನುಬಾರಪ್ಪಾ ನನಗೆ ನೀನು
ಎಂದು ಕರೆದಾಳು ಹೆಬ್ಬೂಲಿಗೆ ಆಗಾ
ಹೆಬ್ಬೂಲಿ ಮಗನು ಅಲ್ಲಿರಾವಾಗ
ಕವಲವ್ವನ ಮಃಗ ಅಲ್ಲಿಗೆ ಬರುತಾನ್ರಿ
ಹೆಬ್ಬೂಲಿ ಮಗನು ಕವಲವ್ವನ ಮಗನು
ಅಣ್ಣಾತಮ್ಮುಗಳು ಆಗೀದರವರು
ಎರಡೂ ಜನುವೇ ಸೇರಿದರವರು
ಆಟಗಳನ್ನೇ ಆಡಃತಿರುವಾಗಾ
ಹೆಬ್ಬೂಲಿ ಬಂದು ತಆಯಿ ಕವಲಮ್ಮಾಗೆ
ಬಂದು ತಿಂದೈತಲ್ಲೊ ತಾಯಿ ಕವಲಮ್ಮಾಗೆ
ಹೆಬ್ಬೂಲಿ ತಿಂದು ಬರುತ್ತೈತೊ-ದೇವಾ
ಬಾರಪ್ಪ ಮಗನೇ ಕುಡಿಬಾರೊ ಎದಿಹಾಲಾ
ಹೆಬ್ಬೂಲಿ ಮಗನೀಗೆ ಕರಿತೈತೊ ದೇವಾ
ಹೆಬ್ಬೂಲಿ ಮಗಾನು ಹೇಳಿದನಾಗಾ
ಕೇಳವ್ವ ತಾಯಿ ಹೆಬ್ಬೂಲಿ ನೀನು
ಬಸುವಣ್ಣಗೆ ಬಿಟ್ಟು ಹ್ಯಾಗೆ ಕುಡಿಲವ್ವಾ

ತಾಯಿ ಕವಲಮ್ಮಾ ಬರಲವ್ವ-ತಾಯೀ
ಬರುತಾಳೆ ಮಗನೆ ಬಾರಪ್ಪ ನೀನು
ಅಣ್ಣಾ ಬಸುವಣುಗೆ ಬಿಟ್ಟು ನಾನೀಗ
ನಿನ್ನಾ ಎದಿ ಹಾಲ ಕುಡಿಯಲಾರೆನೆ ತಾಯೀ
ಎಂದೂ ಹೆಬ್ಬುಲಿ ಮಗನು ಕುಂತಿದಾನೆ ಸಿವನೆ
ತಾಯೀ ಕವುಲಮ್ಮಾ ಬರಲಿಲ್ಲೊ ದೇವಾ
ಹೆಬ್ಬೂಲಿ ಮಗಾನೀಗೆ ಗೊತ್ತಾಗಿತಯ್ಯಾ
ಏ-ನನ್ನ ತಾಯಿ ಮೋಸ್ಯಾ ಮಾಡೀದಾಳೊ
ಎಂದು-ಹೆಬ್ಬುಲಿ ಮರಿಯೇ ನೋಡೀರಿ
ತಾಯಿ ಎದಿ ಹಾಲ ಕುಡಿತಿರವಾಗಾ
ಹೆಬ್ಬೂಲಿ ಹೊಟ್ಟೆ ಬಗಿದಾತೋ ದೇವಾ
ಹೆಬ್ಬೂಲಿ ಹೊಟ್ಟೀ ಬಿಗಿವಾಗಾ
ಕವುಲಮ್ಮನ ಮಾಂಸಾ ಬಿದ್ದೀತು ಅಲ್ಲಿ
ಕವುಲಮ್ಮನ ಮಾಂಸಾ ಹೇ ಬೀಳಾವಾಗ
ಹೆಬ್ಬೂಲಿ ದರಣೀಗೆ ಬಿದ್ದೀತು ದೇವಾ
ಸಿವಾ-ಹೆಬ್ಬೂಲಿ ಪರಾಣಾ ಹೋಗೀತು ದೇವಾ
ಪರದೇಸಿಯಾಗೀತು ಹೆಬ್ಬೂಲಿ ಮರಿಯು
ಹೇಳುತೈತೊ ಹೆಬ್ಬುಲಿ ಮಗನು
ಕೇಪ್ಪಾ ನೀನು  ಬಸಾವಣ್ಣಾ
ನೀನು ಈಗಾಲೆ ಪರದೇಸಿಯಾಗಿದಿಯೊ
ನನ್ನ ತಾಯಾದ ಬೆಬ್ಬುಲಿ ಸಿವಾ
ಎಂತಾ ಮೋಸ್ಯಾವ ಮಾಡಿತೋ ಅಣ್ಣಾ
ಹೋಗಿಬಾರಪ್ಪಾ ಹೇ ಬಸವಣ್ಣಾ
ನಿನ್ನ ಬಂದೂ ಬಳಗಾ ಸೇರಪ್ಪ ಅಣ್ಣಾ
ಒಬ್ಬಾನೆ ನೀನು ಹೋಗುಬೇಡೊ ಅಣ್ಣಾ
ಅಣ್ಣಾ ನಿನ ಬಂದೂ ಬಳಗಾ ಸೇರೋ ನೀನು
ಒಬ್ಬಾನೆ ನೀನು ಹೋಗಾಬೇಡೊ ಅಣ್ಣಾ
ಎಂದು ಹೆಬ್ಬುಲಿ ಮರಿಯೇ ಹೇಳೀತು ನೋಡ್ರಿ
ಚನ್ನಾಬಸವಯ್ಗೆ ಹೇಳೀತು ದೇವಾ
ಹೋಗಿ ಬರುತೀನೊ ಹೇ ಬಸಾವಣ್ಣಾ
ಆರಣ್ಯಾವಾಸಾ ಆಗಾತೇನಿ ನಾನು
ಹೋಗಿ ಬಾರೊ ಹೇ ನನ್ನಾ ಬಸುವಣ್ಣಾ ಆ ಆ

---

* ಹೆಬ್ಬುಲಿಗೆ ನಾನು ಕೊಟ್ಟೇನು ಬಾಸೆ; ಹಿರಿಯಣ್ಣ ಅಂಬಳಿಕೆ. ಕಿನ್ನರಿ ಸಂಪ್ರದಾಯದ ಕಾವ್ಯಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೭೯ ಪು.ಸಂ. ೧೫೨-೧೫೭.

# ೧೨. ಸೋಮರಾಯ ಭೀಮರಾಯ*

ಸತ್ಯುಳ್ಳ ಶರಣರ ಕಥಿ ಹೇಳತಿನಿ ಕೇಳಿರಿ ಚಿತ್ತವಿಟ್ಟಾ ದೈವಾ
ಸಜ್ಜನ ಸಭಾದೊಳಗೆ ನಿಂತ ಹೇಳುವೆವು ನಾವು ‖ ಪಲ್ಲವಿ ‖

ಸೋಮರಾಯ ಭೀಮರಾಯ ಜೋಡಿ ಗೆಳೆಯರು
ನಿಷ್ಠಿಲಿಂದ ಕಂಡರು ಮುಕ್ತಿ ಮಾರ್ಗನಾ ಕೇಳಿರಿ ಇದನ್ನೆಲ್ಲ

ಸೋಮರಾಯನ ಮನಿ ಈಚಿ ಓಣೀಲಿ
ಭೀಮರಾಯನ ಮನಿ ಆಚಿ ಓಣೀಲಿ
ಗರಡಿ ಆಲಯ ಇರುವುದು ನಡುಮಧ್ಯದಲ್ಲಿ
ಜೋಡಿ ಗೆಳೆಯರು ಕೂಡಿ ಲಾಠ ಪಟವಾ ತಿರವಿ
ಸಾಮಶಕ್ತಿ ಮಾಡುತಲಿ
ನಿತ್ಯ ಕಾಲದಲ್ಲಿ

ಒಂದಾನೊಂದು ದಿವಸದಲಿ
ಬಂದಾಳೊ ಸೋಮರಾಯನ ಹೆಣ್ತಿ
ಗಂಡಗ ತಾಂಬೂಲ ತರುವುದಕಾಗಿ
ಆಗ ಆಕಿ ಹೋಗುತ್ತಿದ್ದಾಳೊ ಕಿರಾಣಿ ಅಂಗಡಿಗೆ ನಡುಬಾಜಿನಲ್ಲಿ

ಬಾಳ ಸುಂದರಿ ಇದ್ದಾಳೊ ಆಕಿ ರೂಪದಲ್ಲಿ
ನಾರಿ ಹೋಗುವುದ ಕಂಡು ಅಂವ ಶೂರಾ ಭೀಮರಾಯ
ಪೂರಾ ಕಣ್ಣಿಟ್ಟನು ಗೆಳೆಯನ ಹೆಣ್ತಿ ಅನ್ನುದು ಗೊತ್ತಿಲ್ಲಾ
ಬಂದು ಕೇಳ್ಯಾನು ಗೆಳೆಯನ ಆ ಕ್ಷಣದಲಿ
ಆಡ್ಯಾನು ಪ್ರೀತಿ ಮಾತಾ
ಈಕಿ ಯಾರಂತಾ ಆಕಿನ ಕೊಡಸಂತ

ಒಂದು ರಾತ್ರಿ ಕಳೆಯವೆನು ಸಂತೋಷಾ
ಸೋಮರಾಯಗ ಹತ್ತಿತು ಚಿಂತಿ
ಏನ ತಂದಿ ಪರಮೇಶ್ವರಾ ‖ ಚಾಲ ‖

ಕೊಡುಸುದಿಲ್ಲಾ ಅಂದರ ಇಂವ ಮಾಡುವದ್ಯೆನೈತಿ
ಮಾಡ್ಯಾನೂ ಮನದೊಳಗ ಕೊಡಿಸಬೇಕಂತ ‖ ಏರ ‖

ಗರಡಿ ಆಲಯದೊಳು ಮನಸ ತಡಿಯಲಿಲ್ಲಾ
ಭೀಮರಾಯಗಲ್ಲಿ ಬರುವಳಿಲ್ಲಾ ಈ ರಾತ್ರಿ

ಲಗುಮಾಡಿ ಹೇಳೊ ಗೆಳೆಯ ಇಲ್ಲಿ ಬಿಟ್ಟಿದ್ದೆಲ್ಲ
ಬಿಟ್ಟು ತುರ್ತ ಹೋಗಿ ನೀ ಕೇಳಬೇಕು ಈ ಕ್ಷಣದಲಿ

ಸೋಮರಾಯ ಮನಿಗೆ ಬಂದು ಮಡದಿ ಕೇಳುತಲಿ
ಮಡದಿಗೆ ಹೇಳುತಲಿ ಹಾ ಹಾ ಪ್ರೀತಿಯದು
ಋಣ ತಪ್ಪಿತು ನಂದು ನಿಂದು
ಇಂದಿನ ದಿನದೊಳು ಪತಿವ್ರತೆ ಹಾನಿಯಾಗುದು
ವಚನ ಕೊಟ್ಟಾಳೊ ಆ ಕ್ಷಣದೊಳು ॥ ಚಾಲ ॥

ಗಂಡ ಹೆಂಡಿರು ಆಡ್ಯಾರೊ ಪತಿವ್ರತೆ
ಮಂಚಹಾಕಿ ಹಾಸಿ ಅಂತಾರೊ ಇನ್ಯಾತಕ ತಡ
ಸಮೆ ತುಂಬಿ ಇಟ್ಟರು ನಾಕು ಕಡೆ
ಎಲಿ ಅಡಿಕೆ ಇಲ್ಲ ಸಂಗೀತ
ಅಷ್ಟ ತಂದ ಕಸ್ತೂರಿ ಸಿಸ್ತಿನ ತಂಬಾಳ ತುಂಬಿ
ಇಟ್ಟಾರೊ ಸಜ್ಜ ಮಾಡಿ ॥ ಇಳವು ॥

ಗಂಡ ಹೆಂಡಿರಿಬ್ಬರು ಕೂಡಿ ಪ್ರೀತಿಲಿಂದ ಉಂಡು
ಹೆಣ್ತಿ ಹೇಳ್ಯಾಳೊ ಗಂಡಗ ನೀ ಲಗುಮಾಡಿ ಹೊಂಡು
ತೀವ್ರ ಮಾಡಿ ಬರಬೇಕು ಗೆಳೆಯನ ಕರಕಂಡು
ಗಂಡ ಹೆಣ್ತಿ ಹಿಂಗ ಮಾತನಾಡಿ ॥ ಏರ ॥

ಸೋಮರಾಯ ಬಂದ ಗರಡಿ ಆಲಯಕ
ಗೆಳೆಯನ ಕರಿಲಾಕ ತನ್ನ ಮನಿಗೆ ಕಳಸುದಕ
ಇಬ್ಬರು ಜತೀಲೆ ಕೂಡಿ ಬಂದಾರೊ ಮನಿತನೇಕ
ಗೆಳೆಯನ ಕಳಿಸಿ ಹೊಂಟನು ತಾ ಹಿಂದಕ

ಮಂಚದ ಮೇಲೆ ಕುಳಿತುಕೊಂಡು
ಮಂದಗಮನಿ ಬಾ ಎಂದು ಕರದಾನು
ಮಂಚೆ ದೀಪ ಹೋಗತದ ಬತ್ತಿ ಮುಂದಕ ಚಾಚಂದನು
ಬಿಟ್ಟಲಿ ಬತ್ತಿ ಚಾಚಿ ಅಂತಾಳೊ ಬರತೀನಿ
ತಡ ಮಾಡುದಿಲ್ಲ ನಾನು
ದಿಟ್ಟ ಭೀಮರಾಯ ಇವಳ ನಡತೆ ನೋಡಿ
ಕೂನಾ ಹಿಡಿದಾನು ಮನದಾಗ
ಇವಳು ಸೂಳಿ ಅಲ್ಲ ಅಂದನು ॥ ಚಾಲ ॥

ಭೀಮರಾಯ ಅತ್ತ ಇತ್ತ ನೋಡುವುದರೊಳಗ
ಹತಿಯಾರ ಇತ್ತ ಗೂಟದ ಮೇಗ ರುಮಾಲ

ಹತಿಯಾರ ಕೈಯೊಳು ತಗಂಡು ಅಂತಾನೊ ಮನದಾಗ
ನನ್ನ ಗೆಳೆಯನ ಹತಿಯಾರ ಎಂದು ಹೊಳೆಯಿತು ಭೀಮರಾಯಗ ‖ ಇಳವು ‖

ಕೂನ ಹಿಡಿದಾನ ಸೋಮರಾಯನ
ಇದು ಸೋಮರಾಯನ ಹೆಣ್ತಿ ಈಕಿ ಅಂತಾನೊ ಮನದಾಗ
ಆಗ ಕೇಳತಾನ ಸೋಮರಾಯನ ಹೆಣ್ತಿಗೆ ‖ ಏರ ‖

ಅವ್ವ ನಾರಿ ನೀನು ಯಾರು
ಯಾವ ಪುರುಷನ ಸತಿಯಳು ನೀನು
ಒಂದೂ ಉಳಿಯದಂಗ ಹೇಳಬೇಕು
ನಿನ್ನ ಕೂನವನ ನಾನು ಮಾಡಿದೆನು
ಎಂಥ ಕೆಟ್ಟ ಕೆಲಸವನ್ನು ನಾ
ಮುಂಜಾಲೆದ್ದು ಗೆಳೆಯನಗ ಮುಖ ತೋರಲೆಂದು
ಹತಾರದಿಂದ ಇರಿದುಕೊಂಡ ಭೀಮರಾಯ
ಸತ್ತ ಹೋದ ಒಂದೇ ಹಟದಿಂದ

ಗೆಳತಿಗೆ ಹತ್ತಿತೊ ಚಿಂತಿಯನಾ
ಹಂಚಿಕಿ ಏನು ಮಾಡಬೇಕು

ಇದಕಿನ್ನ ನಾಳೆ ಉದಯಕ
ಸೋಮ ಸುಗುಣ ಜಾಣ
ಬಂದ ಕೊಲ್ಲತಾನೊ ನನ್ನ ಪ್ರಾಣ ‖ ಚಾಲ ‖

ಹ್ಯಾಂಗ ಸಾಯುವುದಕ್ಕಿಂತ ಹಿಂಗ ಸಾವುದು ಲೇಸೈತಿ
ಕೈಯೊಳಗ ತೆಗೆದುಕೊಂಡಳು ಹತಾರ
ಮಾಡಿಕೊಂಡಳೂ ಪ್ರಾಣಹತಿ
ಬಿದ್ದವು ಅವರೆಣಾ
ಕೇಳಿರಿ ಸಜ್ಜನ ಕುಂತಾ
ಸೋಮರಾಯ ಬೆಳಗಿಂದ ಬಂದ ನಿಂತ ‖ ಇಳವು ‖

ಹೆಣ ನೋಡಿ ಅಂತಾನ ಯವ್ವ
ಅನುಕೂಲಕ ಸರಿ ಹೆಣತಿ
ಎಲ್ಲ ಹುಡುಕಿದರ ಸಿಕ್ಕಾಳೊ ಇಂಥ ಸತಿ
ಭೀಮ ಬಿಟ್ಟು ಹೋದ ನನ್ನ ಜತಿ
ಯಾರಗೂಡ ನಾ ಆಡಲೊ ಕುಸ್ತಿ
ಇಂತಿಂಥವರ ಹೋದಮ್ಯಾಲೆ ನಂದೇನೈತಿ
ಕೈಯಾಗ ತಗೊಂಡಾನೊ ಅಂವ ಹತಾರ ‖ ಏರ ‖

ಸೋಮರಾಯ ಹತಾರದಿಂದ ಗೋಣು
ಕುಯ್ದುಕೊಳ್ಳುವುದರೊಳಗ ಹಸ್ತ
ಹಿಡಿದಾನ ಸಾಕ್ಷಾತ್ ಶಿವನು
ಅಂವ ಮುವ್ವರ ಪ್ರಾಣ ಬದುಕಿಸಿಟ್ಟನು ಆಕ್ಷಣ
ಶಿವನು ತಾ ಇವರ ನಿಷ್ಠಗೆ
ಮೆಚ್ಚಿ ಹಸ್ತಲಿಟ್ಟನು ತಲಿಮ್ಯಾಗ
ಮೋಕ್ಷವಾಗಲೆಂದು ಮಾಯವಾದಾಗ

---

* ಸೋಮರಾಯ ಭೀಮರಾಯ; ರಾಜಪ್ಪ ಟಿ.ಎಸ್. ರಾಯಚೂರು ಜಿಲ್ಲೆಯ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೪. ಪು.ಸಂ. ೬೫-೬೮.

## ೧೩. ದಾಂಬ್ರಿ ವುವುs ಆಗಿ ಅವ್ವು ಪುಟ್ಟಿದಾಳೋs*

ಯಾವ ಸೀಮೆ ವಾಲಿಕಾರ ತುಮ್ಮೀದs
ಬಂದಾನೆ ಊರೀಗೆ ಮುಂದಿಗೆ "
ಊರು ಮುಂದೆ ಇಳುದಾನೆ "
ಊರಾಕ್ಕ ಏಳಿ ಕಳಿಸಿದಾನೆ "
ಯೀ ಊರೊಳಗೆ ತೋಟಿಗನ ಕರಿಸಿದಾನೆ "
ತೋಟಿಗನ್ನ ಕರಿಸಿದಾನೆ "
ಏನೋ ತೋಟಿ ರಾಮ ಎಲಿ ತೋಟಿ ರಾಮ "
ಈ ಊರಾಕ್ಕ ನೀನಿನ್ನ ವೇಳಪ್ಪ "
ಈ ಸಾವಡಿನ್ನ ಗುಡಿಸಂತ ವೇಳೋ "
ಊರಾಕ್ಕ ಬಂದಾನೆ ಎಲಿತೋಟಿ ರಾಮ "
ಊರಾಕ ವೇಳಿದಾನೆ "
ಏನು ರೈತುರು ನೀವು "
ಯಾವ ಸೀಮೆ ವಾಲಿಕಾರ "
ಈ ಊರ ಮುಂದೆ ಇಳುದಾನೇ "
ಈ ಸಾವಡಿನ್ನ ಗುಡಿಸೀರಿ ಸ್ವಾಮಿ "
ಬಂದಾನೆ ಊರ ಮುಂದಿಗೆ "
ಈ ಎಲಿ ತೋಟ ರಾಮಾsನು "
ಯಾವ ಸೀಮೆ ವಾಲಿಕಾರ "
ಈ ಊರಾಕ್ಕ ಏಳುದೇನೋ "
ಸಾವಡಿನ್ನ ಗುಡಿಸೀದಾರೋ ತುಮ್ಮೀದs

ರಂಗೋಲಿ ಹಾಕಿದಾರೋ "
ಏನೋ ತೋಟಿ ಎಲಿ ತೋಟಿ ರಾಮ "
ಈ ಊರಾಗ ಊಟಕ್ಕೆ ವೇಳೋ "
ಯಾರ ಮನೆಗೆ ಯೇಳುತೀಯೋ "
ನನಗಿನ್ನ ವೇಳೋ ತುಮ್ಮೀದs
ಏನು ಸ್ವಾಮಿ ರೈತರು ಮನೆ ಊಟಕ್ಕೆ ವೇಳುತೀನಿ "
ರೈತುರು ಮನಿಗೆ ಬ್ಯಾಡೋ ತೋಟಿ "
ಆ ವೊನ್ನಿ ಮನೆಗೆ ಪೇಳೋ ನೀನು "

ಸುತ್ತುಮುತ್ತ ಸುಣ್ಣಾದ ಗೋಡಿ "
ನಟ್ಟ ನಡಿವೀಲಿ ವೊನ್ನಿ ಮನೆ "
ಓದಾನೆ ವೊನ್ನಿ ಮನಿಗೆ ಈ ಎಲಿ ತೋಟಿ ರಾಮಾನು "
ಅಮ್ಮವೇನೆ ಹೊನ್ನಲಾ ದೇವಿ "
ಯಾವ ಸೀಮೆ ವಾಲಿಕಾರನೋ "
ನಮ್ಮೂರ ಸಾವಡಿಲ್ಲಿ "
ಇಳುದಾನೆ ವಾಲಿಕಾರ "
ನಿನ್ನ ಮನಿಗೆ ಊಟಕ್ಕೆ ವೇಳಂದ "
ವಾಲಿಕಾರನಿಗೆ ಊಟಕ್ಕೆ ಹಾಕಮ್ಮ "
ಅಗಲು ಬೇಸಿದ್ದು ಅಣ್ಣೇ ಸೊಪ್ಪು "
ಇರುಳು ಬೇಸಿದ್ದು ಸೋಮಕ್ಕ ಕೂಳು "
ಇಳುದಾರೆ ತಿನ್ನಾಲೆ ರಾಮ "
ಇಳದಿದ್ರೆ ವೋಗಾಲಿ ರಾಮ "
ಅಲ್ಲಿಂದ ಬಂದಾನೆ ಎಲೆ ತೋಟಿ ರಾಮ "
ಏನಂತ ಪೇಳಿದಾನೋ "
ಏನು ಸ್ವಾಮಿ ವಾಲಿಕಾರ "
ಆ ವೊನ್ನಮ್ಮ ಮನೆನಲ್ಲಿ "
ಅಗಲು ಬೇಸಿದ್ದು ಅಣ್ಣೆ ಸೊಪ್ಪಂತೆ "
ಇರುಳು ಬೇಸಿದ್ದು ನಾಮಕ್ಕಿ ಕೂಳಂತೆ "
ಇಳುದಾರೆ ತಿನ್ನಲಿ ರಾಮ "
ಇಳಿದಿದ್ರ ವೋಗಾಲಿ ಅಂತ ವೇಳಿದಾಳೊ "
ಸಾವಡಿಯಿಂದ ವೊರಟಾನೆ "
ಮನೆಗಿನ್ನ ವೋದಾನೋ "
ಏನೆ ವೊನ್ನೇ ವೊನ್ನಾಲಾ ದೇವಿ "
ಕೈಗಿನ್ನ ನೀರು ತಾರೆ "
ಮುಕ್ಕ ಗಡಿಗೇಲಿ ನೀರು ತಂದಾಳೊ ತುಮ್ಮೀದs
ಕೈಗಿನ್ನ ಅಟ್ಟಿದಾಳೆ "

ಏನೆ ವೊನ್ನೇ ವೊನ್ನಲಾ ದೇವಿ ”
ನಾನು ಸಂಪಾದಿಸಿದ್ದಿ ತಂಬೀಗೆ ”
ಏನು ಮಾಡಿದೆ ಏನು ಮಾಡಿದೆ ”
ಈ ಮುಕ್ಕ ಗಡಿಗೇಲಿ ನೀರು ಕೊಟ್ಟಿದೆ ”
ಕೈ ಇನ್ನು ತೊಳೆದಾನೋ ”
ಮುಖವಿನ್ನ ತೊಳೆದಾನೋ ”
ಮನಿಯಾಕ್ಕ ಬಂದಾನೆ ”
ಮನಿವಳಿಗೆ ಗಡಿಗೆ ಮಡಿಗ್ಯಾನೆ ”
ಒಲಿನಾಗಿಂದು ಬೂದಿ ಕೊಟ್ವಾಳೆ ”
ನೀನಿನ್ನ ಧರಿಸಂತ ವೇಳಿದಾಳೊ ”
ಏನೇ ವೊನ್ನೆ ವೊನ್ನಲಾದೇವಿ ”
ಈ ಒಲಿಯಾಗನ ಬೂದಿ ಕೊಡತೀಯಾ ”
ನಾನು ತಂದಿದ್ದ ನಾಮ ಬುರ್ರಿ ”
ಯಾರೀಗ ಕೊಟ್ಟಿದ್ದೆ ”
ಇಸ್ತ್ರೇಲೆ ಹಾಕಿದಾಳೆ ”
ಅಗಲು ಬೇಸಿದ್ದು ಅಣ್ಣೆ ಸೊಪ್ಪು ”
ಇರಳು ಬೇಸಿದ್ದು ಸೋಮಕ್ಕಿ ಕೂಳು ”
ಆಕೀದಾಳೆ ಊಟಕ್ಕ ”
ಏನಂತ ಕೇಳಿದಾನೋ ”
ಏನೇ ವೊನ್ನೆ ವೊನ್ನಲಾ ದೇವಿ ”
ಈ ಸಣ್ಣಕ್ಕಿ ಮೂಟೆ ಏನು ಮಾಡಿದೇ ”
ಈ ತಗರಿ ಪೊರುಪು ಮೂಟೇಗಳ ”
ಯಾರು ತಿಂದು ವೋದಾರೇ ”

ಆ ಮಾತು ಕೇಳಿಸಿಕೊಂಡೋ ”
ವೊರುಟಾಳೋ ಶಿಕ್ಕಮ್ಮನವರ ಮನಿಕೆ ”
ಅಮ್ಮ ದೇನೆ ಶಿಕ್ಕುಮ್ಮ ಅಕ್ಕಮ್ಮ ನೋರೇ ”
ಅವನು ಯಾರೊ ವಾಲಿಕಾರನು ಬಂದವ್ನೆ ”
ನಮ್ಮ ಮನಿಯಾಕೆ ಬಂದವ್ನೆ ತಾಯಿ ತುಮ್ಮೀದs
ಅಣ್ಣೆ ಸೊಪ್ಪು ಆಮ್ರು ಆಕಿದೀನಿ ”
ಸೋಮಕ್ಕಿ ಕೂಳು ಆಕಿದೀನಿ ”
ಅವನಿನ್ನ ಕೇಳಿದಾನೇ ”
ತಗರಿ ಪೊರುಪು ಮೂಟೆಗಳ ”
ಸಣ್ಣಕ್ಕಿ ಮೂಟೆಗಳ ”
ಯಾರು ತಿಂದು ವೋದಾರೇ ವೊನ್ನೀ ”
ನೀನು ಯಾರಿಗೇ ಮಾಡಿ ಆಕೀದೆ ಅಂದಾನೋ ”

ಶಿಕ್ಕಮ್ಮನು ಏನಂತ ಹೇಳಿಯಾಳೋ "
ಅಮ್ಮ ಅವನು ನಿಮ್ಮ ಅಮ್ಮನಾ ತಮ್ಮಾನೋ "
ನಿಮ್ಮ ಅಪ್ಪನಿಗೇ ಅವ್ನು ಇನ್ನು ಅಳಿಯಾನೋ "
ನಿನಕಿನ್ನ ಗಂಡನಮ್ಮ ವೊನ್ನಲು ದೇವಿ "
ಮೂರು ತಿಂಗಳು ಮಗುವೀಗೆ "
ತೊಟ್ಲ ಬಾಸಿಂಗ ಕಟ್ಟಿದಾನೋ "
ಆವೊತ್ತು-ವೋದಾನೇ "
ಆವೊತ್ತು ವೋದವ್ನೆ ಅವ್ನು "
ಈವೊತ್ತು ಬಂದವ್ನೆ ಅವ್ನು "
ದಂಡು ಸಂಬಳ್ಕ ವೋದಾನೋ "
ಈ ಊರಾಕಿನ್ನ ಬಂದಾನೋ "
ನಿನ್ನ ಮನೀಗೆ ಒಂದವ್ನೆ ಅವ್ನು "
ನಿನಿನ್ನ ಸರಿಯಾಗಿ ಊಟಕ್ಕೆ ಬಡಿಸೋ "

ಆ ಮಾತು ಕೇಳಿದಾಳೇ "
ಈ ವೊನ್ನಲಾ ದೇವಿ ಕೇಳಿರಾಳೋ "
ಅಲ್ಲಿನಿಂದ ಬಂದಾಳೆ ವೊನ್ನೆ "
ಗುಂಡಿ ಬಿರ್ನ ವೆತ್ತಿಕೊಂಡು "
ಸೇದೋ ಬಾಯಿ ಅಗ್ಗವಾ ತಕೊಂಡು ತುಮ್ಮೀದs
ವೊರುಬಾಳೆ ಬಾಯಿಕಿನ್ನ "
ಬಾಯಿ ಮೂರು ಸುತ್ತು ಆಕೀದಾಳೋ "

ಬಾಯಿ ವಳಕ್ಕ ದುಮುಕಿದಾಳೆ "
ಅಲ್ಲಿ ಪ್ರಾಣವಿನ್ನ ಬಿಟ್ಟಾಳೆ ಅವ್ಳು "
ಈ ಮನಿವಳಗ ಇದ್ದ ವಾಲಿಕಾರನೋ "
ಒಂದು ಎರಡು ಗಂಟೇ ಟೈಮು "
ನೋಡಿದಾನೆ ನೀರುಕೋದ ವೊನ್ನೆ "
ಆ ಮನಿಗಿನ್ನ ಬರಲಿಲ್ಲ "
ಆ ಬಾಯಿ ಅತ್ತರಕ ವೋದಾನೋ "
ಆ ಬಾಯಿ ಕಡೆ ನೋಡಿದಾನೋ "
ಆ ಬಾಯಿ ತಾವ ನೋಡಿದಾನೋ "
ಆ ಬಾಯಿ ವಳಗ ತಗ್ಗಿ ನೋಡಿದಾನೋ "
ಆ ಬಾಯಿಯಲ್ಲಿ ಬಿದ್ದಾಳೆ ಅವ್ಳು "
ಪ್ರಾಣಾವ ಬಿಟ್ಟಾಳೆ ಅವ್ಳು ವೊನ್ನೆ "
ಏನೇ ವೊನ್ನಲಾ ದೇವಿ "
ನಾನು ಎಷ್ಟು ಕಷ್ಟಪಟ್ಟು ಬಂದಿದ್ನೆ ವೊನ್ನೇ "

ಏನು ಅನ್ಯಾಯ ಮಾಡೀದೀನೆ ನಿನಗೇ "
ಈ ಬಾಯಿಯಲ್ಲಿ ಪ್ರಾಣ ಬಿಟ್ಟಿದೀಯಾ "
ನಾನು ತಂದಿದ್ದ ಸೀರೇಗಳಾ "
ಯಾರು ವುಟ್ಟು ನೋಡೋರಿನ್ನ "
ನಾನು ತಂದಿದ್ದ ಕುಬುಸುಗೋಳ "
ಯಾರು ತೊಟ್ಟು ಕಣ್ಣಾಗೆ ನೊಡಾಲೇ "
ಅಂತು ಪೇಳಿ ದುಃಖಾವ ಪಡುತಾನೆ "
ನಾನು ತಂದಿರೋ ವಾಲೆಗಳಾ "
ಯಾರ ಕಿರಿಗಳ್ಕ ಇಕ್ಕಿ ನೋಡಾವೆ "
ಅಂತವೇಳಿ ಆ ವಾಲೀಕಾರ "
ದುಃಖಾವ ಪಡುತಾನಾ "
ನಾನು ತಂದಿರುವೋ ನಡುವೀಗೆ ಡಾಬು ತುಮ್ಮೀದs
ನಾನು ಯಾರ ನಡುವೀಗೆ ಆಕೊನೆ ವೊನ್ನೀ "
ಕಾಲಿಗೆ ಸೈನಾಗಾಳೋ "
ನಿನಗಂತ ನಾನು ತಂದೀನಲ್ಲೇ "
ಅಂತವೇಳಿ ಕೊಂಡು ವಾಲಿಕಾರ "
ಈ ದುಃಖಾ ಪಡುತಾನಾ "
ದುಕ್ಕಾವ ಮಾಡೀದಾನೆ "
ಈ ವಾಲೀಕಾರ ಮನಿಗೆ ಬಂದಾನೋ "
ಮನಿವಳಿಗ ಬಂದು ಮಲಿಗ್ಯಾನ "
ಏಳು ದಿನ ಮಲಿಗಿದ್ದಾನೆ "
ಅನ್ನ ನೀರೂs ಇಲ್ದಂತೆ "
ಗೋಳನ್ನ ಮಾಡಿದಾನೋ "
ಈ ಮನಿವಳಗ ಯಿಂಗುಳ್ಸಿತಾ "
ನಾನೆಷ್ಟು ಅನ್ಯಾಯ "
ಮಾಡಿದೆನೋ ಜನ್ಮದಲ್ಲಿ "
ಏಳು ದಿನ ಆದ ಮ್ಯಾಲೆ "
ಎಂಟನೆಯ ದಿನದಲ್ಲಿ ಎದ್ದಾನೋ "
ಬಾಯಿ ಅತ್ತರಿಗೆ ವೋದಾನೋ "
ಬಾಯಿ ಮೂರಾ ಸುತ್ತೇಹಾಕಿದಾನೆ "
ಬಾಯಿ ಮೂರು ಸುತ್ತೇ ತಿರುಗಿ "
ನಾನು ಕಣ್ಣಲ್ಲಿ ನೋಡಲಿಲ್ಲೆ "
ನಿನ್ನಲ್ಲಿ ಇನ್ನ ನಾನು "
ಯಾವ ಸೌಖ್ಯ ನೋಡಾಲಿಲ್ಲೇ "
ನಿನಗೇನು ಅನ್ಯಾಯ ಮಾಡಿದ್ದೀನಿ "
ನಾನು ಬಂದ ಒಂದು ದಿನದಲ್ಲಿ ನೀನು "

ನನ್ನ ಸೌಕರ್ಯ ಒಂದು ದಿನ "
ನೀನಿನ್ನ ನೋಡಲಿಲ್ಲಲ್ಲೇ "
ಯಾಕೆ ವೊನ್ನೆ ನೀನು ಬಿದ್ದಿದ್ದು "
ಈ ಬಾಯಿಯಲ್ಲಿ ಪ್ರಾಣಾವ ತಕಂಡಿದ್ದು "

ಇಷ್ಟು ಸೋಕ ಮಾಡಿಕೊಂಡು ತುಮ್ಮೀದs
ಈ ಬಾಯಿವಳಕ್ಕ ಶಂಬು ಬಿಟ್ಟಾನೋ "
ದ್ರಾಂಬಿ ವುವುs ಆಗಿ ಅವ್ಳು ಹುಟ್ಟಿದಾಳೊ "
ಆ ಬಾಯಿನಲ್ಲಿ ತಾಂಡಾವ ಮಾಡಿದಾಳೋ "
ನೀರಿಗೋದ ಅಕ್ಕನೋರು "
ಮನೆಕಿನ್ನ ಬಂದಾರೆ ಅವ್ರು "
ಯಾವ ಸೀಮೆ ವಾಲಿಕಾರ "
ಈ ಬಾಯಿನಲ್ಲಿ ದಾಂಬರಿ ವೂವ "
ಆಗಿ ವುಟ್ಟಿ ತಾಂಡವಾ ಮಾಡುತ್ತಾಳೋs "
ನಿನ್ನ ಸೋಕ ಏನಪ್ಪ "
ಆ ವೂವ್ನ ತಂದು ಮನೆಯಲ್ಲಿ ಮಡುಗೋ "
ನಿನ್ನ ಕಷ್ಟವೆಲ್ಲ ಪರಿಹಾರವಾಗುತಾದೋ "
ತೋಟಿಗ್ಯಾನೆ ಕರೀಸ್ಯಾನೆ "
ಆ ತೊಟ್ಟಿಗನ್ನಿಗೆ ವೇಳಿದಾನೋ "
ಏನೋ ತೋಟಿ ಎಲಿ ತೋಟಿ ರಾಮ "
ಬಾಯಿವಳಕ ಇಳಿದು ನೀನು "
ಆ ದ್ರಾಂಬ್ರಿವುವ ಎತ್ತಿಕೊಂಡು "
ನಮ್ಮ ಮನಿವಳಕ ಎತ್ತಿ ತಾರೋ "
ಅವ್ನು ವೋದಾನೆ ಬಾಯಾಕ್ಕ ಇಳಿದಾನೋ "
ಆ ವೂವನ್ನೆತ್ತಿ ಕೊಂಡೂ "
ಅವ್ನು ಮನಿಗೆ ತಂದು ಕೊಟ್ಟಾನೆ "
ಅವ್ನು ಮನಿಗೆ ಅವ್ನು ವೋದಾನೇ "
ಗೂಡುನಲ್ಲಿ ಪೂವ ಮಡಿಗ್ಯಾನೋ "
ಈ ವಾಲಿಕಾರ ಪೂಜಿಗಳು ಮಾಡಿದಾನೋ "

ಆ ವುವನ್ನಲ್ಲಿ ದೇವುಕನ್ನಿಕ್ಯಾಗಿ
ಈ ಬಂಗಾರು ಬೊಮ್ಮೆಮಾದ್ರಿಗೆ "
ವುಟ್ಟಿದಾಳೆ ವೊನ್ನಾಲಾ ದೇವಿ "
ಆ ಮನಿವಳಗ ನಿಂತಾಳೋ "
ಆ ಮನಿವಳಗೆ ನಿಂತಾಳೋ ವೊನ್ನಿ "
ಅವಳ್ಕ ಅವನ್ಕ ಲಾಗ್ಲಾವಾ ಮಾಡಿದಾರೊ "

ಬೇಕಂದಷ್ಟು ಮದೀವೀಗೆ "
ಬೇಕಂದಷ್ಟು ರತ್ನ ಮುತ್ತುಗಳೊ "
ಕೋಸಿದ ಮುತ್ನ ತಲಬಾಕಲುಹಾಕಿ "
ಕೋಸದಾ ಮುತ್ತು ಸಪ್ಪರಕಾಕಿ "
ಆ ವೂರನಲ್ಲಿ ಆ ಮನಿವಳಗ "
ಬಲು ಸೌಕ್ಯವಾಗಿವಿದ್ದಾರೋ "

---

* ""ದಾಂಬ್ರಿವುವು ಆಗಿ ಅವ್ಳು ವುಟ್ಟಿದಾಳೊ"; ಅಂದನೂರು ಶೋಭ, ಕೊಂಬೆ ರೆಂಬೆಲ್ಲ ಎಳೆಗಾಯಿ. ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

**ಪಾಠಾಂತರ ಪಠ್ಯ**

ವುಟ್ಟಿದ ಮಲ್ಲೀಗೆ ವುಟ್ಟಿದಂತೆ ಇರುವೆನು; ಅಂದನೂರು ಶೋಭ, ಕೊಂಬೆ ರೆಂಬೆಲ್ಲ ಎಳಗಾಯಿ. ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು. ೧೯೭೮ ಪು.ಸಂ. ೮೬-೮೮.

## ೧೪. ತೋಳನಿಗೆ ಬಲಿ*

ವಂದs ತಾಯೀಗೆsssss ವಂದೇಯ ಮಗಲ್ಹುಟ್ಟೀ
ಶಿದ್ದೆಣ್ಣೇಲ್ಲಾ ಕೇssssss ಶsಲಗಿದ್ದೇ
ಶಿದ್ದೆಣ್ಣೇಲ್ಲಾ ಕೇssssss ಶಲಗಿದ್ದ ಮಗಲೀಗೇ
ಹಾಲು ತುಪ್ಪಾsಕೇ ಶsಲಗಿತ್ತೇ

ಲಾಲು ತುಪ್ಪಾsಕೇssssss ಶಲಗಿದ್ದ ಮಗಲೀಗೇ
ಮಗನೇ ಯೇನಂದೇsssss ನಡುದೀನೇ?
""ಕೇಲಲೆ ಕೇಲಾಲೇsssss ತಾಯೀ, ನೀ ಕೇಲೇ
ಪಲವೋರಿಗೆ ತಂಗೀsssss ಕೊಡು ಕಾಗ

ಪಲವೋರಿಗೆ ತಂಗೀsssss ಕೊಡುಕಾಗ ತಾಯಿ, ಕೇಲೆ
ನನ್ನ ಶಾಕಿದ್ದಾಗೇsssss ಶಲಗುಬೇಕೇ
ನನ್ನ ಶಾಕಿದ್ದಾಗೇsssss ಶಲಗುಬೇಕು ತಾಯೀ, ಕೇಲೇ
ಹೆಣ್ಣಲ್ಲ ಗಂಡsssss ಮಗನಂತೇ

“”ಕೇಲಲ್ನೆ ಕೇಲಾಲೋsssss ಮಗನೇ, ನೀನಾರು ಕೇಲೋ
ತಂಗೀಗನ್ನೈಡೂsssss ವsರುಶಾದೋss
ತಂಗೀಗನ್ನೈಡೂsssss ವರುಶಾದೊ ಮಗನೇ, ಕೇಲು
ತುತ್ತೆಲ್ಲಾ ನೆಂಟೇsssss ಬsರsತೀದೋsssss

ತುತ್ತೆಲ್ಲಾ ನೆಂಟೇ ಬರತೀದು ಮಗನೇ, ಕೇಲೋ
ಷೋದುರುದ ಮಾವಾ ಬರುತೀನೋ
ಷೋದುರುದ ಮಾವಾ ಬರುತ ಮಗನೇ, ಕೇಲೋ
ತಂಗೀ ನಗ್ಗನವೇ ಯೆರೇಬೇಕೊ”

“”ಯಾರಿಗೆನ ಕೊಟ್ಟರೂ ಷೋದುರಕೇ ಕೊಡುದಿಲ್ಲs
ತಂಗಿ ನಗ್ಗನವೇsssss ಮಾಡೂದಿಲ್ಲs
ತಂಗಿ ನಗ್ಗನವೇsssss ಮಾಡೂದಿಲ್ಲ ತಾಯಿ, ಕೇಲೇ
ನನ್ನ ಶಾಕಿದ್ದಾಂಗೇsssss ಶಲಗೂಬೇಕೇ”

ತಾಯೀ ಹೇಳಿದ ಮಾತೇsss ಮಗನೇ ಕೇಲೂಲಿಲ್ಲ
“”ತಂಗೀ ಮೈನೆರುದೇsssss ಕುಲೂತೀದು
ತಂಗೀ ಮೈನೆರುದೇsssss ಕುಲೂತೀಲು ಮಗನೇ, ಕೇಲೋ
ಹೇಗೆ ಮಾಡಿ ತಂಗೀsssss ಶಲಗೂಬೇಕೋ?

“”ಕುಮಟೆಗ್ಹೋತೀನೇssss ಹೊಚಪಂಜೀ ತರುತೀನಿ
ತಂಗೀ ಕಣ್ ಕಟ್ಟೇsssss ಬಿsಡsತೀನೇ
ತಂಗೀ ಕಣ್ ಕಟ್ಟೇsssss ಬಿಡುತೀನೆ ತಾಯೀ, ಕೇಲೇ
ಲದುಕಾಗೇ ಶಿಂತೇssss ಬಿಡುಬೇಡ

“”ಕೇಲಲೊ ಕೇಲಾಲೊ ಕೇಲಾಲೊ ಯಲೆ ಮಗನೇ, ನೀ ಕೇಲೋ
ಬೆನ್ನಿಗ್ಹೀಗೆ ತಂಗೀsssss ಕsರುಕಂತೇs
ಬೆನ್ನಿಗ್ಹೀಗೆ ತಂಗೀsssss ಕುರುಕಂತೆ ಮಗನೇ, ಕೇಲೋ
ಹೇಗೆ ಮಾಡಿ ತಂಗೀsssss ಬಿಟ್ಟೇ ಬರ್ತೇ?”

ಕೇಲಲೆ ಕೇಲಾಲೇ ತಾಯೀ, ನೀನಾರೂ ಕೇಲೋ
ತಂಗಿಗು ಶುದ್ದೀsssss ಮಾಡುಬೇಡುವೆ
ತಂಗಿಗು ಶುದ್ದೀsssss ಮಾಡುಬೇಡವೆ ತಾಯಿ, ಕೇಲೇ
ಲಜ್ಜೀ ಮನಿಯಲ್ಲೇsssss ಮದಿವ್ಯಂತೇ

ಲಜ್ಜೀ ಮನಿಯಲ್ಲೇsssss ಮದಿವ್ಯಂತೆ ತಾಯೀ, ಕೇಲೇ
ಲಾಗಂದೆ ಬೆನ್ನೇರುಗೇsssss ಕರುಕಂತೇs”

ನೆರೆಮನೆ ಹಂದರದಲ್ಲೇ ಲಾಡೂವ ನನ ತಂಗೀ,
ಲಜ್ಜೀ ಮನಿಯಲ್ಲೇsssss ಮದುವ್ಯಲ್ಲೇ

ಲಜ್ಜಿ ಮನೆಯಲ್ಲೇsssss ಮದುವ್ಯಲ್ಲೆ ತಂಗಿ, ಕೇಲೇ
ನಾ ನೀನು ವಟ್ಟೇಗೆsssss ಹೋಗುಬೇಕೇ"
ಲಣ್ ಹೇಲಿದ ಮಾತೇsssss ಕೆಮಿಯಲ್ಲಾಲಿಶಿಕಂಡೀ
ತಾಯಿ ಕೂಡ್ಯೇನsssss ನಡುದೀಲೇ?

“"ಕೇಲೆ ಕೇಲಾಲೇsssss ತಾಯೀ ನೀನರು ಕೇಲೇ
ಮುತ್ತು ಕಟ್ಟಿದ್ದsssss ಹೊಸಶಾಲೇ
ಮುತ್ತು ಕಟ್ಟಿದsssss ಹೊಸಶಾಲೆ ತಾಯೀ ಕೇಲೇ
ಲೇ ಶಾಲೇ ನನಗೇsssss ಕೊಡುಬೇಕೇ

ಲಾ ಶಾಲೇ ನನಗೇsssss ಕೊಡುಬೇಕೆ ತಾಯೀ ಕೇಲೇ
ಲಜ್ಜೀ ಮನಿಯಲ್ಲೇsssss ಮದುವಿಯೇss
ಲಜ್ಜಿ ಮನೆಯಲ್ಲೇsssss ಮದುವಿಯೇ ತಾಯೀ, ಕೇಲೇ
ಲಣ್ಣನ ಬೆನ್ ಹೆರಗೇsssss ಲೋಗಿ ಬತ್ತೇ"

ಬಣ್ಣಲುಟ್ಟವಲೇsssss ಮಂಡೇಯ ಬಾಶವಲೇs
ಲಬ್ಬರಗೀ ಹೂಗsssss ಮುಡುದೀಲೇss
ಲಬ್ಬರಗೀ ಹೊಗsssss ಮುಡುದೀಲೆ ತಂಗಮ್ಮsನೇ
ಲಣ್ಣನ ಕೂಡ್ಯೇನsssss ನುಡುದೀಲುs?

ಲಣ್ಣನ ಕೂಡ್ಯೇನsssss ನುಡುದಿಲು ತಂತಮ್ಮsನೇ
“"ಲಿನ್ನಾರೂ ಯೇಲೋsssss ಮsದುವೀಗೇss
“"ಲಿನ್ನಾರೂ ಯಲೋsssss ಮದುವೀಗೇ ಲಣ್ಣಾ, ಕೇಲೋ
ಶಂಗಡದಲ್ಲೇ ನಾಮೇsssss ಹೊಗುಬೇಕೋs"

“"ಕೇಲಲೆ ಕೇಲಾಲೇsssss ತಂಗೀ, ನೀನಾರು ಕೇಲೇsss
ಹೊತ್ತು ಮಜ್ಜನವೇsssss ಗsಲುದಿತ್ತೇs
ಹೊತ್ತು ಮಜ್ಜನವೇsssss ಗಲುದಿತ್ತು ತಂಗೀ, ಕೇಲೇ
ಲೂಟಾ ಮಾಡಿ ನಾವೇsssss ನೆsಡೆಬೇಕೇss

ಲೂಟಾ ಮಾಡಿ ನಾವೇsssss ನೆಡೆಬೇಕೆ ತಂಗೀ, ಕೇಲೇ
ಲಶುವಾsದರೆ ನೀನೇsssss ತsಡೆsನಾsರೇs
ಕೇಲಲೆ ಕೇಲಾಲೆsssss ತಾಯೀ, ನೀನಾರು ಕೇಲೇs
ನಮಗಿಟ್ಟsಶನುವೇsssss ಬಡ್ಯುಬೇಕೇsss

ನಮಗಿಟ್ಟಶನುವೇ ಬಡ್ಯುಬೇಕೆ ತಾಯೀ ಕೇಲೇ
ಲಜ್ಜಿಮನೆಯಾಗೇ ಹೋಗಬೇಕೇ"
ಮಗ ಹೇಲಿದ ಮಾತೇ ಕೆಮ್ಯುಲ್ಲಾಲುಶಿಕಂಡೀ
ಮಾಲೂಗೀ ವಲುಗೇ ನೆಡುದೀಲೇ

ಮಾಲೂಗೀ ವಲುಗೇsssss ನೆಡುದಿಲೆ ನಿನ ತಾಯಿಯೇ
ಶಣ್ಣಕ್ಕಿ ಶೈಬೋನsssss ಬಡುಶೀಲುs
ಶಣ್ಣಕ್ಕಿ ಶೈಬೋನsssss ಬಡುಶಿಲು ನಿನ ತಾಯಿಯೇ
ಲದುರ ಮೆನೆ ತುಪ್ಪsssss ಯರದೀಲೇ

ಲದುರ ಮೆನೆ ತುಪ್ಪsssss ಯರದೀಲು ನಿನ ತಾಯಿಯೇ
""ಲೂಟಿಕೆ ಬಾ" ಲಂದೇsssss ಕsರದೀಲುs
ಲಣ್ಣನೂ ತಂಗೀನೂsssss ಒಂದೇ ವಟ್ಟಿನ ಮೇನೇ
ಲೂಟಕೂ ತಾಮೂsssss ನಡೆದೀರುs

ಲೂಟಕೂ ತಾಮೇsssss ನಡೆದಿರು ರಣ್ಣ ತಂಗೀನೂ
ಮಾಯಿನ ಮಣೆ ಮೇನೇsssss ಕುಲತೀರುss
ಮಾಯಿನ ಮಣೆ ಮೇನೇsssss ಕುಲುತೀರಣ್ಣ ತಂಗೀನೇ
ವಂದಂಬೂ ತುತ್ತೇsssss ಕಲಶೀದೋss

ವಂದಂಬೂ ತುತ್ತೇsssss ಕಲಶೂ ಹೊತ್ತಿನಲ್ಲೇ
ಕಡಗಣ್ಣಲೆ ನೀರsssss ತರುತೀನೇsss
ಕಡಗಣ್ಣಲೆ ನೀರsssss ತುರವಂತಾ ಹೊತ್ತೀಗೇ
""ಯೇನಾಗಿತೂಲಣ್ಣsssss ನsನಗ್ಹೇಲೋs

ಯೇನೂಲಾಗೂನಿಲ ತಂಗೀ, ಯಂತೂ ಲಾಗುಲಿಲ್ಲ ತಂಗೀ
ಹೊಗೆ ಬಂದೇ ಕಣ್ಣೀಗೇsssss ಶುಲುದಿತ್ತೇs
ಹೊಗೆ ಬಂದೇ ಕಣ್ಣೀಗೇsssss ಶುಲುದಿತ್ತು ತಂಗೀ, ಕೇಲೇ
ಲದರಿಂದೇ ನೀರೇsssss ಬರುತಿತ್ತೇs

ಲಟ್ಟೆಲ್ಲ ಮಾತೇsssss ತಂಗೀ ಕೂಡ್ಹೇಲೀರೇ
ಉಂಡೆಂಜಲ ಬಾಯsssss ತೊಲೆದೀರೇs
ಉಂಡೆಂಜಲ ಬಾಯsssss ತೊಲೆದೀರಣ್ಣ ತಂಗೀನೂ
ಹೊಲ್ಲಿ ಮೆನೆ ಬಂದೇsssss ಕುಲುತೀರೇ

ಹೊಲ್ಲಿ ಮೆನೆ ಬಂದೇsssss ಕುಲುತೀರಣ್ಣ ತಂಗೀನೂ
ಆರಿಶಿದಣ್ಣಡಕೇsssss ಮsಡsದೀರೇ

ಆರಿಶಿದಣ್ಣಡಕೇsssss, ವಡದಿರಣ್ಣ ತಂಗೀನೂ
ಮುರದೊಂದೆಲೆಯೇ ಮೆಲಿದೀರೇs ಮೇಲಿದೀರೇ

ಹಾಲಲ್ಲೇ ಬೆಂದsssss ರವೆ ಶುಣ್ಣss ತಿಂದೀಕಂಡೇ
ಜಾಣನಂಗುಡಿಯೇsssss ಹೊಗೆಶಪ್ಪೇs
ಜಾಣನಂ ಗುಡಿಯೇsssss ಹೊಗೆಶಪ್ಪ ತಿಂದಿಕಂಡೇ
ಕೆಂಡsದಂತ ರೊಂಡsssss ಉಲುಗಿವ್ವೇs

ಕೆಂಡsದಂತ ರೊಂಡsssss ಉಲುಗಿವ್ನೆ ನಿನ್ನಣ್ಣsನೇ
ತಂಗೀ ಕೂಡೇನsssss ನಡುದೀನೇ?
ತಂಗೇ ಕೂಡೇನsssss ನುಡುದಿನೆ ನಿನ್ನಣ್ಣsನೇ
“”ಇನ್ನಾರೂ ಏಲೇsssss ಮsದುವೀಗೇs”

ಲಟ್ಟೆಲ್ಲ ಮಾತೇsssss ತಂಗೀ ಕೂಡೇಲುsವಾಗೇ
ಒಡಲೊಡೆದೇ ದುಕ್ಕsssss ಬsರುತ್ತಿತ್ತೇs
ಒಡಲೊಡೆದೇ ದುಕ್ಕsssss ಬರುವಂತs ಹೊತ್ತಿಗೇ
ಯೇನಾಗಿತ್ತೊ ಲಣ್ಣsssss, ನನಗ್ಹೇಲೋs?

“”ಯೇನೂನಾಗನಿಲ್ಲ ತಂಗೀ ಯಂತೂಲಾಗನಿಲ್ಲ ತಂಗೀ,
ಕಣ್ಣಿಗೇ ಕಶಿಯೇsssss ಹೊಡುದಿತ್ತೇs
ಕಣ್ಣಿಗೇ ಕಶಿಯೇsssss ಹೊಡುದುತ್ತು ತಂಗೀ, ಕೇಲೇ
ಲದುಕಾಗೇ ನೀರೇsssss ಶಲುಶಿದ್ದೇ

ಲದುಕಾಗೇss ನೀರೆsssss ಶಲಶಿದ್ದೇ ತಂಗೀ, ಕೇಲೇ
ಲಿನ್ನಾರೂ ಯೇಲೇssss ಮದುವೀಗೇs
ಮಾಲೂಗೀ ವಲಗೇsssss ಲಾಲುಕಾಶುವ ತಾಯಿ,
ತಂಗೀ ಬೆನ್ನರಗೇsssss ಕsರಕಂತೇs

ತಂಗೀ ಬೆನ್ನರಗೇsssss ಕರಕಂತೆ ತಾಯೀ, ಕೇಲೇ
ಅಜ್ಜಿಮನೆ ಮದುವೀಗೇsssss ಹೋಗೇ ಬತ್ತೇ”
ಅಜ್ಜಿಮನೆ ಮದುವೀಗೇsssss ಹೋಗೇಬತ್ತೇಂದ್ಹೇಲುವಾಗೇ
ತಾಯೀಗೂ ದುಕ್ಕsssss ಬsರುತ್ತಿತ್ತೇ

ತಾಯೀಗೂ ದುಕ್ಕsssss ಬರುವಂತಾ ಹೊತ್ತೀಗೇ
ತಾಯೀ ಕೂಡ್ಯೇನsssss ನುಡುದೀಲು?
“”ಕೇಲಲೆ ಕೇಲಾಲೇsssss ತಾಯೀ, ನೀನಾರು ಕೇಲೇ
ಯಾಕೇ ಮಾಡೆ ದುಕ್ಕsssss ಬಿಡುತಿದಿಯೇ?”

“”ಯೇನೂಲಾಗನಿಲ ಮಗುಲೇ, ಯಂತೂ ಲಾಗನಿಲ ಮಗುಲೇ,
ಹುಟ್ಟಿದsssss ವಂದೇsssss ಮಗುಲsಲೇ
ಹುಟ್ಟಿದsssss ವಂದೇsssss ಮಗುಲಲೆ ಮಗುಲೇ, ಕೇಲು
ಲಜ್ಜಿಮನೆ ಮದುವೀಗೇsssss ಶವಣಿದ್ದೇ

ಲಜ್ಜಿಮನೆ ಮದುವೀಗೇsssss ಶವಣೆದ್ದಿ ಮಗಲೇ, ಕೇಲೇ
ಲಿನ್ಯಾರೇ ನನ್ನsssss ಬುಡುದಲ್ಲೀs?”
ಕೇಲಲೆ ಕೇಲಾಲೇsssss ತಾಯೀ, ನೀನಾರು ಕೇಲೇ
ಲಿಂದ್ಹೋಗೇ ನಾಲೇsssss ಬರುತೀನೆ”

ಲಟ್ಟಲ್ಲಾ ಮಾತೇsssss ತಾಯೀ ಕೂಡ್ಹೇಲೀಲೇ
ಲಣ್ಣನ ಬಲಗೇsssss ನಡದೀಲೇ
ಲಣ್ಣನೂ ಮುಂದಾಗೇ ತಂಗೀನೂ ಹಿಂದಾಗೇ
ನಡೆದವರೇ ತಮ್ಮsssss ನಡಗೆಲ್ಲೀ

ನಡೆದವರೇ ತಮ್ಮsssss ನಡಗ್ಯಲ್ಲಣ್ಣ ತಂಗೀನೂ
“”ಹೊತ್ತು ಮಜ್ಜನವೇsssss ಗsಲುದಿತ್ತುs
“”ಹೊತ್ತು ಮಜ್ಜನವೇsssss ಗಲುದಿತ್ತು ಲಣ್ಣ, ಕೇಲೋ,
ನಡೆದೀ ನೆಡದಿ ನನಗೇsssss ದಣುವಾದೋ

ನೆಡದೀ ನೆಡದಿ ನನಗೇsssss ದಣುವಾದೊ ಲಣ್ಣs, ಕೇಲೋ
ಲೆಟ್ಟದೂರs ಲಜ್ಜಿsssss ಮನೆಗೋಲು?”
“”ಆಗುಡೆ ಹತ್ತು ಬೇಕೇsssss ಲೀಗುಡ್ಡೆ ಲಿಲಿsಬೇಕೇ
ಆಗುಡೆ ಮರಿಯಲ್ಲೇsssss ಲಜ್ಜೀಮನೆ”

“”ಕೇಲಲೊ ಕೇಲಾಲೋ ಲಣ್ಣs, ನೀನರು ಕೇಲೋ
ಶಂಜೀಯುs ಕಾಲsssss ಬsರುತೀದೋೕs
ಶಂಜೀಯುs ಕಾಲsssss ಬರುತೀದು ಲಣ್ಣs, ಕೇಲೋ
ಕತ್ತಲೆ ಹೊತ್ತೀಗೇsssss ನಡೆsನಾರೇs

ಕತ್ತಲೆ ಹೊತ್ತೀಗೇsssss ನಡೆನಾರೆ ಲಣ್ಣs, ಕೇಲೋ
ಕಣ್ಣಿಗೆ ನಿದ್ದುರಿಯೇsssss ಬsರುತೀದೋೕs
ಕಣ್ಣಿಗೆ ನಿದ್ದುರಿಯೇsssss ಬರುತಿದು ಲಣ್ಣ, ಕೇಲೋ
ಗೋರಂಬೂ ಲಡವೀsssss ನಮುಗಲೋೕs”

“”ಕೇಲಲೆ ಕೇಲಾಲೆsssss ತಂಗೀ, ನೀನಾರು ಕೇಲೆ
ಈ ಲಡವ್ಯಲ್ಲೆ ನಾವೇsssss ವಲಿಬೇಕೇss

ಈ ಅಡವ್ಯಲ್ಲೇ ನಾವೇsssss ವಲಿಬೇಕು ತಂಗೀ, ಕೇಲೇ
ಬೆಲ್ಗು ಜಮಿಯಾಗೇsssss ನಡೇಬೇಕೇs"

""ಕೇಲಲೊ ಕೇಲಾಲೋsssss ಲಣ್ಣs ನೀನಾರು ಕೇಲೋ
ಹುಲಿಯು ನೆರಿಯಗುಲೇsssss ಬsರsತೀದೋs
ಹುಲಿಯು ನೆರಿಯಗುಲೇsssss ಬsರತೀದು ಲಣ್ಣs, ಕೇಲೋ
ಹೇಗೇ ಮಾಡಿ ನಾವೇsssss ವsಲಿಬೇಕೋs?

ಹೇಗೇ ಮಾಡಿ ನಾವೇsssss ವಲಿಬೇಕು ಲಣ್ಣ, ಕೇಲೋ
ಕಣ್ಣಿಗೆ ನಿದ್ದರಿಯೇsssss ಬsರsತಿದೋ"
ತಂಗೀ ಹೇಲಿದ ಮಾತೇssss ಲಣ್ಣs ಕೇಲಿಶಿಕಂಡೇs
ಜೋಗೀಲs ನೀಡೇsssss ಕುಲಿತೀನೇs

ಜೋಗಿಲs ನೀಡೇsssss ಕುಲುತಿನೆ ನಿನ್ನಣ್ಣsನೇ
""ನಿದ್ದುರೆ ಬಂದಾರೇsssss ಮsನೀಕsಣೇ
ಲಟ್ವಾ ಹೇಲುವಾಗೇsssss ಕಣ್ಣಿಗೆ ನಿದ್ದುರೆ ಬಂದೇ
ಯೇನಂದೇ ಲಣ್ಣsssss ನುಡುದೀನೇ?

ಯೇನೆಂದೇ ಲಣ್ಣsssss ನುಡುದಿನೆ ತಂಗೀ ಕೂಡೇ
""ಕಾಲs ಮೆನೆ ನೀನೇsssss ಮನಗೂ ಬೇಕೇ
""ಕಾಲs ಮೆನೆ ನೀನೇsssss ಮನಗು ಬೇಕು ತಂಗೀ, ಕೇಲೇ
ಕೂತಿಕಂಡೆ ನಾನೇsssss ವಲಿತೀನೇ"

ಲಣ್ ಹೇಲಿದ ಮಾತೇsssss ತಂಗೀ ಕೇಲಿಶಿಕಂಡೇs
ಲಣ್ಣನ ಕಾಲಮೇನೇsssss ವsರುsಗೀಲೇ
ಲಣ್ಣನ ಕಾಲುಮೇನೇsssss ವರಗೂ ಹೊತ್ತೀನಲ್ಲೀ
ನಿದ್ದೂರೇ ಬಂದೇsssss ಲರುಗಿತ್ತೇs

ನಿದ್ದೂರೇ ಬಂದೇsssss ವರಗೂ ಹೊತ್ತೀನಲ್ಲಿ
ಹೊಚಪಂಜಿ ಕಣ್ಣಕಟ್ಟೇsssss ಮನುಗೀಶೀ
ಹೊಚಪಂಜಿ ಕಣ್ಣಕಟ್ಟೇ ಮನುಗಿಶಿ ನಿನ್ನಣ್ಣsನೇ
ಲಿಂದೊಮ್ಮೆs ಮನೆಗೇsss ಬsರುವೋನೇ

ಲಿಂದೊಮ್ಮೆs ಮನೆಗೇsssss ಬರುವನೆ ನಿನ್ನಣ್ಣsನೇ
ತಾಯೀ ಕೂಡ್ಯೇನsssss ನುಡಿದೀನೇss?
ತಾಯೀ ಕೂಡ್ಯೇನsssss ನುಡಿದಿನೆ ನಿನ್ನಣ್ಣsನೇ
""ತಂಗೀ ಕಣ ಕಟ್ಟೇsssss ಬಿಟ್ಟೇಬಂದೇs

ತಂಗೀ ಕಣ ಕಟ್ಟೇssssss ಬಿಟ್ಟೇಬಂದೆ ತಾಯೀ, ಕೇಲೇ
ಲಾರಣದಡವೆಲ್ಲೇssssss ವsರಗೀಲೇ"
ಲಾರಣದಡವೆಲ್ಲೇssssss ವsರಗೀಲು ತಂಗಮ್ಮsನೇ
ಎಚ್ಚರಕೇಲಾಗೀssss ಕುಲತೀಲು

“"ಹರಹರs◌ಂದಾಲೇ “"ಶಿವಶಿವ"ಲೆಂದಾಲೇ
“"ನೆರಿಯೂ ಹುಲಿಗsಲೇssss ಬರತಿದವೋ
ನೆರಿಯೂ ಹುಲಿಗsಲೇssss ಬರುವಂತಾ ಹೊತ್ತೀಗೇ
ನನ್ನಣ್ಣs ಬಿಟ್ಟೇssssss ನೆಡದಿದನೇs"

ನನ್ನಣ್ಣs ಬಿಟ್ಟೇssssss ನೆಡದೀನಂದೇಲೀಲೇ
ದುಕ್ಕ ಮಾಡುತ್ತೇssssss ಕುಲುತೀಲು
ದುಕ್ಕ ಮಾಡುತ್ತೇssssss ಕುಲುವಂತಾ ಹೊತ್ತೀಗೇ
ಶಾಲ ಕಣ್ಣನ್ ನೆರಿಯೇssssss ಬರತೀದೋ

ಶಾಲ ಕಣ್ಣನ್ ನೆರಿಯೇssssss ಬರುವಂತಾ ಹೊತ್ತೀಗೇ
ಕುತ್ತೀಗಿ ಮುರದೇssssss ತಿನsತೀದೋ

---

* ತೋಳನಿಗೆ ಬಲಿ; ಹೆಗಡೆ ಎಲ್.ಆರ್. ಗುಮ್ಮನ ಪದಗಳು. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೩. ಪು.ಸಂ. ೪೫-೫೩.

## ೧೫. ಕರ್ತಿರಾಯ *

ಸುವ್ವಿಯೋ, ಚನ್ನಬಸವಯ್ಯ, ಸುವ್ವಿ || ಪ ||
ಹತ್ತೆ ವರುಸದ ಚಿಕ್ಕಪ್ರಾಯದ ಮಗನು
ತಾಯಿಕುಟ್ಟೇನ ಮಾತಾಡುತಾನೆ
"ಕಾಳಿಂಗನ ಹಟ್ಟಳು ಬೆಟ್ಟಕೆ
ಮಿರುಗನ ಬೇಟೆ ಹೋಗುತೀನಿ
ನೀನು ಮುಂಜಾನೆ ಬುತ್ತಿ ಕಟ್ಟೆ ತಾಯಿ.'
"ಹತ್ತು ವರುಸದ ಚಿಕ್ಕ ಪ್ರಾಯದ ಮಗನೆ
ನೀ ಮಿರುಗನ ಬೇಟೆ ಹೋಗಬೇಕ?'
"ಹತ್ತು ವರುಸದ ಕನ್ನೆ ಪ್ರಾಯದ ಮಗ
ನಾನು ಮಿರುಗನ ಬೇಟೆ ಹೋಗುತೀನಿ
ನೀನು ಹಾಲು ಅನ್ನದ ಬುತ್ತಿ ಕಟ್ಟೆ ತಾಯಿ.'

ದಾರಿಲ್ಲಿ ಹುಟ್ಟೋದು ದಾರಿಲ್ಲಿ ಬೆಳೆಯೋದು
ದಾರಿಲ್ಲಿ ಆರತಿ ಬೆಳಗೊ ಮುಳ್ಳು ಹಲಸಿನಕಾಯಿ
ಅದರ ತೊಟ್ಟು ತೆಗೆದು, ಅದರ ಮುಳ್ಳು ತೆಗೆದು
ಅವಳು ಮುಂಜಾಣೆ ಅಡಿಗೆ ಮಾಡಿದಳು;
ಅವಳು ಮಾಡ್ಯಾಳೆ, ತಾಯಮ್ಮ;
ಅವಳು ಹಾಯವಾಗಿ ಬುತ್ತಿ ಕಟ್ವಾಳೆ
ತ್ವಾಟದಲ್ಲಿ ಹುಟ್ಟೋದು ನೀಟಾಗಿ ಬೆಳಿಯೋದು
ತ್ವಾಟದಲ್ಲಿ ಆರತಿ ಬೆಳಗೋದು
ತ್ವಾಟದಲ್ಲಿ ಆರತಿ ಬೆಳಗೋ ಬಾಳೆಯಕಾಯಿ
ತೊಟ್ಟು ತಗದು ಪಚ್ಚಿಡಿ ಕೂದು

ಅವಳು ಹಾಲು ಅನ್ನದ ಅಡಿಗೆ ಮಾಡ್ಯಾಳೊ
ತಾಯಮ್ಮ ಹಾಯವಾಗಿ ಬುತ್ತಿ ಕಟ್ಯಾಳೊ
ತಾಯಮ್ಮ ಕಾಳಿಂಗಗೆ ನೀರ ಕೊಟ್ವಾಳೆ
ಮಕಮಜ್ಜನ ಮಾಡ್ಯಾನೆ, ಅರಮನೆಗೆ ಹೋದಾನೆ
ನಾಮದ ಪೆಟ್ಟಿಗೆ ತಗದಾನೆ, ನಾರಯಣನ ನೆನದಾನೆ
ನಾಮವ ಧರಿಸ್ಯಾನೆ, ಈಶ್ವರನ ನೆನದಾನೆ
ವಿಭೂತಿ ಧರಿಸ್ಯಾನೆ, ಈಶ್ವರನ ನೆನದಾನೆ
ತಾಯಮ್ಮ ಹೋದಾಳೆ ಮಂತ್ತಿ ಪರದಾನಿ ಕರಿಸ್ಯಾಳೆ
ಮಂತ್ರಿ ಪರದಾನಿ ಕರೆದೇನಾ ಹೇಳ್ಯಾಳೆ
"ನನ್ನ ಹತ್ತು ವರುಸದ ಚಿಕ್ಕ ಪ್ರಾಯದ ಕಂದ
ಅವನು ಮಿರುಗನ ಬೇಟೆ ಆಡುವಾಗ
ಪರದಾನಿ, ಅವನ ಬಿಟ್ಟೊಂದು ಗಳಿಗೆ ಇರಬೇಡಿ.'

ಬಿಲ್ಲು ಬಾಣವ ಬೆನ್ನಿಗೆ ಕಟ್ಟಿಕೊಂಡ
ಮಂತ್ರಿ ಪರದಾನಿ ಕರಕೊಂಡ, ಕಾಳಿಂಗ
ತಾಯಿ ಕೊಟ್ಟೀಳೇವ ಈಸಿಕೊಂಡ, ಕಾಳಿಂಗ
ಬಗ್ಗಿ ಎರಡು ಪಾದ ಹಿಡಕೊಂಡ, ಕಾಳಿಂಗ
ಹಿಡಕೊಂಡೇನಂದನೆ : ತಾಯಿ ನಿನ ಪಾದ ಗತಿಯೆಂದ
ಹೋಗುವಾಗ ದುಃಕ ಎರಗೀತು ಹಡದವ್ವಗೆ
ದುಃಕ ಎರಗಿದ್ದ ನೋಡ್ಯಾನೇ ಕಾಳಿಂಗ
ಮಲ್ಲಿಗೆ ವನಕೆ ಹೋದಾನೆ ಕಾಳಿಂಗ
ಮಲ್ಲಿಗೆ ವನಕೆ ಹೋಗಿ ಮಲ್ಲಿಗೆ ಗಿಡವಾ ತಂದು
ಮನೆಯ ಹಿಂದೆ ಹಾಕ್ಯಾನೆ ಕಾಳಿಂಗ
"ಈ ಮಲ್ಲಿಗೆ ಗಿಡ ಚಿಗುತರೆ

ಮಲ್ಲಿಗೆ ಗಿಡ ಚಿಗುತು ಪಲ್ಲೈಸಿದರೆ
ನನ್ನ ಮಗ ಚನ್ನಾಗಿ ಅವನೆಂದು ತಿಳಿಯವ್ವ'

ಸುವ್ವಿಯೋ ಚನ್ನಬಸವಯ್ಯ ಸುವ್ವಿ
ಬಿಲ್ಲು ಬಾಣವ ಅವನು ಬೆನ್ನಿಗೆ ಕಟ್ಟುಕೊಂಡ
ಅವನು ಹಟ್ಟಳು ಬೆಟ್ಟಕೆ ಹೋದನು ಕಾಳಿಂಗ
ಹಟ್ಟಳು ಬೆಟ್ಟದಲಿ ಚೆದರಿಕೊಂಡರು ಮಂತ್ರೀರು
ಮನಗಿದ ಮಿರುಗ ಎದ್ದುನಿಂತೊ
ಸಣ್ಣ ಸಣ್ಣ ಮಿರುಗ ಎದ್ದುನಿಂತೊ
ಕಾಳಿಂಗ ಅವನೊಡನೆ ಬಾಣದ ತುದಿಯಲ್ಲಿ
ಕಾಳಿಂಗ ಅವರು ಮಂತ್ರಿ ಪರದಾನಿ ಹತ್ತಿರಕೆ ಕರೆದಾನೆ
"ಮಂತ್ರಿ ಪರದಾನಿ ನೀನಿಲ್ಲಿ ಬಾರೊ
ಹೊಡಿದಿರೊ ಮಿರುಗನ ಊರಿಗೆ ಕಳಿಸೋನು'

ಅವರ ತಂದೆ ಕತ್ತಲೆರಾಯ ಹಾಲು ಅನ್ನ ಉಂಡು
ಸಣ್ಣ ಪಟ್ಟೆಮಂಚದ ಮ್ಯಾಲೆ ವೀಳ್ಯೇನಾದರೆ ಮೆಲುವಾಗ
ಪರದಾನಿ ಸತ್ತ ಮಿರುಗನ ಹೂತುಕೊಂಡು ಬಂದಾನೆ
ತಂದೆ ಇದಿರಿಗೆ ಮಡಿಗ್ಯಾನೆ. ಕತ್ತಲೆರಾಯ
"ಎಂತೆಂತ ಮಿರುಗ ಹೊಡದನೊ, ಪರದಾನಿ
ಇದು ಎಷ್ಟೋ ಇದರ ಮರಿ ಎಷ್ಟೋ, ಪರದಾನಿ
ಈ ಶಾಪ ಎಲ್ಲಿ ಕಳಿಯನೋ, ಪರದಾನಿ.'
ಆ ಮಾತ ತಗೊಂಡು ಹತ್ತೆ ವರುಸದ

ಚಿಕ್ಕ ಪ್ರಾಯದ ಮಗ ಪರದಾನಗೇನಂತ ಹೇಳುತಾನೆ
"ಇಂತಿಂತ ಮಿರುಗ ಹೊಡದೊ
ಇದೆಷ್ಟೊ ಇದರ ಮರಿಯಷ್ಟೊ, ಪರದಾನಿ?
ಈ ಪಾಪ ನಾವೆಲ್ಲಿ ಕಳಿಯಾನೊ, ಪರದಾನಿ?
ಅಡವಿ ವಳಗೆ ಈರಣ್ಣನ ಗುಡಿವುಂಟು
ಈರಣ್ಣನ ಗುಡಿಗೆ ಹೋಗನಾ ಪರದಾನಿ
ಈರಣ್ಣನ ಪೂಜೆ ಮಡನಾ

ಈರಣ್ಣನ ಪೂಜೆ ಮಾಡಿದರೆ ಪಾಪ ಪರಿಹಾರ
ಪರದಾನಿ ಕಾಳಿಂಗನು ಮಾತಾಡಿಕೊಂಡು
ಅರಣ್ಯ ಅಡವೀಲಿ ಹೋಗುತಾರೆ
ಅರಣ್ಯ ಅಡವೀಲಿ ಹೋಗುವಾಗ ಕಾಳಿಂಗ
ಕಾಡಕ್ಕಿ ಮಟ್ಟೆ ಇಕ್ಕವೆ
ಕಾಡಕ್ಕಿ ಮಟ್ಟೆ ಇಕ್ಕಿದ ಕಾಲದಲ್ಲಿ

ಸರಪ ಹೋಗಿ ಮಟ್ಟೆ ನುಂಗತದೆ
ಕಾಳಿಂಗ ನೋಡಿದ ಸರಪನ
"ಅಲ್ಲಿ ನೋಡೊ ಪರದಾನಿ, ಅವಲಕ್ಷಣವ'
ಅಂದನು ಅವನು ಹಿಂದಿರುಗಿ ಬರುತಾನೆ
ಹಿಂದಿರುಗಿ ಬರುವ ಕಾಲದಲ್ಲಿ
ಮನಗಿದ್ದ ಹುಲಿ ರಕ್ಕುಲಿಸಿ ಎದ್ದತ್ತೋ
ಕಾಳಿಂಗರಾಯ ಭೂಮಿಗೆ ಬಿದ್ದನೊ ಅಡಿಯಾಗಿ
ನಿಂತಿದ್ದ ಪರದಾನಿ ಹಚ್ಚಡವ ಮರೆಮಾಡಿ
ಸತ್ತಿದ್ದ ಶವವ ಹೊತ್ತುಕೊಂಡ ಪರದಾನಿ
ಬಂದನು ಊರಿಗೆ ಪರದಾನಿ
ಅವರ ತಂದೆ ಕತ್ತಲೆರಾಯ ಗೋಳು ಗೋಳೊ
ಎಲ್ಲರು ಗೋಳು ಗೋಳಂದರು
ಕತ್ತಲೆರಾಯ ಏನಂದು ಹೇಳುತಾನೆ
"ಸಿದ್ದರಾಳಿನಲ್ಲಿ ಸುಡು' ಹೋಗಿರೊ ವರದಾನಿ
ಸತ್ತ ಶವವ ಎಷ್ಟೊತ್ತು ಮಡಗೋದು?
ಸಿದ್ದರಾಳಿನಲ್ಲಿ ಗಂಧದ ಸೌದೇಲಿ
ಸುಡುಹೋಗಿರೋ ಪರದಾನಿ' ಅನ್ನೊವತ್ತಿಗೆ
ಹೆತ್ತವ್ವ ಏನು ಮಾತ ಹೇಳುತಾಳೆ
"ಹೆತ್ತ ಕಳ್ಳು ನನಗೆ ತಡೆಯದು ಪರದಾನಿ
ಗೊಂಬೆಮಂಟಪಕೆ ಹೊತ್ತುಕೊಳ್ಳೊ ಪರದಾನಿ
ನನ್ನ ಸತ್ತು ಮಗನ ಮದುವೆ ಮಾಡಬೇಕು, ಪರದಾನಿ
ಗೊಂಬೆ ಮಂಟಪಕೆ ಹೊತ್ತುಕೊಂಡು ಹೋದರು ಸುವ್ವಿ
ಸುವ್ವಿ ದೇವರ ನೆನದೇವು ಸುವ್ವಿ
ನಂಜನಗೂಡು ನಂಜುಂಡೇಶ್ವರನ ನೆನದೇವು ಸುವ್ವಿ !

ಗೊಂಬೆ ಮಂಟಪಕೆ ಮಡಗ್ಯಾರೆ
ತಾಯಮ್ಮ ಪರದಾನಿ ಕರದು,
ಹತ್ತು ಸಾವಿರ ಮೇಲೆ ಒಂದು ಸಾವಿರ ಕೊಡುತೀನಿ
ಮೇಲೆ ವಜುರದ ಪದಕವ ಕೊಡುತೀನಿ
ನನ್ನ ಮಗ ಸತ್ತೊನಿಗೆ ಹೆಣ್ಣು ತಾರೋಗೊ
ಹತ್ತೆ ಸಾವಿರವ ಕಟ್ಟಿಕೊಂಡ, ಪರದಾನಿ
ಹೆಣ್ಣ ತರಲೋದ ಪರದಾನಿ
ಬೀದಿ ಬೀದಿಲಿ ಹೋದ ಕೇರಿ ಕೇರಿಲಿ ಹೋದ
ಏನಂದು ಅವರು ಸಾರುತಾನೆ :
"ಸತ್ತೋನಿಗೆ ಹೆಣ್ಣ ಕೊಡಿರಮ್ಮ'
ಹೆಣ್ಣು ಕೊಡಿ ಎಂದು ಸಾರಿಕೊಂಡೋಗುವಾಗ

ಎಲ್ಲರೂ ನಗುಪಾಟ್ಟು ಮಾಡಿ
“ಸತ್ತೋನಿಗೆ ಹೆಣ್ಣು ಕೊಡುವುದುಂಟೇನೊ, ಪರದಾನಿ !’
ಪರದಾನಿ, ಕೇರಿ ಕೇರಿಲ್ಲಿ ಸಾಕಿಕೊಂಡೋಗುವಾಗ
ಆ ಕೇರಿಲ್ಲಿ ಒಬ್ಬ ಬಡ ಬ್ರಾಹ್ಮಣ
ತಾಮ್ರದ ಪಾತ್ರೆ ಹಿಡಕೊಂಡು
ಕೇರಿ ಕೇರಿಲ್ಲಿ ಬಿಕ್ಷವ ಮಾಡುವಾಗ
“ಏನಯ್ಯ ಪರದಾನಿ ಸಾರುವುದು?’ ಎಂದು
ನಿಂತುಕೊಂಡು ಕೇಳ್ಯಾನೆ ಆ ಬಡಬ್ರಾಹ್ಮಣ
ಪರದಾನಿ, “ಹತ್ತು ಸಾವಿರ ಕೊಡುತೀನಿ
ಮೇಲೊಂದು ಸಾವಿರ ಕೊಡುತೀನಿ
ಸಾವಿರದ ಮೇಲೆ ರುಲಿ ಪದಕವ ಕೊಡುತೀನಿ
ಸತ್ತೋನಿಗೆಣ್ಣ ಕೊಡಿ’ ಎಂದ
“ಆದರಾಯಿತು ಬಾರಯ್ಯ’ ಎಂದು
ಬಸವಣ್ಣನ ಗುಡಿಗೆ ಹೋದಾರೆ ಇಬ್ಬರು
ಚ್ಯಾಪೆಯ ಹಚ್ಚಡವ ಹಾಸ್ಯಾನೆ ಬ್ರಾಹ್ಮಣ
ಪರದಾನಿ ಹತ್ತು ಸಾವಿರವ ಸುರದಾನೊ
ಹತ್ತು ಸಾವಿರದ ಮೇಲೆ ಒಂದೆ ಸಾವಿರವ
ಒಂದು ಸಾವಿರದ ಮೇಲೆ ರುಲಿ ಪದಕವ ಕೊಟ್ಟನು
ಎಲ್ಲಾವ ಬ್ರಾಹ್ಮಣ ಕಟ್ಟಿಕೊಂಡು

ಮೂಟೆಯನೊತ್ತು ಹೋದನು ತನ್ನರಮನೆಗೆ
ಗಂಟ ಹೊತ್ತುಕೊಂಡು ಬಂದದ್ದು
ಬ್ರಾಹ್ಮಣಗಿತ್ತಿ ನೋಡುತಾಳೆ :
“ಯಾರ ಮನೆ ನುಗ್ಗಿದಿರಿ? ಯಾರ ಮನೆ ಕಳ್ಳತನ ಮಾಡಿದಿರಿ?’
“ಯಾರ ಮನೆ ನುಗ್ಗಲಿಲ್ಲ, ಯಾರ ಮನೆ ಕಳ್ಳತನ ಮಾಡಲಿಲ್ಲ
ಚಿಕ್ಕೋಳು ಚನ್ನವ್ವನೀ ಕಟವಿನ
ದೆಸೆಯಿಂದ ನನ್ನ ಸಾಲ ಸೋಲೆಲ್ಲ ಹರಿದೋದೊ !’
ಹಣವಿನ ಗಂಟ ಹಟ್ಟಿಗೆ ಎಸೆದಳು :
“ಸತ್ತೋನಿಗೆ ಹೆಣ್ಣ ಕೊಡುಲಾರೆ’

ಹೋಗಿ ಮೂರು ಗುದ್ದ ಹೊಡೆದನು, ಬ್ರಾಹ್ಮಣ.
ಹೋಗಿ ಮೂರು ಗುದ್ದ ಹೊಡಿಯೋವತ್ತಿಗೆ
ಚಿಕ್ಕೋಳು ಚನ್ನಮ್ಮ ಓಡೋಡಿ ಬಂದಳು
“ನಮ್ಮವ್ವನ ನೀನೇಕೆ ಹಡೊದೀ?
ನನ್ನಪ್ಪ ನಿನ್ನ ಸಾಲಸೋಲವ ತೀರಿಸಿಕೊಳ್ಳಿ.
ತುಪ್ಪ ಅನ್ನವ ಸುಖವಾಗಿ ಉಣ್ಣಪ್ಪ

ನನ್ನವ್ವನ್ಯಾಕೆ ಹೊಡೆದೀಯೊ ನನ್ನಪ್ಪ?
ತುಂಬಿದೇರಿಯ ಮ್ಯಾಲೆ ಮಂಡೆಯ ವದರಿದ್ದೆ
ನೀರಿಗೆ ತಂಬುಲವ ಉಗದಿದ್ದೆ
ನೀರಿಗೆ ತಂಬುಲವ ಉಗದಿದ್ದ ಕಾರಣ
ಸತ್ತೋನಿಗೆ ನಾನು ಮದುವೆ ಆಗಬೇಕು'
ಹಣವ ಕೊಟ್ಟಿದ್ದ ಪರದಾನಿ ಬಂದು
"ಎಷ್ಟೊತ್ತು ಬ್ರಾಹ್ಮಣ ತಡಮಾಡೋದು?'
ಆ ಮಾತ ಕೇಳಿ ಅವರ ತಾಯಿ ಆಗ
ಆರು ಸೇರು ಅಕ್ಕಿ ಹಾಕಿದಳು
ಆರು ವರದ ಗಾಲಿಗೆ ಹರಿವಾಣದಲ್ಲಿ
ಅವರಣ್ಣ ತಂಗೇರು ಉಣಕೂತು ಏನ ಹೇಳುತಾರೆ;
"ಅಕ್ಕ ತಂಗೇರು ಋಣ ಹರಕೊಳ್ಳಿ'
ಎಂಟೆ ವರದ ಗಟ್ಟಿ ಹರಿವಾಣದಲ್ಲಿ
ಅವರಕ್ಕ ತಂಗೇರು ಉಣಕೂತು ಏನಂದಾರೆ

"ನಿನ್ನ ಎದೆಯ ಹಾಲಿನ ಋಣವ ಹರಕೊಳ್ಳೆ'
ಊಟ ಮಾಡಾಯಿತು, ಸೀರೆ ಉಡಿಸಾಯಿತು
ಬಳೆ ಬಂಗಾರ ತೊಡಿಸ್ಯಾರೊ ಚನ್ನವ್ವಗೆ
ಮರುಗ ಮಲ್ಲಿಗೆ ಮಡಿಸ್ಯಾರೊ ಚನ್ನವ್ವಗೆ
ಮಡುಲಕ್ಕಿ ಹೂದಾರೊ ಚನ್ನವ್ವಗೆ'
ಅವರಪ್ಪನ ಮನೆ ತಮ್ಮಟದ ಬುತ್ತಿ ಕಟ್ಟಿಕೊಂಡು
ಒಳಬಾಕಲ ಬಿಟ್ಟು ಬರುವಾಗ
ಗೌಳಿ ಏನಂತ ನುಡದಾವೊ :
"ನಿನ್ನ ಮುತ್ತೈದೆತನ ಸ್ಥಿರವಾಗಲಿ'

ಮಗಳ ಕಳುಹ್ಯಾಳೊ ಅವಳು ಮಂಚಕೆ ಮಲಿಗ್ಯಾಳೊ
ಮಗಳ ಕಳುಹ್ಯಾಳೊ ಅವಳು ಮಂಚಕೆ ಮಕಾಡೆ ಮಲಿಗ್ಯಾಳೊ
ಮಗಳ ಕರಕೊಂಡು ಹೋದನು, ಬ್ರಾಹ್ಮಣ
ಬಸವಣ್ಣನ ಗುಡಿ ಮುಂದಕೆ
ದೇವರಿಗೆ ಪೂಜೆ ಮಾಡ್ಯಾರೊ
ದೇವರ ಪೂಜೆ ಮಾಡಿಕೊಂಡು
ಚನ್ನವ್ವನ ಕೈಯ ಹಿಡಕೊಂಡು
ಏನಂತ ಹೇಳುತಾನೆ ಬ್ರಾಹ್ಮಣ :

"ಅಪ್ಪನ ಮನೆಯೆಂದು ಆಸೆ ಮಾಡಬೇಡ'
"ಅಪ್ಪನ ಮನೆಯೆಂದು ನಾನು ಆಸೆ ಮಾಡೋದಿಲ್ಲ'
ಮಗಳ ಕಳುಹಿಸಿಬಿಟ್ಟು ಮನೆಗೆ ಹೋದಾನೆ.

ಅವಳ ಕರಕೊಂಡು ಪರದಾನಿ ಹೋದಾನೆ
ಅವಳ ಮಾವನ ಮುಂದಕೆ ನಿಲ್ಲಿಸ್ಯಾನೆ
ಮಾವನ ಮುಂದಕೆ ನಿಲ್ಲಿಸೋವತ್ತಿಗೆ
ಒಂಬತ್ತೆ ದೀಪ ಕತ್ತಿಕೊಂಡೊ !
"ಏನಯ್ಯ ಪರದಾನಿ ಈ ಹೆಣ್ಣ ಎಲ್ಲಿ ತಂದ್ಯೋ
ತಾಯಿ ತಂದೆರು ಇಲ್ಲವೇನೊ?
ಇವಳ ಯಂಗೆ ಮುಂಡೆ ಮಾಡಾನೊ ಪರದಾನಿ?
ಮದುವೆ ಆದ ಮೇಲೆ ಒಡವೆ ಬಿಚ್ಚಿಕೊಂಡು
ಅವರಪ್ಪನ ಮನೆಗೆ ಕಳುಹಾನಾ, ಪರದಾನಿ'
ಕಲ್ಯಾಣವೇ ಲಕ್ಷ್ಮಿ ಕಲ್ಯಾಣವೇ
ಕಲ್ಯಾಣವೆನ್ನಿ ಜನರೆಲ್ಲ
ಅಡಿಕೆ ಚಪ್ಪರ ಎಂಬತ್ತೆ ಗಾವುದ;
ಬಾಳೆ ಚಪ್ಪರ ಅರುವತ್ತೆ ಗಾವುದ
ಕಲ್ಯಾಣವೇ ಲಕ್ಷ್ಮಿ ಕಲ್ಯಾಣವೇ
ಮದುವೆ ಮಾಡ್ಯಾದೊ, ಚಪ್ಪರ ಶಾಸ್ತ್ರ ಮುಗಿದೋದೊ
ಅವರ ಬಂಡಿ ಬಂದು ಅಂಗಳದಲ್ಲಿ ನಿಂತವೆ
'ಚಿಕ್ಕೋಳೆ ಚನ್ನವ್ವ ಮಡಿ ಹೋಗೆ'
"ಗಂಡನ ತಿನ್ನೋಳಿಗೆ ಹೂವಿನ ಹಂಬಲವೇಕೆ?
"ನೀ ಮುತ್ತೈದೆ ಹೋಗಿ ಮಡಿ ಅತ್ತೆ !'
"ಹತ್ತು ಬಂಡಿ ಬಂದು ಹಟ್ಟೀಲಿ ನಿಂತವೆ
ಚಿಕ್ಕೋಳು ಚನ್ನವ್ವ ಮಡಿ ಹೋಗೆ'
"ಗಂಡನ ತಿನ್ನೋಳಿಗೆ ಹಂಬಲವೇಕೆ?
ಮುತ್ತೈದೆ ನೀ ಮಡಿ ಹೋಗತ್ತೆ !'
ಅವರಪ್ಪನ ಮನೆ ಬಸಣ್ಣ ಜೋಗಿ ರೂಪಾಗಿ ಬಂದ;
"ಇನ್ನೊಷ್ಟು ದಾನವ ಮಾಡೋಗೆ'
ಚಿನ್ನದ ಮುತ್ತಲಲ್ಲಿ ರತ್ನವ ತುಂಬಿಕೊಂಡು
"ಕೊಳಿ ಸ್ವಾಮಿ ಬಿಕ್ಷವಾ !'
"ಬಿಕ್ಷವಾ ನಾನೊಲ್ಲೆ, ನಾ ಮುತ್ತು ರತ್ನವನೊಲ್ಲೆ
ನೀನು ಉಟ್ಟಿರುವ ಸೀರೆ ಮುಸುಕನು
ಹರಕೊಂಡು ಸುತ್ತಿ ಮಿಕ್ಕ ಸೆರಗನು
ದುಂಡುದೋಳಿಗೆ ಸುತ್ತಿ ಮೆರದೇನು
ನನ್ನ ಪಾಗಿಗೆ ಸುತ್ತಿ ಮೆರದೇನು
ನಿನ್ನ ಮುತ್ತೈದತನ ಸ್ಥಿರವಾಗಲಿ !'
ಆಗ ಹೊರಟಳೊ ಸಾಗಿ ಹೊರಟಳೊ, ಚನ್ನವ್ವ
ಗಂಧದ ಕಂತೆ ಹಿಡಕೊಂಡು
ಅವರ ತಂದೆ ತಾಯಿ ಪಾದ ನೆನಕೊಂಡು

ಕೊಂಡ ಮೂರು ಸುತ್ತು ಬಂದಳು, ಶಿವನೆ
ಕೊಂಡದ ಮ್ಯಾಕ್ಕೆ ಹತ್ತಿ ಕೂತಳು, ಚನ್ನವ್ವ
ಅವಳು ಸಭಿಗೆಲ್ಲ ಕೈಯ ಮುಗುದಳು

ಆಗ ಶಿವನು ಪಾರ್ವತಿ-
"ಅಲ್ಲಿ ನೋಡಿ, ಸ್ವಾಮಿ, ಚಿಕ್ಕ ಹೆಣ್ಣು'
ಮಾಯದ ಮಳೆಯೇ ಬಂದಿತು
ಕಡಲೆಕಾಳಲ್ಲಿ ಕಣ್ಣ ಮಾಡ್ಯಾಳೆ, ಶಿವನೆ
ನಮ್ಮಪ್ಪ ಬಸವಣ್ಣ ಗುಟ್ಟಿಕೆ ಹೊಡದನು
ಮಲಗಿದ್ದ ಕಾಳಿಂಗ ಎದ್ದು ಕೂತನು
ಪಕ್ಕದಲ್ಲಿ ಕಂಡು ಚನ್ನವ್ವನ
"ಎಲ್ಲಿಂದ ಬಂದೆ ಹೆಣ್ಣೆ?' ಎಂದನು.
ಅಲ್ಲಿಗೆ ಶಿವನು ಬಂದನು;
ಶಿವನು ಪಾರ್ವತಿ ಬಂದು ಕಾಳಿಂಗಗೆ ಬುದ್ಧಿ ಹೇಳಿದರು :
"ನಿಮ್ಮ ತಾಯಿ ತಂದೆ ತಂದು ಮಾಡ್ಯವರೆ
ನೀನು ಚೆನ್ನವ್ವನ ಲಗ್ನವಾಗಿ
ಸುಖವಾಗಿ ಬಾಳು !' ಎಂದು.
ಶಿವನು ಪಾರ್ವತಿ ಮಾಯವಾದರು.
ಪಾಲಕಿ ಮೇಲೆ ಮೆರವಣಿಗೆ ಮಾಡಿ
ಕರೆದುಕೊಂಡೋದರು ಶಿವನೆ.

**ಪಾಠಾಂತರಗಳು ಮತ್ತು ಸಮಾನ ಆಶಯ ಪಠ್ಯಗಳು**


೧) ಭುಲಾಯಿ ಪದಗಳು; ರಾಮಣ್ಣ, ಕ್ಯಾತನಹಳ್ಳಿ, ಕನ್ನಡ ಬೀದರ ಜಿಲ್ಲೆಯ ಜನಪದ ಗೀತೆಗಳು, ಕ.ಅ.ಸಂ. ಮೈ.ವಿ.ವಿ. ೧೯೭೬ ಪು.ಸಂ. ೧೯೫-೨೦೦.

೨) ಕಾಳಿಂಗರಾಯ; ಮೈಲಹಳ್ಳಿ ರಾಮಣ್ಣ, ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೪, ಪು.ಸಂ. ೨೭-೯೦.

೩) ಕಾಳಿಂಗರಾಯನ ಹಾಡು, ಹೆಬ್ಬಾಳೆ ಜಗನ್ನಾಥ; ಬುಲಾಯಿ ಹಾಡುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೭, ಪು.ಸಂ. ೧೪-೨೩.

೪) ಕಾಳಿಂಗರಾಯನ ಹಾಡು; ನಾಯಕ ಡಿ.ಬಿ. ಬುಲಾಯಿ ಹಾಡುಗಳು, ಬಂಜಾರ ಪ್ರಕಾಶನ ಗುಲ್ಬರ್ಗಾ ೨೦೦೧. ಪು.ಸಂ. ೯೪-೯೭.

೫) ಗುರಗಂಜಿ ಕುಮಾರ; ಭಾನುಮತಿ, ವೈ.ಸಿ. ಪುಟ್ಟಮಲ್ಲಿಗೆ ಹಿಡಿತುಂಬ ತಾರಾ ಪ್ರಿಂಟಿಂಗ್ ಪ್ರೆಸ್, ಮೈಸೂರು ೨೦೦೧, ಪು.ಸಂ. ೧೪೨-೧೪೯.

---

* ಕರ್ತಿರಾಯ; ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೬ ಪು.ಸಂ. ೨೫೯-೨೬೫

## ೧೬. ಹೊನ್ನಮ್ಮ *

೧

ಸುವ್ವಿ ಸುವ್ವಮ್ಮ ಲಾಲಿ ಸುವ್ವಲಾಲಿ

ಸ್ವಾಮಿ ಸುರಹೊನ್ನೆ ಮರನೇರಿ ಸುವ್ವಲಾಲಿ
ನಾವು ಹುಟ್ಟಿದೋರೊಂದೇಳುಜನ ಸುವ್ವಲಾಲಿ
ನಾವು ಬೆಳೆದೋರೊಂದೇಳುಜನ ಸುವ್ವಲಾಲಿ
ಏಳುಜನ ಅಕ್ಕತಂಗೇರು ಸುವ್ವಲಾಲಿ
ಮದುವೆ ಸೋಬನವಾದೊ ಸುವ್ವಲಾಲಿ
ನಮ್ಮ ಆರುಜನ ಅಕ್ಕತಂಗೇರಿಗೆ ಸುವ್ವಲಾಲಿ
ಮಕ್ಕಳೆ ಆದವು ಸುವ್ವಲಾಲಿ
ನಮ್ಮ ಕಿರಿಯವಳಿಗೆ ಹೊನ್ನಮ್ಗೆ ಸುವ್ವಲಾಲಿ
ಮಕ್ಕಳೆ ಇಲ್ಲವಯ್ಯ ಸುವ್ವಲಾಲಿ
ಕಿರಿಯವಳೆ ಹೊನ್ನಮ್ಮ ಸುವ್ವಲಾಲಿ

ಅಕ್ಕದೀರ ಮಕ್ಕಳಿಗೆ | ಸು | ಕಿರಿಯವಳು ಹೊನ್ನಮ್ಮ | ಸು |

ಸಂತಿಗೆ ಹೋದಳೆ | ಸು | ಅಕ್ಕದೀರ ಮಕ್ಕಳಿಗೆ | ಸು |
ಕಡಲೆ ಬೆಲ್ಲವ ಕೊಂಡು | ಸು | ಅಂಗಿ ಕುವಾಲಿ ಕೊಂಡು | ಸು |
ತುದಿಕಾಲು ವಾಪಸುಕೊಂಡು | ಸು | ಗಂಟು ಮೂಟೆಯಕಟ್ಟಿ | ಸು |
ಅಕ್ಕದೀರ ಮಕ್ಕಳಿಗೆ | ಸು | ತಗಂಡೆ ಹೋಗುತಳೆ | ಸು |
ಆರುಜನ ಅಕ್ಕಗಳೆ | ಸು | ನಿಮ್ಮ ಮಕ್ಕಳೆಲ್ಲ ಹೋದರೆ | ಸು |
ಆಡಕೆ ಹೋಗವರೆ | ಸು | ಓದಾಕೆ ಹೋಗವರೆ | ಸು |
ಆಗಲೆ ಹೊನ್ನಮ್ಮ | ಸು | ಹುಡಿಕಂಡೆ ಹೋದಳೆ | ಸು |

ಮಕ್ಕಳ ಕರಕಂಡು | ಸು | ಬೇಗದಲ್ಲಿ ಬರುತಾಳೆ | ಸು |
ಬೇಗದಲ್ಲಿ ಬಂದಳು | ಸು | ಎತ್ತಿ ಮುದ್ದಾಡ್ಯಾಳು | ಸು |
ಕಚ್ಚಿ ಮುದ್ದಾಡ್ಯಳೆ | ಸು | ಕಡಲೆ ಬೆಲ್ಲವಕೊಟ್ಟು | ಸು |
ಅಂಗಿ ಕುಪ್ಪಾಲಿ ಕೊಟ್ಟು | ಸು | ಆರುಜನ ಅಕ್ಕಗಳಿರ | ಸು |

ನಾನು ಹೋಗುತಿನಿ ಕಾಣಿರವ್ವ | ಸು | ಹಂಗಂದ ಹೊನ್ನಮ್ಮ | ಸು |

ಹಂಗಂದು ಹೊನ್ನಮ್ಮ | ಸು | ಬಾರೊಂದೆ ಬರುವಾಗ | ಸು |
ಏನು ಮಾತನಾಡುತಾಳೆ | ಸು | ನಮ್ಮ ಬಂಜೆತನ ಹರಿಯಲಿಲ್ಲ | ಸು |
ಜಾರೆಯ ಒಳಗಿನ್ನ | ಸು | ಬಾವಿಯ ತಗಸಬೇಕು | ಸು |
ಸೀಬಿಯ ಹಾಕಸಬೇಕು | ಸು | ಹಣ್ಣು ಹಂಪಲ ಹಾಕಸುವೆ | ಸು |
ಹಂಗಂದು ಹೊನ್ನಮ್ಮ | ಸು | ಒಡ್ಡರ ಕರಿಸ್ಯಾಳೆ | ಸು |
ಹಿಡಿಹೊನ್ನು ಕೊಟ್ಟಳೆ | ಸು | ಬಾವಿಯ ತೆಗಿಸ್ಯಾಳೆ | ಸು |
ಸೀಬಿಯ ಹಾಕಿಸ್ಯಾಳೆ | ಸು | ಕಿತ್ತಲೀಯ ಹಾಕಿಸ್ಯಾಳೆ | ಸು |
ಹೊನ್ನಮ್ಮ ಆಗಲೆ | ಸು | ಮೂಡಲ ಸೀಮಿಂದ | ಸು |
ಗೋವುದನ ಬಂದವೆ | ಸು | ಗೋವುದನ ಬಂದಿನ್ನ | ಸು |
ಬಂಜ್ಯೆ ಕಟ್ಸಿದ್ದ ಬಾವಿ | ಸು | ನಾವು ನೀರ ಕುಡಿದರೆ | ಸು |
ನಾವು ಬಂಜೇರಾಗುತಿವಿ | ಸು | ಮಕ್ಕಳು ಬಂಜೇರಾಗುತಾರೆ | ಸು |
ಅವು ಹಿಂದಕೆ ಹೋಗುತಾವೆ | ಸು | ಹಿಂದಕೆ ಹೋಗುವುದ | ಸು |
ಹೊನ್ನಮ್ಮ ನೋಡುತಾಳೆ | ಸು | ಹೊನ್ನಮ್ಮ ನೋಡಿನ್ನ | ಸು |
ಏನು ಕರ್ಮ ಮಾಡಿದೆನೊ | ಸು | ಏನು ಪಾಪ ಮಾಡಿದೆನೊ | ಸು |

ಹಾಳಾದ ಪಾಪಿಜನ್ಮ | ಸು | ಎನ್ನ ಯಾತಕೆ ಕೊಟ್ಟಿಯೊ | ಸು |

ಹಂಗಂದು ಹೊನ್ನಮ್ಮ | ಸು | ಬಾಳದುಃಖ ಮಾಡುತಾಳೆ | ಸು |
ಮೂಡಲಸೀಮಿಂದ | ಸು | ಅವು ಹಕ್ಕಿ ಪಕ್ಷಿ ಬರುತವೆ | ಸು |
ಹಕ್ಕಿ ಪಕ್ಷಿ ಬಂದಿನ್ನ | ಸು | ನಾವು ಹಣ್ಣ ತಿಂದರೆ | ಸು |
ನಾವು ಬಂಜೆರಾಗುತೀವಿ | ಸು | ಮಕ್ಕಳು ಬಂಜೆರಾಗುತಾರೆ | ಸು |
ಹಂಗಂದು ಗಿಣಿಗಳು | ಸು | ಹಿಂದಕೆ ಹೋಗುತವೆ | ಸು |
ಹಿಂದಕೆ ಹೋಗುವುದ | ಸು | ಹೊನ್ನಮ್ಮ ನೋಡುತಳೆ | ಸು |
ಹೊನ್ನಮ್ಮ ನೋಡಿನ್ನ | ಸು | ಶಿವನೆ ಏನುಪಾಪ ಮಾಡಿದ್ದೆ | ಸು |
ಹಾಳಾದ ಪಾಪಿಜನ್ಮ | ಸು | ಇನ್ನು ಏಕೆ ಶಿವರಾಯ | ಸು |
ಬಾಳದುಃಖ ಮಾಡುತಾಳೆ | ಸು | ಬಾಳದುಃಖ ಮಾಡಿನ್ನ | ಸು |
ಅರಮನೆಗೆ ಬರುತಾಳೆ | ಸು | ಅರಮನೆಗೆ ಬಂದಿನ್ನ | ಸು |
ಏನುಮಾತನಾಡುತಾಳೆ | ಸು | ಗಂಗವ್ವ ಮಾಡಬೇಕು | ಸು |

ಗಂಗವ್ವ ಮಾಡಿದರೆ | ಸು | ಬಂಜೆತನ ಹರುದತೆ | ಸು |

ಹಂಗಂದೆ ಹೊನ್ನಮ್ಮ | ಸು | ಅಟ್ಟಕೆ ಹಾಕ್ಯಾಳೆ | ಸು |

ಹತ್ತು ಕಾಲೇಣಿಯ | ಸು | ಪಟ್ಟೆಸೀರೆ ತೆಗೆದಳೆ | ಸು |

ತಟ್ಟೀಗೆ ಮಡಿಗ್ಯಳೆ | ಸು | ನೆಲಗಳ ಬಳಿದಳೆ | ಸು |

ಮೈಯನೆ ತೊಳುದಳೆ | ಸು | ಮಡಿಗಳ ಉಟ್ಟಳೆ | ಸು |

ಚಿಗಳಿ ತಂಬಿಟ್ಟಿನುಂಡೆ | ಸು | ಬೇಗದಲ್ಲಿ ಮಾಡ್ಯಾಳೆ | ಸು |

ಬೇಗದಲ್ಲಿ ಮಾಡಿನ್ನ | ಸು | ಅಕ್ಷತೊಂಗನೂಲು | ಸು |

ಗಂಧ ಚಂದ್ರಗಳು | ಸು | ತಟ್ಟೀಗೆ ಇಟ್ಟಳೆ | ಸು |

ಊದುಕಡ್ಡಿ ಇಟ್ಟು | ಸು | ಹಣ್ಣು ಕರಪೂರಗಳ | ಸು |

ಬೇಗದಲ್ಲಿ ಇಟ್ಟಳೆ | ಸು | ತಗಂಡೆ ಹೊರಟಳೆ | ಸು |

ಗಂಗವ್ವ ಪೂಜೆಯ | ಸು | ಮಾಡ್ಯಾಳೆ ಹೊನ್ನಮ್ಮ | ಸು |

ಮಾಡಂತಗಳಿಗೇಲಿ | ಸು | ಗಂಗವ್ವೆ ಬತ್ತೋದ್ಲು | ಸು |

ಏನು ಕರ್ಮ ಮಾಡಿದ್ದೆ | ಸು | ಏನು ಪಾಪ ಮಾಡಿದ್ದೆ | ಸು |

ಹಾಳಾದ ಪಾಪಿಜನ್ಮ | ಸು | ಯಾತಕೊ ಶಿವರಾಯ | ಸು |

ಹಂಗಂದೆ ಹೊನ್ನಮ್ಮ | ಸು | ಅರಮನೆಗೆ ಬಂದಳೆ | ಸು |

ಅರಮನೆಗೆ ಬಂದಿನ್ನ | ಸು | ತಟ್ಟೆಯ ಮಡಿಗ್ಯಳೆ | ಸು |

ತಟ್ಟೆಯ ಮಡಗಿನ್ನ | ಸು | ಸಂತೀಗೆ ಹೋದಳೆ | ಸು |

ಅಂಗಿ ಕುವಾಲಿ ಕೊಂಡು | ಸು | ಕಡಲೆ ಬೆಲ್ಲವ ಕೊಂಡು | ಸು |

ತುದಿಕಾಲ್ ಪಾಪಸು ಕೊಂಡು | ಸು | ಗಂಟುಮೂಟೆ ಕಟ್ಟಿಕೊಂಡು | ಸು |

ಅಕ್ಕದೀರ ಮಕ್ಕಳಿಗೆ | ಸು | ಓಡೋಡಿ ಹೋಗುತಾಳೆ | ಸು |

ಆರು ಜನ ಅಕ್ಕದೀರು | ಸು | ಏಳುಸುತ್ತಿನ ಕಲ್ಲುಬಾವಿಗೆ | ಸು |

ನೀರಿಗೆ ಬಂದರೆ | ಸು | ಏನು ಮಾತನಾಡುತಾರೆ | ಸು |

ನಮ್ಮ ಬಂಜ್ಹೊನ್ನಿ ಬರುತಾಳೆ | ಸು | ಮಕ್ಕಳ ಮಡಗಲಬೇಕು | ಸು |

ಬಂಜೆ ತಂದ ತಿಂಡಿ | ಸು | ಮಕ್ಕಳು ತಿಂದರೆ | ಸು |

ನಾವು ಬಂಜೇರು ಆಗುತಿವಿ | ಸು | ನಮ್ಮ ಮಕ್ಕಳು ಬಂಜೇರು ಆಗುತರೆ | ಸು |

ಆರು ಜನ ಅಕ್ಕಗೋಳು | ಸು | ಆ ಮಾತನಾಡುತಾರೆ | ಸು |

ಆ ಮಾತನಾಡಿಕೊಂಡು | ಸು | ಅರಮನೆಗೆ ಬಂದರೆ | ಸು |

ಅರಮನೆಗೆ ಬಂದಿನ್ನ | ಸು | ಕೊಡಗಳ ಮಡಿಗ್ಯಾರೆ | ಸು |

ಕೊಡಗಳ ಮಡಗಿನ್ನ | ಸು | ಬಾಕಲಲ್ಲಿ ನಿಂತವರೆ | ಸು |

ಹೊನ್ನಮ್ಮ ಆಗಲೆ | ಸು | ಓಡೋಡಿ ಹೋಗುತಾಳೆ | ಸು |

ಬಾಕುಲಾಗೆ ಕೂತುಗಂಡು | ಸು | ಏನುಮಾತನಾಡುತಾರೆ | ಸು |

ಆರುಜನ ಅಕ್ಕಗೊಳು | ಸು | ಮಕ್ಕಳ ಮಡಗಬೇಕು | ಸು |

ಆರು ಜನ ಮಕ್ಕಳ | ಸು | ಬೇಗದಲ್ಲಿ ಕರೆದರು | ಸು |

ಬೇಗದಲ್ಲಿ ಕರೆದಿನ್ನ | ಸು | ವಾಡೆ ಮೂಡಿಗೆ ತುಂಬಿ | ಸು |

ಬಾಕಲಲ್ಲಿ ಕುಂತವರೆ | ಸು | ಹೊನ್ನಮ್ಮ ಹೋಗುತಾಳೆ | ಸು |

ಹೊನ್ನಮ್ಮ ಹೋಗಿನ್ನ | ಸು | ಆರುಜನ ಅಕ್ಕಗಳಿರ | ಸು |
ಆಡಾಕೆ ಹೋಗ್ಯವರೆ | ಸು | ಬಾಳದುಃಖ ಮಾಡುತಾಳೆ | ಸು |
ಓಡೋಡಿ ಹೋಗುತಾಳೆ | ಸು | ದನಕಾಯೊ ಮಕ್ಕಳಿರ | ಸು |
ಆಡುಕಾಯೊ ಮಕ್ಕಳಿರ | ಸು | ನಮ್ಮ ಮಕ್ಕಳ ಕಾಣಿರೇನೊ | ಸು |
ನಿಮ್ಮ ಮಕ್ಕಳು ಇಲ್ಲವಲ್ಲ | ಸು | ನಾವೆಯ ಇದ್ದೀವಿ | ಸು |
ನಮ್ಮ ಆಟಕೆ ಬರಲಿಲ್ಲ | ಸು | ಆಗಲೆ ಹೊನ್ನಮ್ಮ | ಸು |
ಗುಡ್ಡಗ್ವಾರಣ್ಯವ | ಸು | ಹುಡುಕ್ಯಾಳೆ ಹೊನ್ನಮ್ಮ | ಸು |
ಮಕ್ಕಳೆ ಸಿಕ್ಕಲಿಲ್ಲ | ಸು | ಓಡೋಡಿ ಬರುತಾಳೆ | ಸು |
ಓಡೋಡಿ ಬಂದಿನ್ನ | ಸು | ಆರುಜನ ಅಕ್ಕಗಳಿರ | ಸು |
ನಿಮ್ಮ ಮಕ್ಕಳೆ ಸಿಕ್ಕಲಿಲ್ಲ | ಸು | ನನ್ನ ಆರು ಜನ ಅಕ್ಕಗಳು | ಸು |
ಮೂಲೇಲಿ ಇದ್ದಂಥ | ಸು | ಒನಕೆಯಮಂಡಿಯ | ಸು |
ಬೇಗದಲಿ ತಕ್ಕಂಡು | ಸು | ಕಣಕಾಲ ಮುರಿದರು | ಸು |
ಮೊಣಕೈಯ ಮುರಿದರು | ಸು | ಕೊರಕಲಿಗೆ ಎಸೆದರು | ಸು |
ಆಗಲೆ ಹೊನ್ನಮ್ಮ | ಸು | ಏನು ಶಾಪ ಇಡುತಾಳೆ | ಸು |
ಇವರ ವಾಡೇಲಿದ್ದ ಮಕ್ಕಳು | ಸು | ಹುಳುತೇಯ ಹೋಗಲಿ | ಸು |

೧

ಅರಣ್ಯ ಅಡವ್ಯಾಗೆ | ಸುವ್ವಲಾಲೆ |

ಮಧ್ಯ ಚದುರದಲ್ಲಿ | ಸು | ಕೊರಗುತ ಮನಗವಳೆ | ಸು |
ಶಿವನು ಪಾರ್ವತದೇವಿ | ಸು | ಈರೊಂಬತ್ತು ಕೋಟಿಗೆ | ಸು |
ಪಡಿದಾನ ಅಳಕೊಂಡು | ಸು | ಚಂಚರಣೆ ಬರುವಾಗ | ಸು |
ಪಾರ್ವತಿ ಏನಂದು | ಸಯ | ಯಾರಿಗೊ ಮಾಶಿವನೆ | ಸು |
ಬಾಳ ಕಷ್ಟ ಬಂದೈತೆ | ಸು | ಹೋಗಾನ ಬಲ್ಲಿ ಶಿವನೆ | ಸು |
ಗಾಳೊಂದೊ ನಾಕಾಣೆ | ಸು | ಪೀಡೊಂದೊ ನಾಕಾಣೆ | ಸು |
ಬಾರಲ ಪಾರ್ವತಿ | ಸು | ಬರುದಾಲೆ ಹೋದರೆ | ಸು |
ನಿಮ್ಮ ಪಾದದಮೇಲಿನ್ನ | ಸು | ನಾಲಗೆ ಹಿರಕಂಡು | ಸು |
ನಮ್ಮ ಪ್ರಾಣವ ಬಿಡುತೀನಿ | ಸು | ಹಾಳಾದ್ದೆಂಗ್ಸಿನಕುಟ್ಟೆ | ಸು |
ಒಂದೀಗೆ ಬರಬಾರ್ದು | ಸು | ಹಂಗಂದು ಮಾ ಶಿವನು | ಸು |
ಬೇಗದಲಿ ಬರುತಾನೆ | ಸು | ಬೇಗದಲಿ ಬಂದಿನ್ನ | ಸು |
ನಿಂತುಗಂಡೆ ನೋಡುತಾರೆ | ಸು | ಮೇಲಕೆ ಎಳೆದಾರೆ | ಸು |
ಮೇಲಕೆ ಎಳೆದಿನ್ನ | ಸು | ನಿನಗೆ ಏನು ಕಷ್ಟ ಬಂದಿತು | ಸು |
ನೀನು ಹೇಳಲೆಬೇಕಿನ್ನ | ಸು | ಹಾರಿಸೋರು ನೀವಲ್ಲ | ಸು |
ತೀರಿಸೋರು ನೀವಲ್ಲ | ಸು | ನಿನ್ನ ಕಷ್ಟ ಹೇಳಲುಬೇಕು | ಸು |
ಆಗಲೆ ಮಾ ಶಿವನು | ಸು | ಮಂತ್ರಾಕ್ಷಿಕಡ್ಡಿ ತೆಗೆದು | ಸು |
ಮಂತುರಿಸಿ ಬಿಟ್ಟರು | ಸು | ಆಕೆ ಜೀವವ ಪಡೆದಾರು | ಸು |

ಸುವ್ವಿ ಸುವ್ವಮ್ಮ ಲಾಲೆ ಸುವ್ವಲಾಲೆ |
ಜಾಣೆ ಜಾಗರದ್ವಣೆ ಸುವ್ವಲಾಲೆ ||
ಹೇಳಲೆ ಬೇಕಿನ್ನ ಸುವ್ವಲಾಲೆ | ಸು | ಹೇಳಿದಳು ಹೊನ್ನಮ್ಮ ಸುವ್ವಲಾಲೆ | ಸು |
ನಾವು ಹುಟ್ಟಿದೊಂದೇಳು ಜನ | ಸು | ಬೆಳೆದುದ್ದೊಂದೇಳುಜನ | ಸು |
ಬೆಳಿದೊಂದೇಳು ಜನರು | ಸು | ಮದುವೆ ಸೋಬನ ಆಗಿ | ಸು |
ಆರು ಜನ ಅಕ್ಕಗಳಿಗೆ | ಸು | ಮಕ್ಕಳೆ ಆದವು | ಸು |
ಕಿರಿಯೋಳು ಹೊನ್ನಮ್ಮ | ಸು | ಮಕ್ಕಳೆ ಇಲ್ಲವಲ್ಲ | ಸು |
ಅಕ್ಕದಿರ ಮಕ್ಕಳಿಗೆ | ಸು | ನಾನು ಸಂತೀಗೆ ಹೋಗಿನ್ನ | ಸು |
ಕಡಲೆ ಬೆಲ್ಲವ ಕೊಂಡೆ | ಸು | ಅಂಗಿ ಕುವಾಲಿಕೊಂಡೆ | ಸು |
ತುದಿಗಾಲ್ ಪಾಪಸು ಕೊಂಡೆ | ಸು | ಗಂಟುಮಾಡಿ ಕಟ್ಟಿಕೊಂಡು | ಸು |
ಓಡೋಡಿ ಹೋದೆನು | ಸು | ಕಡಲೆ ಬೆಲ್ಲವ ಕೊಟ್ಟು | ಸು |
ಎತ್ತಿ ಮುದ್ದಾಡೇನು | ಸು | ಕಚ್ಚಿ ಮುದ್ದಾಡೇನು | ಸು |

ಹೊನ್ನಮ್ಮ ತನ್ನ ಬಂಜೆತನದ ವ್ಯಥೆಯನ್ನೆಲ್ಲ, ತನ್ ಕತೆಯನ್ನೆಲ್ಲ ವಿವರಿಸುತ್ತಾಳೆ. ಶಿವಪಾರ್ವತಿಯರಿಗೆ ಆರುಮಂದಿ ಅಕ್ಕಂದಿರ ವರ್ತನೆಯನ್ನು ಬಣ್ಣಿಸುತ್ತಾಳೆ.

ಹಳಾದ ಬಂಜೆತನ | ಸು | ಹರಿಸಲೆ ಬೇಕಪ್ಪ | ಸು |

ಆದರೆ ಆಗಲಮ್ಮ | ಸು | ನಿನಗೊಂದು ಫಲವುಂಟು | ಸು |
ಮಾಯದ ಮಾವಿನಮರ | ಸು | ಮಾಡ್ಯಾರು ಮಾಶಿವನು | ಸು |
ಜೋಳಿಗೆ ಹಾಕ್ಕೊಂಡು | ಸು | ಮೇಲಕೆ ಹತ್ಯರೆ | ಸು |
ಮರನೆಲ್ಲ ಹುಡುಕ್ಯರೆ | ಸು | ಒಂದೇಯ ಹಣ್ಣೇಯ | ಸು |
ಕುಯ್ಕೊಂಡ ಮಾಶಿವನು | ಸು | ಬೇಗದಲ್ಲಿ ಬಂದರು | ಸು |
ಏನಂದು ಕೇಳುತಾರೆ | ಸು | ಒಂದೇಯ ಫಲವುಂಟು | ಸು |
ಗಂಡು ಮಗನ ಕೊಡುತೀನಿ | ಸು | ಹನ್ನೆರಡು ವರ್ಷವೇ | ಸು |
ಆದರೆ ಆಗಿನ್ನ | ಸು | ಕುಯ್ದೇಯ ಬಿಟ್ಟೀಗ | ಸು |
ಅಡಿಗೆಯ ಮಾಡಿನ್ನ | ಸು | ನಮಗೂಟಕೆ ಇಡಬೇಕು | ಸು |
ಆದರಾಗಲಿ ಶಿವನೆ | ಸ | ಬಂಜೆತನ ಹರಿಯಲೊ | ಸು |
ಹಂಗಂದು ಹೊನ್ನಮ್ಮ | ಸು | ಭಾಷೆಯ ಕೊಡಬೇಕು | ಸು |
ಬಲಗೈಭಾಷೆಯಕೊಟ್ಟು | ಸು | ಎಡಗೈ ನಂಬಿಕೆಕೊಟ್ಟು | ಸು |
ಬಂಜೆತನ ಹರಿಯಲಿ | ಸು | ಹಂಗಂದ ಮಾಶಿವನು | ಸು |
ಹಣ್ಣಾನೆ ಕೊಡುತರೆ | ಸು | ಪೂಜೆಯ ಮಾಡಿನ್ನ | ಸು |
ಹಣ್ಣನ್ನೆ ತಿನ್ನಮ್ಮ | ಸು | ಹಣ್ಣಾನೆ ಈಸಿಗಂಡ್ಲು | ಸು |
ಅರಮನೆಗೆ ಬರುತಾಳೆ | ಸು |

ಅರಮನೆಗೆ ಬಂದಿನ್ನ | ಸುವ್ವಲಾಲೆ |

ಒಂಬತ್ತು ದಿವಸವು | ಸು | ಪೂಜೆಯ ಮಾಡುತಾಳೆ | ಸು |
ಪೂಜೆಯ ಮಾಡಿನ್ನ | ಸು | ಹಣ್ಣನೆ ತಿನ್ನುತಳೆ | ಸು |
ಗಂಡುಮಗುವ ಪಡೆದಳು | ಸು | ಗೆಜ್ಜೆ ಕಾಲಿನ ಮಗುವ | ಸು |
ಗಿಲಿಗಿಲಿನ ಬರುತಾನೆ | ಸು | ಆರುಜನ ಅಕ್ಕಗಳು | ಸು |
ಉಣ್ಣಾಕೆ ಅನ್ನಿಲ್ಲ | ಸು | ಉಡುವಕೆ ಬಟ್ಟಿಲ್ಲ | ಸು |
ವಾಡೇಲಿದ್ದ ಮಕ್ಕಳು | ಸು | ಹುಳುತೇಯ ಹೋಗ್ಯವರೆ | ಸು |
ಸವದೇನು ಹೊತ್ತುಗಂಡು | ಸು | ಎಲಿಗಳ ಹೊತ್ತುಗಂಡು |
ತಂಗೀಯ ಮನೆಮುಂದೆ | ಸು | ಸೌದೆಯ ಕೊಳ್ಳಿರಮ್ಮ | ಸು |
ಆಗಲೆ ಹೊನ್ನಮ್ಮ | ಸು | ಮಗನು ಲಿಂಗಧರನ | ಸ |
ಆಡುತಲಿದ್ದನು | ಸು | ಹೊನ್ನಮ್ಮ ಈಚೆಗ್ಬಂದ್ಲು | ಸು |
ಬಾಕಲಲ್ಲಿ ನಿಂತಗಂಡು | ಸು | ಏನು ಮಾತನಾಡುತಾಳೆ | ಸು |
ಸೌದೆ ಹಾಕಿಸಿಕೊಂಡು | ಸು | ಹಣವನ್ನೆ ಕೊಡಿರಮ್ಮ | ಸು |
ಆಗಲೆ ಹೊನ್ನಮ್ಮ | ಸು | ಎರಡನೆ ದುಡ್ಡುಗಳ | ಸು |
ಕೊಟ್ಟಳೆ ಹೊನ್ನಮ್ಮ | ಸು | ಏನಂದು ಹೇಳುತಾಳೆ | ಸು |
ನಾಳೆಯೆ ನಾವೆಲ್ಲ | ಸು | ಹಬ್ಬವ ಮಾಡುತಿವಿ
ನಿಮ್ಮ ಮಕ್ಕಳ ಕರಕಂಡು | ಸು | ನಿಮ್ಮ ಗಂಡದಿರ ಕರಕಂಡು | ಸು |
ನೀವು ಸೌದೆಯ ಹೊತ್ತುಗಂಡು | ಸು | ಬಲ್ಲಿರೆ ಅಮ್ಮಗಳಿರ | ಸು |
ಹಂಗಂದು ಹೊನ್ನಮ್ಮ | ಸು |
ಏನುಮಾತನಾಡುತಾಳೆ | ಸು |
ನಾಳೆಯ ದಿವಸಿನ್ನ | ಸು | ಬಾಳದುಡ್ಡಕೊಡುತಾಳೆ | ಸು |
ಎಲಿಗಳ ತಕ್ಕಂಡು | ಸು | ಮಕ್ಕಳ ಕರಕಂಡು | ಸು |
ನಾವು ಬರಲೇಯ ಬೇಕಿನ್ನ | ಸು | ಹಂಗಂದು ಹೋಗವರೆ | ಸು |
ಬೇಗದಲ್ಲಿ ಬರುತಾರೆ | ಸು | ಎಲಿಗಳ ಹಾಕ್ಯರೆ | ಸು |
ಉಣ್ಣಾಕೆ ಅನ್ನವಿಲ್ಲ | ಸು | ಉಡುವಾಕೆ ಬಟ್ಟಿಲ್ಲ | ಸು |
ಆಗಲೆ ಹೊನ್ನಮ್ಮ | ಸು | ಆರುಜನ ಅಕ್ಕಗಳ | ಸು |

ಬೇಗದಲ್ಲಿ ಹೊನ್ನಮ್ಮ | ಸು | ಆಕೆ ನೀರನೆ ಕಾಸ್ಯಳೆ | ಸು |

ಮೈಯನೆ ತೊಳಿಸ್ಯಾಳೆ | ಸು | ಮಡಿಗಳ ಕೊಟ್ಟಳು | ಸು |
ಆರುಜನ ಮಾವಗಳಿಗೆ | ಸು | ಉಡುವುದಕೆ ಬಟ್ಟೆಕೊಟ್ಟು | ಸು |
ಅಂಗಿ ಕುವಾಲಿ ಕೊಟ್ಲು | ಸು | ಗೆಜ್ಜೆಕಾಲಿನ ಮಗನ | ಸು |
ಲಿಂಗಧಾರಣೆ ಮಾಡುತಾಳೆ | ಸು | ಲಿಂಗಧಾರಣೆ ಮಾಡುವಾಗ | ಸು |
ಆರುಜನ ಅಕ್ಕಗಳಿಗೆ | ಸು | ಊಟಕೆ ಇಡುತಳೆ | ಸ |
ರನ್ನದ ಸೌಟನ್ಹಾಕಿ | ಸು | ಹಂಗಿಸ್ಹಂಗಿಸಿ ತುಪ್ಪಗಳ | ಸು |
ಎರುದಾಳೆ ಹೊನ್ನಮ್ಮ | ಸು | ಗೆಜ್ಜೆ ಕಾಲಿನವನ | ಸು |

ಕಚ್ಚಿ ಮುದ್ದಾಡುತಳೆ | ಸು | ಆರುಜನ ಅಕ್ಕಗಳು | ಸು |
ಬಹಳ ದುಃಖ ಮಾಡುತಾರೆ | ಸು | ಹೊನ್ನಮ್ಮನೆನ್ನುತ್ತಾಳೆ | ಸು |
ನೀವು ಮಾಡಿದ ಕರ್ಮ | ಸು | ನಿಮಗೆ ಇರಲಿ ಎಂದು | ಸು |
ಅರಮನೆಗೆ ಹೋಗುತಾಳೆ | ಸು | ಶಿವನೂ ಪಾರ್ವತದೇವಿ | ಸು |
ಬೇಗದಲ್ಲಿ ಬರುತಾರೆ | ಸು | ಬೇಗದಲ್ಲಿ ಬಂದಿನ್ನ | ಸು |
ಹೊನ್ನಮ್ಮ ಬರುತಾಳೆ | ಸು | ಇದ್ದೊಷ್ಟೆ ಬಿಸಿನೀರ | ಸು |
ಇದೊಷ್ಟೆ ತಣ್ಣೀರ | ಸು | ಭದ್ರೇಯ ಗಿಂಡೀಲಿ | ಸು |
ಹದಮಾಡಿ ತಂದರೆ | ಸು | ಹದಮಾಡಿ ತಂದಿನ್ನ | ಸು |
ಶಿವರಾಯರ ಪಾದವ | ಸು | ತೊಳುದಾಳೆ ಹೊನ್ನಮ್ಮ | ಸು |
ಪಾದಕೆ ಎರುಗಾಳೆ | ಸು | ಒಳವೀಕೆ ಕರೆದಳೆ | ಸು |
ಒಳವೀಕೆ ಕರೆದಿನ್ನ | ಸು | ಮಣೆಗಳ ಹಾಕುತಾಳೆ |
ಮಣೆಗಳ ಹಾಕಿನ್ನ | ಸು | ಮಗನನ್ನೆ ನೋಡುತಾಳೆ | ಸು |
ಗೆಜ್ಜೆ ಕಾಲಿನ ಮಗನು | ಸು | ಓದಾಕೆ ಹೋಗವನೆ | ಸು |
ಬೇಗನೆ ಬಾರಪ್ಪ | ಸು | ಓದಾನೆ ಮಠದಿಂದ | ಸು |
ಶಿವನೆ ಓಡೋಡಿ ಬರುತಾನೆ | ಸು | ಓಡೋಡಿ ಬಂದೀಗ | ಸು |
ಬಾಗುಲಲ್ಲಿ ಕಡುದಳೆ | ಸು | ಅಡುಗೆಯ ಮಾಡುತಳೆ | ಸು |
ಊಟಾಕೆ ಇಡುತಳೆ | ಸು | ಶಿವರಾಯ್ನ ಕೇಳುತಾಳೆ | ಸು |
ಬಂಜೆತನ ಹರಿಸಿದ್ರಿ | ಸು | ಎಂದೀಗ ಪಾದಕೆ | ಸು |
ಎರಗಿದಳು ಹೊನ್ನಮ್ಮ | ಸು | ಆದರೆ ಆಗಲಮ್ಮ | ಸು |
ನಿನ್ನ ಪ್ರೀತಿಗೆ ಮೆಚ್ಚಿದೆ | ಸು | ನಿನಗೆ ಹಾಲೊಕ್ಕಲಾಗಮ್ಮ | ಸು |
ನಿನ್ನ ಹೊನ್ನೊಕ್ಕಲಾಗಲಮ್ಮ | ಸು | ಆದರಾಗಲಿ ಶಿವನೆ | ಸು |
ಬಂಜೆತನ ಹರಿಯಿತು | ಸು | ಕೊಟ್ಟನೆ ಭಾಷೆಗೆ | ಸು |
ತಪ್ಪಲೆ ಇಲ್ಲವಂದು | ಸು | ನಿನ್ನ ಮಗನನ್ನೇ ಬೇಗದಲ್ಲಿ | ಸು |
ನೀನು ಬಾಕಲಲ್ಲಿ ನಿಂತಗಂಡು | ಸು | ಮಗನನ್ನೆ ಕರೆಯಮ್ಮ | ಸು |
ಹಂಗಂದ ಮಾ ಶಿವನು | ಸು | ಮಾಯವಾಗಿ ಹೋದನು | ಸು |
ಆಗಲೆ ಹೊನ್ನಮ್ಮ | ಸು | ಗೆಜ್ಜೆಕಾಲಿನ ಮಗನೆ | ಸು |
ಬೇಗದಲ್ಲಿ ಬಾರಪ್ಪ | ಸು | ಹಂಗಂದು ಹೊನ್ನಮ್ಮ | ಸು |
ನಿಂತುಗಂಡೆ ಕರೆದಳು | ಸು | ಓಡೋಡಿ ಬಂದನು | ಸು |
ಎತ್ತಿ ಮುದ್ದಾಡ್ಯಾಳು | ಸು | ಕಚ್ಚಿ ಮುದ್ದಾಡ್ಯಾಳು | ಸು |
ಬಂಜೆತನ ಹರಿಯಿತೆಂದು | ಸು | ಗೆಜ್ಜೆಕಾಲಿನ ಮಗನ | ಸು |
ಎತ್ತಿ ಮುದ್ದಾಡ್ಯಾಳೆ | ಸು | ನನಗೆ ಶಿವಕೊಟ್ಟ ಭಾಗ್ಯವು | ಸು |
ಆಗಲೆ ಹೊನ್ನಮ್ಮ | ಸು | ಬಾಲನ ಸಾಕ್ಯಾಳೆ | ಸು |
ಬಾಲನ ಸಾಕಿನ್ನ | ಸು | ಲಗ್ನವ ಮಾಡ್ಯಾಳೆ | ಸು |
ಹೊನ್ನೊಕ್ಕಲಾದಳೆ | ಸು | ಹಾಲೊಕ್ಕಲಾದಳೆ | ಸು |
ಹಾಲೊಕ್ಕಲಾಗಿನ್ನು | ಸು | ಸುಖವಾಗಿ ಬದುಕ್ಯಾಳೆ | ಸು |

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಎಲೆಗೌರಿ; ಹೆಗಡೆ ಎಲ್.ಆರ್. ಗುಮ್ಮನ ಪದಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩. ಪು.ಸಂ. ೧೯-೨೪.

೨) ಬಂಜೆ ಹೊನ್ನಮ್ಮ; ಕಾಳೇಗೌಡ ನಾಗವಾರ ಬಯಲು ಸೀಮೆಯ ಲಾವಣಿಗಳು ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೭೩ ಪು.ಸಂ. ೮೯-೯೫.

೩) ಬಂಜೆ ಹೊನ್ನಮ್ಮ ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೬ ಪು.ಸಂ. ೨೦೩-೨೧೪.

೪) ಮಕ್ಕಳಿಲ್ಲದ ಬಂಜೆ ಹೊಕ್ಕಳು ನಂಜನಗೂಡು; ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೬, ಪು.ಸಂ. ೨೮೨-೨೮೪.

೫) ಬಾಳುಗಂಚಿ ಬಂಜೆ ಹೊನ್ನಮ್ಮ; ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೬, ಪು.ಸಂ. ೨೩೬-೨೪೭.

೬) ಬಂಜೆಗೌರಿ; ಹೆಗಡೆ ಎಲ್.ಆರ್. ಗುಮಟೆಯ ಪದಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೮, ಪು.ಸಂ. ೬೩-೬೪.

೭) ಹೊನ್ನಮ್ಮ; ಕಂಬಾರ ಚಂದ್ರಶೇಖರ ಮತ್ತು ಬರಗೂರು ಜಯಪ್ರಕಾಶ್ ಮುತ್ತು ಮುತ್ತನತ್ವಾಟ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೧.

೮) ನಾಗಮ್ಮನ ಶಾಪ; ಹೆಗಡೆ ಎಲ್.ಆರ್. ಮಾಚಿಯ ಕಥನ ಗೀತೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೨, ಪು.ಸಂ. ೯೪-೧೦೧.

---

* ಹೊನ್ನಮ್ಮ; ಪರಮಶಿವಯ್ಯ ಜೀ.ಶಂ. ಜಾನಪದ ಖಂಡಕಾವ್ಯಗಳು, ಶಾರದಾ ಮಂದಿರ, ಮೈಸೂರು ೧೯೬೮ ಪು.ಸಂ. ೪೯-೫೭.

# ೧೭. ಸೌಂಸೌತೇರು *

ಸುತ್ತ ಕುಂತೀರಿ ಗುರುಹಿರಿಯರ
ಶರಣು ಮಾಡಿ ಹೇಳುವೆನು ಶಾಸ್ತ್ರರ
ಜಗದೊಳು ಇದ್ದ ಒಬ್ಬ ಸಾವುಕಾರ
ಸಾವುಕಾರನ ಹೆಂಡರು ಸೌಂಸೌತೇರ ॥

ಸಾವುಕಾರ ಇದ್ದ ಭಾಳ ಸರದಾರ
ಅವನ ಸುತ್ತಮುತ್ತ ಮಂದಿ ಇತ್ರಿ ಜುಮ್ಮಾರs
ಸಾವಿರಾರು ಒಡ್ಡಿಲಿ ಸಾಲ ಒಯ್ಯುವರ
ಹಿಂಗ ಇತ್ರಿ ಅವನ ಬಲ್ಲಿ ವಿಸ್ತಾರ ॥

ಭಾಳದಿನಕೆ ಕೊಟ್ಟಿದಾನೊ ದೇವರs
ಗಂಡಸಮಗ ಹುಟ್ಟಿದಾನಿ, ಪುತ್ತರ
ತಾಯಿತಂದಿ ನೋಡಿ ಹರುಷ ಪಡಿಹುವಣ
ಚಿಂತಿ ಪರಿಹಾರ ಮಾಡೆನ ದೇವರ ॥

ಏನು ಹೇಳಲಿ ಕೂಸಿನ ಸಿನಗಾರ
ಅವನ ವರ್ಣನ ನೋಡಿದ್ರ ಹುಣ್ವೆಚಂದಿರ
ಮೈಮ್ಯಾಲ ವಡಿವಸ್ತ ಭರಪೂರ
ಬಂಗಾರ ಟೊಪ್ಪಿಗೆ ಮ್ಯಾಲ ಜರತರ ॥

ಊರಿಗಿ ಊರ ಚೆನ್ನ ಹೇಳಿದರ
ಅಲ್ಲಿ ತಾಯಿ ತಂದಿ ತಾಯಿ ಮುತ್ಯಾ ಬಂದಿದಾರ
ಜೋಗುಳ ಹಾಡಿ ತೊಟ್ಟಿಲತೊಳಗೆ ಹಾಕಿದರ
ಆಯೇರಿ ಆಗಿದಾವೊ ಆಯನೂರ ॥

ಹಳ್ಳಿಪಳ್ಳಿ ತಿರಗತಿದ್ದ ಸಾವುಕಾರ
ನಿತ್ಯತಿರುಗಿ ಮಾಡತಿದ್ದ ಯಾಪಾರ
ಮನಿಯಲ್ಲಿ ಇರುತ್ತಿದ್ದರಿಬ್ಬರು ಹೆಂಡಿರ
ಜಿಂವ ಜಿಂವ, ಇದ್ದರು ಸೌಂಸೌಂತೇರ ॥

ಸೌಂತೇರ ಸೌಂತೇರ ಕೂಡಿ ಮತಾಡ್ತಾರs
ಮಕ್ಕಳ ಮನಿಯಲ್ಲಿ ಎಣ್ಣೆ ಉಡುವದು ಜೋರ
ಹೀಗೆಂದು ಜೌಡಲ ಹರದಾರ
ಜೌಡಲ ಕುಟ್ಟಿ ಒಲಿಯ ಮ್ಯಾಲ ಇಟ್ಟಾರ
ಹಿರಿಯಾಕಿ ಹೋದಾಳೊ ತರಲಾಕ ನೀರs

ಸಣ್ಣಕ್ಕಿ ಹೊಟ್ಯಾಗ ಬೆಂಕಿ ಬಿತ್ತೊ ಪೂರ
ಜೌಡಲ ಗಡಗ್ಯಾಗ ಹಾಕಿದಳೋ ಪುತ್ತರ
ಮ್ಯಾಲ ಹುಟ್ಟಿ ತಿರವಿದಾಳೊ ಗರಽ ಗರಽ ॥

ಹಿರಿಯಾಕಿ ಸಾಕ ಮಾಡಳ ನೀರಽ
ಎಣ್ಣೆ ಬಸಿಲಾಕ ಕುಂತಿದಾರ ಇಬ್ಬರ
ಚೌಡಲ ಗಡಿಗ್ಯಾಗ ಹೊಂಟಿತೊ ನೆತ್ತರ
ತಾಯಿ ನೋಡಿ ಅಗಿದಾಳೊ ದಿಲ್ಲೀರ ॥

ಎದಿ ಎದೀ ಬಡಕೊಂಡಾಳೊ ಸೌಂತೀ ಎದುರ
ಏನಂತ ಕೊಲ್ಲಿದೆ ಸೂಳಿ ಪುತ್ತರ
ತಾಯಿ ಹೊಟ್ಯಾಗ ಬೆಂಕಿ ಅಭಂಕಾರ
ಅನು ಅನುತೆ ತಿಂದಾಳೊ ಸುಂಬಳ ಖಾರ
ಅಷ್ಟರದೊಳಗ ಬಂದಿದಾರ ಸಾವುಕಾರಽ
ಮನಿವೊಳಗ ಅಂಜಕಿ ಇತ್ತೊ ಭಾಳ ಜೋರ
ಅಷ್ಟು ಎಲ್ಲ ಕೇಳಿಕೊಂಡ ಮಜಕೂರ
ನಿಂದರ ನಿಂದರಕಿಲ್ಲೆ ಹೊಡಕೊಂಡ ಹತಿಯಾರ ॥

ಊರಿಗೆ ಊರ ಆಯ್ತೋ ಪುಕಾರಽ
ಗೌಡ ಕುಲಕರ್ಣಿ ರೈತರು ಬಂದಿದಾರ
ಪಂಚನಾಮ ಮಾಡಿ ಕಾಗದ ಬರದಾರ
ಹೀಂಗ ಸನಿ ಇತ್ರಿ ಅಲ್ಲಿ ಸರಕಾರ
ಪಂಚನಾಮ ಮಾಡಿ ಕಾಗದ ಬರೆದಾರ
ಒಯ್ದು ಠಾಣೆದವರ ಕೈಯ್ದಾಗ ಕೊಟ್ಟಾರ
ಫೌಜದಾಽರ ತಾಲುಕದಾಽರ
ಮತ್ತ ಜವಾನ ಬಂದಾರ ಕೊತ್ವಾಲರ ॥

ಕರಕೊಂಡು ಒಯ್ದಾರ ಸರಕಾರ ಎದರ
ನಿಂದರಸಿ ಕೇಳತಾರ ಹುಜಿಯೇರ
ಅಷ್ಟ ಎಲ್ಲ ಕೇಳಕೊಂಡ ಮಜಕೂರ
ಒಯ್ದು ಗಲ್ಲಗೇರಿಸಿ ಜಿಂವ ಹೊಡಸ್ಯಾರ ॥

ದಂಡೋತಿ ಊರಾದಪ ಭಾರ
ಅರ್ಜುನಪ್ಪ ಮಾರಾಜ ಹೀಂಗ ಹೇಳತಾರ
ತಾಸಿನೊಳಗ ನಾಕು ಜೀಂವ ಹೋದುಪೂರ
ಎಂದೆಂದು ಮಾಡ್ಕೊಬಾರ್ದೊ ಇಬ್ಬರ್ಥೆಂಡರ ॥

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ರಾಮ ಕೆಂದಾಲಿಹೂವು; ಹೆಗಡೆ, ಎಲ್.ಆರ್. ತಿಮ್ಮಕ್ಕನ ಪದಗಳು ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೬೯ ಪು.ಸಂ. ೧೩೨-೧೪೭.

೨) ಕಾನ್‌ಕಾನ್ ಕನ್ನಡಿ; ಹೆಗಡೆ ಎಲ್.ಆರ್. ಗುಮ್ಮನ ಪದಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೩, ಪು.ಸಂ. ೨೫-೩೭.

೩) ಧರ್ಮಳ್ಳಿ ದರಿರಾಜ ಮತ್ತು ಅಸ್ತುರಿ; ನಾಯಕ ಎನ್.ಆರ್. ಕೋಮಾರಪಂತರ ಕಥನ ಕವನಗಳು ಜಾನಪದ ಪ್ರಕಾಶನ ಹೊನ್ನಾವರ ೨೦೦೪, ಪು.ಸಂ. ೭೦-೮೨.

---

* ಸೌಂಸೌತೇರು; ಹನೂರು ಕೃಷ್ಣಮೂರ್ತಿ, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೮ ಪು.ಸಂ. ೧೫೮-೧೬೦.

## ೧೮. ಒಬ್ಬರಿಗಟ್ಟಡುಗೆ *

ಹಟ್ಟಿಲರಗ್ವಾಡೆ ಹಿತ್ತಲೇಲಿ ಸೇದೂಬಾವಿ
ಚಿತ್ತಾರಗೇದ ಅರಮನೆಯ ಒಳಗಿರುವ | ಚಿಕ್ಕಣ್ಣೆ
ಕುಡಿಯೋಕೆ ನೀರುಂಟೆ ಕಡುಜಾಣೆ

ಕುಡಿನೀರು ಕೊಡುವೋಕೆ ಅತ್ತಿಲ್ಲ ಮಾವಿಲ್ಲ
ಚಿಕ್ಕೊನು ಮೈದಾಳು ಮನೇಲಿಲ್ಲ | ದೊರೆಮಗನೆ
ನೀ ಹೋಗಯ್ಯ ಹರಿವೊ ಜಲಧೀಗೆ

ಹರು ನೀರು ಹಚ್ಚಾಗೆ ಕೆರೆ ನೀರು ಕೆಂಪೀಗೆ
ನೀ ಕೊಟ್ಟ ನೀರು ಕಡು ರುತಿಯು

ನಾ ಕೊಟ್ಟ ನೀರು ಕಡು ರುತಿಯಾದರೆ
ನಿನಗಿಂಟ ಚಲುವ ಮನೆಯಾತ | ಕಂಡರೆ
ನಿನ್ನ ಬೆನ್ನೇಲಿ ಬಿಡುವರು ಬಿಳಿಯಂಬ

ಬೆನ್ನಲಿ ಬುಟ್ಟಂಬ ಬೆಳ್ಕಲ್ಲಿ ತಗಿಸೂನೆ
ಸುರಗಿರಿ ಕೆಂಬಲ್ಲ ರತ್ನವ | ಕ್ವಾಟೇಲಿರುವ
ತಿರುಗಿ ನೋಡೂನ ಹೆಸರೇನೆ

ಆರು ಪೆಟ್ಟೇಲಿ ಬಣ್ಣ ಮ್ಯಾಲೊಂದ ಬಾಚಣಿಗೆ
ತಂದಿವ್ನಿ ನೋಡೆ ಬೆಲೆಹೆಣ್ಣೆ

ಹತ್ತು ಪೆಟ್ಟೇಲಿ ಬಣ್ಣ ಮ್ಯಾಲೊಂದ ಬಾಚಣಿಗೆ
ತಂದಿವ್ನಿ ನೋಡೆ ಬೆಲೆಹೆಣ್ಣೆ | ನಾನೀಗ
ಇಸ್ತ್ರೆ ತೋಳೇಲಿ ಮಗೂನೆ

ಇಸ್ತ್ರೆ ತೋಳೇಲಿ ವರಗಿದರೆ ದೊರೆಮಗನೆ
ದಂಡ ಕೊಟ್ಟೇನು ಅರಸೀಗೆ

ದಂಡ ನಾ ಕೊಡುವೆ ಹಿಂಡೆಮ್ಮೆ ಹೊಡಿಸೂವೆ
ನನ್ನ ಹೆಂಡರು ಮಕ್ಕಳ ಕೈಸೆರೆಯ ಕಳುವೇನು | ಈ ಮನೆಯ
ಕಡುಜಾಣೆ ನನಗೆ ಒಲಿದಾರೆ

ಉದ್ದುದ್ದನ ತ್ವಾರ ದೊಡ್ಡಮುತ್ತ ನಾ ಕೊಡುವೆ
ದೊಡ್ಡ ಮಾಳಿಗೇಲಿ ಇರಸೂವೆ | ಈ ಮನೆಯ
ಬುದ್ಧಿವಂತೆ ನನಗೆ ಒಲಿದಾರೆ

ಉದ್ದುದನ ತ್ವಾರ ದೊಡ್ಡ ಮುತ್ತು ನನಗುಂಟು
ದೊಡ್ಡ ಮಾಳಿಗೆ ಮಿಗಿಲುಂಟು | ನಂಗೌಡರ
ಉದ್ದೀನ ಗದ್ದೆ ಬೆಳಿಯಾಲೊ

ಕಡಕಡಲೆ ತ್ವಾರ ಕಡದ್ದವಳ ನಾ ಕೊದುವೆ
ಕಡೆಯ ಮಾಳಗೇಲಿ ಇರಸೂವೆ | ಈ ಮನೆಯ
ಕಡುಜಾಣೆ ನನಗೆ ಒಲಿದಾರೆ

ಕಡಕಡಲೆ ತ್ವಾರ ಕಡದ್ದವಳ ನನಗುಂಟು
ಕಡೆಯ ಮಾಳಿಗೆ ಮಿಗಿಲುಂಟು | ನಂಗೌಡರ
ಕಡಲೇಯ ಗದ್ದೆ ಬೆಳಿಯಾಲೊ

* * *

ಜ್ವಾಳದ ಹೊಲಕೆ ಕೂಳ ಕೊಂಡ್ಹೋಗಳೆ
ಜಾಣೆ ಒಕ್ಕಲಗಿತ್ತಿ ಕಡುಚೆಲುವೆ | ನೀನೀಗ
ಇತ್ತೊಂದ ತುತ್ತ ನೀದೋರೆ

ಒಬ್ಬರಿಗಟ್ಟುಡುಗೆ ಇಬ್ಬರಿಗೆ ಆದಾವೆ
ಇಬ್ಬಂದಿರಿಗಾರ ದೊರೆಮಗನೆ | ನನ್ನೋರು
ಒಬ್ಬರಿಗೆ ಧಾರೆ ಎರದವರೆ

ಹಳ್ಳಾದ ಹೊಲಕೆ ಕೂಳ ಕೊಂಡ್ಹೋಗೂಳೆ
ಉತ್ತುಮೊಕ್ಕಲಗಿತ್ತಿ ಕಡುಚಲುವೆ | ನೀನೀಗ
ಮತ್ತೊಂದ ತುತ್ತ ನೀದೋರೆ

ಇಬ್ಬಂದಿಗಾರ ದೊರೆಮಗನೆ ನನ್ನೋರು
ಒಬ್ಬರಿಗೆ ಧಾರೆ ಎರದವರೆ

ಹೊಲೆಯ ನೇದ ಬಟ್ಟೆ ತಲೆಮ್ಯಾಲೆ ಹಾಕೊಂಡು
ಮೂಡಲಾಗಿ ಹೊಲವ ಉಳುವಾ(ನ) | ಒಕ್ಕಲಮಗನ
ನೀ ಏನ ಮೆಚ್ಚೀದೆ ಬೆಲೆ ಹೆಣ್ಣೆ

ಹೊಲೆಯ ನೇದಬಟ್ಟೆ ತಲೆಮ್ಯಾಲೆ ಹಾಕೊಂಡು
ಮೂಡಲಾಗಿ ಹೊಲವ ಉಳುವಾ (ನ) | ಒಕ್ಕಲುಮಗನ
ಭಾವಾವ ನೋಡೊ ದೊರೆಮಗನೆ

ಮಾದಿಗ ನೇದ ಮಿಣಿಯ ಮಂಡೆಮ್ಯಾಲ್ಹಾಕೊಂಡು
ತೆಂಕಲಾಗಿ ಹೊಲವ ಉಳುವಾ (ನ) | ಒಕ್ಕಲಮಗನ
ನೀ ಏನ ಮೆಚ್ಚೀದೆ ಬೆಲೆಹೆಣ್ಣೆ

ಮಾದಿಗ ನೇದ ಮಿಣಿಯ ಮಂಡೆಮ್ಯಾಲ್ಹಾಕೊಂಡು
ತೆಂಕಲಾಗಿ ಹೊಲವ ಉಳುವಾ (ನ) | ಒಕ್ಕಲುಮಗನ
ಚಂದಾವ ನೋಡೊ ದೊರೆಮಗನೆ

ಹತ್ತು ಬೆರಳಿಗೆ ಹತ್ತು ತೆತ್ತೇಸ್ಹೊನ್ನುಂಗುರ
ಎತ್ತೀಗೆ ಹುಲ್ಲ ಇರುವೋನ | ಒಕ್ಕಲ ಮಗನ
ನೀನೇನ ಮೆಚ್ಚೀದೇ ಬೆಲೆಹೆಣ್ಣೆ

ಹತ್ತು ಬೆರಳಿಗೆ ಹತ್ತು ತೆತ್ತೇಸ್ಹೊನ್ನುಂಗುರ
ಎತ್ತೀಗೆ ಹುಲ್ಲಿರುವೋನ | ಒಕ್ಕಲಮಗನ
ಅಂದಾವ ನೋಡೋ ದೊರೆಮಗನೆ

ಕಡಾಯದೇಲಿ ನೀರು ಗಡಗುಟ್ಟಿ ಕಾದಾವೆ
ಹೆಣ್ಣೊಕ್ಕಲ ಮಗ ಶನಿವಾರ | ಮೀದ ನೀರ
ನೀ ನಾಯಾಗಿ ಉಳ್ಕೊ ದೊರೆಮಗನೆ

ಕೊಪ್ಪರಿಕೇಲಿ ನೀರು ಉಕ್ಕುಕ್ಕಿ ಕಾದಾವು
ಉತ್ತುಮೊಕ್ಕಲ ಮಗ ಸ್ವಾಮಾರ | ಮೀದ ನೀರ
ನೀ ಕತ್ತೆಯಾಗಿ ಮೀಯೊ ದೊರೆಮಗನೆ

ಎಣ್ಣೇಲಿ ಬೆಂದೊ ಹನ್ನೆರಡು ಕಜ್ಜಾಯ
ಹೆಣ್ಣೊಕ್ಕಲ ಮಗ ಶನಿವಾರ | ಉಂಡೆಲೆಯ
ನೀ ನಾಯಾಗಿ ನೆಕ್ಕೊ ದೊರೆಮಗನೆ

ತುಪ್ಪದೇಲಿ ಬೆಂದೊ ಇಪ್ಪತ್ತು ಕಜ್ಜಾಯ
ಉತ್ತುಮೊಕ್ಕಲ ಮಗ ಸ್ವಾಮಾರ | ಉಂಡೆಲೆಯ
ನೀ ಬೆಕ್ಕಾಗಿ ನೆಕ್ಕೊ ದೊರೆಮಗನೆ

ಎಷ್ಟು ಹೇಳಿದರೂ ಕೇಳೊಲ್ಲೊಕ್ಕಲಗಿತ್ತಿ
ಹಾಸೆ ಮುತ್ತೀನ ಜೋತುರವ | ಕಡುಜಾಣೆ
ನಿನ್ನ ಸಂಗಡರಗಳಿಗೆ ಇರುವೇನು

ಆರುವರ ಕೊಟ್ಟೆ ಆರು ವಲ್ಲಿಯ ನೆಯ್ಸಿ
ಲಾಳದ ಕೊಳವೇಲಿ ಅಡಗಿರುವ | ಜೋತುರವ
ಹಾಸಿದರೆ ನಿನ್ನೊಡಲು ಉರಿಯಾದೆ

ನಮ್ಮತ್ತೆ ಮಾವರು ಒಪ್ಪಿ ಮತ್ತೆ ಬಂಧುಗರೊಪ್ಪಿ
ಮುಕ್ಕಣೀಶ್ವರರು ವನಗೂಡಿ | ಬಂದೈರದಾಲಿ
ಹೋದರೆ ನಿನ್ನೊಡಲು ಉರಿಯಾದೆ

ಅತ್ತೆ ಮಾವರು ಒಪ್ಪಿ ಮತ್ತೆ ಬಂಧುಗರೊಪ್ಪ
ದಾಯದೋರೊಪ್ಪಿ ಗುರುವೊಪ್ಪಿ | ತಂದವರೆ
ನಾನ್ಯಾವ ಗಂಗೇಲಿ ಕಳಿಯಾಲೊ

ಎಲ್ಲಾನು ಗೆದ್ದೆಲ್ಲೆ ಜಲ್ಲಾಳೊಕ್ಕಲಗಿತ್ತಿ
ಕೊಳ್ಳೆತನ ಕಯ್ನು ಬಿಳಿಯೆಲೆಯ | ನನ್ನೂರ
ಹಳ್ಳದಿಂದಾಚೆ ನೆನೆಕೊಳ್ಳೆ

ನೆನೆವೆ ನನ್ನಪ್ವಾನ ನೆನೆವೆ ನನ್ನವ್ವಾನ
ನೆನೆವೆ ನನ್ನೇಳ ಬಳಗಾವ । ದೊರೆಮಗನೆ
ನಿನ್ಯಾಕೆ ನೆನೆಯಲೊ ನನ್ನ ಹಳೆಗೆರವ

ನೆನೆವೆ ನನ್ನಪ್ವಾನ ನೆನೆವೆ ನನ್ನವ್ವಾನ
ನೆನೆವೆ ನನ್ನೇಳ ಬಳಗಾವ । ನನ್ನೂರ
ಹೊಸಮಾರಿ ನನ್ನ ಮುರಿಯಲೊ

ಹೊಸಮಾರಿ ನಿನ್ನ ದೆಸೆಯೋರ ಮುರಿಯಾಲಿ
ನನ್ನ ವಸ್ತ್ರದಲ್ಲಿರುವ ಹಣಕಾ(ಸು) । ಸೊಂದುಂಟಾದ್ರೆ
ಇಸ್ತ್ರೈರೈವಾರ ತರುವೇನು

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಎಳ್ಳಮಾಸೀ ಹಾಡು ಕಾವಸೆ ರೇವಪ್ಪ; ಮಲ್ಲಿಗೆ ದಂಡೆ, ಸಮಾಜ ಪುಸ್ತಕಾಲಯ ಧಾರವಾಡ, ೧೯೭೦. ಪು.ಸಂ. ೩೯-೪೧.

೨) ಮುತ್ತಿನಶೆಟ್ಟಿ; ಕಾಳೇಗೌಡ ನಾಗವಾರ, ಬಯಲುಸೀಮೆಯ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರ ೧೯೭೩ ಪು.ಸಂ. ೧೧೭-೧೧೯.

೩) ದಿಗಿಲಾಗಿ ನಿಂತಾಳ; ರಾಮಣ್ಣ, ಕ್ಯಾತನಹಳ್ಳಿ, ಬೀದರ ಜಿಲ್ಲೆಯ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೭೬, ಪು.ಸಂ. ೧೩೬-೧೩೯.

೪) ಗೌಡರ ಸೊಸಿ ಮ್ಯಾಲೆ ನನ್ನ ಮನಸು; ಕೃಷ್ಣಯ್ಯ, ಎಸ್.ಎ. ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪೂರದ ಜನಪದ ಗೀತೆಗಳು, ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೧೯೯೨. ಪು.ಸಂ. ೧೩೯೦೦೧೪೦.

---

* ಒಬ್ಬರಿಗಟ್ಟುಡುಗೆ; ಕಾಳೇಗೌಡ ನಾಗವಾರ, ಬಯಲುಸೀಮೆಯ ಲಾವಣಿಗಳು, ಮೈಸೂರು ೧೯೭೩ ಪು.ಸಂ. ೧೧೧-೧೧೪.

## ೧೯. ಕಡ್ಲಿಮಟ್ಟಿ ಕಾಶಿಬಾಯಿ ಹಾಡು *

ಈ ಕಲಿಯುಗದೊಳಗಿನ ಕತಿsಕೇಳ್ರಿ ಹಿರಿಯರಾ । ಸಣ್ಣ ದೊಡ್ಡವರಾ ।
ಕಡ್ಲಿಮಟ್ಟಿs ಟೇಶನದಾಗ ಇದ್ದ ತಿಕೀಟ ಮಾಸ್ತsರಾ ಹೋಜೀಜೀಜೀ ॥ ಪ ॥
ತಾಯಿ ತಂದಿ ಕರೆದು ಹೇಳ್ತಾರ ತನ್ನ ಮಗನಿsಗಿ । ಹೋಗೋ ಊರಿಗಿ ।

ಕರಕೊಂಡು ಬಾರೊ ನಿನ್ನ ಮಡದಿ ಕಾಶಿಬಾಯಿsಗಿ । ಹೋಗೊ ಊರಿಗಿ ।
ಕರಕೊಂಡು ಬಾರೊ ನಿನ್ನ ಮಡದಿ ಕಾಶಿಬಾಯಿsಗಿ ಹೋಜೀಜೀಜೀ ॥

ತಾಯಿ ತಂದಿ ಮಾತ ಕೇಳಿ ಮಗಾ ಹೊಂಟ ಲಗಿಬಿsಗಿ । ಅತ್ತಿ ಮಾವನ ಮನಿಗಿ ।
ಅಳಿಯ ಬಂದಾನಂತ ಬಿಸಿನೀರ ಕೊಟ್ಟರೊ ಕಾಲಿsಗಿ ಹೋ ಜೀಜೀಜೀ ॥
ಸತಿಪತಿ ಮಾತಾಡ್ತಾರ ಉಂಡ ಮಂಚದ ಮ್ಯಾಲ ಮಲಗಿ । ಎದ್ದರೊ ಬೆಳಗಾಗಿ ।
ಮುಂಜಾನೆದ್ದು ಕೇಳ್ತಾನ ಕಳಸರಿ ನನ್ನ ಸತಿಯಳಿsಗಿ ಹೋ ಜೀಜೀಜೀ ॥
ನಾವು ಕಳಸುವಿಲ್ಲಾ ಬಿಸಳ ಭಾಳ ಮಗಳಿsಗಿ । ಸಣ್ಣ ಶಿಸುವಿsಗಿ ।
ಸೀರಿ ಕುಪ್ಪಸ ಗಳಿಗಿ ಇನ್ನುs ತಂದಿಲ್ಲೊ ಮಗಳಿsಗಿ ಹೋಜೀಜೀಜೀ ॥

ಇಷ್ಟು ಕೇಳಿ ಅಳಿಯ ಖಿನ್ನಾಗಿ ।
ಎತ್ತಿಕೊಂಡ ತನ್ನ ಪುತ್ರನಿಗಿ ।
ಮುದ್ದಾಡಿ ಅಂತಾನ ಮಗನಿsಗಿ ।
ನಿನ್ನ ಮಾರಿ ಎರವ ಆತಲ್ಲೊ ಮಗನೆ ಇಂದಿsಗಿ ಹೋಜೀಜೀಜೀ ॥
ನೀ ಬಾರೊ ನನ್ನ ಊರಿsಗಿ ।
ನಾ ಬರುವದಿಲ್ಲೊ ತಿರಿತಿರಿಗಿ ।
ನಿನ್ನ ಚಿಂತಿ ಆಯಿ-ಮುತ್ಯಾನಿಗಿ ।
ನಿನ್ನ ಮುಖಾ ನೋಡುsದಕಾಗಿ ತಪಾ ಕುಂತಾರೊ ನಿನಗಾsಗಿ ಹೋ ಜೀಜೀಜೀ ॥
ಕರದ್ಹೇಳತಾನ ಸತಿಯಳಿಗಿ ।
ಬಲು ಜ್ವಾsಕಿ ನನ್ನ ಪುತ್ರನಿಗಿ ।
ಸರ್ವರೀತಿಲಿಂದ ಸರಿಯಾಗಿ ।
ಸಂರಕ್ಷಣ ಮಾಡಿ ಕರಕೊಂಡು ಬಾರ ಕಂದನಿsಗಿ ಹೋಜೀಜೀಜೀ ॥
ಅತ್ತಿ ಹೇಳತಾಳ ಅಳಿಯನಿಗಿ ।
ಸಿಟ್ಟ ಹಚಗೋಬ್ಯಾಡ್ರಿ ಮನಸಿsಗಿ ।
ಉಂಡು ಹೋಗ್ರಿ ಇನ್ನೊಂದು ತಾಸಿsಗಿ ।
ಉಣಲಾರ್ದೆ ಹೊಂಟಾನೋ ಮಡದಿ ಬಿದ್ದಾಳೊ ಕಾಲಿsಗಿ ಹೋಜೀಜೀಜೀ ॥
ಎಷ್ಟು ಹೇಳಿದರ ಕೇಳಲಿಲ್ಲ ಶಟಗೊಂಡು ಹೊಂಟ ಭರರsರ । ಮಾಡಿ ಅವಸರ ।
ಕಡ್ಲಿಮಟ್ಟಿs ಟೇಶನದಾಗ ಇದ್ದ ತಿಕೀಟ ಮಾಸ್ತsರಾ ಹೋಜೀಜೀಜೀ ॥ ೧ ॥

ಟೇಶನಕ ಹೋಗುದರೊಳಗೆ ಗಾಡಿ ಬಂದು ಹೋಗಿsತ್ತ । ಮಾಡಲಿಲ್ಲ ಸುಸ್ತ ।
ಕಳವಳಿಸುತ ಊರಿಗೆ ಹೋಗ್ಯಾನ ಗಾಡ್ಯಾಗ ಕುಂsತ ಹೋಜೀಜೀಜೀ ॥
ಗಂಡ ಹೋದ ಮ್ಯಾಲ ಕಾಶಿಬಾಯಿ ಗೇನಸತಾಳ ನಿಂತ । ಜನ್ಮ ಸುಡಲೆಂತ ।
ಹವಣಿsಕಿ ಮಾಡತಾಳ ತಾನು ಹೋಗಬೇಕಂತ ಹೋಜೀಜೀಜೀ ॥
ತಾಯಿ ತಂದಿನ ಕೇಳ್ತಾಳ ಮನಸಿನೊಳಗ ಮರುಗುsತ । ಕೇಳ್ರಿ ನನ್ನ ಮಾತ ।
ನನ್ನ ಗಂಡನ ಕೂಡ ನಾ ಹೋಗತೀನಿ ಈ ಹೊತ್ತs ಹೋಜೀಜೀಜೀ ॥

ಎತ್ತಿಗೊಂಡಾಳ ಕೂಸಿನ ಬಗಲಾಗ ಬಂಗಾರದಂಗ । ಹಂಗ ಅತಗೊಽತ ।
ಉಣಲಾರ್ದೆ ಹೊಂಟಾಳೊ ಗಂಡನ ಮ್ಯಾಲ ಒಂದೊತ್ತ ಹೋಜೀಜೀಜೀ ॥

ತಾಯಿ ತಂದಿ ಹೇಳತಾರಲ್ಲ ।
ಸಣ್ಣ ಶಾವಿಗಿ ಸಕ್ಕರಿ ಹಾಲ ।
ಉಂಡುಟ್ಟ ಹೋಗ ಕುಶಿಯಾಲ ।
ನನ್ನ ಗಂಡ ಉಂಡಿಲ್ಲಽನಾ ಹ್ಯಾಂಗ ಉಣಲಿ ಉಣ್ಣದಿಲ್ಲಾ ಹೋಜೀಜೀಜೀ ॥
ದಾಟಿ ಬರುವಾಗ ತಲಬಾಗಿಲ ।
ಎಡಗಾಲಿಗಿ ಬಡಿತೊ ಹೊಸ್ತಲ ।
ಅಪಶಕುನ ಆದಾವ ಸಾಮೀಲ ।
ಕಟಕ ಇದಿರಿಗಿ ಬಂದ ತಕ್ಕೊಂಡು ಕತ್ತಿ ಕುಡಗೋಽಲ ಹೋಜೀಜೀಜೀ ॥
ಇಷ್ಟು ಭಯಾ ಆದರು ಬಿಡಲಿಲ್ಲ ।
ತನ್ನ ಪುರುಷ ಮ್ಯಾಲ ಹಂಬಲ ।
ನಿಶೆಽದಾಗ ಏರಿದಂಗ ಅಮಲ ।
ಯಾವ ಮಾತಿನ ಖಬರಿಲ್ಲ ಲಕ್ಷ್ಯ ಗಂಡನಽ ಮ್ಯಾಲಽ ಹೋಜೀಜೀಜೀ ॥
ಕೆಟ್ಟ ಮಧ್ಯಾಣ ಬ್ಯಾಸಗಿ ಬಿಸಲ ।
ಹುಟ್ಟಾ ಬರಿಗಾಲಿಲೆ ನಡದಿಲ್ಲ ।
ಲಿಂಬಿ ಹಣ್ಣಿನಂಥ ಮೈದೊಗಲ ।
ಕಾಲ ಸುಟ್ಟ ಗುರುಳಿ ಎದ್ದು ಉರಿಯತಾವ ಅಂಗಾಽಲ ಹೋಜೀಜೀಜೀ ॥
ಸೀರಿ ಕುಪ್ಪಸ ತಪ್ಪನೆ ತೊಯ್ದು ಕೊಳ್ಳಽನ ಬೆವಽರ । ಹರಿಯತಾವ ನೀರ ।
ಕಡ್ಲಿಮಟ್ಟಿಽ ಟೇಶನದಾಗಿ ಇದ್ದ ತಿಕಿಟ ಮಾಸ್ತಽರಾ ಹೋಜೀಜೀಜೀ ॥ ೧ ॥

ತನ್ನ ಮನದಾಗ ತಾನೆ ಅಂತಾದ ಬಗಲಾನ ಕೂಸಽ । ಎಲೋ ಜಗದೀಶ ।
ನಮ್ಮವ್ವ ಎಲ್ಲಿಗೆ ಕರೆದೊಯ್ಯುತಾಳ ಇಂದಿನ ದಿವಽಸ ಹೋಜೀಜೀಜೀ ॥
ಲಗುಹೋಗಿ ಕೂಡಬೇಕಂತ ಮಾಡ್ಯಾಳ ದಾರಿಽ ಅವಸರ । ಗಂಡನ ಮ್ಯಾಲ ಮನಸ ।
ಮಲ್ಲಿಗ್ಹೂವಿನಂತ ಮುಖಬಾಡಿ ಉಂಡಿಲ್ಲ ಉಪವಾಽಸ ಹೋಜೀಜೀಜೀ ॥
ಟೇಶನಕ ಹೋಗುದರೊಳಗ ಹೊತ್ತ ಉಳಿದಿತ್ತ ಒಂದತಾಸ । ಆದಿಽತ ಮೋಸ ।
ಗಂಡ ಗಾಡ್ಯಾಗ ಕುಂತು ಮುಂದ ಹೋಗಿದ್ದ ರಾಜ ಹಂಸ ಹೋಜೀಜೀಜೀ ॥
ಅಯ್ಯಯ್ಯೊ ಶಿವಶಿವಾ ಹ್ಯಾಂಗ ಮಾಡಬೇಕೊ ವಾಸಽ । ಮಾಡತಾಳ ಧ್ಯಾನ ।
ಮನಿಮಾರ ಇಲ್ಲದೆ ಎಲ್ಲಿ ಮಾಡಬೇಕೊ ವಾಽಸ ಹೋಜೀಜೀಜೀ ॥

ಒಬ್ಬಾಕಿ ಕುಂತಾಳೊ ನಿರಾಹಾರ ।
ಸುತ್ತಮುತ್ತ ಸುಳುವ ಇಲ್ಲ ಯಾರ ।
ಆಗ ಬಂದ ತಿಕಿಟ ಮಾಸ್ತಽರ ।
ಕಾಶಿಬಾಯಿ ರೂಪನೋಡಿ ತೆಲಗಿ ಏರಿತೊ ಕಾಮಪೂರಾ ಹೋ ಜೀಜೀಜೀ ॥
ಬಂದ ಕೇಳ್ತಾನ ನಿಂದ ಯಾವೂರ ।

ಏನೈತಿ ನಿನ್ನ ಹೆಸsರಾ ।
ಏಸು ಮಂದಿ ನಿನಗ ಪುತ್ರರಾ ।
ನಿನ್ನ ಅತ್ತಿ ಮಾವನ ಮನಿ ಊರ ಹೇಳ ನಿರ್ಧಾರs ಹೋಜೀಜೀಜೀ ॥
ಮಾಸ್ತರಗ ಹೇಳತಾಳ ಮಜಕೂರ ।
ಏನು ತೊಗೊಂಡು ಸುಡತಿ ಮನಿಮಾರ ।
ಅತ್ತಿ ಮಾವನ ಮನಿಯು ಶಿವಪೂರ ।
ನನ್ನ ಗಂಡನ ನನಗ ದಾರ್ಯಾಗಾಯ್ತೊ ಹೇರಫೇರಾ ಹೋ ಜೀಜೀಜೀ ॥
ಕರಿsಬಂದ ಗಂಡನ ಕೂಡ ಕಳಸಲಿಲ್ಲ ತವರವsರ । ಮಾಡಿ ತಕರಾರ ।
ಕಡ್ಲಿಮಟ್ಟಿs ಟೇಶನದಾಗ ಇದ್ದ ತಿಕಿಟ ಮಾಸ್ತsರ ಹೋ ಜೀಜೀಜೀ ॥ ೩ ॥

ಇಷ್ಟು ಆಗುದರೊಳಗ ತಾಯಿ ಹೊಟ್ಯಾಗ ಸೂರ್ಯಾ ಹೋದ । ಬಿದ್ದಿತೋ ಗಾಢ ।
ಆ ಕಾಶಿಬಾಯಿಗೆ ಮಾಸ್ತರ ಕೊಡsತಾನ ಬೋಧs ಹೋ ಜೀಜೀಜೀ ॥
ಈ ಟೇಶನದೊಳಗ ಹುಲಿಕರಡಿ ತೋಳಿನ ಬಾಧಾ । ಮಾಡತಾವ ಶಬ್ದ ।
ಹೊಸ ಮನಶ್ಯಾರ ನಾತಕ ಬರತಾವ ಗಿಡಗಂಟಿ ಹಿಡsದ ಹೋ ಜೀಜೀಜೀ
ಇಷ್ಟು ಕೇಳಿ ಕಾಶಿಬಾಯಿ ಭಯಪಟ್ಟು ಎದಿ ಒಡsದ । ನಿಂತಾಳ ಹುಚ್ಚ ಹಿಡದ ।
ಹ್ಯಾಂಗ ಮಾಡಲಿ ಶಿವನೆ ಇದರಾಗುಳಿಯುsದ ಆಗsದ ಹೋ ಜೀಜೀಜೀ ॥
ಮಾಸ್ತರ ಅಂತಾನ ದೂರಲಿಂದ ದಾರಿ ನಡsದ । ಮಲಗತಿsದಿ ದಣದ ।
ನಾ ತಿಕೀಟ ಕೊಂಡೋಮುಂದ ಯಾರ ಎಬ್ಬಿಸತಾರ ಬಂದs ಹೋಜೀಜೀಜೀ ॥
ಈ ಟೇಶನ ಕಾರಭಾರ ನಂದ ।
ಇಲ್ಲಿ ಅಂಜಿಕಿಲ್ಲ ಯಾವಂದ ।
ನಿನ್ನ ಯಾರ ಕೇಳತಾರ ಬಂದ ।
ಇಷ್ಟ ಹೇಳಿ ಮಲಗಿಸಿ ತಿಕೀಟ ಖೋಲಿಗಿ ಬಂದs ಹೋಜೀಜೀಜೀ ॥

ಮಾಸ್ತರ ಅಂತಾನ ಖುಷಿಲಿಂದ ।
ಇಂಥ ಹೆಣ್ಣ ಕಂಡಿಲ್ಲೊ ಎಂದೆಂದ ।
ಪರಮಾತ್ಮ ನನ್ನ ದsಸಿಂದ ।
ಬೇಕಂತ ನನಗಾಗಿ ಕಳಿಸ್ಯಾನ ಕೈಲಾಸದಿಂದs ಹೋಜೀಜೀಜೀ ॥
ಕಾಶಿಬಾಯಿ ಅಂತಾಳ ಮನನೊಂದ ।
ಇವ ಏನ ಮಾಡತಾನ ಮುಂದ ।
ನನ್ನ ರೂಪಕ ಮರುಳಾಗಿ ಬಂದ ।
ಪರಾಮರಿಕಿ ಮಾಡುದರೊಳಗ ಗುಣಾ ತಿಳಿsತ ದುಷ್ಟಂತ ಹೋಜೀಜೀಜೀ ॥
ಪರಮಾತ್ಮ ಗಂತಾಳ ಹ್ಯಾಂಗ ಮಾಡತಿsದಿ ಪಾರಾ । ಸ್ವಾಮಿ ಶಂಕರಾ ।
ಕಡ್ಲಿಮಟ್ಟಿs ಟೇಶನದಾಗ ಇದ್ದ ತಿಕಿಟ ಮಾಸ್ತsರಾ ಹೋಜೀಜೀಜೀ ॥ ೪ ॥

ಗಂಡನ ಸ್ಮರಣೆಮಾಡಿ ಒಂಟಗಾಲಿನ ಮ್ಯಾಲ ನಿಂತ । ಗೆಲಿಸೊ ನನ್ನ ಪಂತ ।
ಹುಲಿ ಬಾಯಾಗ ಸಿಕ್ಕಿನಿ ಬಿಡಸವರಿಲ್ಲೊ ಈ ಹೊತ್ತ ಹೋಜೀಜೀಜೀ ॥

ಅತ್ತಿ ಮಾವನ ನೆನಸ್ತಾಳ ದೊಡ್ಡವರಿಲ್ಲ ನಿಮಕಿಂತ । ಜಲ್ಮದ (ಸೊತ್ತ) ।
ಪತಿವ್ರತಾ ಇಂದಿಗಿ ಹಾನಿಯಾಗುವದು ಬಂತ ಹೋಜೀಜೀಜೀ ॥
ಬಾಗಿಲ ತೆರದ ಹೊರಗ ಬಂದೇನಂದ್ರ ಕೀಲಿ ಮಜಬೂತ । ಕಿಡಿಕಿ ಬಂದೋಬಸ್ತ ।
ಇವನ ತಾಬೇದಾಗ ಆಗೀನಿ ಕಾಯೊ ಭಗವಂತಃ ಹೋಜೀಜೀಜೀ ॥
ಇಷ್ಟ ಆಗುದರೊಳಗ ಗಾಡಿ ಬಂದು ಹೋಗಿತ್ತ । ಮಾಡಲಿಲ್ಲ ಸುಸ್ತ ।
ಯಾವಾಗ ನೋಡೆನಂತ ಕಾಶಿಬಾಯಿ ಮ್ಯಾಲ ಅವನ ಚಿತ್ತಃ ಹೋಜೀಜೀಜೀ ॥
ಅಲ್ಲಿಃದಲ್ಲೆ ಇಟ್ಟ ಮೇಜಿನ ಮ್ಯಾಲ ।
ರೊಕ್ಕ ರೂಪಾಯಿ ಗಜನಿಯ ಚೀಲ ।
ಸಂದುಕದ ಬಾಯಿ ಮುಚ್ಚಿಲ್ಲ ।
ದಫ್ತರ ಗಂಟ ಕಾಗದ ಪತ್ರ ಸುತ್ತಿ ಇಡಲಿಲ್ಲ ಹೋಜೀಜೀಜೀ ॥
ಕಾಶಿಬಾಯಿ ಮ್ಯಾಲ ಅವನ ಖ್ಯಾಲ ।
ನೋಡಬೇಕು ಅಂಬುಃ ಹಂಬಲ ।
ಜೀವದಾಗ ಸಮಾಧಾನ ಇಲ್ಲ ।
ಮನ್ಮಥ ಬಾಣ ಸಂದಿ ಸಂದಿಗೆ ಸೇರಿಃತಲ್ಲ ಹೋಜೀಜೀಜೀ ॥

ಹಾತೊರೆದ ತಡಾ ಮಾಡಲಿಲ್ಲ ।
ಬಂದ ತೆರೆದ ಕೋಲಿ ಬಾಗಿಲ ।
ಕಾಶಿಬಾಯಿ ಮನಸಿನಾಗ ಜಲ್ಲ ।
ಅಂತಾಳ ಎನ್ನ ಪತಿವ್ರತಾಃಕ ಬಂದಿತ ಉರಃಲ ಹೋ ಜೀಜೀಜೀ ॥
ಮಾಸ್ತರಗ ಹೇಳತಾಳ ಅಕಲ ।
ಜರಾ ಸಮಾಧಾನ್ರಿ ಗುಣಪಾಲ ।
ನನಗ ತೀರಿಲ್ಲ ನಿದ್ದಿಯ ಅಮಲ ।
ಕಾಲ್ಮಡದ ಬರತೀನಿ ಕೂಸಿಗಿ ಹೊಚ್ಚರಿ ಶಾಃಲಾ ಹೋ ಜೀಜೀಜೀ ॥
ಕಾಲ್ಮಡಿಲಾಕ ಬರುವಾಗ ಒಳಗ ಇದ್ದನೋ ಚೋರಾ । ಎಂಥ ಪಾಮರ ।
ಕಡ್ಲಿಮಟ್ಟಿಃ ಟೇಶನದಾಗ ಇದ್ದ ತಿಕಿಟ ಮಾಸ್ತಃರಾ ಹೋ ಜೀಜೀಜೀ ॥ ೫ ॥

ಕಾಲ್ಮಡಿಲಾಕ ಬರುವಾಗ ಜಗ್ಗಿ ಖೋಲಿ ಬಾಗಿಲಕ । ಹಾಕಿದಾಳು ಚಿಲಕ ।
ಮಾಸ್ತಃರ ಅಂತಾನ ಅವಧಿ ಬಂತೋ ಜಲ್ಮಃಕ ಹೋ ಜೀಜೀಜೀ ॥
ಬಾಗಿಲದ್ಹೊರಗ ಬಂದು ನಿಂತಿಃನಿ ಅಂಜುಃದಿನ್ಯಾಕ । ಆದೆ ಕಡಿಯಾಕ ।
ಮಾಸ್ತಃರ ಅಂತಾನ ಕಾಶಿಬಾಯಿ ಬರಲಿಲ್ಲಾ ಕಃಹೋ ಜೀಜೀಜೀ ॥
ಕುಂತಃವ ಎದ್ದು ಬಂದ ನಿಂತ ಬಾಗಿಲದ ಹಂತ್ಯಾಕ । ತಪ್ಪಿತೋ ದಿಕ್ಕ ।
ಕೈಮುಗಿದು ಕರವುತಾನ ಬಾರ ನನ್ನ ಅನುಕೂಲಕ ಹೋ ಜೀಜೀಜೀ ॥
ತೆಲಿಗೇರಿದ ಮನ್ಮಥ ಇಳಿದು ಬಂತೊ ಕೆಳಿಯಾಃಕ । ಆದಿಃತೋ ತರ್ಕ ।
ಅವನ ಪಾಲಿಗಿ ಮುಳುಗಿದಂಗ ಆದಿಃತ ಮೂರೂ ಲೋಕಃ ಹೋ ಜೀಜೀಜೀ ॥
ಕಿಡಿಕ್ಯಾಗ ನೋಡತಾನ ಹಣಕಿ ।
ನೋಡಲಾರ್ದೆ ಆಃಕಿ ಚೆಲುವಿಃಕಿ ।

ಮನದಾಗ ಮಾಡತಾನ ಹೂಣಿಕಿ ।
ಏನ ಬೇಡತೀದಿ ಬೇಡs ಕೊಡತೀನಿ ರೋಕಾರೋಕಿ ಹೋ ಜೀಜೀಜೀ ॥

ಮುಂದ ಒಗದಾನ ಬಂಗಾರ ವಂಕಿ ।
ತಾ ಗಳಸಿದ್ದು ಇಡಲಿಲ್ಲ ಬಾಕಿ ।
ಅಷ್ಟು ಇಷ್ಟು ಅನ್ನಲಿಲ್ಲ ಎಣಿಕೆ ।
ಕಿಡಿಕ್ಯಾಗ ಹಾsಸಿ ಎಲ್ಲಾ ಒಗದ ಉಳಿಯಲಿಲ್ಲ ಬೋಕಿ ಹೋ ಜೀಜೀಜೀ ॥
ಇದ ಅಲ್ಲದೆ ದೌತಿ ಲೆಕ್ಕಣಿಕಿ ।
ನಿನಗ ಬರದ ಕುಡತೀನಿ ಮಾಸ್ತರಿಕಿ ।
ತರಿಸುವೆ ಮೇಣೆ ಪಲ್ಲಕ್ಕಿ ।
ನನಗ ಬೇಕಾಗಿಲ್ಲ ಅದರಾಗ ನೀನೆ ಕೂಡಕ್ಕಿs ಹೋ ಜೀಜೀಜೀ ॥
ಕಿಡಿಕ್ಯಾಗ ಹಾsಸಿ ಎಲ್ಲಾ ಒಗದ ಉಳಿಯಲಿಲ್ಲ ಚೂರಾ । ಬೆಳ್ಳಿ ಬಂಗಾರ ।
ಕಡ್ಲಿ ಮಟ್ಟೆs ಟೇಶನದಾಗ ಇದ್ದ ತಿಕಿಟ ಮಾಸ್ತsರಾ ಹೋ ಜೀಜೀಜೀ ॥ ೬ ॥

ಕಾಶಿಬಾಯಿ ಅಂತಾಳ ಏನ ಮಾತನಾಡಿದೆಲ್ಲೊ ನನಗ । ಹಳ್ಳ ಕಡದಂಗ ।
ಪತಿವ್ರತಾ ಗರತಿ ನಾನು ಮಾಡುದಿಲ್ಲೊ ಗಂಡನ ಮ್ಯಾಗ ಹೋ ಜೀಜೀಜೀ ॥
ಏನಂತ ಬ್ರಹ್ಮ ಬರದಾನೊ ನಿನ್ನ ಫಣಿಯೊಳಗ । ತಿಳಿಲಿಲ್ಲೇನೊ ನಿನಗ ।
ಏನು ಜವಾಬ ಕೊಡತಿsದಿ ನೀನು ನಾಳೆ ಮಾದೇವಗ ಹೋ ಜೀಜೀಜೀ ॥
ನಿನ್ನ ಬೆಳ್ಳಿಬಂಗಾರದಷ್ಟು ಆಳ ಮಕ್ಕಳ ಮೈಮ್ಯಾಗ । ನನ್ನ ಮನಿಯಾಗ ।
ನನ್ನ ಗಂಡ ಉಣ್ಣುದುs ಬಂಗಾರ ಗಂಗಾಳದಾsಗ ಹೋ ಜೀಜೀಜೀ ॥
ಕಿಡಿಕ್ಯಾಗ ಹಾsಸಿ ಉಗಳ್ಯಾಳ ಮಾರಿಯ ಮ್ಯಾಗ । ಮಳ್ಳ ಮಾಸ್ತರಗ ।
ಬದಕಿದ್ರ ನಾಳೆ ದಾನ ಧರ್ಮ ಮಾಡೊ ಬಲ್ಲಂಗs ಹೋ ಜೀಜೀಜೀ ॥
ಇಷ್ಟು ಕೇಳಿ ಮಾಸ್ತರ ಆದ ಖಿನ್ನ ।
ಬದಲಾದಿತ ಮಾರಿಯ ಚೆನ್ನs ।
ಅಪ್ಪಳಿಸಿ ಭೂಮಿ ಬಡಿದ್ಯಾನ ।
ನಿನ್ನ ಬಿಟ್ಟರ ನಾ ಬದಲುತ್ತರದವ ಅಂತಾನs ಹೋ ಜೀಜೀಜೀ ॥
ಎಡಬಲಕ ಹೊರಳಿ ನೋಡ್ಯಾನ ।
ಮಲಗಿsದ ಕೂಸಿನ ಎಬ್ಬಿಸ್ಯಾನ ।
ಮಲ್ಲಿಗ್ಹೂವಿನಂಥ ಶಿಶುವಿsನ ।
ಕೈಯಾಗ ಹಿಡದ ಈಗ ಕೊಲ್ಲತೀನಿ ಅಂತಾsನ ಹೋ ಜೀಜೀಜೀ ॥

ಈಗ ಬಂದರ ಬಿಡತೀನ ನಾನs ।
ಬರದಿದ್ರ ಹೊಡಿಯತೀನಿ ಪ್ರಾಣ ।
ನನ್ನ ಕೈಯಾಗ ಕೂಸಿನ ಮರಣ ।
ಇದು ಸುಳ್ಳ ಅಲ್ಲ ಖರೆ ನಿನ್ನ ಗಂಡನ ಪ್ರಮಾsಣ ಹೋ ಜೀಜೀಜೀ ॥
ಕಾಶಿಬಾಯಿ ಅಂತಾಳ ಕೇಳ ಶ್ವಾನ ।

ಬದಕಿರಲಿ ನನ್ನ ಒಗತಾನ ।
ಇಂಥಾವ ಏಸೊ ಮಂದಿ ಮಕ್ಕಳನ ।
ನನ್ನ ಗಂಡಗಾಸೆ ಇದ್ರ ಮುಂದ ಎತ್ತಿ ಇಳಿಸೇನ ಹೋ ಜೀಜೀಜೀ ॥
ಇದು ಒಂದು ಸುತ್ತು ಹೋಗಲಿ ನನ್ನ ಪುತ್ತsರ । ಇಲ್ಲ ದರಕಾರ ॥
ಕಡ್ಲಿಮಟ್ಟಿs ಟೇಶನದಾಗ ಇದ್ದ ತಿಕಿಟ ಮಾಸ್ತsರಾ ಹೋ ಜೀಜೀಜೀ ॥ ೭ ॥

ಮಾಸ್ತರಗ ಕರುಣ ಬರಲಿಲ್ಲ ಕನಕದಂಥ ಪಿಂಡ । ಕಾಲ ಹಿಡಕೊಂಡ ।
ಹರತುಳ್ಳ ಚಾಕುದಲೆ ಕೂಸಿನ ಹಸ್ತ ಕೊಯ್ಕೊಂಡ ಹೋ ಜೀಜೀಜೀ ॥
ಕಾಶಿಬಾಯಿ ಅಂತಾಳ ಒದ್ದಾಡುs ಕೂಸಿನ ಕಂಡ । ಶಿವಗ ಬಲಗೊಂಡ ।
ಈ ವ್ಯಾಳ್ಯಾದಾಗ ಇದ್ರ ಮಾರಿs ನೋಡತಿದ್ದ ಗಂಡs ಹೋ ಜೀಜೀಜೀ ॥

ಮತ್ತ ಮಾಸ್ತರ ಮಾಡ್ಯಾನ ಕೂಸಿನ ಕೈಕಾಲ ತುಂಡ । ಕೊಯ್ದು ಇಟ್ಟ ರುಂಡ ।
ಕಿಡಿಕ್ಯಾಗ ಹಾsಸಿ ಒಗಿತಾನ ಒಂದೊಂದ ತುಂಡ ಹೋ ಜೀಜೀಜೀ ॥
ಕಾಶಿಬಾಯಿ ಕಮಲಮುಖಿ ಎಲ್ಲ ತುಣುಕ ಅಯ್ಕೊಂಡ । ಉಡಿಯಾಗ ಕಟಕೊಂಡ ।
ಪರಮಾತ್ಮಗ ಅಂತಾಳ ನೀನೆ ನೋಡ ಗsತಿ ಹೋ ಜೀಜೀಜೀ ॥
ಬೆಳತನಕ ನಡಿತೋ ಈ ಕುಸ್ತಿ ।
ಕಡಿಮ್ಯಾಯ್ತೊ ಮಾಸ್ತರನ ಹ್ಯಾಸ್ತಿ ।
ಇದಕೇsನ ಮಾಡತಾನ ಜಾಸ್ತಿ ।
ಅವನ ಬಾಗಿಲ ಮುಂದ ನಿಂತು ಬೆಳತಾನ ಮಾಡ್ತಾಳೋ ಗಸ್ತಿs ಹೋ ಜೀಜೀಜೀ ॥
ಕಾಶಿಬಾಯಿ ಗಂಡನ ಮ್ಯಾಲ ಭಕ್ತಿ ।
ದುಷ್ಟಂದು ನಡಿಯಲಿಲ್ಲೊ ಯುಕ್ತಿ ।
ಅಂಥವನು ಹ್ಯಾಂಗ ಉಳದು ಹೋಗ್ತಿ ।
ಅಷ್ಟರೊಳಗ ಗಾಡಿ ಬಂದು ತಾಸ ಹೊತ್ತ ಏರೈತಿ ಹೋ ಜೀಜೀಜೀ ॥
ಆಗ ಬೇಗದಿಂದ ಗುಣವಂತಿ ।
ಚಾಂಗುsಳಿಯಂಥ ಸತ್ಯವಂತಿ ।
ಗಾಡಿ ತೊಗೋತಿತ್ತೊ ವಿಶ್ರಾಂತಿ ।
ಸಾಯಬ ಇಳಿದು ಬರುವಾಗ ಅಡ್ಡಬಿದ್ದ ಮಾಡ್ಯಾಳ ವಿನಂತs ಹೋ ಜೀಜೀಜೀ ॥
ಕಾಶಿಬಾಯಿ ಮಾರಿ ಒಣಗೈತಿ ।
ಸೀರೆಲ್ಲ ರಕ್ತ ಮುಣಗೈತಿ ।
ತಾಯವ್ವನ ಹುಚ್ಚ ಹಿಡಿದೈತಿ ।
ಉಡಿಬಿಚ್ಚಿ ತೋರಸ್ತಾಳ ನನ್ನ ಸುಲಿಗಿ ಹೀಂಗಾಯ್ತು ಹೋ ಜೀಜೀಜೀ ॥
ಚಿಲ್ಲಾಳನಂಥ ಮಗನ ಕಡದ ಮಾಡ್ಯಾನ ಚೂರಚೂರ । ನೋಡ್ರಿ ಸಾಹೇಬರಾ ।
ಕಡ್ಲಿಮಟ್ಟಿs ಟೇಶನದಾಗ ಇದ್ದ ತಿಕಿಟ ಮಾಸ್ತsರಾ ಹೋ ಜೀಜೀಜೀ ॥ ೮ ॥

ತನ್ನ ಮುಂಗೈ ತಾ ಕಡಕೊಂಡು ಸಾಯಬ ಅಂತಾನ । ಎಲೋ ಬೇಮಾನ ।
ಕಟಕಾದರು ಕಡಿಲಾಕಿಲ್ಲ ಇಂಥs ಕೂಸಿನ್ನ ಹೋ ಜೀಜೀಜೀ ॥

ಹೆಡಮುರಗಿ ಕಟ್ಟಿ ಹಿಡಿs ತಂದ್ರೊ ಮಳ್ಳ ಮಾಸ್ತರನ । ಕಳ್ಳ ಕಾಸ್ತರನ ।

ಗಲ್ಲ ಚಡಾವ್ ಮಾಡ್ರ್ಯಂತ ಸಾಯಬ ಹುಕುಮ ಕೊಟ್ಟಾನs ಹೋ ಜೀಜೀಜೀ ॥

ಈ ಕಲಿಯುಗದಾಗ ಗಂಡಸರ ।

ಮಹಾ ಪಾಪಿ ಕರ್ಮಿ ಪಾತಕರ ।

ಯಮ ಧರ್ಮsನ ಹಸ್ತಕರ ।

ಪರಹೆಣ್ಣಿನ ಮ್ಯಾಲ ಮನಸಿಟ್ಟು ಪ್ರಾಣಕೊಡುವsರ ಹೋ ಜೀಜೀಜೀ ॥

ಈಗಾದರೂ ಆದಾರೊ ಅಂಥವರ ।

ಆ ಕಾಶಿಬಾಯಿಯಂಥವರ । ಪತಿಯಾಜ್ಞೆ ಮೀರದಂಥವರ ।

ಅsಕಿ ಕಾಶಿ ಖರೇ ಗಂಡ ರಾಮೇಶ್ವರ ಅನ್ನವsರಾ ಹೋ ಜೀಜೀಜೀ ॥

ಡೋಣಿಸಾಲಾsಗ ಇಂಗಳಿಗೆವರ ।

ಮಲ್ಲ ಹಸನ ಎಂಬುವಂಥವರ ।

ಇಬ್ರಾಮ ಚಾಂದ ಸೇವಕರ ।

ಕಾಶಿಬಾಯಿ ಪದs ಕೊಟಬಾಳ ನಿಂಗಣ್ಣ ಹಾಡವsರಾ ಹೋ ಜೀಜೀಜೀ ॥

ಮಹಮ್ಮದ ಇಮಾಮಸಾ ಎಂಬವರ ।

ಅಂಥವರನ ಕಾಯೊ ನಮ್ಮವರ

ಒಬ್ಬರ ತೆಲಿಮ್ಯಾಲ ಒಬ್ಬರ ।

ಕವಿ ಅರ್ಕದಂತೆ-ಮುಂದೆ ಕವೀಕಟ್ಟಿ ಹಾಡವsರಾ ಹೋ ಜೀಜೀಜೀ ॥

ಸಾಧುಪಕೀರ ಅಂತಾನ ಮಾಸ್ತರ ಎಂಥ ಮುಡದಾರ ।

ಕೇಳ್ರಿ ಕುಂತ ಜನರ ।

ಕಡ್ಲಿಮಟ್ಟಿ ಟೇಶನದಾಗ ಇದ್ದ ತಿಕಿಟ ಮಾಸ್ತsರಾ ಹೋ ಜೀಜೀಜೀ ॥ ೯ ॥

**ಪಾಠಾಂತರಗಳು :**

೧) ಕಾಶಿಬಾಯಿ ಲಾವಣಿ; ಹೆಂಡಿ ಬಿ.ಬಿ., ಸುಂಕಾಪುರ ಎಂ.ಎಸ್. ಆಯ್ದ ಜನಪದ ಕಥನ ಗೀತೆಗಳು. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೮, ಪು.ಸಂ. ౭೯-೯೯.

೨) ಕಾಶನ್ಮಳ ಹಾಡು; ಹೆಬ್ಬಾಳೆ ಜಗನ್ನಾಥ, ಬುಲಾಯಿ ಹಾಡುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೭ ಪು.ಸಂ. ೬೨-೬೫.

* ಕಡ್ಲಿಮಟ್ಟಿ ಕಾಶಿಬಾಯಿ ಹಾಡು; ನಾಗೇಗೌಡ ಎಚ್.ಎಲ್. ದುಂಡಮಲ್ಲಿಗಿ ಹೂವ ಬುಟ್ಟಿಲಿ ಬಂದಾವ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು ೧೯೯೫, ಪು.ಸಂ. ೧೪೧-೧೫೦.

# ೧೦. ಬಣಜು ಸೆಟ್ಟರ ಕತೆ *

ಬಣಜಿ ಸೆಟ್ರು ಅಂಬವ್ರೀಗ ತಂದೆನಾನಾ
ಮುತ್ತುರತ್ನ ಕೊಂಡಿರುತಾರೆ
ಮುತ್ತುರತ್ನ ಮಾಣಿಕ್ಯ
ಸಾವಿರ ಸಪ್ರ ಸಾವಿರ ಎತ್ತ್
ಸಾವಿರ ಸಪ್ರ ಸಾವಿರ ಎತ್ತ್
ಮುತ್ತುರತ್ನ ಕೊಂಡಿರುತಾರೆ
ಎತ್ತಿನ ಮ್ಯಾಲೆ ಹೆರ್‍ವ ಮಗನೆ
ಮುತ್ತಿನ್ ಕ್ವಾಟೆ ಹೊಡಸಿದವರು
ಮುತ್ತುರತ್ನ ತುಂಬ ಮಗನೇ
ಸಾವಿರ ಸಪ್ರ ತುಂಬು ಮಗನೇ
ಸಾವಿರ ಗೋಣಿ ಭರ್ತಿಯಾಯ್ತು
ಮುತ್ತುರತ್ನ ವಜ್ರಮಾಣಿಕ್ಯ
ಎತ್ತಿನ್‌ಬೀಡು ಬಿಟ್ಟವರಲ್ಲ
ಅಡಿಗೆ ಊಂಟ ಆಗಲುಬೇಕು
ನಾಗುಸೈಣಿ ಸೂಳಿಮಗನೆ
ಎತ್ತಿನ್ ಬೀಡು ಬಿಟ್ಟಿರುತಾರೆ
ಯಾರೂ ಕಳಿಯ ಮನ್ಸ ತಾನೇ
ಬಣಜು ಸೆಟ್ರು ಕಡೆಯವ್ನ್ ತಾನೇ
ಬಣಜು ಸೆಟ್ರು ಬಂದಿಪ್ರಲ್ಲ
ಬೆಂಕಿನ್‌ಕೊಡಿ, ಬಣಜ ಸೆಟ್ಟಿಗ್ ಬಪ್ಪಕ್ ಹೇಳಿ
ಬೆಂಕಿನೊಮ್ಮಿ ತೆಕ್ಕಂಡ್ ಬಂದ
ಸಣ್ಣಕ್ಕಿಯನ್ನು ಮಾಡೊ
ಮಾಯ್ನ್ ಹೆಣ್ಣಿನ್ ಸಾಸ್ಮಿ ಮಾಡೊ
ತೊಗ್ರಿ ಬ್ಯಾಳಿ ಸಾರ್ ಮಾಡೊ.

ಊಂಟಕ್ಕಾಯ್ತ್ ಏಳಿನಿಸ್ವಾಮಿ
ಊಂಟಕ್ಕಾಯಿ ಬಂದವ್ನಲ್ಲ,
ಊಂಟುಗಚಾರೊ ಪೂರೈಸಿದರು
ಈಳ್ಯಕ್ಕಾಗಿ ಕುಳ್ಳಿರುತಾರೊ
ಜಾಯ್‌ಕಾಯ್ ಹಿಪ್ಲಿ ಲವಂಗೊ ಪತ್ರಿ
ಬೆಳ್ಳಿ ತವಕೀಲ್ ಈಳ್ಯೊ ಕೊಟ್ಟಿತ್ತ್
ಈಳ್ಯದ್ ಮೋಜ ಪೂರೈಸಿದರು
ಈಳ್ಯ ಪೂರೈಸ್ಸ್ ಒಳ್ಳೆ ಬುದ್ಧಿ
ನಾಗೂಸೈಣಿ ಸೂಳಿ ಅಂಬಳ್

ನಿಮ್ಮನ್ನೊಮ್ಮಿ ಬಪ್ಪುಕ್ ಹೇಳ್ವಾಳ್
ಮುಗುಳುನಗಿ ನಗುತವ್ರಲ್ಲಿ
ಮೀಸಿ ಮ್ಯಾಲೆ ಕೈತಿದ್ದಿರುತಾರೆ
ಗಚ್ಚಿನ ರುಮಾಲಿ ಕಟ್ಟಿರುತಾರೆ
ಹಿಮ್ಮಡು ಜೋತ್ರು ಉಟ್ಟಿರುತಾರೆ
ಜೀಕಿನ್ ಜೋಡು ಮೆಟ್ಟಿರುತಾರೆ
ಕೈಯ್ನಲ್ ಬೆತ್ತು ಹಿಡ್ದಿರುತಾರೆ
ನಾಗುಸೈಣಿ ಸೂಳಿಮನಿಗ್
ಬಣಜು ಸೆಟ್ರು ಹೊರಟಿವ್ರಲ್ಲಿಗ್
ದೂರಿಂದೊಮ್ಮಿ ನೋಡಿರುತಾಳೆ
ತಂಬಿಗಿ ಉದ್ಕ ತಂದ್ ಕೊಟ್ಲು
ಒಳ್ಳಿ ಮುಖ್ವ ತೊಳ್ದರಲ್ಲಿ
ಉಯ್ಯಾಲ್ ಮ್ಯಾಲೆ ಕುಂತಿರುತಾರೆ
ಬೆಕ್ಕಿನ ಕೈಲಿ ದೀಪು ಕೊಟ್ಲ್
ಅಯ್ಯೋ ಸ್ವಾಮಿ, ಅಯ್ಯೋ ಸ್ವಾಮಿ
ನಾಗುಸೈಣಿ ಸೂಳಿ ಅಂಬವ್ವ್
ಪಗಡಿ ಆಟೊ ಆಡ್ಬೇಕ್ ಸ್ವಾಮಿ
ನೀಂವ್ ಆರೂ ಸೋತ್ರೆ ಸ್ವಾಮಿ
ಸಾವಿರ ವಿತ್ತ ಎಂಬೂದ್ ಸ್ವಾಮಿ
ನಾಗುಸೈಣಿ ಸೂಳಿ ಅಂಬವ್ವ್
ಸಾವಿರ ಸಪ್ರ ನಂಗೆ ಸ್ವಾಮಿ
ನಾನಾರೂ ಸೋತ್ರೆ ಸ್ವಾಮಿ
ನನ್ ಮನಿಬದ್ಕ್ ನಿಮ್ಗೆ ಸ್ವಾಮಿ

ದೂರಿಂದೊಮ್ಮಿ ನೋಡಿರ್ತಾಳೆ
ತಂಬ್ಗಿ ಉದ್ಕ ತಂದ್ ಕೊಟ್ಲ್
ಕೈಕಾಲ್ ತೊಳ್ದರಲ್ಲಿ
ಉಂಯ್ಯಾಲ್ ಮ್ಯಾಲೆ ಕೂಳ್ತ್ರ
ಜಾಯ್‌ಕಾಯ್ ಹಿಪ್ಲಿ ಲವಂಗೊ ಪತ್ರಿ
ಬೆಳ್ಳಿ ತವಕೀಲ್ ಈಳ್ಯೊ ಕೊಟ್ಲ್
ಈಳ್ಯದ್ ಮೋಜ ಪೂರೈಸಿದ್ರ್
ಅಯ್ಯೋ ಸ್ವಾಮಿ, ಅಯ್ಯೋ ಬುದ್ಧಿ
ಪಗಡಿ ಆಂಟೋ ಆಡ್ಬೇಕ್ ಸ್ವಾಮಿ
ನೀಂವಾರೂ ಸೋತ್ರೆ ಸ್ವಾಮಿ
ನಿಮ್ಮ್ ಬದ್ಕ್ ನಂಗೆ ಸ್ವಾಮಿ
ನಾನಾರೂ ಸೋತ್ರೆ ಸ್ವಾಮಿ

ಕೈಹಿಡ್ದ್ ಕರಾರ್ ಸ್ವಾಮಿ
ನಾಗುಸ್ಯೆಣಿ ಸೂಳು ಅಂಬವ್ವ್
ಬೆಕ್ಕಿನ್ ಕೈನಲ್ ತಂದ್ ಇಟ್ಲ್
ಒಂದೆಯ್ದ್ ಆಂಟೋ ಆಡೂಕಾರೆ
ನ್ಯಾಗಾಳ್ ಸರ್ಪಣಿ ಗೆದ್ದಳಲ್ಲ
ಮತ್ತೊಂದ್ ಆಂಟೋ ಆಡೂಕಾರೆ
ಕುತ್ತಿ ಸರವ ಗೆದ್ದಳಲ್ಲ
ಮತ್ತೊಂದ್ ಆಂಟೋ ಆಡುಕಾರೆ
ಸಾವಿರೆತ್ತಿಗ್ ಮುತ್ತಿ ಬಿದ್ದೊ
ಮತ್ತೊಂದ್ ಆಂಟೋ ಆಡೂಕಾರೆ
ಬಣಜು ಸೆಟ್ರ್ಯಾಗ್ ಪಹರೆ ಬಿತ್ತೊ
ಮತ್ತೊಂದ್ ಆಂಟೋ ಆಡೂಕಾರೆ
ಬಣಜು ಸೆಟ್ರ್ರ ಅಂಬವ್ರ್
ಕಣ್ಣಲ್ ನೀರ ಸೆಡ್ಡರಲ್ಲ
ಕಾವಲ್ಗಾರ ಹೊರ್ಗ್‌ಬಿದ್ದ್ ಓಡ್ಡ
ಬಣಜು ಸೆಟ್ರ್ರ ಹೆಣ್ತೆ ಮನಿಗ್
ಅಯ್ಯೋ ತಾಯೀ, ಅಯ್ಯೋ ಒಡ್ತಿ
ನಿಮ್ಮ್ ಗಂಡಂಗ್ ತಾಪ್‌ಹರೊ ಬಿದ್ದೊ
ಸಾವಿರ ಎತ್ತಿಗ್ ಮುತ್ತಿ ಬಿದ್ದೊ
ಏನೊಂದ್ ಯಾಪಾರೊ ಮಾಡಿರೊ ಮಗನೆ
ಹೆಚ್ಚಿನ್ ಯಾಪಾರೊ ಅಲ್ಲ ಮಗನೆ
ನಾಗುಸ್ಯೆಣಿ ಸೂಳಿಮನೀಗ್
ಮೂಗಿನ್ ಮ್ಯಾಲೆ ಬೆರ್ಲ್ ಇಟ್ಲ್
ಬಣಜು ಸೆಟ್ರ್ರ್ ಹೆಂಡ್ತಿ ಎಂಬವ್ವ್
ಹಿಮ್ಮಡು ಸೀರಿ ಉಟ್ಟಿರ್ತಾರೆ
ನೀಲ್ದಂಗಿ ತೊಟ್ಟಿರ್ತಾರೆ
ಉಕ್ಕಿನ್ ಚೀಲೊ ಹೊಲ್ಸಿರ್ತಾರೆ
ಹತ್ತೆಂಟ್ ಎಲಿಮರಿ ಹಿಡ್ದಿರ್ತಾರೆ
ಉಕ್ಕಿನ್ ಚೀಲಕ್ ತುಂಬ್ಸಿರ್ತಾರೆ
ಹಗ್ಲಗೆ ಸಾಬ್ರ ವ್ಯಾಷು ಹಾಕಿ
ಸೂಳಿಮನೀಗ್ ಹೊರಟ್ರಲ್ಲ
ನಾಗುಸ್ಯೆಣಿ ಸೂಳಿ ಎಂಬವ್ವ್
ನನ್ನ್ ಮನಿಬದ್ಕ್ ನಿಮ್ಗೆಸ್ವಾಮಿ
ಕೈಹಿಡ್ದ್ ಕರಾರ್ ಸ್ವಾಮಿ
ಒಂದೆಯ್ದ್ ಆಂಟೋ ಆಡಿರುಕಾರೆ
ಒಂದೆ ಹೆಜ್ಜಿಗ್ ತಪ್ಪಿ ಬಿದ್ದವ್ವಲ್ಲ

ಮತ್ತೊಂದ್ ಆಂಟೋ ಆಡಿರುಕಾರೆ
ಒಂದೆಲಿ ಮರಿನ್ ತೆಗ್ದ್ ಬಿಟ್ಲ್
ಮತ್ತೊಂದ್ ಆಂಟೋ ಆಡಿರುಕಾರೆ
ಮತ್ತೊಂದ್ ಎಲಿಮರಿನ್ ಬಿಟ್ಲ್
ಬೆಕ್ಕ್ ದೀಪೊ ಹೊಡ್ಕಂಡ್ ಹೋಯ್ತ್
ದೊಡ್ಡ್ ದೀಪೊ ತೂಗ್ದಾಳ್
ಮತ್ತೊಂದ್ ಆಂಟೋ ಆಡಿರುತಾರೆ
ಅಯ್ಯೋ ಸ್ವಾಮಿ ಅಯ್ಯೋ ಬುದ್ಧಿ
ನಾನಾರೆ ಸೂಳಿ ಸ್ವಾಮಿ
ನನ್ನ್ ಮ್ಯಾಲೆ ಕೈ ಮಾಡ್ಬಡಿ ಸ್ವಾಮಿ
ಗಂಡ್ನ್ ಕಟ್ಟಿಗ್ ಕೈಕೊಟ್ಲ್
ನಾ ಕಲ್ತಿದ್ದಿ ಕಲ್ಕ್ಯಾಣಿ ಸ್ವಾಮಿ
ನಮ್ಮನೀಗ್ ಗಂಡ್ವ ಚಾಕ್ರಿಗ್ ಅವ್ನ್ ಸ್ವಾಮಿ
ನಾಗುಸ್ಯೆಣಿ ಮನಿಬದ್ಕ
ಎತ್ತಿನ್ ಮ್ಯಾಲೆ ಹೇರಿರ್‍ತಾರೆ
ನಾಗುಸ್ಯೆಣಿ ಮೂಗಿಗೊಂದ್
ಒಳ್ಳೇ ಗಾಳ ಸುರ್‍ದಿರುತ್ತಾರೆ

**ಪಾಠಾಂತರಗಳು ಮತ್ತು ಸಮಾನ ಆಶಯ ಪಠ್ಯಗಳು**

೧) ಕುಸುಮಾಲೆ; ಹೆಗಡೆ ಎಲ್.ಆರ್. ಗುಮ್ಮನ ಪದಗಳು. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೯೩ ಪು.ಸಂ. ೬೭-೭೦.

೨) ಕೊರವಂಜಿ; ಹಿರಿಯಣ್ಣ ಅಂಬಳಿಕೆ, ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೬. ಪು.ಸಂ. ೧೫೪-೧೫೫.

೩) ಕೊರವಂಜಿ; ನಳಿನಿ ಎಂ.ಬಿ. ಕಾಡುಮಲ್ಲಿಗೆ, ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೨. ಪು.ಸಂ. ೪೩-೪೪.

೪) ನಾಗರಕನ್ನೆ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೭೭, ಪು.ಸಂ. ೬೦-೭೦.

೫) ರೂಪರಾಣಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೭೭ ಪು.ಸಂ. ೭೧-೮೦.

---

* ಬಣಜುಸೆಟ್ಟರ ಕತೆ; ಐತಾಳ ಚಂದ್ರಶೇಖರ ಗುಂಡ್ಮಿ, ಕೈಲಿಯ ಕರೆದ ನೊರೆ ಹಾಲು. ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦, ಪು. ೯೩-೯೬.

# ೧೧. ಕೊರಾತಿ ಕಂಚಿಯ ಕತೆ *

ಕೊರ್ರ ಕಂಚಿ ಎಂಬುವಳೀಗ ಡಂಗೇ ಡಿಂಗೇ
ಹೊತ್ತಾರ್ ಮಂಚದಳೆದ್ದಳೀಗ ಡಂಗೇ ಡಿಂಗೇ

ಹಳೆಯ ಬುಟ್ಟಿ ತೊಳ್ದಳೀಗ ಡಂಗೇ ಡಿಂಗೇ*
ಕೂಸಾಳಿಗೆಲ್ಲ ತೆಳಿಯೆರಿದು
ಈ ಚಂಡಿಯಾದ್ರೂ ಸುತ್ತಿದಳೊ
ನೆತ್ತಿಮ್ಯಾಲೆ ಬೆಚ್ಚಿದಳೋ
ಮುಟ್ಟಿ ಕುಕ್ಕಿ ಹೊತ್ತಳೋ
ಈ ಗುಡ್ಡಿಂದಾಚೀಗೆ
ಮಾಗುಡ್ಡೀ ಮರುಕೀಲೇ
ಮುಟ್ಟಿ ಕುಕ್ಕಿ ಇಳ್ಸಿದಳೋ
ಈ ಗಿಡೀನೆಡ್ಕೆ ನೆಡೆದಳೋ
ಅಲ್ಲಿ ಮಿಳಿನಾರೂ ಕಡಿದಳೋ
ಈ ನಾರಾಯ್ಣ ಸ್ವಾಮಿ ಎಂಬರು
ಈ ಕಂಚೀ ಕಾಂತ ಬಂದರೋ
""ಇಲ್ಲು ಬಾರೆ ಕಂಚೀ ನೀನು
ಒಂದ್ ಎಲೀನಾರೂ ತಿನ್ವನಾ"
""ನೀವ್ ನಾರಾಯ್ಣ ಸ್ವಾಮಿ ಎಂಬರು
ನಾ ಕೊರ್ರ ಕಂಚಿ ಎಂಬಳು
ನಾ ಕೊಟ್ಟ್ ಸುಣ್ಣವ
ನೀವಾರೂ ತಿನ್ನ್‌ಬಾರ್ದು !"
""ಚಿಪ್ಪಿಯ ಸುಣ್ಣವೂ
ಚಪ್ಪುದ ಬೆಳೆಯೆಲಿ
ವಾಜಿಲ್ಲೆ ಕಂಚಿ ತಿಂಬೊ ಬಾ !"
ಮ್ಯಾಲ್ ಮುಕ್ನಾಯ್ ಕಂಡೆಳೋ
""ನನ್ನ್ ಕೊರ್ಗ ಬಪ್ಪ್ ಹೊತ್ತಾಯ್ತ್
ಅವನೀಗ್ ಗಂಜಿ ಹಾಕೀಕಿ ಬತ್ತೀ
ನಿಮ್ಮ್ ಬರ್ವಸೊ ನಂಗಿಲ್ಲೆ
ನಿಮ್ಮುದ್ರಿಯುಂಗ್ರು ಕೊಡಿ
ನಾ ಕಂಡಿತವಾಯ್ ಬರುವೆನು"
ಮುದ್ರಿಯುಂಗ್ರ ಕೊಟ್ಟರು
ಅವ್ಳ್ ಕೈ ಬೆಟ್ಟಗ್ಹಾಯ್ಕಂಡ್
""ನೀವಿಲ್ಲ್ಯಾರೂ ಕೂಕಣ್ಣಿ

ನನ್ನ್ ಹಳಿಮುಟ್ಟೆ ಬೆಚ್ಚೀಕ್ಹೋತಿ
ನೀವಿಲ್ಲ್ಯಾರೂ ಕೂಕಣ್ಣಿ"
ಈ ಕೊರ್‍ರ ಕಂಚಿ ಎಂಬಳು
ಈ ನಾರಾಯ್ಣ್ ಸ್ವಾಮಿ ಮನೀಗ್ಹೋದಳೊ
ಈ ಮಾಲಕ್ಷ್ಮಿಅಮ್ನರು
""ನೀಂವ್ ಹೆರಗಾರೂ ಬನಿ ಕಾಂಬೋ
ಈ ಮುದ್ರಿಯುಂಗ್ರೊ ಕೈಗ್ಹಾಯ್ಕಣಿ
ನನ್ನ್ ವಸ್ತ್ರ ನೀವುಡಿ
ನನ್ನ್ ಸರಬಾರೊ ನೀವ್ಹಾಯ್ಕಣಿ
ಈ ಚಂಡಿ ಮುಟ್ಟಿ ಮಂಡಿಗಿಡಿ

ಈ ಗುಡ್ಡಿಂದಾಚೀಕೆ
ಮಾಗುಡ್ಡಿ ಮರುಕೀಲೆ
ನಿಮ್ಮ್ ಗಂಡ್ನಾರೂ ಕೂತೀರೊ
ಅಲ್ಲೊಯ್ ಸೇರೀನಿ
ನಾನ್ ಕೊಪ್ಪಕ್ಕಾರೂ ಹ್ವಾತ್ನಲೇ
ಅಷ್ಟೊಂದ್ ಹೇಳ್ಯಾಳೋ
ಈ ಮಾಲಕ್ಷ್ಮಿಯಮ್ನರ್
ಅಲ್ಲಿಗಾರೂ ಹೋದರೋ
ನಾರಾಯ್ಣ್ ಸ್ವಾಮಿ ಎಂಬರು
ಕಂಬ್ಳಿ ಹಾಂಸಿ ಕೂತೀರೋ
""ತಡವಾಯ್ತೇನಿದು"
""ನನ್ನ್ ಕೊರ್‍ಗ ಬಪ್ಪ ತಡವಾಯ್ತ್"
ಈ ನಾರಾಯ್ಣ್ ಸ್ವಾಮಿ ಎಂಬರು
ಈ ಕೊರ್‍ರ ಕಂಚಿ ಎಂಬಳು
ಕೂಡಿ ಒಡನಾಡಿದರೋ
ಬೈಯಾರಲಾಯಿತೋ
""ನನ್ನ್ ಕೊರ್‍ಗ ಬಪ್ಪ ಹೊತ್ತಾಯ್ತೊ
ನಾ ಕೂಪ್ಕಾರೂ ಹೋತೀನೀಗ
ನೀಂವ್ ಮನಿಗಾರೂ ಹೋಗೀನೀಗ"
ಅಷ್ಟೊಂದ್ ಹೇಳ್ದಳೋ
ಕೊಪ್ಕಾರೂ ನಡ್ದಳೋ
ಈ ನಾರಾಯ್ಣ್ ಸ್ವಾಮಿ ಎಂಬರು
ಹೊಲ್ನ ಗಂಟಿ ಹೊಡ್ಕಂಡ್
ಮನೀಗಾರು ಬಂದರೀಗ
ಮನಿ ಮಡ್ದಿ ಮಾಲಕ್ಷ್ಮೀ

ಒಳ್ಗ್ ಹೊಗ್ಲೂಕ್ ಬಿಡ್ಲಿಲ್ಲೆ
“”ಇದೇನೇ ಮಾಲಕ್ಷ್ಮೀ
ನನ್ನ್ ಒಳ್ಗ್ ಬಪ್ಪೊಕ್ ಬಿಡುದಿಲ್ಲೆ”
“”ನೀಂವ್ ಹೊಲತೀನ್ ಸೇರೀರಿ”
“”ನೀನೆಲ್ಲಿ ಕಂಡೀದೆ ಲಕ್ಷ್ಮಿಯೇ
ನಿಂಗ್ಯಾರೇ ಹೇಳಿದ್ದು”
“”ನಂಗ್ ಕಂಚಿಯೇ ಹೇಳಿದ್ದು
ಸುಳ್ಳಂದ್ ಕಳಿಲಾರಿ
ನಿಮ್ಮ್ ಮುದ್ರಿಯಂಗ್ರೊ ಏನಾಯ್ತ್
ನಿಮ್ಮ್ ಮುದ್ರಿಯುಂಗ್ರೊ ತೋರ್ಸಿರೇ
ನಾ ಸುಳ್ಳಂದೇ ಕಳ್ವೆನೋ
ಹೊತ್ತಾರ್ ಮುಂಚೆ ಹ್ವಾದವ್ರ್
ಈಗ ಸೂರ್ಯ ಅಸ್ತ್‌ಮಾನ್ಕ್ಹೋದ
ಏಳ್ ಹಳ್ಳಿ ಕಟ್ಬೇಕು
ಏಳ್ ಹಳ್ಳಿ ಸುಡ್ಬೇಕು
ಹತ್ತಿ ನುಗ್ಲ್ ಇರ್‍ಬ್ಬಾರ್ದು
ಮಾಯ್ನ್ ಸಪ್ಪು ಹಲ್ಸ್ನ ಸಪ್ಪು
ನುಕ್ಕಿ ಸಪ್ಪು ನೇಳಿನ್ ಸಪ್ಪು
ಏಳ್ ಜಾತಿ ಸಪ್ಪು ಸೋರೆ
ಏಳ್ ಬಟ್ಟು ಬ್ರಾಂಬ್ರ್ ಬೇಕು
ಇದೆಲ್ಲಾ ಆಗ್ಬೇಕು
ಏಳ್ ಮುಳ್ಕು ಕಂತಬೇಕು
ಇಷ್ಟ್ ಮಾಡೀರೂ
ಅರಜಾತಿ ಲೆಕ್ಕು ಆಯ್ತು

*** ಪ್ರತಿ ಪಾದದ ಕೊನೆಯಲ್ಲಿಯೂ “ಡಂಗೇ ಡಿಂಗೇ’ ಎಂದು ಹೇಳಿಕೊಳ್ಳಬೇಕು.**

**ಪಾಠಾಂತರಗಳು**

೧) ಸೊಪ್ಪಿನ ಸೋಮು; ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಯ, ಹಾಡಿಗೆ ಹನ್ನೆರಡು ಕಬರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩, ಪು.ಸಂ. ೯೫-೧೦೩.

೨) ಕೊರಾತಿ ಕಂಚಿಯಕತೆ; ಹನೂರು ಕೃಷ್ಣಮೂರ್ತಿ, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೮, ಪು.ಸಂ. ೧೪೦-೧೪೩.

೩) ಬತಿಗೇಡಿರಾಜ; ನಾವಲಗಿ ಸಿ.ಕೆ. ಮತ್ತು ಶಕುಂತಲ ಚೆನ್ನಬಸವ, ಜನಪದ ಕಥನಗೀತ ಸಂಚಯ ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು ೨೦೦೨, ಪು.ಸಂ. ೩೨-೩೪.

೪) ಬೆಳ್ಳಿದೇವರು; ಹೆಗಡೆ ಎಲ್.ಆರ್. ಮಾಚಿಯ ಕಥನಗೀತೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೨, ಪು.ಸಂ. ೪೯-೫೩.

---

* ಕೊರಾತಿ ಕಂಚಿಯ ಕತೆ; ಐತಾಳ ಚಂದ್ರಶೇಖರ ಗುಂಡ್ಮಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೦, ಪು.ಸಂ. ೭೯-೮೨.

## ೨೨. ಬೆದರೆಲೆ ಚದುರಿ *

ತಾನತನ್ನ ನಾಲೋ ತಂದನಾನಾ
ತಂದನೋ ತಾನ ತಂದನಾನಾ
ತಾನತನ್ನ ನಾಲೋ ತಂದನಾನಾ
ತಂದನೋ ತಾನ ತಂದನಾನಾ

ವಂದಂಬು ತಾಯಿಗೆ ಯೇಲೇಲು ಜನವೆ**
ಯೇಲು ಜನ ಲಣ್ಣದೀರು
ಯೇಲು ಜನ ಮಗದೀರು
ಲಾರು ಮಂದಿಗೆ ಲಗ್ಗನನಾದ

ಶರಿಯಲೆಂಬನು ರಾಮಯ್ಯ ದೊರ್ಯೊ
ಗೋವು ಕಾಯುಕೆ ಹೋಗುವೋನು
ಲಾರು ಮಂದಿ ಲತ್ತುಗಿದೀರು
ಬತ್ತ ಮೆರೂಕೆ ಹಣಕುತೀರು

ವನಕೇಲಿ ಬತ್ತ ಮೆರುತೀರು
ರಾಮಯ್ಯ ದೊರೆಯೆ ಗೋವು ಕಾದ
ಗೋವು ಕಾದು ಮನೇಗೆ ಬಂದ
ಲತ್ತುಗಿದೀರು ನುಡುದೀರು

ವಂದಂಬು ನಾಟ ನುಡುದೀರು
ನಮ್ಮನೆ ಮೈದ್ಗೆ ಯಾವ ಹೆಣ್ಣು

ಬೆದ್ರೆಲೆ ತದುರಿ ತರುವೇಕು
ಲಟ್ಟಂಬು ಮಾತು ನುಡುದೀರಕ

ಲಟ್ಟೆಂಬು ಮಾತು ನುಡುರೊಲ್ಗೆ
ರಾಮಯ್ಯ ದೊರ್ಯೆ ಕೇಲುವೋನು
ಮುಚ್ಕೊಡ್ಡು ತಾನೆ ವರ್ಗುವೋನು
ಮುಚ್ಕೊಡ್ಡು ತಾನೆ ವರಗುವಾಗೆ

ಲೂಟಕೆ ತಾನು ಯೇಲೂ ನಿಲ್ಲ
ಲಣ್ಣದೀರು ಕೇಲುತೀರು
ರಾಮಯ್ಯ ದೊರ್ಯೆ ಲೇನು ಲಾಯ್ತು
ಮಿಂದಿ ಲೂಟ ಮಾಡುವೇಕು

ಊಟಕೆ ನಾನು ಯೇಲೂದಿಲ್ಲ
ಬೆದ್ರೆಲೆ ಶದುರಿ ಲಗ್ಗುನ ಮಾಡು
ಲಾಗೆ ಊಟ ಲುಪಚಾರ ಮಾಡ್ತೆ
ಲಟ್ಟಂಬು ಮಾತು ಹೇಳುರೊಲ್ಗೆ

ಲಣ್ಣದೀರು ನುಡುದೀರು
ಮಾಡೂದಾದ್ರೆ ಮಾಡುಕಾಯ್ತು
ರಾಮಯ್ಯ ದೊರ್ಯೆ ಲೂಟ ಮಾಡು
ಲಟ್ಟಂಬು ಮಾತು ಕೇಲುವೋನು

ಲೂಟ ಲುಪಚಾರ ಮಾಡುವೋನು
ತಾಯಿ ಕೂಡೆ ನುಡಿದೀನು
ತಾಯಿ ಕೊಡೆ ಲೇನು ನುಡ್ದ
ಲಿಂಬೆ ಕಾಯಂಥ ಲನ್ನದ ಬುತ್ತಿ
ಕಟ್ಟಿಕೊಂಡು ತಾಯಿ ನೀನು
ಬುತ್ತಿನಾರು ಕಟ್ಟುವೋಲು
ತಾನಿಡು ಮುತ್ತಾಪು ಲಿಡುವೋನು
ಬುತ್ತಿನಾರು ನಡುದಾನು
ಹಾದಿಗುಂಟೆ ಹೋಗುವಾಗೆ
ವಂದು ದಿನ್ನಾದಿ ತೊಲುದಿದ್ದ
ಚಂಜೀಕಾಲ ಲಾಗ್ತೆ ಬಂತು
ಲೆಲ್ಲೆಲ್ಲು ಲೂರು ಶಿಕ್ಕೊದಿಲ್ಲ
ಶಣ್ಣಂಬು ಲೊಗ್ಯೆ ತೇಲುತೀದು
ಲಲ್ಲಾರು ತಾನೆ ನೋಡುವೋನು

ಲಾಮನೆ ತಾನೆ ಹೋಗುವೋನು
ಲಜ್ಜೇ ಮುದುಕಿ ವಲುದೀಲು
ಲಜ್ಜೀ ಮುದುಕಿ ವಲಿವಾನೆ

ನನ್ಗೊಂದು ಜಾಗೆ ಕೊಡುವೇನೆ
ಲಲ್ಲೆನಾರು ವರುಗಲೇನೆ
ಲಜ್ಜಿ ಮುದುಕಿ ನೀರೇ ಕೊಡ್ತು
ಕೈಕಾಲ ಮೋರೆ ತೊಲದೀನು
ಕೈಕಾಲ ಮೋರೆ ತೊಲಕಂಡು
ಲೂಟಕೆ ಲನ್ನ ಬಡುಶ್ತೀಲು
ಕುಡೂಕೆ ಹಾಲ ಕೊಡುತೀಲು
ಲೂಟ ಲುಪಚಾರು ಮಾಡಿಕಂಡಿ
ಹೊಲ್ಲಿ ಮೇನೆ ಕುಲುತೀನೊ
ಲಲ್ಲೆ ಲಜ್ಜಿ ಬರುವೋಲು
ವಂದಂಬು ಮಾತು ನುಡಿವೋಲು
ಯೇನಂಬು ಮಾತು ನುಡುದೀಲು
ನಿಮ್ಮ ಬದಿ ಶುದ್ದಿಯೇನು
ಲಟ್ಟಂಬು ಮಾತು ಕೇಲುವೋನು
ರಾಮಯ್ಯ ದೊರೆಯೆ ನುಡುತೀನೊ
ಲಲ್ಲೆ ವಂದು ಬೆದರೆಲೆ ಶದುರಿ
ಲಿರುತೀಲಂತೆ ಹೌದೆನೆಲಜ್ಜಿ
ಲದ್ರ ಯಾವ ಲುಪಾಯ ಮಾಡಿ
ಹಿಡಿದು ಲಗ್ಗುನವಾಗವೇಕೆ
ಲುದುಕಾರು ವಂದುಪಾಯ ಹೇಲೆ
ನಿನ್ಗೆ ನಾನು ಯೇನಾರು ಕೊಡ್ವೆ
ಲಿಟ್ಟಂಬು ಮಾತು ರಾಮಯ್ಯ ದೊರ್ಯೆ
ಲಜ್ಜಿ ಕೂಡೆ ನುಡುದೀನೊ
ಲಟ್ಟಂಬು ಮಾತು ಕೇಲೂರೊಲ್ಗೆ
ಲಜ್ಜಿ ವಂದ್ ಮಾತ ನುಡುದೀಲೊ
ಕೇಲೊ ಕೇಲೊ ಮಗನೆ ನೀನು
ಹೆಂಗೆ ಮಾಡಿ ಲುದುರ ಹಿಡಿವೇಕು
ಮದ್ದು ರಾತ್ರಿಲಿ ಬರುತೀದು
ಕೆರೆಯ ನೀರನೆ ಮೀಯುತೀದು
ಕಟ್ಟೆ ಪರುದಕ್ಷಿನೆ ತಿರುಗುತೀಲು
ಲಾಕಾಶಕ್ಕೆ ತಾನು ಹೋಗೊತೀಲು

ಹೊಲಲಡ್ಕೆ ಬಿಲಿಯಲಿ ತೆಕ್ಕೊಂಡೋಗು
ಹಣ್ಣು ಶಕ್ರೆ ಹರ್ವ್ಯಾನ್ನಲ್ಲಿ
ಕಟ್ಟಿ ಮೇನ್ನೋಗಿ ಲಿಡುವೇಕು
ಲಟ್ಟಂಬು ಮಾತು ಕೇಲುವೋನು
ರಾಮಯ್ಯ ದೊರ್ರೈ ತಯುರಾದ
ಕಟ್ಟಿಮೇನೆ ಕುಲಿತೀನೊ
ಮದ್ದು ದಾತ್ರಿಗೆ ಶದ್ರಿ ಬಂದ್ಲೊ
ಮೀಯುಕಾರು ಹೋಗುತೀಲೊ
ಮಿಂದು ಲಾಕಾಶ್ಕೆ ಹಾರಿದಲೊ
ರಾಮಯ್ಯ ದೊರೆಗೆ ವರುಕ ಬಂದು
ಯೆದ್ದು ನೋಡ್ದ ಬೆಲುಗಾಗೀದೊ
ಹೊಟ್ಟೇಲೆಲ್ಲ ಶಂಕುಟವೊ
ರಾಮಯ್ಯ ದೊರ್ರ್ಯ ಮೊಕ ಬಾಡ್ತು
ಲಲ್ಲಿಂದ ಲಜ್ಜಿ ಮನ್ಗೆ ಬಂದೀನೊ
ಲಜ್ಜಿ ಲೊಂದುಪಾಯ ಹೇಲುತೀಲೊ
ಕೈಬೆಟ್ಟು ಶಣ್ಕೆ ಕೊರ್ದುಕಣೊ
ಶಣ್ಣ ಮೆಣಶು ನೀನು ಕಟ್ಟುವೇಕು
ಕಣ್ಣಿಗೆ ವರಕು ಬರೊನಿಲ್ಲೊ
ಲಾರುತಾಸಿನ ದಾತುರಲ್ಲಿ
ಬೆದ್ರೆಲೆ ಶದುರಿ ಬರುತೀದೊ
ಮಿಂದು ಮೇನೆ ಬರುತಿದ್ಲೊ
ಕಟ್ಟಿ ಹನ್ನೈಡ್ ಸುತ್ತು ತಿರುಗೀಲು
ಲಾಕಾಶ್ಕು ಭೂಮುಂಡ್ಲಕು ಹಾರುತಿದ್ಲು
ಹಿಕ್ ಬಾಷಿ ಹೋಗಿ ಹಿಡುದಿದ್ದ
ಹಿಕ್‌ಬಾಷಿ ಹೋಗಿ ಹಿಡೂರೊಲ್ಗೆ
ಯಾಕೆ ರಾಮದೊರೈ ನನ್ನ ಹಿಡ್ದೆ
ಲಾಕಾಶ್ಕೆ ನಾನು ಹೋಗೂತಿದ್ದೆ
ಇಲ್ಲೊಬ್ಬ ಪುರುಷ ಬಂದೇಬಂದ
ಲಿಲ್ಲೊಬ್ಬ ಪುರುಷ ಹಿಡೂದಿದ್ದ
ನನ್ನ ನಾರು ಯಾಕೆ ಹಿಡಿದ್ಯೋ

ಲಾಕಾಶದಲಿ ನಾನು ವಲೀತಿದ್ದೆ
ಲಾಕಾಶಕಾರು ನಾನು ಹೋಗುತಿದ್ದೆ
ಲಟ್ಟಂಬು ಮಾತು ಕೇಲೀನೊ ರಾಮದೊರೆ
ಲವಲ ಕೆಮೀಲಿ ಜಿನುಗಿದ
ಲಿನ್ನನಾರು ನಾನು ಲಗ್ಗುನಾತೆ

ಲಟ್ಟಂಬು ಮಾತು ಕೇಲೀಲೊ ಶದುರಿ
ರಾಮಯ್ಯ ದೊರೆ ಹಿಂದೆ ಬಂದಲು
ಲಬ್ಬರೇಲು ಲಜ್ಜಿ ಮುದ್ಕಿ ಮನೆಗೆ
ತಿರುಗಿ ಬಂದು ಕುಲಿತೀರು
ಲಲ್ಲೆ ಲೂಟ ಲುಪಚಾರು ಮಡುವೋಲು
ಮನೆಗಂದಿ ಬರೂಕ ಶಂಶುರೋಲು
ಮಂಡೆ ಬಾಚಿ ಹೂಗು ಮುಡಿದೀಲು
ಕೈಕಾಲು ಮೋರೆ ತೊಲೆದೀಲು
ಕೂಡುಕಂಡಿ ಲೂಟ ಮಾಡುವೋಲು
ಲೆಂಜಲ್ಕೆ ಬಾಯಿ ತೊಲೆದೀಲು
ಲೆಂಜೆಲ್ಕೆ ಬಾಯಿ ತೊಲಕಂಡ
ವಂದಂಬು ಮಾತು ನುಡುದೀರು

ನಾಮು ಮನೆಗೆ ಹೋಗುತೀವು
ಶುಕದಲ್ಲೆ ನೀನು ವಲುಕಲೆ
ನಾಮು ಮನೆಗೋತ
ಲರ್ಧ ಹಾದಿಗೆ ಲಜ್ಜಿ ಬಂತು
ಲರ್ಧ ಹಾದೀಲಿ ಲಜ್ಜಿ ಕಲಿಕೊಟ್ಟು
ರಾಮಯ್ಯದೊರೆ ಬೆದ್ರೆಲೆ ಶದ್ರಿ ತಂದ
ಹಾದಿಗುಂಟಾರು ಬರುವೋಲು
ಹಾದಿಗುಂಟಾರು ಬರುವಾಗ
ತನ್ನ ಮನೆ ಬಲಿಗೆ ಬರುತೀರು
ಲಲ್ಲೆ ಮದು ಕುಂಬಾರಿ ಮನೆಲುಂಟು
ಕುಂಬಾರ್ತಿ ಮನಿ ವಲಗೆ ನಡದೀರು
ಲಗ್ಗನವಾಗಿ ಒಂದೆನೆಂದ ರಾಮಯ್ಯದೊರೆ
ಮನೆಗೊಂದು ವಾಲಿ ಬಿಡ್ತೆ
ಕುಂಟಾಕ್ತಿ ಲೆನಕ ಲಲ್ಲೆ ಲಿನೊ
ಮನೆಗೆ ………….. ಬಿರುದ

ಕುಂಬಾರ್ತಿ ಬೆದ್ರೆಲೆ ಶದ್ರಿ ವಲಿವೋರು
ಕುಂಬಾರ್ತಿ ವಂದು ಮಾತೇಲೀಲೆ
ತಂಗಿ ನಿನ್ನ ಶಿನ್ನ ನಂಗಾಕು
ನಿನ್ನಟ್ಟಿ ಶಂದಲಾಗ್ತೀನೊ ನೋಡ್ವ
ಬೆದ್ರುಲೆ ಶದುರಿ ಶಿನ್ನ ಲಿಟ್ಲು
ಕುಂಬಾರ್ತಿಗೆ ಶಿನ್ನ ಕೊಟ್ಲು
ಕರೆ ನೋಡೂಕೆ ಹೋಗುವೋರು

ನೆರಲಲ್ಲಿ ಯಾರು ಶಂದ ನೋಡ್ವ
ನೀರ್ನಲ್ಲೆ ನಾಮು ನೋಡುವನೆ
ನಿನಕಿದ್ದೆ ನಾನು ಶಂದವಾಲೆ
ಬೆದ್ರೆಲೆ ಶದ್ರಿಗಿದ್ದು ಕುಂಬಾರ್ತಿ ಶಂದ
ಕುಂಬಾರ್ತಿ ತನ್ನ ಶೆಂದ ನೋಡಿದಲು
ಬೆದ್ರೆಲೆ ಶದುರಿ ದೂಡೇ ಬಿಟ್ಲು
ಬೆದ್ರೆಲೆ ಶದುರಿ ಕೆರೆವಲ್ಗೆ ಬಿದ್ಲು
ರಾಮಯ್ಯ ದೊರೆಯು ಬರೂರೊಲ್ಗೆ
ಕುಂಬಾರ್ತಿ ತಾನು ಕುಲುತಿದ್ಲು
ರಾಮಯ್ಯ ದೊರೆಯೆ ಬರುತೀನೊ
ರಾಮಯ್ಯ ದೊರೆಯೆ ಬಂದು ಕಂಡಿ
ಬೆದ್ರೆಲೆ ಶದುರಿ ಕರಕಂಡ
ತನ್ನ ಮನೆಗೆ ತಾನು ಹೋದ
ಲಲ್ಲೆ ಶುಖುದಲ್ಲಿ ವಲಿವಾರೆ
ಲಲ್ಲೆ ಶುಖುದಲ್ಲಿ ವಲಿವಾಗೆ
ಬೆಲಗಾಮುಂಚೆದ್ದಿ ಹೋಗುವೋನು
ಬೆಲಗಾಮುಂಚೆದ್ದಿ ಕರೆಗೋದ
ಲೆದ್ದು ಶಿರಿ ಮೋರೆ ತೊಲೆಬಾಗೆ
ವರಗಿದ ಮೊಕವ ತೊಲೆವನು
ಲಲ್ಲೊಂದು ತಾವರೆ ಕಂಡನು
ಲಾ ಹೂಗು ತಾನೇ ಮುರ್ದು ಬಂದ
ಕುಂಬಾರ್ತಿಗೆ ತಾನು ಕೊಡುವೋನು
ಕುಂಬಾರ್ತಿಗೆ ಕೊಡೂರೊಲಗೆ

ಕುಂಬಾರ್ತಿ ಹೂಗ ಮೂಡುದೀಲು
ಕುಂಬಾರ್ತಿ ಹೂಗ ಮುಡಿವಾಗೆ
ಕಲೆವಡುತಲಾಗೆ ಬಂತು
ಹಿತ್ತಲ್ಗೆ ಹೂಗ ವಗುದೀಲು
ಹಿತ್ತಿಲಿಗೆ ಹೂಗ ವಗುವಾಗೆ
ಲಲ್ಲೆ ವಂದು ಕೆಂಬರ್ಗೆ ಬುಡವಾಯ್ತು
ಕೆಂಬರ್ಗೆ ಬುಡವೇ ಲಾಗುವಾಗೆ
ಪದಾರ್ಥಕೆಂದು ಕಿತ್ತೇ ಬಂದ
ಕುಂಬಾರ್ತಿ ಕೂಡೆ ಕೊರೂಕೆಂದ
ಹಾಂಗೆಲುದುರ ಬೇಯ್ಸುವೋಲು
ಹಾಂಗೆಲದುರ ಬೇಯ್ಸುವಾಗೆ
ಗೊದಗೊದನೆ ಕೊದ್ವೆ ಬಂತು

ಗೊದಗೊದನೆ ಕೊದ್ವೆ ಬರುವಾಗೆ
ವಂದಂಬು ಮಾತು ನುಡುದೀತು
ಕೊಚ ಕೊಚ ಕುಂಬಾರ್ತಿ
ಲಟ್ಟಂಬು ಮಾತು ಹೇಲೂರೊಲಗೆ
ಹಿತ್ತಿಲಿಗೆ ತಾನು ವಗುದೀಲು
ಲಲ್ಲೊಂದು ಮಾವಿನ ಶಶ್ಯೆ ಹುಟ್ತು
ಮಾವಿನ ಶಶ್ಯೆ ಹುಟ್ಟೂರೊಲ್ಗೆ
ಹೂಗು ಬಿಟ್ಟು ಕಾಯೀ ಲಾಯ್ತು
ಕಾಯಿ ಬಿಟ್ಟು ಹಣ್ಣಲಾಯ್ತು
ರಾಮಯ್ಯ ದೊರ್ಯೆ ಹಿತ್ತಿಲಿಗೋದ
ಮಾಯೀನಣ್ಣು ಹೆರಕಿ ಬಂದ
ಮಾಯಿನಣ್ಣು ತಂದು ಕಂತೆ
ಕುಂಬಾರ್ತಿ ಕೈಯಲ್ಲಿ ಕೊಡುವೋನು
ಮುಟ್ಯಲ್ಲಿ ಮಡುಗಿ ಮುಚ್ಚಿಟ್ಟೀಲು
ಮುಟ್ಯಲ್ಲಿ ತಾನು ಮಡಗೂರೊಲಗೆ
ಹಣ್ಣು ಕೊರೂ ಕಾಯ್ತು ತಾರೇ
ಹಣ್ಣುಲಾದುರೆ ಮೆಲುಕಾಯ್ತು
ಮುಟ್ಟಿ ಮುಚ್ಲು ತೆಗೂರೊಲ್ಗೆ
ಬೆದ್ರೆಲೆ ಶದುರಿ ಲಾಗೀದಲೆ
ಬೆದ್ರೆಲೆ ಶದುರಿ ಲಾಗೇ ಬಂತು
ಲಾಕೆ ತನ್ನ ಕತೆ ಹೇಲುವೋಲು
ರಾಮಯ್ಯ ದೊರ್ಯೆ ಕೇಲುವೋನು
ಕುಂಬಾರ್ತಿ ಕೂಡ ಕುಲುತೀಲು
ಕುಂಬಾರ್ತಿ ಕೈಯ ಮುಗುದೀಲು
ಕುಂಬಾರ್ತಿಗೇನು ಮಾಡುಬೇಕು
ಮೂರು ಹಾದಿ ಕೂಡ್ವಲ್ಲಿ ತೆಕಂಡೋದ
ಶಿಗ್ದಿ ತೋರಣ ಗೆಯ್ದು ಬಂದ
ಬೆದ್ರೆಲೆ ಶದ್ರಿ ರಾಮಯ್ಯ ದೊರ್ಯೆ
ಶುಕದಲ್ಲಿ ತಾಮೆ ಏಲುಕಂಡ್ರು

---

** ಇಲ್ಲಿಂದ ಪ್ರತಿಸಾಲಿನ ಕೊನೆಗೆ ತಂದನಾನಾ ಎಂದು ಹೇಳಬೇಕು.

�ೀd———————————�/pHC��e�n lang=KN>೧೯೭೦. ಪು.ಸಂ. ೩೯-೪೧.

೨) ಮುತ್ತಿನಶೆಟ್ಟಿ; ಕಾಳೇಗೌಡ ನಾಗವಾರ, ಬಯಲುಸೀಮೆಯ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರ ೧೯೭೩ ಪು.ಸಂ. ೧೧೭-೧೧೯.

೩) ದಿಗಿಲಾಗಿ ನಿಂತಾಳ; ರಾಮಣ್ಣ, ಕ್ಯಾತನಹಳ್ಳಿ, ಬೀದರ ಜಿಲ್ಲೆಯ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೭೬, ಪು.ಸಂ. ೧೩೬-೧೩೯.

೪) ಗೌಡರ ಸೊಸಿ ಮ್ಯಾಲೆ ನನ್ನ ಮನಸು; ಕೃಷ್ಣಯ್ಯ, ಎಸ್.ಎ. ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪೂರದ ಜನಪದ ಗೀತೆಗಳು, ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೧೯೯೨. ಪು.ಸಂ. ೧೩೯೦೦೧೪೦.

---

* ಬೆದರೆಲೆ ಚದುರಿ; ಭಟ್ ಎಲ್.ಜಿ. ಹಾಲಕ್ಕಿ ಪಾಯಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೪, ಪು.ಸಂ. ೯೩-೧೧೨.

## ೨೩. ಉತ್ತರದೇವಿ ಹಾಡು *

ಅಂಗಳದ ಬಾವಿಗೆ ಅರಗೀನ ಮುಚ್ಚಳ
ಅರಗರಗಿ ನೀರಾ ಮಗಿಯೋಳುತ್ತರದೇವಿ
ಅಲ್ಲೊಬ್ಬ ಜಾಣ ಕಂಡೂ ತಡುದಾನೆ ‖ ಸುವ್ವಿ ‖

ತಡೆದೇನ್ಹೆಳಾನೆ ಬಾಯಾರಿಗೆ ನೀರಾ ಕೊಡುವೇನೆ
ನಿನಗೆ ನೀರು ಕೊಡುವಾಕೆ
ನಿನಗಿಂತ ಚೆಲುವಾರು ಹೋಗಯ್ಯ ಜಲಧೀಗೆ ‖ ಸುವ್ವಿ ‖

ಹರಿವ ನೀರು ಹಾಸಿಂಬೆ ಗುಮ್ಮಿ ನೀರು ಕೆಂಗಣಕು
ನಿನ್ನ ಕೈಯಾನ ನೀರೇ ಸವಿರುಚಿ
ಎಲೆ ಹೆಣ್ಣೆ ಬಾಯಾರಿಗೆ ನೀರಾ ಕೊಡು ಹೆಣ್ಣೆ ‖ ಸುವ್ವಿ ‖

ನೀರಿಗೆ ಹೋದಾಳು ನೀರ್ಗಲ್ಲ ದುರ್ಗಕ್ಕೆ
ತಡವಾದರತ್ತೆ ಬಯ್ದಾಳು ಬಯ್ಕುಕಡೆಗೆ
ಗಿಳಿಬಂದು ನೀರ ಕಣಿಕ್ಯಾವು
ಜಾರುಗಲ್ಲು ಹತ್ತಿ ಜಾರ್ಬಿದ್ದು ಕೊಡ ಒಡದ್ಹೋಯ್ತು ‖ ಸುವ್ವಿ ‖

ಮಳೆ ಬರುತಿದೆಯೆಂದು ಮರನಾ ಬಳಿ ನಾ ಪೋದೆ
ಕಾಯ್ದಿದ್ದು ಕಡಗ ಒಡೆದೋಯ್ತು ಅತ್ತಮ್ಮ
ಜೊಂಕಲಿ ಬಿದ್ದು ಸೀರೆ ಹರಿದೋಯ್ತು ॥ ಸುವ್ವಿ ॥

ಅತ್ತೆಯ ಕಾಲದ ಕೊಡ ಮಾವನ ಕಾಲದ ಕೊಡ
ಎತ್ತಿ ಹಾಕಿ ಬಂದೇನೆ ಸೊಸಿಮುಂಡೆ ॥ ಸುವ್ವಿ ॥

ಚೆನ್ನಾದ ಕೊಡವಲ್ಲ ರನ್ನಾದ ಕೊಡವಲ್ಲ
ಮಣ್ಣೀನ ಕೊಡಕೇನ ಮಿಟಗೇರಿ ಅತ್ತೆಮ್ಮ
ಅಣ್ಣಯ್ಯನ ಕೈಲಿ ಕೊಡತಾನು ತರಸೀನು ॥ ಸುವ್ವಿ ॥

ಕೊಡ ಹೋದಾರೆ ಹೋಗಾಲಿ ಬಳೆ ಹೆಂಗೆ ಒಡೆದೀತು
ಮಾವನ ಮನೆಯ ಸರಳೆಮ್ಮೆ ಬಿಡುತ್ತಿದ್ದೆ
ಕೋಡು ಹೊಡೆದು ಬಳೆಯು ಒಡೆದೊಯ್ತು ॥ ಸುವ್ವಿ ॥

ಬಳೆ ಹೋದಾರೆ ಹೋಗಲಿ ಸೀರೆಂಗೆ ಹರಿದೋಯ್ತು
ಮಾವನ ಮನೆಯ ತೋಟಕೆ ಹೋಗಿದ್ದೆ
ಬಾಳೆಮುಳ್ಳು ಹೊಡೆದು ಸೀರೆ ಹರಿದೋಯ್ತು ॥ ಸುವ್ವಿ ॥

ಬಾಳೆಗೆ ಮುಳ್ಳುಂಟೆ ಬಸವಳೀಗೆ ಕೆಂಚುಂಟೆ
ಸೊಸೆಯೇ ನಿನಮಾತು ನಿಜವುಂಟೆ ॥ ಸುವ್ವಿ ॥

ನೀರಿಗೆ ಹೋದಾಳು ನೀರ್ಗಲ್ಲ ದುರ್ಗಕೆ
ತಡವಾದರತ್ತೆ ಬಯ್ದಾರು ಬಯ್ನುಕಡೆಗೆ ॥ ಸುವ್ವಿ ॥

ಗಿಳಿ ಬಂದು ನೀರ ಕಣಿಕ್ಯಾವು
ಜಾರುಗಲ್ಲು ಹತ್ತಿ ಜಾರ್ಬಿದ್ದು ಕೊಡ ಒಡೆದೋಯ್ತು ॥ ಸುವ್ವಿ ॥

ಅತ್ತೇಗೂ ಸೊಸೀಗೂ ಹತ್ತೀತು ಎಲೆಕದನಾ
ಹಿತ್ತಲ ಹೊರಗೆ ಒಲೆ ಹೂಡಿ
ಹಿತ್ತಲ ಹೊರಗೆ ಉತ್ತೇಯ ಮರನಡಿ ಒಲೆಹೂಡಿ ॥ ಸುವ್ವಿ ॥

ಉಕ್ಕೇಬಿಟ್ಟ ಮಗನೀಗ ಹಗಲೂಟ ಬಡಿಸಾಗ
ಒಂದೊಂದು ಚಾಡಿ ಹೇಳ್ಯಾಳು ॥ ಸುವ್ವಿ ॥

ಮಾತಿಗುತ್ತರ ಪ್ರತಿಯುತ್ತರ ಕೊಡುತಾಳೆ
ಉತ್ತರದೇವೆಂಬ ಸೊಸಿ ಬ್ಯಾಡ ॥ ಸುವ್ವಿ ॥

ಕುತ್ಕು ಕುಟ್ಟೀನು ಕುಡ್ಯಾಗೆ ನೀರು ಹೊತ್ತೀನು
ಉತ್ತರದೇವೆಂಬ ಸೊಸಿಬ್ಯಾಡ
ಕಳ್ಸಿ ಬಾರವಳ್ನ ತವರೀಗಿ ॥ ಸುವ್ವಿ ॥

ಕಳ್ಸಿ ಬರುವುದಕೇನು ಸುಮ್ಮನೆ ಬಂದೋಳಲ್ಲ
ಸಾವಿರಕೊಡಿ ಸಭೆಕೊಡಿ
ಸಾವಿರೆಂಬುದು ನಮ್ಮ ಹಾಲಿನ ಬೆಲೆ ಇಲ್ಲ
ಹಾಲು ಮಾರವಳ್ನ ತರಬೋದು ॥ ಸುವ್ವಿ ॥

ಉತ್ತರಕುತ್ತರ ಪ್ರತಿಯುತ್ತರ ಕೊಡುತಾಳೆ
ಉತ್ತರದೇವೆಂಬ ಸೊಸಿಬ್ಯಾಡ - ಎಲೆಮಗನೆ
ಬಿಟ್ಟರೆ ಬಿಡುಮಗನೆ ಮಡದೀಯಾ ॥ ಸುವ್ವಿ ॥

ಮಡದಿ ಬಿಡುವೋಕೆ ಎಪ್ಪತ್ತು ಕೊಟ್ಟಿದೀನಿ
ಹೆತ್ತಮ್ಮನಿಗೆ ನಾ ಮರುಳಾದೆ
ಎಪ್ಪತ್ತು ಕೊಟ್ಟರೂ ನನ್ನ ಕೊಪ್ಪೀನಾ ಬೆಲೆ ಇಲ್ಲ
ಬಿಟ್ಟರೂ ಬಿಡುಮಗನೆ ಮಡದೀಯಾ ॥ ಸುವ್ವಿ ॥

ಕೊಪ್ಪು ಮಾಡೆಣ್ಣಾ ತರುತೀನಿ
ಅತ್ತೇಗೂ ಸೊಸೀಗೂ ಹತ್ತೀತು ಕದನಾ
ಹಿತ್ತಾಲ ಹೊರಗೆ ಒಲಿಹೂಡಿ ಅಡಗಿಮಾಡಿ ॥ ಸುವ್ವಿ ॥

ಹರಗಾಕ್ಹೋಗ ಮಗನೀಗೆ ಹಗಲೂಟ
ಹಗಲೂಟ ನಿಕ್ಕಿಕೊಂಡು ಹೇಳ್ಯಾಳು
ಬಿಟ್ಟರು ಬಿಡುಮಗನೆ ಮಡದೀಯಾ ॥ ಸುವ್ವಿ ॥

ಮಡದಿ ಬಿಡುವೋಕೆ ಎಂಬತ್ತು ಕೊಟ್ಟಿದೀನಿ
ಹಡೆದಮ್ಮನಿಗೆ ನಾ ಮರುಳಾದೆ
ಎಂಬತ್ತು ಕೊಟ್ಟರೂ ನನ್ನ ಬಂದಿಯಾ ಬೆಲೆ ಇಲ್ಲ
ಬಂದಿ ಮಾರಿ ಹೆಣ್ಣಾ ತರುತೀನಿ ॥ ಸುವ್ವಿ ॥

ನಾನು ತರುವಾಗ ಇಷ್ಟು ದೊಡ್ಡಾನ ಮಾತಿರ್ಲ
ಈಗೆಲ್ಲಿ ಕಲಿತೆ ತಿಪುರಾವ ॥ ಸುವ್ವಿ ॥

ನಟ್ಟಾ ಮಲ್ಲಿಗೆ ನಟ್ಟಂತೆ ಇರುವೂದೆ
ಚಪ್ಪರಕೊಂದು ಜೋಲು ನಸೆದಾವು
ಗಣ್ಣು ಗಣ್ಣಿಗೂ ಮೊಗ್ಗೆ ಅರಳ್ಯಾವು ॥ ಸುವ್ವಿ ॥

ಉತ್ತರಕುತ್ತರ ಪ್ರತಿಯುತ್ತರ ಕೊಡುತಾಳೆ
ಉತ್ತರದೇವೆಂಬ ಸೊಸಿಬ್ಯಾಡ
ಕಳ್ಸಿ ಬಾರವಳ್ನ ತವರೀಗಿ ॥ ಸುವ್ವಿ ॥

ಕಳ್ಸಿ ಬರುವುದಕೇನು ಸುಮ್ಮನೆ ಬಂದವಳಲ್ಲ
ಸಾವಿರಕೂಡಿ ಸಭೆಕೂಡಿ ಬಂದವಳ
ಕಳ್ಸಿ ಬರಲಾರೆ ತವರೀಗಿ ॥ ಸುವ್ವಿ ॥

ನೆರೆಮನೆ ಅಕ್ಕಾ ಕೇಳಿ ನೆರೆಮನೆ ಬಾವ್ನಾ ಕೇಳಿ
ನನ್ನತ್ತೆ ನನ್ನ ಉರಿಸಿದ್ದು
ಬೆಂಕ್ಷಿಮ್ಯಾಲೆ ಬಾನ ಬಸಿಯಂದ್ರು ನಮ್ಮತ್ತೆ
ಆ ಕೆಲ್ಸ ನನಗೆ ತಿಳಿದಿಲ್ಲ ॥ ಸುವ್ವಿ ॥

ಸಣ್ಣೇಲಿ ಸಾಸುವೆ ಮೊಗೆಯಂದ್ರು ನಮ್ಮತ್ತೆ
ಆ ಕೆಲ್ಸ ನನಗೆ ತಿಳಿದಿಲ್ಲ
ನಡು ಹೊಳೆಯಾಲಿ ಮೊಸರ ಕಡೆಯೆಂದಾರು ನಮ್ಮತ್ತೆ
ಆ ಕೆಲ್ಸ ನನಗೆ ತಿಳಿದಿಲ್ಲ ॥ ಸುವ್ವಿ ॥

ಆ ಕೆಲ್ಸ ನಿನಗೆ ತಿಳಿದಿದ್ರೆ ಉತ್ತರದೇವಿ
ಓಡ್ಹೋಗೆ ನಿನ ತವರೀಗಿ ॥ ಸುವ್ವಿ ॥

ಓಡಿಹೋಗುವುದಕೇನು ಓಡಿಬಂದವಳಲ್ಲ
ಹೇಳ್ಹೋಗುವೆ ನನ್ನಾ ಪುರುಷಾಗೆ ॥ ಸುವ್ವಿ ॥

ಒಂಟೇ ಸಾಲೆಗೆ ಹೋದಳುತ್ತರದೇವಿ
ಒಂಟೇ ನೂರೊಂಟೆ ಮರಿನೂರು
ಮರಿಗಳಿರಾ ನಾ ಹೋತೀನಿ ನನ್ನ ತವರೀಗೆ ॥ ಸುವ್ವಿ ॥

ನೀ ಹೋದ್ಯಾರೆ ನೀರು ಹೊಯ್ಯುವರ್‍ಯಾರೆ
ಹುಲ್ಲು ಹಾಕುವರ್‍ಯಾರೆ ನಾವು ಬರ್ತೀವಿ ನಿನಹಿಂದೆ
ನೀರು ಹೊಯ್ಯೋರು ಮಾವ ಹುಲ್ಲು ಹಾಕೋರತ್ತೆಮ್ಮ
ನಾ ಹೋಗುವೆ ನನ ತವರೀಗೆ ॥ ಸುವ್ವಿ ॥

ಆನೆ ಸಾಲೆಗೆ ಹೋದಳುತ್ತರದೇವಿ
ಆನೆ ನೂರಾನೆ ಮರಿನೂರು
ಮರಿಗಳಿರಾ ನಾ ಹೋತೀನಿ ನನ್ನ ತವರೀಗೆ ॥ ಸುವ್ವಿ ॥

ನೀ ಹೋದಾರೆ ನೀರು ಹೊಯ್ಯುವರ್‍ಯಾರೆ
ಹುಲ್ಲು ಹಾಕುವರ್‍ಯಾರೆ ನಾವು ಬರ್‍ತೀವಿ ನಿನಹಿಂದೆ
ನೀರು ಹೊಯ್ಯೋರು ಮಾವ ಹುಲ್ಲು ಹಾಕೋರತ್ತಮ್ಮ
ನಾ ಹೋಗುವೆ ನನ ತವರೀಗೆ ॥ ಸುವ್ವಿ ॥

ಕುದುರೆ ಸಾಲೆಗೆ ಹೋದಳುತ್ತರದೇವಿ
ಕುದುರೆ ನೂರು ಕುದುರೆ ಮರಿನೂರು
ಮರಿಗಳಿರಾ ನಾ ಹೋತೀನಿ ನನ್ನ ತವರೀಗೆ ॥ ಸುವ್ವಿ ॥

ನೀ ಹೋದಾರೆ ನೀರು ಹೊಯ್ಯುವರ್‍ಯಾರೆ
ಹುಲ್ಲು ಹಾಕುವರ್‍ಯಾರೆ ನಾವು ಬರ್‍ತೀವಿ ನಿನಹಿಂದೆ
ನೀರು ಹೊಯ್ಯೋರು ಮಾವ ಹುಲ್ಲುಹಾಕೋರತ್ಯಮ್ಮ
ನಾ ಹೋಗುವೆ ನನ ತವರೀಗೆ ॥ ಸುವ್ವಿ ॥

ಕವುಲಿ ಕೊಟ್ಟಗೆಗೆ ಹೋದಳುತ್ತರದೇವಿ
ಕವುಲಿ ನೂರು ಕವುಲಿ ಕರುನೂರು
ಕರುಗಳಿರಾ ನಾ ಹೋತೀನಿ ನನ್ನ ತವರೀಗೆ ॥ ಸುವ್ವಿ ॥
ನೀ ಹೋದಾರೆ ಮುರುವಾ ಹಾಕುವರ್‍ಯಾರು

ಕರುವ ಬಿಡುವರ್‍ಯಾರು ನಾವು ಬರ್‍ತೀವಿ ನಿನಹಿಂದೆ
ಮುರುವಾ ಹಾಕೋರು ಮಾವ ಕರುವ ಬಿಡೋರತ್ಯಮ್ಮ
ನಾ ಹೋಗುವೆ ನನ ತವರೀಗೆ ॥ ಸುವ್ವಿ ॥

ಹೂವಿನ ವನಕೆ ಹೋದಳುತ್ತರದೇವಿ
ಹೂವು ನೂರೂವು ಮೊಗ್ನೂರು
ಗಿಡಗಳಿರಾ ನಾ ಹೋಗುವೆ ನನ ತವರೀಗೆ ॥ ಸುವ್ವಿ ॥

ನೀ ಹೋದಾರೆ ನೀರು ಹಾಕುವರ್‍ಯಾರೆ
ಹೂ ಕೊಯ್ಯುವರ್‍ಯಾರೆ ಹೂ ಮುಡಿಯುವವರು ಇನ್ಯಾರೆ
ಹೂ ಕೂಯ್ಯೋರು ಮಾವ ಮುಡಿಯೋಳತ್ಯಮ್ಮ
ನಾ ಹೋಗುವೆ ನನ ತವರೀಗೆ ॥ ಸುವ್ವಿ ॥

ಕಂಚೀಯ ವನಕೆ ಹೋದಳುತ್ತರದೇವಿ
ಕಂಚಿ ನೂರ್‍ಕಂಚಿ ಗಿಡನೂರು
ಗಿಡಗಳಿರಾ ನಾ ಹೋತೀನಿ ನನ ತವರೀಗೆ ॥ ಸುವ್ವಿ ॥

ನೀ ಹೋದಾರೆ ಕಾಯು ಕೊಯ್ಯುವರಾರು
ನೀರು ಹೊಯ್ಯುವರಾರು ನಾವು ಬರುತೀವಿ ನಿನಹಿಂದೆ
ಕಾಯು ಕೊಯ್ಯೋರು ಮಾವಯ್ಯ ನೀರು ಹೊಯ್ಯೊರತ್ನಮ್ಮ
ನಾ ಹೋತೀನಿ ನನ ತವರೀಗೆ ‖ ಸುವ್ವಿ ‖

ನಿಂಬೀಯ ವನಕೆ ಹೋದಳುತ್ತರದೇವಿ
ನಿಂಬೆ ನೂರ್ನಿಂಬೆ ಗಿಡನೂರು
ಗಿಡಗಳಿರಾ ನಾ ಹೋತೀನಿ ನನ ತವರೀಗ ‖ ಸುವ್ವಿ ‖

ನೀ ಹೋದಾರೆ ಕಾಯು ಕುಯ್ಯುವರಾರು
ನೀರು ಹೊಯ್ಯುವರಾರು ನಾವು ಬರುತೀವಿ ನಿನಹಿಂದೆ
ಕಾಯು ಕೊಯ್ಯೋರು ಮಾವಯ್ಯ ನೀರು ಹೊಯ್ಯೊರತ್ನಮ್ಮ
ನಾ ಹೋತೀನಿ ನನ ತವರೀಗೆ ‖ ಸುವ್ವಿ ‖

ದೊಡಲೀಯ ವನಕೆ ಹೋದಳುತ್ತರದೇವಿ
ದೊಡಲಿನೂರು ಗಿಡನೂರು
ಗಿಡಗಳಿರಾ ನಾ ಹೋತೀನಿ ನನ ತವರೀಗೆ ‖ ಸುವ್ವಿ ‖

ನೀ ಹೋದಾರೆ ಕಾಯು ಕೊಯ್ಯುವರಾರು
ನೀರು ಹೊಯ್ಯವರಾರು ನಾವು ಬರುತೀವಿ ನಿನಹಿಂದೆ
ಕಾಯು ಕೊಯ್ಯೋರು ಮಾವಯ್ಯ ನೀರು ಹೊಯ್ಯೋರತ್ಯಮ್ಮ
ನಾ ಹೋತೀನಿ ನನ ತವರೀಗೆ ‖ ಸುವ್ವಿ ‖

ಉಪ್ಪರಿಯೊಳಗೆ ಹೋದಳುತ್ತರದೇವಿ
ಮಾವಯ್ನ ಸಿರಿಪಾದಕೆ ಶರಣೆಂದಾಳು
ಮಾವಯ್ನ ಸಿರಿಪಾದಕೆ ಶರಣೆಂದೇನು ಹೇಳ್ಯಾಳು
ನಾ ಹೋತೀನಿ ನನ ತವರೀಗೆ ‖ ಸುವ್ವಿ ‖

ನಾನೇನು ಹೊಡಿದೆನೆ ನಾನೇನು ಬಡಿದೇನೆ
ನೀವು ಹೊಡೆಯಲಿಲ್ಲ ನೀವೇನು ಬಡಿಯಲಿಲ್ಲ
ನಿಮ ಮಡದಿ ಕೂಡಿ ಇರಲಾರೆ
ನಾ ಹೋಗುವೆ ನನ್ನ ತವರೀಗೆ ‖ ಸುವ್ವಿ ‖

ಅಡಗಿ ಮಾಡರ್ಯಾರೆ ನನಗಿಕ್ಕಾರ್ಯಾರೆ
ನಾನು ಬರ್ತೀನಿ ನಿನಹಿಂದೆ
ಅಡಗಿ ಮಾಡೋರತ್ಯಮ್ಮ ನಿನಗಿಕ್ಕೋರತ್ತ್ಯಮ್ಮ
ನಾ ಹೋತೀನಿ ನನ ತವರೀಗೆ ‖ ಸುವ್ವಿ ‖

ಉಪ್ಪರಿಯೊಳಗೆ ಹೋದುಳುತ್ತರದೇವಿ
ಬಾವಯ್ನ ಸಿರಪಾದಾಕೆ ಸರಣೆಂದಾಳು
ಸರಣೆಂದೇನು ಹೇಳ್ಯಾಳು
ನಾ ಹೋತೀನಿ ನನ ತವರೀಗೆ ॥ ಸುವ್ವಿ ॥

ಅಡಗೀ ಮಾಡರ್‍ಯಾರೆ ನನಗಿಕ್ಕಾರ್‍ಯಾರೆ
ನಾನು ಬಿರ್ತೀನಿ ನಿನ ಹಿಂದೆ
ಅಡಗಿ ಮಾಡೋರತ್ತ್ಯಮ್ಮ ನಿಮಗಿಕ್ಕೋರತ್ಯಮ್ಮ
ನಾ ಹೋತೀನಿ ನನ ತವರೀಗೆ ॥ ಸುವ್ವಿ ॥

ಉತ್ತರದೇವಿ ದಂಡು ಕಿತ್ತೆದ್ದು ಹೋಗಾಗ
ಮುತ್ತೂರು ದೊರೆ ಕಂಡು ತಡುದಾನೆ
ತಡದೂ ಏನೆಂದು ಹೇಳ್ಯಾನೆ ಬಾ ತಂಗಿ ನಮ್ಮರಮನೆಗೆ
ಅಂದೇಳಿ ಮುತ್ತೂರ ಏರೀಲಿ ಕೊಟ್ಟಾರೆ ಉಡುಗೋರೆ
ಎಂತಾವ ಉಡುಗೋರೆ ಕಂಠೀಯ ಸರವೇ ಉಡುಗೊರೆ ॥ ಸುವ್ವಿ ॥

ಉತ್ತರದೇವಿನಾ ಮಾಳೂರ ದೊರೆ ಕಂಡ ತಡುದಾನೆ
ತಡೆದೂ ಏನೆಂದು ಹೇಳ್ಯಾನೆ ಬಾ ತಂಗಿ ನಮ್ಮರಮನೆಗೆ
ಉತ್ತರದೇವಿ ಅದಕೇನೆಂದು ಹೇಳ್ಯಾಳೆ
ನಿಮ್ಮರಮನೆಗೆ ಬರೋಕೆ ಅಣ್ಣಲ್ಲ ತಮ್ಮಲ್ಲ
ನಾ ಹೋಗುವೆ ನನ್ನ ತವರೀಗೆ ॥ ಸುವ್ವಿ ॥

ಇರುಳು ಚಂದ್ರನ ಬೆಳಕಲ್ಲಿ-ಉತ್ತರದೇವಿ
ಗೋಳೆಂದು ಹೊರಟಾಳು ಅಪ್ಪಯ್ಯನರಮನಿಗೆ ॥ ಸುವ್ವಿ ॥

ಅಪ್ಪಯ್ಯ ಕದ ತೆರಿಯೊ ಅಪ್ಪಾಜಿ ಕದ ತೆರಿಯೊ
ನನ್ನಪ್ಪ ನನಗೆ ಕದ ತೆರಿಯೊ-ಹೊಸಲಲ್ಲಿ
ನಾನು ನಿಲಲಾರೆ ಸೋತು ಬಂದೇನು ॥ ಸುವ್ವಿ ॥

ಚಾಪೆ ಚೆನ್ನಾಗಿ ದೀಪ ದಿವ್ನಾಗಿ
ನಿಮ್ಮಮ್ಮ ಹೊರಗ್ಯವಳೆ-ಉತ್ತರದೇವಿ
ನೀ ಹೊಗವ್ವ ನಿಮ್ಮಮ್ಮನರಮನಿಗೆ ॥ ಸುವ್ವಿ ॥

ಹೊತ್ತಾಳು ಪುತ್ರಯ್ನ ಎತ್ಯಾಳು ಪಿಟಾರಿಯ
ಇರುಳು ಚಂದ್ರನ ಬೆಳಕಲ್ಲಿ-ಉತ್ತರದೇವಿ
ದಂಡು ಕಿತ್ತೆದ್ದು ಹೊರಟಾವೆ ಅಮ್ಮನರಮನಿಗೆ ॥ ಸುವ್ವಿ ॥

ಅಮ್ಮ ಕದ ತೆರಿಯೆ ಅವ್ವ ಕದ ತೆರಿಯೆ
ನನ್ನವ್ವ ನನಗೆ ಕದ ತೆರಿಯೇ-ಹೊಸಲಲ್ಲಿ
ನಾನು ನಿಲಲಾರೆ ಸೋತು ಬಂದೇನು ॥ ಸುವ್ವಿ ॥

ಒಂದಿರಿವೆ ತುಂಡು ಹಾಸಿದೆ ಒಂದಿರಿವೆ ತುಂಡು ಹೊಚ್ಚೇದೆ
ಒಂದೊರುಷ ನಿನ್ನ ಸಲುಹೀದೆ-ಉತ್ತರದೇವಿ
ನನ್ನಾಡು ನಿನಗೆ ಬಂದೀತೆ ॥ ಸುವ್ವಿ ॥

ಮಿಳ್ಳೇಯ ಹಾಲಿಗೆ ಬೆಳ್ಳಷ್ಟು ತುಪ್ಪಹಾಕಿ
ಹತ್ವರ್ಷ ಸಲುಹೀದೆ-ಉತ್ತರದೇವಿ
ನನ್ನಾಡು ನಿನಗೆ ಬಂದೀತೆ ॥ ಸುವ್ವಿ ॥

ಮಿಳ್ಳೇಯ ಹಾಲಿಗೆ ಬೆಳ್ಳಷ್ಟು ತುಪ್ಪಹಾಕಿ
ಹತ್ವರ್ಷ ಸಲುಹೀದೆ-ಉತ್ತರದೇವಿ
ನನ್ನಾಡು ನಿನಗೆ ಬಂದೀತೆ ॥ ಸುವ್ವಿ ॥

ಇಷ್ಟೆಂಬ ಸುದ್ದಿ ಕೇಂಡಾಳು ತಾಯವ್ವ
ಗೋಳೆಂದು ಅತ್ತಾಳು-ಉತ್ತರದೇವಿ
ಇದು ಏನೆಂದು ಕೇಳ್ಯಾಳು ॥ ಸುವ್ವಿ ॥

ನನ್ಗಂಡ ನನಗೆ ಈ ಗೋಳಿಟ್ಟಾನು
ನನ್ನತ್ತೆ ನನ್ನ ಒಡಲು ಉರಿಸ್ಯಾಳು-ನಮ್ಮವ್ವ
ಹೊಸಿಲ ಹೊರಗೆ ದೂಡ್ಯಾರು ॥ ಸುವ್ವಿ ॥

ಅವರೊಟ್ಟೆ ಉರಿಯಾಲಿ ಕಣ್ಣೆರಡು ಸೀಯಾಲಿ
ಸುಣ್ಣ ಸುರಿದಂಗೆ ಬೇಯಾಲಿ-ಉತ್ತರದೇವಿ
ದೀಪದೆಣ್ಣೆಯಾಗಿ ಉರಿಯಾಲಿ

ಅಮ್ಮನ ಕೂಡಿಕೊಂಡುತ್ತರದೇವಿ
ಗಂಗೇಯ ಬದಿಗೆ ನಡೆದಾಳು-ಏನೆಂದುಕೊಂಡಾಳು
ಗಂಗಮ್ಮ ತಾಯಿ ಸೆಳೆಕೊಳ್ಳೆ

ತಾವರೇಯ ಹೂವಿನ ಮೇಲೆ ಕೂತುಕೊಂಡು
ಬೋ ತಪಸ್ಸು ಮಾಡ್ಯಾಳು ಶಿವನಿಗೆ-ಉತ್ತರದೇವಿ
ನಾಡ ಮೇಲುತ್ತರೆ ಮಳೆಯಾಗಿ ಹರಿದಾಳು

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು :**

೧) ಉತ್ತರದೇವಿ; ರಂಗಸ್ವಾಮಿ ಬಿ.ಎನ್. ಹಳ್ಳಿಯ ಪದಗಳು, ಸರಸ್ವತೀ ಪುಸ್ತಕ ಭಂಡಾರ, ಮಂಡ್ಯ ೧೯೪೦ ಪು.ಸಂ. ೮೪-೮೬.

೨) ಉತ್ತರದೇವಿ; ಗಂಡಪ್ಪ ಎಲ್. ನಾಡಪದಗಳು, ಬೆಂಗಳೂರು, ೧೯೪೭ ಪು.ಸಂ. ೯೧-೯೬.

೩) ಉತ್ತರದೇವಿ; ಕ.ರಾ.ಕೃ. ಜಾನಪದ ಗೀತೆಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೫೮, ಪು.ಸಂ. ೪೨-೫೦.

೪) ಉತ್ತರದೇವಿ ಹಾಡು; ಮಹದೇವ ನಾಯಕ ಸ.ಚ., ಸಂಪಿಗೆ ಅರಳೀವೆ, ಕಾವ್ಯಾಲಯ ಪ್ರಕಾಶನ ಮೈಸೂರು ೧೯೬೧, ಪು.ಸಂ. ೭೫-೭೭.

೫) ಉತ್ತರದೇವಿ; ಪರಮಶಿವಯ್ಯ, ಜೀ.ಶಂ. ಜಾನಪದ ಖಂಡಕಾವ್ಯಗಳು, ಶಾರದಾಮಂದಿರ ಮೈಸೂರು ೧೯೬೮, ಪು.ಸಂ. ೩-೧೦.

೬) ಉತ್ತರದೇವಿ; ಹೆಗಡೆ ಎಲ್.ಆರ್. ತಿಮ್ಮಕ್ಕನ ಪದಗಳು ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೬೯ ಪು.ಸಂ. ೮೭-೯೯.

೭) ಉತ್ತರಾದೇವಿಯ ಕತೆ; ಐತಾಳ ಚಂದ್ರಶೇಖರ ಗುಂಡ್ಮಿ, ಕೈಲಿಯ ಕರೆದ ನೊರೆಹಾಲು ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೭೦ ಪು.ಸಂ. ೬೯-೭೧.

೮) ಉತ್ತರದೇವಿ; ಹೆಗಡೆ ಎಲ್.ಆರ್. ಕೆಲವು ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩ ಪು.ಸಂ. ೧೫೪-೧೫೭.

೯) ಉತ್ತರದೇವಿ; ರಾಜಪ್ಪ ಟಿ.ಎಸ್. ಕೆರೆಹೊನ್ನಮ್ಮ ಮತ್ತು ಇತರ ಲಾವಣಿಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೪, ಪು.ಸಂ. ೨೨೫-೨೩೪.

೧೦) ಉತ್ತರಾದೇವಿ; ಮತಿಘಟ್ಟ ಕೃಷ್ಣಮೂರ್ತಿ, ಕನ್ನಡ ಜನಪದ ಸಾಹಿತ್ಯ ಭಂಡಾರ. ಗುರುಮೂರ್ತಿ ಪ್ರಕಾಶನ ಬೆಂಗಳೂರು ೧೯೭೫, ಪು.ಸಂ. ೭೮೫-೭೮೯.

೧೧) ಉತ್ತರದೇವಿ; ಲಿಂಗಯ್ಯ ಡಿ. ಕರ್ನಾಟಕ ಜನಪದ ಕಾವ್ಯಗಳು, ದಿನಕರ ಪ್ರಕಾಶನ ಬೆಂಗಳೂರು, ೧೯೭೬ ಪು.ಸಂ. ೧೧೫-೧೨೦.

೧೨) ಉತ್ತರಾದೇವಿ; ಹಿರಿಯಣ್ಣ ಅಂಬಳಿಕೆ, ಕಾಡುಗೊಲ್ಲರ ಜನಪದ ಗೀತೆಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೮, ಪು.ಸಂ. ೩೭೪-೩೭೮.

೧೩) ಉತ್ತರದೇವಿ; ನೆಲ್ಲಿಸರ ಬಸವರಾಜ, ಜನಪದ ಕಾವ್ಯ ಸಂಚಯ, ಕನ್ನಡ ಅಧಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೪, ಪು.ಸಂ. ೯೫-೧೦೧.

೧೪) ಅತ್ತೆ ಸೊಸೆ ಜಗಳ; ಪಾಂಡುರಂಗ ಡಿ.ಆರ್. ದಕ್ಷಿಣ ಕನ್ನಡ ಜಿಲ್ಲೆಯ ಭೈರರು ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೪ ಪು.ಸಂ. ೧೯೫-೧೯೬.

೧೫) ಉತ್ತುರದೇವಿ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭ ಪು.ಸಂ. ೮೧-೧೦೭.

---

* ಉತ್ತರದೇವಿ ಹಾಡು; ಕೂಡಿಗೆ ಶ್ರೀಕಂಠ, ಅಂಟಿಗೆ ಪಂಟಿಗೆ ಪದಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩, ಪು.ಸಂ. ೫೬-೬೬

## ೨೪. ಹಾವಿನ ಪದ *

ಅತ್ಯಮ್ಮ ಅತ್ಯಮ್ಮ ಲೈಲೇದುಂಬಿ
ಹಿತ್ತಲಿಗೆ ಹಾವುಬಂತು "
ಹಿತ್ತಲಿಗೆ ಹಾವುಬಂತು "
ಎಡಗಾಯ ಒಡೆಯಮ್ಮ "
ಎಡಗಾಯ ಒಡ್ಡಿದ್ರೆ "
ಸೆಡೆಯೆತ್ತಿ ಬರುತಾದೆ "
ಸೆಡೆಯೆತ್ತಿ ಬಂದಾರೆ "
ನೀ ಹಿಡುಗಲಲ್ಲಿ ಹೊಡೆಯಮ್ಮ "
ಹಿಡುಗಲಲ್ಲಿ ಹೊಡೆದಾರೆ "
ಅದು ಸೆಡೆಯೆತ್ತಿ ಆಡುತಾದೆ "
ಸೆಡೆಯೆತ್ತಿ ಆಡಿದರೆ "
ನೀ ಕಡ್ಡೀಲಿ ಬಡಿಯಮ್ಮ "
ಕಡ್ಡೀಲಿ ಬಡಿದರೆ "
ಅದು ಸತ್ತೋಯ್ತು ಅತ್ಯಮ್ಮ "
ಸತ್ತೋಯ್ತು ಅತ್ಯಮ್ಮ "
ನೀ ಎಳಕೊಂಡು ಬಾರಮ್ಮ "
ಎಳಕೊಂಡು ಬಂದಿನ್ನು "
ನೀ ಒಪ್ಪಾಯ ಮಾಡೆಂದ "
ಒಪ್ಪಾಯ ಮಾಡಿಬಿಟ್ಟು "
ನೀ ಅಡುಗಾಯ ದುಡುಗೆಂದ "
ಅಡುಗೇಯ ಮಾಡಕ್ಕೆ "
ನನ್ಗೆ ಬರದಿಲ್ಲ ಅತ್ಯಮ್ಮ "
ಬರದಿದ್ದರೆ ಅದುಗಾಯ "
ನಾ ಹೇಳಿಕೊಟ್ಟೆ ಮಾಡೆಂದ ಲೈಲೇದುಂಬಿ
ಅದರ ಕಳ್ಳನ್ನು ತೆಗೆಯೆಣ್ಣೆ "

ಅದ ಕಜ್ಜಾಯ ಮಾಡೆಂದ "
ಅದರ ಹೊಟ್ಟಾಯ ತೆಗೆದಿನ್ನು "
ರೊಟ್ಟಿಯ ಸುಡೆಂದ ಲೈಲೇದುಂಬಿ
ಅದರ ಹಲ್ಲನ್ನು ತೆಗೆದಿನ್ನ "
ನೆಲ್ಲಕ್ಕಿ ಅಣ್ಣವೊಂದ "
ಅದರ ತಲೆಯನ್ನು ತೆಗೆದಿನ್ನು "
ತಾಳ್ಹೂವ ಮಾಡೆಂದ "
ಅದರ ನಾಲಿಗೆ ತೆಗೆದಿನ್ನು "
ನೀ ದ್ವಾಸೇಯ ಮಾಡೆಂದ "
ಅಂದ ಚೆಂದದ ಅಡಿಗೆಯ "
ಅವ ಮಾಡೀಳು ಚಿಕ್ಕೊನ್ನಿ "
ಅವ ಅಡುಗಾಯ ದುಡಿಗಿನ್ನು "
ಅವ್ರ ಮಾವಿದ್ದ ಅರಮನೆಗೆ "
ಮಾವಯ್ಯ ಮಾವಯ್ಯ "
ನೀವು ಊಟಕ್ಕೆ ಬಣ್ಯಪ್ಪ "
ಊಟಕ್ಕೆ ಬರುವಾರೊ "
ನಾ ಸ್ವಾಮಾರ ಒಂದೊತ್ತು "
ಸ್ವಾಮಾರ ಒಂದೊತ್ತು "
ನಿಮ್ಮ ತಾಯಮ್ನ ಕರೆ ಎಂದ "
ಅತ್ಯಮ್ಮ ಅತ್ಯಮ್ಮ "
ನೀ ಊಟಕ್ಕೆ ಬಣ್ಣ್ಯವ್ವ "
ಊಟಕ್ಕೆ ಬರುವಾರೊ "
ನಾನು ಮಂಗಳವಾರ ಒಂದೊತ್ತು "
ಮಂಗಳವಾರ ಒಂದೊತ್ತು "
ನೀನು ಮೈದ ಮಲ್ಲಿಗೆ ದೊರೆ "
ಅವರು ಚೆಂಡಾಡು ಹೋಗವ್ರೆ "
ಅವರನ್ನು ಕರೆಯಮ್ಮ "
ಹಾಗಂತ ಹೇಳಿದ "
ನಾ ಮಾಡಿದಂತಲಡುಗೇಯ "
ಇವರು ಒಬ್ಬಾರು ಉಣ್ಣಲ್ಲ "
ಒಬ್ಬಾರು ಬರಲಿಲ್ಲ "
ನೀ ಮಾಡಿದಂತ ಅಡುಗೇಯ "
ನಾನೇಯ ಉಣತೀನ "
ಅವ ಅರಮನೆಗೆ ಬಂದಾಳು "
ಅವಳು ಗಂಡಿದ್ದ ಅರಮನೆಗೆ ಲೈಲೇದುಂಬಿ
ಅವಳು ಬಂದಿನ್ನು ಚಿಕ್ಕೊನ್ನಿ "

ನನ್ನ ಗಂಡ ರಂಗದ ಸ್ವಾಮಿ "
ಅವ್ರು ದಂಡಿಗೆ ಹೋಗವ್ರೆ "
ಒಂದು ಚಿತ್ರಪಟವ ಬರದಾಳೊ "
ನಮ್ಮ ಅತ್ಯಮ್ಮ ಅಂಬಾಳು "
ಹಾವಿನಡುಗೇಯ "
ಅವ್ಳ ಮಾಡ್ಸೀರು ಅತ್ಯಮ್ಮ "
ಒಂದು ಚಿತ್ರಪಟವ ಬರದಾಳೋ "
ಚಿತ್ರಪಟವ ಬರದಿನ್ನು "
ಚಿಣ್ಣಾದ ಗಿಂಡೀಲಿ "
ಅವ್ಳ ಪನ್ನೀರು ತುಂಬೀಳು "
ಅವ್ಳ ಗಾಲೀಯ ಅರವಾಣ "
ಅವ್ಳ ಕೀಲೀನ ತೇವಟಿಗೆ "
ಅವ್ಳ ಊಟಕ್ಕೆ ಬಡಿಸಾಳು "
ಊಟಕ್ಕೆ ಬಡಿಸಿನ್ನು "
ಅವ್ಳ ಊಟಾವ ಮಾಡಿನ್ನು ಲೈಲೇದುಂಬಿ
ನಾ ಮಾಡಿದಂತ ಅಡುಗೇಯ "
ನಾನೇಯೆ ಉಣುತೀನಿ "
ನಾ ಮಾಡಿದಂತ ಅಡುಗೇಯ "
ಇವರು ಒಬ್ಬಾರು ಉಣಲಿಲ್ಲ "
ನಾನೇಯೆ ಉಣುತೀನಿ "
ಅವ ಒಂದು ತುತ್ತ ಹಾಕುತವ್ಳೆ "
ಅವ್ಳ ಇನ್ನೊಂದು ತುತ್ತು ಹಿಡಿದವ್ಳೆ "
ಅದು ಹ್ಯಾಗ್ಯಾಗ ಆಯಿತೋ "
ಅವಳು ಮುತ್ತಿನ ಮಂಜೆರಗ "
ಅವ ಹಾಸೀಳೊ ಚಿಕ್ಕೊನ್ನಿ "
ಅವ್ಳ ಬಲಮಗ್ಲಾಗೆ ಮಲಗವ್ಳೆ "
ಬಲ ಮಗ್ಲಾಗೆ ಮನಗವ್ಳೆ "
ಅವ ಸತ್ತೋದ ಚಿಕ್ಕೊನ್ನಿ "
ಮೈದ ಮಲ್ಲಿಗೆ ದೊರೆ "
ಚೆಂಡಾಡಕ್ಕೋಗಿದ್ದು "
ಒಂದು ಲೆಗ್ಗಾಡಕ್ಕೋಗಿದ್ದು ಲೈಲೇದುಂಬಿ
ಅವ್ನ ಅರಮನೆಗೆ ಬಂದಾನು "
ಆ ಚಿತ್ರಪಟವ ನೋಡುತಾನೆ "
ಆ ಚಿತ್ರಪಟವ ನೋಡುಬುಟ್ಟು "
ಎಡಕ ಬಲಕ ತಿರುಗಿದ "
ಅವರತ್ತಿಗೆ ನೋಡಿದ "

ಕಣ್ಣಲ್ಲಿ ಕಂಡನಲ್ಲ "
ಅವ್ನು ಬಾಳ ಶ್ವಾಕ ಮಾಡುತವ್ನೆ "
ಅವ ಬಾಯ್‌ಬಾಯ ಬಡಕೊಂಡ "
ನಮ್ಮ ಅಣ್ಣಯ್ಯ ದಂಡಿಗೆ ಹೋದ "
ನಮ್ಮತ್ತಿಗೆ ಸತ್ತೋದ ಲೈಲೇದುಂಬಿ
ಅವರ ತಾಯಿದ್ದ ಅರಮನೆಗೆ "
ತಾಯಮ್ಮ ತಾಯಮ್ಮ "
ನಮ್ಮತ್ತಿಗೆ ಸತ್ತೋದ "
ನಮ್ಮಣ್ಣಯ್ಯ ದಂಡಿಗೆ ಹೋದ "
ನಮ್ಮತ್ತಿಗೆ ಕೊಂದಲ್ಲ "
ನೀನು ಹಾಳಾದ ಪಾಪಿಮುಂಡೆ "
ಚಿಕ್ಕವನೇ ನನಕಂದ "
ನೀ ಗಾಲಾಟೆ ಮಾಡುಬೇ "
ನೀ ಊರಿಗೆ ಸುದ್ದಿ ಕೊಡಬೇಡ "
ನೀ ಸುಮನೀರು ನನಕಂದ "
ನೀ ಹಿತ್ತಲಿಗೆ ಹೋಗಪ್ಪ "
ಒಂದು ಕಳ್ಳಿ ಮರನ ತತ್ತಪ್ಪ "
ಕಳ್ಳಿಮರನ ತತ್ತಪ್ಪ "
ನೀ ಒಂದು ಕಬ್ಬಿ ಹಂಬ ತತ್ತಪ್ಪ "
ನೀ ಚಟ್ಟಾಯ ಕಟ್ಟಯ್ಯ "
ಚಟ್ಟಾಯ ಕಟ್ಟುಬುಟ್ಟು "
ನೀ ಹೊತ್ತು ಕೊಂಡು ಹೋಗಪ್ಪ "
ಹೊತ್ತುಕೊಂಡು ಹೋಗಿನ್ನು "
ಅಲ್ಲಿ ಚಟ್ಟಾಯ ಇಳುಕಪ್ಪ "
ಬಿಟ್ಟಾಯ ಇಳುಕಬುಟ್ಟು "
ನೀ ಸುಟ್ಟು ವಾಮಾಯ ಮಾಡಿ "
ನನ್ಗೆ ಬೂದಿಯ ತಂದುಕೊಡು ಲೈಲೇದುಂಬಿ
ತಾಯಮ್ಮ ತಾಯಮ್ಮ "
ಅವಳ ಮೂಗಿನೊಳಗೆ ಮೂರುಕಾಸ "
ಆ ಮೂರುಕಾಸ ಇದ್ದಾರ "
ನಾ ಮುತ್ತುಕ್ವಾಟೆ ಗೆಯಿಸ್ತೀನಿ "
ನಮ್ಮ ಸ್ವಂತ ಅತ್ತಿಗಮ್ಮ "
ಒಂದು ಕಾಸು ಕೊಡವ್ವ "
ಒಂದು ಕಾಸು ಇದ್ದರ "
ನಾ ಚಿತ್ರಕೊಳಾನ ತೆಗಿಸ್ತೀನಿ "
ಚಿತ್ರಕೂಳನ ತೆಗೆಸೀನು "

ಅವ್ವ ಮೈದ ಮಲ್ಲಿಗೆ ದೊರ "
ಅವ್ನು ಬಾಳಾ ಶ್ವಾಕ ಮಾಡುಕ್ಕೊಂಡು "
ಅವ್ನು ಬಿದ್ದು ಬಿದ್ದು ಹೊರಳೀನು "
ಬಿದ್ದು ಬಿದ್ದು ಹೊರಳಿನ್ನು "
ಅವ್ನು ಬಂದಾನು ಅರಮನೆಗೆ "
ಅವ್ನು ಪಾದಾಯ ಹಿಡಕ್ಕೊಂಡು "
ನಮ್ಮತ್ತಿಗೆ ಸತ್ವಂತ "
ನೀ ಸತ್ವಂತಳಾದರೆ "
ನಾ ಕಾಸಿನಾಟಕ್ಕೆ ಹೊಯ್ತೀನಿ "
ಮೂರು ಕಾಸ ಸಿಕ್ಸವ್ವ "
ಇಂವ ಸತ್ತಹೆಣ್ಣ ಮಡಗ್ಬುಟ್ಟು "
ಅವ್ನು ಕಾಸೀನ ಮಳುಗೇಲಿ "
ಅಂವ ಕಾಸಿನಾಟಕ್ಕೊಯ್ತ್ವನೆ "
ಅಂವ ಆಡ್ತಾನೆ ಚೆಕ್ಕಂವ "
ಕಾಸೀನ ಮಳಿಗೇಲಿ "
ಅಲ್ಲಿ ಮೂರು ಕಾಸು ಸಿಕ್ಕೀತು "
ಅದ ತಕ್ಕಂಡು ಬಂದಾನು "
ಅವಳ ಮೂಗಿನೊಳಗೆ ಹಾಕುತಾನೆ "
ಮೂಗಿನೊಳಗೆ ಹಾಕುಬುಟ್ಟು "
ಅವ್ವ ಮೈಕೈ ತೊಳೆದಾನೊ "
ಅವ್ನು ಚಟ್ಟಾಯ ಕಟ್ಟುತ್ತಾನೆ "
ಹಿತ್ತಲಿಗೆ ಹೋಗಿನ್ನು "
ಕಳ್ಳಿ ಮರನ ತತ್ತಾನ ಲೈಲೇದುಂಬಿ
ಕಬ್ಬಿ ಹಂಬ ತಂದಿನ್ನು "
ಅವ್ನೂ ಚಟ್ಟಾಯ ಕಟ್ಟುತಾನೆ "
ಅವ್ನು ಹೆಣವಿನ್ನು ಹಿಡಿದಾನೊ "
ಆ ಚಟ್ಟದ ಮ್ಯಾಕ್ಕೆ ಮಣಗಸ್ತವ್ನೆ "
ಚಟ್ಟದ ಮ್ಯಾಲೆ ಮಣಗಸ್ಬುಟ್ಟು "
ತನ್ನ ಮೀರಾನೆ ಒಲ್ಲೀಯ "
ಅವ್ವ ಮೊಕದತುಂಬ ಮುಚ್ಚುತವ್ನೆ "
ಅಂವ ಮೊದಕತುಂಬ ಮುಚ್ಚುಬುಟ್ಟು "
ಹೊತ್ತುಕೊಂಡು ಹೊಯ್ತವ್ನೆ "
ಹೊತ್ತುಕೊಂಡು ಹೋಗಿನ್ನು "
ಆ ಬಲಮಕಾಳ ಗುಡಿಮುಂದೆ "
ಚಟ್ಟಾಯ ಇಳಿಕ್ತವ್ನೆ "
ಚಟ್ಟಾಯ ಇಳುಕ್ಬುಟ್ಟು "

ಅವನು ಕೂತುಕೊಂಡ "
ಅವಳ ಪಾದಾಯ ಹಿಡುಕ್ಕೊಂಡು "
ಅವ್ನು ಬಾಳ ಶ್ವಾಕ ಮಾಡ್ತಾನೆ "
ಅವ್ನು ಬಾಳಾ ಶ್ವಾಕ ಮಾಡ್ಕೊಂಡು "
ನಮ್ಮತ್ತಿಗೆ ಸತ್ವಂತ "
ನೀ ಸತ್ವಂತ ಆದರೆ "
ನಾ ಆಡೀದ ಮಾತಿಗ "
ನೀ ತಪ್ಪು ಬೇಸ ಅತ್ತಿಗಮ್ಮ "
ನಿನ್ನ ಕಣ್ಣೆರಡು ಅತ್ತಿಗಮ್ಮ "
ಹಾಲುಗೊಳ ನೀರುಗೊಳ "
ನಿನ್ನ ತೊಡೆ ಏಡು ಅತ್ತಿಗಮ್ಮ "
ತೆಂಗಿನ ಮರ ಆಗಲಿ "
ನಿನ್ನ ತೋಳು ಎರಡು ಅತ್ತಿಗಮ್ಮ "
ಬಾಳಾಯ ವನವಾಗಲಿ "
ನಿನ್ನ ಎದೆಯೆರಡು ಅತ್ತಿಗಮ್ಮ "
ಎರಡು ಗಿಣಿಗಾಳು ಆಗುಲೆನ್ನ "
ಗಿಣಿಗಳು ಆಗಿನ್ನು "
ಬಾಳಾಯ ವನದಲ್ಲಿ "
ಕೂತಿಕೊಳ್ಳಿ ಅತ್ತಿಗಮ್ಮ ಲೈಲೇದುಂಬಿ
ನಿನ್ನ ತಲೆ ಎರಡು ಅತ್ತಿಗಮ್ಮ "
ಸೂರಾಯಿ ಮರನಾಗಲಿ "
ಅವ ಮರಗಮಲ್ಲಿಗೆ ವನ "
ನೀ ಆಡಿದ ಮಾತಿಗೆ "
ನೀ ತಪ್ಪುಬ್ಯಾಡ ಅತ್ತಿಗಮ್ಮ "
ಅಂವ ಮರಳಿನ್ನು ಬಗುದಿನ್ನು "
ಆ ಹೆಣವಿನ್ನು ಇಡುದಾನೊ "
ಆ ಹೆಣವಿನ್ನು ಇಡಿದಿನ್ನು "
ಸಾಮಾಧಿ ಒಳಕಿನ್ನು "
ಅವ್ನು ಮಣಗಸ್ತವ್ನೆ "
ಹೆಣವಿನ್ನು ಮಣಗಸ್ಬಿಟ್ಟು "
ಮರಳನ್ನು ತಳ್ಳುತ್ತಾನೆ "
ಅವ್ನು ಸಮಾಧಿ ಕಟ್ಟುತ್ತಾನೆ "
ಸಾಮಾಧಿ ಕಟ್ಟುಬುಟ್ಟು "
ಅಂವ ಪುಟ್ಟೀಗೆ ಮರಳನ್ನು "
ತುಂಬ್ಕೊಂಡು ಚಿಕ್ಕಂವ "
ಅವರ ತಾಯಿ ಇದ್ದ ಅರಮನೆಗೆ ಲೈಲೇದುಂಬಿ

ಅಂವ ಬಂದಾನೊ ಚಿಕ್ಕಂವ "

ತಾಯಮ್ಮ ತಆಯಮ್ಮ "

ನಮ್ಮತ್ತಿಗೆ ಸುಟ್ಟೆವ್ವ "

ನಾ ಸುಟ್ಟು ಹ್ವಾಮಾಯ ಮಾಡಿ "

ನಾ ಬೂದಿಯ ತಂದೆವ್ವ "

ಸುಮ್ಮನೀರು ನನ ಕಂದ "

ನೀ ಗಾಲಾಟೆ ಮಾಡುಬೇಡ "

ನೀ ಊರಿಗೆ ಸುದ್ದಿ ಕೊಡಬೇಡ "

ಮೈದ ಮಲ್ಲಿಗೆ ದೊರೆ "

ಅಂವ ಆಡಿದ ಮಾತಿಗೆ "

ಅವ ತಪ್ಪನಿಲ್ಲ ಅತ್ತಿಗಮ್ಮ "

ಅವ್ವ ಕಣ್ಣೆರಡು ಅತ್ತುಗಮ್ಮ "

ಅವು ಹಾಲುಗೊಳ ನೀರುಗೊಳ "

ಅವ್ವ ತೊಡೆ ಎರಡು ಅತ್ತುಗಮ್ಮ "

ಅವು ತೆಂಗಿನ ವನವಾದೊ ಲೈಲೇದುಂಬಿ

ಅವ್ವ ತೋಳೆರಡು ಅತ್ತುಗಮ್ಮ "

ಬಾಳಾಯ ವನವಾದೊ "

ಅವ್ವ ಎದೆಯೆರಡು ಅಂಬಾವು "

ಏಡು ಗಿಣಿಗಾಳು ಆದವಲ್ಲೊ "

ಅವು ಬಾಳಾಯ ವನದಲ್ಲಿ "

ಏಡು ಗಿಣಿಗಳು ಕೂತಾವೆ "

ಅವ್ವ ತಲೆಯೆರಡು ಅಂಬಾವು "

ಸೂರಾಯ ವನವಾದೊ "

ಮರಗ ಮಲ್ಲಿಗೆ ಜಾಜಿ "

ದಂಡಿಗೆ ಹೋಗಿರುವ "

ರಂಗಾದ ಸ್ವಾಮಿಗೆ "

ಅವರ್ಗೆ ಕೆಟ್ಟಸ್ವಪ್ನ ಬಿತ್ತಲ್ಲೊ "

ಒಂದು ಕೇಡುಸ್ವಪ್ನ ಬಿತ್ತಲ್ಲೊ "

ಅವ್ರು ಮಂಚದ ಮ್ಯಾಗೆ ಮಲಗಿದ್ದು "

ಅವ್ರು ದಗ್ಗಾನೆ ಎದ್ದರಲ್ಲೊ "

ಅವ್ರು ಜಲುಜಲುನೆ ಬೆವತಾರೊ "

ಅವ್ರು ಕಟುಕಟುನೆ ಒದರ್ತಾರೆ "

ಕಟುಕಟುನೆ ಒದರೀರು "

ಅವ್ರು ಆಳುಕಾಳು ಕರದಾರು "

ಅವ್ರು ದಂಡುದಾಳಿ ಕರದಾರು "

ಅವ್ರು ಏನೆಂದು ಹೇಳೀರು "

ನಾ ಊರಿಗೆ ಹೋಗುತೀನಿ "
ನಂಗೆ ಕೆಟ್ಟ ಸ್ವಪ್ನ ಬಿದ್ದಾದೆ "
ನಿಮ್ಮ ದಂಡುದಾಳಿ ಜ್ವಾಕೇಯ "
ನಿಮ್ಮ ಆಳುಕಾಳು ಜ್ವಾಕೇಯ "
ನಾವು ಊರಿಗೆ ಹೊಯ್ತೀವಿ "
ಅವ್ರು ಕುದ್ರೆಸಾಲಿಗೆ ಹೋದುರು "
ಕುದ್ರ ಸಾಲಿಗೆ ಹೋಗಿನ್ನು "
ಕುದುರೇಯ ಹಿಡಕ್ಕೊಂಡು "
ಕಡುವಾಣ ಹಾಕುತವ್ರೆ "
ಕಡುವಾಣ ಹಾಕುಬುಟ್ಟು "
ಅವರು ಚಿನ್ನದ ಕತ್ತಿ ತೆಗೆದಾರೊ ಲೈಲೇದುಂಬಿ
ಚಿನ್ನದ ಕತ್ತಿ ತೆಕ್ಕಂಡು "
ಅವ್ರು ದಟ್ಟಿಗೆ ಸುತ್ತುತವ್ರೆ "
ದಟ್ಟಿಗೆ ಸುತ್ತುಕೊಂಡು "
ಅವ್ರು ಹತ್ತು ವರ್ಷದ ಪಯಣವ "
ಅವ್ರು ಐದು ವರ್ಷಕೆ ತುಳುದಾರೊ "
ಅವ್ರು ಐದು ವರ್ಷದ ಪಯಣವ "
ಅವ್ರು ಮೂರ ವರ್ಷಕೆ ತುಳುದಾರೊ "
ಅವ್ರು ಒಂದು ವರ್ಷ್ಕೆ ಬರುತಾರೆ "
ಅವ್ರು ಎಂಟು ಜಿನ್ಕೆ ತುಳುದಾರೊ "
ಎಂಟು ಜಿನದ ಪಯಣವ "
ಅವ್ರು ಒಂಜಿನ್ಕೆ ಬಂದಾರೊ "
ಒಂಜಿನ್ದ ಪಯಣವ "
ಅವ್ರು ಬಂದಾರೊ ರಂಗಯ್ಯ "
ಬಂದಿನ್ನು ರಂಗಯ್ಯ "
ಬಲಮಕಾಳಿ ಗುಡಿಮುಂದೆ "
ಪಾದ್ರಾಕ್ಷ ಮರನಯ್ಯ "
ಪಾದ್ರಾಕ್ಷ ಮರದಲಿ "
ಕುದುರೆಯ ಇಳಿದಾರೊ "
ಕುದುರೇಯ ಇಳಿದಿನ್ನು "
ಆ ಸೂರಾಯಿ ಮರಕಿನ್ನು "
ಕುದುರೆಯ ಕಟ್ಟುಬುಟ್ಟ "
ಕುದುರೆಯ ಬುಟ್ಟುಬುಟ್ಟು "
ಬಹಳ ಯೋಚನೆ ಮಾಡಿಕ್ಕೊಂಡು "
ನಾ ದಂಡಿಗೆ ಹ್ವಾಗಾಗ "
ಹಾಲಗೊಳಿಲ್ಲ ನೀರ್ಗೊಳಿಲ್ಲ "

ಸೂರಾಯಿ ಮರನಿಲ್ಲ "
ತೆಂಗಿನ ವನವಿಲ್ಲ "
ಈ ಬಾಳಾಯ ವನವಿಲ್ಲ "
ಯೋಚನೆ ಮಾಡಿಕ್ಕೊಂಡು "
ಆ ಸಾಮಾಧಿ ಮ್ಯಾಗಿನ್ನು "
ತನ್ನ ಪಟ್ಟವಸ್ತ್ರ ಹಾಸುಬುಟ್ಟ "
ತನ್ನ ಪಟ್ಟವಸ್ತ್ರ ಹಾಸುಬುಟ್ಟು ಲೈಲೇದುಂಬಿ
ಸಮಾಧಿ ಕಾಣುದಯೆ "
ಅವ್ನು ಮಣಗವ್ನೆ ರಂಗಯ್ಯ "
ಬಾಳಾಯ ವನದಲ್ಲಿ "
ಏಡು ಗಿಣಿಗಳು ಕೂತಾವೆ "
ಗಿಣಿಗಳು ಕೂತುಕೊಂಡು "
ಅವು ಒಂದಕ್ಕೊಂದು ನೆಗನಾಡಿ "
ಅವು ಕಿಲಕಿಲನೆ ನೆಗನಾಡಿ "
ಅಕ್ಕಯ್ಯ ಅಕ್ಕಯ್ಯ "
ಒಂದು ಪರಸಂಗ ಹೇಳಕ್ಕ "
ಹಿಂದ ಹ್ವಾದದ ಹೇಳುಲೆ "
ಮುಂದೆ ಬರಾದ ಹೇಳುಲೆ "
ಮುಂದೆ ಬರುವದ ಯಾರು ಬಲ್ಲರು "
ಹಿಮದೆ ಹ್ವಾದದ ಹೇಳುಮಂತೆ "
ಪರಸಂಗ ಹೇಳುತೀನಿ "
ನೀ ಗ್ಯಾನೇಸಿ ಕೇಳಕ್ಕ "
ಹುಚ್ಚಿನ ಬಾವಯ್ಯ "
ಬೆಪ್ಪಿನ ಬಾವಯ್ಯ "
ಅವ್ರು ದಂಡಿಗೆ ಹ್ವಾದರಂತೆ "
ಅವ್ರು ಅತ್ತಮ್ಮ ಅಂಬವಳು "
ಹಾವಿನಲಡುಗೇಯ "
ಅವ್ ಮಾಡ್ಸೀಳು ಅತ್ಯಮ್ಮ "
ಲವ್ ಮಾಡ್ಸಿನ್ನು ಅತ್ಯಮ್ಮ "
ಲವ್ ಮಾಡ್ಸಿನ್ನು ಅತ್ಯಮ್ಮ "
ಅಂದ ಚೆಂದದಲಡುಗೆ "
ಅವ್ಳು ಮಾಡೀಲೋ ಸತ್ವಂತ "
ಅವ್ಳು ಮಡಗ್ಬುಟ್ಟು ಲೈಲೇದುಂಬಿ
ಅವ್ಳು ಅತ್ತಿದ್ದ ಅರಮನೆಗೆ "
ಅವ್ಳು ಹ್ವಾದಳು ಚಿಕ್ಕೊನ್ನಿ "
ಹೋಗಿನ್ನು ಚಿಕ್ಕೊನ್ನಿ "

ನೀವು ಅತ್ತಮ್ಮ ಅತ್ತಮ್ಮ "
ನೀವು ಊಟಕ್ಕೆ ಬಣ್ಣೈವ್ವ ಲೈಲೇದುಂಬಿ
ನಾ ಊಟಕ್ಕೆ ಬರುವಲ್ಲೆ "
ಸ್ವಾಮಾರ ಒಂದೊತ್ತು "
ನಿಮ್ಮಾವನ ಕರೆಯವ್ವ "
ಮಾವಯ್ಯ ಮಾವಯ್ಯ "
ನೀವು ಊಟಕ್ಕೆ ಬಣ್ಣಪ್ಪ "
ನಾ ಊಟಕ್ಕೆ ಬರುವಲ್ಲೊ "
ನಾ ಮಂಗಳವಾರ ಒಂದೊತ್ತು "
ನನ್ನ ಮೈದ ಎಲ್ಲಿಗೆ ಹೋದ "
ಚೆಂಡಾಡಕ್ಕೋಗವ್ರೆ "
ಅವ್ರನ್ನು ಕರೆಯಮ್ಮ "
ನೀ ಹುಚ್ಚಿನ ಬಾವಯ್ಯ "
ನೀ ಬೆಪ್ಪಿನ ಬಾವಯ್ಯ "
ನಾ ಪರಸಂಗ ಹೇಳುತೀನಿ "
ನೀ ಗ್ಯಾನೇಸಿ ಕೇಳಪ್ಪ "
ಮೈದ ಮಲ್ಲಿಗೆ ದೊರ "
ಚೆಂಡಾಡಕ್ಕೋಗಿದ್ದು "
ಒಂದು ಲೆಗ್ಗ ಅಡಕ್ಕೋಗಿದ್ದು "
ಅವ್ರು ಮನೆಗಿನ್ನು ಬರುತವ್ರೆ "
ಮನೆಗಿನ್ನು ಬಂದಿನ್ನು "
ಅವ್ರ ಅತ್ತಿಗೆ ಸಾರುತವ್ರೆ "
ನಮ್ಮ ಅತ್ತಿಗೆ ಸತ್ವಂತೆ ಲೈಲೇದುಂಬಿ
ಇವ್ರು ನೀರಿಗೆ ಹೋಗವ್ರೆ "
ಅವ್ರು ದಾರಿ ದಆಇ ನೋಡುತವ್ರೆ "
ದಾರಿ ದಾರಿ ನೋಡುಬುಟ್ಟು "
ಅವ್ರ ತಾಯಿದ್ದು ಅರಮನೆಗೆ "
ಹ್ವಾದಾನು ಚಿಕ್ಕಂವ "
ಹೋಗಿನ್ನು ಚಿಕ್ಕಂವ "
ಬಹಳ ಹೊಟ್ವಾಯ ಹಸೀತದೆ "
ನನ್ಗೆ ಊಟಕ್ಕೆ ಇಕ್ಕವ್ವ "
ಆಗಂತ ಸಾರುತವ್ನೆ "
ನೀ ಅರಮನೆಗೆ ಹೋಗಪ್ಪ "
ನಿಮ್ಮತ್ತಿಗೆ ಅಲ್ಲವ್ನೆ "
ನಿಮ್ಮತ್ತಿಗೆ ಅವಳಪ್ಪ "
ಅರಮನೆಲಿ ಅವಳಪ್ಪ "

ನೀ ಊಟಮಾಡು ನನ ಕಂದ "
ದಾರುದಾರಿ ನೋಡುತಾನೆ "
ಅವನು ಏಡುಕೂಗು ಕೂಗುತಾನೆ "
ಏಡುಕೂಗು ಕೂಗಿಬಿಟ್ಟು "
ಮನೆಗಿನ್ನು ಬಂದಿನ್ನು "
ಅವರಣ್ಣಿದ್ದಲರಮನೆಗೆ "
ಅಂವ ಹ್ವಾದನು ಚಿಕ್ಕಂವ "
ಹ್ವಾಗಿನ್ನು ಚಿಕ್ಕಂವ "
ಚಿತ್ರಪಟವ ನೋಡುತವ್ನೆ "
ಚಿತ್ರಪಟವ ನೋಡುಬುಟ್ಟು "
ಅವ್ನ ಎಡಕೆಬಲಕೆ ತಿರುಗಿಬುಟ್ಟು "
ಅವ್ನ ಎಡಕೆಬಲಕೆ ತಿರುಗುನೋಡಿ ಲೈಲೇದುಂಬಿ
ಅವರತ್ತಿಗೆ ಸತ್ವಂತೆ "
ಅವನು ಕಣ್ಣಲ್ಲಿ ಕಂಡನಲ್ಲೊ "
ಕಣ್ಣಲ್ಲಿ ಕಂಡ್ಕಂಡು "
ಅವ್ನ ಬಾಯ್ ಬಾಯ ಬಡುತವ್ನೆ "
ಬಾಯ್ ಬಾಯ ಬಡುಕ್ಕೊಂಡು "
ನಮ್ಮಣ್ಣಯ್ಯ ದಂಡಿಗ್ಹೋದ "
ನಮ್ಮತ್ತಿಗೆ ಸತ್ತೋದ "
ಅಂವ ಹಾಗಂದು ಚಿಕ್ಕಂವ "
ಬಾಳ ಗಲಾಟೆ ಮಾಡುತಾನೆ "
ನೀ ಹುಚ್ಚೀನ ಬಾವಯ್ಯ "
ನಾವ್ ಪರಸಂಗ ಹೇಳುತ್ತಿದ್ರೆ "
ನೀನು ನಿದ್ದೇಯ ಮಾಡೇಯ "
ನೀ ಬೆಪ್ಪೀನ ಬಾವಯ್ಯ "
ನೀ ಗ್ಯಾನೇಸಿ ಕೇಳಪ್ಪ "
ಹಾವಿನಲಡುಗೇಯ "
ಅವರತ್ತಮ್ಮ ಮಾಡ್ಸಿನ್ನು "
ಮಾಡಿದಂತೆ ಅಡಗಿನ್ನು ಲೈಲೇದುಂಬಿ
ಅವರೊಬ್ಬರು ಉಣ್ದೆಹ್ವಾದ್ರು "
ಒಬ್ಬಾರು ಬರಲಿಲ್ಲ "
ಅವಳೇಯೆ ಉಂಡಾಳೊ "
ಅವ್ಳ ಸತ್ತೋದ ಚಿಕ್ಕೊನ್ನಿ "
ನೀ ಹುಚ್ಚಿನ ಬಾವಯ್ಯ "
ನೀ ಬೆಪ್ಪಿನ ಬಾವಯ್ಯ "
ದಂಡಿಗೆ ಹ್ವಾದರಂತೆ "

ನೀ ಸಾಮಾಧಿ ಕಾಣದಲೆ ”
ನೀ ನಿದ್ದೆಯ ಮಾಡೇಯ ಲೈಲೇದುಂಬಿ
ಅವು ಹಾಗಂದು ಗಿಳಿಗಳು ”
ಅವು ಒಂದಕ್ಕೊಂದು ಅತ್ತಿನ್ನು ”
ಅವು ಪಟಪಟನೆ ಕಣ್ಣೀರ ”
ಅವು ಅತ್ತಂತ ಕಣ್ಣೀರು ”
ಅವ್ನ ಮ್ಯಾಗೆ ಬಿತ್ತಲ್ಲ ”
ಅಂತು ನೋಡುತವ್ನೆ ”
ಅಂತ್ಕಂಡು ನೋಡುಬುಟ್ಟು ”
ಅವ್ನು ಉಸ್ಸಂತ ಏಳುತವ್ನೆ ”
ಎದ್ದಿನ್ನು ಕೂತುಕ್ಕೊಂಡು ”
ಬಹಳ ಯೇಚಾನೆ ಮಾಡುತಾನೆ ”
ಆ ಗಿಣಿಗಳು ಕೂತುಕ್ಕೊಂಡು ಲೈಲೇದುಂಬಿ
ಸಮಾಧಿ ಮ್ಯಾಗಿನ್ನು ”
ನೀ ಮಣಗಿದ್ದ ಬಾವಯ್ಯ ”
ನೀ ಮ್ಯಾಲೀಕೆ ಏಳಪ್ಪ ”
ಸಮಾಧಿ ನೋಡಯ್ಯ ”
ಸಮಾಧಿ ನೋಡಿನ್ನು ”
ರಂಗಯ್ಯ ಎದ್ದಾನು ”
ಎದ್ದಿನ್ನು ರಂಗಯ್ಯ ”
ಅವ್ನು ಎಡಕೆ ಬಲಕೆ ನೋಡುತಾನೆ ”
ಅವ್ನು ಸಾಮಾಧಿ ಕಂಡನಲ್ಲೊ ”
ಸಾಮಾಧಿ ಕಂಡುಕ್ಕೊಂಡು ”
ಬಾಳ ಶ್ವಾಕಾಯ ಮಾಡುಕೊಂಡು ”
ಅವ್ನು ಮರಳನ್ನು ಬಗೆದಾನೊ ಲೈಲೇದುಂಬಿ
ಹೆಣವಿನ್ನು ಕಿತ್ತಾನೊ ”
ಹೆಣವಿನ್ನು ಕಿತ್ತಿನ್ನು ”
ಮ್ಯಾಲೀಕಿ ಎತ್ತುತವ್ನೆ ಲೈಲೇದುಂಬಿ
ಮ್ಯಾಲೀಕಿ ಎತ್ತುಕೊಂಡು ”
ಅಂವ ತೊಡೆಯ ಮೇಲೆ ಕುಂಡಿಸ್ಕೊಂಡ ”
ತೊಡೆಮೇಲೆ ಕುಂಡಿಸ್ಕೊಂಡು ”
ಬಾಳ ಶ್ವಾಕಾಯ ಮಾಡುತವ್ನೆ ”
ಅವ್ನು ಶೆಖೆಯನ್ನು ಹೂಡೆತವ್ನೆ ”
ಬಾಳ ಕಿಚ್ಚನ್ನು ಮಾಡುತವ್ನೆ ”
ಅವ್ನು ಅತ್ತಂತ ಕಿಚ್ಚನ್ನು ”
ಆ ಪಾರೋತಿಗರುವಾಗಿ ”

ಪಾರೋತಿ ಪರಮೇಶ್ವರರು "
ಅವ್ರು ಅಲ್ಲಿಗೆ ಬರುತಾರೆ "
ಅವು ಅಲ್ಲಿಗೆ ಬಂದಿನ್ನು "
ಅವ್ರು ಮಂತ್ರಿಸಿ ಗುಳಿಗಿನ್ನು "
ಗುಳಿಗೇಯ ಮಡಗಿದರು "
ಅವ್ಳ ಉಸ್ಸಂತ ಎದ್ದಾರೆ "
ಅವ್ಳ ಕತ್ತನ್ನು ತಬ್ಬುಕೊಂಡು "
ಬಾಳ ಶ್ಯಾಕಾಯ ಮಾಡುತವ್ರೆ "
ಶ್ಯಾಕಾಯ ಮಾಡುಕೊಂಡು "
ನಿನ್ನ ಹೊಡೆದವ್ರು ಯಾರೆಣ್ಣ "
ನಿನ್ನ ಬಡದವ್ರು ಯಾರೆಣ್ಣ "
ನೀನು ನನ್ನೊಂದಿಗೆ ಅಡೆಣ್ಣೆ "
ಯಾರೂವೆ ಹೊಡೆಲಿಲ್ಲ "
ಯಾರೂವಿ ಬಡಿನಿಲ್ಲ "
ಅವರತ್ತಮ್ಮ ಅಂಬಾರು "
ಅವ್ರು ಹಾವಿನಲ್ಲಡುಗೇಯ "
ಅವ್ರು ಮಾಡ್ಸೀರು ಅತ್ಯಮ್ಮ "
ನಂಗಡುಗೇಯ ಮಾಡಾದು "
ನಂಗೆ ಬರದಿಲ್ಲ ಅತ್ಯಮ್ಮ "
ಬರದಿದ್ದರೆ ಅಡುಗಾಯ "
ನಾ ಹೇಳಿಕೊಟ್ಟ ಮಾಡೆಂದ ಲೈಲೇದುಂಬಿ
ಅದರ ಕಳ್ಳನ್ನು ತೆಗೆಯೆಣ್ಣೆ "
ಆದ ಕಜ್ಜಾಯ ಮಾಡೆಂದ "
ರೊಟ್ಟೆಯ ಸುಡೆಂದ "
ಅದರ ಹಲ್ಲನ್ನು ತೆಗೆದಿನ್ನು "
ನೆಲ್ಲಕ್ಕಿ ಅಣ್ಣವೊಂದ "
ಅದರ ತಲೆಯನ್ನು ತೆಗೆದಿನ್ನು "
ತಾಳ್ದೂವ ಮಾಡೆಂದ "
ಅದರ ನಾಲಿಗೆ ತೆಗೆದಿನ್ನು "
ನೀ ದ್ವಾಸೇಯ ಮಾಡೆಂದ "
ಅಂದಚಂದದ ಅಡಿಗೆಯ "
ನಾ ಮಾಡಿಬುಟ್ಟು ಅಡಿಗೇಯ "
ನಾ ಊಟಕ್ಕೆ ಕರದಿನ್ನು "
ಅವ್ರು ಒಬ್ಬಾರು ಉಣಲಿಲ್ಲ "
ಅವ್ರು ಒಬ್ಬಾರು ಬರುನಿಲ್ಲ "
ನಾನೇಯೆ ಉಣುತೀನಿ "

ಮಾಡಿದಂತ ಅಡುಗೇಯ "

ನಾನೇಯ ಉಣುತೀನಿ "

ಹಾಗಂತ ಉಂಡೇನೊ "

ಉಂಡಿನ್ನು ನಾನಿನ್ನು "

ನಮ್ಮೈದಮಲ್ಲಿಗೆ ದೊರೆ "

ಚೆಂಡಡಾಡುಕ್ಕೋಗಿದ್ದು "

ಅವ್ರು ಲೆಗ್ಗ ಅಡಕ್ಕೋಗಿದ್ದು "

ಅವ್ರು ಮನಗಿನ್ನು ಬರುತವ್ರೆ "

ಮನೆಗಿನ್ನು ಬಂದಿನ್ನು "

ನಾ ಸತ್ತೋಗಿ ಮಣಗಿದ್ದಿ "

ಅವ್ರು ಒಂದು ಸಾರಿ ಸಾರುತವ್ರೆ "

ಒಂದು ಸಆರಿ ಸಾರಿಬುಟ್ಟು "

ಇವ್ರು ನೀರಿಗೆ ಹೋಗವ್ರೆ "

ಅವ್ರು ದಾರಿದಾರಿ ನೋಡುಬುಟ್ಟು "

ಅವ್ರು ಏಡು ಕೂಗು ಕೂಗುತವ್ರೆ "

ಅವ್ರು ಅರಮನೆಗೆ ಬರುತವ್ರೆ "

ಅರಮನೆಗೆ ಬಂದಿನ್ನು ಲೈಲೇದುಂಬಿ

ಅವ್ರು ಚಿತ್ರಪಟವ ನೋಡುತವ್ರೆ "

ಚಿತ್ರ ಪಟವ ನೋಡುಬುಟ್ಟು "

ಅವ್ರು ಎಡಕಬಲಕ ತಿರುಗಿನೋಡಿ "

ಅವ್ರು ಅತ್ತಿಗೆ ಕಂಡರಲ್ಲ "

ಅವ್ರು ಬಾಳ ಶ್ವಾಕ ಮಾಡುತವ್ರೆ "

ಅವ್ರು ಬಾಯ್‌ಬಾಯ ಬಡಕ್ಕೊಂಡ್ರು "

ನಮ್ಮ ಅಣ್ಣಯ್ಯ ದಂಡಿಗೆ ಹೋದ "

ನಮ್ಮತ್ತಿಗೆ ಸತ್ತೋದ "

ಅವರ ತಾಯಿದ್ದ ಅರಮನೆಗೆ "

ತಾಯಮ್ಮ ತಾಯಮ್ಮ "

ನಮ್ಮತ್ತಿಗೆ ಸತ್ತೋದ "

ನಮ್ಮಣ್ಣಯ್ಯ ದಂಡಿಗೆ ಹೋದ "

ನಮ್ಮತ್ತಿಗೆ ಕೊಂದಲ್ಲ "

ನೀನು ಹಾಳಾದ ಪಾಪಿಮುಂಡೆ "

ಚಿಕ್ಕವನು ನನಕಂದ "

ನೀ ಗಾಲಾಟೆ ಮಾಡಬೇಡ "

ನೀ ಊರಿಗೆ ಸುದ್ದಿ ಕೊಡಬೇಡ "

ನೀ ಸುಮನೀರು ನನಕಂದ "

ನೀ ಹಿತ್ತಲಿಗೆ ಹೋಗಪ್ಪ "

ಒಂದು ಕಳ್ಳಿಮರನ ತತ್ತಪ್ಪ "

ನೀ ಒಂದು ಕಬ್ಬಿ ಹಂಬ ತತ್ತಪ್ಪ "

ನೀ ಚಟ್ಟಾಯ ಕಟ್ಟಯ್ಯ "

ಚಟ್ಟಾಯ ಕಟ್ಟುಬುಟ್ಟು "

ನೀ ಹೊತ್ತುಕೊಂಡು ಹೋಗಪ್ಪ "

ಹೊತ್ತುಕೊಂಡು ಹೋಗಿನ್ನು "

ಅಲ್ಲಿ ಚಟ್ಟಾಯ ಇಳುಕಪ್ಪ "

ಚಟ್ಟಾಯ ಇಳುಕುಬುಟ್ಟು "

ನೀ ಸುಟ್ಟು ವಾಮಾಯ ಮಾಡಿ "

ನನ್ಗೆ ಬೂದಿಯ ತಂದುಕೊಡು "

ಅವ್ರು ಹಾಗಂದ್ರು ಅತ್ಯಮ್ಮ "

ಅವ್ನು ರಂಗಯ್ಯ ಅಂಬುವನು "

ಬಹಳ ಕ್ವಾಪಾಯ ಮಾಡುಕೊಂಡು ಲೈಲೇದುಂಬಿ

ಹೆಡ್ತಿಯ ಎತ್ತಿನ್ನು "

ಹೆಡ್ತಿಯ ಎತ್ತಿಕೊಂಡು "

ಕುದ್ರೆಮೇಲೆ ಕುಂಡಸ್ಕೊಂಡು "

ತಾ ಮುಂದುಗಡೆ ಕೂತುಕೊಂಡು "

ಊರಿಗೆ ಬತ್ತವ್ನೆ "

ಅವ್ರ ತಾಯಮ್ಮ ಅಂಬವಳು "

ಒಂದಾರತಿ ತಕ್ಕಂಡ "

ಒಂದ ಹವಳದಾರತಿ ತತ್ತವ್ಳೆ "

ಒಂದು ಮುತ್ತಿನಾರತಿ ತತ್ತವ್ಳೆ "

ತಾಯಮ್ಮ ತಾಯಮ್ಮ "

ನೀ ಯ್ಯಾಕ ಬಂದ್ಯಮ್ಮ "

ನೀ ಯ್ಯಾಕ ಬಂದ್ಯವ್ವ "

ನೀ ತಂದ ಸೊಸೆಯೆಲ್ಲಿ "

ನಾ ತಂದ ಸೊಸೆಯಯ್ಯ "

ಅವ್ಳು ಕವಳುತ್ತ ಮಣಗವ್ಳೆ "

ಕಣ್ಣು ಹೂಅದರ "

ಮುಚ್ಚಿಕೊಂಡು ಬಾರೇಳು "

ಚಿಕ್ಕವ್ನೆ ನನಕಂದ "

ಅವ್ಳು ಹೊಟ್ಟೆನೋವು ಎತಕೊಂಡು "

ಮಣಗವ್ಳೆ ಕಂದಯ್ಯ "

ಹೊಟ್ಟನೋವು ಆದರೆ "

ಅವ್ಳ ಬೊಕ್ಕಂಡು ಬಾರೇಳು "

ಅಯ್ಯಯ್ಯೋ ನನ್ನ ಗಂಗವ್ವ "

ಅವರಪ್ಪನ ಮನೆಗೋಗಿ "
ಎಂಟು ಜಿನ ಆಗೀತು "
ಅವನಿಗೆ ಕ್ವಾಪವು ಬಂದೀತು "
ಅವನು ದುರುದುರನೆ ನೋಡುತವ್ನೆ "
ಅವನು ನೊರನೊರನೆ ಹಲ್ಲುಕಡಿದು "
ಅವನು ಚಿನ್ನದ ಕತ್ತಿ ತೆಗೆದಾನು "
ಅವನು ಚಿನ್ನ ಕತ್ತಿ ತೆಗೆದಿನ್ನು "
ಅವ್ರ ತಾಯಮ್ಮ ಶಿರಸೀಗೆ "
ಅವನು ಶಿರಸೀಗೆ ಮಡಗಿದ್ರೆ ಲೈಲೇದುಂಬಿ
ಅವ ಸತ್ವಂತ ಚಿಕ್ಕೊನ್ನಿ "
ಆ ಕುದ್ರೆಯಿಂದ ಇಳಿದಾಳು "
ಕುದ್ರೆ ಬುಟ್ಟು ಇಳಿದಾಳು "
ಅವ್ಳು ಗಂಡನ ಮುಂಗೈಯ "
ಅವ ಹಿಡಕೊಂಡ ಸತ್ವಂತ "
ನಮ್ಮತ್ತಾಯ ಹೊಡಬೇಡಿ "
ನನ್ನಾನೆ ಹೊಡೆಯೇರಿ "
ಅವ್ರು ಚಿಕ್ಕಂದಿನಲ್ಲಿ ತಂದಾರು "
ನನ್ನ ಮೈಕೈಯ ತೊಳೆದಾರು "
ನನ್ಗೆ ಸೀರೇಯ ಹಿಂಡೀರು "
ನಮ್ಮತ್ತಾಯ ಹೊಡಬೇಡಿ "
ನನ್ನಾನೆ ಹೊಡೆಯಾರಿ "
ಅವ್ಳು ಹಾಗಂದ ಚಿಕ್ಕೊನ್ನಿ "
ಅವ್ಳು ಗಂಡನ ಮುಂಗೈಯ "
ಹಿಡಕೊಂಡ ಸತ್ವಂತ "

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು :**

೧) ಮುಳ್ಳು ಬಿದ್ದಾವೆ ಮುಗಲುದ್ದ; ಕಾಳೇಗೌಡ ನಾಗವಾರ, ಬಯಲುಸೀಮೆಯ ಲಾವಣಿಗಳು, ಜನಪದ ಸಾಹಿತ್ಯ ಅಕಾಡೆಮಿ ಮೈಸೂರು ೧೯೭೩, ಪು.ಸಂ. ೧೧೫-೧೧೬.

೨) ಹಾವುತಿಂದ ಸೊಸೆ; ಮತಿಘಟ್ಟ ಕೃಷ್ಣಮೂರ್ತಿ, ಕನ್ನಡ ಜನಪದ ಸಾಹಿತ್ಯ ಭಂಡಾರ, ಗುರುಮೂರ್ತಿ ಪ್ರಕಾಶನ ಬೆಂಗಳೂರು ೧೯೭೫, ಪು.ಸಂ. ೭೯೯-೮೦೧.

೩) ಆವಿನ್ನ ಕೊಯ್ದಾಳೆ ಆಮ್ರಾವ ಮಾಡಿದಾಳೆ; ಅಂದನೂರು ಶೋಭ, ಕೊಂಬೆ ರೆಂಬೆಲ್ಲ ಎಳೆಗಾಯಿ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೮, ಪು.ಸಂ. ೭೧-೭೩.

* ಹಾವಿನ ಪದ; ದೊರೆಸ್ವಾಮಿ ಹೊರೆಯಾಲ ನಾಲಿಗೆ ಅಕ್ಕರತ ಒಡದವ್ವ, ನುಡಿ ಪ್ರಕಾಶನ, ಮೈಸೂರು ೧೯೭೪, ಪು.ಸಂ. ೪೬-೬೭.

# ೧೫. ತಂಗಿ ಮಾದಿ *

ವಬ್ಬಳ್ಳ ತಾಯಿಗೆ
ಏಳು ಜನ ಗಂಡು ಮಕ್ಳು
ಏಳು ಜನಿವ್ ನೆಡಗೀಗೆ
ವಬ್ಬುಳೆ ತಂಗಿ ಮಾದಿ

ಅವ್ಳು ಹಾಲುಂಬ ಯೇಳಿದಲ್ಲಿ
ತಾಯಾದ್ರು ಸಂದೋಳೆ
ಕೂಳುಂಬಾ ಯೇಳಿದಲ್ಲಿ
ತಂದೀಯೂ ಸಂದ್ ಹೋದ

ಯೇಳಜನ ರಣದೀರೂ
ಸಾಕೂರೂ ಸಲುಗೀರೂ
ಹೆರಿಯಣ್ಣ ಲಂಬಾನ
""ಕೇಳೆ ಕೇಳೆ, ತಂಗಿ ಮಾದಿ,

ನಿಂಗ್ ಯೇನು ಚೆನ್ನಾ ಬೇಕೆ ತಂಗಿ ?"
ನಂಗೆ ಸರು ಚೆನ್ನಾ ವಿದ್ದವಣ್ಣ,
ನನ್ ವಾಲಿಗ್ ಮಾಗಾಯ್ ಇಲ್ಲಂದ"

ಅಷ್ಟು ಮಾತು ಕೇಳೀದ
ತಮುದೀರ ಕರುದೀದಿ
""ನಾವ್ ಹೇಳು ಜನ ಕೂಡುಕೀ
ನಮು ತಂಗಿ ಮಾದಿಗೆ

ವಾಲಿ ಮಾಗಾಯ್ ಗೈಸುವೋ
ನಾವ್ ಯೇಳ್ ಹಡ್ಗಾ ಕಡಸೂವೋ
ಮುತ್ತು ರತನಾ ತುಂಬೂವೋ
ಪರು ಬಂದರಕ್ ಹೋಗಬೇಕು

ಲಷ್ಟು ಮಾತಾ ಹೇಳುವಾಗೇ
ಯೇಳು ಜನ ಲಣದೀರು
ಯೇಳ್ ಹಡ್ಗಿನ್ ಕಡುಸೀರು
ಮುತು ರತ್ನಾ ತುಂಬೀದೋ

ಯೇಳು ಜನ ಅಣದೀರೂ
“”ಕೇಳಿ ಕೇಳಿ ಮಡ್ಡಿ, ಕೇಳಿ
ನಾವೆ ಹೇಳು ಜನ ಅಣದೀರು
ನನು ತಂಗಿ ಮಾದಿಗೆ

ನಾವ್ ವಾಲೆ ಮಾಗಾಯ್ ತರುತೇವೆ
ನೀನೀಗ ನನು ತಂಗಿ
ನಾನುಂಬಾಲೂಟವಿಕ್ಕೆ
ನಾನೊರಗೂ ಸದುರೀಲಿ

ಪಗಡಿ; ಆಡಾತಿರಲಂದಾ
“”ಬೆಂಕೀಗೇ ಕಳ್ಗಬೇಡೀ
ನೀರೀಗೆ ಕಳ್ಗಬೇಡೀ”
ಅಂದ್ ಬುದ್ಧಿ ವರುದೀನು

“”ಪರ್ ಬಂದರಕೆ ಹೋಗಿ ಬತ್ತೊ”
ಅಷ್ಟು ಮಾತಾ ಹೇಳುರಾಗೆ
ಪರು ಬಂದರಕೆ ಹಡುಗೋದ
ಪರು ಬಂದರಕೆ ಹೋಗುವಾಕೂ

ಅಣ್ ಹೋಗೀ ಮೂರು ದಿವ್ಸಾ
ಹೆರಿಯಣ್ಣಾನ್ ಹಿಂಡುತಿ
“”ಕೇಳೇ ಕೇಳೆ ತಂಗಿ ಮಾದಿ
ಊಟಕೆ ಬಾರ್ ಹೆಣ್ಣೆ”

ಊಟಕೇ ಬಂದಾಳು
ಮೂರು ದಿನದಾ ಹುಳಿ ಅನ್ನ
ಆರು ದಿನದಾ ಹುಳಿ ಮಜ್ಗಿ
ಮುಕ್ಕಾದ ಬಟಲಾಗೆ

ಮಾದಿಗುಂಬಾಕಿಕವಾರೋ
ಹುಳುವಾದುಪ್ಪಿನ ಕಾಯಿ
“”ಉಣ್ಣಾಕೆ ನಡಿ, ಯೆಂದೋ
ಹುಳಿ ಬಾಳ ಲತ್ತೀಗೇ”

“”ಬೇಕಾದಾರುಣೆ ಹೆಣ್ಣೇ
ಬೇಡುದೀರೇ ಬಿಡೆ ಹೆಣ್ಣೇ”

ಲಷ್ಮುಮಾತಾ ಹೇಳುರಾಗೆ
“”ಕೇಳೆ ಕೇಳೆ ತಂಗಿ ಮಾದಿ,

ನೀ ಉಂಡುಂಡು ಕುಳುಬೇಡಾ
ಹುಂಡೆಮ್ಮಿಗೆ ಹುಲ್ ಕೊಯ ಬಾರೆ
ಜೊಡ್ಡು ಕತ್ತಿ ಕೊಡುವಾರೋ
ಹರ್ಕ ಹೆಡ್ಗಿ ಕೊಡುವಾಳೋ

“”ಹುಂಡುಮ್ಮಿಗ್ ಹುಲ್ ಕೊಯ್ಯಾಕೆ ಹೋಗೆ”
ಹರ್ಕ್ ಹೆಡ್ಗಿಲಿಡುಕಂಡ
ಬೊಡ್ಡು ಕತ್ತಿ ತಕ್ಕಂಡು
ಹುಲ್ ಕೊಯ್ವಲ್ ಹೋದಳೆ

ಹುಲು ಕೊಯ್ವಲ್ ತೆಳಿಲಿಲ್ಲ
ನಡುಕ್ಕೆಯ ಕ್ಯೊಕಂಡು
ಗೋಳಗುಟ್ಟಿ ಆಳುತಾಳೇ
ಬೇಡು ತಿಂಬಾ ಬೇಡಜ್ಜೀ

ಅವ್ವ ಬೇಡೂಕೆ ಹ್ಯೊ ಟೀಳು
ಲಾ ಹಾದಿಲ್ ಹೋಗುವಜ್ಜಿ
ಅವ್ವ ಈ ಹಾದಿಲಿ ಬರುವಾಳೊ

“”ಯೇನಾಯ್ತೇ ಮೊಮ್ಮಗಳೇ ?”
ಅಂದಾರೂ ಕೇಳ್ಳಜ್ಜೀ
“”ನನ್ಗ್ ಯೇಳು ಜನ ಲಣುದೀರೇ
ಹಾಲುಂಬಾ ಯೇಳಿದಲ್ಲಿ
ನನ್ ತಾಯಾರೂ ಸಂದೋಳೂ

ಕೂಳುಂಬಾ ಯೇಳಿದಲ್ಲಿ
ತಂದೀಯೂ ಸಂದ್ ಹೋದ
ನನ್ ಯೇಳು ಜನ ಲಣುದೀರು
ನನ್ ಸಾಕೀರೂ ಸಲುಗೀರು

ನಾ ಬುದ್ದಿಪರಕಾರ ಇದೆನಜ್ಜಿ
ನನ್ ಹೆರಿಯಣ್ಣ ಲಂಬನು
“”ಕೇಳೆ ಕೇಳೆ ತಂಗಿ,” ಯಂದ
“”ನಿಂಗ್ ಯೇನು ಚೆನ್ನವಿದ್ದೊ ತಂಗೀ ?”

ಅಷ್ಟು ಮಾತಾಲೇಳುರಾಗೆ
ನನ್ಗೆ ವಾಲೆ ಮಾಗಾಯಾಗುಬೇಕು
ಅಣ್ಣದೀರೂ ಯೇಳು ಜನ
ನಾವ್ ಕೂಡ ಹುಟ್ಟಿದ ಪಾಶಿಗೆ

ಅವ್ನಿಗೆ ವಾಲಿಗೆ ಮಾಗಾಯ್ಗೈಸೂವೋ
ನಾವ್ ಯೇಳ್ ಹಡ್ಗಾ ಕಡಸೂವೋ
ಮುತ್ತೂ ರತ್ನಾ ತುಂಬೂವೋ
ನಾವ್ ಪರುಬಂದರಕ್ ಹೋಗುಬೇಕು

ಅವ್ರೆ ಮುತ್ತು ರತ್ನಾ ತುಂಬಿರು
ಅಣುದೀರು ಯೇಳು ಜನ
ನಾವ್ ಪರು ಬಂದರಕೆ ಹೋತಂದೊ
ತಮ್ ಹಿಂಡಾರ ಕರುಕಂಡು

ನನು ತಂಗೀ ಬಲು ಜೋಕೆ
ಪರು ಬಂದರಕ್ಕೆ ಹೋದ ಹುಡುಗರು
ಈ ಯಣುದೀರು ಹೇಳಿ ಹೋಗಿರು
ಅಣ್ಣದೀರೂ ಹಿಂಡಾರೂ

ಹುಲ್ ಕೊಯ್ಯಾಕ್ ಹೇಳೀರೂ
ನಂಗ್ ಹುಲ್ ಕೊಯ್ಯಲ್ ತೆಳಿಲಿಲ್ಲ
ನಾ ನಡುಕ್ಕೆಯ ಕೊಯ್ಕಂಡೆ
ಅಜ್ ಮುದ್ಕಿ ಲಂಬಳೂ
ಹುಲ್ಲಾರು ಕೊಯ್ದೀಳೂ

ಅಜಿ ಮುದ್ಕಿ ಹೇಳೀಳು
ನೀ ಮನಿಗೋಗೆ “”ಲಂದಾಳು
ನಾ ನಿನ್ನಾ ಪಡೆದ ಮಗಳು

ನೀ ನನ್ನಾ ಪಡ್ಡೆ ತಾಯಿ
ನಿನ್ನ ಸಂಗಡ ಬರುತ್ತೇನೆ
ಅಜ್ಜಿ ಕೂಡೆ ನೆಡುದಾಳು
ಗುಬ್ಬಿಯ ಗೂಡಜ್ಜಿ

ಅವಳ್ ಹೋದಾ ಮೂರ್ತಾಕೆ
ಏಳು ನೆಲಿ ಮನಿಯಾದೊ

“”ಕೇಳೆ ಕೇಳೆ ಮೊಮ್ಮಗಳೇ
ಇದು ನನ ಮನಿ ಅಲ್ಲಂದ್ಲು”

“”ಕೇಳೆ ಕೇಳೆ ತಾಯಿ, ಕೇಳೇ
ನಿನ್ನ ಪುಣ್ಯದಲ್ಲಾದುಮನೆ
ಗಜ್ಜೀನಾ ಗಡುಮನೆ
ಏಳು ನೆಲಿ ಮೆತ್ತಿನ ಮೇನೆ

ಚೆನ್ನಾದಾ ತೊಟ್ಟಿಲು
ಆ ತೊಟ್ಟಿಲಾಗೆ ವರಗೂಳು
ಅಣದೀರು ಹೋಗಿಯೇ
ಏಳೂರುಸಾದ ಮದ್ದಿಯಾದೊ

ಅವ್ರು ಹಿಂತಿರ್ಗಿ ಬರುಸಮಯ
ಮನಿಗಾರೂ ಬರುವಾರೊ
ಮನಿಗಾರೂ ಬರುವಂಗೇ
ಹೆರಿಯಣ್ಣ ಲಂಬಾನೂ

ಮನೆ ಮೆತ್ನ ಮೇನೆ ನೆಡುದಾನು
ಅವ್ನ ಚೆನ್ನಾದ ತೊಟ್ಲ ನೋಡಿ
ತನ ಮಡುದೀಯಾ ಕರುದನು

“”ತಂಗ್ಯೆಲ್ಲಿ ಹೋಳಂದ”
“”ಕೈ ಬಳೆ ಜಗುದೀತು
ಬಳ್ಗಾರ ಮನಿಗ್ ಹೋಗೀಳೂ”
ಲಷ್ಟು ಮಾತಾ ಹೇಳುರಾಗಿ

ಬಳ್ಗಾರ್ ಮನಿಗ್ ಓಡಿ ಹೋದ
“”ಕೇಳು ಕೇಳೂ ಬಳುಗಾರಾ
ನನ ತಂಗಿ ಬಂದೀಳೇನೋ ?”
“”ನಿಮು ತಂಗಿ ಕಾನಾದೇ
ವರಸಾ ಮೂರಾದವೊ

ಅಷ್ಟು ಮಾತಾ ಹೇಳುರಾಗೆ
ತಿರಗೊಮ್ಮೆ ಮನಿಗ್ ಬಂದ
ನನ “”ತಂಗ್ಯೆಲ್ಲಿಗೆ ಹೋಳ್ ಹೇಳಿ

“”ಮೂಗಿನ್ ಬೊಟ್ಟು ಮುರಿದೀತು
ಅಕ್ಕಸಾಲ್ ಮನೀಗ್ ಹೋಗೀಳು”

ಹಾರಿ ಬದ್ದೆ ವೋಡಿ ಹೋದ
“”ಅಗುಸಾಲೀ, ಲಗುಸಾಲೀ
ನನ ತಂಗಿ ಬಂದೀಳೇನೋ ?”
ನಿಮು ತಂಗಿ ಕಾನಾದ
ವರುಸಾ ಮೂರಾದವೇ”

ಅಲ್ ಅಷ್ಟು ಮಾತಾ ಕೆಳುಕಂಡು
ಹಿಂತಿರುಗಿ ಮನಿಗೆ ಬಂದ
“”ಕೇಳಿ ಕೇಳಿ ತಮುದೀರೇ
ನಮುಗ್ ಈ ಬೀದೀ ಬೆಡಕಾಣಿ

ನಾವು ದೇಸಂತಾರೆ ಹೋಗುವಾನೊ
ಪರಬಂದರಕೆ ಹೋದ ಹಡಗ
ಹಡ್ಗನಾರು ಬಿಟ್ ಹೋರು
ಅವರ್ ದೇಸಾವರಿ ಹೋದರು

ದೇಸಾವರೀ ಹೋರು
ತಂಗೀಯ ಮನಿಗ್ ಹೋರು
ಅವ್ಳ್ ಯೇಳು ಜನ ಲಣದೀರು
ಹಾದಿ ಕೂಡಿ ಹೋಗುವಾಗೇ

ಅಜ್ಜಿ ಮುದ್ಕಿ ಕರುದೀಳೂ
“”ಆ ಹಾದಿಲಿ ಹೋಗುವರಾ
ನನ್ನಣುದೀರೇ ಕಂಡಾಗಿದ್ರು”

ಅವ್ಳ್ “”ಮುಂದಿದ್ದರು ಕಂಡಾರೆ
ನನ ಹೆರಿಯಣ್ಣ” ಲಂದಾಳೇ
ಆ ಮಾತೆ ಹೇಳುಗುಂಟು
ಹೆಬ್ಬಾಗ್ಲಲ್ಲಿ ಬಂದಾರೂ

“”ಬಿಗಶೀಯೂ ಕೂಡಿ ತಾಯೇ”
“”ಬಿಗಶೀಯಾ ಕೊಡುತಾರೇ
ಹಸವೀಗೇ ಹಣು ತೀನಿ
ಆಸೂರಿಗ್ ಹಾಲು ಕುಡಿರಿ

ಕಣುನೀರಾ ಶಡಿತಿದ್ರು
“”ನನ್ನ ತಾಯ್ ಹೇಳಿದ ಹಾಗಾಯ್ತು
ಹಸವೀಗ್ ಹಣ್ಣನು ಮೆದ್ರು

ಆಸೂರೀಗೆ ಹಾಲು ಕುಡಿದು
“”ನಮಗೆ ಬಿಗಸೀಯ ನೀಡಿ ತಾಯೆ,
ನಾವ್ ದೇಸಂತರಕೆ ಹೋಗುವಾರೊ””

“”ಕೇಳಿ ಕೇಳಿ ಮಕ್ಕಳೆ
ನಿವ್ಗ್ ಈ ಬೀದಿ ಯಾಕಂದ್ರೂ
“”ನಾ ವೊಬ್ಬುಳಾ ತಾಯಿಗೇ
ನಾವ್ ಯೇಳು ಜನ ಗಂಡುಮಕ್ಳು

ಯೇಳು ಜನಿನೆ ನೆಡುಗೀಗೇ
ವಬ್ಬುಳೇ ತಂಗಿ ಮಾದಿ
ಅವ್ಳ್ ಹಾಲುಂಬಾ ಯೇಳಿದಾಗೆ
ತಾಯಾರೂ ಸಂದ್ ಹೋಳು

ಕೂಳುಂಬಾ ಯೆಳಿದಲ್ಲಿ
ತಂದೀಯೂ ಸಂದ್ ಹೋರು
ನಾವೆ ಯೇಳು ಜನ ಲಣದೀರ
ಅವ್ಳ ಸಾಕೀದೊ ಸಲುಗೀದೊ

ಅವ್ಳ ಬುದ್ದಿ ಪಕಾರಾಗೀದು
“”ಕೇಳೆ ಕೇಳೆ ತಂಗಿ,” ಯಂದೊ
ನಿಂಗೆ ಯೇನು ಚೆನ್ನಾವಿದ್ದವಂದೊ
ನಂಗೆ ಸರುಚೆನ್ನಾವಿದ್ದವಣ್ಣಾ

ನನ್ಗೆ ವಾಲ್ಗ್ ಮಾಗಾಯ್ ಇಲ್ಲದೆ
ನನ ತಮ್ಮುದೀರಾ ಲೆಳುಜನ
ನಾವ್ ಯೇಳು ಜನ ಲಣುದೀರು
ನಾವೆ ಯೇಳೆ ಹಡಗಾ ಕಡಸೂವೊ

ಮುತ್ತು ರತ್ನಾ ತುಂಬೂವೋ
ನಾವ್ ಪರುಬಂದಾರಕೆ ಹೋಗುಬೇಕೊ
ವಾಲ್ಗ್ ಮಾಗಾಯ್ ತರುಬೇಕೊ
ಪರು ಬಂದರ್ಗೆ ಹಡ್ಗು ಹೋಯಿ

ಮುತ್ತು ರತ್ನಾ ತುಂಬಿ ಬಂದೊ
ಅವಳ ವಾಲ್ಗ್ ಮಾಗಾಯ್ ಗೆಯ್ಸ್ಯ ಕಂಡೊ
ಬರುವಾನೊ ಅನುತೇಳಿ
ಪರು ಬಂದರಕೆ ಹೋರಜ್ಜಿ

ನಮ್/ಯೇಳು ಜನ ಹಿಂಡರು
ನಾವೊರಗೂ ಸದುರೀಲಿ
ನನ್ ತಂಗಿ ವರುಗಾಲಿ
ನಾ ಕೂಡೂ ಹಾಲ ಕೊಡೀ

ನನ ಉಂಬಾ ಊಟ ಇಕ್ಕಿ
ಪಗ್ದಿ ಆಡಾತಿರಲಂದೊ
ನಾವ್ ಪರುಬಂದರಕೆ ಹೋದೊವಜ್ಜಿ
ನಾವ್ ಹೋಗೀ ಬರ್ವರುಗಂಟೆ

ನನು ತಂಗಿ ಮಾದಿಯೇ
ಮನಿಯಲ್ಲೇ ಇಲ್ಲ ಅಮ್ಮ
ನಮಗಿಂತಾ ಬೀದಿಯೆ ಯಾಕೆ ?
ನಾವ್ ಮನಿ ಬಿಟ್ಟೆ ಹೊಯ್ಬಿದೊ"

ಅಷ್ಟು ಮಾತಾ ಹೇಳುರಾಗೆ
ಗಿಜ್ಜೀ ಕಾಲಿನ ಮಾದಿ
ಮೆತ್ನ ಮೇನಿಂದಿಳುದೀಳು
ಹಾರಿ ಬಿದ್ದಿ ವೋಡಿ ಬಂದ್ಲು

ಹೆರಿಯಾಣ್ಣಾ ಮಡುಲಲ್ಲಿ
ಅವ್ಳ ತಕ್ ಹಾಕಿ ಕೂಡಿಕಂಡೂ
ಕಳಕಳ ಕಣುನೀರು
ಶಡುದೀ ಕಂಡಾಳಾಗೆ

ಅಣದೀರೂ ಲೇಳು ಜನ
ಗುಟಗುಟ್ಟಿಲಳುತಾರೆ
“”ಕೇಳಿ ಕೇಳಿ ಲಣುದೀರೆ,
ಈ ಅಜ್ಜಿ ಮುದ್ಕಿ ನಮ ತಾಯಿ

ಲಷ್ಟು ಮಾತೆ ಹೇಳೂಕೂ
ಲಜ್ ಮುದ್ಕಿ ಕರುದೀಳೂ

“”ಹಾಲೂ ಬೋಜಣದಡುಗೀ
ನನ್ನಣುದೀರಿಗೆ ಅನುಮಾಡೆ

ಅಣ್ಣಗೂ ತಂಗೀಗೂ
ನಾ ವೊಡನೂಟ ಉಣಬೇಕು”
ಲಂದೊಮ್ಮೆ ಹೇಳೂರೂ
“”ಕೇಳ ಕೇಳೋ, ಲಣ್ಣ, ಕೇಳೊ

ನೀ ಹೋಗಿ ಮೂರು ದಿನ
ಮೂರು ದಿನದಾ ಹುಳಿಯನ್ನ
ಆರು ದಿನದಾ ಹುಳು ಮಜ್ಗಿ
ಹುಳುವಾದುಪ್ಪಿನ ಕಾಯಿ

ಬದ್ದಿ ಹೋದ ಬಟುಲಾಗೆ
ನನಗೊಂದ್ ಹಾಕಿಕಿರಣ್ಣ
ಹೆರಿಯಣ್ಣಾ ನಾ ಹಿಂಡುತಿ
ನಾ ಉಣುವಾರೆ ಲತ್ತೀಗೆ”

“”ನೀ ಬೇಕಾದಾರುಣ್ಣಂದ್ಲು
ಬೇಡುದೀರೇ ಬಿಡಂದ್ಲು
ಉಣಲಾರೆ” ಲನುತೇಳಿ
ನಾ ಕೈ ಕುಡ್ಗೀ ಯೆದ್ದೆಲಣ್ಣ

ಮೆತ್ತಿನ ಮೇನ್ ಹೋಯಿ ಕುಂತೆ
ಯೇ ಹೆಣ್ಣೆ, ತಂಗಿ ಮಾದಿ,
ನೀ ಉಂಡುಂಡು ಕುಳುಬೇಡಾ
ನನ್ ಹುಂಡೆಮ್ಮಿಗೆ ಹುಲ್ ಕೊಯ್‌ತಾರೆ”

ಅಷ್ಟು ಮಾತಾ ಹೇಳುರಾಗಿ
ನನ್ಗ್ ಹರುಕ್ ಹೆಡ್ಗಿ ಕೊಡುವಾಳೊ
ಬೊಡು ಕತ್ತಿ ಕೊಟ್ಟಾರೊ
ಮಲುಗೆದ್ದಿಗೆ ಹೋದೆನಣ್ಣ

ಹುಲು ಕೊಯ್ವುಲ್ ತೆಳಿಲಿಲ್ಲ
ನಡು ಕೈಯಾ ಕೊಯ್‌ಕಂಡೆ
ಬೇಡು ತಿಂಬಾ ಬೇಡಜ್ಜಿ
ಆ ಹಾದಿಲ್ ಹೊರಡುವಾಳೊ

ಅವ್ವ ಈ ಹಾದಿಲಿ ಬಂದಾಳೊ
"ಯೇನಾಯ್ತೆ ಮೊಮ್ಮಗಳೇ,'
ನಾ ಹುಲ್ ಕೊವ್ಯೆ ಬಂದೆನಜ್ಜಿ,
ಹುಲ್ ಕೊವ್ವಲ್ ತೆಳಿಲಿಲ್ಲೆ

ನಾ ನಡಕ್ಕೈಯಾ ಕೊಯ್ ಕಂಡೆ""
ಉಟ್ಟ ಪಟ್ಟೆ ಹರದೀಳು
ನನ ಕಯ್ಯಾ ಕಟ್ಟೀಳು

""ಮನಿಗೆ ಹೋಗೆ" ಲಂದಾಳೇ
ನಾ ಮನಿಗಾರೂ ಹೋತಿಲ್ಲ
ನೀ ನನ್ನಾ ಪಡ್ಡ ತಾಯಿ

ನಾ ನಿನ್ನಾ ಪಡ್ಡ ಮಗಳು
ನಿನ ಜೊತ್ಯಲಿ ಬರುತೆಲಜ್ಜಿ
ಅಜ್ಜೀಯೂ ಮುಂದಾಗೀ
ನನು ಕರುಕಂಡೇ ಬಂದಳಜ್ಜಿ

ಅಜ್ಜಿ ಮನೆ ಲಂಬಾದೂ
ಗುಬ್ಬಿಯಾ ಗೂಡಜ್ಜಿ
ನಾ ನವ್ವ ಮನಿಗ್ ಬರುವಾಗೆ

ಯೇಳು ನೆಲಿ ಉಪ್ಪರುಗಿಯೇ
ಯೇಳು ನೆಲಿ ಮೆತ್ನ ಮೇನೇ
ಚಿನ್ನದಾ ತೊಟ್ಟಿಲಾದೊ
ತೊಟ್ಟಿಲಾಗೆ ವರ್ಗಿನಣ್ಣ

ನೀ ಹೇಳುಮಾತಾ ಕೇಳಿನಣ್ಣ
ನಾ ಮೆತ್ನ ಕೆಳಗೆ ಇಳುದೀನೊ
ನಿಮ್ ಮಡುದ್ಯರೆ ಮಾಡದ್ದಣ್ಣ

ಅಷ್ಟು ಮಾತ ಕೇಳುರಾಗೆ
""ಕೇಳೆ ಕೇಳೆ ತಂಗಿ, ಕೇಳೇ
ನಾವ್ ನಮ್ಮನಿಗೇ ಹೋವಪೋ

ಲಜ್ಜಿ ಮುದ್ಕಿ ಕರದ್ ಹೋಪೋ
ಲವ್ವ್ ಮನಿಗಾರು ಹೋದರೂ

ಯೇಳು ಜನ ಲಣದೀರೂ
ತಮ್ಮಿಂಡಾರಾ ಕರುದೀರೂ

ತರುದಲ್ಲಿ ನಿಲ್‌ಸೀರೂ
ದಂಡೀನಾ ಕತ್ತಿಯಲ್
ಹಿಂದ್ರ ರುಂಡಾ ಹೊಡದೀರು

**ಪ್ರತಿ ಸಾಲಿನ ಕೊನೆಗೂ 'ತಂದನಾನಾ' ಎನ್ನಬೇಕು**

**ಪಾಠಾಂತರಗಳು ಮತ್ತು ಸಮಾನ ಆಶಯ ಪಠ್ಯಗಳು**

೧) ಸಂಪನ್ನೆ; ಪರಮಶಿವಯ್ಯ, ಜೀ.ಶಂ. ಜಾನಪದ ಖಂಡ ಕಾವ್ಯಗಳು, ಶಾರದಾ ಮಂದಿರ, ಮೈಸೂರು, ೧೯೬೮, ಪು.ಸಂ. ೬೧-೭೫

೨) ಕೇದಿಗೆ ಎಂಬ ಸೊಸೆ; ಹೆಗಡೆ ಎಲ್.ಆರ್., ತಿಮ್ಮಕ್ಕನ ಪದಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೯, ಪು.ಸಂ. ೨೧೩-೨೧೯

೩) ಪುಟ್ಟಿಗಂಗಿ, ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಯ, ಹಾಡಿಗೆ ಹನ್ನೆರಡು ಕಬರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩, ಪು.ಸಂ. ೫೯-೭೫

೪) ತಬ್ಬಲಿರಾಯ; ಕಾಳೇಗೌಡ ನಾಗವಾರ, ಬಯಲುಸೀಮೆಯ ಲಾವಣಿಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು, ೧೯೭೩, ಪು.ಸಂ. ೨೫-೪೧

೫) ಜಾಗಾಲೆ; ಕಾಳೇಗೌಡ ನಾಗವಾರ, ಬಯಲುಸೀಮೆಯ ಲಾವಣಿಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು, ೧೯೭೩, ಪು.ಸಂ. ೯೬-೧೧೦

೬) ಹೊನ್ನಮ್ಮ-ಹೊಳಲಮ್ಮ; ಹಿರಿಯಣ್ಣ ಅಂಬಳಿಕೆ, ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೬, ಪು.ಸಂ. ೧೭೩-೧೭೬.

೭) ಯಾಮರೆಡ್ಡಿ ಸೊಸೆ ಮಲ್ಲಮ್ಮ; ಚಂದ್ರಯ್ಯ ಬಿ.ಎನ್., ಜಾನಪದ ಕಥನಗೀತೆಗಳು, ಶರತ್ ಪ್ರಕಾಶನ, ಮೈಸೂರು,೧೯೭೯, ಪು.ಸಂ. ೩೭-೪೮

೮) ಹೊನ್ನಮ್ಮ; ಜಯಲಕ್ಷ್ಮಿ ಸೀತಾಪುರ, ನಮ್ಮ ಸುತ್ತಿನ ಜನಪದ ಕಥನಗೀತೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪, ಪು.ಸಂ. ೧-೧೭

೯) ತಂಗಿಯ ಹಾಡು; ಜಗನ್ನಾಥ ಹೆಬ್ಬಾಳೆ, ಬುಲಾಯಿ ಹಾಡುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭, ಪು. ೨೪-೩೦

೧೦) ಕಾನ್ ಕಾನ್ ಕನ್ನಡಿ, ನಾಯಕ ಎನ್.ಆರ್., ಪಾಠಾಂತರ ಕಥನ ಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೭ ಪು.ಸಂ. ೧೮೮-೨೦೫.

೧೩) ಏಳುಮಂದಿ ಅಣ್ಣತಮ್ಮಂದಿರು, ಒಬ್ಬ ತಂಗಿ; ನಾವಲಗಿ ಸಿ.ಕೆ. ಮತ್ತು ಶಕುಂತಲ ಚನ್ನಬಸವ, ಜನಪದ ಕಥನಗೀತ ಸಂಚಯ, ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು, ೨೦೦೩, ಪು.ಸಂ. ೨೩-೨೫

೧೪) ಕುಸುಮಾಲೆ; ನಾಗೇಗೌಡ ಎಚ್.ಎಲ್., ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೬, ಪು. ೨೪೭-೨೫೫

---

* ತಂಗಿ ಮಾದಿ; ಹೆಗಡೆ ಎಲ್.ಆರ್. ಮಾಚಿಯ ಕಥನಗೀತೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧, ಪು.ಸಂ. ೮೪-೯೩.

## ೨೬. ಸತ್ಯವಂತ ನಾಗಾಮಣಿ *

ಅಯ್ಯಾ ವರ್ಷಕೊಂದು ದೀವಳಿಗೆ
ನಾಡಿಗೆಲ್ಲ ದೊಡ್ಡಬ್ಬ

ಅಂತೋ ಹಬ್ಬಕೆ ಹೋಗಿ ಬಾರೊ
ನಿನ್ನ ತಂಗೆ ಕರತಾರೊ !

ಅಯ್ಯಾ ತಂಗೆ ಮನೆಗೆ
ಅಣ್ಣಯ್ಯ ಬರುತಾನೆ

ಅಯ್ಯಾ ಅಣ್ಣನಾದರೆ ಬಂದವನೆ
ನಡುಮಲ್ಲಾದರೆ ಕೂತವನೆ

ಅಯ್ಯಾ ಸತ್ಯವಂತ ನಾಗಾಮಣಿಯು
ಓಡಿ ಇನ್ನ ಬರುತಾಳೆ

ಅಯ್ಯಾ ಅಣ್ಣನ ಮಕವೇನಾದುರೆ
ಬೇಗದಿಂದ ನೋಡುತಾಳೆ

ಅಯ್ಯಾ ಹಸ್ತು ಬಂದಾವನಂತಹೇಳಿ
ಆಡುಗೆನಾದರೆ ಮಾಡುತಾಳೆ

ಅಮ್ಮ ಅಡುಗೆ ಮಾಡಿ ಮನೆಯಲ್ಲಿರಿಸಿ
ನೀರುನಾದರೆ ಕೊಡುತಾಳೆ

ಅಯ್ಯಾ ಅಣ್ಣ ಅಣ್ಣ ಬಾರಣ್ಣ
ಊಟವಾದರೆ ಮಾಡೋಣ

ಆಯ್ಯಾ ನೀನು ನಾನು ಜೊತೆಯಲ್ಲಿ
ಊಟವಾದರೆ ಮಾಡೋಣ

ಅಯ್ಯಾ ಅಣ್ಣತಂಗೇರು ಜೊತೆಯಲ್ಲಿ
ಊಟವಾದರೆ ಮಾಡುತಾರೆ

ಅಮ್ಮಾ ಊಟಮಾಡೋ ಸಮಯದಲ್ಲಿ
ಏನಂದ ತಂಗಿ ಕೇಳತಾಳೆ

ಅಯ್ಯಾ ಅಣ್ಣ ಅಣ್ಣ ಕೇಳಣ್ಣ
ನನ್ನ ಮಾತು ನೀ ಕೇಳೊ

ಅಯ್ಯಾ ನೀನು ಬಂದ ಮಾತೇಳೊ
ನೀನು ಬಂದ ಮಾತೇಳೊ

ಅಮ್ಮಾ ವರ್ಷಕೊಂದು ದೀವಳಿಗೆ
ನಾಡಿಗೆಲ್ಲ ದೊಡ್ಡಬ್ಬ

ಅಮ್ಮಾ ಕರೆಯೋಕಾದರೆ ಬಂದೆನಮ್ಮಾ
ಕರೆಯೋಕಾದರೆ ಬಂದೆನಮ್ಮ

ಅಮ್ಮಾ ಅತ್ತೆ ಮಾವದೀರ ಕೇಳಿಕೊಂಡು
ಬೇಗದಿಂದ ಹೊರಡಮ್ಮ

ಅಯ್ಯೊ ಸತ್ಯವಂತ ನಾಗಾಮಣಿಯು
ಓಡಿ ಇನ್ನ ಬರುತಾಳೆ

ಅಮ್ಮ ಪಾವಿನಲ್ಲಿ ಒಂದು ಪಾವು
ತುಂಬೆ ಹೂವ ಕುಯ್ದಾಳು

ಅಯ್ಯೋ ಸೇರಿನಲ್ಲಿ ಒಂದು ಸೇರು
ಮಲ್ಲಿಗೂವ ಕುಯ್ದಾಳು

ಅಯ್ಯೋ ಅತ್ತೆ ಮಾವದಿರ ಪಾದಪೂಜೆ
ಭಕ್ತಿಯಿಂದ ಮಾಡುತಾಳೆ

ಅಮ್ಮಾ ಅತ್ತೆ ಅತ್ತೆ ಕೇಳಮ್ಮ
ನನ್ನ ಮಾತು ನೀ ಕೇಳು

ಅಮ್ಮ ಅಣ್ಣನಾದರೆ ಬಂದವನೆ
ಗೌರಿಗಾದರೆ ಕಳಿಸಮ್ಮ

ಅಮ್ಮ ಅಣ್ಣ ಜೊತಿಲ್ಲಾದರೆ
ತೌರಿಗಾದರೆ ಹೋಗುತೀನಿ

ಅಮ್ಮ ಸತ್ಯವಂತ ನಾಗಾಮಣಿಯೆ
ನನ್ನ ಮಾತು ಕೇಳಮ್ಮ

ಅಮ್ಮ ಆರು ತಿಂಗಳು ಬಿಮ್ಮನಿಸೆ
ಅಣ್ಣ ಜೊತಿಲ್ಲಿ ಹೋಗುಬ್ಯಾಡ

ಅಮ್ಮ ಬಾಳ ಕಷ್ಟ ಬರುತ್ತೈತೆ
ಬಾಳ ಕಷ್ಟ ಬರುತ್ತೈತೆ

ಅಯ್ಯೋ ಸತ್ಯವಂತ ನಾಗಮಣಿಯು
ಗೋಳುದುಃಖ ಮಾಡುತಾಳೆ

ಅಮ್ಮ ಗೋಳುದುಃಖ ಮಾಡುತಾಳೆ
ಧರಣಿ ಶೋಕ ಮಾಡುತಾಳೆ

ಅಮ್ಮ ಅತ್ತೆ ಅತ್ತೆ ಕೇಳಮ್ಮ
ನನ್ನ ಮಾಡು ನೀ ಕೇಳೆ

ಅಮ್ಮ ಈವತ್ತಿನ್ನ ಹೋಗುತೀನಿ
ನಾಳಿಕಾದರೆ ಬರುತೀನಿ

ಅಮ್ಮ ನನ್ನ ಸೊಸೆಯೆ ಕೇಳಮ್ಮ
ನಾಗಾಮಣಿಯೆ ಕೇಳಮ್ಮ

ಅಟ್ಟದ ಮೇಗಲ ಸಾವಿರಾರು ರೂಪಾಯಿ
ಒಡವೆ ಸೀರೆನಾದರು ಧರಿಸಮ್ಮಾ

ಅಮ್ಮ, ಸತ್ಯವಂತ ನಾಗಾಮನಿಯು
ಓಡಿ ಇನ್ನ ಬರುತಾಳೆ

ಅಮ್ಮ ಅಟ್ಟದ ಮೇಗಳ ಸಾವಿರಾರು ರೂಪಾಯಿ
ಒಡವೆ ಸೀರೆ ಬೇಗನೆ ಧರಿಸ್ಯಾಳು

ಅಯ್ಯಾ ಅಣ್ಣ ಅಣ್ಣ ಕೇಳಣ್ಣ
ನನ್ನ ಮಾತು ನೀ ಕೇಳೊ

ಅಯ್ಯಾ ಅತ್ತೆ ಮಾವ್ದೀರ ಆಜ್ಞೆಯ
ಬೇಗದಿಂದ ಪಡೆದಿವ್ನಿ

ಅಯ್ಯಾ ತಾಯಿ ತಂದೆ ಮಕವನ್ನೆ
ಬೇಗದಿಂದ ನೋಡುಬೇಕು

ಅಯ್ಯಾ ತೌರಿಗಾದರೆ ಹೋಗಾನ
ಬೇಗದಿಂದ ನಡಿಯಣ್ಣ

ಅಯ್ಯಾ ಅಣ್ಣ ತಂಗಿ ಜತಿಯಲ್ಲಿ
ತೌರಿಗಾದರು ಬರುತಾರೆ

ಅಯ್ಯಾ ಊರು ಬುಟ್ಟು ಮೂರು ಮೈಲಿ
ಬೇಗದಿಂದ ಕರೆತಂದ

ಅಯ್ಯಾ ಕೇಡುಗಾರ ಅಣ್ಣಯ್ಯ
ತಂಗೆ ಮಕವೇ ನೋಡುತಾನೆ

ಅಯ್ಯೊ ಇಂತೊ ಸೀರಿ ಇಂತೊ ಒಡವೆ
ನನ್ನ ಹೆಂಡ್ತಿಗೆ ಇಲ್ಲವಲ್ಲೊ

ಅಯ್ಯಾ ಒಡವೆ ಸೀರೆ ಕೀಳಾಕೆ
ಯಾವ ತಂತ್ರ ಮಾಡಲಿ ?

ಅಯ್ಯಾ ಕೇಡುಗಾರ ಅಣ್ಣಯ್ಯ
ಮನಸಿನಲ್ಲಿ ಇಟುಕೊಂಡ

ಅಯ್ಯಾ ಊರು ಬುಟ್ಟು ಆರು ಮೈಲಿ
ಬೇಗದಿಂದ ಕರತಂದ

ಅಯಾ ಊರು ಬುಟ್ಟು ಆರು ಮೈಲಿ
ಕಾಡಿಗಾದರೆ ಕರತಂದ

ಅಯ್ಯಾ ಕಾಡಿನಲ್ಲಿ ನಾದುರೆ
ದೊಡ್ಡದೊಂದು ಕಟ್ಟೆಯು

ಅಯ್ಯಾ ಕಟ್ಟೆ ಏರಿಮ್ಯಾಲೆ ನಿಂತುಕೊಂಡು
ಸುತ್ತು ಮುತ್ತಲು ನೋಡುತಾನೆ

ಅಯ್ಯಾ ಕಾಡಿನಲ್ಲಿ ನಾದುರೆ
ಒಡವೆನಾದರೆ ಕೀಲಬೇಕು

ಅಯ್ಯಾ ಒಡವೆನಾದರೆ ಕೀಳಬೇಕು
ನನ್ನ ಹೆಂಡ್ತೀಗೆ ಕೊಡಬೇಕು

ಅಯ್ಯಾ ಕೇಡುಗಾರ ಅಣ್ಣಯ್ಯ
ಮನಸಿನಲ್ಲಿ ಇಟುಕೊಂಡು

ಅಯ್ಯಾ ದೂರದಲ್ಲಿ ಇದ್ದಂತ
ತಂಗಿನಾದರೆ ಕರದಾನು

ಅಯ್ಯೊ ಸತ್ಯವಂತ ನಾಗಾಮಣಿಯು
ಓಡಿ ಇನ್ನ ಬರುತಾಳೆ

ಅಯ್ಯಾ ಕಳ್ಳರು ಕಾಕರು ಬಂದಾರೆಂದು
ಓಡಿ ಇನ್ನ ಬರುತಾಳೆ

ಅಯ್ಯಾ ಓಡಿ ಬಂದು ತಂಗಮ್ಮ
ಅಣ್ಣನ್ನಾದರೆ ತಬ್ಯಾಳು

ಅಯ್ಯಾ ಅಣ್ಣ ಅಣ್ಣ ಕೇಳಣ್ಣ
ನನ್ನ ಮಾತು ನೀ ಕೇಳೊ

ಅಯ್ಯಾ ತೌರು ದಾರಿ ಬುಟ್ಯಲ್ಲೊ ?
ಕಾಡು ದಾರಿಗೆ ಕರತಂದ್ಯ

ಅಮ್ಮ ಕಾಡಿನಲ್ಲಿನಾದರೆ
ಕಳ್ಳರು ಕಾಕರು ಬಂದಾರು

ಅಮ್ಮ ಕಳ್ಳರಿಗಿಂತ ಹೆಚ್ಚಿನ ಕಳ್ಳ
ನಾನೇ ಕಾಣೆ ಎಲೆ ರಂಡೆ

ಅಯ್ಯೊ ನಿನ್ನ ಏಡವೆ ಕೀಳಬೇಕು
ನಿನ್ನ ಜೀವ ಕಳೀಬೇಕು

ಅಯ್ಯೋ ಸತ್ಯವಂತ ನಾಗಾಮಣಿಯು
ಭೂಮಿಗಾದುರು ಇಳುದಾಳು

ಅಯ್ಯೋ ಅಣ್ಣ ಅಣ್ಣ ಕೇಳಣ್ಣ
ನಿನಗೇನನ್ಯಾಯ ಮಾಡಿದ್ದೆ

ಅಯ್ಯಾ ಒಂದು ತಾಯಿ ಹೊಟ್ಯಲ್ಲಿ
ನಾವು ಈಗ ಹುಟ್ಟಲಿಲ್ಲವೆ ?

ಅಯ್ಯಾ ನೀನು ಉಂಡ ಹಾಲು ಅನ್ನ
ನಾನು ಈಗ ಉಣಲಿಲ್ಲವ

ಅಯ್ಯಾ ನೀನು ನಾನು ಜತೆಯಲ್ಲಿ
ನಾವು ಈಗ ಬೆಳೆಲಿಲ್ಲವ

ಅಯ್ಯಾ ಒಡವೆನಾದರೆ ಕೀಳಬೇಡ
ತೌರಿಗಾದರೆ ಹೋಗಾನ

ಅಯ್ಯಾ ಆರು ತಿಂಗಳು ಬಿಮ್ಮನಿಸೆ
ತಾಯಿ ತಂದೆ ಮಕವನ್ನೆ

ಅಯ್ಯಾ ತಾಯಿ ತಂದೆ ಮಕವನ್ನೆ
ಬೇಗದಿಂದ ನೋಡಬೇಕು

ಅಯ್ಯೋ ತಾಯಿ ತಂದೆ ಆಸೆಯು
ಇಲ್ಲಿನಾದರೆ ಬಿಟ್ಟುಬುಡೆ

ಅಯ್ಯೋ ಅತ್ತೆ ಮಾವದೀರ ಆಸೆಯು
ಇಲ್ಲಿನಾದರೆ ಬಿಟ್ಟುಬುಡೆ

ಅಯ್ಯೋ ಅಣ್ಣ ಅಣ್ಣ ಕೇಳಣ್ಣ
ನನ್ನ ಮಾಡು ನೀ ಕೇಳು

ಅಯ್ಯಾ ಕೈಯೆತ್ತಿನ್ನ ಮುಗದೇನು
ಕಾಲನಾದರೆ ಹಿಡದೇನು

ಅಯ್ಯಾ ಹಿಂಸೆನಾದರೆ ಮಾಡಬೇಡ
ತೊಂದರೆನಾದರೆ ಮಾಡಬೇಡ

ಅಯ್ಯಾ ನಿನಗೇನನ್ನಾಯ ಮಾಡಿದ್ದೆ
ನಿನಗೇನು ಪಾಪ ಮಾಡಿದ್ದೆ

ಅಮ್ಮ ಅಣ್ಣನು ನಾನಲ್ಲ
ನಿನ್ನ ಮಿಂಡನು ಕಾಣೆಣ್ಣೆ

ಅಯ್ಯೊ ಸತ್ಯವಂತ ನಾಗಾಮಣಿಯು
ಗೋಳು ದುಃಖ ಮಾಡುತಾಳೆ

ಅಯ್ಯೊ ಒಡವೆ ಸೀರೆ ಕೊಡದಿದ್ರೆ
ನಿನ್ನ ಜೀವ ಕಳಿತೀನಿ

ಅಯ್ಯಾ ದೂರದಲ್ಲಿ ಇದ್ದಂತ
ಉಗಣಿಹಮಬೆ ನೋಡುತಾನೆ

ಅಯ್ಯಾ ಉಗಣಿ ಹಂಬೆ ತರುತಾಣೆ
ತಂಗಿ ಕೈಕಾಲು ಕಟ್ಟುತಾನೆ

ಅಯ್ಯಾ ತಂಗಿ ಕೈಕಾಲು ಕಟ್ಟೆನ್ನ
ಏರಿಮ್ಯಾಲೆ ಹಾಕ್ಯವನೆ

ಅಯ್ಯಾ ಬಾಳ ಹಿಂಸೆ ಮಾಡುತಾನೆ
ಬಾಳ ತೊಂದ್ರೆ ಮಾಡುತಾನೆ

ಅಯ್ಯಾ ತಂಗೆ ಎದೆ ಮ್ಯಾಲೆ ಕೂತುಗಂಡು
ಒಡವೆನಾದರೆ ಬಿಚ್ಚುತಾನೆ

ಅಯ್ಯಾ ಒಡವೆ ಸೀರೆ ಬಿಚ್ಚಿಕೊಂಡು
ಗಂಟುನಾದರೆ ಕಟ್ಟುತಾನೆ

ಅಯ್ಯಾ ಬಾಳ ಚಿಂತೆ ಮಾಡುತಾನೆ
ಬಾಳ ಯೋಚನೆ ಮಾಡುತಾನೆ

ಅಯ್ಯಾ ಇವಳ ಜೀವ ಕಳಿಬೇಕು
ನನ್ನ ಊರಿಗೋಗಬೇಕು

ಅಯ್ಯಾ ಸೊಂಟದಲ್ಲಿ ಇದ್ದಂತ
ಬಾಕುನಾದರೆ ತಗದಾನು

ಅಯ್ಯಾ ಕೇಡುಗಾರ ಅಣ್ಣಯ್ಯ
ತಂಗೆ ಕುತಿಗೆ ಕುಯಿತಾನೆ

ಅಯ್ಯಾ ತಂಗೆ ಕುತಿಗೆ ಕುಯಿವಾಗ
ಬಾಕುನಾದರೆ ಈಗಲೇ

ಅಯ್ಯಾ ಬಾಕುನಾದರೆ ಈಗಲೇ
ಮಾಯವನ್ನೆ ಆಯಿತು

ಅಯ್ಯೋ ಮಂತ್ರವನ್ನು ಕಲಿತವಳೆ
ತಂತ್ರವನ್ನೆ ಕಲಿತವಳೆ

ಅಮ್ಮ ತಂತ್ರವನ್ನೆ ಕಲಿತೀಯ
ಮಾಯಕಾರಿ ಚಾಂಡಾಳಿ

ಅಯ್ಯಾ ದೂರದಲ್ಲಿ ಇದ್ದಂತ
ಈಚಲು ಮುಳ್ಳೆ ತರುತಾನೆ

ಅಯ್ಯಾ ಈಚಲುಮುಳ್ಳೆ ತರುತಾಣ
ತಂಗೆ ಕಣ್ಣಿಗೆ ಚುಚ್ಚುತಾನೆ

ಅಯ್ಯೋ ಗೋಳುದುಃಕ ಮಾಡುತಾಳೆ
ಧರಣಿ ಶೋಕ ಮಾಡುತಾಳೆ

ಅಯ್ಯಾ ಆರು ತಿಂಗಳು ಬಿಮ್ಮನಿಸೆ
ಬೇಗದಿಂದ ಆಳುತಾಳೆ

ಅಯ್ಯಾ ತಂಗೆ ಎದೆ ಮೇಲೆ ನಿಂತುಕೊಂಡ
ಜಗ್ಗಿಸಿನ್ನ ತುಳುದಾನು

ಅಯ್ಯಾ ಸತ್ಯವಂತ ನಾಗಾಮಣಿಯು
ಜೀವನಾದರು ಬುಡಲಿಲ್ಲ

ಅಯ್ಯೊ ದೂರದಲ್ಲಿ ಇದ್ದಂತ
ಕಲ್ಲುನಾದರೆ ನೋಡುತಾನೆ

ಅಯ್ಯ ಕಲ್ಲುನಾದರೆ ತರಬೇಕು
ಇವಳ ಮ್ಯಾಲೆ ಹಾಕಬೇಕು

ಅಯ್ಯಾ ಇವಳ ಮ್ಯೇಲೆ ಹಾಕಬೇಕು
ಇನ್ನು ಜೀವ ಕಳಿಬೇಕು

ಅಯ್ಯಾ ಕೇಡುಗಾರ ಅಣ್ಣನು
ಕಲ್ಲಿನತಾಕೆ ಹೋಗುತಾನೆ

ಅಯ್ಯಾ ಪರಮೇಶ್ವರ ಈಗಲೇ
ಬೇಗದಿಂದ ನೋಡುತಾನೆ

ಅಯ್ಯೋ ಕೇಡುಗಾರ ಅಣ್ಣ
ತಂಗಿ ಜೀವ ಕಳಿತಾನೆ

ಅಯ್ಯಾ ಕೊಳ್ಳಿನಲ್ಲಿ ಇದ್ದಂತ
ಸರುಪನಾದರೆ ಬಿಡುತಾನೆ

ಅಯ್ಯಾ ಸರುಪನಾದರೆ ಬಂದೀತು
ಕಲ್ಲಿನಡಿ ಸೇರಿತು

ಅಯ್ಯಾ ಕಲ್ಲನಾದುರೆ ಎತ್ತುತಾನೆ
ಕೇಡುಗಾರ ಅಣ್ಣಯ್ಯ

ಅಯ್ಯಾ ಕಲ್ಲಿನಡಿ ಇದ್ದಂತ
ಸರಪವನ್ನೆ ಕಂಡನು

ಅಯ್ಯಾ ಕಲ್ಲನಾದರೆ ಎತ್ಯಾನು
ಹೆಗಲು ಮ್ಯಾಲೆ ಮಡಿಗ್ಯಾನು

ಅಯ್ಯೋ ಕಲ್ಲಿನಡಿ ಇದ್ದಂತ
ಸರುಪನಾದರೆ ಬಂದೀತು

ಅಯ್ಯಾ ಅಣ್ಣನ ಪಾದನಾದರೆ
ಬೇಗದಿಂದ ಕಚ್ಚೀತು

ಅಯ್ಯಾ ಹೊತ್ತಿರೋ ಕಲ್ಲನ್ನ
ನೆಲಕೆನಾದರೆ ಬಿಟ್ಟನು

ಅಯ್ಯೋ ತಂಗೆ ತಂಗೆ ಎನುತಾನೆ
ಬೇಗದಿಂದ ಕರಿತಾನೆ

ಅಯ್ಯೋ ತಂಗೆ ತಂಗೆ ಕೇಳಮ್ಮ
ನನ್ನ ಮಾತು ಕೇಳಮ್ಮ

ಅಮ್ಮ ಸರಪ ನನ್ನ ಕಚ್ಚಿತು
ನೀರನ್ನಾದರೆ ಕೊಡಮ್ಮ

ಅಯ್ಯೋ ಗೋಳುದುಃಕ ಮಾಡುತಾನೆ
ಧರಣಿಶೋಕ ಮಾಡುತಾನೆ

ಅಯ್ಯೋ ನೀರು ನೀರು ಎಂದಾನು
ಜೀವನಾದರು ಬಿಡುತಾನೆ

ಅಯ್ಯೋ ಸತ್ಯವಂತ ನಾಗಾಮಣಿಯು
ಕಾಡಿನಲ್ಲಾದರೆ

ಅಯ್ಯೋ ಕಾಡಿನಲ್ಲಾದರೆ
ಗೋಳು ದುಃಖ ಮಾಡುತಾಳೆ

ಅಯ್ಯೋ ಗೋಳು ದುಃಖ ಮಾಡುತಾಳೆ
ಧರಣಿಶೋಕ ಮಾಡುತಾಳೆ

ಅಯ್ಯಾ ಸತ್ಯವಂತ ಪಾರ್ವತಿ
ಬೇಗದಿಂದ ಬರುತಾಳೆ

ಅಮ್ಮ ನಾಗಮ್ಮ ತಾಯಿ ಕೈಕಾಲ
ಬೇಗದಿಂದ ಬಿಚ್ಚುತಾಳೆ

ಅಮ್ಮ ನಾಗಮ್ಮ ತಾಯಿ ಕೇಳಮ್ಮ
ನಾಗಮ್ಮ ತಾಯಿ ಕೇಳಮ್ಮ

ಅಮ್ಮ ಕಾಡಿನಲ್ಲಿನಾದರೆ
ಯಾರಿನ್ನ ಕರತಂದ್ರು

ಅಮ್ಮ ಕೇಡುಗಾರ ಅಣ್ಣಯ್ಯ
ತೋರಿಸಾದರೆ ಕರತಂದ

ಅಯ್ಯೋ ಒಡವೆ ಸೀರೆ ಬಿಚ್ಚಿಕೊಂಡು
ಕಯ್ಯಿ ಕಾಲು ಕಟ್ಟಿದಾನು

ಅಮ್ಮ ಕಯ್ಯಿ ಕಾಲ ಕಟ್ಟೆನ್ನ
ಕಲ್ಲನಾದರೆ ಈಗಲೆ

ಅಮ್ಮ ಕಲ್ಲನಾದರೆ ತಂದಾನು
ತಲೆ ಮ್ಯಾಲೆ ಹಾಕೋಕೆ

ಅಮ್ಮ ಕಲ್ಲಿನಡಿ ಇದ್ದಂತ
ಸರಪವು ಈಗಲೇ

ಅಮ್ಮ ಸರಪವು ಈಗಲೇ
ಬೇಗದಿಂದ ಕಚ್ಚಿತು

ಅಮ್ಮ ಅಣ್ಣನಾದರೆ ಈಗಲೆ
ಜೀವನಾದರೆ ಬಿಟ್ಟವನೆ

**ಪಾಠಾಂತರಗಳು ಮತ್ತು ಸಮೂಹ ಆಶಯದ ಪಠ್ಯಗಳು**


೧) ಅಣ್ಣತಂಗಿ; ಹೆಗಡೆ ಎಲ್.ಆರ್., ಸುವ್ವಿ ಸುವ್ವಿ ಸುವ್ವಾಲೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧, ಪು.ಸಂ. ೧೧೩-೧೧೬

೨) ಅಣ್ಣ ನಾಗೇಂದ್ರ ತಂಗಿ ದೆಮಕ್ಕಾ; ಹೆಗಡೆ ಎಲ್.ಆರ್., ಪರಮೇಶ್ವರಿಯ ಪದಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೨, ಪು.ಸಂ. ೧-೨೪

೩) ನಾಗರ ಪಂಚಮಿ; ರಾಜಪ್ಪ ಟಿ.ಎಸ್. ರಾಯಚೂರ ಜಿಲ್ಲೆಯ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪, ಪು.ಸಂ. ೬೩-೬೫

೪) ಪಾಪಿಗೇಡಿ ಅಣ್ಣಯ್ಯ ನಾಗೇಗೌಡ, ಎಚ್.ಎಲ್., ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೬, ಪು.ಸಂ. ೧೯೦-೨೦೦

೫) ನಾನು ಒಬ್ಬಳೆ ಬಂದೆ ತಾಯಿಮನೆಗಿನ್ನು ಅಂದನೂರು ಶೋಭ, ಕೊಂಬೆ ರೆಂಬೆಲ್ಲ ಎಳಗಾಯಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೮, ಪು.ಸಂ. ೭೪-೭೫

೬) ಅಣ್ಣ ತಂಗಿ; ಕಾಳೇಗೌಡ ನಾಗವಾರ, ಬೇಕಾದ ಸಂಗಾತಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦, ಪು.ಸಂ. ೩೩೮-೩೪೭

೭) ಅಣ್ಣ ತಂಗಿ; ಭಾನುಮತಿ ವೈ.ಸಿ., ಪುಟ್ಟಮಲ್ಲಿಗೆ ಹಿಡಿತುಂಬ, ತಾರಾ ಪ್ರಿಂಟಿಂಗ್ ಪ್ರೆಸ್, ಮೈಸೂರು, ೨೦೦೧, ಪು.ಸಂ. ೮೧-೯೦.

---

* ಸತ್ಯವಂತ ನಾಗಾಮಣಿ; ನಾಗೇಗೌಡ ಎಚ್.ಎಲ್., ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೬, ಪು.ಸಂ. ೨೪೭-೨೫೫

## ೨೭. ತಾಯಿ ತಂದಿ ಹೊಟ್ಟಿಲೆ ಮಗಾ ಒಬ್ಬಿದ್ದನೇಳ್ರೀ ಒಟ್ಟsನ *

ತಾಯಿ ತಂದಿ ಹೊಟ್ಟಿಲೆ ಮಗ ಒಬ್ಬಿದ್ದನೇಳ್ರೀ ಒಟ್ಟsನ ।
ಮಾಲಗಾರ ಚಾಕರಿಗ್ಹೋಗಬೇಕಂತ ಹಟಾತೊಟ್ಟಾನ ॥ ಪ ॥
ತಾಯಿ ಒಬ್ಬಕಿ ಜಲಮಕ ಹೆಚ್ಚs ಹೇಳತಾಳ್ರೀ ಮಗsನ ।
ದೂರದೇಶ ಪರನಾಡ ಜಗs ಬ್ಯಾಡಪ್ಪ ಹೊರಗsನ ॥ ೧ ॥

ಎಷ್ಟು ಹೇಳಿದರ ಕೇಳವಲ್ಲ ಹೊಂಟಾನರಿ ಹೊರಗsನ ।
ಗುಂಜಿ ಗಂಜಿ ಕೈವಶದ ಗಂಟ ಕಟಗೊಂಡಾನ ಮತ್ತೇನ ॥ ೨ ॥

ಗುಂಜಿ ಗಂಜಿ ಕೈವಶದ ಗಂಟ ಕಟಗೊಂಡಾನ ಮತ್ತೇನ ।
ಹೋಗ ಹೋಗತ ಅವರಕ್ಕನ ಮನಿಗೆ ಹೋದನಲ್ಲ ನಗತsನ ॥ ೩ ॥

ಹೋಗಹೋಗತ ಅವರಕ್ಕನ ಮನಿಗಿ ಹೋದನಲ್ಲ ನಗತsನ ।
ತವರ ಮನಿsದು ಪ್ರೀತಿ ಕೇಳತಾಳ ಕುಂತ ಎಲ್ಲಾ ಒಟ್ಟೇನ ॥ ೪ ॥

ತವರ ಮನಿsದು ಪ್ರೀತಿ ಕೇಳತಾಳ ಕುಂತ ಎಲ್ಲಾ ಒಟ್ಟೀsನ ।
ತಮ್ಮ ಬಂದಾನಂತ ಅಡಗಿ ಮಾಡ್ಯಾಳವ್ವ ದಿನಸ ದಿನಸ ಎಲ್ಲsನ ॥ ೫ ॥

ತಮ್ಮ ಬಂದಾನಂತ ಅಡಗಿ ಮಾಡ್ಯಾಳವ್ವ ದಿನಸ ದಿನಸ ಎಲ್ಲsನ ।
ತಮ್ಮಗೆಬ್ಬಿಸಿ ಜಳಕ ಮಾಡಿಸಿ ಊಟಾ ಮಾಡ್ಸ್ಯಾಳಲ್ಲsನ ॥ ೬ ॥

ತಮ್ಮಗೆಬ್ಬಿಸಿ ಜಳಕ ಮಾಡಿಸಿ ಊಟಾ ಮಾಡ್ಸ್ಯಾಳಲ್ಲsನ ।
ದೇವರ ಮನಿಯಾಗ ಹಾಸಿಗಿ ಮಾಡೀನಿ ಮಲಗಪ್ಪsಹೋಗಿನ್ನ ॥ ೭ ॥

ದೇವರ ಮನಿಯಾಗ ಹಾಸಿಗಿ ಮಾಡೀನಿ ಮಲಗಪ್ಪsಹೋಗಿನ್ನ ।
ಓಡಿ ಹೋಗಿ ಗಂಡನ ಕರಿsತಾಳ ಬಾರsಮನಿಕಡಿs ಇನ್ನ ॥ ೮ ॥

ಓಡಿ ಹೋಗಿ ಗಂಡನ ಕರಿsತಾಳ ಬಾರsಮನಿಕಡಿs ಇನ್ನ ।
ಗುಂಜಿ ಗಂಜಿ ಕೈವಶದ ಗಂಟಾ ಕೊಲ್ಲಬೇಕ ಇವನನ್ನ ॥ ೯ ॥

ಈ ಮಾತ ನನ್ನ ಕೈಲಾಗದಂತ ಹೊಂಟಾನ್ರಿ ಹೊರಗsನ ।
ಬಾಳನ ಜೀವಕ ಭಾಗ್ಯದ ರಂಡಿ ಮಾಡ್ಯಾಳ ಮೋಸsನ ॥ ೧೦ ॥

ಮಾಳಿಗಿ ಏರಿ ಹೊತ್ತ ನೋಡತಾಳ ಐತಿ ಇನ್ನಾ ಎಷ್ಟೇನ ।
ಮುರು ಧಡೇದ ಕಲ್ಲು ತೆಗೊಂಡು ಜಜ್ಜಾಳ್ರಿ ಎದಿಗೇನ ॥ ೧೧ ॥

ಶಿವಶಿವಾ ಹರಾಹರ ಹರಹರಾ ಶಿವಶಿವsನ ।
ಏನ ತಂದೆಪ್ಪಾ ಮರಣ ಏನsನ ಏನ ಕೊಟ್ಟೆಪ್ಪ ಮರಣsನ ॥ ೧೨ ॥

ಅಂವಾ ಬಿಟ್ಟನಲ್ಲಾ ಪ್ರಾಣs ಅವಂದು ಹಾರಿತಲ್ಲ ಪ್ರಾಣsನ ।
ದೇವರ ಮನಿಯಾಗ ನಡಮಟ ತಗ್ಗಾ ಹೊಡೆದಾಳ್ರಿ ಬಾಲೆsನ ॥ ೧೩ ॥

ಕಡದ ಕಡದು ನುಚ್ಚುನುಚ್ಚು ಮಾಡಿ ತುಂಬತಾಳ್ರಿ ಒಳಗsನ ।
ಕರಕಡದs ಮಾಡಟಿಗಾಯ್ತುವ್ವ ಹ್ಯಾಂಗರೇ ಏನs ॥ ೧೪ ॥

ಮಾಯದ ಕೊರಳ ಸಿಡದ ಬಿದ್ದಾದವ್ವ ಅಡಕಲ ಸಂದ್ಯಾಗೆsನ ।
ರಾತರಾತರಿ ತಾಯಿ ಕನಸಿನಾಗ ಮಗಾ ಹೋಗಿ ನಿಂತಾsನ ॥ ೧೫ ॥

ಮಾಲಗಾರ ಚಾಕರಿಗ್ಹೋಗಬೇಕಂತ ಹಟಾತೊಟ್ಟಾsನ ।
ನಿನಕ್ಕನ ಮನಿಮುಂದs ಬೇವಿನ ಹಂದರ ಹಾಕಿದರೇನ ॥ ೧೬ ॥

ಕೈಯಲ್ಲಿ ಕಂಕಣs ಮೈಯಲ್ಲಿ ಅರಿಷಿಣsಯನ ।
ಮದಿs ಆಗತಿದ್ದಿ ಜಾಣಾ ಮದಿs ಆಗತಿದ್ದಿ ಏನ ॥ ೧೭ ॥

ರಾತರಾತರಿ ಮಗಳ ಮನೀಗಿ ಬಂದಾಳ್ರಿ ಅಳತುನ ।
ಕನಸಿನ ಅರ್ಥಕುಂತ ಕೇಳತಾಳ ಯಾಕವ್ವ ಹೀಂಗsವ ॥ ೧೮ ॥

ಕನಸಿನ ಅರ್ಥಕುಂತ ಕೇಳತಾಳ ಯಾಕವ್ವ ಹೀಂಗsವ ।
ತಮ್ಮ ಇದ್ದವ ನನಗೊಬ್ಬsವ ನಾಕೊಂದೇನ್ಹ್ವಾಂಗsನ ॥ ೧೯ ॥

ದೇವರ ಮನಿಯಾಗ ನೀರ ಕುಡಿಯಲಾಕ ಹೋದಳಲ್ರಿ ತಾನೇsನ |
ಮಾಯದ ಕೊರಳsನಡೆದ ಬಿದ್ದಾದವ್ವ ತಾಯೀ ಬಡಿಯರ್ಾರ ‖ ೨೦ ‖

ನೋಡಿ ಹಣಿ ಹಣಿ ಬಡಕೋತಾಳ್ರಿ ನೋಡಿ ಅಳತಾಳ್ರಿ ಮಗನ |
ಏನು ತಂದೆಪ್ಪ ಮರಣs ಏನು ಕೊಟ್ಟೆಪ್ಪ ಮರಣsನ ‖ ೨೧ ‖

ಈ ಸುದ್ದಿ ಕೇಳಿ ಪರಂಗಿ ಸಾಯಬಾ ಇದ ಏನ ಒಬ್ಬಾಟಂದನ |
ಪಾಪದ ರಂಡಿಗಿ ತೋಪಿನ ಬಾಯಿಗಿ ಹಚ್ಚಿಕೊಳ್ಳಿರೊಭಾsನ ‖ ೨೨ ‖

**ಪಾಠಾಂತರಗಳು**

೧) ಅಕ್ಕ ತಮ್ಮ; ನಾಯಕ ಎನ್.ಆರ್., ಮುಕ್ರಿಗಳ ಗೀತ ಮತ್ತು ಕಥೆಗಳು, ಜಾನಪದ ಪ್ರಕಾಶನ, ಹೊನ್ನಾವರ, ೨೦೦೦, ಪು. ೯೮-೧೦೦.

---

* ತಾಯಿ ತಂದಿ ಹೊಟ್ಟೆಲೆ ಮಗ ಒಬ್ಬಿದ್ದನೇಳ್ರಿ, ಒಬ್ಬsನ್; ನಾಗೇಗೌಡ ಎಚ್.ಎಲ್., ದುಂಡು ಮಲ್ಲಿಗಿ ಹೂವ ಬುಟ್ಟೆಲಿ ಬಂದಾವ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೧೯೯೫ ಪ್ರ.ಸಂ. ೧೫೦-೧೫೧.

## ೨೮. ಸಂಗವ ಮಾಡ್ಯಾಳ ನಿಮ ತಂಗಿ *

ಈರವ್ವ ಮಲಕವ್ವ ನೀರಿಗಿ ಹೋದಾರ ‖ ತಂದನ್ನನ ‖
ಈರವ್ವ ಬರಲಿಲ್ಲ ಮಲಕವ್ವ ಬಂದಾಳ ‖ ಕೋಲು ಕೋಲಿ ‖
ಎಲೆ ಮಲಕಿ ಎಲೆ ಮಲಕಿ ಎರಡು ಬಾರಿ ನೀರ ತಂದಿ ‖ ತಂದನ್ನಾನ ‖
ನನ ಮಗಳ ಈರಮ್ಮ ಬರಲಿಲ್ಲ ಮಲಕವ್ವ ‖ ಕೋಲು ಕೋಲೆ ‖
ಅಂಗಿನವರೊಂದಾರ ಮಂದಿ ಚುಂಗಿನವರೊಂದಾರ ಮಂದಿ | ೧
ಸಿಂಗಾರದ ಬಿಲ್ಲಿನ ತೋರೋರೊಂದ್ಯೆದ ಮಂದಿ
ಸಿಂಗಾರದ ಬಿಲ್ಲಿನ ತೋರೋರೊಂದ್ಯೆದ ಮಂದಿ ಕೂಟ
ಸಂಗವ ಮಾಡ್ಯಾಳ ನಿನ ಮಗಳ ಈರಮ್ಮ
ಹೊಲಕೋದ ದ್ಯಾಮಣ್ಣ ಮನಿಗ್ಯಾವರ ಬಂದಾನ
ಎತ್ತುಗಳ ಕಟ್ಯಾನ ಮೇವುಗಳ ಹಾಕ್ಯಾನ
ಕಾಲಿಗಿ ನೀರ ಕೊಡಬಾರದೇನೆ
ಈಗ ತಗೋನ ನೀರ ಆಗ ತಗೋವಂತೆ
ಊರ ಮುಂದಲ ಸುದ್ದಿ ಕೇಳಿ ಬರುಬಾರದ
ಮುಂಜೇಲಿ ಹೋಗೇನಿ ಚಂಜೀಕೆ ಬಂದೀನಿ
ಊರ ಮುಂದಲ ಸುದ್ದಿ ನಾನೇನ ಬಲ್ಲೇನೆ

ಅಂಗಿನವರೊಂದಾರ ಮಂದಿ ಚುಂಗಿನವರೊಂದಾರ ಮಂದಿ
ಸಿಂಗಾರದ ಬಿಲ್ಲಿನ ತರೋರೊಂದ್ಯೆದ ಮಂದಿ
ಸಿಂಗಾರದ ಬಿಲ್ಲಿನ ತರೋರೊಂದ್ಯೆದ ಮಂದಿ ಕೂಟ
ಸಂಗವ ಮಾಡ್ಯಾಳ ನಿಮ ತಂಗಿ ಈರಮ್ಮ
ಹತ್ತೆತ್ತಿನ ಬಾರಕೋಲ ಎತ್ತಿ ಹಿಡಿದ ದ್ಯಾವಣ್ಣ
ನನ್ನೇನ ಹೊಡದೀಯೊ ನನ್ನೇನ ಬಡದೀಯೋ
ನಿಮ ತಂಗಿ ಈರಮ್ಮನ ರೊಕ್ಕಾವ ಎತ್ತೋಗ
ಏ ಯವ್ವ ಏ ಯವ್ವ ಏ ನನ್ನ ಹಡದವ್ವ
ರೊಟ್ಟಿಯ ಬುತ್ತಿಯ ಮಾಡೆ ನನ ಹಡದವ್ವ
ಕರಿಯ ಬಂದಿಲ್ಲ ಕಳಸ ತೀನಂಬತೀದಿ
ಬ್ಯಾಸರಾದಳೇನೊ ನನ ಮಗಳ ಈರಮ್ಮ
ಜೋಳದ ಹೊಲದಾಗ ಅವರ ಮಾವ ಬಂದಿದ್ದನವ್ವ
ಕರಕೊಂಡ ಬಾ ಅಂದ ಹೇಳ್ಯಾರ ಹಡದವ್ವ
ಹತ್ತಿಯ ಹೊಲದಾಗ ಅವರತ್ತಿ ಬಂದಿದ್ದಲವ್ವ ॥
ಕರಕೊಂಡ ಬಾ ಅಂತ ಹೇಳ್ಯಾರ ಹಡದವ್ವ ॥
ಅಲ್ಲಿದ್ದ ದ್ಯಾಮಣ್ಣ ನೆವ್ವಾರ ಮನಿಗೋದ ॥
ಕುಂದುವಾರನೆಂದು ಕುರಜೀಯನಾಕ್ಯಾರ ॥
ಕುಂದ್ರಕ ಬಂದಿಲ್ಲ ನಿಂದ್ರಕ ಬಂದಿಲ್ಲ ॥
ನಮ ತಂಗಿ ಈರಮ್ಮಗ ಸೀರೆಗಳು ಬೇಕೆಂದ ॥
ಅಲ್ಲಿಂದ ದ್ಯಾಮಣ್ಣ ಬಳಿಗಾರ ಮನಿಗೋದ ॥
ಕುಂದರಬಾರೆಂದು ಕುರಜೀಯನಾಕ್ಯಾರೆ ॥
ಕುಂದ್ರಕ ಬಂದಿಲ್ಲ ನಿಂದ್ರಕ ಬಂದಿಲ್ಲ ॥
ನಮ್ಮ ತಂಗಿ ಈರಮ್ಮಗ ಬಳಿಗಳು ಬೇಕಂದ ॥
ಅಲ್ಲಿದ್ದ ದ್ಯಾಮಣ್ಣ ಹೂಗಾರ ಮನಿಗೋದ ॥
ಕುಂದ್ರಕ ಬಾರೆಂದು ಕುರಜೀಯನಾಕ್ಯಾರ ॥
ಕುಂದ್ರಕ ಬಂದಿಲ್ಲ ನಿಂದ್ರಕ ಬಂದಿಲ್ಲ ॥
ನಮ ತಂಗಿ ಈರಮ್ಮಗ ಹೂಗಳು ಬೇಕೆಂದ ॥
ಅಲ್ಲಿಂದ ದ್ಯಾಮಣ್ಣ ಸಿಂಪಿಗರ ಮನಿಗೋದ ॥
ಕುಂದರನಾಕ್ಯಾರ ಕುರಜೀಯ ॥
ಕುಂದ್ರಕ ಬಂದಿಲ್ಲ ನಿಂದ್ರಕ ಬಂದಿಲ್ಲ ॥
ನಮ ತಂಗಿ ಈರಮ್ಮಗ ಕುಬಸಗಳು ಬೇಕೆಂದ ॥
ಅಲ್ಲಿಂದ ದ್ಯಾಮಣ್ಣ ಮನಿಗ್ಯಾದರು ಹೋದಾನ ॥
ಸೀರಿನೆ ಕುಬಸಕ ಹೇಳಿ ಬಂದೆನೆ ತಂಗಿ ॥
ಅಲ್ಲಿಂದ ಈರಮ್ಮ ನೆವ್ವಾರ ಮನಿಗೋದ್ಲು ॥
ಕುಂದುವಾರನೆಂದು ಕುರಜೀಯನಾಕ್ಯಾರ ॥
ಕುಂದ್ರಕ ಬಂದಿಲ್ಲ ನಿಂದ್ರಕ ಬಂದಿಲ್ಲ ॥

ನಮ್ಮಣ್ಣ ದ್ಯಾಮಣ್ಣ ಸೀರಿಗಿ ಹೇಳ್ಯಾನಂತೆ ॥
ಹೋಗಿ ಬಾರ ಈರಮ್ಮ ಬಾಗಿ ಬಾ ಈರಮ್ಮ ॥
ಬರತ ಗಂಡು ಮಗನ ಎತ್ತಿ ಬಾ ಈರಮ್ಮ ॥
ಅಲ್ಲಿಂದ ಈರಮ್ಮ ಬಳಿಗಾರ ಮನಿಗೋದ್ಲು ॥

ಗಂಗ ಗಾಳ್ಯಾಗಲೆ ಹೆಣ್ಣ ಮಣ್ಣಾಗಲೆ ॥
ನನ್ನ ಕೊಲ್ಲಾ ವೈರಿ ನನ ಹಿಂದೆ ಬರತಾನ್ರವ್ವ ॥
ಸೀರೇನ ಕುಬುಸಗಳ ತಗೊಂಡು ಈರಮ್ಮ ॥
ಬಂದಾಳ ತನ್ನ ಅರಮನಿಗಿ ಈರಮ್ಮ ॥
ಕಂಚಿನ ಬಟಲಾಗ ಮಿಂಚೆಣ್ಣೆ ತಗೊಂಡು ॥
ಕೆಂಚಿ ಈರಮ್ಮನ ತೆಲಗೆರಿಯೆ ಹಡದವ್ವ ॥
ಕರಿಸೀರೆ ಉಟ್ಟಾಳ ಹೊಸ ಕುಬಸ ಹೊಟ್ಟಾಳ ॥
ಉಡಿಯಾಗ ಉಡಿಯಕ್ಕಿ ಹಾಕ್ಯಾರ ಈರಮ್ಮಗ ॥
ಬುತ್ತಿಯ ಕಟ್ಗೊತ್ತಿಗೆ ಬೆಕ್ಕ ಅಡ್ಡ ಬಂದಾವ ॥
ಬಾಡ್ಯಪ್ಪ ನನ ಮಗನ ಅಪಸಕುನ ಆಗ್ಯಾವ ॥
ಅಪಸಕುನ ಇವಸಕುನ ಅವ ನಮ್ಮ ತೆಲಿಮ್ಯಾಲೆ ॥
ಸುಮ್ಮನೇ ಬುತ್ತೀಕಟ್ಟಿ ನನ್ನ ಹಡದವ್ವ ॥
ರೊಟ್ಟಿಯ ಕಟ್ಗೊತ್ತಿಗೆ ನಾಯಿ ಅಡ್ಡ ಬಂದಾವ ॥
ಬ್ಯಾಡಪ್ಪ ನನ ಮಗನ ಅಪಸಕುಲ ಆಗ್ಯಾವ ॥
ಅವಸಕುನ ಇನಸಕುನ ಆದ ನಮ್ಮ ತೆಲಿಮ್ಯಾಲಿ ॥
ಉಡಿಯಾಗ ಉಡಿಯಿಕ್ಕಿ ಹಾಕ್ಯಾರ ಈರವ್ವಗ ॥
ಹೊಸಲಿಯ ಬಿಟ್ಟು ಹೊರ ಹೊಂಟಾಳ ಈರಮ್ಮ ॥
ಓಣ್ಯಾಳ ಅವ್ವನರ ಒಣ್ಯಾಳ ಅಕ್ಕನರ ॥
ನಾನು ಹೋಗತೀನಿ ಬರ‍್ಯೆ ನನ ಗಂಡನ ಮನಿಗೆ ॥
ಮಕ್ಕಳ ಇದ್ದರ ಎಲ್ಲಿ ತನ ಬಂದೀರಿ ॥
ಮಕ್ಕಳ ಅತ್ತಾರು ಹೋಗ್ರೆವ್ವ ಮನಿಯಾಗ ॥
ಊರ ದಆರಿ ಬಿಟ್ಟೆಲ್ಲೊ ಕೆರಿ ದಾರಿ ಬಿಟ್ಟೆಲ್ಲೊ ॥
ಅಡವಿಯ ದಾರಿಯ ಹಿಡಿದೆಲ್ಲೊ ಹಿರಿಯಣ್ಣ ॥
ಊರೇನೆ ದಾರಿಗಿ ಹವಳೀಕಿ ಬಾಳವ್ವ ॥
ಅಡವಿಯ ದಾರಿಲೆ ಹೋಗಾನ ನಮ ತಂಗಿ ॥
ಅತ್ತತ್ತ ಹೋಗ್ಯಾನ ಬಾವಿಯ ಕಂಡಾನೆ ॥
ಈ ಬಾ ಬಾವಿತಲೆ ಉಣ್ಣೋನ ನಮ ತಂಗಿ ॥
ಬಾವ್ಯಾಕ ಇಳಿದಾರ ಕೈ ಕಾಲ ತೊಳೆದಾರ ॥
ಬುತ್ತಿಯ ಮೂರ ಭಾಗ ಆಗ್ಯಾವ ಹಿರಿಯಣ್ಣ ॥
ನಿನಗೊಂದು ಬಾಗವ್ವ ನನಿಗೊಂದು ಬಾಗವ್ವ ॥
ಬಾವಿ ಗಂಗವ್ವಗ ಬಾಗೊಂದು ಆಗ್ಯಾವ ನಮ ತಂಗಿ ॥

ಒಂದ ತುತ್ತ ಉಣ್ಣಲಿ ಬಿಟ್ಟ ಎರಡ ತುತ್ತ ಉಣ್ಣಲಿ ಬಿಟ್ಟ ॥
ಮೂರನೇ ತುತ್ತಿಗಿ ಚಟ್ಟನೆ ಕಡದಾನ ॥
ಚಟ್ಟನ ಕಡದಾನೆ ಮಟ್ಟಿಯ ಕಟ್ಯಾನೆ ॥
ಬಾವಿ ಗಂಗಮ್ಮಗೆ ಒಗದಾನ ಈರಮ್ಮನ ॥

ಈರಮ್ಮನ ಕಡದಲ್ಲಿ ಹೂವಿನ ವನವಾಗಿ ॥
ಈರಮ್ಮನ ಕಡದಲ್ಲಿ ಮಲ್ಲಿಗಿ ವನವಾಗಿ ॥
ರೆಂಬಿಯ ಕಡದಲ್ಲಿ ನಿಂಬಿಯ ವನವಾಗಿ ॥

**ಸಾಲುಗಳ ಕೊನೆಗೆ ತಂದನ್ನಾನ ಕೋಲು ಕೋಲೆ ಎಂದು ಹೇಳಬೇಕು.**

**ಸಮಾನ ಆಶಯ ಪಠ್ಯ**

೧) ರಡ್ಡೇರ ಸಾವಿತ್ರಿ; ಸುಂಕಾಪೂರ ಎಂ.ಎಸ್. ಜೀವನ ಜೋಕಾಲಿ ಕೋಲುಪದ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೨ ಪು.ಸಂ. ೧೦೯-೧೧೯.

* ಸಂಗವ ಮಾಡ್ಯಾಳ ನಿಮ ತಂಗಿ; ಹಕಾರಿ ದೇವೇಂದ್ರಕುಮಾರ, ಜಾನಪದ, ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೫ ಪು.ಸಂ. ೪೦೫-೪೦೮.

## ೨೯. ಸಣ್ಣಗಂಗೆ*

“ಹರಹssರ”ಲಂssದಿತುs
“ರಾsಮ ರಾsಮs” ಲಂssದಿತುs
ಒಳ್ಳೇ ಒಂಬತ್ತಿಂಗsಳಾssಗಿತ್ತು
“ಹರಹssರ”ಲಂssದಿತು

“ರಾsಮ ರಾsಮs”ಲಂssದಿತು
“ಆಸ್ರಲಿನ್ನೆ ಲಾsಗುತssದೆ
ಹಸುವಿನ್ನೆ ಲಾsಗುತssದೆ”
ಅಟಂsಬು ಮಾsstತಿನ್ನೆs

ಹೇಳೀssತು ಸಣ್ಣs ಗಂsಗೆs
ಅಲ್ಲೊಂssದು ಜೋssಗಿಯು

ಬೇಡೂssಕೆ ಬಂssದಿsದ
“ಕೇಳು ಕೇssಳೆ ಸಣುಗಂಗೆs,

ಬಿಕ್ಸಾನಾsದ್ರೆ ನೀssಡಂ”ದ
“ಕೇಳು ಕೇssಳೆ ಜೋಗಿ ನೀನು
ನನಗೂssನು ಲಾಸ್ರಲಾssಯ್ತುs
ಕೇಳು ಕೇssಳು ಜೋಗಿ ನೀನು

ನನಗಿssನ್ನ ಲಸುವಲ್ಲೋ
ಅಟ್ಟಂssಬು ಮಾssತಿನ್ನೆs
ಕೇಳssವ್ನೆ ಜೋಗಿ ಲೀಗೆs
“ಕೆಳು ಕೇssಳು ಸಣ್ಣುಗಂಗೆs,

ನಾನೀನ್ನೆs ಹಣ್ಣs ಕೊಡುತೆs”
ಅಟ್ಟಂssಬು ಮಾssತಿನ್ನೆs
ಹೇಳssವ್ನೆs ಜೋssಗಿನ್ನುs
ಮಾಯೀssನ ಹಣ್ಣ ತೆಗದ

ಕೆತ್ತಿssನ್ನೆs ಹೊಳ ತೆಗದು
ಯೆಯ್ದು ಹೋಳss ಕೊssಟ್ಟೆದ್ದs
ಸಣ್ಣುಗಂಗಿ ಲಂಬೂs ಹೆಣ್ಣುss
ಗೊಯ್ಸು ತೆಗದಿ ಬೇಣ್‌ದಲ್ಲಿ ವಗೆದs

ಸಣ್ಣುಗಂಗಿ ಲಂಬೂ ಹೆಣ್ಣುs
ಅದ್ವಂssದ ನೋssಡಿತುss
ಸಣ್ಣುಗಂಗಿ ಲಂಬೂ ಹೆಣ್ಣುs
ಯೆಯ್ದುsಲು ಕ್ಯಾsದುಗಿs

ಕೊಟ್ಟssವ್ನೆ ಜೋssಗಿಯು
ಸಣ್ಣುಗಂಗಿ ಲಂಬೂs ತಂಗಿs
ವಳಗಾsದ್ರೂ ಹೋssಗಿತುs
ಸಣ್ಣುಗಂಗೆ ಲಂಬೂs ಹೆಣ್ಣು

ವಳಗಿssನ್ನೆ ಹೋಗಿ ಬರುವs(ಟಕೆ)
ಜೋಗಿssಯು ಮಾಯವಾsದs
ಲಲ್ಲೆssಲ್ಲೂs ಯೆಲ್ಲವಂತುs
ಸಣ್ಣುಗಂಗಿ ಲಂಬೂs ತಂsಗಿs

ಹೊತ್ತಿನ ತೆಂಗ್ಳsಲಾssಗಿತು
ಸಣ್ಣುಗಂssಗೆ ಲಂಬೂs ತಂಗಿs
ಜನ್ನುಲಿನ್ನೆsಲಾssಗಿತುss
ಹುಡ್ಗs ಇನ್ನೆss ಹುsssಟ್ಟಿದs

ಬೆಳ್ಳಿssಯ ಲ್ಹೊssಕ್ಕಳss
ಚೆನ್ನssದ ಬುಜವೆಲಿನ್ನೆs
"ಹರಹssರ"ಲಂದಳು ಗಂಗೆs
"ರಾಮ ರಾsssಮ" ಲಂssದಿತುs

ತೆಂಗಳಾssದ ಹುಡ್ಗನ ನೋಡ್ದ್ರೆs
ಲಾರು ತೆಂಗ್ಳದ ಹುಡ್ಗನಾssದ
ಆರು ತೆಂಗ್ಳದ ಹುಡ್ಗನ ನೋಡ್ದ್ರೆs
ವಂದು ವರ್ಸದ ಹುಡ್ಗsನಾsದs

ವಂದು ವರ್ಸದ ಹುಡ್ಗ್ನ ನೋಡ್ದ್ರೆs
ವಳ್ಳೆ ಲೈದು ವರ್ಸಲಾssಗಿತುs
ಲೈದು ವರ್ಸನ ಲುಡ್ಗ್ನ ನೋಡ್ದ್ರೆs
ವಳ್ಳೆ ಲೆಂಟು ವರ್ಸಲಾssಗಿತು

"ಕೇಳು ಕೇssಳೆ ತಾssಯವ್ವss,
ವಳ್ಳೆ ಲಸುವಿssನ್ನೆ ಲಾssಗುತದ್ಯೆs"
"ಕೇಳುಕೇssಳು ಮಗನೆ ನೀsನುs
ವಳ್ಳೆ ಲಸ್ವಿsನ್ನೆsಲಾssದರೆ

ಏನssಲು ಕೊಡುಬೇಕುs?
ವಂದsss ಜೋಗೀss ಬಂದs
ಯೆಯ್ಡssಲು ಮಾವಿನ್‌ಕ್ಯಾದಗೀs
ಕೊಟ್ಟssಲು ಹೋssಗಿದ್ದss"

ಲಂದ್ಹೇssಳಿ ಹೇssಳಿತುs
ಸಣ್ಣುಗಂಗೆ ಲಂಬೂs ತಂಗಿs
ಮಗುನೀssಗೆ ಕೊsssಟ್ಟಿತುs
ಲದುರೊಂssದ ತಿಂssದಿದ್ದs

"ಹರ ಹssರ" ಲಂssದಿತುs
"ರಾಮ ರಾsssಮ" ಲಂssದಿತುs

ಜೋಗಿರ್ ಹೊತಾಕ್ದ ಮಾಯಿನ್ ಮರಕೆ
ಪಲುವಿssನ್ನೆ ಬಂssದದ್ಯೆ

ತಾಯಿssನ್ನೆಲಾssಗಿತು
ವಳ್ಳೆ ಹಣ್ಣೀssಗೆ ಬಂssದದ್ಯೆ
ಹಣ್ಣೆsನ್ನೆಲಾssಗಿತುs
ವಳ್ಳೆ ಸಣ್ಣುಗಂಗೆ ಲಂಬೂ ತಂಗಿ

ಅದ್ರsssಲು ತಿಂದಿಕಂಡಿs
ಲುಳ್ಳssವ್ರೆ ತೋಟದಲ್ಲಿ
"ಕೇಳು ಕೇsssಳೆ ತಾssಯವ್ವss,
ವಳ್ಳೆ ಮೂರು ಕಾsರು ಹೋssತಿದೆs"

"ಕೇಳು ಕೇssಳು ಮಗುನೆ ನೀನುs
ವಳ್ಳೆ ಊರು ಕೇsರಿ ಯೆsಲ್ಲಲೊs
ಅಲ್ಲೊಂsದು ಲsಜ್ಜಿಯುs
ವಳ್ಳೆ ಬೇಡೂssತ ಬಂssದದೆ

"ಕೇಳು ಕೇssಳು ಸಣ್ಣುಗಂಗೆs,
ವಳ್ಳೆ ಬಿಕ್ಸssವ ನೀssಡವ್ವss"
"ಬಿಕ್ಸssವ ನೀssಡುಕೆs
ಬಿಕ್ಸssವೆ ಇssಲ್ಲಂ"ತುss

ನಾನು ತಿಂಬೂ ಮಾವಿನ್ ಹಣ್ಣುs
"ಕೊಡುತೆಂssದಿ ಹೇssಳಿತುs
ಮಾವೀssನಲ್ಹsಣ್ಣಿನs
ಕೊಡ್ತೀss"ದಿ ಹೇssಳಿತುs

"ಕೇಳು ಕೇಳೇ ಲsಜ್ಜವ್ವs,
ಯೆಲ್ಲಿssಗೆ ಬಂssದಿದೆ ?
ನಿನ್ನssಲು ಬಂssದಲಿs
ಲೂರು ಕೇssರಿ ಲುಂssಟೇನೇ ?"

"ಕೇಳು ಕೇssಳೆ ಸಣುಗಂಗೆs,
ವಳ್ಳೆ ಬೆಟ್ಟದಲ್ಲಿ ಸಣ್ಣ ಹಾssದಿ
ಬೆಟ್ಟದಲ್ಲಿ ಲೊಂssದಲುs
ಹುಳಲ್ ಹಾsದಿ ಲುಂssಟಲ್ಲಿ

ಅದೇ ಲ್ಹಾದಿ……………..s
ಲ್ಹೋಗು ಬೇಕೆ ಸಣುಗಂಗೆs
ಅಲ್ಲೇssಯ ಮಾssದೊಡ್ಡss
ವಳ್ಳೆ ಲರಸುಮನೆಯುಂssಟಲ್ಲೆs"

ಅಟ್ಟಂssಬು ಮಾssತಿನ್ನೆs
ಕೇಳssದೆ ಸಣುಗಂsಗೆs
ಮಾವೀsನ ಲsಣ್ಣಟ್ಟುss
ಲೊಟ್ಟುಮಾsಡಿ ಇssಟ್ಟಿದೆs

"ಕೇಳು ಕೇssಳು ಮಗನೆ ನೀsನು
ವಳ್ಳೆ ಮುಟ್ಟೀssನು ಇssಲ್ಲಲೊs
ನಿನ್ನssಲು ಮಾವದಿರುs
ವಳ್ಳೆ ನನ್ನs ತಂದಿ ಬಿಟ್ಟಿರಲ್ಲೋs

ವಂದssಲು ಕಂಬ್ಳಿ ಹಾsಸಿs
ಮನಗ್ಸಿನ್ನೆ ಹೋssಗಿದ್ದs
ಅದರಾssಗೆ ಲೊಂದು ತುಂಡುs
ಕೊಯ್ದಿssನ್ನೆಕೊಡ್ತೆ"ನಂತುs

ಕುಂಬ್ಳೀssಯ ತssಕ್ಕಂಡ
ಮಾಯಿನ್ ಹಣ್ಣ ತಟ್ಟೆಕಂಡs
ಕಟ್ಟssಲು ಕಂಡೀssದs
ವಳ್ಳೆ ತಾಯವ್ವss ಕೇssಳಿದ

"ಕೇಳು ಕೇssಳು ಮಗುನೆ ನೀನುs
ಅಲ್ಲಿ ಹುಲಿ ಕೈssಡಿ ಬಂssದರೆs
ಹೆದುರssಲು ಬೇಡs" ಲಂತುs
ವಳ್ಳೆ ಸಣುಗಂssಗೆ ಲಂಬೂ ತಂಗಿs

ಮಾವಿನ್ಹಣ್ಣsಲ್ಹೊತ್ತಿಕಂಡಿs
ಅರಸುಮನ್ಗೆ ಹೋssಗವ್ನೆs
"ಕೇಳು ಕೇssಳಿ ಅಮ್ಮನವ್ರೆs,
ಮಾವಿನ್ಹಣ್ಣು ಬೇssಕೇನುs?"

ಐದು ಜsನ ಗೌssಡಿರು
ಬತ್ತಲಿನ್ನೆ ಮೆರಿತಿರುs

ಮಾಳುಗಿಗಿನ್ನೆ ಹೋssಗಿರುs
“ಕೇಳು ಕೇssಳಿ ಮಾsಬಲಸ್ವಾಮಿs,

ಅಲ್ಲೊಂssದು ಉಡ್ಗಲಿನ್ನೆs
ವಳ್ಳೆ ಮಾವಿನ್ಹಣ್ಣು ತಂssದನೆ”
“ಕೇಳಿ ಕೇssಳಿ ಗೌssಡಿರs,
ತಕ್ಕಂಡಾsರು ಬssನ್ನಿರಿs”

ಐದು ಜssನ ಗೌssಡಿರು
ವಳ್ಳೆ ಲ್ಹುಡ್ಗssನ ಲೇssಗಿನ್ನುs
ಕರುಕಂಡಾರೂ ಬಂssದವ್ರೆs
“ಕೇಳುಕೇsಳೊ ತssಮ್ಮಯ್ಯs,

ಮಾವೀssನಲ್ಹssಣ್ಣಿಗೆs
ಯೆಟ್ಟ ದುಡ್ಡs ಕೊಡಬೇಕೋs?”
“ಕೇಳು ಕೇssಳಿ ಲಮ್ಮದಿsರೇs,
ನನ್ಗುಲೇನು ಗೊssತ್ತಿಲ್ಲs

ನೀವssಲು ಕೊಟ್ಟsದ
ತಕ್ಕಂssಡಿ ಬಿಡ್ತೆನಂದs
ಐದು ಜssನ ಗೌssಡಿರುs
ಅಟ್ಟssಕ್ಕೆ ಹೋssಗವ್ರೆs

“ಕೇಳಿ ಕೇssಳಿ ಮಾsಬಲಸ್ವಾಮೀs,
ವಳ್ಳೆ ಹುಡಿssನ್ನೆ ಬಂssದವ್ನೆs
ಮಾವಿನ್ಹಣ್ಣs ತಂದವನ್ಯೆs
ದರವ ಯೇನು ಹೇಳುದಿಲ್ಲs

ನೀವssಲು ಕೊsssಟ್ಟಿದ್ದss
ತಕ್ಕಂssಡಿ ಹೋsssತಂದss
ವಂದssಲು ಕೊಳುಗಕ್ಕಿss
ಅಳುದssಲು ಕೊಡಿರಂದss

“ಕೇಳು ಕೇsಳಿ ಗೌssಡಿರs,
ಲ್ಹುಡ್ಗssನ ಕೈಲೇssಗs
ನಿನ್ನ ತಂsದಿಯ ಕರುಕಂಡಿs
ನಾಳಿssಕೆ ಬಾss”ರಂದ್ರುs

ವಂದssಲು ಕೊಳುಗಕ್ಕಿss
ಕೊಟ್ಟವ್ರೆ ಯೇssಗಿನ್ನೆs
ಕಂಬ್ಳೀssಲಿ ಕಟ್ಟಕಂಡs
ಮನೆಗಿsನ್ನೆ ಬಂದೀssದs

"ಕೇಳು ಕೇssಳೆ ತಾಯವ್ವss,
ವಂದ್ ಕೊಳ್ಗಕ್ಕಿ ಕೊಟ್ಟsರೆs
ಕೇಳು ಕೇssಳೆ ತಾssಯವ್ವss,
ವಳ್ಳೆ ನಾಳೀssಗೆ ನಿನ್ನssಲುs

ತಂದಿನಾsರು ಕsರುಕಂಡಿs
ಬಾsರಂsದಿ ಹೇssಳವ್ರೆss
ಕೇಳು ಕೇssಳೆ ತಾssಯವ್ವss
ಲಿಂದೀssನಮಾಯಿನ್ ಹೆಣ್ಣss

ಹಾಗೇssಯಲಿಡsಬೇಕುs
ಲನ್ನ ಮಾsಡ್ಕಂಡ್ ಉಂsಬನೆs"
ಸಣ್ಣಗಂಗೆ ಲಂಬೂs ತಂಗಿs
ವಂದುs ತಿದ್ದsಕ್ಕಿ ಹೊssದಿತು

ಅನ್ನ ಇನ್ನೆ ಮಾಡುಕಂಡಿ
ಉಂsಡವ್ರೆ ಯೇssಗಿನ್ನೆs
ಉಂಡಿ ಆರೂs ಲಾssಗಿತುss
"ಕೇಳು ಕೇssಳು ತಾssಯವ್ವss,

ಬೆಳುಗಾssಗೆ ಲೆsದ್ದವ್ರುs
ಹೋಗ್ವssನೆ ತಾssಯವ್ವss"
"ಹರಹssರ" ಲಂssದಿತುs
"ರಾsಮ ರಾssಮs" ಲಂssದಿತುs

ಕೇಳು ಕೇssಳು ಮಗನೆ ನೀನುs
ಯೆಟ್ಟಲು ದೊಡ್ಡ್ ಮನೆಯೊ
ಉಡೂssಕೆ ಇssಲ್ಲಂತು
"ಹರುಕsಲು ವಸ್ತsಲ್ಲೊs"

ಕೆಳು ಕೇssಳೆ ತಾssಯವ್ವs,
ಬೇಣದಾssಗೆ ನಿಲ್ಲಲಕ್ಕು"

ಅವ್ವೀssನು ಮಗನುಲೀsಗೆs
ವಳ್ಳೆ ಕಂಬ್ಳೀssಲಿ ಕಟ್ಟಿಕಂಡುs

ನೆಗದೀssತು ಮಾsವಿನ್ಹಣ್ಣs
ಅವ್ವ-ಮಗ ನೆಡುದವ್ರೆs
ಅರಸುಮನಿಗೋssಗವ್ರೆs
ಲಲ್ಲೇssಯ ಲಿsಟ್ಟಿತುs

“ಕೇಳು ಕೇಳಿ ಅssಮ್ಮೌರೆs,
ವಳ್ಳೆ ಮಾವಿನ್ಹಣ್ಣು ಬೇssಕೇನು ?
ಐದು ಜssನ ಗೌssಡಿರುs
ವಳ್ಳೆ ಲಟ್ಟssಕ್ಕೆ ಹೋssಗವ್ರೆs

ಹುಡುಗsನು ಮಾವಿನ್ಹಣ್ಣುs
ತಕ್ಕಂsಡೆ ಬಂssದಿಡs”
“ಕೇಳು ಕೇssಳಿ ಗೌssಡಿರುs,
ವಳ್ಳೆ ಲವ್ನ ತಾsಯಿ ಬಂssದದ್ಯೆ?”

ಐದು ಜsನ ಗೌssಡಿರುs
ಬಂದssದೆ” ಲಂssದಿರುs
“ಕೆಳು ಕೇssಳಿ ಗೌssಡಿರs,
ಲದುರಾssಲು ಕರ್ಕಂಡು ಬನ್ನಿs”

ಐದು ಜssನ ಗೌssಡಿರು
ವಳ್ಳೆ ಬೇಣ ಕಿನ್ನೆ ನೆsಡುದವ್ರೆs
“ಕೇಳು ಕೇssಳೆ ತಂಗಿ ನೀನುs
ವಳ್ಳೆ ನಮ್ಮ ಮನೆಗೆ ಬಾss” ರಂದ್ರುs

“ಕೆಳು ಕೇssಳಿ ಲಕssದಿರs,
ನನ್ನ ವಸ್ತ್ರವೆಲ್ಲ ಹರುಕೆಲೆs
ನಿಮ್ಮssಲು ಮನಿಯಲ್ಲಿs
ಲೆಟ್ಟssಲು ಜನವುಂಟೆs?”

“ಕೆಳ್ ಕೇssಳೆ ತಂಗಿ ನೀsನುs
ಯಾರಾssರು ಇssಲ್ಲಂ” ದ್ರುs
ಯೇನೇನ್ ಹೇಳ್ದ್ರೂs ಬರುದಿಲ್ಲs
ಮನಿಗಿsನ್ನೆ ಬಂssದನೆ

ಅಟ್ಟಕ್ಕಿನ್ನೆs ಲ್ಹೋssಗವ್ರೆs
“ಕೆಳು ಕೇssಳಿ ಮಾssಬಲ ಸ್ವಾಮೀs’
ಯೇನೇನ್ ಹೇಳ್ದ್ರೂs ಬರ್ವದಿಲ್ಲs
“ಹರುಕssಲು ವಸ್ತ್ರ” ವಂತುss”

ಅಟ್ಟಂssಬು ಮಾssತಿನ್ನೆs
ಕೇಳssವ್ನೆ ಮಾಬಲಸ್ವಾಮೀs
“ಐದುs ಜssನ ಗೌಡಿರ್ ಹೋಗಿs
ಕರುಕಂsಡಿ ಬನ್ನಿ” ಅಂದ್ರುs

ಲೈದು ಜssನ ಗೌssಡಿರುs
ಕೆಳುಗಿಳಿದಿ ಬಂssದವ್ರೆs
ಲೈದು ಜssನ ಗೌssಡಿರುs
“ಕೆಳು ಕೇssಳೆ ತಂಗಿ ನೀನುs

ವಳ್ಳೆ ವಸ್ತ್ರವಿನ್ನೆ ಕೊಡುತೇವೆ
ಕರುಕಂಡಿ ಬಂssದವ್ರೆs
ವಳ್ಳೆ ಮೆತ್ತಕಿನ್ನೆ ಹೋssಗವ್ರೆs
“ಕೆಳು ಕೇssಳಿ ಮಾsಬಲಸ್ವಾಮಿs

ವಳ್ಳೆ ಕರುಕಂsಡಿ ಬಂssದವ್ರೆs”
“ಕೆಳು ಕೇssಳಿ ಗೌssಡಿರೆs”
ವಳ್ಳೆ ಬಚ್ಲಕಿನ್ನೆ ಕರ್ಕಂಡೋಗಿs
ಸಾನ ಇನ್ನೆ ಮಾಡಿಬನ್ನಿs

ಲೈದು ಜssನ ಗೌssಡಿರುs
ವಳ್ಳ ಕರುಕಂsಡಿ ಹೋssಗವ್ರೆs
ಸಾsನ ಇನ್ನೆ ಮಾssಡಿರುs
ಲೈದು ಜssನ ಗೌssಡಿರುs

ಅಟ್ಟಕಿನ್ನೆss ಲ್ಹೋssಗರ್ರೈ
ಲೈದುs ಜssನs ಗೌssಡಿರುs
“ಕೇಳು ಕೇssಳಿ ಮಾsಬಲಸ್ವಾಮಿs,
ಸಾನ ಇನ್ನೆಲಾssಗಿತುs”

ಬೇಕಾssದ ಪಟ್ಟೆ ಕೊಟ್ಟs
ಬೇಕಾssದ ಕಣವೆ ಕೊಟ್ಟss

ಐದು ಜsssನ ಗೌsssಡಿರs
ಕರುಕಂಡಿ ಬನ್ನಿಲಿಲ್ಲಿs

ಐದು ಜsssನ ಗೌsಡಿರುs
ವಳ್ಳ ಲಟ್ಟಕ್ಕೆ ಕರಕಂಡ್ ಹೋದ್ರುs
ಪಟ್ಟೆ ಮಂಚ್ಕೆ ಕುsssಳ್ಸವ್ರೆs
ವಳ್ಳೆ ಐದು ಜsssನ ಗೌsssಡಿರುs

ಕೆಳುಗಿsssನ್ನೆ ಬಂsssದವ್ರೆs
ಲೈದು ಜsssನ ಗೌsssಡಿರು
ಮಾsಬಲ ಸ್ವಾsssಮಿಯ
“ಕೇಳು ಕೇಳೆ ಸಣ್ಣಗಂಗೆs”

ತಲ್ಯನಾದ್ರೂ ನೋsssಡಂ”ದs
ಸಣುಗಂssಗೆ ಲಂಬೂ ತಂಗಿs
ತಲ್ಯsನಾದ್ರೂ ನೋsssಡಿತು
“ಕಣ್ಣೀsssರ ಬಿsssಟ್ಟೆತುs”

“ಕೆಳು ಕೇsssಳೆ ಸಣ್ಣುಗಂsಗೆs,
ಲೈಂತಕ್ಕೆs ತೀsಡುತೆss?”
“ಕೇಳು ಕೇsssಳಿ ಸ್ವಾಮಿ ನೀವುs
ಲಪ್ನ ಮನ್ಯss ಹಂಬಲಾಯ್ತುs

ಅಪ್ಪsssನ ಮನಿಗ್ಹೋsssಗಿs
ಲಿಂದೇsssಯ ಬರುತೇನೆs
“ಬೇಕಾsssದ ಹೋಳ್ಗಿ ಮಾsಡುs
ಬೇಕಾsssದ ಕಜ್ಜಾಯ ಮಾsಡುs”

ಸಣ್ಣುಗಂsಗೆ ಲಂಬೂ ಹೆಣ್ಣುs
ಬೇಕಾsssದ ಹೋಳ್ಗಿ ಸುಟ್ಟುs
ಬೇಕಾsssದ ಕಜ್ಜಯ ಮಾಡ್ತುs
ಸಣ್ಣುಗಂಗೆ ಲಂಬೂ ತಂಗಿs

“ಕೆಳು ಕೇsssಳಿ ಸ್ವಾಮಿ ನೀವುs
ನನ್ನss ಬೆನ್ನಿಗ್ ಬರುs ಬೇಕುs”
“ನಿನ್ನs ಬೆನ್ನಿಗ್ ಬರುವsಕೆs
ನಿನ್ನssಉು ಲಣ್ಣದಿರುss

ಸಮನssವ ಮಾssಡಿದ್ರೆ
ನಿನ್ನssಲು ಮಾತೆ ಲಾಡ್ಸ್‌ದ್ರೆs
ನಾs ಇsನ್ನೆs ಬರುತೆನಂದs
ವಳ್ಳ ಮಾಬssಲ ಸ್ವಾssಮಿಯುss

ಬೇಕsಟ್ಟ ದುಡ್ಡ ಕೊಟ್ಟs
"ನಿನ್ನಣ್ಣದಿರ್ಗೆ ಕೊಟ್ಟಿ ಬಾsರೆs
ನಿನ್ನ ತಾಯಿsಗೆs ಕೊಟ್ಟಿ ಬಾsರೆs
ಸಮುನಾssವ ಮಾssಡಿದ್ರೆs

ಲಲ್ಲೆ ಬಾಳಿಸಂದಿಗೆ ನಿಲ್ತೆ ನಾssನುss"
ಅಟ್ಟossಬೂ ಮಾssತಿನ್ನೆs
ಕೇಳಿssತು ಸಣುಗಂಗೆs
ನುಗಲ ಉಂಡಿ ಕೊssಟ್ಟಿದs

ಲದ್ರಿssನ್ನೆ ತಟ್ಟಿಕಂಡಿs
ಮಗ್ನಲಿನ್ನೆ ನೆssಕ್ಕಂಡ್ತುs
ನುಗ್ಲossಡೆ ತಟ್ಟಿಕಂಡಿs
ಕೆಳುsಗಿಳುದಿs ಬossದಿತುs

ವಳ್ಳ ಸಣ್ಣಗossಗೆ ಲಂಬೂ ತಂಗಿs
ಏಳು ಜssನ ಲಣ್ಣsದಿರು
ಲಟ್ಟುದೂsರ ನೋssಡರೆs
ಓಡೋssಡಿ ಬossದರೆs

ಲಳಿಯssನ ಕsರುಕಂಡು
"ಕೇಳು ಕೇssಳೆ ತossಗಮ್ಮೆs
ಯೆಲ್ಲಿossದೆ ಬossದಿದೆs?"
ಅಟ್ಟossಬು ಮಾssತಿನ್ನೆs

ಹೇಳsವ್ರೆ ಲಣ್ಣದಿsರುs
ತಂಗೀssಯಲ್ಲಿಡುsಕಂಡಿs
ವಳ್ಳ ದುಕ್ಕ ಇನ್ನೆ ಮಾಡssವ್ರೆs
"ಕೇಳು ಕೇssಳು ಲssಣ್ಣಯ್ಯೆs

ವಳ್ಳ ಸುಕದssಲ್ಲಿ ಇದ್ದೆ ನಾನುs"
"ಕೇಳು ಕೇssಳೆ

ಯೆಲ್ಲಿssನ್ನೆ ಲೀssದ್ದಿದ್ದೆ ?"
"ಕೇಳು ಕೇssಳೊಲssಣ್ಣಯ್ಯs,

ಮಾಬ್ಲ ಸ್ವಾಮಿಲಿದ್ದಿ ಬಂssದಿದೆ"
"ಕೇಳು ಕೇssಳೆ ತಂssಗಮ್ಮs,
ಬಾsವೈೕssನು ಬsರುಲಿಲ್ವೆss?"
"ಕೇಳು ಕೇssಳೊ ಲssssಣ್ಣಯ್ಯss

ಸಂಜೀssಗೆ ಬರ್ತೆ" ನಂದ್ರುss
ಮಬಾssಲಸ್ವಾssಮಿಯುss
ವಳ್ಳ ಸಂಜೀssಗೆ ಬಂssದಿದ್ದs
ಏಳು ಜssನ ಬಾವsದಿರುs

ವಳ್ಳ ಬಾವ ಇನ್ನೆs ಬಂssದಿದ್ದs
ಉಪಚಾssರ ಮಾssಡರೆs
ವಳ್ಳ ಕೇಳು ಕೇssಳು ಬಾssವಯ್ಯs,
ಊಟಕಾsದ್ರು ಲೇಳು" ಲಂದ್ರುs

ಲೇಳು ಜssನ ನೆಂssಟರು
ಊಟಕಿನ್ನೆ ಲೋssಗಿದs
ಊಟನಾsದ್ರು ಮಾsಡಿದs
ಊಟವಾssದ್ರುss ಲಾssಗಿತುs

ಮೊಕುವಿsನ್ನೆ ತೊಳುದಿsದs
ಪಟ್ಟೆ ಮಂಚ್ಕೆ ಬಂssದಿದs
ಮಬಾssಲ ಸ್ವಾssಮಿಯುss
ಆಯೀssಪ್ಪ ಲಣ್ಣಡುಕೇss

ಸೋಯೀssದ್ದ ಬೆಳಿಯೆಲೆs
ಹಾಲಿನssಲ್ಲಿ ಬೆಂssದಿದs
ತೆನಿಸುಣ್ಣ ತಟ್ಟೆಕಂಡಿs
ಕವ್ವ ಇನ್ನೆ ಲಾssಕವ್ನೆss

ಮಾಬssಲ ಸ್ವಾssಮಿಯು
ಮನಿಗಿನ್ನೆ ನೆಡುದಿದs
ಸಣುಗಂssಗೆ ಲಂಬೂ ತಂಗಿs
"ಕೆಳು ಕೇssಳಿ ಲಣ್ಣದಿssರs,

ಮನಿಗಿssನ್ನೆಲ್ಹೋಗುತೆನೆ"
ಲಂದ್ಹೇssಳಿ ಹೇssಳಿತುs
"ಕೇಳು ಕೇssಳೆ ತಂssಗಮ್ಮs
ಬೇಕಾssದ ಕಜ್ಜಯ ಮಾಡೆs"

ಬೇಕಾssದ ಕಜ್ಜಯ ಮಾಡ್ತುss
ಸಣ್ಣುಗಂssಗೆ ಲಂಬೂ ತಂಗಿs
ಮುಟ್ಟಿನಾsದ್ರು ತುಂssಬಿತುs
ಸಣ್ಣು ಗಂಗೆ ಲಂಬೂ ತಂಗಿs

ಏಳು ಜssನ ಲಣ್ಣದಿರುs
ಬೇಕssಟ್ಟ ದುಡ್ಡ ಕೊಟ್ಟು
ಮಾಬssಲ ಸ್ವಾಮಿ ಕೈಲಿs
"ನುಗ್ಲನಾದ್ರು ಬಿಡು" ಲಂತು

ಮಾಬssಲ ಸ್ವಾssಮಿಯ
ಉಂಡೆನಾರು ಬಿssಟ್ಟಿದs
ನುಗ್ಲ ಹತ್ತಿ ನೆಡುದಿತು
ಸಣ್ಣುಗಂಗೆ ಲಂಬೂ ತಂಗಿ

**(* ಪ್ರತಿ ಸಾಲಿಗೂ ತಂದರನಾನಾss ಎಂದು ಸೇರಿಸಿಕೊಳ್ಳಬೇಕು)**

ಒಂದು ತಾಯಿಗೇsss ಯೇಳು ಜsನ ಮಕ್ಕಳು
ಏಳು ಜನರ ನೆಡುಗೊಂದು
ಶಣುಗಂssಗೆ ಲಂಬು ತಂಗಿ

"ಕೇಳು ಕೇssಳೆ ತಾsಯವ್ವ,
ಸಣ್ಣಗಂಗೆ ಅಂಬೂ ತಂಗಿ
ಲೈದು ವರ್ಸsವಾsಗಿತು
ಲಗ್ನಕಾರೂss ಬsಂದಿತು"

"ಕೇಳ್ ಕೇಳೆ ತಾsಯವ್ವ,
ಏಳು ಜsನಲಣ್ಣsದಿರು
ಏಳು ಜನ್ರ ನೆಡುಗ್ವೊಂದು
ಸಣು ಗಂsಗೆ ಲಂಬೂ ತಂಗೀ

ಹನ್ನೆರಡ್ ವರ್ಸಲಾssಗಿತು
ಲವ್ವ ಲಗ್ನssಕೆ ಬssಂದಳು
ದಂಡಿಗಿನ್ನೆ ಹೋಗು ಕರ್ರ್ಯs
ಪದ್ಕs ಸರವs ಗ್ಯೆಸ್ಕಂಡ್ ಬತ್ತುs

ಏಳು ಜsನ ಲಣ್ಣದಿರು
ಸಣ್ಣ ಗಂssಗೆ ಲಂಬೂs ತಂಗಿs
“ಕೇಳ್ ಕೇssಳೆ ತಾsಯವ್ವs,
ದಂಡೀಗೆ ಲೋಗುತಾರೆ

ಸಣ್ಣ ಗಂsಗೆ ಲಂಬೂ ತಂಗಿ
ಹಿತ್ಲಕಡ್ಗನ ಬಾಗ್ಲದಾsಗೆ
ಚೆಂದ್ ಚೆsಂದs ಲೂಗುಂಟು
ಕೊವ್ಕೆಲಾದ್ರುs ಕಳ್ಗುಬೇಡ

ಬೆಂಕಿಗಾದ್ರೆs ಕಳ್ಗಬೇಡ
ನೀರಿಗಾದ್ರೂ ಕಳ್ಗಬೇಡ”
ಲಂದ್ಹೇsಳಿ ಹೇಳವ್ರೆs
ಏಳು ಜsನ ಲಣ್ಣದಿರು

“ಕೇಳ್ ಕೇಳೇ ಸಣುಗಂಗೆ,
ಹಿತ್ಲಕಡಗನs ಬಾಗ್ಲದಲ್ಲಿ
ಚೆಂದ್ ಚೆಂದ ಲೂssಗುಂಟು
ಕೊವ್ಕೆಲಾದ್ರೂ ಲ್ಹೋಗಬೇಡ”

ಎಂದ್ಹೇಳಿ ಲೆsಳವ್ರೆs
ಏಳು ಜsನ ಲಣ್ಣದಿರು
“ಕೇಳ್ ಕೇsಳೆ ತಾssಯವ್ವ,
ಬಚ್ಲಕ್ಕೊಂದ ಕಿಚ್ಚs ನುರ್ರೈs

ಬೇಗದಿಂsದೆ ಲಡಗಿ ಮಾಡು’
ಬಚ್ಲಕ್ಕೊಂದ ಕಿಚ್ಚ ನಿಟ್ಲು
ಬೇಗದಿಂದೆ ಲಡಗಿ ಮಾಡ್ತು
“ಕೇಳ್ ಕೇಳಿ ಬಾsಲಯ್ಯ,

ಜಳ್ಕನಾದ್ರೂ ಮಾಡ್‌ಬನ್ನಿ’
ಏಳು ಜsನ ಮಗದಿರು

ಸಾನ ಮಾಡಿ ಬಂsದವ್ರೆs
“ಕೇಳ್ ಕೇಳೇ ತಾsಯವ್ವss,

ಬೇಗದಿಂದ ಬಡ್ಸು’ ಲಂದ್ರು
ಏಳು ಎಲಿ ಮಾssಡಿತುs
“ಕೇಳ್ ಕೇಳಿ ಮಕ್ಕಳಿರs,
ಬಡುಸಿsನ್ನೆಲಿsಟ್ಟಿದೆ

ಲೂಟಕಾದ್ರೂ ಬನ್ನಿ’ಲಂತು
ಏಳು ಜsನ ಮsಗದಿರು
ಲೂಟಕಾದ್ರೂ ಲೋssಗವ್ರೆ
“ಕೇಳ್ ಕೇಳೆ ತಾsಯವ್ವs,
ಏಳು ಜsನ ಮಗsದಿರು
ಏಳು ಜsನ್ರ ನೆಡುಗ್ವೊs಼ಂದು
ಶಣುಗಂsಗೆ ಲಂಬೂ ತಂಗಿ
ಅದ್ಕ್ ವಂದ್ ಎಡಿ ಮಾsಡಂ”ದು.

ಅಟ್ಟಂಬೂs ಮಾsತಿನ್ನೆs
ಕೇಳಿತು ತಾsಯವ್ವಿs
ಎಂಟು ಯೆಲಿ ಮಾsಡಿತುss
“ಕೇಳ್ ಕೇಳೆ ಸಣುಗಂಗೆ

ಲೂಟಕಾsದ್ರೂ ಬಾ”sಲಂದ್ರುs
ಶಣುಗಂsಗೆ ಲಂಬೂತಂಗಿs
ಲೂಟಾಕಾsದ್ರೂ ಕುಳಿತಿತು
ಏಳು ಜsನಲಣ್ಣದಿsರು

ವಂದಂದ್ ತುತ್ತ ಬಡುsಸವ್ರೆ
ತಂಗೀssಯ ಯೆಡಿ ಮೇನ್ದ
ವಂದಂದ್ ತುತ್ತ ತೆಗುದವ್ರೆ
ಲೂಟಲಾದ್ರೂ ಮಾsಡವ್ರೆss

ಏಳು ಜsನಲಣ್ಣದಿರು
ಮೊಕ್ವನಾದ್ರೂs ತೊಳುದವ್ರೆs
ಪಟ್ಟಮಂಚ್ಕೆ ಬಂsದವ್ರೆs
ಆಯಿಪ್ಪದ್ ಹssಣ್ಣಡಕೆs

ಸೋಯಿsಪ್ಪದ್ ಬೆಳಿಯೆಲೆs
ಹಾಲಿನsಲ್ಲಿ ಬೆಂsದಿದ
ತನಿಸುsಣ್ಣ ತಟ್ಟಿಕಂಡಿ
ಆಯುsಕೆ ವಂsದೀಳ್ಯs

ಮೆಲಿದವ್ರೆ ಲಣ್ಣದಿರು
“ಕೆಳ್ ಕೇಳೆ ತಾsಯವ್ವs,
ದಂಡಿಗಿನ್ನೆ ಹೋಗೆಬತ್ರು
ಏಳು ಜsನ ಮಗsದಿರು

ಕೊದ್ರಿಸಾಲಿಗ್ ಹೊssಗವ್ರೆs
ಬೇಕಾsದ ಕೊದುರಿsಯ
ಹೊಡು ಕಂsಡಿ ಬಂsದವ್ರೆs
ಪಟುದ ಸಾsಲಿಗ್ಹೋsಗವ್ರೆ

ಬೇಕಾದ್ ಪಟ್ಟsಲೆಕ್ಕಂಡ್ರು
ಏಳು ಜsನ ಮsಗದಿರುs
ಕೊದುರೀssಯಲsತ್ತವ್ರೆ
ವಂದದ್ ಚೆಬುಕs ಹೊಡುದವ್ರೆ

ಯೆಯ್ದು ತಾsಸ್ನಲಾsದಿಯs
ಒಂದೇ ತಾಸಿಗ್ ತೊಳ್ದೆಲೋದ್ರುs
ಸಣುಗಂsಗೆ ಲಂಬೂ ತಂಗಿs
ಇಲ್ಲಿಲಾದ್ರು ಲೇನೆ ಮಾಡ್ತು ?

ಹಿತ್ಲಕಡಗ್ನೆs ಬಾಗ್ಲದಲ್ಲೀ
ಇಳಿದೇsಯ ಲ್ಹೋಗಿತುs
ಹಿತ್ಲಕಡಗನs ಬಾಗ್ಲದಲ್ಲೀ
ಚೆಂದ ಚೆಂದs ಲ್ಹೂsಗುಂಟು

ಕೊಯ್ದಿನ್ನೆ ಮುಡುದಿತುs
ಚೊಬ್ಬೀಯs ತುಂಬಿತುs
ಮಾಬಲಸ್ವಾಮಿ ಸೋರಿಗ್ ಬಂದ
ಸಣುಗಂಗೆ ಲಂಬು ತಂಗಿ

ಮನಿಗಿsನ್ನೆ ಬಂದಿತುss
ಮಾಬsಲ ಸ್ವಾsಮಿಯ

ಮನಿಗಿನ್ನೆs ಲ್ಹೋಗವ್ನೆs
“ಕೇಳು ಕೇsಳಿ ಗೌsಡಿರಂs,

ವಳ್ಳ ಸಣುಗಂಗೆ ಲಂಬೂತಂಗಿ
ಹಿತ್ಲ ಕಡಗ್ನs ಬಾಗ್ಲದಲ್ಲಿ
ವಳ್ಳs ಹೂಗೆ ಕೊಪ್ಕೆ ಬರುತದ್ಯೆ
ಲೈದು ಜsನ ಗೌsಡಿರುs

ಅವಳsಕೆರಿಗಿsನ್ನೆ ಕರಕಂಡ ಬನ್ನಿ”
ಅಂದ್ಹೇಳಿ ಲೇssಳಿದ
ಅಟ್ಟಂsಬೂ ಮಾssತಿನ್ನೆ
ಕೇಳsವ್ರೆ ಗೌsಡಿರು

ಕೆರಿಗಿsನ್ನೆ ಬsಂದವ್ರೆs
ಅವಳs ಸಣುಗಂsಗೆ ಲಂಬೂ ತಂಗಿs
ಹೂsಗಿsನ್ನೆ ಕೊsಯುತಿತ್ತು
“ಕೇಳು ಕೇಳೆ ಸಣುಗಂಗೇ,

ಇದ್ಯೆಂsತಾ ಲೂsಗಂ”ದ್ರು
“ನಾಜು ಬಂsಡುನ್ಹುsಗಲ್ಲೆ”
ಕೇಳು ಕೇsಳೆ ಸಣುಗಂಗೆ,
ನಮ್ಮ ಸಂಗ್ತಿಗ್ ಬಾss”ರಂದ್ರು

ವಳ್ಳೆs ಸಣುಗಂಗೆ ಲಂಬೂ ಹೆಣ್ಣು
ನನ್ನ ಸಂತಿಗ್ ಬಾsರಂದ್ರು
ವಳs ಚಂದ್ ಚsಂದಲ್ಹೂsಗುಂಟು
ನಾವಿsನ್ನೆ ಕೊಯ್ದಿ ಕೊಡ್ತ್ರು”

ಸಣ್ಣಗಂಗಿ ಕೈಲಿ ಲೇಗೆ
ಲಟ್ಟಂsಬು ಮಾತ್ ಹೇಳ್ದ್ರು
ಸಣ್ಣಗಂಗೆ ಲಂಬೂಲ್ಹೆಣ್ಣು
ಐದು ಜನ್ರುs ಗೌಡೀರ್ ಬೆನ್ಗೆ

ಕೆರಿಗಿsನ್ನೆಲ್ಹೋsಗದೆ
ಕೇಳು ಕೇsಳು ಸಣುಗಂಗೆ
ವಳ್ಳೆs ಕೆರಿಗಿsನ್ನೆಲಳುಬೇಕೇ”
ಐದು ಜsನ ಗೌಡಿರ್ ಸಂಗ್ತಿಗೆ

ಸಣುಗಂsಗೆ ಲಂಬೂ ತಂಗಿ
ಕೆರ್‍ಯsಲು ಉಳುದದ್ಯೆ
ಮಿಂದಿ ಸಾನs ಮಾssಡವ್ರೆ
ಐದು ಜsನ ಗೌಡೀರು

ಬಾಚಿ ಮುಡ್ಯs ಕsಟ್ಟವ್ರೆs
"ವಳ್ಳ ಸಣುಗಂsಗೆ ಲಂಬೂ ತಂಗಿ
ಬೇಕಾದ್ ಹೂಗs ಮುಡುಕಣಿ"
ಅಂದ್ಹೇsಳಿ ಲೇಳವ್ರೆ

ಲೈದು ಜsನ ಗೌsಡಿರು
ವಂದು ಮೆಟ್ಟಲsತ್ತಿತುs
ವಂದು ತಿಂಗsಳಾಯಿತುs
ಯೆಯ್ಡು ಮೆಟ್ಟsಲ್ಹsತ್ತಿತುs

ಯೆಯ್ಡು ತಿಂಗsಳಾsಯಿತುs
"ಕೇಳ್ ಕೇsಳಿ ಗೌsಡಿರs
ನಾನೇsನು ಲತ್ತsಲಾರೆs'
"ಕೇಳ್ ಕೇಳೆ ಸಣುಗಂಗೆ,

ಲಿನ್ನೊಂದ್ ಹತ್ತು"sಲಂದ್ರು
ಮೂರು ಮೆಟ್ಟಲ್ಹsತ್ತಿತು
ಮೂರು ತಿಂಗಳಾsಗಿತು
"ಕೇಳು ಕೇsಳಿ ಗೌsಡಿರs,

ನಾಯೇsನು ಲತ್ತsಲಾರೆ'
"ಕೇಳು ಕೇsಳೆ ಸಣುಗಂಗೆ,
ಲಿನ್ನೊಂದ್ ಮೆಟ್ಲಲತ್ತು' ಲಂದ್ರು
ನಾಕು ಮೆಟ್ಟsಲ್ಹsತ್ತಿತು

**(ಹೀಗೇ ಒಂದೊಂದು ಮೆಟ್ಟಲ ಹತ್ತಿ ಒಂದೊಂದು ತಿಂಗಳ ಗರ್ಭ ಬೆಳೆಯಿತು)**

ಏಳು ಮೆಟ್ಲಲsತ್ತಿತು
ವಳ್ಳ ಸಣುಗಂಗೆ ಲಂಬೂ ತಂಗಿ
ಐದು ಜsನ ಗೌssಡಿರು
ವಳ್ಳs ಸಣುಗಂಗೆ ಲಂಬೂ ತಂಗಿ

“ಕೇಳು ಕೇsಳೆ ಸಣುಗಂಗೆs,
ವಳ್ಳೆ ಮನಿಗಿsನ್ನೆ ಹೋಗು” ಲಂದ್ರು
ಸಣುಗಂsಗೆ ಲಂಬೂ ತಂಗಿ
ವಳ್ಳೆ ಮನಿಗಿsನ್ನೆ ಬಂssದಳೆ

ಮಾಳುsಗಿ ವಳsಗಿನ್ನೆ
ಹೋಗsದ್ಯೆ ಸಣುಗಂಗೆ
ಮುಂಡ ಮುಸ್ಕs ಹೊಡುದsದೆ
ಮಾಳೂಗಿ ವಳsಗಿನ್ನೆ

ನೆಡುದsದೆ ತಾssಯವ್ವಿ
“ಕೇಳು ಕೇಳೆ ಸಣುಗಂಗೆs,
ಯಂತsಕೆ ಮನುಗಿದ್ಯೆ ?”
ಯೇನ ಕೇಳಿದ್ರೂ ಹೇಳೂದೆಲ್ಲ

ಸಣ್ಣಗಂಗೆ ಲಂಬೂ ತಂಗಿ
ಯಾರು ಕೊಂದ್ರೆ ಮಗನೆ ನಿನ್ಗೆ ?
ಯಾರು ಬಯ್‌ದ್ರೆ ಮಗನೆ ನಿನ್ಗೆ ?”
ಅಂದ್ಹೇsಳಿ ಕೇsಳಿತು

ಲೇನೇನ್ಕೆಳ್‌ದ್ರೂ ಮಾತೇಯಿಲ್ಲ
ಲಟ್ಟಂಬೂs ಮಾsತಿನ್ನೆ
ಕೇಳೀssತು ತಾsಯವ್ವಿ
“ಹರಹsರ” ಲಂದದ್ಯೆ

“ರಾಮ ರಾsಮ” ಲಂsದಿತು
ದಂಡಿಗೋದ ಮಗುನಿಗೆ
ವಳ್ಳೆ ವಾಲಿನ್ನೆs ಬರುsದದೆ
“ವಳ್ಳಿ ಸಣುಗಂಗೆ ಲಂಬೂ ತಂಗಿ

ವಳ್ಳೆ ಮುಂಡ ಮುಸ್ಕ ಹೊಡುದದೆ
ಏನೇನೇಳ್‌ದ್ರೂ ಕೇಳುದೆಲ್ಲ
ಲೂಟಕಿನ್ನು ಬಂದಿಲ್ಲ

ಅಂದ್ಹೇಳಿಲ್ಹೇsಳಿತು
ಸಣುಗಂಗೆ ಲಂಬೂ ತಂಗಿ

ಲೂಟಕಿನ್ನು ಬರ್ವದಿಲ್ಲಽ
ಏಳುಜಽನಲಣ್ಣದಿರು

ಬೇಗದಿಂದೆ ಬರುಬೇಕು’
ಅಟ್ಟಂಬೂ ಮಾಽತ್ ಹೇಳಿ
ವಾಲಿಽನ್ನೆ ಬರುದದ್ಯೆ
ಏಳು ಜಽನ ಮಗದಿರು

ವಾಲಿನ್ನೆಽ ಸಿಽಕ್ಕಿತು
“ಹರಹಽರ”ಲಂದವ್ರೆಽ
“ರಾಮ ರಾಽಮ”ಲಂದವ್ರೆಽ
ಏಳು ಜಽನಲಣ್ಣದಿರು

ಏಳು ಜಽನ ನೆಡುಗೊಂದು
ಸಣುಗಂಗೆ ಲಂಬೂ ತಂಗಿ
ಲಗ್ನಕಾದ್ರೂ ಬಂದಿತು
ದಂಡೀಽಗೆ ಬಂಽದಿರು

ಕೇಳು ಕೇಽಳಿ ತಮ್ಮೃದಿರಽ,
ಏಳು ಜಽನಲಣ್ಣದಿರು
ಏಳು ಕೊದ್ರಿಲಽತ್ತವ್ರೆ

ಮೂರು ದಿವ್ಸನಲ್ವಾದಿಯ
ವಳೆ ಯೆಯ್ಡು ದಿವ್ಸಕೆ ತೊಳ್ದೆ ಬಂದ್ರು
ಅಟ್ಟಽಲು ದೂಽಽರಿನ್ನೆ
ನೋಡಽದ್ಯೆ ತಾಽಽಯವ್ವಿಽ

ಮಗನೀಽಗೆ ಲೇಽಗಿನ್ನೆ
ತಾನೆಲಾರ್ತಿ ತಂಽದದ್ಯೆ
“ಕೇಳು ಕೇಽಳೆ ತಾಽಯವ್ವಽ,
ಸಣುಗಂಽಗೆ ಲಂಬೂ ತಂಗಿ

ಯೆಲ್ಲಿಗಾದ್ರೂ ಲ್ವೋಗದ್ಯೆ ?
ನಿನ್ನಲಾರ್ತಿ ನಮ್ಗೆ ಬೇಡ
ಅಂದ್ವೇಽಳಿ ಕೊದ್ರಿ ಲಿಳ್ದಿ
ಏಳು ಜಽನ ಲಣ್ಣದಿರು

ಮಾಳ್ಗೇsಗೆ ಲ್ಹೋsಗರೆ
“ಕೇಳು ಕೇಳೆ ಸಣುಗಂಗೆ
ಲೇನೆಲಾದ್ರು ಲಾssಗಿತೆ ?”
ಏನೇನ್ ಹೇಳ್ದ್ರೂ ಮಾತೆ ಇಲ್ಲ

“ಸಣುಗಂಗೆ ಲಂಬೂ ತಂಗಿ
ಕೇಳು ಕೇsಳೆ ತಾಯವ್ವ,
ಸಣುಗಂಗೆ ಲಂಬೂ ತಂಗ್ಯ
ಬೆಂಕಿಗಾದ್ರೂ ಕಳ್ಸಿದ್ಯೇನೆ ?

ನೀರಿಗಾದ್ರೂ ಕಳ್ಸಿದ್ಯೇನೆ ?”
“ಕೇಳು ಕೇಳಿ ಮಗುದೀರs,
ನಾಯೇನು ಕಳ್ಗಲಿಲ್ಲ”
“ಹಿತ್ಲಕಡಗ್ನ ಬಾಗ್ಲದಲ್ಲಿ

ಚೆಂದು ಚೆಂsದ ಹೂsಗುಂಟು
ಕೊವ್ಕಾsದ್ರು ಕಳ್ಗಿದ್ಯೇನೆ ?
ಮಾಬಲ ಸ್ವಾರಿಗ್ ಬತ್ತ”
“ಕೇಳು ಕೇsಳಿ ಮಗುದಿರs,

ವಳ್ಳೆ ಸಣುಗಂಗೆ ಲಂಬೂತಂಗಿ
ನನ್ನ ಮಾತ ಕೇಳಲೆಲ್ಲ
ಕೆರಿಗಿನ್ನೆಲ್ಹೂಗ ಕೊವ್ಕೆ
ಹೋಗೀsತು ಮಗ್ನೆ ತಂಗಿ”

ಲಂದ್ಹೇsಳಿ ಹೇsಳವ್ಳೆ..........
“ಏಳು ತಿಂಗಳಾsಗಿತು”
ಲಂದ್ಹೇsಳಿ ಹೇsಳವ್ಳೆ
ಅಟ್ಟಂsಬೂ ಮಾsತಿನ್ನೆ

ಕೇಳವ್ರೆs ಲಣ್ಣದಿರು
ಕಡ್ಬಿ ಕಾಯಂತಾ ರೊಟ್ಟಿ ಸುಡು
ಲಿಂಬಿ ಕಾಯಂತಾ ಬುತ್ತಿ ಕಟ್ಟು
ಕಡ್ಬಿ ಕಾಯಂತಾ ರೊಟ್ಟಿ ಸುಟ್ಟು

ಲಿಂಬಿ ಕಾಯಂತಾ ಬುತ್ತಿ ಕಟ್ಟು
“ಕೇಳು ಕೇsಳು ತಮ್ಮಯ್ಯs,

ನಿಂಗೆ ಬೇಕಾದ್ ಪಟ್ಟs ಹೆಕ್ಕಣೊ
ಬೇಕಾದ್ ಕೊದ್ರಿ ತsಕ್ಕಣೇss

ವಳ್ಳ ? ಸಣುಗಂಗೆ ಲಂಬೂ ತಂಗಿ
ರೊಂಡಡ ಲ್ವೊಡ್ಡಿ ಬಾರೋs" ಲಂದ್ರು
ಏಳು ಜsನ ಲಣ್ಣದಿರು
ಅಟ್ಟಂsಬೂ ಮಾsತಿನ್ನೆ

ಕೇಳsವ್ನೆ ಕಿರ್ಯ ಅಣ್ಣs
ಅಣ್ಣದಿರ ಮಾsತಿನ್ನೆ
ಮೀರೋsದು ದರ್ಮವಲ್ಲ
ಬೇಕಾsದಪಟ್ವಲ್ಲೆಕ್ಕs

ಬೇಕಾದ ಕೊದ್ರಿಲ್ಲೆಕ್ಕ
ಆರು ಜsನ ಲಣ್ಣದಿರು
ವಳ್ಳೆ ಮಾsಳುsಗಿಗ್ ಹೋsಗವ್ರೆ
ವಳ್ಳೆ ಸಣುಗಂಗೆ ಲಂಬೂ ಹೆಣ್ಣ

ವಳ್ಳೆ ಒಳಗಿಂsದೆನೆಕ್ಕಂಡ್ ಬಂದ್ರು
ವಳ್ಳೆ ಕೊದ್ರಿಮೇನ್ ಕೊಳುಸವ್ರೆ
ಏಳು ಜsಸನಲಣ್ಣsದಿರು
"ಕೇಳು ಕೇಳೆ ಸಣುಗಂಗೆs,

ವಳ್ಳೆ ಏಳು ಜsನಲಣ್ಣದಿರು
ಏಳು ಜನ್ರನೆಡುಗ್ವೊಂದು
ವಳ್ಳೆ ಸಣುಗಂsಗೆ ಲಂಬೂ ತಂಗಿ
ರುಂಡನ್ವೊಡ್ಡಿ ಬಾss"ರಂದು

ವಳ್ಳೆ ಕಿರ್ಯಲ ಅಣ್ಣಕೂಡೆ
ಕೊದ್ರೀsಯ ಲತ್ತಿಕಂಡ
ವಳ್ಳೆ ಕಿರ್ಯsಲು ಲsಣ್ಣನು
ಆರು ಜsನಲಣ್ಣದಿರು

ವಳ್ಳೆ ಲ್ಯೊಡಿನ್ನೆ ಹೊsಯ್ಕಂತ್ರು
"ಕೇಳು ಕೇsಳೆ ತಾsಯವ್ವs,
ವಳ್ಳೆ ನಾವು ಏಳು ಜನ ಮಗುದಿರು
ಅಂದ್ವೇsಳಿ ತೆಳ್ದಿಕಣೆ

ವಳ್ಳೆ ಹೆsಣೆsನ್ನೆ ಹುಟ್ಟಲಿಲ್ಲ"
ಅಂದ್ಹೇsಳಿ ಹೇsಳವ್ರೆs
ವಳ್ಳೆ ತಾಯಿಗಿನ್ನೆ ಬುದ್ಧಿ ಹೇಳ್‌ದ್ರು
ಪಳ್ಳೆ ರುಂಡ ಹೊಡುಕ್ಹೋsದಣ್ಣ

ವಳ್ಳೆ ಲಡವಿಗಿನ್ನೆ ಲ್ಹೋssಗನೆ
"ಕೇಳು ಕೇsಳೊ ಲಣ್ಣಯ್ಯs,
ನಾಯೇsನು ಬರಲಾರೆ
ಆಸ್ರೀsನ್ನೆಲಾಗುತದ್ಯೋs

ವಳ್ಳೆ ಹಸ್ವೀsನ್ನೆ" ಲಾಗುತದ್ಯೋs
ಯಟ್ಟು ದೂರೆ ಲೋsಗುತ್ಯೋ ?
ನನ್ನ ರುಂಡ ಲಲ್ಲೆ ಹೊಡ್ಯೋs"
ಅಟ್ಟಂsಬು ಮಾssತಿನ್ನೆs

ಕೇಳsವ್ನೆ ಲssಣ್ಣಯ್ಯs
ತೊಂಡಿಕಾಯ್ನಂತ ರೊಟ್ಟೆಸುಟ್ಟ
ಲಿಂಬಿ ಕಾಯ್ನಂತ ಬುತ್ತಿ ಕಟ್ಟs
ತಂಗೀsಗೆ ಲೇನ ಮಾಡ್ದs ?

ಲಲ್ಲೇಯ ಬಿಚ್ಚಿ ಕೊಟ್ಟ
ತಂಗೀosi ಲೂಟ ಮಾಡ್ತು
ಕೇಳು ಕೇsಳೊ ಲssಣ್ಣಯ್ಯs,
ನನ್ನ ರುಂಡ ಹೊsಡಿಯಂತು

ಹಣುಕಿsನ್ನು ಕೂssತಿತು
ಅಣ್ಣsನು ಲೇನ ಮಾssಡ್ದs ?
ಪಟನಿsನ್ನೆ ನೆಗುದನ್ಯೇs
ಹೊಡ್ದಪಟುದ ಮೇssನಿನ್ನೆ

ಸಿಸವಾssಗಿ ಹೊಳುದಿತು
ಲಟಕಿsನ್ನೆ ಬಿssಟ್ಟೆದ
"ಕೇಳು ಕೇಳು ತಂssಗಮ್ಮs,
ಕಂಬ್ಳೀssಯ ಹಾಸಿಕೊಡ್ತೆ

ಇಲ್ಲೇssಯ ಗಾssಳಿಗೆ
ಬಗಿಲಿsನ್ನು ಮನಗು" ಯೆಂದs

ಸಣುಗಂssಗೆ ಲಂಬೂs ತಂಗಿs
ಅಣ್ಣನ ಮಾsತ ಕೇsssಳವ್ನೆs

ಅಲ್ಲೆssಯ ಮನುsಗಿsತು
ನೆದ್ರೀssಯ ಬಂssದಿತು
ಸಣುಗಂssಗೆ ಲಂಬೂs ತಂಗ್ಯs
ಮೂರುs ಸsರ್ತಿ ಕsರುsದವ್ನೆs

ಮಾತೇssನು ಲಾsಡುದೆಲ್ಲs
ನೆದುರೀssಯುs ಬಂssದಿತುs
ಲಣ್ಣೆssನ್ನುs ಯೇನs ಮಾsಡ್ಲs ?
ಹೀಗೇssಯುs ಲೋssಗಿದ್ರೆs

ರುಂಡ ಹೊಡ್ಡಿss ಬರುssಲಿಲ್ಲs
(ಲೇಳುತವ್ರೆs ಅಂssದ್ ಹೇಳಿ)
ಬೆಟ್ ಹೊssನ್ನೆ ಮರುsಕ್ ಹೋದs
ಬೆಟ್ ಹೊssನ್ನೆ ಮರುsಕಿನ್ನೆs

ಒಂದುs ಕಪ್ಪs ಲ್ಹೊಡುsದವ್ನೆs
ಲದುsರsನ್ನss ಸೊನಿತಕಂಡs
ಕೊದುರೀssಯುsಲsತ್ತಿದ
ಮನಿಗಾssರು ಬಂssದವ್ನೆ

“ಕೇಳು ಕೇssಳಿ ತssಮ್ಮಯ್ಯs,
ತಂಗೀssಯುs ಹೊಡ್ಡಿ ಬಂದ್ಯs?”
“ತಂಗೀssಯಲ್ಹೊಡ್ಡೆ ಬಂದೆ
ಲಂದ್ ಹೇssಳಿ ಹೇssಳವ್ನೆss

ಪಟವಿssನ್ನ್ ಕೊssಟ್ಟಿದ್ದs
ಲಣ್ಣssಲು ದೀssರಿಗೆs
“ಕೆಳು ಕೇssಳೊ ತssಮ್ಮಯ್ಯss,
ಸಿಟ್ಟಿಗೊಂದು ಮಾsತ ಹೇಳ್ರೆss

ಸಣುಗಂssಗೆ ಲಂಬೂ ತಂಗ್ಯss
ರೊಂಡ ಹೊಡ್ಡಿ ಬಂssದ್ಯೇನೋss?
“ಹರ ಹssರ” ಲಂssದವ್ರೆs
ರಾssಮ ರಾssಮ” ಲಂssದವ್ರೆss

ಲಾಗಿssಟ್ಟss ಮರುssಗವ್ರೆss
ತಾಯಿssನು ತಂssದಿನುss
ಲೇನs ಹೇಳಿ ಮsರುsಗವ್ರೆs ?
ಸಣ್ಣುಗಂಗೆ ಲಂಬೂs ತಂಗಿs

ಲೇಗೆ ಯೇನs ಮಾssಡಿತುs ?
ಏದ್ದೀssss ಕುಂssತಿತುs
ಒಳ್ಳೆ ಸಣಗಂssಗೆ ಲಂಬೂs ತಂಗಿs
"ಹರ ಹssರ" ಲಂssದಿತು

"ರಾsಮ ರಾsಮ" ಲಂssದಿತು
ಸಣ್ಣುಗಂಗೆ ಲಂಬೂsತಂಗಿ
ಒಳ್ಳೆ ಅಣ್ಣನೀಗೆ ಕರುದಿತು
ಅಣ್ಣ ಮಾsತನಾsಡಲಿಲ್ಲs

---

* ಸಣ್ಣಗಂಗೆ; ಹೆಗಡೆ ಎಲ್.ಆರ್. ಕೆಲವು ಲಾವಣಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೩ ಪು. ೫೩-೭೮.

## ೩೦. ತಮ್ಮನ ಕೊಲೆ *

ಅಣ್ಣ ತಮ್ಮದಿರೂs ಹೊಡುದಾಟಾs
ಹೆತ್ತಮ್ಮನ ವೊಡಲೂs ಉರವದೂ ‖ ಉರವಟ್ಟಾ ಹೊತ್ತಿಗೂ ‖
ಊರಲು ಪsಟೆಲ್ರಾ ಕರುದಳೂ ‖
ಊರಲು ಪsಟೆಲ್ರಾ ಯೇನಂದಿ ಕರುದೊ?
""ಈ ಕಡುದಾಟಾ ನಂಬರನೇs ಹಿಡಿಬೇಕೇs ‖
""ಹೆತ್ತಳು ನೀ ತಾಯಿs, ನಾವ್ಹೇಳುದೂs ಯೇನು ತಾಯಿs,
ಸರುಕಾರುಕ್ ವಂದ ಅರುಜಿಯೇ ಕೊಡಬವದೇs"
""ನನು ಮಗನೇ," ಅಂದೀss ಮರುಗಳೂ ‖ ಮರುಗೀ ಲಾಪ್ಪಡುಸೀಯೇ
ಸೀದಾಲು ಕsಚುರಿಗೂ, ನೆಡುದಳೂ ‖ ಲsವ್ನ ತಾಯೀs
""ಈ ಗೋಳು ನಾನೂss ಲರಿಯನೇ ‖ ನೋಡದೆ ವಳಿಯಲಾರೇ,
ತನುಗಲು ಈಸನೇss ಕೊಡಬೇಕೂs ‖"
""ವಳ್ಳಲು ಹೆಂಗಸೂ, ನೀ ಮಾತ್ಯಾsಕಾಡುತೇs?
ಬರವೆನೇ ನಿಮ್ಮಲೀss ಅರುಗಳುಗೇs ‖
ಬರವೆನೇ ಆರುಗಳಿಗೇs ಮನಿಯಲ್ಲಿ ನಿನು ಮಗುನನ್ನೂ
ಕಯ್ಯಿಗು ಬೇಡೀss ತರುತೇನೇs ‖

ಅಟ್ಟೂವಾs ಮಾತೂs ನಡುದsರೂ ವೊsಲಿಸರೂs
ಯಾನಾನು ಮೇನೆಯ ತರವರೂ ॥ ತರವಟ್ಟು ಹೊತ್ತಿಗೂs
ಲಣ್ಣಲು ಕದ್ದು ಬಿದ್ದಿಯೇs ವೋಡುವನೂ ॥ ವೋದುವಟ್ಟಾ ಹೊತ್ತಿಗೂss
ಪಿಸ್ತೂಲ್ ಹಚ್ಚಿ ಲವನಾ ಹೊಡಿವರೂs

ಸೊಂಟಾನಿಂದು ಕೆಳುಗೇs ಖೂನಿಯಲಾದೇವೊss
ಬಂತಿರುಗೀs ಮನಿಗೆs ಬರವsನೂs ॥
ಕೇಳಲ್ಲೇ ನನು ತಾಯೇs, ನಾ ಮೋಸಾ ಮಾಡಿದೇs
ದುಕ್ಕsಲು ಸsಂತರುಸೀs ನನುಗ್ಗೇಳೂs ॥
“”ವಳ್ಳೆವರ ಹೊsಟ್ಟೀಲೀs ಯಾಕ್ ಹುಟ್ಟಿದೆ ನೀನು ಪಾಪೀ ?
ಕಾರಲೂ ಈಸವಾs ನಿನ್ಯ್ ಕೊಡಸೂವೇs ॥
ಗೊಂಬಿಯಂತವ್ನಾs ಮೋಸನೇ ಮಾಡಿದೇ
ಹನ್ನೈಡೂ ವರಸಾs ಗಳಿಗೆಲ್ಲಾ ಲೀ ಪಾಪಿಗೂs
ಕಯ್ಯಲು ಬಂದಿತೋ ನಿನುಗ್ ಹೇಗೇ
ವೋದುವ ಮಟಕ್ಹೋಗೀs ವೋದಿಯ ಬರುವಂತ ಬಾಲಾs
ಮೋಸಾಲು ಮಾಡಿದಿಯೋs ಲರುಗಳಿಗೇs ॥ ಯಲು ವೈರೀ,
ದುಕ್ಕsಲು ಸಂತುರುಸೀs ವಳಿಲಾರೇ ॥
ಇಸವಲು ತsಕ್ಕಂಡೀs ಮರುಣಾತೇs ॥”

---

* ತಮ್ಮನ ಕೊಲೆ, ಹೆಗಡೆ ಎಲ್.ಆರ್. ಮುಕರಿ ಮತ್ತು ಹೊಲೆಯರ ಪದಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ೧೯೭೯, ಪು.ಸಂ. ೮೧-೮೨.

## ೨೧. ಜಾಯು-ಮಾಯದ ಗಾಣಿಗ *

ಜಾಯು ಮನೆsಗೆss ಬೀಗರು ಬಂದರ್ಯೇ ಯೇಗುನಿ ಯೇಗುನಿಯೇ
“”ಬೇಕಾದ ಕಜ್ಜಾಯ ಶೂಡಲು ಬೇಕೇss

ಗಾಣಿಗನ ಮನೆಗೆ ನಾ ಹೋಗಿ ಬರತೇ
ಯಣ್ಣೀಯ ಶಂಬೇsss ತುಂಬೇಯ ತುರತೇ”

ಲಟ್ಟೊಂದು ಮಾತೇ ಹೇಲಾಲೆ ಜಾಯು
ಲಟ್ಟೆಲ್ಲ ಮಾತೇ ಕೇಲಾಲೆ ಜಾಯೂ

ಮಾಲೂಗಿ ವಲಗೇ ನಡದಲೆ ಜಾಯೊ
ಕೊಬ್ಬೆಣ್ಣೆ ಕುಳ್ಳೀ ತಡದಲೆ ಜಾಯೊ

ಯಣ್ಣೆಯ ಗಿಂಡೀ ಹಿಡದಲೆ ಜಾಯೊ
ಬಣ್ಣದ ಬಾಚಣಗಿ ಹಿಡದಲೆ ಜಾಯೊ

ಬೆಂಡಿನ ದಂಡೇ ಹಿಡಿದsಲೆ ಜಾಯೊ
ಮಾಲೂಗಿ ಹೆರಟೇ ಬಂದಲೆs ಜಾಯೊ

ಲುಪ್ಪರಗಿ ಮೇನೇ ಕುಲತಲೆ ಜಾಯೊ
ಕಟ್ಟಿದ್ದ ಮುಡಿಯೇ ಬಿಡಿಶಾಲೆ ಜಾಯೊ

ನೆತ್ತಿಗೆ ಯೆಣ್ಣೇ ಯರದಾಲೆ ಜಾಯೊ
ಬಣ್ಣದ ಬಾಚಣಗಿ ಹಿಡಿದsಲೆ ಜಾಯೊ

ಕೆನ್ನೆಯ ಕೇಶೇ ಸೊಗದsಲೆs ಜಾಯೊ
ಶಿರಿಯರಿಯಂಬೂ ಬೊಗತಲೆ ತೆಗೆದು

ಶಣ್ಣಂಬೂ ಮುಡಿಯೇ ಹಣದsಲೆ ಜಾಯೊ
ಬೆಂಡಿನ ದಂಡೆ ಮುಡದsಲೆ ಜಾಯೊ

ಕಣ್ಣಿಗೆ ಕಪ್ಪಾsಲಿಟ್ಟಲೆ ಜಾಯೊ
ಹಣೆಯಾಗೆ ಬೊಟ್ಟು ಲಿಟ್ಟಲೆ ಜಾಯೊ

ಪಟ್ಟೆಯ ಶೀರೆಯಲುಟ್ಟಲೆ ಜಾಯೊ
ಪಟ್ಟೆಯ ಕಣವೇ ಲಾಕಲೆ ಜಾಯೊ

ಹಾಗೆ ಮಾಲೂಗಿಗೆ ನಡದಲೆ ಜಾಯೊ
ಯಣ್ಣೇಯ ಚಂಬೇ ಹಿಡದಲೆ ಜಾಯೊ

ಶತ್ತುರಿ ಕೊಡೆಯೆ ಹಿಡಿದsಲೆ ಜಾಯೊ
ಮುತ್ತಿನ ಮೆಟ್ಟೀ ಲಿಲಿದsಲೆ ಜಾಯೊ

ಮುಂದಕೆ ದಾರೀ ಹಿಡಿದsಲೆ ಜಾಯೊ
ಗಾಣಿಗೀರ ಮನೆಗೆss ನಡೆದsಲೆ ಜಾಯೊ

ಹೊಲ್ಲಿಮೇನ್ಹೋಗೇ ಕುಲಿತsಲೆ ಜಾಯೊ
ವಲಗಿದ್ದ ಗಾಣ್ಗsss ಹೆರಗೇ ಬಂದss

“"ಕೇಲಲ್ ಕೇಲಾಲೋ ಗಾಣೀಗ ನೀನುs
ನಿಮ್ಮ ಮನೆಯಲ್ಲೀ ಯಣ್ಣೆ ಉಂಟೇನೋ?”

“"ನಮ್ಮ ಮನೆಯಲ್ಲೀ ಯಣ್ಣೆ ಉಂಟಾಲೊ
ಲಿನ್ನೊಂದು ತಾಸೇ ಕುಲ್ಲಲು ಬೇಕೇsss

ಯಣ್ಣೀಯಲೂಡೇ ತುಂಬೇ ಕೊಡುತೇs”
ಮಾಲೂಗಿ ವಲಗೇ ನಡೆದsನೆ ಗಾಣಗs

ಲಿತ್ಲ ಕಡಗೋತs ಮುಂದ್ಲಕಡೆ ಬತ್ತ
“"ನೊರೊಂದ್ಯಾವ್ರೀಗೇ ನೂರೊಂದು ಹರಕೇs

ನೂರೊಂದ್ಯಾವ್ರೀಗೇ ನೊರೊಂದು ಕಾಯೀ
ನೂರೊಂದ್ಯಾವ್ರೀಗೇ ನೂರೊಂದು ಹಣ್ಣೀ

ನೂರೊಂದ್ಯಾವ್ರೀಗೇ ನೂರೊಂದು ಕಡ್ಡೀ
ಜಾಯುನಾದರೆ ನನ್ನೊಶ ಮಾಡು”

ಲಾಗಂದೆ ಹರಕೇ ಕಟುತಾನೇ ಗಾಣ್ಗss
“"ಕೇಲಲ್ಲ ಕೇಲಾಲೋ ಗಾಣಿಗ ನೀನುsss

ನಮ್ಮ ಮನಿಯಲ್ಲೇ ಬೀಗರು ಬಂದsರ್‍ಯೋ
ಯಣ್ಣೀಯ ಶೊಂಬೇ ತುಂಬೀಯ ಕೊಡೋs”

ಲಟ್ಟಿಲ್ಲ ಮಾತೇ ಕೇಲೀನೆ ಗಾಣ್ಗss
ಜಾಯವ ಶಂಬs ಹಿಡಿದsನೆs ಗಾಣ್ಗss

ಯಣ್ಣೀಯ ಕೊಡಕೇ ನೆಡೆದಾನೆ ನೋಡುs
ಯಣ್ಣೀಯ ಶಂಬೇss ತುಂಬೇಯ ತಂದss

ಜಾಯು ಕಯ್ಯಲ್ಲೇ ಕೊಡುವsನು ಲೀಗೇ
ಯಣ್ಣೀಯ ಶಂಬೇ ಕಯ್ಯಲ್ಲಿ ಲಿಡಿತೋss

ಗಾಣಿಗಗೆ ರೊಕ್ಕ ಕಯ್ಯಲ್ಲಿ ಕೊಡತೊ
ಗಾಣಿಗೆಗೆ ರೊಕ್ಕ ಶರುವತ್ರು ಬೇಡs

“"ಶಂಜಿ ಕಾಲಾಕೇ ನಾ ಬರುತೀನೇss
ಕೇಲಲೆ ಕೇಲಾಲೇ ಜಾಯೂ, ನೀ ಕೇಲೇ

ನಿಮ್ಮ ಲೂರಲ್ಲೇ ನಿಂಗೇನು ಕರೆತೀರೇs?"
""ನಮ್ಮ ಲೂರಲ್ಲೇ ಜಾಯಂದು ಕರೆತಾರೇ

ನಿಮ್ಮ ಲೂರಲ್ಲೇ ನಿನ್ಗೆ ಯೇನೆಂದು ಕರೇತಾರೇ?"
""ನಮ್ಮ ಲೂರಲ್ಲೇ ಮಾಯದ ಗಾಣ್ಗs

ಮಾಯಯಂಬೋದೂ ಜಾಯುಯೆಂಬೂದೂ
ಜಾಯುಯೆಂಬೂದೂ ವಂದ್ ಹೆಸ್ರೆ ಜಾಯೂ,

ಶಂಜಿನ್ ಕಾಲಾಕೇ ನಾ ಬರುತೀನೇ"
""ಲದುವಂದು ಶಬುದಾ ನೀ ಹೇಲೂದ್ ಬೇಡs

ನಾನಿರುವಾದೇsss ನನ್ ತವುರಲ್ಲೇs
ಮದುವ್ಯಾದ ಪುರುಶss ಕೂಡsಲಿಲ್ಲss

ಶಂಜಿನ್ ಕಾಲಾಕೆ ನೀ ಬರೂದ್ ಬೇಸs"
ಯಟ್ಟು ಹೇಲಿದ್ದರೂ ಕೇಳsಲಿಲ್ಲs

ಯಣ್ಣೀಯ ಶಂಬಾರೂ ಹಿಡsದಲೆ ಜಾಯೂs
ಶತ್ತುರಿ ಕೊಡೆಯೇ ಹಿಡಿದsಲೆ ಜಾಯೂs

ಲಿಂದಮ್ಮೆ ಮನೆಗೇ ಬಂದಲೆ ಜಾಯೂ
ತಾಯಿ ಕೊಡೇನ ನುಡಿದsಲೆ? ಜಾಯೂ

""ಕೇಲಲೆ ಕೇಲಾಲೇ ತಾಯೀ, ನೀ ಕೇಲೇ
ಯಣ್ಣೀಯ ಶಂಬೇ ತುಂಬೇಯ ತಂದೇ

ಬೇಕಾದ ಕಜ್ಜಾಯs ಶೂಡಲು ಬೇಕೇs
ಬಂದ ಬೀಗಾರೀಗೇ ಬಡಿಶsಲು ಬೇಕೇs"

ಅಟ್ಟಿಲ್ಲ ಮಾತೇ ಹೇಲಾಲೆ ಜಾಯೂ
ಮಾಲೂಗಿ ಹತ್ತೇ ನಡೆದಾಲೆ ಜಾಯೂ

ಕರಿಯ ಕಂಬುಲಿಯೇ ಮುಚ್ ಹೊದ್ದಿ ಮನುಗ್ಗೇ
ತಾಯಿಯಾದರೆ ಲೂಟಕೆ ಕರೆತಾಲೇss

""ಲೂಟಕೆ ನಾನೂ ಬರುದಿಲ್ಲ ತಾಯೇ,
ಹೊಟ್ಟೆಯ ಕಚ್ಚೇ ವಲುವsದೆ ತಾಯೇ

ಲೂಟಕೆ ನಾನೂ ಬsರುದಿಲ್ಲವೇss"
ಲತಲಾಗೇ ನೋಡೂ ಯೇನಾಗಿತ್ತು ನೋಡೂ

ಶಂಜೀಯ ಕಾಲs ಬರೂsತಿತ್ತೂ ನೋಡೂ
ಮಾಯದ ಗಾಣ್ಗs ಯೇನ್ಹೇಲುತಾನೇss?

""ಕೇಲಲೇ ಕೇಲಾಲೇ ಮಡುದೀ, ನೀ ಕೇಲೇ
ಶಂಜಿಕಾಲಾಕೇ ನಾ ಬsರೂದಿಲ್ಲವೇ

ಯಾರೂssತಂದೀ ಮನುಗೂಸಿಕsಣೇ"
ಅಟ್ಟೆಲ್ಲಾ ಮಾತೇ ಹೇಲೀನ ಗಾಣ್ಗss

ಶತ್ತುರಿ ಕೊಡಿಯೇ ಹಿಡಿದsನೆ ಗಾಣ್ಗss
ಬಾಗಲ ಮೆಟ್ಟೇ ಲಿಲಿದsನೆ ಗಾಣ್ಗss

ಕಟ್ಟಿದ್ದ ಕರಿಮಣಿ ಹುಶಿದೇ ಹೋಯ್ತುss
""ಲಿಂದುವಂದು ಲಾಶ್ಕಿರಿ ನೋಡ್ಹೋಗಿ ಸ್ವಾಮೀs,"

""ಹೆಂಗ್ಸರ ಜಲುಮಕೆ ಲದುವೊಂದು ಶೈಯೇ
ಪಟಶಾಲಿ ಮನೆಗ್ಹೋಗಿ ಲದುವಂದು ಕಟ್ಸೇ

ಪಟಶಾಲಿ ಮನೆಗ್ಹೋಗಿ ಕಟ್ಟೇsಲ್ಹಾsಕss"
ಮತ್ತೊಂದು ಮೆಟ್ಟೇ ಲಿಲಿದsನೆ ಗಾಣ್ಗss

ಮುತ್ತಿನ ಮೂಗುತೆ ಮುರಿದೇ ಹೋಯ್ತೇs
""ಲಿದುವಂದು ಲಾಶ್ಕಿರಿ ನೋಡ್ಹೋಗಿ ಸ್ವಾಮೀss,"

""ಹೆಂಗ್ಸರ ಜಲಮಕೆ ಲಿದುವೊಂದು ಶೈಯೇ
ಸೊನುಗಾರ ಮನೆಗ್ಹೋಗಿ ಹಣಿಶಿ ಹಾಕss"

ಲಟ್ಟೆಲ್ಲ ಮಾತೇ ಹೇಳೀನ ಗಾಣ್ಗss
ಮುಂದಕೆ ದಾರೀ ಹಿಡಿದsನೆ ಗಾಣ್ಗss

ಗುಡಿಗಾರ ಪೇಟೆಗೆ ನೆಡೆದಾನೆ ಗಾಣ್ಗss
""ಜಾಯುಗೊಪ್ಪಿದ್ದs ಬೆಂಡಿನ ದಂಡೇ ಕೊಡsಬೇಕು ನೀವು

ಬರವಾಗ ರೊಕ್ಕs ನಾ ಕೊಡತೀನೋs"
ಬೆಂಡಿನ ದಂಡೇ ಕಯ್ಯಲ್ಲಿ ಹಿಡಿದs

ಜವ್ಳೀಯ ಪೇಟೇಗೆ ನಡೆದsನೆ ಗಾಣ್ಗss
“”ಜಾಯುಗೊಪ್ಪಿದ್ದs ಪಿತಾಂಬ್ರ ಕೊಡಿರೋss

ಜಾಯುಗೊಪ್ಪಿದ್ದs ರವ್ಕೀಯ ಕೊಡಿರೋs
ಬರವಾಗೇ ರೊಕ್ಕss ನಾ ಕಕೊಡತೀನೋss

ಕೊಟ್ಟಿದ್ದ ಶಾಲೇ ಕಯ್ಯಲ್ಲಿ ಹಿಡಿದsss
ಮುಂದಕೆ ದಾರೀ ಹಿಡಿದsನೆ ಗಾಣ್ಗss

ಶೊನುಗಾರ ಮನೆಗೇ ನಡೆದsನೆ ಗಾಣ್ಗss
ಲವ್ರಕೂಡ್ಯೇನs ನುಡಿsದನೆ ಗಾಣ್ಗss?

“”ಜಾಯುಗೊಪ್ಪಿದ್ದ ಶಿನ್ನವ ಕೊಡಿರೋss
ಬರವಾಗೆ ರೊಕ್ಕs ನಾ ಕೊಡುತಿದ್ದೇs.”

ಕೊಟ್ಟಿದ್ದ ಶಿನ್ನ ಕಯ್ಯಲ್ಲಿ ಹಿಡಿದ
ಲಟ್ಟೂ ವಟ್‌ಮಾಡಿ ಕಯ್ಯಲ್ಲಿ ಹಿಡಿದs

ಜಾಯೂವ ಮನೆಗೇ ನಡೆದಾನೆ ಗಾಣ್ಗ
ಜಾಯೂ ತಾಯೀಗೆ ಮಾಯದ ನಿದ್ರೇ

ಮಾಲೂಗಿ ವಲಗೇ ನಡೆದಾನೆ ಗಾಣ್ಗss
ಯಲ್ಲೋಗ್ ನೋಡಿದ್ರೂ ಚಾಯೂ ಕಾಣೂದಿಲ್ಲ

ಮಾಲೂಗಿ ಹತ್ತೀ ನಡೆದಾನೆ ಗಾಣ್ಗ
ಕರಿಯ ಕಂಬೂಲಿಯೇ ಮುಚ್ ಹೊಡ್ದಿ ಮನಗ್ತೇ

ಲಲ್ಲೋಗೆ ಗಾಣ್ಗss ಯಚ್ಚರೇs ಮಾಡ್ತss
ಜಾಯೂವ ಗಾಣ್ಗss ವಂದ್ವಾಸ್ಗಿ ಮೇನೇ

ಜಾಯುವಾದರೆ ಯೇನ್ಹೇಲುತಾಲೇ?
“”ಕೇಲಲ್ ಕೇಲಾಲೋ ಗಾಣಿಗss, ನೀನುs

ಪೊಗಡೆ ಲಾಟಾಕೇ ಕುಲ್ಲsಲು ಬೇಕೋ
ಲೀಯಾಟದಲ್ಲೀ ನೀ ಶೋssತಾರೇs

ಶುಮ್ಮನೆ ಯದ್ದೀ ಮನೆಗ್ಹೋಗುಬೇಕೋ
ಲೀಯಾಟದಲ್ಲೀ ನಾ ಶೊssತಾರೇ

ಪಟ್ಟಿsಗೂ ನಾವೂ ಕೂಡsಲು ಬೇಕೋss
ಲಾಡಿದ್ದ ಲಾಟss ಗಾಣಿಗ್ಗೆ ಹೋಯ್ತುs

“”ಹರಿಹರ”ಯೆಂದೇ ಹೇಲಾಲೇ ಜಾಯೂ
“”ಮದಿಯಾದ ನಲ್ಲss ಕೂಡsನಿಲ್ಲs

ಮಾಯsದ ಗಾಣಿಗ ಕೂಡಲು ಬಿಟ್ಟ
ಲಾಡ್‌ದ ಮಾತೀಗೆ ತಪ್ಪುದಿಲ್ಲs”

ಗಾಣಿಗ್ನ ಒಟ್ಟಿಗೆ ಕೂಡಲು ಬಿಟ್ಟು
ಇತುಲಾಗ ನೋಡು ಯೇನಾಗಿತ್ತುs?

ಲತ್ತೆಲಂಬವ್ಲಿಗೆ ಶಿವನೊಂದು ಶಪನs
ಮಗನ ಕೂಡೇನ ನುಡಿದsಲೇ ತಾಯೀs?

“”ಜಾಯೂ ಹಂಬಾಲಾ ಬರತೀದೋ ನನಗೇ
ಜಾಯೂ ಕಾಣಾದೇ ವಲಿನಾರೆ ಮಗನೇs,

ಜಾಯೂ ತವ್ರೀಗೆ ಹೋಗಲು ಬಾರೋs
ಬೇಕಾದ ಕಜ್ಜಾಯ ಶುಟ್ಟೇಯ ಕೊಡತೇs”

ಬೇಕಾದ ಕಜ್ಜಾಯ ಶುಟ್ಟಾಲೇ ತಾಯೀ
ಮಗನ ಕಯ್ಯಲ್ಲೀ ಕೊಟ್ಟಲೇ ತಾಯೀ

ಮಗನೆಲಾದsರೇs ಕಯ್ಯಲ್ಲಿ ಹಿಡಿದs
ಮುಂದಕೆ ಹಾದೀ ನಡದೇಯ ಬಂದs

ಗುಡಗಾರ ಪೇಟೇಗೆ ನಡದಾನೆ ಮಗನೇs
ಲವ್ರಕೂಡೇನss ನುಡಿದsನೆ ಮಗನೇ?

“”ಕೇಲಲ್ ಕೇಲಾಲೇ ಗುಡಗಾರೇ, ನೀವು
ಜಾಯೂಗೊಪ್ಪಿದ್ದ ಬೆಂಡಿನ ಚಂಡೇss

ಗುಡಗಾರ್ರೆ ನೀವು ಕೊಡಬೇಕು ಲೀಗೆ”
“”ಜಾಯು ಮನೆಗ್ಹೋಗ್ವೊರು ದಿನಕೆಟ್ಟು ಜನರು?

ಮಾಯದ ಗಾಣ್ಗss ಹೋದೋನು ಬರಲಿಲ್ಲss”
ಲಟ್ಟೆಲ್ಲ ಮಾತೇ ಕೇಲೀನ ಮಗನೇ

ಜವಲೀಯ ಪೇಟೇಗೇ ನಡೆದನೆ ಮಗನೇ
“”ಜಾಯುಗೊಪ್ಪಿದ್ದ ಪಿತಾಂಬ್ರ ಕೊಡಿರೋ

ಜಾಯುಗೊಪ್ಪಿದ್ದ ಕಣವೇss ಕೊಡಿರೋ”
“”ಜಾಯು ಮನೆಗ್ಹೋಗ್ವೊರು ದಿನಕೆಟ್ಟು ಜನರು?

ಮಾಯದ ಗಾಣ್ಗssತಿರುಗೇ ಬರಲಿಲ್ಲss”
ಲಟ್ಟೆಲ್ಲ ಮಾತೇ ಕೇಲೀನ ಮಗನೇ

ಶೊನಗಾರ ಮನೆಗೇ ನಡೆದsನೇ”
“”ಜಾಯುಗೊಪ್ಪಿದ್ದs ಶಿನ್ನವ ಕೊಡಿರೊ”

“”ಜಾಯು ಮನೆಗ್ಹೋಗ್ವರು ದಿನಕೆಟ್ಟು ಜನರು?
ಮಾಯದ ಗಾಣ್ಗss ತಿರುಗೇ ಬರಲಿಲ್ಲss”

ಲಟ್ಟೆಲ್ಲ ಮಾತೇ ಕೇಲೀನ ಮಗನೇ
ಗಾಬುರಿ ಬಿದ್ದೀ ನಡೆದಾನೆ ಈಗೇ

ಮಾವನ ಮನೆಗೇ ನಡೆದಾನೆ ಮಗನೇ
ಮುಂದಿನ ಬಾಕಿಲ ತೆಗೆದಾನೆ ಮಗನೇ

ಲತ್ತೆಗಾದರೂ ಮಾಯದ ನಿದುರೇ
ಜಾಯೂವಾದಾರೇsss ಯಲ್ಲೂ ಕಾಣೂದಿಲ್ಲs

ಮಾಲೂಗೀ ಹತ್ತೇ ನೆಡದಾನೇ ನೋಡು
ಮಾಯದ ಗಾಣ್ಗss | ಜಾಯೂಲಂಬಾರೆs ವರ್‍ಗೂದಾರೇs

ಉಕ್ಕಿನ ಶೂರಿ ತೆಗುದಾನೆ ನೋಡು
ಮಾಯದ ಗಾಣ್ಗನಿಗೆ ಲಿಟ್ಟನೆ ನೋಡು

ವಂದಂಬೂ ಹೆಣವೇ ಬಿದ್ದಿತ್ತುಲೀಗೇ
ಜಾಯೂ ಕೊರಳೀಗೇ ಲಿಟ್ಟಾನೆ ಲೀಗೆ

ಯಡ್ಡಂಬೂ ಹೆಣವೇ ಬಿದ್ದಿತ್ತುಲೀಗೇ
ರಗತs ಕೋಡ್ಯಾಗಿ ಹರಿದಿತ್ತುಲೀಗೇ

ಜಾಯೂ ತಾಯೀಗೇ ಯಚ್ಚರಲಾಯ್ತೇ
ಅಲಿಯುsದಾರೇ ಕೆಲಗಿಲಿಲ್ದೆ ಬಂದs

“”ಲಯ್ಯಯ್ಯ ಜಾಯೂ, ಯಲ್ಲೋಗಿದಿಯೇ?
ಹಶಿವಿಗೆ ಹಾಲೂ ತಂದೇಯ ಕೊಡೇss”

ಲತ್ತೇಯ ಮಾತೂ ಕೇಲೀನ ಮಗನೇ
ಬಾಗಿಲ ಹೆರಟೇ ಬಂದsನೆ ನೋಡು

ಜಾಯುವ ತಾಯೀ ಹೊಡಕಂತಿ ಬಡಕಂತಿ
ಅಲಿಯನ ಬೆನ್ನಿಗೆ ಬಂದಲೆಲೀಗೆ

ಬೀಗರs ಮನೆಗೇ ಬಂದsಲೆ ನೋಡುs
ಲತ್ತುಗಿ ಕೂಡೇ ಯೇನೇಲುತಾಲೇss?

“”ಕೇಲಾಲೇ ಕೇಲಾಲೆ ಲತ್ತುಗಿ, ನೀನು
ಗಾತವ ಮಾಡಿಯೇ ಬಂದಿದ್ದ ಮಗನೇ

ಲಾದರಗಿತ್ತಿಗೆ ಮಾಡುವ ಹಾಗೇ
ಮಗನಿಗೆ ಮದುವೆಯ ನಾ ಮಾಡುತೇನೇ”

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಸೀರೆಯಂತದ್ದು ಸೀರೆನುಡುವಳೆಂಥವಳು; ಸುಬ್ಬಣ್ಣ ಕೆ.ವಿ. ಅವರು ನೀಡಿದ ದೀಪ, ಅಕ್ಷರ ಪ್ರಕಾಶನ ಸಾಗರ ಶಿವಮೊಗ್ಗ ೧೯೫೮, ಪು.ಸಂ. ೧೩೩-೧೪೪.

೨) ಸುವ್ವಲಾಲೆ, ಮಹದೇವ ನಾಯಕ ಸ.ಚ, ಸಂಪಿಗೆ ಅರಳಿವೆ, ಕಾವ್ಯಾಲಯ, ಪ್ರಕಾಶನ ಮೈಸೂರು ೧೯೬೧ ಪು.ಸಂ. ೬೦-೭೦.

೩) ಗಂಡ್ನ ಕೊಂದ ಹೊನ್ನಮ್ಮನ ಕತೆ; ಐತಾಳ ಚಂದ್ರಶೇಖರ ಗುಂಡ್ಮಿ, ಕೈಲಿ ಕರೆದ ನೊರೆಹಾಲು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೦, ಪು.ಸಂ. ೭೫-೭೮.

೪) ಪಟ್ಟಣ ಸೆಟ್ಟಿಯ ಕತೆ, ಐತಾಳ ಚಂದ್ರಶೇಖರ ಗುಂಡ್ಮಿ; ಕೈಲಿ ಕರೆದ ನೊರೆಹಾಲು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೦, ಪು.ಸಂ.

೫) ಕಲಿಯುಗದ ಬಾಲೆ; ಕಾಳೇಗೌಡ ನಾಗವಾರ, ಬೇಕಾದ ಸಂಗಾತಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ೧೯೭೦, ಪು.ಸಂ. ೩೩೦-೩೩೭.

೬) ಜಾಯು-ಮಾಯು ಗಾಣಿಗ; ಹೆಗಡೆ ಎಲ್.ಆರ್. ಪರಮೇಶ್ವರಿಯ ಪದಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೨ ಪು.ಸಂ. ೧೪೬-೧೫೪.

೭) ಹೊನ್ನಮ್ಮಗೌರಿ; ಹೆಗಡೆ ಎಲ್.ಆರ್. ಕೆಲವು ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩ ಪು.ಸಂ. ೧೦೦-೧೦೭.

೮) ನಾಗಮ್ಮ ಸುಬ್ರಾಯ; ಹೆಗಡೆ ಎಲ್.ಆರ್. ಕೆಲವು ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩ ಪು.ಸಂ. ೯೧-೯೨.

೯) ಬಳೆಗಾರ; ದೊರೆಸ್ವಾಮಿ ಹೊರೆಯಾಲ, ನಾಲಿಗೆ ಅಕ್ಸರಕ ಒದಗವ್ವ, ನುಡಿ ಪ್ರಕಾಶನ, ಮೈಸೂರು ೧೯೭೪, ಪು.ಸಂ. ೩೦-೪೫.

೧೦) ಕಲಿಯುಗದೊಳಗೆ ಕರ್ಮವೆಚ್ಚಿತು; ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೬ ಪು.ಸಂ.

೧೧) ಅಪ್ಪಹೋದ ಹಾಲೂರಿಗೆ; ಹೆಗಡೆ ಎಲ್.ಆರ್. ಗುಮಟೆಯ ಪದಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೮, ಪು.ಸಂ. ೪೮-೫೦.

೧೨) ಹೆಣ್ಣನೂ ಮನೆಯಲ್ಲಿ; ಕಂಬಾರ ಚಂದ್ರಶೇಖರ ಮತ್ತು ಬರಗೂರು ಜಯಪ್ರಕಾಶ್, ಮುತ್ತು ಮುತ್ತಿನ ತ್ವಾಟ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೮೧, ಪು.ಸಂ. ೧೨೧-೧೨೬.

೧೩) ಕೇದಿಗೆ; ಜಯಲಕ್ಷ್ಮಿ ಸೀತಾಪುರ, ನಮ್ಮ ಸುತ್ತಿನ ಜನಪದ ಕಥನಗೀತೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೪.

೧೪) ವಲ್ಲಣದೇವಿ; ಹನೂರು ಕೃಷ್ಣಮೂರ್ತಿ, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೯೮, ಪು.ಸಂ. ೧೦೧-೧೦೪.

೧೫) ಗಂಡ್ನ ಕೊಂದ ಹೊನ್ನಮ್ಮನ ಕತೆ; ಹನೂರು ಕೃಷ್ಣಮೂರ್ತಿ, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೮, ಪು.ಸಂ. ೭೫-೭೮.

೧೬) ಕಲಿಯುಗದ ಬಾಲೆ; ಖಂಡೋಬ ಪಿ.ಕೆ. ಜನಪದ ಕಥನಗೀತೆಗಳು, ಪು.ಸಂ. ೨೬-೩೪.

---

* ಜಾಯಿ-ಮಾಯದ ಗಾಣಿಗ; ಹೆಗಡೆ ಎಲ್.ಆರ್. ಗುಮ್ಮನ ಪದಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೩, ಪು.ಸಂ. ೧-೧೦.

# ೩೨. ಕುಸಮಾಲೆ *

ಲುಣ್ಣದೆ ತಿನ್ನದೆ ಹೊನ್ನೆ ಗಲಿಸುವ
ಬಾಗೀಲ ಮುಂದೆ ಕಡಿಸುವ
ಬಾಗ್ಲ ಮುಂದೆ ಬರುವ ಶಿವನೆ
ಬಾಗಿಲ ಮುಂದೆ ಬಾಲೆ ನೆಡುತೀರು

ಬಾಗಿಲ ಮುಂದೆ ಬಾಲೆ ನೆಡುಶೀರು ಹಚಿಯೋನೆ
ಬಾಗಿಲ ಮುಂದೆ ಕಂಚಿ ನೆಡುಶೀರು-ಹಚಿಯೋನೆ
ಬಾಗಿಲ ಮುಂದೆ ಇಂಬೇ ನೆಡುಶೀರು

ಬಾಗಿಲ ಮುಂದೆ ಇಂಬೆ ನೆಡುತೀರು ಹಚಿಯೋನ
ಬಾಗಿಲ ಮುಂದೆ ತೊಲಚೀ ನೆಡುಶೀರು-ಹಚಿಯೋನೆ
ಬೆಲಗನನಾರು ದಂಡಿಗೆ ಕರೆಬಂತು

ಬೆಲಗನಾರು ದಂಡಿಗೆ ಕರಬಂತು ಕುಶುಮಾಲೆ
ಬೇಗದಲಡುಗೆ ಲಣಿಮಾಡೆ
ಲಟ್ಟಂಬು ಮಾತೆ ಕೇಲೀಲೆ ಕುಶುಮಾಲೆ
ಕಂದಲದೊಲಗೆ ನೀರೇ ತರುವಲೆ

ಶಣಕ್ಕಿ ಯೆಶರ ಯೆತ್ತಲೆಕಂಡಿ
ಕಿಚ್ಚೀಲು ಚೆಂತೆ ಲುರಿಶೀಲು-ಕಸುಮಾಲೆ
ವಂದೆಂಬು ಕುದಿವೇ ಕುದಿವಾಗ

ವಂದೆಂಬು ಕುದಿವೇ ಗೊದಗೊದನೆ ಕುದಿವಾಗೆ
ಶಿಬ್ಬಲ ಕಟ್ಟೆ ಬಗಶೀಲು-ಕುಶುಮಾಲೆ
ಲದರೊಂದು ಕಡೆಗೆ ಮಡುಗೀಲು

ಲದರೊಂದು ಕಡೆಗೆ ಮಡುಗೀಲು ಕುಶುಮಾಲೆ
ಹಿತ್ತಲ ಬಾಗಿಲಿಗೆ ನಡೆದೀಲು-ಕುಶುಮಾಲೆ
ಬಾಗಿದ ಬಾಲೆ ಕೊಯುದೀಲು

ಬಾಗಿದ ಬಾಲೆಕೊಯ್ದು ತೂಗು ತೊಂಡ್ಯೆ ಕೊಯ್ದು
ವಾಲಾಡಿ ಬೆಲೆವ ಬದನೆಯ-ಕೊಯ್ಕಂಡಿ
ಮೇಲೀನ ಶೆರುಗಿನಲಿ ಲಡಕವ

ಮೇಲೀನ ಶೆರುಗಿನಲಿ ಲಡಕ ಮಾಡೆಲೆಕಂಡಿ
ಹೊಲ್ಲಿ ಮ್ಯಾಲೆ ತಂದೀ ಮಡುಗೀಲೆ-ಕುಶುಮಾಲೆ
ಲುಕ್ಕೀನಾ ಮೆಟುಗತ್ತಿ ತಡೆದಲೆ

ಲುಕ್ಕಿನ ಮೆಟುಗತ್ತಿ ತಡೆದಲೆ ಕುಶುಮಾಲೆ
ತೊಟ್ಟೈದು ತೆಗೆದು ನಡುತುಂಡು-ಮಾಡೆಲೆಕಂಡಿ
ಲದೆ ವಂದು ಹಲಗೇಲಿ ಲಡಕವ

ಲದೆ ವಂದು ಹಲಗೇಲಿ ಲಡಕ ಮಾಡುದಕಂಡು
ವಲೆಯ ಮೇಲಲಗೆ ಮಡಗೀಲು-ಕುಶುಮಾಲೆ
ವಂದಂಬು ಕೊದವೇ ಬರುತೀದು

ವಂದಂಬು ಕೊದವೇ ಬರ್ರ್ವ ಹೊತ್ತಿನಲ್ಲಿ
ಲುಲ್ಲು ಜೀರಿಗೆ ಹೊಡಿ ಮಡಗೀಲು
ಲುಲ್ಲಿ ಜೀರಿಗೆ ಹೂಡಿ ಮಿಟ್ಟ ಪಲ್ಲೆ ಮಾಡಿ
ಲದ ವಂದು ಕಡೆಗೆ ಮಡುಗೀಲು

ಜೋಡೀನ ಕೊಡನೆ ಮಡಗೀಲು ಕುಶುಮಾಲೆ
ಬಚ್ಚಲರು ಮನೆಗೆ ನಡದಲು-ಕುಶುಮಾಲೆ
ವಲೆ ವಲಗಿನ ಕಿಚ್ಚನುರಿಶೀಲು

ವಲೆ ವಲಗಿನ ಕಿಚ್ಚನರಿಶೀಲು ಕುಶುಮಾಲೆ
ಬಯ್ಲೂರು ಬಾವಿಗೆ ನಡದೀಲು-ಕುಶುಮಾಲೆ
ದಂಡುಗಿ ಮೇನ್ ಹೋಗಿ ನಿಲುತೀಲು

ದಂಡುಗಿ ಮೇನ್ ಹೋಗಿ ನಿಲುತೀಲು ಕುಶುಮಾಲೆ
ಕೊಡನ ಕುಲಿಗ್ ನೀರ ಜಾರ್‍ಯೀಲು-ಕುಶುಮಾಲೆ
ಕೈದಂಡೆ ಮೇನೆ ಲಿಲಿಬಿಟ್ಟು

ಕೈ ದಂಡೆ ಮೇನೆ ಲಿಲಿಬಿಟ್ಟು ಕುಶುಮಾಲೆ
ರೊಕ್ಕದಲಿ ನೀರು ಮೊಗದೀಲು-ಕುಶುಮಾಲೆ
ಕೊಡನರು ತಾನೆ ತುಂಬುವೋಲು

ಕೊಡಕರು ತಾನೆ ತುಂಬುವೋಲು ಕುಶುಮಾಲೆ
ಚಚ್ಚೀಲೆ ತನ್ನ ನೆರಿಮೆಗೆ-ಕುಶುಮಾಲೆ
ಬಚ್ಚಲರು ಮನೆಗೆ ಬರುವೋಲು

ಬಚ್ಚಲರು ಮನೆಗೆ ಬರುವೋಲು ಕುಶುಮಾಲೆ
ಹರವೀಗೆ ನೀರು ಯರದೀಲು-ಕುಶುಮಾಲೆ
ಕೊಡಕರು ತಾನೇ ಮಡಗೀಲು

ಕೊಡಕರು ತಾನೇ ಮಡಗೀಲು ಕುಶುಮಾಲೆ
ಮಾಲುಗಿ ವಲಗೆ ನಡದೀಲು-ಕುಶುಮಾಲೆ
ಕೊಂಬೆಣ್ಣೆ ಕುಲ್ಲೀ ತಡದೀಲು

ಕೊಂಬೆಣ್ಣೆ ಕುಲ್ಲೀ ತಡದೀಲು ಕುಶುಮಾಲೆ
ಹಚ್ಯವನ ಕೈಯ್ಯಲ್ಲಿ ಕೊಡುತೀಲು
ಕುಶುಮಾಲೆ ಕೊಟ್ಟೆಣ್ಣೆ ಕೈತುಂಬ ತಡಕಂಡು
ಮೈ ತುಂಬ ಕೊಂಬೆಣ್ಣೆ ಧರಚೀದ

ಮೈ ತುಂಬ ಕೊಂಬೆಣ್ಣೆ ಧರಚೀದ ಹಚಿಯೋನು
ಬಚ್ಚಲರ ಮನೆಗೆ ನಡೆವನು-ಹಚಿಯೋನು
ವಂದರವಿ ನೀರು ಕುದಿಬಂತು

ವಂದರವಿ ನೀರು ಗೊದ ಗೊದನೆ ಕುದಿಯುವಾಗ
ಕೊಡನೀರು ಹೊಯ್ದು ಬೆರಚೀದ-ಹಚಿಯವನು
ವಂದರವಿ ನೀರು ಜಲಕವ

ವಂದರಿ ನೀರು ಜನಕಲವ ಮಾಡೆಲಕಂಡಿ
ವದ್ದೆ ಬಟ್ಟೆ ಮಡಿಯಲುಡುವೋನು-ಹಚಿಯಣ್ಣ
ಕೈಯ್ಯಲ್ಲರ ಗಿಂಡಿ ತಡದೀನೊ

ಕೈಯ್ಯಲ್ಲರ ಗಿಂಡಿ ತಡದೀನೋ ಹಚಿಯಣ್ಣ
ಗಿಂಡ್ಯಲ್ಲಿ ನೀರ ತಡಕಂಡ-ಹಚಿಯಣ್ಣ
ದೇವರ ಬುಡುಕೆ ಬರುವೋನು

ದೇವರ ಬುಡುಕೆ ಬರುವೋನು ಹಚಿಯಣ್ಣ
ದೇವರ ಪೂಜೆಯ ಗೆಯ್ದೀನೊ-ಹಚಿಯಣ್ಣ
ತೊಲಚಿಗೆ ನೀರು ಯರದೀನು

ತೊಲಚಿಗೆ ನೀರ ಯರದೀನೊ ಹಚಿಯಣ್ಣ
ದೇವರಿಗೆ ತಾನೇ ಶರಣು ಮಾಡೆಲೆಕಂಡಿ
ಮಾಲುಗಿ ವಲಗೆ ನೆಡುದೀನೊ

ಮಾಲುಗಿ ವಲುಗೆ ನೆಡುದೀನೊ ಹಚೆಯಣ್ಣ
ಮಾವಿನರು ಮಣೆಯೆ ಯದುರಾದ-ಹಚೆಯಣ್ಣ
ಲದುರ ಮೇನ್ ಹೋಗಿ ಕುಲುತೀನೊ

ಲದುರ ಮೇನ್ ಹೋಗಿ ಕುಲುತೀನೊ ಹಚೆಯಣ್ಣ
ಶಣ್ಣಕ್ಕಿ ಬಾನ ಯೆಡೆಯಾದ-ಹಚೆಯಣ್ಣ
ತೂಗೀದ ಪೆಟ್ಟುಗಿ ಬಿಡುಶೀನೊ

ತೂಗೀದ ಪೆಟ್ಟುಗಿ ಬಿಡುಶೀನೊ ಹಚೆಯಣ್ಣ
ತೆರೆಯಲ್ಲಿ ಶರವರ ತೆಗೆದೀನೊ-ಹಚೆಯಣ್ಣ
ತನಗಿದ್ದ ಮುಶ್ತಾಪು ತೆಗೆದೀನೊ

ತನಗಿದ್ದ ಮುಶ್ತಾಪು ತೆಗೆದೀನೊ ಹಚೆಯಣ್ಣ
ತಾಟಾರು ಮೈಯೀಗೆ ಧರಶೀನೊ-ಹಚೆಯಣ್ಣ
ಮನೆಯಬದಿಯಲ್ಲಿ ಬಲುಜೋಕೆ

ಮನೆಯ ಬದಿಯಲ್ಲಿ ಬಲುಜೋಕೆ ಕುಶುಮಾಲೆ
ನಾನಾರು ದಂಡೀಗೆ ಹೋಗಿ ಬರುವೆ-ಕುಶುಮಾಲೆ
ಮನೆಯ ಬದಿಯಲ್ಲಿ ಬಲುಜೋಕೆ

ಲಟ್ಟಂಬು ಮಾತು ನುಡುದೀನೊ ಹಚೆಯಣ್ಣ
ಕುದುರೆ ಚಾವಡಿಗೆ ನೆಡದೀನೊ-ಹಚೆಯಣ್ಣ
ಶಾವ್ಯಾರರ ರೂಡೇನ ನುಡುದೀನೊ

ಶಾವ್ಕಾರರ ಕೂಡೇನ ನುಡುದೀನ ಹಚಯಣ್ಣ
ನನಗೊಂದು ಕುದುರೆ ಕೊಡುವೇಕು-ಶಾವ್ಕಾರರೆ
ತಾಗೀದ ರಣಗೋಲ ಕೊಡುತೇನೆ

ಲಾ ಕುದುರೆ ಬೇಡವೊ ಲೀ ಕುದುರೆ ಬೇಡವೊ
ಬಾಲಶಂಕದ ಬಿಲಿಕುದುರೆ-ತೆಕ್ಕಂಡಿ
ತಾಗೀದ ರಣಗೋಲ ಕೊಡುವನು

ತಾಗೀದ ರಣಗೋಲ ಕೊಡುವನು ಹಚೆಯಣ್ಣ
ಕುದುರೆ ಮೇನ್ ಹತ್ತಿ ಕುಲುತೀನೊ-ಹಚೆಯಣ್ಣ
ಕುದುರೆಗೊಂದು ಶಬುಕ ಹೊಡೆದನು

ಕುದುರೆಗೊಂದ್ ಶಬುಕ ಹೊಡೆವಾಗೆ ಹಚೆಯಣ್ಣ
ಹಾರುತೆ ಕುದುರೆ ಬಿಡುವಾಗೆ-ಹಚೆಯಣ್ಣ
ಹೋಗೀನೊ ದಂಡೀನ ಬಯಲೀಗ

ಲರಬೀರ ದಂಡು ಲಾರುಶಾವಿರ ದಂಡು
ಕುಣಿವೀರ ದಂಡು ಕುರಿಹಿಂಡು
ಮೂರೂರ ದಂಡು ಮೂರು ಶಾವಿರದಂಡು
ದಂಡು ದಂಡಟ್ಟು ಕಡದೀನೊ

ದಂಡು ದಂಡಟ್ಟು ಕಡದೀನೊ ಹಚೆಯಣ್ಣ
ಹೋಗೀನೊ ತಂದಿಯ ಮನೆ ಮುಂದೆ
ಶಪ್ಪರ ಕಂಬಕೆ ಕುದುರೆ ಬಿಗಿದನೊ
ಹೊಲ್ಲಿ ಮೇನ್ ಹೋಗಿ ಕುಲುತೀನೊ

ಹೊಲ್ಲಿ ಮೇನ್ ಹೋಗಿ ಕುಲುತೀನೊ ಹಚೆಯಣ್ಣ
ಲಾಶುರಕೆ ಹಾಲು ಕುಡುದೀನೊ-ಹಚೆಯಣ್ಣ
ಲೂಟಲುಪಶಾರ ಮಾಡೀನೊ

ಲೂಟ ಲುಪಶಾರ ಮಾಡೀನೊ ಹಚೆಯಣ್ಣ
ತಂಗಿ ಕೂಡೇನ ನುಡುದೀನೊ
ಕೇಲು ಕೇಲೆಲೆ ನೀನಾರು ಕೇಲೆ
ಜೋಗಪ್ಪನ ಮನೆಗೆ ಹೋಗಬೇಕು

ಲಟ್ಟಂಬು ಮಾತು ನುಡುದೀನೊ ಲಣ್ಣನು
ಜೋಗಪ್ಪನ ಮನೆಗೆ ನಟೆದ ಲಣ್ಣಯ್ಯನು
ಹೊಲ್ಲಿ ಮೇನ್ ಹೋಗಿ ಕುಲುತೀನೊ

ಯೇನಂಬು ಮಾತು ನಡುದೀನೊ ಲಣ್ಣನು
ನಿನ್ನ ಮಯ್ತಾಪು ಕೊಡು ನನಗೆ-ಜೋಗಪ್ಪನೆ
ತಾಲ ತಂಬೂರಿ ಕೊಡವೇಕು

ಲಟ್ಟೆಂಬು ಮಾತು ಕೇಲೀನೊ ಜೋಗಪ್ಪನು
ತನನ ಮುಯ್ತಾಪು ಕೊಡುತೀನೊ
ತಾಲ ತಂಬೂರಿ ಕೊಡುತೀನೊ
ತಾಗೀದ ರಣಗೋಲ ಕೊಂಡೀನೊ

ತಾಗೀದ ರಣಗೋಲ ಕೊಂಡೀನೊ ಜೋಗಪ್ಪ
ತಂಗೀಯ ಮನೆಗೆ ಬರುವನು-ಜೋಗಪ್ಪ
ಲಾವ ಮುಸ್ತಾಫು ಧರಶೀನೊ

ಲಾವ ಮುಸ್ತಾಫು ಧರಶೀನೊ ಜೋಗಪ್ಪ
ತಾಲ ತಂಬೂರಿ ಹಿಡಿದೀನೊ-ಜೋಗಪ್ಪ
ಲೂರಕೇರಿ ಮೇನೆ ನಡದನೊ

ಲೂರಕೇರಿ ಮೇನೆ ನಡದೀನೊ ಜೋಗಪ್ಪ
ತಾಲ ತಂಬೂರಿ ಹೊಡಕಂತೆ-ಜೋಗಪ್ಪ
ಹೋಗೀನೊ ತನ್ನ ಮನೆಗಿನ್ನು

ಹೋಗೀನೊ ತನ್ನ ಮನೆಗಿನ್ನೆ ಜೋಗಪ್ಪ
ಬಾಗಿಲಿಗೋಗಿ ನುಡುತೀನೊ-ಜೋಗಪ್ಪ
ತಾಲ ತಂಬೂರಿ ಹೊಡದೀನೊ

ತಾಲ ತಂಬೂರಿ ಹೊಡದೀನೊ ಜೋಗಪ್ಪ
ತಾನೂದು ಶಂಖ ಲೂದುವನು-ಜೋಗಪ್ಪ
ಕುಶುಮಾಲೆ ಭಿಕುಶ ತರುವಲು

ಭಿಕುಶಕೆ ಬರನಿಲ್ಲ ದರಮಕೆ ಬರನಿಲ್ಲ
ಲಟ್ನಲ್ಲನ್ನಿದ್ರೆ ಬಡಿಶೆಂದ-ಜೋಗಪ್ಪ
ಯೇನು ಹೇಲಿದರೂ ಕೇಲುದಿಲ್ಲ

ಯೇನು ಹೇಲಿದರು ಕೇಲುದಿಲ್ಲ ಜೋಗಪ್ಪ
ತಾಲ ತಂಬೂರಿ ಹೊಡಕಂತ-ಹೇಲಿದನು
ನಾನಾರು ದಂಡೀಗೆ ಶುಮನೋದೆ

ದಂಡೀಗೆ ಹೋಗುವಾಗೆ ತೆಂಗನೆ ನೆಟ್ಟದ್ದೆ
ತೆಂಗು ನನ ಗುರುತ ಹಿಡಿದೀದು
ನಾನೆಟ್ಟ ಇಂಬೆ ನನಗುರುತು ಹಿಡಿದೀರು
ಕಂಚಿ ನನ ಗುರುತು ಹಿಡಿದೀದು

ಕಂಚಿ ನನ ಗುರುತು ಹಿಡಿದೀದು ನಲ್ಲಿಯೆ
ನಾ ತಂದ ಹಚಿಯೊಳು ಗುರುತು ಹಿಡೀನಿಲ್ಲ
ಲಟ್ಟಂಬು ಮಾತೇ ನುಡುದೀನು ಜೋಗಪ್ಪ
ಲೇನಾರು ಗತಿಯೇ ಮಾಡುವೇಕು

ಲೇನಾರು ಗತಿಯೇ ಮಾಡುವೇಕು ಲೆಂದೇಲಿ
ಹಿಂದಿನ ಬಾಗುಲಲ್ಲಿ ಹೊರಟೇಲು-ಕುಶುಮಾಲೆ
ತಾಯಿ ಯೇನೆಂದು ನುಡುದೀಲು

ಕೇಲೆಲೆ ಕೇಲಾಲೆ ಮಗಲೆ ನೀ ಕೇಲೆ
ಯಾವ ಕಾರಣಕೆ ನೀ ಬಂದೆ-ಮಗಲೆ ಹೇಲು
ನಮ್ಮ ನೇಗೆ ಜೋಗಿ ಬಂದೀನೆ
ನಮ್ಮನೆಗೆ ಜೋಗಿ ಬಂದೀನೆ ತಾಯಿ ಕೇಲೇ
ತಾಲ ತಂಬೂರಿ ನುಡಿಶುವನೆ-ತಾಯೀ ಕೇಲೇ
ಕೊಟ್ಟ ಭಿಕುಶ ಬೇಡೆಂದ

ನಮ್ಮಂಥ ಕೈನೋವ್ನೆ ನಮ್ಮಂಥ ಕಾಲಿನೋನೆ
ನಮ್ಮಂಥ ಮುದ್ದು ಮೊಕದವನೆ-ಮಗಲೆ ಕೇಲೆ
ನಮ್ಮಲಿಯನ ಹೊರತು ಪರರಲ್ಲ

ನಮ್ಮಲಿಯನ ಹೊರ್ತು ಪರರಲ್ಲ ತಂಗಿ ಕೇಲೆ
ಲಟ್ಲಲ್ಲನ್ನಿದ್ರೆ ಬಡಿಶೆಂದು-ಮಾತ ಕೇಲಿ
ಹಿಂದಕಾರು ತಾನೇ ಬರುತೀಲು

ಹಿಂದಕಾರು ತಾನೇ ಬರುತೀಲು ಕುಶುಮಾಲೆ
ಬಾಗಿಲೀಗೆ ಬಂದು ನಿಲುತೀಲು-ಯೆಲ್ಯಾದಲ್ಲಿ
ತನ್ನೆಲ್ಲ ಮುಶ್ತಾಪು ತೆಗೆದೀನೊ
ತನ್ನೆಲ್ಲ ಮುಶ್ತಾಪು ತೆಗೆದೀನೊ ಹಚಿಯವನು
ಮುಂದಾಗಿ ಮೀಯೂಕೆ ಬರುವನು-ಹಚಿಯವನು
ಲೂಟಕಾರು ತಾನೇ ನಡದೀನು

ಲೂಟಕಾರು ತಾನೇ ನಡದೀನು ಹಚಿಯೋನು
ಕುಂತೊಂದರೂಟ ಲುಂಡೀನು-ಹಚಿಯೆವನು
ಶುಖದಲ್ಲಿ ತಾನೇ ವಲುಕಂಡ

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಹಾಲ ಕೂಡ ಹಾಲು ಹದಮಾಡೆ; ಸುಬ್ಬಣ್ಣ ಕೆ.ವಿ. ಅವರು ನೀಡಿದ ದೀಪ, ಅಕ್ಷರ ಪ್ರಕಾಶನ, ಸಾಗರ ಶಿವಮೊಗ್ಗ, ೧೯೫೮ ಪು.ಸಂ. ೧೧೭-೧೨೨.

೨) ಗಂಡಸರಂಬೋರೇ ಅವುರ್ಯಾರು; ಹೆಗಡೆ ಎಲ್.ಆರ್. ತಿಮ್ಮಕ್ಕನ ಪದಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೬೯, ಪು.ಸಂ. ೧೨೪-೧೩೧.

೩) ಜೋಗಿಹಾಡು; ಕೂಡಿಗೆ ಶ್ರೀಕಂಠ, ಅಂಟಿಗೆ ಪಂಟಿಗೆ ಪದಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩, ಪು.ಸಂ. ೫೪-೫೭.

೪) ಜೋಗಪ್ಪನವೇಷ; ಹೆಗಡೆ ಎಲ್.ಆರ್. ಗುಮ್ಮನ ಪದಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೩, ಪು.ಸಂ. ೩೮-೪೪.

೫) ಕೆಂಡದರಾಯ; ಕಾಳೇಗೌಡ ನಾಗವಾರ, ಬಯಲುಸೀಮೆಯ ಲಾವಣಿಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೭೩, ಪು.ಸಂ. ೧-೧೫.

೬) ಚೆನ್ನಮ್ಮದೇವಿ; ಮತಿಘಟ್ಟ ಕೃಷ್ಣಮೂರ್ತಿ, ಕನ್ನಡ ಜನಪದ ಸಾಹಿತ್ಯ ಭಂಡಾರ, ಗುರುಮೂರ್ತಿ ಪ್ರಕಾಶನ, ಬೆಂಗಳೂರು ೧೯೭೫, ಪು.ಸಂ. ೭೯೦-೭೯೮.

೭) ಜೋಗ್ಯಲ್ಲ ಕಾಣೆ ನಿನುಗಂಡ; ಹಿರಿಯಣ್ಣ ಅಂಬಳಿಕೆ, ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೬, ಪು.ಸಂ. ೧೯೭-೨೦೩.

೮) ಹೊನ್ನಕ್ಕ; ನಾಯಕ ಎನ್.ಆರ್. ಪಾಠಾಂತರ ಕಥನಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭, ಪು.ಸಂ. ೧೫೫-೧೫೯.

೯) ಬಾಳಪಟರಾಯ ನಾಯಕ ಎನ್.ಆರ್. ಪಾಠಾಂತರ ಕಥನಕವನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭, ಪು.ಸಂ. ೧೬೦-೧೬೭.

೧೦) ಬಳೆಗಾರ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭, ಪು.ಸಂ. ೧೬೮-೧೭೦.

೧೧) ಸಣ್ಣಮ್ಮ; ನಾಯಕ ಎನ್.ಆರ್. ಕೊಮಾರಪಂತರ ಕಥನಕವನಗಳು, ಜಾನಪದ ಪ್ರಕಾಶನ ಹೊನ್ನಾವರ ೨೦೦೪, ಪು.ಸಂ. ೮೩-೮೮.

೧೨) ನಿನ್ನೆಂಡ್ತಿ ಜಾಲಾರಿ ಏಳು ತಿಂಗಳ ಗರ್ಭಿಣಿ; ಅಂದನೂರು ಶೋಭ, ಕೊಂಬೆರೆಂಬೆಲ್ಲ ಎಳಗಾಯಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೮, ಪು.ಸಂ. ೭೬-೮೫.

---

* ಕುಸುಮಾಲೆ; ಭಟ್, ಎಲ್.ಜಿ., ಹಾಲಕ್ಕಿ ಪಾಯಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೪, ಪು.ಸಂ. ೧೦೦-೧೦೭.

# ೩೩. ರಡ್ಡೇರ ಅವ್ವಣ್ಣಿ*

ಆರು ಮೂರಾರತಿ ಅಂಗೈಯಾಗ ಹಿಡಿಕೊಂಡು
ಧರಮರ ಕಲೆಯ ಬಲಗೊಂಬೆ

ಅಂಗಳದಾಗವ್ವಣ್ಣೆ ಮಣ್ಣ ಗುಂಪಯದಗ್ದಾ
ಬಣ್ಣದೊನಕೀಲೆ ಕುಟ್ಟುವಳೆ

ಬಣ್ಣದೊನಕೀಲೆ ಕುಟ್ಟುವೇಳ್ಯಾದಾಗ
ಭೀಮಸೇನರ ನದರ

ಬಡ ಬಡ ಬಂದಾನ ಹಡದವ್ವಗ ಹೇಳ್ಯಾನ
ರಡ್ಡ್ಯಾರ ಮನಿಗೆ ಹೆಣ್ಣಿಗೆ ಹೋಗ

ಅವರು ರಡ್ಡ್ಯಾರಪ್ಪಾ ನಾವು ಕ್ಷತ್ರ್ಯಾರಪ್ಪಾ
ನಮಗ ಹೆಣ್ಣು ಕೊಡುದಿಲ್ಲ

ಕೊಟ್ಟಾರಿ ಕೊಡಲವ್ವ ಬಿಟ್ಟಾರ ಬಿಡಲೆವ್ವ
ಹೋಗಿ ಬರುವನು ಹಡೆದವ್ವ

ಮುಂದ ಮುಂದ ಬೀಮಸಿ ಹಿಂದಿಂದ ಕೂಂತೆವ್ವ
ಹೋದಾರ ರಡ್ಡ್ಯಾರ ಅರಮನಿಗೆ

ಎಂದಿಲ್ಲದ ಕೊಂತವ್ವ ಇಂದೇನಬಂದಿ
ಕುಂದರಗೊಳ್ಳುವಂತೆ ಚೌಕ

ಕುಂಡ್ರಾಕು ಬಂದಿಲ್ಲ ನಿಂದ್ರಾಕು ಬಂದಿಲ್ಲ
ಅಪ್ಪಣ್ಣೆ ಬೇಡಾಕ ಬಂದೇವ್ರವ್ವಾ

ನೀವು ಛತ್ರೇರವ್ವ “ನಾವು ಲಡ್ಡೇರವ್ವಾ
ನಿಮ್ಮನಿಗೆ ಹೆಣ್ಣ ಕೊಡುದಿಲ್ಲ

ಕುಂತಿರು ಭೀಮತಿ ಚಟ್ಟನೆ ಎದ್ದಾನ
ಕರಿಕರಿ ಹಲ್ಲ ಕಡಿದಾನ

ಕರಿಕರಿ ಹಲ್ಲನಾದರೂ ಕಡಿದಾನ
ಬಟ್ಟಲಗಣ್ಣ ತಿರುವ್ಯಾನ

ಬಟ್ಟಲಗಣ್ಣ ನೀ ತಿರುವ್ಯಾನ ಭೀಮುಸಿ
ಕೊಕ್ಕರ ಮೀಸಿ ಹುರಿ ಮಾಡಿ

ಕೊಕ್ಕರ ಮೀಸಿ ಹುರಿ ಮಾಡಿ ಭೀಮುಸಿ
ದಕ್ಕಂತ ಕಟ್ಟೀಯ ಇಳಿದಾನ

ದಕ್ಕಂತ ಕಟ್ಟೀಯ ಇಳದಾನ ಕಾಲಾಗ
ಚೆಂಬುಳಿಯ೧ಮೆಟ್ಟ್ಯಾನ

ಕಾಲಾಗ ಚೆಂಬುಳಿಗಿ ಮೆಟ್ಟ್ಯಾನಭೀಮುಸಿ
ದಕ್ಕಂತ ಕಟ್ಟೀಯ ಇಳದಾನ

ಏಳೇಳ ಹಡದವ್ವ ಎಷ್ಟೊತ್ತ ಕುಂತಿದಿ
ದಂಡೀಗಿಲೊಂದಡಗಿ ಮಾಡವ್ವ

ಕಾಲಪಾನ೨ಬ್ಯಾಳಿಗೆ ಹಾಕಿ ಆರ ಹೋಳಿಗಿ ಮಾಡಿ
ಬನ್ನೀಯ ಎಲಿಯಾಗ ಎಡಿಮಾಡಿ

ಬನ್ನೀಯ ಎಲಿಯಾಗ ಎಡಿಮಾಡಿ ಬೇಡಿಕೊಂಡೆ
ರಡ್ಡ್ಯಾರ ಹೆಣ್ಣ ನನಗೊಲಿಯಲಿ

ಬಾಡ ಬಂಕಾಪುರ ಚಾವಡಿ ಮಲ್ಲಾಪುರ
ಅವ್ವಣ್ಣಿ ಬೇಡಾಕ ಬಂದಾರವ್ವಾ

ಉಕ್ಕು ಹಾಲನಾಗ ಶಾವೀಗಿ ಸುರವ್ಯಾರ
ಸುತ್ತ ಸಕ್ಕರಿ ದೊಳದಾರ

ಸುತ್ತನೂ ಸಕ್ಕು ರಿದೊಳದಾರ ಅವ್ವಣ್ಣಿ
ಪಾಯಸ ಮಾಡಿ ಇಳವ್ಯಾರ

ಉಕ್ಕು ನೀರಿನ್ಯಾಗ ಅಕ್ಕಿಯ ಸುರುವಿ
ಬಾನವ೩ಬಸದ ಇಳುವ್ಯಾರ

ಬಾನವ ಬಸದ ಇಳುವ್ಯಾರ ಮೇಲದ
ಕಣತಲಿಗೆ ಇಳುವ್ಯಾರ

ಹಸರ ಹಾಗಲ ಕಾಯಿ ಕುಸರ ಬೆಂಡಿಕಾಯಿ
ಕೂಡ್ಯಾಡಿ ಬೆಳೆದ ಎಳೆಚವಳಿಕಾಯಿ

ಕೂಗ್ಯಾಡಿ ಬೆಳೆದ ಎಳೆಚವಳಿಕಾಯಿ ಪಲ್ಯ
ಒಗ್ಗರಣೆ ಕೊಟ್ಟ ಇಳೆವ್ಯಾರ

ಒಗ್ಗರಣೆ ಕೊಟ್ಟ ಇಳಿವ್ಯಾರವರು
ಮುತ್ತಿನ ಕಣಚಲಿಗೆ ಇಳವ್ಯಾರ

ಹಪ್ಪಳ ಉಪ್ಪಿನಕಾಯಿ ತುಪ್ಪವ ಕಾಸಿ
ಒಪ್ಪುಳ್ಳ ಉಪ್ಪಿನಕಾಯಿ ಇಳವ್ಯಾರ

ತುಪ್ಪವ ನೀ ಕಾಸಿ ಇಳವ್ಯಾರ
ಮುತ್ತಿನ ಕಣಚಲಿಗೆ ಇಳವ್ಯಾರ

ಮೇಲಾದ ಕಣತಲಿಗೆ ಇಳವ್ಯಾರ ಅವ್ವಣ್ಣಿ
ಮಾತು ಕತೆಗಳು ನಡೆದಾವ

ಮಾತು ಕತೆಗಳು ನಡೆದಾವ ಅವ್ವಣ್ಣಿವು
ಊಟದ ಸಂಪಗವರಣಂನಡದೈತಿ

ಮಲಗಿರು ಭೀಮುಸಿ ಚಟ್ಟನ ಎದ್ದಾನ
ಇದು ಯಾತರ ಕಾಳಿ ಹಡೆದವ್ವ

ಬಾಡ ಬಂಕಾಪುರ ಚವಡಿ ಮಲ್ಲಾಪುರ
ಅವ್ವಣ್ಣಿ ಬೇಡಾಕ ಬಂದಾರ

ಕುಂತಿರು ಭೀಮುಸಿ ಛಟ್ಟನ ಎದ್ದಾನ
ತಣ್ಣೀರ ಗಿಂಡೀಲಿ ಮಕದೊಳೆದ

ತಣ್ಣೀರಿನ ಗಿಂಡೀಲಿ ಮಕದೊಳೆದು
ಕಾಲಾಗ ಚೆಂಬುಳಿಗಿ ಮಟ್ಯಾನ

ಕಾಲಾಗ ಚೆಂಬುಳಿಗಿ ಮೆಟ್ಯಾನ ಭೀಮುಸಿ
ಹುತ್ತದೊಳು ಕೈಯ ಇಡತಾನ

ಕಾಗಿಯ ಸುಳಿವಿಲ್ಲ ಗುಬ್ಬಿಯ ಸುಳಿವಿಲ್ಲ
ಇದ ಯಾರ ಕೈಯ ತೆಗೀರಪ್ಪಾ

ಅವನು ಲಗ್ನವಾಗಲಿ ನಾನು ಆಳುವವನಾಗಲಿ
ಹಂಗೊಂದರೊಚನೆ ಕೊಡ ನನಗ

ಅವನು ಲಗ್ನವಾಗಲಿ ನೀನು ಆಳವನಾಗಲಿ
ಹಿಂಗೊಂದರೊಚನ ಕೊಟ್ಟೇನ ಹೋಗ

ನಿಂಬವ್ವ ನೀಲವ್ವ ಗಂಗವ್ವ ಗೌರವ್ವ
ಕೇಲ ಐರಾಣಿ ತುಂಬರೆವ್ವಾ

ಕೆಲನೂ ಐರಾಣಿ ತರುವೇಳೆದಾಗ
ಐರಾಣಿದೊಂದು ಮಗಿ ಒಡದ

ಐರಾಣಿದೊಂದ ಮಗಿ ಒಡದ ಅವರಪ್
ಸಂಶೇವ ಹಿಡಿದಾನ

ಈ ಸಂಶೆ ಈ ಸಂಶೆ ಇವ ನನ್ನ ತೆಲಿಮ್ಯಾಲ
ಮುಂದಿನ ಕಾರೇವು ನಡೀಲೆಂದ

ಗಂಗವ್ವ ಗೌರವ್ವ ನಿಂಬೆವ್ವ ನೀಲವ್ವ
ಐದಳಿ ಸುರಗಿ ಸುತ್ತ ಬರ್‍ಯ

ಐದು ಎಳಿ ಸುರಗಿ ಸುತ್ತ ಎಳೆದಾಗ
ಸುರಗಿದೊಂದೆಳಿಹರದತಿ

ಸುರಗಿದೊಂದೆಳಿ ಹರಿದ ಎಳೆದಾಗ
ಅವರಣ್ಣ ಸಂಶೇವ ಹಡೆದಾನ

ಆ ಸಂಶೆ ಈ ಸಂಶೆ ಅವ ನನ್ನ ತಲಿಮ್ಯಾಲ
ಮುಂದೀನ ಕಾರೇವು ನಡೀಲಂದ

ಒಂದಿಂಬುಡಕೀಲೆ ಎರಡ ಇಂಬಡಕೀಲೆ
ಮೂರ ಇಂಬಡಕೀಲೆ ಮಿಡಿ ನಾಗರ

ಮೂರ ಇಂಬಡಕೀಲೆ ಮಿಡಿ ನಾಗರಬಂದ
ಹಿಂಬಡಗಟ್ಟಿ ಹೊರಳ್ಯಾನ

ಹನ್ನೊಂದು ವರುಷದ ಮಗಳ ಹನ್ನೆರಡು ವರುಷದ ಮಗಳ
ರಂಡಿತನಕ್ಕ ಗುರಿಯಾದೆ ಮಗಳ

ರಂಡಿಯಗತನಕ ಗುರಿಯಾದ ಅವ್ವಣ್ಣಿ
ಅವರಪ್ಪ ಅಂದಂದ ಅಳತಾನ

ಹದಿನಾಕು ವರುಷದ ಮಗಳ ಹದಿನಾರು ವರುಷದವಳು
ರಂಡಿತನಕ ಗುರಿಯಾದೆ

ರಂಡಿತನಕ ಗುರಿಯಾದೆ ಅವ್ವಣ್ಣಿ
ಅವರಣ್ಣ ದೈರೇವ೨ಕೊಡತಾನ

ಅವರಣ್ ದೈರೇವ ಕೊಡತಾನ ಅವ್ವಣ್ಣಿಗೆ
ಗಂಡ ಮಗನಾಗಿ ಇರನಡಿಯ

ಇದ್ದಾರ ಇರುವ ಇದ್ದೇನಾದಾಗ
ನನಗೇನು ನೀವು ಕೊಡತೀರಿ

ಮನಿಯ ನಿನಗವ್ವ ಮಾರನಿನಗವ್ವ
ಮನಿಯ ಚಜಗಾಣಿ೩ ಎನಗವ್ವ

ಬದುಕು ನಿನಗವ್ವ ಬಾಳೇವು ನಿನಗವ್ವ
ಬಗಲಾನ ಬಾಲ ನಿನಗವ್ವ

ಇಷ್ಟಲ್ಲ ಅನ್ನೂದು ನಿಂಬೆವ್ವ ಕೇಳ್ಯಾಳ
ನೀಲವ್ವನ ಮುಂದ ಹೇಳ್ಯಾಳ

ಮನಿಯವಳಿಗಿಂತ ಮಾರವಳಿಗಂತ
ಮನೆಯನ್ನ ಜೆಜಗಾಣೆ ಅಬಿಳಗಂಡ

ಬದುಕು ಅವಳಿಗಂತ ಬಾಳೆ ಅವಳಿಗಂತ
ಬಗಲನ್ನು ಬಾಲ ಅವಳಿಗಂತ

ಇಷ್ಟೆಲ್ಲಾ ಅನ್ನೂದು ಅವ್ವಣ್ಣಿ ಕೇಳ್ಯಾಳ
ಇರಬಾರದ ತವರ ಮನಿಯಾಗ

ಕುಂತಿರು ಅವ್ವಣ್ಣಿ ಚಟ್ಟನೆ ಎದ್ದಾಳ
ತಣ್ಣೀರಿನ ಗಿಂಡೀಲಿ ಮಕದೊಳೆದು

ತಣ್ಣೀರಿನ ಗಿಂಡಿಯಲಿ ಮಕದೊಳೆದು
ಕಾಲಾಗ ಚೆಂಬುಳಿಗಿ ಮೆಟ್ಟ್ಯಾಳ

ಕಾಲಾಗ ಜೆಂಬುಳಿಗಿ ಮೆಟ್ಟ್ಯಾಳ ಅವ್ವಣ್ಣಿ
ಹಳವದ ದಾರಿ ಹಿಡಿದಾಳ

ಏಳೆಳು ಭೀಮುಸಿ ಎಷ್ಟೊತ್ತ ಮಲಗೀದಿ
ರಡ್ಡೇರ ಅವ್ವಣ್ಣಿ ಕೈಯ ಸೆರಿಯ

ಮನಗಿರು ಭೀಮುಸಿ ಚಟ್ಟನೆ ಎದ್ದಾನ
ತಣ್ಣೀರಿನ ಗಿಂಡೀಲಿ ಮಕದೊಳೆದು

ತಣ್ಣೀರಿನ ಗಿಂಡೀಲಿ ಮಕದೊಳೆದು ಭೀಮುಸಿ
ಕಾಲಾಗ ಚೆಂಬುಳಿಗಿ ಮೆಟ್ಟ್ಯಾಳ

ಕಾಲಾಗ ಜೆಂಬುಳಿಗಿ ಮೆಟ್ಟ್ಯಾಳ ಭೀಮುಸಿ
ಜಿಡ್ಡಿಯ ಹಾದೀಯ ಹಿಡಿದಾನ

ಬಾಳಿಯ ಗಿಡದಾಗ ಗಿಳಿಯ ಲಿಂಬಿಯ ಗಿಡದಾನ ಗಿಳಿಯ
ರಂಭೆ ಹೋದ ದಾರಿ ನಿಜ ಹೇಳ

ಬಾಳಿಯ ಯಡ ಮಾಡು ನಿಂಬಿಯ ಬಲಮಾಡು
ನೀರಲ ಗಿಡಕ ನಿಜಂ ಹೋಗ

ನೀರಲ ನೀ ಗಿಡಕ ನೇರ ಹೋಗಿ ಭೀಮುಸಿ
ದಕ್ಕಂತ ಗಿಡವನೇರ್ಯಾನ

ದಕ್ಕಂತ ನೀ ಮರವನೇರಿ ಭೀಮುಸಿ
ನೀರಲ ಹಣ್ಣ ಉದರಸ್ಯಾನ

ಮಲಗಿರುವ ಅವ್ವಣ್ಣಿ ಚಟ್ಟನ ಎದ್ದಾಳ
ಉಡಿ ಕಟ್ಟಿ ಹಣ್ಣ ಅರಿಸ್ಯಾಳ

ಇವ ನಮ್ಮಣ್ಣಗ ಇವ ನಮ್ಮ ತಮ್ಮಗ
ಇವ ನಮ್ಮಣ್ಣನ ಮಕ್ಕಳಿಗೆ

ಇಷ್ಟೆಲ್ಲಾ ಅದ್ನೂದು ಭೀಮುಸಿ ಕೇಳ್ಯಾನ
ದಕ್ಕಂತ ಮರವ ಇಳದಾನ

ದಕ್ಕಂತ ನೀ ಮರವ ಇಳದಾನ ಭೀಮುಸಿ
ಹಣ್ಣಿನ ಸುಂಕ ಕೊಡಬಾಲಿ

ಬೆಂಡಿಯ ಸುಂಕಲ್ಲ ಪುಂಡಿಯ ಸುಂಕಲ್ಲ
ಇದ ಯಾತರ ಸುಂಕ ಬಿಡ ಭೀಮು

ಕಾಗಿಯ ಸುಳವಿಲ್ಲ ಗುಬ್ಬಿಯ ಸುಳವಿಲ್ಲ
ಅವ್ವಣ್ಣಿ ಭತ್ತವೆ ಆಳದಾನ೧

ಒಂದಂಬು ತಿಂಗಳಿಗೆ ಒಂದೇನ ಬಯಸ್ಯಾಳ
ಒಂದೇಲಿ ಚಿಗರ ಎಲಿ ಹುಣಸಿ

ಎರಡಂಬು ತಿಂಗಳಿಗೆ ಎರಡೇನ ಬಯಸ್ಯಾಳ
ಎರಿಯ ಹೊಲದಾನ ಎಳಿ ಸವತಿ

ಮೂರಂಬು ತಿಂಗಳಿಗೆ ಮೂರೇನ ಬಯಸ್ಯಾಳ
ಮೂಡಲದಿಕ್ಕ ಮಗಿ ಮಾವ

ನಾಕಂಬು ತಿಂಗಳಿಗೆ ನಾಕೇನ ಬಯಸ್ಯಾಳ
ಕಾಕೀಯ ಹಣ್ಣ ಕೈತುಂಬ

ಐದಂಬು ತಿಂಗಳಿಗೆ ಐದೇನ ಬಯಸ್ಯಾಳ
ಕೊಯ್ದ ಮಲ್ಲಿಗಿ ಕೈ ತುಂಬ

ಆರೆಂಬು ತಿಂಗಳಿಗೆ ಆರೇನ ಬಯಸ್ಯಾಳ
ಅರಿಂದ ಬಾನ ಕೆನಿ ಮಸರ

ಏಳೆಂಬು ತಿಂಗಳಿಗೆ ಏಳೇನ ಬಯಸ್ಯಾಳ
ಹೇಳಿ ಕಳುಹಾಕ ತವರಿಲ್ಲ

ಎಂಟೆಂಬು ತಿಂಗಳಿಗೆ ಎಂಟೇನ ಬಯಸ್ಯಾಳ
ಸೊಂಟ೨ ಯಾಲಕ್ಕಿ ಕೊಡ ತುಪ್ಪ

ಒಂಭತ್ತ ತಿಂಗಳಿಗೆ ತುಂಬ್ಯಾವ ದಿನಗಳು
ಸಂದಿ ಸಂದಿಗೆಲ್ಲಾ ಕರಿಬ್ಯಾನಿ

ತಾಸಿನ ಬ್ಯಾನಿ ತಾಳವ ಕಟದಂಗ೧
ತಾಯವನಿರಬೇಕ ಜನುವಲಕ

ಹೊತ್ತ ಹೊತ್ತಿನ ಬ್ಯಾನಿ ಕತ್ತೀಲ ಕಟದಂಗ
ಅತ್ತೆವ್ವನಿರಬೇಕ ಜನುಮಕ

ಹತ್ತೆಂಬು ತಿಂಗಳಿಗೆ ಮತ್ತೇನ ಬಯಸ್ಯಾಳ
ಹರಲೀಯ೨ಮಗನ ಬಯಸ್ಯಾಳ

ಹರಲೀಯ ಹೊರಬ್ಯಾಡ ದುರ್ಲಭ ಹೊಗಬ್ಯಾಡ
ಹರದ ಹೊಚ್ಚ ನನ್ನ ಹೊಸ ಶಾಲ

ಕಾಲ ನಮ್ಮಣ್ಣನವು ಕೈ ತಮ್ಮನವು
ಬೆನ್ನ ಚತ್ರ್ಯಾರ ಭೀಮನವ

ಕಲ್ಲಾಗ ಹುಟ್ಟಿದ ಮಗನ ಮುಳ್ಳಾಗ ಹುಟ್ಟಿದ ಮಗನ
ಬಬ್ರುವಾಹನನೆಂದು ಹೆಸರಿಡಿದೆ

---

* ರಡ್ಡೇರ ಅವ್ವಣ್ಣಿ, ನಾವಲಗಿ ಸಿ.ಕೆ. ಮತ್ತು ಶಕುಂತಲಾ ಚನ್ನಬಸವ, ಜನಪದ ಕಥನಗೀತ ಸಂಚಯ, ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು ೨೦೦೨, ಪು.ಸಂ. ೩೫-೪೨ ಪ್ರತಿಯೆರಡು ಸಾಲಿಗೊಮ್ಮೆ "ಸುವ್ವಿ ಸುವ್ವಾಲೆ" - ಪಲ್ಲವಿ ಹೇಳಬೇಕು.

## ೩೪. ಯಲುರಾಜನ ಮಡದಿ*

ಅಕ್ಕನೂ ತಂಗೀssನೂss ಸಿವss ಸಿವss
ಹೊಳೆ ನೀರೀಗ್ ಹೋಗೀರೂ ಸಿವss ಸಿವss
ಹೊಳೆsದಿಂಬುದು ಮೇವ ಸಿವss ಸಿವss
ಹಲಿಮಾಡೇs ಹೆಚ್ಚಿರೂ ಸಿವss ಸಿವss

ಕೇಳೆಲ್ಲೇ ನನ್ನsಕ್ಕಾss
ಹಲಿಯs ಚಿತ್ತರss ನೋಡೇss
ಹಲಿಯs ಚಿತ್ತರs ನೋಡೇss
ಮರುಳೀಗೇ ಆsss ದೇsನೆs

ಕೇಳೆಲ್ಲೇ ನನ್ನsಕ್ಕಾss
ಹೊಲಿನ್‌ಸಂsಗsಡ್ ಹೊಗುತೇನೆ
ಹೊಲಿನ್ ಸಂsಗsಡ್ ಹೊಗುತೇನೆ
ಯೇನಾದಾsರೇನ, -ಕ್ಕಾsss?

ಹೊಲಿನ್ ಸಂಗsಡ ಹೊಗುತೇನೆ
ಕೇಳಲ್ಲೆ ನನು ತಂಗೀss,

ಹೊಲಿನ್ ಸಂಗಾಡ್ ಹೋಽದಾಽರೇ
ಜಾಲೇಯಾಽ ಬಿಡುವಾಲೆಽ

ಕೇಳೇಲೇ, ನಽನ್ನಕ್ಕಾಽ
ಜಾತೀ, ಹೋದಾಽರೇನೇಽ ?
ಅಟ್ಟಂಬೂ ಮಾಽಲೇಽಗೇ
ಕೇಳಿತ್ತೇ ನಽನ್ನ ಕ್ಕಾಽ

ಕೇಳೆಲ್ಲೇ ನನು ತಂಗೀ,
ನಂದೊಂದೂ ಮಾಽತಿರಸೇ
ಕೇಳಲ್ಲೇ ನಽನ್ನಕ್ಕಾಽಽ
ಮಾಽತಿಗೆಽ ಉಽತ್ತರವೇಽಽ

"ಕೇಳಲ್ಲೇ ನನು ತಂಗೀಽ
ನೀನು ದಂಡಿ ಗ್ಹೋಽದ ಗಂಽಡನೆ
ನಿನು ದಂಡಿ ಗ್ಹೋಽದ ಗಂಽಡನೆ
ಬಂದಾಽರೇಽಽ ಹೊಡುನಾಽಲೇಽ"

"ಹೊಡುದಾಽರೇ ಯೇನಕ್ಕಾಽ?
ಬಯ್ದಾರೇಽಽ ಯೇನಕ್ಕಾಽ
ಬಯ್ದಾರೇಽಽ ಯೇನಕ್ಕಾಽ
ಹೊಲಿನ್ ಸಂಗಽಡಾ ಹೋಗುತೇನೆ"

ಲಟ್ಟಂಬೂಽಽ ಮಾಽಽತೀಗೇಽಽ
ಕೇಳಿತ್ತೆ ನಽನ್ನಕ್ಕಾಽ
ಮುತ್ತಿನ್ ಕಣ್ಣೀರಾ, ಬಿಡುವಾಽಽಳೂ
ಮುತ್ತಿನ್ ಕಣ್ಣೀರಾಽ ಬಿಡುವಾಽಽಳೊ

ತಂಗೀಯಾಽಲಾಽದಾರೇಽಽ
ತಂಗೀಯಾಽಲಾಽಽದಾರೇಽಽಽ
ಹೊಲಿನ್ ಸಂಗ್ಯಾಡ ಹೋಗುತೇನೇ
ಅಸುವಂತನ ಕಟ್ಟೆಮೇಲೆ

ಹೊಲಿಯಽನು ಅಂಽಬಾನು
ಕರ್ರ್ಯಽ ಕಂಬುಳಿ ಹಾಽಸಾಽನೂ
ಹೋಳೂ ಬೆಳಿಯಲ್ಯ ಮೆಲದಾಽನೂ

ಕಯ್ಯಾಲ್ ಕೊರುಳ್ ಹಿಡಿದಾsನೂ
ನಾsಚು ಮಾಡಿ ಕರಿದಾನೂ

"ಕೇಳಲ್ಲೇss ನsನ್ನsಕ್ಕಾsss
ನಾ | ಆsಚೆ ನಾsದಾರ್ ಹೋಗುತೇನೆ"

ಅಟ್ಟಂಬೂ ಮಾsತಿಗೇss
ಕೇಳಿತ್ತು ಯಲು ತಂಗೀss
ಕೇಳಿತ್ತು ಯಲು ತಂಗೀss
ಊರ ಮುಂದಿನ ಕಟ್ಟೆಗೀಗೇss

ಕಟ್ಟಿಗೇಗೇs ಬರುವಾsಳೇ
ಕಟ್ಟಿಮೇನೆ ಹತ್ತುವಾsಳೂ
ಕಟ್ಟಿಮೇನೆ ಹತ್ತುವಾsಳೂ
ಕೇಳೇರೆs ಸ್ವಾಮ್ಯವು

ಕೇಳೀರೆ ಸ್ವಾಮ್ಯವು
ನನ್ನ ಪತಿಯೇ ನೀವ್ಯೇಗೆs
ನನ್ನ ಪತಿಯೇ ನೀವ್ಯೇಗೆs
ನಿಮ್ಮ ಸತಿಯೇ ನಾನೀಗೆs
ನಿಮ್ಮ ಸತಿಯೇ ನಾನೀಗೆs
ಲಂದ್ವೇಳೀss ನಡುದಾಳೂ
ಲಂದ್ವೇಳೀss ನಡುದಾಳೂ
ಹೋಳು ಬೆಳಿಯಲಿ ಮೆಲಿದಾರು

ಹೋಳು ಬೆಳಿಯಲಿ ಮೆಲಿದಾರೂ
ತನ್ನ ಮನಿಗೇs ಕರ್ಕಂಡ್ ನೆಡುದಾ
ತನ್ನ ಮನಿಗೇ, ಕರ್ಕಂಡ್ ನೆಡುದಾs
ಅತ್ಲಾsಗೇs ಲಾsದಾsರೇ,
ದಂಡಿ ಗ್ಹೋದಾs ಗಂಡಾಗೂs
ಸಪನೀಗೇs ಬಿಳುವಾsದೋ
ಸಪನೀಗೇs ಬಿಳುವಾsದೋ
ನಿನ್ನ ಮಡಯಾsದಾs ಹೆಂಡತಿಯಾ

ನಿನ ಮಡದಿಯಾsದಾs ಹೆಂಡತಿಯಾ
ಮಡದೀಗೆ ಹೋಗsದೇss

ಹರsಹರs ಲಂದೀದಾs
ಸಿವ ಸಿವ ಲಂದೀದಾ

ಗಾsಬರೀs ಬಿಳುವಾsನೂ
ಕುದುರೀಗೆs ಜಿನ ಬಿಗಿದಾs
ಕುದರೀಗೆ ಜಿನ ಬಿಗಿದಾs
ಕುದರೀಗೆ ಜಿನ ಬಿಗಿದಾs
ಕುದ್ರೆ ಮೆನೆ ಕುಂತಿದವನೂ

ಕುದ್ರಿ ಮೇನೆs ಹಂತಿ ಕುಂತಾs
ಮನಿದಾsರೀ ಹಿಡುದಾsನೂ
ಮನಿದಾsರೀ ಹಿಡುದಾsನೂ
ಮನಿಗೇಗೆ ಬರುವಾನೂ
ಮನಿಗೇಗೆ ಬರುವಾನೂ
ಅತ್ತೂಗೀs ಲಂಬsಳೂss
ಅತ್ತೂಗೀs ಅಂsಬsಳೂ
ಮುತ್ತಿನಾsರುತಿ ತರುವಾsಳೂ

ಕೇಳಾsಲೇ ನನ್ನ ತ್ಗೇs
ನಿನ್ ತಂಗಿಯಾರ, ಯೆಲ್ ಹೊಯ್ತೋ ?
ನೀನು ಆsರತಿ ತರದೇ
ನೀನ್ಯೇಗೇನೀರೂ ತಂದೇ
ನೀನ್ಯೇಗೇ ನೀರೂsತಂದೇ
ನಿನ್ನ ತಂಗಿಯಾsರೇ ಯೆಲ್ಲಿಗ್ ಹೋಯ್ತೇ ?
ಕೇಳಾsಲೋ ಬಾವಯ್ಯs
ನಿನ | ಮಡದೀಯಾs ಸುದ್ದೀಯಾ
ನಿನ | ಮಡದೀಯಾs ಸುದ್ದೀಯು
ನಿನ ನೆಂಟರ ಮನಿಗ್ಹೋಗು
ಅಟ್ಟಂಬೂ ಮಾತ್ಯೇಗೇ
ಕೇಳಿದs ಯಲುರಾಜಾs
ಕೇಳಿದs ಯಲುರಾಜಾs
ಮುತ್ತಿನ ಕಣ್ಣೀರಾs ಬಿಡುವಾsನೂs
ಮುತ್ತಿನ ಕಣ್ಣೀರು ಬಿಡುವಾsನೂs
ಹಿಂತಿರುಗಿ ಕುದುರೀಯೂ

ಹಿಂತಿರುಗಿ ಕುದುರೀಗೀ
ನೆಂಟರಾss ಮನಿಗ್ ಹೊಡುದಾs
ನೆಂಟರಾss ಮನಿಗ್ ಹೋದಾs
ಅಲ್ಹೋಗೀ ನಡುದಾsನು

“ಕೇಳಲ್ಲೇ ನsನ್ನತ್ತೇ
ನಿನ | ಮಗಳಾsರು, ಯೆಲ್ ಹೊಯ್ತೇ ?
“ಯೇನಂದೀ, ಹೇಳು ಬೇಕೋ
ಯೇನಂದೀs ಮರುಗಾsಲೋs
ನಿನ ಮಡುದೀ ನಿನ್ನಲ್ಲೇ
ಹೊsಳಿ ನೀರಿಗ್ ಹೋಗೀರೊ
ಹೊಳಿಯಾs ದಿಂಬದ ಮೇನೇ
ಹೊಳಿಯಾs ದಿಂಬದ ಮೇಲೇ
ಹಲಿಮಾಡೀss ಹsಚ್ಚಿದನೂ
ಹಲಿ ಮಾಡೀss ಹsಚ್ಚಿದನೂ
ಮೋದ್ಯೇಗೆss ನೋssಡಾsಳೂs

ಮೋದ್ಯೇಗೆss ನೋಡಾsಳೂs
ಅಕ್ಕನ ಕೂಡೇ ಯೋಗಿನ್ನೇ
ಅಕ್ಕನ ಕೊಡೇ ಯೋಗಿನ್ನೇ
“ಹೊಲಿನ್ ಸಂಗಾಡ್ ಹೊಗುತ್ತೇನೆ”

ಲಂದ್ಹೇಳಿ ಯೇಗಿನ್ನೇ
ಹೊಲಿನ್ ಸಂಗ್ಯಾಡ್ ಹೋಗಾsಳೆ
ಅಂಟ್ಟಂಬೂs ಯಾsಲೇಗೇs

ಹೇಳೀದಾ ಯಲುರಾಜಾ
ಹೇಳೀದಾ ಯಲುರಾಜಾ
ಹೊಲಿನ್ ಮನಿ ದಾರಿ ಹಿಡಿದಾ
ಹೊಲಿನ್ ಮನಿ ದಾ ಹಿಡಿದಾ
ಅಲ್ಲಿಗಾದಾರ್ ಹೋದಾನೂ
ಅಲ್ಲಿಗಾದಾರ ಹೋದಾನೂ
“ಕೇಳಲೊ ಹೊಲಿರವನೇ
ವೋಡೂ ಬೇಡಾ ಅಡುಗ ಬೇಡಾ
ವೋಡೂ ಬೇಡಾ ಅಡಗಬೇಡಾ
ನಿನಗೇನೂ ಹೊಡೂದಿಲ್ಲೋ

ನಿನಗೇನೂ ಹೂಡುದಿಲ್ಲಾ
ಬಾಯೆತ್ತೇ ಬವ್‌ದಿಲ್ಲಾss
ಬಾಯೆತ್ತೇ ಬವ್ ದೆಲವೋ
ನನ್ನಾsಲು ಹಿಂಡುತಿಯಾ
ನನ್ನಾsಲು ಹಿಂಡುತಿಯೂ
ಜೋಪಾsನs ಮಾsಡುಬೇಕೋ
ಜೋಪಾsನs ಮಾsಡುಬೇಕೋ
ಯಾವ ದಿನಕೆ ಮಡಿತಾsಳೋ
ಯಾವ ದಿನಕೆ ಮಡಿತಾsಳೋ
ಅಗಣೀಗೇs ಹಾಕು ಬೇಡಾs
ಅಗಣೀಗೇs ಹಾಕು ಬೇಡಾ
ಮಣ್ಣೀಗೇ ಹಾಕುಬೇಕೋ
ಮಣ್ಣೀಗೇ ಹಾಕುಬೇಕೋ
ನಲವತ್ತೊಂದು ದಿವಸಾsಕೇ
ನಲವತ್ತೊಂದು ದಿವಸಾsಕೋ
ತಲಿಯೇಗೇ ತೆಗುಬೇಕೋ
ತಲಿಯೇಗೇ ತೆಕ್ಕಂಡೀs
ಹರುವಹಳ್ಳಕ್ಹೋಗೀs
ಹರವಾಹಳ್ಳಕೆ ಹೋಗೀs
ಚೆಂದಾsಗೀ ತೊಳಿಬೇಕೊ
ಚೆಂದಾsಗೀ ತೊಳಿಬೇಕೊ
ನನ ಕೈಲೀs ತಂದಿ ಕೊsಡೋ
ಲಚ್ಚಂಬೊ ಮಾತೇಗೇ
ಕೇಳೀದ ಹೊಲಿರವ್ನೂ
ಕೇಳೀದs ಹೊಲಿರವ್ನೂ
ಅವ್ನ ಮಡದೀs ತೀರ್ ಹೋಯ್ತೋ
ಅವ್ನ ಮಡದೀs ತೀರ್ ಹೋಯ್ತೋ
ಮಣ್ಣೀಗಾದಾರ್ ಹಾsಕಿದನೋ
ಮಣ್ಣೀಗಾದಾsರ್ ಹಾsಕಿದ್ನೊ
ರಾಜ ಹೇಳಿದ ನೆಕ್ಕಪತ್ರಾss
ರಾಜ ಹೇಳಿದ ನೆಕ್ಕಪತ್ರಾss
ತಲಿವಳಗೇ ಜಾsನಿಟದಾs
ತಲಿ ವಳಗೇ ಜಾನಿಸಿದಾ
ಮಣ್ಣಿಗಾsದ್ರೆ ಹಾsಕಿದನೋ
ಮಣ್ಣಿಗಾsದ್ರೆ ಹಾsಕಿದನೋ
ನಲವತ್ತೊಂದ್ ದಿವಸಾsವೋ

ನಲವತ್ತೊಂದ್ ದಿವಸಾsಕೋ
ಸೋಸಾsಣಕೇ ಹೋಗಿದನೋ
ಸೋಸಾsಣಕೇ ಹೋಗಿದನೋ
ಮಣ್ಣಿನಾsದಾರ ಬಗುದಾನೋ
ಮಣ್ಣಿನಾsದಾರೇ ಬಗುದಾsನೋ
ತಲಿಯೇಗೇ ತೆಗುದಾsನೆs
ತಲಿಯೇಗೇ ತೆಗುದಾsನೆs
ಹರು ಹಳ್ಳಕೆ ನೆಡಿದಾsನೋs

ಹರು ಹಳ್ಳಕೇ ನೆಡುದಾsನೋ
ಚೆಂದಾsಗೀ ತೊಳುದೀನೇ

ಚೆಂದಾsಗೀ ತೊಳುದಾsನೋ
ರಾsಜsನಾs ಮನಿಗ್ಹೋದಾs

ರಾsಜsನಾs ಮನಿಗ್ಹೋದಾs
ರಾಜಾsನಾs ಕರುದಾsನs
ರಾಜಾsನಾs ಕರಿದಾsನೋ
ನಿನ ಮಡದೀಗಾs ತೀರ್ ಹೋಗೀ
ಮಡದೀಯಾ ತೀರ್ ಹೋಗೀ
ಮಡದೀಯಾ ತೀರ್ ಹೋಗೀ
ನಲವತ್ತೊಂದೂ ದಿವಸಾss
ನಲವತ್ತೊಂದಾ ದಿವಸಾ
ಆಜಾಣಿ ಪರುಕಾಣ

ಲಾsಜೂಣಿ ಪರುಕಾರಾ
ತಲಿಯೇಗೇ ತಂದಿದೇನೇ
ತಲಿಯೇಗೇ ತಂದಿದೇನೇ
ಲಂದ್ಹೇಳಿss ಕೊಡುವಾsನೋ
ರಾಜಾsನು ಬೇಡು ಕಂಡಾs
ರಾಜಾsನು ಬೇಡುಕಂಡಾs
ಯೋಳುಪ್ಪರಗೀ ಮೇಲೆ
ಹೋಗೀಲೂs ಕೂತಿಕಂಡಾs
ಹೋಗೆಳೊ ಕೂತಿಂಕಂಡಾs
ತಲಿ ತೆಗದಿ ಓದಿದನೋ

ಅರಸೂಗೇs ಹುಟುಬೇಕೋ
ರಾಜರೀಗೆ ಮದ್ಯಾಗ್ಬೇಕೊ

ರಾಜಾಗೇ ಮದಿಯಾsಗೀ
ಮೂರು ವರ್ಸಾ ಆಳುಬೇಕೇ

ಮೂರು ವರ್ಸಾ ಆಳುಬೇಕೋ
ನಾಕ್ನೇ ವರ್ಸಕೆ ದಂಡಿಗ್ಹೋದಾ

ನಾಕ್ನೇ ವರ್ಸಕೆ ದಂಡಿಗ್ಹೋದಾ
ಹೊಲಿನ್ ಸಂಗಾsಡ್ ಹೋಗುಬೇಕೇ
ಅಂದ್ಹೇಳಿ ಭಿರ್ಮ ಬರುದಾsss
ಅಂದ್ಹೇಳಿ ಬಿರ್ಮ ಬರುದಾsss
ವೋದೀಗೇs ನೋಡಾನೇs
ವೋದೀಗೇs ನೋಡೀದಾs
ಮುತ್ತಿನ್ ಕಣ್ಣಿರಾs ಬಿಡುವಾsನೋ
ತಲಿಮೇಗೆ ಹಿಡಿದಾsನೊ
ತಲಿಮೇಗೆ ಹಿಡಿದಾsನೊ
ಲಾsಚೇರೀ ಮನಿಗ್ಹೋದಾ
ಲಾsಚೇರೀ ಮನಿಗ್ಹೋದಾss
ಆಚೇರಿ ಕೋಡೇ ಯೆನ ನುಡಿದಾs?

“”ಕೇಳಲೋ ಆಚೇರಿs
ಗಂದಾsದ ಪೆಟುಗೀಗೇs
ಗಂದsದಾs ಪೆಟ್ಟಿಯೇಗೇ
ಗೆಯ ಕೊಡೋ ಆsಚೇರಿ
ಗೆಯ ಕೊಡೋ ಆsಚೇರಿ
ಅಂದ್ಹೇಳಿs ನುಡಿದಾsನೋ
ಅಂದ್ಹೇಳೀ ನುಡಿದಾsನೋ
ಗಂದದ್ ಪೆಟ್ಟಿಗೆಯ್ ಕೊಟ್ಟಾ
ಗಂದದ್ ಪೆಟ್ಟಿಗೆಯ್ ಕೊಟ್ಟಾ

ಕೇಳಲ್ಲೊ ಲಾsಚೇರೀ
ನೀವು ತಾಗಿದಾs ಹಣತೆಕ್ಕೋ
ಪೆಟ್ಗೆ ನಾsದಾರೆ ತಕಂಡೋದಾs
ಪೆಟ್ಗೆ ನಾsದಾರೆ ತsಕ್ಕಂಡೊ
ಮನಿಗ್ ಸೀದಾs ಬರುವಾsನೂ

ಪೆಟ್ಗೆ ಯೇಳೂ ಉಪ್ಪರ್ಗಿ ಮೇನೇ
ಯೇಳೂ ಉಪ್ಪರ್ಗಿ ಮೇನೇ
ಇಟ್ಟದs ರಾಜಾsನೇ
ಇಟ್ಟಿದs ರಾಜಾsನೇ
ಸಂಪೂಗೀs ಹೂಂಗ್ ಕೊಯ್ದು
ಸಂಪೂಗೀs ಹೂಂಗ್ ಕೊಯ್ದು
ಸಂಪೂಗೀ ಹೂಂಗ್ ಸರ ಮಾಡ್ದಾs
ಮಲ್ಲೂಗೀ ಬನsಕ್ಹೋದಾs

ಮಲ್ಲೂಗೀ ಹೂಂಗ್ ಕೊಯ್ದಾs
ದಂಡೀನಾರೇ ಕಟುತಾsನೂ
ದಂಡೀನಾರೇ ಕಟುತಾsನೂ
ಹಿಂತಿರುಗಿ ಮನಿಗ್ ಬಂದಾ
ಕೊಬುರಿಯಾ ಕಾಯ್ ತೆಗೆದಾss
ಗಾಣಗೀsರ ಮನಿಗ್ಹೋದಾs
ಗಾಣಗೇರಾs ಮನಿಗ್ಹೋದಾs
ಗಾಣಗೇರಾs ಕೊಡ್ಯೇನೊs
ಯೇನಂದೀ, ನಡುದಾsನೂs?
ಇದ್ ಹತ್ತೂವ್ವಾ ಕಾಯ್ ಯೇಗೆ
ಗಾsಣsಕೇ ಹಾಕ್ಯೇsಗs
ಗಾsಣsಕೇ ಯೇಗ್ ಹಾಕೇs
ಚೆಂಬೆಣ್ಣೇss ತೆಕ್ಕೊಡೋs
ಚೆಂಬೆಣ್ಣೇ ತೆಕ್ಕೋಡಿs
ತಾಗಿದ್ ಹಣವಾsನಾs ಕೊಡ್ತೇ
ಹಾಗಿದ್ ಹsಣಾs ಕೊಡುತೇನೇ
ಲಂದ್ಹೇಳೀ ನುಡಿದಾನೇ
ಲಂದ್ಹೇಳೀ ನುಡಿದಾನೇ
ಗಾಣ್ಗರ ಶೆಟ್ಟಿ ಲಂಬsವ್ನೂ
ಗಾಣ್ಗರ ಶೆಟ್ಟಿ ಲಂಬsವ್ನೂ
ಕಾಯ್ ಗಾಣಕೆ ಹಾಕಿsದನೂ
ಕಾಯ್ ಗಾಣಕೆ ಹಾsಕಿದನೂ
ಯೆಣ್ಣೆ ನಾದ್ರೆ ತೆಗಿದಾನೋ
ಯೆಣ್ಣೆ ನಾsದರೆ ತೆಗುದಾsನೋ
ರಾಪ್ರಿಗೇ ಕೊಡುವಾsನೋs
ರಾಪ್ರಿಗೇ ಕೊಡುವಾsನೋs
ರಾಜರ್ ಹsಣs ಕೊಡುವಾರೋ

ರಾಜಾsರೂs ಲಂಬಾsರೂs

ಯಣ್ಣೆಚಂಬೇs ಹಿಡಿದಾರೂs

ಯಣ್ಣೆ ಚಂಬೇ ಹಿಡಿದಾರೂs

ಹಂತಿರ್ಗ್ ಮನಿಗೆ ಬರುವಾರೂ

ಹಿಂತಿರ್ಗ್ ಮನಿಗೆ ಬರುವಾರೂ

ಚೆನ್ನsದಂಗೂಡಿಗ್ ಹೋದ್ರೋs

ಚೆನ್ನದಂಗುಡಿಗ್ ಹೋದ್ರೋs

ಕೊರಳೀಗೆ ಹಾಕೂವಾs

ಚೆನ್ನಾsನೇ ತಕ್ಕಂಡ್ರೂs

ತಕ್ಕಂಡೀ ರಾsಜಾsರೇ

ತಾಗಿದ್ ಹsಣಾs ಕೊಡುವಾsರೂ

ತಾಗೀದ್ ಹsಣಾs ಕೊಡುವಾsರೂ

ಜವಳೀ ಅಂಗಡೀಗ್ ಹೋದ್ರೂs

ಜವಳೀsಅಂಗುಡಿಗ್ ಹೋಗೀ

ಶೇರೀಯಾs ತೆಗುದಾsರೂs

ಶೇರೀಗೆs ತೆಗುದಾರೂ

ತಾಗಿದ್ ಹsಗಾs ಕೊಡುವಾರೋ

ತಾಗಿದ್ ಹsಗಾs ಕೊಡುವಾsರೋ

ಹಿಂತಿರ್ಗ ಮನಿಗೇ ಬರುವಾರೊ

ಹಿಂತಿರ್ಗ ಮನಿಗೇ ಬರುವಾರೋ

ಗುಡುಗಾರs ಮನಿಗ್ಹೋದ್ರೂ

ಗುಡುಗಾರs ಮನಿಗೋದ್ರೊ

ಕೇಳೀರಿ ಗುಡುಗಾsರೇ

ಕೇಳೀರಿ ಗುಡುಗಾsರೇ

ಹೆಣ್ಣ ಬೊಂಬೇ ಗೈ ಬೇಕೋ

ಹೆಣ್ಣ ಬೊಂಬೇ ಗೈ ಬೇಕೋ

ತಲಿನಾದ್ರೇ ಗೈವ್ಕೆಲ್ಲs

ತಲಿಕಿಂದಾs ಕೆಳಗೀಗೇss

ಹೆಣ್ಣ ಬೊಂಬೆ ಗೈಬೇಕೋ

ಹೆಣ್ಣ ಬೊಂಬೆ ಗೈಬೇಕೋ

ಅಂದ್ಹೇಳಿ, ನುಡುದಾsರೋs

ಅಂದ್ಹೇಳೀs ನುಡುದಾsರೋs

ಗುಡುಗಾsರಾs ಲಂಬಾರೋ

ಗುಡುಗಾsರಾs ಲಂಬಾರೋ

ಹೆಣ ಬೊಂಬೇ ಗೈದಾರೋs

ಹೆಣ ಬೊಂಬೇ ಗೈದಾರೋ,

ತಾಗಿದ್ ಹsಣಾs ಕೊಡುವಾsರೋ

ತಾಗಿದ್ ಹsಣಾs ಕೊಡುವಾsರೋ

ಹಿಂತಿರ್ಗ ಮನಿಗೇ ಬರುವಾsರೋ

ಹಿಂತಿರ್ಗ ಮನಿಗೇ ಬರುವಾsರೋ

ಬೊಂಬಿಯಾಹಿಡಿದಾsರೋ

ಬೊಂಬಿಯಾ ಹಿಡಿದಾsರೋs

ಬೊಂಬಿಗೇ ತಲಿಹಚ್ಚೇ

ಬೊಂಬಿಗೇ ತಲಿ ಹಚ್ಚೇ

ಕುರುಬಾsರಾs ಮನಿಗ್ ನೆಡದ್ರೂ

ಕುರುಬಾsರಾs ಮನಿಗ್ ಹೋಗೀ

ಚವಲಾನೇss ತರುವಾsರೋ

ಚವಲಾನೆss ತರುವಾsರೋ

ತಾಗಿದ್ ಹsಣಾs ಕೊಡುವಾsರೋ

ತಾಗಿದ್ ಹsಣಾs ಕೊಡುವಾsರೋ

ಹಿಂತಿರ್ಗ ಮನಿಗೇ ಬರುವಾsರೋ

ಹಿಂತಿರ್ಗ ಮನಿಗೇ ಬರುವಾsರೋ

ತಲಿಗ್ ಚವ್ಲಾsss ಬಗುದಾರೋ

ತಲಿಗ್ ಚವ್ಲಾsss ಬಗುದಾರೋ

ಯೆಣ್ಣೆ ಹಾಕೀsss ಕಂಟ್ವಾರೋss

ಯೆಣ್ಣೆ ಹಾಕೀsss ಕಂಟ್ವಾರೋss

ಸಂಪ್ಗಿ ಮಾssಲೀss ಕೊಳ್ಳಿಗ್ ಹಾsಕೀs

ಮಲ್ಲಗಿ ಹೂಂಗೂ ಮುಡಿ ಸಾsರೋs

ಮಲ್ಲಗಿ ಹೂಂಗೂ ಮಡಿಸಾsರೋs

ಶೇರೀಗೆ ಉಡುಸಾsರೋs

ಶೇರಿ ಈಗೆ ಉಡುಸಾsರೋs

ಕೂಕುಮ್ಮಾss ಹಚ್ಚಾರೋs

ಕೂಕುಮ್ಮಾss ಹಚ್ಚಾರೋs

ಗಂದೆಣ್ಣೇssದುರುಸಾsರೋss |

ಗಂದೆಣ್ಣೆssದುರುಸಾsರೊss

ಪೆಟ್ಗೆಮೇನೇ ಕುಳುಸ್ಯಾರೋs

ಪೆಟ್ಗೆಮೇನೇ ಕುಳುಸೇsದಾs

ಪರದಕ್ಷೀ ಮಾಡಿದರೋ

ಪರದಕ್ಷೀ ಮಾಡೀsದಾs
(ದಿನ ಸಾಕೂ ಅದ್ರ ಮುಂದೆ
ಮುತ್ತಿನ ಕಣ್ಣೀರ ಬಿಡುವಾನೋ)
“”ತಾನು ಮಡುದೀ ಹೋದೀನೋ”

---

* ಯಲುರಾಜನ ಮಡದಿ; ಹೆಗಡೆ ಎಲ್.ಆರ್. ಮುಕರಿ ಮತ್ತು ಹೊಲೆಯರ ಪದಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೯, ಪು.ಸಂ. ೧-೧೬.

## ೩೫. ಮಹಾದೇವಿ *

ತಾಯೀ ತಾಯಮ್ಮನ್ಹೋರೆ ಸುವ್ವಲಾಲೀ
ನಾನು ದಂಡಿಗ್ಹೋಗುತೀನಿ ”
ನಮ್ಮ ಹೆಂಡಾರು ಬಹುಜೋಕೆ ”
ಅಪ್ಪ ಅಪ್ಪಯ್ಯನೋರೆ ”
ನಾನು ದಂಡಿಗ್ಹೋಗುತೀನಿ ”
ನಮ್ಮ ಹೆಂಡಾರು ಬಲುಜೋಕೆ ”
ನಮ್ಮ ತಾಯಮ್ಮನ್ಹೋರೆ ”
ನಾನು ದಂಡಿಗ್ಹೋಗುತೀನಿ ”
ನಮ್ಮ ಹೆಂಡಾತಿ ಬಲುಜೋಕೆ ”
ತಂಗಿ ನಾಗಮ್ಮನೋರೆ ”
ನಾನು ದಂಡಿಗ್ಹೋಗುತೀನಿ ”
ನಮ್ಮ ಹೆಂಡಾತಿ ಬಲುಜೋಕೆ ”
ಹಂಗೆಂದು ಅಣ್ಣಯ್ಯ ”
ಅವನು ದಂಡಿಗೆ ಹೊರಟಾನು ”
ಅಂಗಂದ ಮಾತೀಗೆ ”
ಮಹಾದೇವಿ ಕಣ್ಣೀರು ತರುತಾಳೆ ”
ಅಂಗಂದ ಮಾತೀಗೆ ”
ಕಣ್ಣೀರ ಒರೆಸೂತ ”
ಒಳಕ್ಕೆ ಹೋದಾಳು ”
ದಂಡಿಗೆ ಹೋದಾನು ”

ಅತ್ತೆ ಮನೆಯ ಸೊಸೆಯವಳು ಸುವ್ವಲಾಲಿ
ಹೊತ್ತಾರೆ ಎದ್ದಾಳು ”

ಹತ್ತುತೊಟ್ಟಿ ಸೆಗಣಿ ”
ಒಂದೆ ತೊಟ್ಟಿಗೆ ತುಂಬಿ ”
ಅತ್ತೆ ಅತ್ಯಮ್ಮನವರೆ ಸುವ್ವಲಾಲಿ
ನಮ್ಮ ತೊಟ್ಟಿ ಹೊರಿಸಲು ಬನ್ನಿ ”
ಅಂಗಂದ ಮಾತೀಗೆ ”
ನಾನು ಹೊರೆಸೋದಿಲ್ಲಾ ”

ನಿಮ್ಮ ನಾದುನಿ ಕರೆಯಮ್ಮ ಸುವ್ವಲಾಲಿ
ನಾದುನಿ ನಾಗಮ್ಮ ”
ನಮ್ಮ ತೊಟ್ಟಿ ಹೊರಿಸಲು ಬನ್ನಿ ”
ನಾನಾದ್ರೆ ಹೊರಿಸೋದಿಲ್ಲಾ ”
ನಿಮ್ಮ ಮೈದುನ ಕರೆಯಮ್ಮ ”
ಅಂಗಂದ ಮಾತೀಗೆ ”
ಅಳುವೂತ ಕರೆವೂತ ”
ಅವಳು ಮಹಾದೇವಿ ಅಳುವೂತ ”
ತೊಟ್ಟಿ ಮುಂದಾಕೆ ”
ನೆರೆಮನೆ ಅಕ್ಕಯ್ಯ ”
ನಮ್ಮ ತೊಟ್ಟಿ ಹೊರಿಸಲು ಬನ್ನಿ ”
ನಾನೇಗೆ ಹೊರಿಸಾಲಿ ”
ನಮ್ಮ ತೊಡೆಯಮೇಲೆ ಬಾಲವ್ನೆ ”
ಆಂಗಂದ ಮಾತೀಗೆ ”
ಅವಳು ಮಹಾದೇವಿ ಅಳುತಾಳೆ ”
ಮಹಾದೇವಿ ಅಳುತಾಳೆ ”
ಅವಳು ನೆಲದ ಮೇಗಲ ತೊಟ್ಟಿ ”
ಅವಳು ಎದೆ ಮೇಲೆಳಕೊಂಡು ”
ಎದೆಯ ಮೇಲಿನ ತೊಟ್ಟಿ ”
ಅವಳು ಭುಜದ ಮೇಲೆಳಕೊಂಡು ”

ಭುಜದ ಮೇಗಲ ತೊಟ್ಟಿ ಸುವ್ವಲಾಲೀ
ಅವಳು ತಲೆಯ ಮೇಲೇಳಕೊಂಡು ”
ಅತ್ತೆ ಅತ್ಯಮ್ಮನವರೇ ”
ನಮ್ಮ ತಿಪ್ಪೇಗೆ ದಾರಿ ಯಾವುದಮ್ಮ ”
ನಿಮ್ಮ ನಾದುನಿ ಕೇಳಮ್ಮ ”
ನಾದುನಿ ನಾಗಮ್ಮ ”
ನಮ್ಮ ತಿಪ್ಪೇಗೆ ದಾರಿ ಯಾವುದು ”

ನಾನಾದ್ರೆ ಕಾಣೆನಮ್ಮ "
ನಿಮ್ಮ ಮೈದುನ ಕೇಳಮ್ಮ "

ಮೈದ ಮಲ್ಲಿಗೆ ದೊರೆಯೆ ಸುವ್ವಲಾಲೀ
ನಮ್ಮ ತಿಪ್ಪೆಗೆ ದಾರಿ ಯಾವುದಪ್ಪ "
ನಾನಾದ್ರು ಕಾಣೆನಮ್ಮ "
ನಿಮ್ಮ ಮಾವನಾದ್ರೆ ಕೇಳವ್ವ "
ಮಾವ ಮಲ್ಲಿಗೆ ದೊರೆಯೆ "
ನಮ್ಮ ತಿಪ್ಪೆಗೆ ದಾರಿ ಯಾವುದಪ್ಪ "
ನಾನಾದ್ರೆ ಕಾಣೆನಮ್ಮ "
ನಿಮ್ಮ ನೆರೆಮಾನೆ ಅಕ್ಕಯ್ನ ಕೇಳವ್ವ "
ನೆರೆಮಾನೆ ಅಕ್ಕಯ್ಯ "
ನಮ್ಮ ತಿಪ್ಪೆಗೆ ದಾರಿ ಯಾವುದನ್ನು "
ನಾನಾದ್ರು ತೋರೆನೆಂದ್ರೆ "
ನನ್ನ ತೊಡೆಮೇಲೆ ಬಾಲಯ್ಯವನೆ "
ಅಂಗಂದ ಮಾತೀಗೆ "
ಮಹಾದೇವಿ ಅಳುವೂತ ಕರೆವೂತ "
ಅವಳು ಊರ ಮುಂದೆ ಬಂದು "
ಕುರಿಯ ಕಾಯೋ ಅಣ್ಣಾ "

ನೀ ಮರಿಯ ತಿರುವೋ ತಮ್ಮಾ ಸುವ್ವಲಾಲೀ
ನಮ್ಮ ತಿಪ್ಪೆಗೆ ದಾರಿ ಯಾವುದಪ್ಪ "

ಬಾಳೇಯ ಬಲಕ್ಹಿಡೋ ಸುವ್ವಲಾಲೀ
ಸೀಗೇಯ ಎಡಕ್ಹಿಡೋ "
ಬಾಳೇಯ ಬಲಕೆ ಬಿಟ್ಟು "
ಸೀಗೇಯ ಎಡಕೆ ಬಿಟ್ಟು "
ಅವಳು ನಡುವೆ ಹೋದಾಳು ಮಹಾದೇವಿ "

ನಡುವೆ ಹೋದೋಳು ಮಹಾದೇವಿ ಸುವ್ವಲಾಲೀ
ಅವಳು ತಟ್ಟೇಯ ಹಾಕ್ಯಾಳು "
ತಟ್ಟೇಯ ಹಾಕಿದೋಳು "
ಅವಳು ಅರಮನೆಗೆ ಬಂದಾಳು "
ಅತ್ತೆ ಅತ್ಯಮ್ಮನವರೇ "
ನನ್ನ ಕಯ್ಯಿಗೆ ನೀರುಯ್ಯಮ್ಮ "
ನಾನಾದ್ರೆ ಹುಯ್ಯೊದಿಲ್ಲಾ "

ನಿಮ್ಮ ನಾದುನಿ ಕರೆಯಮ್ಮ "
ಅಂಗಂದ ಮಾತೀಗೆ "
ಅವಳು ಮಹಾದೇವಿ ಅಳುವೂತ "
ಅವಳು ಕರೆಯೂತ "
ನಾದುನಿ ನಾಗಮ್ಮ "
ನೀನು ನೀರಾದ್ರೆ ಹುಯ್ಯಮ್ಮ "
ನಾನಾದ್ರೆ ಹುಯ್ಯೋದಿಲ್ಲಾ "
ನಿಮ್ಮ ಮಾವಾನ ಕೇಳಮ್ಮ "
ಮಾವ ಮಲ್ಲಿಗೆ ದೊರೆಯೆ "
ನನ್ನ ಕಯ್ಯಿಗೆ ನೀರು ಹುಯ್ಯಪ್ಪ "
ನಾನಾದ್ರೆ ಹುಯ್ಯೋದಿಲ್ಲಾ "

ನಿಮ್ಮ ಮೈದುನ ಕೇಳವ್ವ ಸುವ್ವಲಾಲೀ

ಮೈದ ಮಲ್ಲಿಗೆ ದೊರೆಯೆ ಸುವ್ವಲಾಲೀ
ನಮ್ಮ ಕೈಯಗೀಸು ನೀರುಯ್ಯಪ್ಪ "
ನಾನಾದ್ರೆ ಹುಯ್ಯೋದಿಲ್ಲಾ "

ನಿಮ್ಮ ನರಮಾನೆ ಅಕ್ಕನ ಕೇಳೆ ಸುವ್ವಲಾಲೀ
ನೆರಮಾನೆ ಅಕ್ಕಯ್ಯ "
ನನ್ನ ಕಯ್ಯಿಗೀಸು ನೀರುಯ್ಯಕ್ಕ "
ನಾನ್ಹಾದ್ರೆ ಹುಯ್ಯುತ್ತಿದ್ದೆ "
ನಮ್ಮ ತೊಡೆಮೇಲೆ ಬಾಲವ್ನೆ "
ಅಂಗಂದ ಮಾತೀಗೆ "

ಅವಳು ಅಳುವೂತ ಕರೆಯೂತ ಸುವ್ವಲಾಲೀ
ಅಳುವೂತ ಕರೆಯೂತ "
ಅವಳು ಒಳಕೆ ಹೋದಾಳು "
ಒಳಕೆ ಹೋದೋಳು "
ಅವಳು ಕಯ್ಯಿಗಲ ತೊಳೆದಾಳೆ "
ಕಯ್ಯಿಗಳ ತೊಳೆದೋಳು "
ಅವಳು ಕೊಡಗಳ ಹಿಡಿದಾಳೆ "

ಅತ್ಯ ಅತ್ತಮ್ಮನವೇ ಸುವ್ವಲಾಲೀ
ನೀರು ಭಾವಿಗೆ ದಾರಿ ಯಾವುದು "
ನಾನ್ಹಾದ್ರೆ ಕಾಣೆನವ್ವ "
ನಿಮ್ಮ ಮಾವನಾದ್ರೆ ಕೇಳವ್ವ "

ಅಂಗಂದ ಮಾತೀಗೆ "
ಅವಳು ಅಳುವೂತ ಕರೆಯೂತ "
ಮಾವ ಮಲ್ಲಿಗೆ ದೊರೆಯೆ "
ನೀರು ಭಾವಿಗೆ ದಾರಿ ಯಾವುದು "
ನಾನಾದ್ರೆ ಕಾಣೆನವ್ವ "
ನಿಮ್ಮ ಮೈದುನ ಕೇಳವ್ವ "
ಮೈದ ಮಲ್ಲಪ್ಪ ದೊರೆಯೆ "
ನೀರು ಬಾವಿಗೆ ದಾರಿ ಯಾವುದು "
ನಾನಾದ್ರೆ ಕಾಣೆನವ್ವ "
ನಿಮ್ಮ ನಾದುನಿ ಕೇಳವ್ವ "
ನಾದುನಿ ನಾಗಮ್ಮ "

ನಮ್ಮ ನೀರು ಭಾವಿಗೆ ದಾರಿಯಾವುದು ಸುವ್ವಲಾಲೀ
ನಾನಾದ್ರೆ ಕಾಣೆನವ್ವ "
ನಿಮ್ಮ ನೆರೆಮನೆ ಅಕ್ಕಯ್ನ ಕೇಳವ್ವ "
ನೆರಮಾನೆ ಅಕ್ಕಯ್ಯ "
ನಮ್ಮ ನೀರು ಭಾವಿಗೆ ದಾರಿಯಾವುದು "
ನಾನಾದ್ರೆ ತೋರುತಿದ್ದೆ "
ನನ್ನ ತೊಡೆಮ್ಯಾಲೆ ಮಗಳವ್ವೆ "
ಅಂಗಂದ ಮಾತೀಗೆ "
ಅವಳು ಅಳುವೂತ ಕರೆವೂತ "
ಅವಳು ಹಾರುವರ ಕೇರಿಗ್ಹೋಗಿ "

ಹಾರುವರ ಕೇರಿಗೆ ಹೋಗಿ ಸುವ್ವಲಾಲೀ
ಹಾರುವರ ಅಕ್ಕಯ್ಯದೀರೆ "
ನೀವು ನೀರಿಗೆ ಬರುತೀರಿ "
ಆಗಲೆ ತಂದೇವು ಮಹಾದೇವಿ "
ಅಂಗಂದ ಮಾತೀಗೆ "
ನೀನು ಈಗ್ಹೋಗೆ ಮಹಾದೇವಿ "
ಅವಳು ಅಳುವೂತ ಕರೆವೂತ "
ಅವಳು ಒಕ್ಕಲಿಗರ ಕೇರಿಗ್ಹೋಗಿ "
ಒಕ್ಕಲಿಗರ ಅಕ್ಕದೀರೆ "

ನೀವು ನೀರೀಗೆ ಬರುತೀರ ಸುವ್ವಲಾಲೀ
ಆಗಲೆ ತಂದೇವು "
ನೀನು ಈಗ್ಹೋಗೆ ಮಹಾದೇವಿ "

ಅಂಗಂದ ಮಾತೀಗೆ ”
ಅವಳು ಅಳುವೂತ ಕರೆಯೂತ ”
ಅವಳು ಕೋಮಟಿಗರ ಕೇರಿಗೆ ”
ಕೋಮಟಿಗರ ಅಕ್ಕಯ್ಯದಿರಾ ”
ನೀವು ನೀರಿಗೆ ಬರುತೀರ ”

ಆಗಲೆ ನೀರ ತಂದೇವ ಸುವ್ವಲಾಲೀ
ನೀನು ಈಗ್ಹೋಗೆ ಮಹಾದೇವಿ ”
ಅಂಗಂದ ಮಾತೀಗೆ ”
ಅವಳು ಅಳುವೂತ ಕರೆವೂತ ”
ಅವಳು ಊರಮುಂದಕೆ ಬಂದು ”
ಕುರಿಯ ಕಾಯೋ ಅಣ್ಣದಿರಾ ”
ಮರಿಯ ಕಾಯೋ ಅಣ್ಣದಿರಾ ”
ಮರಿಯ ತಿರುವೊ ತಮ್ಮದಿರಾ ”
ನೀರು ಭಾವಿಗೆ ದಾರಿಯಾವುದು ”
ಬಾಳೇಯ ಬಲಕಿಡೆ ”
ನಿಂಬೀಯ ಎಡಕಿಡೆ ”
ಬಾಳೇಯ ಬಲಕಿಟ್ಟು ”
ನಿಂಬೀಯ ಎಡಕಿಟ್ಟು ”
ಆಕೆ ನಡುವೆ ಹೋದಾಳು ಮಹಾದೇವಿ ”
ನೀರು ಭಾವಿಗೆ ಹೋದಾಳು ”

ಅವಳು ಒಂದು ಮೆಟ್ಟಿಲಿಳಿದಾಳು ಸುವ್ವಲಾಲೀ
ಒಂದು ಹಲ್ಲಿಟ್ಟು ಕಂಡಾಳು ”

ಅವಳು ಎರಡು ಮೆಟ್ಟಿಲಿಳಿದಾಳು ಸುವ್ವಲಾಲೀ
ಒಂದು ಹಲ್ಲಿಟ್ಟು ಕಂಡಾಳು ”
ಅವಳು ಎರಡು ಮೆಟ್ಟಿಲಿಳಿದಾಳು ”
ಅವಳು ಯಾಲಕ್ಕಿ ಕಂಡಾಳು ”
ಅವಳು ಮೂರು ಮೆಟ್ಟಿಲಿಳಿದಾಳು ”
ಅವಳು ಮಲ್ಲಿಗೆ ಕಂಡಾಳು ”
ಇಳಿ ಇಳಿದಿದು ಹೋದಾಳೆ ”
ಕೊಡೆಗಳ ತುಂಬ್ಯಾಳೆ ”
ಆಕೆ ಮೇಲಕೆ ನೋಡ್ಯಾಳೆ ”
ಮೈದ ಮಲ್ಲಿಗೆ ದೊರೆಯೆ ”
ನನ್ನ ಕೊಡಗಳೆತ್ತ ಬನ್ನಿ ”

ನಾನು ಕೊಡಗಳೊರಿಸೇನು ಸುವ್ವಲಾಲೀ
ಮಹಾದೇವಿ ನೀನ್ಹೇನು ಕೊಡುತೀಯ "
ನಮ್ಮಪ್ಪ ಮಾಡಿಸಿದಂಥ "
ನಾನು ಕೊಪ್ಪಾದ್ರು ಕೊಡುತೀನಿ "
ಅಂಗಂದ ಮಾತೀಗೆ "
ಅವನು ಎಂಟೆತ್ತಿನ ಬಾರುಕೋಲು "
ತುಂಡು ತುಂಡೆನಾದಾವು "
ಮೈದ ಮಲ್ಲಿಗೆ ದೊರೆಯೆ "
ನನ್ನ ಕೊಡಗಳೊರಿಸು ಬನ್ನಿ "
ನಿನ್ನ ಕೊಡಗಳೋರಿಸೋಕೆ "
ಮಹಾದೇವಿ ನೀನ್ಹೇನು ಕೊಡುತೀಯ "
ನಿಮ್ಮಣ್ಣ ಮಾಡಿಸಿದಂಥ "
ಹೊನ್ನೋಲೆ ಕೊಡುತೀನಿ "
ಅಂಗಂದ ಮಾತೀಗೆ "
ಅವನು ಆರೆತ್ತಿನ ಬಾರುಕೋಲು "
ಆರೆತ್ತಿನ ಬಾರುಕೋಲಾಗೆ "
ಅವನು ಎರಡೇಟ ಹೊಡೆದಾನೆ "

ನೆಲದ ಮೇಗಲ ಕೊಡವ ಸುವ್ವಲಾಲೀ
ಅವಳು ಸೊಂಟಾದ ಮೇಲಕೆ "
ಸೊಂಟದ ಮೇಲೆಳಕೊಂಡು "
ಸೊಂಟದ ಮೇಲಿನ ಕೊಡ "
ಅವಳು ನೆತ್ತಿ ಮೇಲೆಳಕೊಂಡು "
ನೆತ್ತಿ ಮೇಲೆಳಕೊಂಡು "
ಅವಳು ಅರಮನೆಗೆ ಬಂದಾಳು "
ಅವಳು ಕೊಡಗಳ ಇಳಿಸ್ಯಾಳು "
ಅವಳು ಮಲಗೊ ಮನೆಗ್ಹೋದಾಳು "
ಅವಳು ಒಂದಾಸಿಗೆ ಹಾಸ್ಯಾಳೆ "
ಒಂದಾಸಿಗೆ ಹಾಸ್ಯಾಳು "

ಅವಳು ಎರಡಾಸೆಗೆ ಹೊದ್ದಾಳೆ ಸುವ್ವಲಾಲೀ
ಎರಡಾಸೆಗೆ ಹಾಸ್ಯಾಳೆ "
ಅವಳು ಮೂರಾಸೆಗೆ ಹೊದ್ಯಾಳೆ "
ಮೂರಾಸೆಗೆ ಹಾಸ್ಯಾಳು "
ಅವಳು ನಾಕಾಸೆಗೆ ಹೊದ್ದಾಳೆ "
ನಾಕ್ಹಾಸೆಗೆ ಹಾಸ್ಯಾಳು "

ಅವಳು ಐದಾಸೆಗೊಸೆದ್ದಾಳೆ ”
ಐದಾಸೆಗೆ ಹಾಸ್ಯಾಳು ”
ಅವಳು ಕದಗಳ ಹಾಕ್ಯಾಳೇ ”
ಕದಗಳ ಹಾಕಿದೋಳು ”
ಅವಳು ಹೋಗಿನ್ನ ಮನಿಗ್ಯಾಳೆ ”
ಹೋಗಿನ್ನ ಮನಿಗ್ಯಾಳು ”

ದಂಡಿಗ್ಹೋದ ಗಂಡ ಸುವ್ವಲಾಲೀ
ಅವನು ಆಗಲೆ ಬಂದಾನೆ ”
ಬಂದಂಥ ಮಗನೀಗೆ ”

ಅವಳು ತಾಯೀ ನೀರು ಕೊಡಲ್ಹೋಗಿ ಸುವ್ವಲಾಲೀ
ನೀನು ನೀರು ಕೊಡುವೋಕೆ ”
ನೀನು ತಂದಂಥ ಗೌಡತಿಯಲ್ಲೆ ”
ಆಡೋ ಹುಡುಗರಕುಟ್ಟಿ ”
ಅವಳು ಗೋಲಿ ಆಡಕ್ಹೋಗ್ಯವಳೆ ”
ನೀನು ನೀರು ಕೊಡುವಾಕೆ ”
ನೀನು ತಂದ ಸೊಸೆಯಲ್ಲೆ ”
ಚೆಣ್ಣೆ ಹುಡುಗರಕುಟ್ಟಿ ”
ಅವಳು ಚೆನ್ನಾಟಕ್ಹೋಗ್ಯವಳೆ ”
ನೀನು ನೀರು ಕೊಡುವೋಕೆ ”
ನೀನು ತಂದ ಸೊಸೆಯಲ್ಲೆ ”
ತಲೆನೋವು ಮೂಗುನೋವು ”
ಅವಳು ಮಲಗೋ ಮನೆಯಾಗವಳೆ ”

ಮಲಗೋ ಮನೆಗ್ಹೋದಾನು ಸುವ್ವಲಾಲೀ
ಅವನು ಒಂದಾಸೆಗೆತ್ತ್ಯಾನು ”
ಒಂದಾಸೆಗೆ ಎತ್ತಿದೋನೆ ”
ಅವಳ ಗಂಧದಪುಡಿ ಕಂಡಾನೆ ”
ಹರಿ ಹರಿಯೆ ಪಾಪವೆ ”
ಇದೇನೊ ಸೋಜಿಗವೆ ”
ಹರಿ ಹರಿಯೆ ಅಂದಾರೆ ”
ನಿಮ್ಮ ತಮ್ಮ ಮಾಡಿದ ಪಾಪ ”
ಅವನು ಎರಡಾಸಿಗೆತ್ತ್ಯಾನು ಸುವ್ವಲಾಲೀ
ಎರಡಾಸಿಗೆ ಎತ್ತಿದೋನೆ ”
ಅವನು ಯಾಲಕ್ಕಿ ಕಂಡಾನೆ ”

ಹರಿ ಹರಿಯೆ ಪಾಪವೆ ”

ಇದೇನೊ ಸೋಜಿಗವೆ ”

ಹರಿ ಹರಿಯೆ ಅಂದಾರೆ ”

ನಿಮ್ಮ ತಮ್ಮ ಮಾಡಿದ ಪಾಪ ”

ಅವನು ಎರಡಾಸಿಗೆತ್ಯಾನು ”

ಮೂರಾಸಿಗೆ ಎತ್ತಿದೋನೆ ”

ಅವನು ಕುಂಕುಮ ಕಂಡಾನೆ ”

ಹರಿ ಹರಿಯೆ ಪಾಪವೆ ”

ಇದೇನೊ ಸೋಜಿಗವೆ ”

ಹರಿ ಹರಿಯೆ ಅಂದಾರೆ ”

ನಿಮ್ಮ ತಮ್ಮ ಮಾಡಿದ ಪಾಪ ”

ಅವನು ನಾಲ್ಕಾಸೆಗೆ ಎತ್ಯಾನು ”

ನಾಲ್ಕಾಸ್ಕೆ ಎತ್ತಿದೋನೆ ”

ಅವನು ಎಲೆಅಡಕೆ ಕಂಡಾನೆ ”

ಹರಿ ಹರಿಯೆ ಪಾಪವೆ ”

ಇದೇನೊ ಸೋಜಿಗವೆ ”

ಹರಿ ಹರಿಯೆ ಅಂದಾರೆ ”

ನಿಮ್ಮ ತಮ್ಮ ಮಾಡಿದ ಪಾಪ ಸುವ್ವಲಾಲೀ

ಅವನು ಐದಾಸೆಗೆತ್ಯಾನು ”

ಐದಾಸೆಗೆತ್ತಿದೋನೆ ”

ಅವನು ಕೊಯ್ದುಮಲ್ಲಿಗೆ ಕಂಡಾನೆ ”

ಹರಿ ಹರಿಯೆ ಪಾಪವೆ ”

ಇದೇನೊ ಸೋಜಿಗವೆ ”

ಹರಿ ಹರಿಯೆ ಅಂದಾರೆ ”

ನಿಮ್ಮ ತಮ್ಮ ಮಾಡಿದ ಪಾಪ ”

ಬಡ ಬಡನೆ ಎದ್ದಾನೆ ಸುವ್ವಲಾಲೀ

ಅವನು ಅರಮನೆಗೆ ಹೋದಾನೆ ”

ತಾಯಿ ತಾಯಮ್ಮನೋರೆ ”

ನಮಗೆ ಬುತ್ತೀಯ ಕಟ್ಟವ್ವ ”

ತಮ್ಮಗೊಂದು ಬುತ್ತೀಯ ”

ನನಗೊಂದು ಮಡದಿಗೊಂದು ಬುತ್ತೀಯ ”

ಬುತ್ತಿಗಳ ಕಟ್ಯಾರೆ ”

ಅವರು ಮಂಟಪಕ್ಕೆ ಹೋದಾರೆ ”

ಮಂಟಪಕೆ ಹೋದಾರೆ ”

ಅವರು ಮೂರು ಕುದುರೆ ಹಿಡಿದಾರೆ "
ಅವರು ಕುದುರೆ ಏರ್‍ಯಾರೆ "
ಕುದುರೆ ಏರಿರ್ದ್ದೋರು "
ಅವರು ಅರಣ್ಯಕ್ಹೋದರೆ "
ಅವರು ಆರಂದ ಅಡವಿಯಾಗೆ "
ಅವರು ಮೂರು ಸೆಲುಮೆ ತೆಗೆದಾರ "
ಮೂರು ಸೆಲುಮೆ ತೆಗೆದೋರು "
ಅವರು ಬುತ್ತಿಗಳ ಬಿಚ್ಚಾರೆ "
ಬುತ್ತಿಗಳ ಬಿಚ್ಚಿದೋರು "
ಅವನು ಒಂದು ತುತ್ತು ಉಂಡಾನೆ "
ಮೈದಯ್ಯ ಒಂದು ತುತ್ತುಂಡಾನೆ "

ಅವನು ಒಂದು ಬಾಣ ಬಿಟ್ಟಾನೆ ಸುವ್ವಲಾಲೀ
ಅವಳ ಗಂಡ ಬಿಟ್ಟಾನೆ ಬಾಣ "
ಅವನು ಅಣ್ಣ ಅಣ್ಣಾ ಅಂದಾನೆ "
ಅಣ್ಣಾನ ಹೆಂಡಾತಿ "
ಅವಳು ಅತ್ತಿಗೆ ಅಲ್ಲವೇನೊ "
ಅಂಗಂದ ಮಾತೀಗೆ "
ಅವನು ಮೂರು ತುತ್ತು ಉಂಡಾನೆ "
ಮೂರು ತುತ್ತ ಉಂಡೋನೆ "
ಅವನು ಮೂರು ಬಾಣ ಬಿಟ್ಟಾನೆ "

ಮೂರು ಬಾಣ ಬಿಟ್ಟಾನೆ ಸುವ್ವಲಾಲೀ
ಅವನು ಅಪ್ಪ ಅಮ್ಮ ಅಂದಾನೆ "
ಅಪ್ಪನ ಹೆಂಡಾತಿ "
ಅವಳು ಹಡೆದತಾಯಮ್ಮನಲ್ಲವೇನೊ "
ಅಂಗಂದ ಮಾತೀಗೆ "
ಅವನ ಪ್ರಾಣಗಳ ತೆಗೆದಾನೆ "
ಪ್ರಾಣವ ಬಾಣದಿ ತೆಗೆದಾನೆ "
ಅವಳು ಮಹಾದೇವಿ ಬರುತಾಳೆ "
ಅವರು ಪಟ್ಟಣಕೆ ಬರುತಾರೆ "

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಅತ್ತಿಗೆ-ಮೈದುನ; ಹೆಗಡೆ ಎಲ್.ಆರ್. ಗುಮ್ಮಟೆ ಪದಗಳು, ಬೆಂಗಳೂರು ವಿ.ವಿ. ಬೆಂಗಳೂರು, ೧೯೭೮, ಪು.ಸಂ. ೭೧-೭೫.

೨) ಏಟಕಃ ಏಳು ತುಕುಡ ಆದಾನ ಶಂಕರದೇವ; ಅಂದನೂರು ಶೋಭ, ಕೊಂಬೆರೆಂಬೆಲ್ಲ ಎಳೆಗಾಯಿ, ಪ್ರಸಾರಾಂಗ ಬೆ.ವಿ.ವಿ. ಬೆಂಗಳೂರು, ೧೯೭೮, ಪು.ಸಂ. ೨೯-೩೭.

---

* ಮಹಾದೇವಿ; ಕ.ರಾ.ಕೃ. ಸೂಸಿ ಹರಿದಾಳೆ ಶಿವಗಂಗೆ, ಜನಪದ ಸಾಹಿತ್ಯ ಅಕಾಡೆಮಿ ಮೈಸೂರು, ೧೯೬೨, ಪು.ಸಂ. ೩೩-೪೫.

## ೩೬. ಚಿತ್ತುರಾಣಿ *

ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಮುದುಗೊಲ್ಲಾರ ಬೀದಿಯಲ್ಲಿ ದೊಡ್ಡವನಾಗಿ ಮಾಕಾಳೊ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ದೊರನಾಗೀಯ ಮಕ್ಕಳು ಚಿಕಗೊಲ್ಲ ದೊಡ್ಡಗೊಲ್ಲಾ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಚಿಕ್ಕನ ಬೆಳ್ಳಿ ಎತ್ತುಂಟು ದೊಡ್ಡನ ಬೆಳ್ಳಿ ಎತ್ತುಂಟು
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅಣ್ಣಯ್ಯನ ಮಡದೀಯ ಅತ್ತಿಗಮ್ಮ ಚಿತುರಾಣಿ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಬಾರಪ್ಪ ನನ ತಮ್ಮ ಹೇಳಿದ ಮಾತ ಕೇಳಯ್ಯ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿನಗೆಣ್ಣಿಗೆ ನಾನು ಹೋಗುತೀನಿ ಚಿಕ್ಕನ ಬೆಳ್ಳಿ ಎತ್ತು ಕಟ್ಟಿ
ತಂದಾನ ಶಿವನೇ ತಂದನ್ನತ ತಂದಾನಾ ಶಿವನೇ ತಂದನ್ನಾ

ನೀನು ದೊಡ್ಡನ ಬೆಳ್ಳಿ ಎತ್ತು ಕಟ್ಟಿ ಮೂಡಲ ಹೊಲವ ಊಳಪ್ಪ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ನೀ ಕಟ್ಟೆಣ್ಣೆ ಮೂರು ಬುತ್ತೀಯ ನಾ ತಮ್ಮನಿಗೆಣ್ಣೆಗೋಗುತೀನಿ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಮೂರನ ಬುತ್ತಿ ಹೊತ್ತವನೆ ಕುದುರೆ ತೇಜಿ ಏರವನೆ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ತಮ್ಮನಿಗಪ್ಪ ಹೆಣ್ಣೀಗೆ ಹನ್ನೆಡೊರುಷ ಹೊರಟೀರ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಕಟ್ಟಿದ ಬುತ್ತಿ ಬಿಚ್ಚಲಿಲ್ಲ ತಮ್ಮನಿಗೆಣ್ಣು ಸಿಗಲಿಲ್ಲ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಹೆಣ್ಣಿಗೋಗಿ ದೊಡ್ಡಗೊಲ್ಲ ಹನ್ನೆರಡೊರುಷ ತೀರಿತ್ತು
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಆ ಪಟ್ಟಣಾರು ತಿರುಗವನೆ ಆ ಪಾಳ್ಯಾನ್ನಾರು ತಿರುಗವನೆ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಅತಿಗಮ್ಮ ಚಿತುರಾಣಿ ಅದಕೇನಂತ ಹೇಳುತಾಳೆ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ನವು ಚಿತ್ತುರಡುಗೆ ಮಾಡವೆ ಪಟ್ಟೆ ಮಂಚ ತರುಸವ್ನೆ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಮೈದುನಾರೆ ಚಿಕ್ಕಗೊಲ್ಲ ಹೊಲವನ್ನಾರೆ ಉತ್ತುಗೊಂಡು
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಹನ್ನೆರಡೂವರೆ ಗಂಟ್ಟೆಗೆ ಏರನು ಬಿಟ್ಟು ಬರುತಾನೆ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ನವು ಚಿತ್ತುರಡಿಗೆ ಮಾಡಿದಳು ಅತ್ತಿಗಮ್ಮ ಚಿತುರಾಣಿ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅವ್ನು ಕೊಟಿಗೆಗೋದ ದನವಾರ ಕಟ್ಟವ್ನೆ ಮೈದುನಾದ್ರು ಚಿಕ್ಕುಗೊಲ್ಲ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ತೊಟ್ಟಿಕಲ್ ಮೇಲೆ ನಿಂತವ್ನೆ ಮೈದುನಾದ್ರೆ ಚಿಕ್ಕಗೊಲ್ಲ
ತಂದಾನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಅವರತ್ತುಗಮ್ಮ ಚಿತ್ತುರಾಣಿ ಮೈದುನ್ಗೆ ನೀರು ಬಿಟ್ಟವ್ಳೆ
ತಂದಾನ ಶಿವನೇ ತಂದನ್ನ ತಂದನಾ ಶಿವನೇ ತಂದನ್ನ

ಊಟಕಪ್ಪ ಬಡಿಸಿದಳು ಅದಕೇನಂತ ಹೇಳುತಾಳೆ
ತಂದಾನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನಾ

ಅವಳು ಪಟ್ಟೆಸೀರೆ ಉಟ್ಟವ್ಳೆ ಪಟ್ಟೆಯ ರವ್ಕೆ ಧರಿಸವ್ಳೆ
ತಂದನ್ನ ಶಿವನೇ ತಂದನ್ನ ತುದಾನಾ ಶಿವನೇ ತಂದನ್ನ

ಏಳ್ ಮಾರ್ ಮಂಡೆ ಕೆದರವ್ಳೆ, ಜಡೆಯನಾದರೆ ಹೆಣೆದವ್ಳೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅಪಳಪ್ಪಟ ಮಲ್ಲಿಗೆ ಮುಡುದವ್ಳೆ ದುಂಡುಮಲ್ಲಿಗೆ ಮುಡುದವ್ಳೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಬಾರೋ ಬಾರೋ ಮೈದುನನೆ ಚಿಕ್ಕಗೊಲ್ಲ ಕೇಳಯ್ಯ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿಮ್ಮಣ್ಣ ಹೆಣ್ಣೀಗೆ ಹೋಗೀದ ಹನ್ನೆರಡೊರುಷ ತುಂಬೀತು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿಮ್ಮಣ್ಣನಿರುವ ತಾಣಾವು ಖಂಡಿತಾ ನಮಗೆ ದೊರೀಲಿಲ್ಲ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿಮ್ಮಣ್ಣನಾಡುವ ಜೂಜನ್ನ ಆಡಲೆಬೇಕು ನನ ಮೈದ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಕೆಟ್ಟವ ನುಡಿಯ ಕೇಳವನೆ ಮೈದುನಾರೆ ಚಿಕ್ಕಗೊಲ್ಲ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅಣ್ಣನಿಗಮ್ಮ ಬಂದವಳು ನನಗೆ ತಾಯಿನಾಗಲುಬೇಕು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಮ್ಮಣ್ಣನ್ನಾರೆ ಎಂಬುವನು ತಂದೆ ಸುಮನೆ ಉಂಟರ್ಲೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಮುಟ್ಠಾಳನಪ್ಪ ನೀನೆಂದ್ಲು ನಾಮನ್ನೇನೋ ನೀನೆಂದ್ಲು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಮೈದುನಾಂತ ಮುಂಗೆಯ್ಯ ಅತ್ತಿಗಮ್ಮ ಹಿಡಿದವಳೆ
ತಂದನ್ನ ಶಿವನೇ ಸಂಪನ್ನ ತಂದಾನಾ ಶಿವನೇ ತಂದನ್ನಾ

ನೀನು ಕಣ್ಣೆತ್ತಿ ನೋಡಿದುರೆ ಏಳು ಕೋಟಿ ಶಾಪವು

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ನೀನು ಕಣ್ಣೆತ್ತಿ ನೋಡಿದುರೆ ಏಳು ಕೋಟಿ ಶಾಪವು

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿನ್ನ ತಲೆಯ ಪಿನ್ನು ತರುತಾರೆ ನನ್ನ ಪಾಪೀಯ ಕಣ್ಣಿಗೆ ಚುಚುತಾರೆ

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನನ್ನ ಪಾಪಿಯಂಥ ಬಲಗೈಯ ಆಸ್ತಿನಾದುರೆ ಕಡಿತಾರೆ

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಯಮನಂತ ಪಟ್ಟುಣದೊಳಗೆ ಕಬ್ಬಿನ ಗಾಣ್ಕೆ ಆಕುತಾರೆ

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಮಾಯದ ಪಾರಿವಾಳ ಮಾಡವನೆ ಮೈದುನಾರೆ ಚಿಕ್ಕಗೊಲ್ಲ

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಆಗ ಹಕ್ಕಿನಾದುರೆ ಹಿಡಕೊಟ್ರೆ ನಿನ ಮಂಚಕೆ ನಾನು ಬರುತೀನಿ

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಮೈದುನ ಮುಂಗೈಯ ಬಿಟ್ಟವಳೆ ಚಿಕ್ಕನ ಬೆಳ್ಳಿ ಎತ್ತಿಡಿದು

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಆ ದೊಡ್ಡನ ಬೆಳ್ಳಿ ಎತ್ತಿಡಿದು ಏರ ಕಟ್ಟಿ ಹೊರಟವನೆ

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅದಕೇನಂತ ಹೇಳುತಾಳೆ ಅತ್ತಿಗಮ್ಮ ಚಿತುರಾಣಿ

ತಂದನ್ನ ಶಿವನೇ ತಂದನ್ನ ತಂದಾನ ಶಿವನೇ ತಂದನ್ನ

ಮುಟ್ಠಾಳಾವ ನನಮಗನೆ ತಕ್ಕದ ಕೆಲಸ ಮಾಡತೀನಿ

ತಂದನ್ನ ಶಿವನೇ ತಂದನ್ನ ತಂದಾನ ಶಿವನೇ ತಂದನ್ನಾ

ಆ ತೊಟ್ಟಿದ್ ಬಳೆಯ ಒಡಕೊಂಡು ಮೈಕೈಯ್ನ ಜಿಗುಟುಗೊಂಡ್ಲು

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅವಳು ಉಟ್ಟದಂತ ಸೀರೇಯ ಆಚೆಟ್ಟಗಲಾವ ಅರಕೊಂಡ್ಲು

ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ಪಟ್ಟೆಯ ಮಂಚದ ಮ್ಯಾಲೆ ಮಕ್ಕಾಡ್ನಾದೆ ಮಲಗವಳೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಹೆಣ್ಣಿಗೋಗಿದ್ ದೊಡ್ಡಗೊಲ್ಲ ಇಕ್ಕಿದ ಬುತ್ತಿ ಕಳೀಲಿಲ್ಲ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಕಟ್ಟೀದ್ ಬುತ್ತಿ ಕಳೀಲಿಲ್ಲ ತಮ್ಮನಿಗೆಣ್ಣು ಸಿಗುಲಿಲ್ಲ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಹನ್ನೆರಡಂತ ವರುಷಾಕೆ ಅವನು ಮನೆಗೆ ಬರುತಾನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಯಾಕೆಲೆ ಎಣ್ಣೆ ಚಿತುರಾಣಿ ಸಪ್ಪಗಿರುವೆ ಎಂದವನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಎಣ್ಣಿಗೋದ ಮುಟ್ಠಾಳ ಹನ್ನೆರಡೊರಷಾಕೆ ಬಂದೀದಿ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿನ್ನ ತಮ್ಮನಂತ ಚಿಕ್ಕವ್ನೆ ಏನನು ಬುದ್ಧಿ ಏಳೋದೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಮಾನಭಂಗಾವ ಮಾಡೀದ ಆ ಮಾನ ಭಂಗಾವ ಮಾಡೀದ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಆ ಪಟ್ಟೇಯ ಮಂಚಕೆ ಬಂದವನೆ ತೊಟ್ಟೀದ ಬಳೆಯ ವೊಡುದವನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಪಟ್ಟೇಸೀರೆ ಸೆಳೆದೀದ ತೊಟ್ಟಿದ ಬಳೆಯ ಹೊಡೆದೀದ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ತೊಟ್ಟಿದ ಸೀರೆ ಬಳೆಯ ಹೊಡೆದೀದ ಮಾನಭಂಗಾವ ಮಾಡೀದ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಮಂಚದಿಂದಾದ್ರು ಏಳೆಣ್ಣೆ ಅಡಿಗೆನಾದ್ರು ಮಾಡೆಣ್ಣೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅಡಿಗೆ ಅನ್ನ ಮಾಡೋಕೆ ಹೇಳುತೀನೆ ಕೇಳಯ್ಯ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿನ ತಮ್ಮನ ತಲೆಯ ಕಡೀಬೇಕು ರಗುತಾ ನೀನು ತರಬೇಕು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅದಕೇನಂತ ಹೇಳುತಾನೆ ದೊಡ್ಡಗೊಲ್ಲ ತಮ್ಮಯ್ಯ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಪಾಪಿಯಂತ ತಮ್ಮನ ತಲೆಯನೆಂಗೆ ಕಡಿಲೆಣ್ಣೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಬಾರೋ ಬಾರೋ ಹೆಣ್ಣೀಗ ಹೇಳಿದ ಮಾತ ಕೇಳಯ್ಯ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿನ್ನ ತಮ್ಮನಿಗೆಣ್ಣ ಕಟ್ಟುಬಿಟ್ಟು ದೇಶಾಂತರ ನೀ ಹೋಗಯ್ಯ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನನ್ನ ತಮ್ಮನ್ನೋಡಿ ಕೇಳೆಣ್ಣೆ ಹನ್ನೆರಡೊರುಷ ತುಂಬೀತ್ತು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಒಂದಿಡಿ ಅನ್ನಾನಾರು ಕೋಡೆಣ್ಣೆ ಅನ್ನನ್ನಾರು ಕೊಟ್ಟುಬಿಟ್ಟು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನನ ಕರ್ಮನಾದ್ರು ಕಳಕೊಂಡು ಪಾಪಿ ತಮ್ಮನ ತಲೆಯನ್ನು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಾ ತಲೆಯ ಕಡುದು ಬರುತೀನಿ ರಗುತನಾದ್ರು ತರುತೀನಿ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ದಡ್ಡಬುಡ್ಡನೆ ಎದ್ದವಳೆ ಕರೆಚೆಪ್ಪನ್ನ ಕರೆದವ್ಳೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅವಳು ತಪ್ಪಲಿಗಾದ ಹಾಕವಳೆ ಹುಳಿದ ಮಜ್ಜಿಗೆ ಉಯ್ದವಳೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಆ ಚಂದುರಾಯ್ದಾವ ಕೊಟ್ಟವಳೆ ಗಂಡನಂತ ಕೈಗಪ್ಪ
ತಂದನ್ನ ಶಿವನೆ ತಂದನ್ನ ತಂದನಾ ಶಿವನೇ ತಂದನ್ನ

ರುದ್ದುರು ಗೋಪ ತಾಳವನೆ ಕಡವೆ ಕೋಪ ತಾಳವನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಹೊಲವ ಉಳೂವ ತಾನಕ್ಕೆ ಚೆಬ್ಬೆ ಹೊಲಕೆ ಹೊಯ್ತಾನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಹೊಲವ ಉಳುತ ನಿಂತಿದ್ದ ತಮ್ಮನಾದುರೆ ಚಿಕುಗೊಲ್ಲ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಅಣ್ಣನ ಮುಖವ ನೋಡವನೆ ಕಣ್ಣಲ್ ನೀರ ಸುರಿಸವನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಚಿಕ್ಕನ ಬೆಳ್ಳಿ ಎತ್ತನ್ನ ದೊಡ್ಡನ ಬೆಳ್ಳಿ ಎತ್ತನ್ನ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಹೊಲದಲ್ಲಾಗ ನಿಲ್ಲುಬುಟ್ಟು ಊಟಕ್ಕೆ ಬರುತವನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಕಟ್ಟಿದ ಬುತ್ತಿ ಕಳೀಲಿಲ್ಲ ನಿನ್ಗೆ ಹೆಣ್ಣು ಸಿಕ್ಕುಲಿಲ್ಲ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಿನ್ಗೆ ಅನ್ನ ತಂದೆ ತಮ್ಮಯ್ಯ ನೀರ ಮರೆತು ಬಂದೀನಿ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನೀ ಕಟ್ಟೆಯ ತಾಳಿಗೆ ಬಾರಪ್ಪ ನೀನ್ ತಪ್ಲೆ ಅನ್ನ ಉಣ್ಣೂವೆ
ತಂದನ್ನ ಶಿವನೇ ತಂದನ್ನ  ತಂದಾನಾ ಶಿವನೇ ತಂದನ್ನ

ಕರೆಕಲ್ಲಂತ ಕಟಕಕ್ಕೆ ಕರಕಂಡಾರ ಹೋಗುತಾನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಆ ತಪ್ಪಲೆಯಂತ ಅನ್ನಾವ ತಮ್ಮನ ಕೈಗೆ ಕೊಟ್ಟಾತ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ಕಟ್ಟೆ ಹಿಂದ್ಕೆ ಹೋಗುತಾನೆ ಸರಿಯಾಗಾಯ್ದಾವ ಮಸಿತಾನೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಸೂರ್ಯಚಂದ್ರರೆ ಕೇಳ್ರಪ್ಪ ನೀವು ಇದಕ್ಕೆ ಸಾಕ್ಷಿಯು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ತಾಯಿ ತಂದೆಯ ನೆನೆದವನೆ ಬಂಧು ಬಳಗವ ನೆನೆದವನೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಕಣ್ಣೀಗೆ ಬಟ್ಟೆ ಕಟಗೊಂಡು ಚಂದ್ರಾಯ್ದಾವ ಮಸಕೊಂಡು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಮರೆಯ ಮೋಸ್ದಾಲಿ ಬರುತಾನೆ ತಮ್ಮನ ಹಿಂದೆ ನಿಂತವನೆ
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನಾ

ತಮ್ಮನಾದುರೆ ಚಿಕ್ಕಗೊಲ್ಲ ಮಿದುಕೆ ಅನ್ನ ಉಂಡೀದ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಮಿದುಕೆ ಅನ್ನ ಬಾಯಲ್ಲಿತ್ತು ಮಿದುಕೆ ಅನ್ನ ಕೈಯಲ್ಲಿತ್ತು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಮರೆಯ ಮೋಸ್ದಲ್ಲಿ ಅವನು ನಿಂತ್ಕೊಂಡು ಅವನು ತಮ್ಮನಾದರೆ ತಲೆಯನ್ನು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅಣ್ಣನಾದುರೆ ದೊಡ್ಡಗೊಲ್ಲ ತಮ್ಮನ ತಲೆಯ ಕಡುದವನೆ
ತಂದೆನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಕಟ್ಟೀಗೆ ಹೋಗಿ ಬಿದ್ದಿತು ತಮ್ಮನಪ್ಪ ಮುಂಡಾವು
ತಂದನ್ನ ಶಿವನೆ ತಂದನ್ನ ತಂದಾನ ಶಿವನೇ ತಂದನ್ನ

ನಾನು ಪಾಪಿಯಲ್ಲೊ ಅಣ್ಣಯ್ಯ ನೀ ಧರ್ಮಕರ್ಮ ನೋಡಲಿಲ್ಲೊ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ತಲೆಯನಾದುರೆ ಕಡಿದಲ್ಲೋ ನೀ ಉಣ್ಣಕ್ಕನ್ನ ಬೇಡಣ್ಣ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಉಣ್ಣಕಕನ್ನ ಬೇಡಣ್ಣ ಹೊದಿಯೋಲ್ ಹೊದಪು ಬೇಡಣ್ಣ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಶಾಪ ಕೊಟ್ಟ ತಲೆಯಪ್ಪ ಪ್ರಾಣನಾದ್ರು ಬಿಟ್ಟೀತು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ತ್ಯಾಗದೆಲೆಯ ಕಿತ್ತುಕೊಂಡು ಜೊನ್ನೆನಾದುರೆ ಕಟ್ಟಿಕೊಂಡು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅರಗುತನಾದುರೆ ಆತುಕೊಂಡು ಓಡಿ ಓಡಿ ಬರುತಾನೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅವಳ ಮೈದುನನ ರಗುತಾವ ಚಿತುರಾಣಿಗೆ ಇಕ್ಕೀದ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅವಳು ತಲೆಯ ರಗುತಾವ ಹಣೆಯಲಾಗ ಇಟುಗೊಂಡು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಹಣೆಗೆ ರಗುತ ಇಟುಗೊಂಡು ದಡ್ಡಬುಡ್ಡಾನೆ ಎದ್ದವಳೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅಡಿಗೆ ಅನ್ನ ಮಾಡವಳೆ ಗಂಡನಿಗೆ ಊಟಕ್ಕೆ ಬಡಿಸವಳೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅರಮನೆಯಾಗ ಮಾಯ್‌ವಾಯ್ತು | ಕಿರುಮನೆಯಪ್ಪ ಮಾಯ್‌ವಾಯ್ತು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಉಣ್ಣಕ್ಕನ್ನ ಇಲ್ಲವಲ್ಲೊ ಹೊದಿಕೆಯೊದಪು ಇಲ್ಲವಲ್ಲೋ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಬೆಕ್ಕಿನ ಬೆಳ್ಳಿ ಎತ್ತೂವೆ ದೊಡ್ಡನ ಬೆಳ್ಳಿ ಎತ್ತೂವೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಆ ಚಿಟ್ಟೆ ಹೊಲದಲ್ಲಿ ನೊಗವಾ ಹೊತುಕೊಂಡು ನಿಂತಿದ್ವೋ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೆ ತಂದನ್ನ

ಊಟಕ್ಕೋದ ಒಡೆಕಾರ ಮಗುಚಿ ಹಿಂದಕೆ ಬರಲಿಲ್ಲ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೆ ತಂದನ್ನ

ನಮಗೆ ಊಟಕ್ ಬಡಿಸೋರ್‍ಯಾರಪ್ಪ ಏರ್ ಬಿಡೋರ್‍ಯಾರಪ್ಪ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಏರನ್ನಾದರೂ ಕಳೆಯುವರು ಇಲ್ಲವಲ್ಲೋ ಶಿವಲಿಂಗೊ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಎರಡೂ ಆಗ ಕೊಂಬಿನಲ್ಲಿ ಆ ನೊಗವಾ ಬಿಚುಕಂಡು
ತಂದನ್ನ ಶಿವನೆ ತಂದನ್ನ ತಂದನಾ ಶಿವನೇ ತಂದನ್ನ

ಆ ನೊಗವನಾಗ ಬಿಚ್ಚುಕಂಡು ಕಟ್ಟೇಕಡೆಗೆ ಬರುತಾವೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಆ ಚಿಕ್ಕಗೊಲ್ಲನ ತಲೆಯ ಎರಡೂ ಎತ್ತಿ ನೋಡೀದೋ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಆ ಪಾಪಿಯಾದ ಅಣ್ಣಯ್ಯ ತಮ್ಮನ ತಲೆಯ ಕಡಿದವ್ನೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಆ ಕಟ್ಟೀನಾದುರೆ ಧುಮುಕಿದೋ ಮುಂಡನಾದುರೆ ಎತ್ತುಕೊಂಡೋ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಮುಂಡ ತಲೆಯ ಎತ್ತು ಕೊಂಡೊ ತೊಡೆಯ ಮೇಲೆ ಮುಡುಕೊಂಡೊ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಚಿಕ್ಕನ ಬೆಳ್ಳಿ ಎತ್ತುವು ಹೆಣ ಕಾಯ್ಕಂಡು ಕೂತಿತ್ತು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ದೊಡ್ಡನ ಬೆಳ್ಳಿ ಎತ್ತಾಗ ನಾಗಲೋಕಕ್ಕೊರಟ್ಟೀತ್ತು
ತಂದನ್ನ ಶಿವನ್ನ ತಂದನ್ನ ತಂದಾನಾ ಶಿವನೇ ತಂದನ್ನ

ಚಂಚುಳವ ತಂದೀರು ಮರಜಲಕಡ್ಡಿ ತಂದೀತು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಚಿಕ್ಕಗೊಲ್ಲ ಸತ್ತಿದ್ದೋನ ಹನ್ನೆರಡು ದಿನಕ ಎಳಿಸೀದೊ
ತಂದನ್ನ ಶಿವನೆ ತಂದನ್ನ ಕಂದಾನಾ ಶಿವನೇ ತಂದನ್ನ

ನಾಗಲೋಕದ ನಾಗಕನ್ಯೆ ಚಿತ್ತುರ ಲಗ್ನ ಮಾಡಿಕೊಂಡು
ತಂದನ್ನ ಶಿವನೇ ತಂದನ್ನ ತಂದಾನಾ ಶಿವನೇ ತಂದನ್ನ

ನಾಗಕನ್ಯೆ ಲಗ್ನಮಾಡಿಕೊಂಡು ದೊರೆತಾನ ಅಳುತಾನೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೆ ತಂದನ್ನ

ಅವರಣ್ಣನಾದುರತ್ತೀಗೆ ಏನಂತ ಹೇಳುತಾರೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅವರುಣ್ಣಾಕನ್ನ ಇಲ್ಲದೆ ಸೌದೇನಾರ ಒತಕೊಂಡು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ತಮ್ಮನಿರುವ ಪಟ್ಲಕ್ಕೆ ಸೌದೆ ಒತ್ಕೊಂಡು ಬರುತಾರೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅಣ್ಣ ತಮ್ಮ ಕೂಡವ್ರೆ ದುಃಖನಾದುರೆ ಮಾಡವ್ರೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅವರಣ್ಣ ಹೆಂಡ್ತೀಯ ಸುಣ್ಣದಲ್ಹಾಕಿ ಸುಟಬಿಟ್ಟು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಮೂರು ತಿಂಗಳು ತುಂಬಿದುಕೆ ಅಣನ್ಗ ಲಗ್ನಮಾಡುಕೊಂಡು
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅವರಣ್ಣ ತಮ್ಮ ಕೂಡವರೆ ದೊರೆತನುವ ಮಾಡವರೆ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ನಾಗಲೋಕದ ಪಟ್ಟಣದ ಗೊಲ್ಲರಂತ ದೊಡ್ಡೀಲಿ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

ಅವರ್‌ದೊಡ್ಡಿ ರಾಜ್ಯ ಮಾಡವರೆ ಸತ್ಯವಂತರು ಮಕ್ಕಳಯ್ಯೊ
ತಂದನ್ನ ಶಿವನೆ ತಂದನ್ನ ತಂದಾನಾ ಶಿವನೇ ತಂದನ್ನ

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಅಣ್ಣ-ತಮ್ಮಂದಿರ ಕಥೆ; ಕ್ಯಾತನಹಳ್ಳಿ ರಾಮಣ್ಣ (ಸಂ) ಐದು ಜನಪದ ಕಥನಗೀತೆಗಳು. ಜಾನಪದ ಬಳಗ, ಮೈಸೂರು ೧೯೭೦.

೨) ಎಣ್ಣೆಗೆಂಟಿನ ಹೊನ್ನಮ್ಮ; ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಣ (ಸಂ) ಹಾಡಿಗೆ ಹನ್ನೆರಡು ಕಬರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩, ಪು.ಸಂ. ೧೪೫-೧೪೭.

೩) ಮೈದುನನನ್ನು ಕೊಲ್ಲಿಸಿದ ಅತ್ತಿಗೆ; ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಯ (ಸಂ) ಹಾಡಿಗೆ ಹನ್ನೆರಡು ಕಬರು, ಕ.ಅ. ಸಂಸ್ಥೆ, ಮೈ.ವಿ.ವಿ. ಮೈಸೂರು, ೧೯೭೩, ಪು.ಸಂ. ೧೯೬-೨೦೩.

೪) ಅಣ್ಣ-ತಮ್ಮ; ಲಿಂಗಯ್ಯ ಡಿ. (ಸಂ) ಕರ್ನಾಟಕ ಜನಪದ ಕಾವ್ಯಗಳು, ದಿನಕರ ಪ್ರಕಾಶನ, ಬೆಂಗಳೂರು, ೧೯೭೬, ಪು. ೨೦೯-೨೩೨.

೫) ಐಪಟ ಸ್ವಾಮಿ-ಹೂವೇರಾಯ; ಹೆಗಡೆ ಎಲ್.ಆರ್. (ಸಂ) ಮುಕರಿ ಮತ್ತು ಹೊಲೆಯರ ಪದಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೯. ಪು.ಸಂ. ೪೪-೫೦.

೬) ಸಂಶಯ ಪಿಶಾಚಿ; ಹೆಗಡೆ ಎಲ್.ಆರ್. (ಸಂ) ಮುಕರಿ ಮತ್ತು ಹೊಲೆಯರ ಪದಗಳು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೯, ಪು.ಸಂ. ೬೫-೭೭.

೮) ಶಂಕರದೇವನಕಥೆ; ಅಂದನೂರು ಶೋಭ (ಸಂ) ಕೊಂಬೆರೆಂಬೆಲ್ಲ ಎಳಗಾಯಿ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೯, ಪು.ಸಂ. ೩೮-೫೧.

೯) ಅಣ್ಣ ಶಂಕರಲಿಂಗ ತಮ್ಮಸಂದಿಸ್ವಾಮಿ; ಕಂಬಾಳು ಸಿದ್ಧಗಂಗಯ್ಯ ಬಿ. (ಸಂ) ಮಾತಾಡುಮಲ್ಲಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೩, ಪು.ಸಂ. ೭೦-೭೫.

೧೦) ಅಣ್ಣ ಹೊನ್ನಿಗ-ತಮ್ಮ ಚೆನ್ನಿಗ; ಹೆಗಡೆ ಎಲ್.ಆರ್. ಕೆಲವು ಲಾವಣಿಗಳು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩, ಪು.ಸಂ. ೧೦೮-೧೧೮.

---

* ಚಿತ್ತುರಾಣಿ; ಕಂಬಾರ ಚಂದ್ರಶೇಖರ, ಮುತ್ತು ಮುತ್ತಿನ ತ್ವಾಟ ಬೆಂಗಳೂರು ವಿಶ್ವವಿದ್ಯಾಲಯ ೧೯೮೧, ಪು.ಸಂ. ೧೧೦-೧೨೦.

## ೩೭. ಆಳು ಕೂಗಿನ ಹಕ್ಕಿ *

ಸುವ್ವಿ ಸುವ್ವಿ ಸುವ್ವಿಯೋ ಸುವ್ವಿಯೋಳ್ ಸುವ್ವಿ (ಸೊಲ್ಲು)
ಏಳು ಜನ ಅಣ್ಣ ತಮ್ಮದೀರು । ಸುವ್ವಿ ।
ಒಬ್ಬಳೆ ಹೆಣ್ಣು ಮಗಳು । ಸುವ್ವಿ ।
ಹೆಣ್ಣು ಮಗಳು ಲಗ್ನವಾಗಿ । ಸುವ್ವಿ ।
ಆರು ಜನಕು ಲಗ್ನವಾಗಿ । ಸುವ್ವಿ ।
ಎಲ್ಲಕ್ಕಿಂತ ಕಿರಿ ತಮ್ಮ । ಸುವ್ವಿ ।
ಎಲ್ಲು ಹೆಣ್ಣು ಕೇಳುದ್ರುವೆ । ಸುವ್ವಿ ।
ಅವನು ಏನಂಥ ಮಾತನಾಡಿದನು । ಸುವ್ವಿ ।
ಎಲ್ಲೂ ಹೆಣ್ಣು ಒಪ್ಪುವುದಿಲ್ಲ । ಸುವ್ವಿ ।
ಹಿರಿಯ ಮಗನು ತಾಯಿಯ ತವಕೆ । ಸುವ್ವಿ ।
ತಮ್ಮ ನೋಡಿದ್ರೆ ಒಪ್ಪೋದಿಲ್ಲವಲ್ಲ । ಸುವ್ವಿ ।
ಇನ್ನೆಲ್ಲಿ ಹೆಣ್ಣು ಬೇಕು ತಮ್ಮ । ಸುವ್ವಿ ।
ಅಕ್ಕನ ಮಗಳು ತರಬೇಕೆಂದ । ಸುವ್ವಿ ।
ಆ ಮಾತ ಕೇಳಿ ಅಕ್ಕನ ಮನೆಗೋದನು (ಅಣ್ಣ) । ಸುವ್ವಿ ।
ಅಕ್ಕನ ಮನೆಗೆ ಹೋದನವನು । ಸುವ್ವಿ ।
(ಎಂದು ಬಾರದ ಅಣ್ಣ ಇಂದೇನು ಬಂದೆ । ಸುವ್ವಿ ।
ತಮ್ಮನಾದ್ರು ಬರುತಾನೆ ನಿನ್ನ ಮನೆ ಹೆಣ್ಣ ತರುವೊಕ । ಸುವ್ವಿ !)
ಎಂದು ಬರದ ತಮ್ಮ ಇಂದೇನು ಬಂದೆ । ಸುವ್ವಿ ।
ನಿನ್ನ ಮನೆ ಹಾಲು ಅನ್ನಕೆ ಬಂದಿವಿನಿ ಅಕ್ಕ । ಸುವ್ವಿ ।
ಅವಳು ಆ ಮಾತ ಕೇಳಿ ಬಿಶ್ರನೆ ನೀರ ಕೊಟ್ಟಳು । ಸುವ್ವಿ ।

ಅವಳು ಹುಡುಗಿನಾದರೆ ತಮನಿಗೆ ಮಾಡಿ । ಸುವ್ವಿ ।
ತವರಿನ ಋಣವ ತೀರಿಸ್ಬೇಕು ಅಂತ ಮಾತಿ । ಸುವ್ವಿ ।
ಊಟ ಆದ್ಮೇಲೆ ತಾಂಬೂಲ ಕೊಟ್ಟವಳೆ । ಸುವ್ವಿ ।

ಅವರ ಬಾವನ್ನಾದರೆ ಕರೆದವಳೆ । ಸುವ್ವಿ ।
ನಿನ ಬಾವಮೈದ ಎಲ್ಲು ಹೆಣ್ಣೊಪ್ಪೊದಿಲ್ಲ । ಸುವ್ವಿ ।
ನಿನ್ನ ಮಗಳನಾದರೆ ಕೊಡಬೇಕು । ಸುವ್ವಿ ।
ಆಗಲಿ ಎಂದು ಒಪ್ಪಿಕೊಂಡ್ರು । ಸುವ್ವಿ ।
ಒಪ್ಪಿ ಕೊಂಡಾಯ್ತುಲೆ ಮಾತ ತಿರುಗಿಸಿಕೊಂಡ್ರು । ಸುವ್ವಿ ।
ಅವನು ಹಟ್ಟಿಗೆ ಮಾತ ತೀರಿಸಿಕೊಂಡು ಬಂದು । ಸುವ್ವಿ ।
ಹೆಣ್ಣು ಒಪ್ಪಿ ಅವನ ಮಾತು ಆಯಿತು ಕಾಣವ್ವ । ಸುವ್ವಿ ।
ಅವರು ಆರು ಜನುವೆ ಸೇರಿಕೊಂಡ್ರು । ಸುವ್ವಿ ।
(ಈ ಹೆಣ್ಣೀನ ರೂಪ ತಡಿನಾರ್ದೆಹೋದ್ರು । ಸುವ್ವಿ ।)
ಅವರು ಏನಂತ ಮಾತಾಡುತಾರೆ । ಸುವ್ವಿ ।
ನೋಡು ಎಲ್ಲು ಹೆಣ್ಣು ಕೇಳ್ದ್ರು ಒಪ್ಪಲ್ಲ । ಸುವ್ವಿ ।
ಅಕ್ಕನ ಮಗಳ್ಗ ವಾಲಾಡ್ಕಂಡು । ಸುವ್ವಿ ।
ಈಗ ಅರಿಸಿನ ಬಾಳೆ ಹಣ್ಣಿಗೆ ಹೋಗಬೇಕು । ಸುವ್ವಿ ।

ಶಾಸ್ತ್ರವಾದರೆ ಕೇಳಬೇಕು । ಸುವ್ವಿ ।
ಅವರ ತಾಯಿಯನಾದರೆ ಕರೆದವನೆ । ಸುವ್ವಿ ।
ಹಣ್ಣು ಕಾಯ ತಕಂಡು ಬವ್ವ । ಸುವ್ವಿ ।
ಗಂಧದ ಕಡ್ಡಿ ಕರ್ಪೂರ ತಕ್ಕಂಡು ಬವ್ವ । ಸುವ್ವಿ ।
ಅವನು ಒಂದು ಹಣವನಾದರೆ ತಕ್ಕಂಡು । ಸುವ್ವಿ ।

ಅವರ ತಾಯಿಯನಾದರೆ ಕರಕಂಡು । ಸುವ್ವಿ ।
ಅವನು ಶಾಸ್ತ್ರಕಾದರೆ ಹೊಯ್ತಾನೆ । ಸುವ್ವಿ ।
ಏಳು ದಿನಕೆ ಲಗ್ನವೆ ಬಿಳುತು । ಸುವ್ವಿ ।
ಅವನು ಸಾಮಾನನಾದರೆ ತಗಿಯಕೆ । ಸುವ್ವಿ ।
ಅವನು ಮೈಸೂರಿಗಾದರೂ ಹೋದಾನು । ಸುವ್ವಿ ।
ಅವರು ಏಳು ದಿನಕೆ ಅಂಬರಿಸವರೆ । ಸುವ್ವಿ ।
ಅವರು ಇಳ್ಳೆ ಶಾಸ್ತ್ರಕ್ಕೆ ಹೊರಟವರೆ । ಸುವ್ವಿ ।
ಶಾಸ್ತ್ರಕಾದರೆ ಅಕ್ಕನ ಮನೆಗೆ ಹೊರಟವರೆ । ಸುವ್ವಿ ।
ಇಲ್ಲಿ ಮೇಲಕಟ್ಟೆ ಕಟ್ಟುತ್ತಾರೆ । ಸುವ್ವಿ ।
ವಾಲಗದವರು ಬಂದವರೆ । ಸುವ್ವಿ ।
ಶಾಸ್ತ್ರಗಾರರು ಬಂದವರೆ । ಸುವ್ವಿ ।
ಹೆಣ್ಣನಾದರೆ ಕರಕಂಡು । ಸುವ್ವಿ ।

ದೇವಸ್ಥಾನಕ್ಕೆ ಬಂದವರೆ | ಸುವ್ವಿ |
ಶಾಸ್ತ್ರ ಮುಗಿಸಿ ಬಂದವರೆ | ಸುವ್ವಿ |

ಲಗ್ನವಂತು ಆಗೋಯ್ತು | ಸುವ್ವಿ ಮಾ.ವ |
ಊಟಕಾದರು ಬಡಿಸುತಾರೆ | ಸು
ಅವರು ಹೆಣ್ಣು ಗಂಡು ಕರಕೊಂ
ಇವರು ಮೂರು ದಿವಸಕೆ ಹಣ
ಕರೆಯಕಾದ್ರು ಹೋದಾರು |
ಕರೆಕೊಂಡಾದ್ರು ಮನೆಗೆ ……
ಕರಕೊಂಡು ಬಂದ ಮಾರನೆ…….

ಅವರ ಹಿರೇ ಅಣ್ಣ ಏನಂದ | ಸುವ್ವಿ |
ನಮ್ಮ ಸರೀಕರೆಲ್ಲ ಹೆಜ್ಜೇನು ಬೇಟೆಗೆ | ಸುವ್ವಿ |

ಎಲ್ಲ ಹೊಯ್ತುರೆ ನಡಿ ನಮ್ಮ | ಸುವ್ವಿ |
ನಾವು ಏಳು ಜನುವೆ ಹೋಗಬೇಕು | ಸುವ್ವಿ |
ನಮ್ಮ ಕುಲದವರು ಬರುತಾರೆ | ಸುವ್ವಿ |
ಹಂಗಂದ ಮಾತಿಗೆ ತಮ್ಮ ಏನಂದ | ಸುವ್ವಿ |
ಅರಿಸಿನದ ಮೈಯ ತೊಳೆದಿಲ್ಲ | ಸುವ್ವಿ |
ಅಣ್ಣ ನಾ ಹೇಗೆ ಬರಲಣ್ಣ | ಸುವ್ವಿ |
ಇವರು ಆರು ಜನುಮೆ ಮಾತಾಡಿಕೊಂಡು | ಸುವ್ವಿ |
ಇವನ ಹೆಂಡತಿನಾದ್ರು ಅಪಹರಿಸಬೇಕು | ಸುವ್ವಿ |
ಇವನು ಮಾತ್ರ ಕರಕೊಂಡು ಹೋಗಬೇಕು | ಸುವ್ವಿ |
ಇವನು ಕಾಣದಂಗಾಗ ಮಾತಾಡಿಕೊಂಡ್ರು | ಸುವ್ವಿ |
ಹಂಗಂದ ಮಾತಿಗೆ ಏನಂದ | ಸುವ್ವಿ |
ಅಣ್ಣ ನಿಮ್ಮೊಂದಿಗೆ ನಾನುಟ್ಟಲ್ಲವಣ್ಣ | ಸುವ್ವಿ |
ನನ ಕರಕೊಂಡು ಹೋಗೋದು ಧರ್ಮವಲ್ಲಣ್ಣ | ಸುವ್ವಿ |
ನೀನು ಏನು ಆಟವಾಡಿದ್ರು ಬರಬೇಕು ತಮ್ಮ | ಸುವ್ವಿ |
ಅವನು ಅವ್ವನ ತಕೆ ಹೋಗುತಾನೆ | ಸುವ್ವಿ |

ಅವ್ವ ನಾನೇನಂತ ಇದ್ನ ಹೇಳಲವ್ವ | ಸುವ್ವಿ |
ನನ್ನ ಹೆಜ್ಜೇನು ಬೇಟೆಗೆ ಕರಿತಾರೆ | ಸುವ್ವಿ |
ಅಂಗಂದ ಮಾತಿಗೆ ಅವನ ತಾಯಿಯು | ಸುವ್ವಿ |
ಆರು ಜನ ಅಣ್ಣದೀರುಗೂ ಹೆಜ್ಜೇನು ಬೇಟೆ ಯಾಕಪ್ಪ | ಸುವ್ವಿ |
ನಿನ್ನ ತಮ್ಮನ ನೀವು ಯಾಕಪ್ಪ ಕರಿದೀರಿ | ಸುವ್ವಿ |

ಅವನು ಅರಿಶಿನದ ಮೈಯ ತೊಳೆದಿಲ್ಲ । ಸುವ್ವಿ ।
ನಾವು ಅವನ ಬುಟ್ಟು ಮಾತ್ರ ಹೋಗೋದಿಲ್ಲವ್ವ । ಸುವ್ವಿ ।

ಹಂಗಂದ ಮಾತಿಗೆ ನಿನ್ನ ಸೊಸೆಯನಾದ್ರು ಕರಗೊಂಡು ಬವ್ವ । ಸುವ್ವಿ ।
ತಮ್ಮನಾದ್ರೂ ಹೇಳಿದ ಮಾತಿಗೆ ತಾಯಿಯಾದ್ರು ಕರೆದು ತಂದಳು । ಸುವ್ವಿ ।

ಅವಳಕಂಡು ಹಿಂಗಂತ ಅಂದಾನು । ಸುವ್ವಿ ।
ನಿನ್ನ ಗಂಡ ಸತ್ತೋದ ಅಂತ ತಿಳ್ಕೊ ಹೆಣ್ಣೆ । ಸುವ್ವಿ ।
ಅರಿಶಿನ ಕುಂಕುಮ ಕೆಡಿಸೆಣ್ಣೆ । ಸುವ್ವಿ ।
ಬಳೆಯನಾದ್ರು ಒಡೆದುಬುಡು ಹೆಣ್ಣೆ । ಸುವ್ವಿ ।
ನಿನ್ನ ಹೂವನಾದ್ರು ತೆಗೆದು ಹಾಕುಬುಡು । ಸುವ್ವಿ ।
ಅವಳು ಹಂಗಂದ ಮಾತ ಕೇಳಕಂಡು । ಸುವ್ವಿ ।
ಅವಳು ಬೇಕಂತ ಶೋಕ ಪಡುತಾಳೆ । ಸುವ್ವಿ ।
ನೀನು ಶೋಕನಾದರೆ ಮಾಡಬೇಡೆಣ್ಣೆ । ಸುವ್ವಿ ।
ನೀನು ಮನೆಯ ಕೋಣೆ ತಾರಿಸೆಣ್ಣೆ । ಸುವ್ವಿ ।
ನೀನು ನೀರನಾದರೆ ಕಾಯಿಸೆಣ್ಣೆ । ಸುವ್ವಿ ।
ನೀನು ಮೂರು ಬುತ್ತಿ ಕಟ್ಟೆಣ್ಣೆ । ಸುವ್ವಿ ।
ನನಗೆ ನೀರನಾದರೆ ಉಯ್ಯಿಬಾರೆ । ಸುವ್ವಿ ।
ನೀನು ಅರಿಶಿನ ಕುಂಕುಮ ತಗೆಂಡು ಬಾರೆ । ಸುವ್ವಿ ।
ಅವನು ನಡಂಗಳದಲ್ಲಿ ನಿಂತವನೆ । ಸುವ್ವಿ ।
ಅವಳು ಮಣೆನಾದರೆ ಹಾಕವಳೆ । ಸುವ್ವಿ ।
ಅವಳು ಅರಿಶಿನ ಕುಂಕುಮ ಇಕ್ಕುತಾಳೆ । ಸುವ್ವಿ ।
ಅವಳು ಪಾದಪೂಜೆ ಮಾಡುತಾಳೆ । ಸುವ್ವಿ ।
ಇಸತಿ ನನ್ನ ಆಸೆ ನಿನಗೆ ಬೇಡೆಣ್ಣೆ । ಸುವ್ವಿ ।
ನಿನ್ನಾಣೆ ನನಗೆ ಬೇಡಕಾನೆಣ್ಣೆ । ಸುವ್ವಿ ।
ಅವರ ತಾಯಿಗಾದರು ಹೇಳುತಾನೆ । ಸುವ್ವಿ ।
ಅವ್ವ ನನ್ನಾಸೆ ನಿನಗೆ ಬೇಡಕಾನವ್ವ । ಸುವ್ವಿ ।
ಅವರು ಆಮಾತ ಕೇಳೆಲ್ಲ ಸಂಕಟಪಡುತಾರೆ । ಸುವ್ವಿ ।
ಅವರು ಬುತ್ತಿನಾದರು ಹೆಗಲಿಗಾಕಿ । ಸುವ್ವಿ ।
ಅವರು ಏಳು ಜನುವೆ ಕಾಡಿಗಾದರೂ । ಸುವ್ವಿ ।
ಅವರು ಕಾಡಿಗಾದರು ಹೊರಟು ಹೋದರು । ಸುವ್ವಿ ।
ಅವರು ಏಳು ಜನುವೆ ಒಂತಾವು ಕೂತುಕೊಂಡು । ಸುವ್ವಿ ।
ಹುಲಿ ಬರುವ ಜಾಗಕವನ । ಸುವ್ವಿ ।
ಅವರ ತಮ್ಮನಾದ್ರು ಒಂತಾವು ಕೂಂಡ್ರಿಸಿ । ಸುವ್ವಿ ।

ಇವರು ಆರುಜನ ಒಂತಾವುನಾದರೆ | ಸುವ್ವಿ |
ಅಲ್ಲಿ ಅವನು ಏನಂತಾನೆ | ಸುವ್ವಿ |
ಅವರು ಆರು ಜನುವೆ ಕಾಡಿಗಾದರೂ | ಸುವ್ವಿ |
ಅವರು ಕಾಡಿಗಾದರೂ ಹೊರಟು ಹೋದರು | ಸುವ್ವಿ |
ಅವರು ಏಳು ಜನುವೆ ಒಂತಾವು ಕೂತುಕೊಂಡು | ಸುವ್ವಿ |
ಹುಲಿ ಬರುವ ಜಾಗಕವನ | ಸುವ್ವಿ |
ಅವರ ತಮ್ಮನಾದ್ರು ಒಂತಾವು ಕೂಂಡ್ರಿಸಿ | ಸುವ್ವಿ |
ಇವರು ಆರುಜನ ಒಂತಾವುನಾದೆ | ಸುವ್ವಿ |
ಅಲ್ಲಿ ಅವನು ಏನಂತಾನೆ | ಸುವ್ವಿ |
ಅವರು ಆರು ಜನುವೆ ಒಂದುತಾವು | ಸುವ್ವಿ |
ನಾನು ಒಬ್ಬಾನೆ ಒಂದು ತಾವು | ಸುವ್ವಿ |
ಹುಲಿಯನಾದರು ಬಂದದೆ | ಸುವ್ವಿ |
ಅವನು ಏನಂತ ಮಾತ ಹುಲಿಗಂದ | ಸುವ್ವಿ |
ನನಗೆ ಅಣ್ಣಂದಿರು ಅನ್ಯಾಯ ಮಾಡಿದರು | ಸುವ್ವಿ |
ನನ್ನ ನೀನು ತಿನ್ನಬೇಡ | ಸುವ್ವಿ |
ಆಗ ಬಂದುಲಿಯದು ಬಯಲಾಗಿ ಹೋಯ್ತು | ಸುವ್ವಿ |
ಆಮೇಗೆ ಅಣ್ಣಂದಿರು ಬಂದರು | ಸುವ್ವಿ |
ಇವನಿಗೆ ಏನ ಮಾಡಿದರೂ ಸಾಯಲಿಲ್ಲ | ಸುವ್ವಿ |
ಮರಕೆನಾದರೆ ಹತ್ತಿಸಬೇಕು | ಸುವ್ವಿ |
ಆಗ ಈ ಮರಕೆ ನೀನು ಹತ್ತು ಅಂತ | ಸುವ್ವಿ |
ದೊಡ್ಡ ಮರಕೆ ಹತ್ತಿಸಿಬಿಟ್ರು | ಸುವ್ವಿ |
ಮರಕ್ಕೆನಾದರೆ ಹತ್ತಿ ಬುಟ್ಟು | ಸುವ್ವಿ |
ಆಚಾರಿ ಈಚಾರಿ ಇದ್ದ ಮೊಟ್ಟೆಗಳ | ಸುವ್ವಿ |
ಎಲ್ಲನು ಕತ್ತರಿಸಿ ಹಾಕಿ | ಸುವ್ವಿ |
ಕೊನೆಯ ಮೊಟ್ಟೆಲಿ ಕೂತವನೆ ತಮ್ಮ | ಸುವ್ವಿ |

ಇಸತಿ ನೀನು ಬಿದ್ದಿರು ತಮ್ಮ | ಸುವ್ವಿ |
ನಿನ್ನ ಹೆಂಡ್ತಿ ಇವತಿಗೆ ಮುಂಡೆಕಾನೊ | ಸುವ್ವಿ |
ನಮ್ಮೂರು ಜನಕೆ ನಿನ್ನ ಹೆಂಡ್ತಿ | ಸುವ್ವಿ |
ಅಣ್ಣ ನಿಮ್ಮೊಂದಿಗೆ ನಾನು ಹುಟ್ಟಲ್ಲವಣ್ಣ | ಸುವ್ವಿ |
ನನ್ನನಾದರು ಕರಕಳ್ರಣ್ಣ | ಸುವ್ವಿ |
ಅವನು ಮರದ ಮೇಲೆ ಶೋಕಪಡುತಾನೆ | ಸುವ್ವಿ |

ಅಂಗಂದ್ರೂ ಅವರು ಕರಕಳಲಿಲ್ಲ | ಸುವ್ವಿ |
ಅವರು ಊರಿಗಾದರೆ ಬಂದವರೆ | ಸುವ್ವಿ |
ಅವರ ತಾಯಿ ಎಲ್ಲಪ್ಪ ಕಿರಿಮಗನು | ಸುವ್ವಿ |

ಅಂಥ ತಾಯಿ ಕೇಳಿದ ಮಾತಿಗೆ ಏನಂದ | ಸುವ್ವಿ |
ಅವನು ನೆನ್ನೆಯನಾದರೆ ಬಂದನಲ್ಲವ್ವ | ಸುವ್ವಿ |
ಇತ್ತ ಮರದ ಮೇಲಿದ್ದವನಿಗೆ ಹೊಟ್ಟೆಗೆ ಅನ್ನಿಲ್ಲ | ಸುವ್ವಿ |
ಕುಡಿಕಾದರೆ ನೀರಿಲ್ಲ | ಸುವ್ವಿ |
ಅಲ್ಲಿಗಲ್ಲಿಗೂ ಹದಿನೈದು ದಿನಗಳು ಆಗೋದೊ | ಸುವ್ವಿ |
ಹಲ್ಲಿ ಹಂಗೆ ಅತ್ತವನೆ | ಸುವ್ವಿ |
ಅವರ ತಾಯಿಯ ಸಪುನಕೆ ಬಿದ್ದವನೆ | ಸುವ್ವಿ |
ಆ ಸಪುನದಲ್ಲಿ ಏನಂತ ಹೇಳುತಾನೆ | ಸುವ್ವಿ |
ನನ್ನ ಹೆಂಡ್ತಿನಾದರು ಕರಕಂಡು | ಸುವ್ವಿ |
ಒಂದು ಮೊರದಲಿ ರತ್ನ ತುಂಬಿ | ಸುವ್ವಿ |
ಒಂದು ಮೊರದಲಿ ಮುತ್ತ ತುಂಬಿ | ಸುವ್ವಿ |
ಹಣ್ಣಕಾಯ ತಕ್ಕೊಂಡು | ಸುವ್ವಿ |
ಅರಿಸಿನ ಕುಂಕುಮ ತಕ್ಕೊಂಡು | ಸುವ್ವಿ |
ನನ್ನ ಹೆಂಡ್ತಿ ಸಿಸ್ತು ಸ್ರುಂಗಾರ ಮಾಡಿಕೊಂಡು | ಸುವ್ವಿ |
ಮೂಡಲಾಗಿ ಬರಲೆಂದು | ಸುವ್ವಿ |
ಅಂಥ ಸಪುನವ ಕಂಡಳು ತಾಯಿ | ಸುವ್ವಿ |
ಆ ಮಾತನಾದರೆ ಕೇಳಿಕೊಂಡು | ಸುವ್ವಿ |
ಸೊಸೆನಾದರು ಕರಕೊಂಡು | ಸುವ್ವಿ |
ಅವನು ಹೇಳಿದ ಸಾಮಾನೆಲ್ಲ ತಕ್ಕಂಡು | ಸುವ್ವಿ |
ಆ ಮರದ ತಕೆ ಹೊರಟಾರು | ಸುವ್ವಿ |
ಆ ಮರದ ಮೇಲಾದ್ರೆ ಕೂತುಕಂಡವನೆ | ಸುವ್ವಿ |
ಇವರು ಅತ್ತೆ ಸೊಸೆ ಮರದಡಿಯಲ್ಲಿ | ಸುವ್ವಿ |
ಅವರು ಮೇಲೆ ನೋಡಿ ಸಾಕಾಗವರೆ | ಸುವ್ವಿ |
ಅವನ ಹೆಂಡ್ತಿ ಸೋಕ ಮಾಡ್ತಾವ್ಳೆ | ಸುವ್ವಿ |
ಅವನು ಮೇಲೆ ಕೂತ್ಕೊಂಡು ಶೋಕ ಮಾಡುತಾನೆ | ಸುವ್ವಿ |
ಅವನು ಏನಂತ ಶೋಕ ಮಾಡ್ತಾನೆ | ಸುವ್ವಿ |
ಮರದ ಬುಡದಲ್ಲಿ ಎಲ್ಲನುವೆ | ಸುವ್ವಿ |
ಮಡಗಿ ಪೂಜೆ ಮಾಡ್ರವ್ವ | ಸುವ್ವಿ |
ನಿನ್ನ ಸೊಸೆ ಕೈಯಲ್ಲಿ ಮಾಡಿಸವ್ವ | ಸುವ್ವಿ |
ಮಾಡಯ್ತುಲೆ ಅವನು ಏನ್ ಹೇಳ್ತಾನೆ | ಸುವ್ವಿ |
ನೀನು ತಿರುಗಿಕೊಂಡು ಮಾತ್ರ ನೋಡಬೇಡವ್ವ | ಸುವ್ವಿ |
ನಾನು ನಿಮ್ಮೊಂದಿಗೆ ಇಳಿದು ಬರ್ತೀನಿ ಅವ್ವ | ಸುವ್ವಿ |
ನೀವು ನೋಡದೆ ಮಾತ್ರ ಹೋಗಿರವ್ವ | ಸುವ್ವಿ |
ಅದರಂತವರು ತಿರುಗಿ ನೋಡದೆ ಬರುತಾರೆ | ಸುವ್ವಿ |
ಅವನು ಅರ್ಧಕ್ಕೆ ಆದ್ರೆ ಇಳಿದವನೆ | ಸುವ್ವಿ |

ತಾಯಿ ಹೆತ್ತ ಕರುಳಿಗೆ ತಿರುಗಿ ನೋಡಿಬಿಡುತಾಳೆ । ಸುವ್ವಿ ।
ಇವಳು ತಿರುಗಿ ನೋಡುತಳೆ ಗಗನಕೆ । ಸುವ್ವಿ ।
ಮರ ಹೋಗಿ ಬುಡುತು । ಸುವ್ವಿ ।
ಗಗನಕೆ ಮರಹೊಯ್ತುಲೆ । ಸುವ್ವಿ ।
ನೀನು ಯಾವತಿದ್ರುವೆ ಕೆಟ್ಟಿಕನ ಹೋಗು । ಸುವ್ವಿ ।
ಹಿಂದಕ್ಕೆ ಅವನು ಕರಕೊಂಡು । ಸುವ್ವಿ ।
ನಾನು ಇಸತಿ ಆಳು ಕೂಗಿನ ಹಕ್ಕಿ ಆಗುತೀನಿ । ಸುವ್ವಿ ।
ನಾನು ಸಂಜೆಗೆ ನಿಮ್ಮಯ ಮನೆ ಮೇಲ್ಕೆ ಬರುತೀನಿ । ಸುವ್ವಿ ।
ನಾನು ಆರು ಜನ ಅಣ್ಣದಿರನು ಕೂಗಿದಾಗ । ಸುವ್ವಿ ।
ಆರು ಜನುವೆ ಮಡಿದು ಹೋಗುತಾರೆ । ಸುವ್ವಿ ।
ಆರು ಜನ ಅತ್ತಿಗೆರುವೆ ಮಡಿದು ಹೊಗ್ತಾರೆ । ಸುವ್ವಿ ।
ಮನೆ ಮಠವೆ ಮಡಿದು ಹೊಯ್ತಾದೆ । ಸುವ್ವಿ ।
ನನ್ನ ಹೆಂಡ್ತಿ ನೀನು ಕರಕೊಂಡು । ಸುವ್ವಿ ।
ಅಕ್ಕನ ಮನೆಗೆ ಸೇರಿಕವ್ವ । ಸುವ್ವಿ ।
ಹಿಂಗೆಂಗೋ ಬದುಕು ಮುಗಿದೋಯ್ತು । ಸುವ್ವಿ ।

---

* ಆಳು ಕೂಗಿನ ಹಕ್ಕಿ; ಜಯಲಕ್ಷ್ಮಿ ಸೀತಾಪುರ, ನಮ್ಮ ಸುತ್ತಿನ ಜನಪದ ಕಥನಗೀತೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೪, ಪು.ಸಂ. ೫೫-೬೧.

## ೩೮. ನೀಲಗಂಗಾನ ಹಾಡು *

ತಾಯಿ ತಂದಿꞩ ಸತ್ತು ಇಂದಿꞩಗ್ಹನ್ನೆರಡೊ ವರುಷ ॥
ಇಂದꞩ ನಮ್ಮ ನಿ()ಲ-ಗಂಗನ ಭಾವ ಬಂದ್ ನꞩ । ಸೂಯಿ ॥
ಇಂದꞩ ನಿಮ ನಿ()ಲ-ಗಂಗನ ಖಳುವಬೇಕವ್ವಾ । ಸೂಯಿ ॥

* * * *

ಅಚ್ಚೀ ಬಿಂಡಿꞩ ಬಿಡು ಇಚ್ಚಿ ಬಿಂಡಿꞩ ಬಿಡು ॥
ನಡುವಿꞩನ ಬಿಂಡ್ಯಾನ ಸೀರಿ ಉಟಗ್ವಾ ನಿಲಗಂಗಾ । ಸೂಯಿ ॥
ಅಚ್ಚೀ ಭರಣೀ ಬಿꞩಡು ಇಚ್ಚೀ ಭರಣೀ ಬಿꞩಡು ॥
ನಡುವಿನ ಭರಣ್ಯಾನ ವಸ್ತಾ ಇಟಿಗ್ವಾ ನಿಲಗಂಗಾ । ಸೂಯಿ ॥
ಎಡಕೊಮ್ಮೆ ಹೊಳ್ಳವ್ವಾ ಬಲಕೊಮ್ಮ ಹೊಳ್ಳವ್ವಾ ॥
ನಿಂತ ಗೆಳದ್ಯಾರಿಗಿ ಹೇಳವ್ವಾ ತಂಗಿꞩ । ಸೂಯಿ ॥

ಬಿಸಿಲs ಬಡಿದರ ಶೆಲ್ಲ್ಯಾ ಮುಸುಕ ಹಾಕಣ್ಣಾ । ಸೂಯಿ ॥
ನೀರಡಿಕ್ಯಾದರ ಗಿಂಡಿಲಿ ನೀರ ಕುಡಿಸಣ್ಣಾ । ಸೂಯಿ ॥

* * * *

ತೇವರೀಗ್ಹೋಡಿಯುವ ಕುದುರಿ ತೆಗ್ಗೀಗಿ ಹೊಡೆದಾನ ॥
ಮೈಯ ಕೈಯುಗಳು ಮುಟ್ಟಲ್ಹೋಗ್ಯಾನs । ಸೂಯಿ ॥
ಸಿಟ್ಟೇಲಿ ನೀಲಗಂಗಾ ಮಡವ ಧುಮುಕ್ಯಾಳ । ಸೂಯಿ ॥

* * * *

ಆ ಊರ ಹಾದೀಲಿ (ಬತ್ತಲ) ಕುದರಿs ಬರತದ ॥
ಅಣ್ಣಾ ಸಹ ದೇವಣ್ಣಾ ಒಬ್ಬನೇ ಬರತಾನ । ಸೂಯಿ ॥
ಮಡದೀ ನೀಲಗಂಗಾನ ಖಳುವಲಿಲ್ಲೇನ । ಸೂಯಿ ॥
ಆ ಊರ ಹಾದೀಲಿ ಏಳ್ಮಂದಿ ಕಳ್ಳsರು ॥
ಮೈಯs ಕೈಯಗಳು ಮುಟ್ಟಲ್ಹೋಗ್ಯಾರೋ । ಸೂಯಿ ॥
ಸಿಟ್ಟೇಲಿ ನೀಲಗಂಗಾ ಮಡವ ಧುಮಕ್ಯಾಳೋ । ಸೂಯಿ ॥
ಮೊನ್ನಿsನ ರಾತುರಲಿ ಸಪನsವು ಬಿsದ್ದಿತೊ ॥
ಮುತ್ತಿನ ತೂರಾಯಿಗಿ ಬೆಂಕಿ ಹತ್ತಿತ್ತೊ । ಸೂಯಿ ॥
ಇsವು ಸುದ್ದಿಗಳವರಕ್ಕsಗ ಒಯ್ಯೋ । ಸೂಯಿ ॥

* * * *

ತಂಗಿs ನೀಲಗಂಗಾ ಏನ ಹೇಳ್ಯಾಳೊ । ಸೂಯಿ ॥
ಆ ಊರ ಹಾದೀಲಿ ಏಳ್ಮಂದಿ ಕಳ್ಳsರ ॥
ಮೈಯ ಕೈಯಗಳು ಮುಟ್ಟಲ್ಹೋಗ್ಯಾರೊ ॥ ಸೂಯಿ ॥
ಸಿಟ್ಟೇಲಿ ನೀಲಗಂಗಾ ಮಡವ ಧುಮಕ್ಯಾಳೊ । ಸೂಯಿ ॥
ತಾಯ್ತಂದಿ ಸಾಯಾsಗ ಐಯ್ದಿನದ ಕೂಸಿದ್ದ್ಯಾ ।
ಖಾರಿಕ ತೆಯ್ದ್ಹಾಕಿ ಸಲಹಿದನಲ ತಂಗಿs । ಸೂಯಿ ।
ತಾಯ್ತಂದಿ ಸಾಯಾಗ ಏಳ್ದಿನದ ಕೂಸಿದ್ದಿ ॥
ಅಂಜರದ್ಹಣ್ಣಾಕಿ ಸಲವಿದನಲ ತಂಗಿs । ಸೂಯಿ ॥

---

* ನೀಲಗಾಂಗನ ಹಾಡು, ಕಾಪಸೆ ರೇವಪ್ಪ ಮಲ್ಲಿಗೆದಂಡೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೦, ಪು.ಸಂ. ೫೩-೫೪.

# ೩೯. ಬಯಲುಸೀಮೆಯ ಗೌಡನ ಮಗಳು *

ಜಗಂಜ್ಯೋತಿ ಮಾವಿನ ಮರವೆ ತಂದೆನಾನ
ಬಯಲುಸೀಮೆಯ ಗೌಡನ ಮಗಳೆ ತಂದೆನಾನ । ಹಿಮ್ಮೇಳ ॥
ಯಾವ ಸೀಮೆ ಗೊಲ್ಲಾರ್ಹುಡುಗ
ಏಳು ಸಾವಿರ ಹುಂಡಿ ದನವ
ಹೊಡಕೊಂಡಿ ಗೊಲ್ಲರುಡುಗ
ಸುರಹೊನ್ನೆ ಮತಕ್ಕೆ
ಸುರಹೊನ್ನೆ ಮತಕ್ಕೆ ಬಂದು
ಕಾಯೆ ಕಂಬಳಿಯ
ತಿರುಗಿ ಗದ್ದಿಗೆ ಹೂಡಿ

ಕರಿಯ ಕಂಬಳಿಯು
ಬೀಸಿ ಗದ್ದಿಗೆ ಹೂಡಿ
ಕಾಳು ನಾಯಿ ಜೂಲು ನಾಯಿ
ಏಳು ಸಾವಿರ ಹುಂಡಿದನವ
ಮಯ್ಯಾಕೆ ಹೊಡೆದು ಬುಟ್ಟು
ಚಿನ್ನದ ಕೊರಳ ಬೆಳ್ಳಿ ಕೊರಳ
ಲಾಲೇಸಿನುಡಿತಾನೆ
ಬಯಲು ಸೀಮೆಯ ಗೌಡನ ಮಗಳು
ಬಿಂದಿಗೆಯ ತಕ್ಕೊಂಡು
ನೀರಿಗೆ ಬರುತಾಳೆ
ನೀರಿಗೆ ಬರುವಾಗ
ಅವನು ಲಾಲೇಸಿ ನುಡುತಾನೆ
ಅವಳು ಗ್ಯಾನೇಸಿ ಕೇಳಾಳೆ
ಬಿಂದಿಗೆಯ ಇಟ್ಟುಬುಟ್ಟು
ಸುರ ಹೊನ್ನೆ ಮರತಾಕೆ
ಹೋದಾಳೆ ಗೌಡನ ಮಗಳು
ಯಾವ ಸೀಮೆ ಚೆಲುವಾನೊ
ಯಾವ ನಾಡ ದೊರೆಮಗನೊ
ನಾವು ಇನವಂದ ಆಡೂನ ಬಾರೊ
ಕೇಳವ್ವನ ತಾಯಿ
ನಾನೋಡಿದರೆ ಗೊಲ್ಲರ ಹುಡುಗ
ನೀನೋಡಿದರೆ ಗೌಡನ ಮಗಳು
ನಿನ್ನೊಂದಿಗೆ ಇನವಂದ
ನಾನಾಡೋದಿಲ್ಲ ತಾಯಿ

ಅಂಜಬ್ಯಾಡ ಅಳುಕಬ್ಯಾಡ
ನಾವಿನವಂದ ಆಡೂನಬಾ
ನಿನ್ನೊಂದಿಗೆ ಇನವಂದ
ನಾನಾಡೋದಿಲ್ಲ
ಏನೇನ್ಹೆಳಿದ ರೂವೆ
ಕೇಳಳೆಲೆ ಗೌಡನ ಮಗಳು
ನಿನ್ನೊಂದಿಗೆ ಇನವಂದ
ಆಡಿದರೆ ಸರಿಹೋಯ್ತು
ಇನವಂದ ಆಡದೆ ಹೋದ್ರೆ
ನಿನ್ನ ಶಿರವ ಕಡಿಸೂವೆ
ನಿನ್ನ ಶಿರವಾನೆ ಮೆಟ್ಟಿಕೊಂಡು
ನಾ ತಣ್ಣೀರ ಮೀಯುತೀನಿ
ಅವಳೇನೇನ್ಹೇಳಿದರೂವೆ
ಕೇಳಾನಲ್ಲೆ ಗೊಲ್ಲ ರ್ಹುಡುಗ
ತೊಟ್ಟಿದ ಬಳೆಗಳ
ಲಗ್ಗಾನೆ ನರಕಾಳೆ
ಇಕ್ಕಿದ್ದ ಸೀರೆ ರವಕೆ
ಪರಪರನೆ ಹರುದಾಳೆ
ಬಳೆಯಗಾಜ ತಕ್ಕೊಂಡವಳು
ಮೈ ಕೈಯ್ಯ ಗಂಜುಕೊಂಡು
ಬಿಂದಿಗೆಯ ನಿಟ್ಟುಬಿಟ್ಟು
ಊರಿಗೆ ಹೋಗುತಾಳೆ
ಮಂಚಾಕೆ ಮೊಕಾಡೆಯಾಗಿ
ಮಲಗಾಳೆ ಗೌಡನ ಮಗಳು
ಬಯಲು ಸೀಮೆ ಗೌಡನ ಹೆಡ್ತಿ
ಮಗಳಿದ್ದ ಮಂಚಕೆ ಬಂದಳು
ಯಾಕವ್ ನನಕಂದ
ಊಟಾವ ಮಾಡುಬಾರೆ
ನಿನ ಊಟ ಯಾರಿಗೆ ಬೇಕು
ಹೋಗವ್ವ ಅಂಗಂದು
ಅವರ ತಾಯಿಯ ಕಳುಗಾಳೊ
ಬಯಲುಸೀಮೆ ಗೌಡನ ಹೆಂಡ್ತಿ
ತನ್ನ ಗಂಡನಿಗೆ ಹೇಳಿದಳೆ
ಬಯಲು ಸೀಮೆ ಗೌಡ ಬಂದಿ
ಏನೆಂದು ಕೇಳುತಾನೆ
ಯಾಕವ್ವ ನನ ಕಂದ

ನಿನ್ನ ಕಷ್ಟವೇನೆ ಸುಖವೇನೆ
ಹೇಳವ್ವ ನಿನ್ನೊಂದಿಗೆ

ಕೇಳಪ್ಪ ನನ ತಂದೆ
ಅಂಜಿ ಬಿನ್ನ ಮಾಡಲೊ
ನಾನಂಜದೆ ಬಿನ್ನ ಮಾಡಲೊ
ಅಂಜಬ್ಯಾಡ ಅಳುಕಬ್ಯಾಡ
ಹೇಳವ್ವ ನನ್ನೊಂದಿಗೆ
ಕೇಳಪ್ಪ ನನ ತಂದೆ
ಅವನ್ಯಾವ ಸೀಮೆಯ ಗೊಲ್ಲರ್ಹುಡುಗ
ಅವನು ಏಳು ಸಾವಿರ ಹುಂಡಿದನವ
ಅಟ್ಟಿಕೊಂಡು ಗೊಲ್ಲರ್ಹುಡುಗ
ಸುರಹೊನ್ನೆ ಮರತಾಕೆ ಬಂದಿ
ಕರಿಯ ಕಂಬಳಿಯ
ತಿರುಗಿ ಗದ್ದಿಗೆ ಹೂಡಿ
ಕರಿಯ ಕಂಬಳಿಯ
ಬೀಸಿ ಗದ್ದಿಗೆ ಹೂಡಿ
ಕಾಳು ನಾಯಿ ಜೂಲುನಾಯಿ
ಏಳು ಸಾವಿರ ಹುಂಡಿದನವ
ಮೆಯ್ಯೊಕೆ ಹೊಡುತಾನೆ
ಚಿನ್ನದ ಕೊರಳ ಬೆಳ್ಳಿಕೊರಳ
ಲಾಲೇಸಿ ನುಡುತಾನೆ
ಬಿಂದೀಗೆ ತಕ್ಕೊಂಡು
ನಾ ನೀರಿಗೆ ಹೋಗುವಾಗ
ಕಂಡನಲ್ಲೊ ಗೊಲ್ಲರ್ಹುಡುಗ
ಕೈ ಗುದ್ದೀಗೆ ಮೈಗುದ್ದೀಗೆ
ಬಂದಾನೆ ಗೊಲ್ಲರ್ಹುಡುಗ
ಬ್ಯಾಡ ಅಂದು ನಾನು
ಸಾರಿ ಹೇಳುತ ಬಂದೆ
ಕೇಳಲಿಲ್ಲ ಗೊಲ್ಲರ್ಹುಡುಗ
ಅವನ ಶಿರವ ಮೆಟ್ಟಿಲು ಕೊಂಡು
ನಾ ತಣ್ಣೀರು ಮೀಯಬೇಕು
ಬಂದಾನೆ ಬಯಲುಸೀಮೆ ಗೌಡ
ದಂಡನಾದರೆ ಕರಕೊಂಡು

ಸುರಹೊನ್ನೆ ಮರತಾಕೆ ಹೋಗಿ
ತಪ್ಪು ಕಾಣದೆ ತಾಗುಕಾಣದೆ
ಅವನ ಶಿರವನ್ನು ಕಡುತಾನೆ
ಮಗಳಿಗೆ ತಂದು ಕೊಡುತಾನೆ
ಅವನ ಶಿರವ ಮೆಟ್ಟಲುಗೊಂಡು
ತಣ್ಣೀರ ಮೀಯುತಾಳೆ

* * * *

ಎಲ್ಲಿ ಕಂಡವೊ ಯಾತಾವು ಕಂಡವೊ
ಬಂದವಲ್ಲೆ ಕಾಳುನಾಯಿ ಜೂಲುನಾಯಿ
ಕಾಳು ನಾಯಿ ಜೂಲು ನಾಯಿ
ಆಕಾಶ ಕಾರುತಾವೆ

ಭೂಮಿಗೆ ಬೀಳುತಾವೆ
ಏಳು ಸಾವಿರ ಹುಂಡಿದನ
ಬಂದಿನ್ನು ನೋಡುತಾವೆ
ಜೂಜು ಕೊಂಬಿನ ಹೋರಿ
ಬಟ್ಟು ಕೊಂಬಿನ ಬಸವ
ಕಾಮ ಜೇನು ಅನ್ನುವ ಹಸ
ನವಿಲು ಅನ್ನುವ ಹೋರಿ
ಕಾಳು ನಾಯಿ ಜೂಲುನಾಯಿ
ಅವ ಕರಕೊಂಡು ಹೋಗುತಾವೆ
ಏಳು ಸಾವಿರ ಹುಂಡಿದನ
ಅವನ ಪಟ್ಟಣಕೆ ಹೋಗುತಾವೆ
ಬಯಲು ಸೀಮೆ ಗೌಡನ
ಹಟ್ಟಿಗೆ ಸೀಮೆ ಗೌಡನ ಮಗಳ
ಒದ್ದಿ ಜೀವನ ತಗದಿ
ಬಯಲು ಸೀಮೆ ಗೌಡನ
ತುಳದಿ ಜೀವವ ತಗದಿ
ಅವನ ಶಿರವನ್ನು ತಗುದಾವೆ
ಈಚೆಗೆ ಮಡಗೀದೊ
ಕಾಮಜೇನು ಅಂಬುವ ಹಸ
ಕೊಂಬಿನೆಡೆಯಲು ಮಡಗಿಕೊಂಡು
ಸುರಹೊನ್ನೆ ಮರತಕ್ಕೆ ಬಂದು
ಮಂಡಕ್ಕೆ ಶಿರವನ್ನು ಮಡಗಿ

ಮರುಜವಳಿ ಕಡ್ಡಿಯ ತಂದು
ಮಂತ್ರಿಸಿ ಜೀವವತಂದಿ
ಏಳಯ್ಯ ನನ ತಂದೆ
ನಾನು ಪಟ್ಟಣಕ್ಕೆ ಹೋಗನಂದು
ಕರಕೊಂಡು ಹೋಗುವಾಗ
ಜಗಂಜ್ಯೋತಿ ಮಾವಿನ ಮರವೆ
ಬಯಲುಸೀಮೆಯ ಗೌಡನ ಮಗಳೆ

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಗೊಲ್ಲರ ಹುಡುಗ; ಭಾನುಮತಿ ವೈ.ಸಿ. ಪುಟ್ಟಮಲ್ಲಿಗೆ ಹಿಡಿತುಂಬ, ತಾರಾ ಪ್ರಿಂಟಿಂಗ್ ಪ್ರೆಸ್, ಮೈಸೂರು ೨೦೦೧, ಪು.ಸಂ. ೯೧-೧೦೧.

೨) ಗೋಮೇಸೋ ಗೊಲ್ಲಾರ್ಹುಡುಗ; ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಯ, ಹಾಡಿಗೆ ಹನ್ನೆರಡು ಕಬರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩, ಪು.ಸಂ. ೧೧೫-೧೨೩.

---

* ಬಯಲು ಸೀಮೆಯ ಗೌಡನ ಮಗಳು; ಹನೂರು ಕೃಷ್ಣಮೂರ್ತಿ, ಜನಪದ ಮತ್ತು ಬುಡಕಟ್ಟು ಗೀತೆಗಳು; ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೯೮ ಪು.ಸಂ. ೧೨೧-೧೨೬.

## ೪೦. ಚಿಕ್ಕೋಳು ಹಿರಿದಿಮ್ಮವ್ವ*

ಚಿಕೋಳು ಹಿರಿದಿಮ್ಮಿ ಸುವ್ವಲಾಲೆ।
ಏಳುಜನ ಅಣ್ಣದೀರು ಸುವ್ವಲಾಲೆ।

ಏಳುಜನ ಅಣ್ಣದೀರು। ಸು। ಬಾರೆಯ ಹೊಲತಾಕೆ। ಸು।
ಬೇಸಾಯ ಹೂಡ್ಯಾರೆ। ಸು। ಚಿಕ್ಕೊಳು ಹಿರಿದಿಮ್ಮಿ। ಸು।
ಏಳುಗೂಡಿನ ದನವ। ಸು। ಬಿಟ್ಟುಕೊಂಡು ಹೋಗುತಾಳೆ। ಸು।
ಹೊಗಂದು ಹೋದಾಳೊ। ಸು। ಜೋಳಾದ ಹೊಲತಾಕೆ। ಸು।
ಹೋದಳು ಹಿರಿದಿಮ್ಮವ್ವ। ಸು। ಏಳುಗೂಡಿನ ದನವ। ಸು।
ಬಿಟ್ಟುಕೊಂಡು ಮೇಸುತಾಳೆ। ಸು। ಬಿಟ್ಟುಕೊಂಡು ಮೇಸುವಾಗ। ಸು।
ಒಂದಾಲದ ಮರದಡಿಯ। ಸು। ನೆರಳಾಗೆ ಕೂತುಕೊಂಡು। ಸು।
ಚಿಕ್ಕೋಳ್ ಹಿರಿದಿಮ್ಮವ್ವ। ಸು। ಹಂಗೇಯ ಮನಿಕಂಡಳು। ಸು।
ಹಂಗೇಯ ಮನಿಕಂಡು। ಸು। ಮೇಲಾಕೆ ನೋಡುತಾಳೆ। ಸು।
ಅವನಾರೊ ಪರದೇಶಿ। ಸು। ಪರದೇಶಿ ಕಂದಯ್ಯ। ಸು।

ಮರದ ಮೇಲೆ ಕುಂತವನೆ | ಸು | ಚಿಕ್ಕೊಳ್ ಹಿರಿದಿಮ್ಮವ್ವ | ಸು |
ನೀನಾರೊ ಪರದೇಶಿ | ಸು | ಅಂಗಂದು ಕೇಳುವಗ | ಸು |
ಏನುಮಾತು ಹೇಳುತಾನೆ | ಸು | ತಂದೆಯಿಲ್ಲ ನನಗೆ | ಸು |
ತಾಯಿಯಿಲ್ಲ ನನಗೆ | ಸು | ಪರದೇಶಿ ಕಂದಯ್ಯ | ಸು |
ಅಂಗಂದು ಇಳುದಾನು | ಸು | ಇಳುದಾನೆ ಅವನಿನ್ನ | ಸು |
ಆಲಾದ ಮರವನ್ನೆ | ಸು | ಮರೆಮಾಡಿ ನಿಂತುಕೊಂಡು | ಸು |
ಹೊದಿಯಾಕೆ ಬಟ್ಟೆಲ್ಲ | ಸು | ಉಣ್ಣಾಕೆ ಹಿಟ್ಟೆಲ್ಲ | ಸು |
ಚಿಕ್ಕೋಳು ಹಿರಿದಿಮ್ಮವ್ವ | ಸು | ಏನಂದು ಕೇಳುತಾಳೆ | ಸು |
ಹೊದೆಯಾಕೆ ಬಟ್ಟೆಕೊಡುವೆ | ಸು | ಉಣ್ಣಾಕೆ ಹಿಟ್ಟುಕೊಡುವೆ | ಸು |
ಪರದೇಶಿ ಕಂದಯ್ಯ | ಸು | ನಮ್ಮನೆಯಾಗೆ ಇದ್ದುಕೊಂಡು | ಸು |
ಏಳೂಗೂಡಿನ ದನವ | ಸು | ಕಾಯಿಕೊಂಡು ಇರುತೀಯ | ಸು |
ಉಣ್ಣಾಕೆ ಹಿಟ್‌ಕೊಟ್ಟರೆ | ಸು | ಹೊದಿಯಾಕೆ ಬಟ್ಟೆಕೊಟ್ರೆ | ಸು |
ನಿಮ್ಮ ಮನೆಯಲ್ಲಿ ಇರುತೀನಿ | ಸು | ದನವನೆ ಕಾಯುತೀನಿ | ಸು |
ಅಂಗಂದ ಮಾತಿಗೆ | ಸು | ಚಿಕ್ಕೋಳು ಹಿರಿದಿಮ್ಮಿ | ಸು |
ಜಾತೀಯು ಯಾವುದಪ್ಪ | ಸು | ಕುಲವು ಯಾವುದಪ್ಪ | ಸು |
ಎಂದೇಯೆ ಕೇಳುತಾಳೆ | ಸು | ಬೆಡಗು ಬೇಡರ್ಹುಡುಗ | ಸು |
ಕುಲವೆ ಬೊಮ್ಮೇಲಿಂಗ | ಸು | ಅಂಗಂದ ಮಾತಿಗೆ | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ಮನೆತಾಕೆ ಹೋಗುತೀನಿ | ಸು |
ದನಗಳ ಕಾಯಿಕೊಂಡು | ಸು | ಇರಪ್ಪ ನೀನೀಗ | ಸು |
ಅಂಗಂತ ಹೇಳಿಬಿಟ್ಟು | ಸು | ಹೊರಟಾಳು ಬೇಗದಿಂದ | ಸು |
ಬಾರೇಯ ಹೊಲತಾಕೆ | ಸು | ಹೋದಾಳ್ ಹಿರಿದಿಮ್ಮವ್ವ | ಸು |
ಬಾರೇಯ ಹೊಲತಾಕ್ಹೋಗಿ | ಸು | ಏಳುಜನ ಅಣ್ಣದೀರ್ಗೆ | ಸು |
ಏನುಮಾತು ಹೇಳುತಾನೆ | ಸು | ಏಳುಜನ ಅಣ್ಣಗಳಿರೆ | ಸು |
ಅಪ್ಪ ಪರದೇಶಿ ಕಂದಯ್ಯ | ಸು | ಪರದೇಶಿ ಕಂದಯ್ಗೆ | ಸು |
ಹಿಟ್ಟುಬಟ್ಟೆ ಕೊಟ್ಟರೆ | ಸು | ನಮ್ಮದನಗಳ ಕಾಯ್ವನಂತೆ | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ಬೇಡಕಾಣೆ ನೀನೀಗ | ಸು |
ನನಮಾತ ಕೇಳವ್ವ | ಸು | ಅಂಗಂದು ಹೇಳ್ಯಾರೆ | ಸು |
ಅಪ್ಪ ಪರದೇಶಿ ಕಂದಯ್ಯ | ಸು | ದನವಾನೆ ಕಾಯುತಾನೆ | ಸು |
ಹಿಟ್ಟುಬಟ್ಟೆ ಕೊಡಾನು | ಸು | ಅಂಗದ ಮಾತಿಗೆ | ಸು |
ನಿನ್ನಿಷ್ಟ ಕಾಣವ್ವ | ಸು | ಯಾವ ಜಾತಿ ತಾಯಿ | ಸು |
ಅಂದಿನ್ನ ಕೇಳ್ಯಾರೆ | ಸು | ಬೆಡಗು ಬೇಡರ ಹುಡುಗ | ಸು |
ಕುಲವೆ ಬೊಮ್ಮೇಲಿಂಗ | ಸು | ಅಂಗಂದ ಮಾತಿಗೆ | ಸು |
ಬೆಲ್ಲದಂಗೆ ಇದ್ದಾರು | ಸು | ಬೇಡರ ಸಂಗಬ್ಯಾಡ | ಸು |
ತುಪ್ಪದಂಗೆ ಇದ್ದಾರು | ಸು | ತುರಕಾರ ಸಂಗಬ್ಯಾಡ | ಸು |
ಹಾಲಿನಂಗೆ ಇದ್ದಾರು | ಸು | ಹಾರುವರ ಸಂಗಬ್ಯಾಡ | ಸು |
ಪರದೇಶಿ ಕಂದಯ್ಯ | ಸು | ನಮ್ಮನೇನ ಮಾಡುತಾನೆ | ಸು |

ಚಿಕ್ಕೋಳ್ ಹಿರಿದಿಮ್ಮವ್ವ । ಸು । ನಿನ್ನಿಷ್ಟ ಕಾಣವ್ವ । ಸು ।
ಹೋದಾಳು ಅರಮನೆಗೆ । ಸು । ಚಿಕ್ಕೋಳ್ ಹಿರಿದಿಮ್ಮವ್ವ । ಸು ।
ಪರದೇಶಿ ಕಂದಯ್ಗೆ । ಸು । ಬಟ್ಟೆಗಳ ತಕ್ಕೊಂಡು । ಸು ।

ತಂದಕೊಟ್ ಹೋದಾಳು । ಸು । ಮನತಕ್ಕೆ ಹೋದಾಳು । ಸು ।
ಏನುಮಾತನಾಡುತಾಳೆ । ಸು । ಏಳು ಜನ ಅತ್ಗೆದೀರು । ಸು ।
ಮಜ್ಜನವಾದವು । ಸು । ಅಮ್ಮ - ಮಧ್ಯಾನ್ನವಾದವು । ಸು ।
ಅಮ್ಮ-ಹಿಟ್ಟಾನೆ ಇಟ್ಟುಕೊಡಿ । ಸು । ಹೊತ್ತುಕೊಂಡು ಹೋಗುತೀನಿ । ಸು ।
ಹಿಟ್ಟಾನೆ ಇಟ್ಟುಕೊಟ್ರೆ । ಸು । ತಾನೇಯೆ ಹೊತ್ತುಕೊಂಡು । ಸು ।
ಹೊರಟಾಳ್ ಹಿರಿದಿಮ್ಮವ್ವ । ಸು । ಚಿಕ್ಕೋಳ್ ಹಿರಿದಿಮ್ಮವ್ವ । ಸು ।
ನಿಮ್ಮಣ್ಣದೀರು ಬಯ್ಯುತಾರೆ । ಸು । ನೀವೆಲ್ಲ ಇದ್ದಂಗೆ । ಸು ।
ಅವಳಮ್ಯಾಲೆ ಹೊರಿಸಿದ್ದೀರ । ಸು । ಅಂಗಂದು ನಿಮ್ಮಣ್ಣದೀರು । ಸು ।
ಬಯ್ಯುತಾರೆಕಾಣಮ್ಮ । ಸು । ಹೇಳ್ಯಾರೆ ಅವರೀಗ । ಸು ।
ಅವಳಂಗೂವೆ ಹೊತ್ತುಕೊಂಡು । ಸು । ಹೊರಟಾಳೆ ಬಿರಬಿರನೆ । ಸು ।
ಬಿರಬಿರನೆ ಬರುವಾಗ । ಸು । ಕಗ್ಗಲ್ಲ ಕಣವೇಲಿ । ಸು ।
ಬಿಳಿಕಲ್ಲಬಾರೇಲಿ । ಸು । ಬೇಡರ ಬೊಮ್ಮಲಿಂಗ । ಸು ।
ಅವನು-ದನಗಳ ಕಾಯುತಾನೆ । ಸು । ಚಿಕ್ಕೋಳ್ ಹಿರಿದಿಮ್ಮವ್ವ । ಸು ।
ಹಿಟ್‌ಹೊತ್ಕೊಂಡು ಬರುತಾಳೆ । ಸು । ಕಗ್ಗಲ್ಲ ಕಣಿವ್ಯಾಗೆ । ಸು ।
ಒಬ್ಬಾಳೆ ಬರುವಾಗ । ಸು । ಬೇಡರ ಬೊಮ್ಮೈಲಿಂಗ । ಸು ।
ಅವನು-ದಾರೀಯ ಕಾದಾನೆ । ಸು । ಒಬ್ಬಾಳೆ ಬರುತಾಳೆ । ಸು ।
ಅಡ್ಡಬಳಸಿ ಬಂದು । ಸು । ಏನುಮಾತನಾಡುತಾನೆ । ಸು ।
ಚಿಕ್ಕೋಳೆ ಹಿರಿದಿಮ್ಮವ್ವ । ಸು । ಸಿಕ್ಕಿದೇನೆ ದಕ್ಕಿದೇನೆ । ಸು ।
ಮುತ್ತಿನ ಮುಂಜರಗ ಹಿಡಿದ । ಸು । ಚಿಕ್ಕೋಳೆ ಹಿರಿದಿಮ್ಮವ್ವ । ಸು ।
ಸಿಕ್ಕಿದೇನೆ ದಕ್ಕಿದೇನೆ । ಸು । ಬೇಡರ ಬೊಮ್ಮೈಲಿಂಗ । ಸು ।
ಸಿಕ್ಕಲಿಲ್ಲ ದಕ್ಕಲಿಲ್ಲ । ಸು । ಬಿಡಯ್ಯ ನನ್ನಸೆರಗ । ಸು ।
ನಮ್ಮ-ಏಳುಜನ ಅಣ್ಣದೀರು । ಸು । ಏಳು ಏಟ ಹೊಡೆದಾರು । ಸು ।
ತಲೆಯ ಚೆಂಡಾಡುತಾರೆ । ಸು । ಅಂಗಂದು ಹೊರಟಾಳು । ಸು ।
ಅವಳು-ಸಿಕ್ಕಲಿಲ್ಲ ದಕ್ಕಲಿಲ್ಲ । ಸು । ಅವಳು-ಹೋಗುತಾಳೆ ಬಿರಬಿರನೆ । ಸು ।
ಏಳುಜನ ಅಣ್ಣದೀರು । ಸು । ಬೇಸಾಯ್ನ ಹೊಡೆಯುವಾಗ । ಸು ।
ಎಲ್ಲಕಿಂತ ಹಿರಿಯೋನು । ಸು । ತಲೆಯೆತ್ತಿ ನೋಡ್ಯಾನೆ । ಸು ।
ಏನುಮಾತ ಹೇಳುತಾನೆ । ಸು । ಆರುಜನ ತಮ್ಮದೀರ । ಸು ।
ಚಿಕ್ಕೋಳ್ ಹಿರಿದಿಮ್ಮವ್ವ । ಸು । ಹಿಟ್‌ಹೊತ್ಕೊಂಡ್ ಬರುತಾಳೆ । ಸು ।
ಏಳುಜನ ಮುಂಡೇರು । ಸು । ಮನೆಯಾಗ್ ಏನುಮಾಡುತಾರೆ । ಸು ।
ಹಿಟ್‌ಹೊತ್‌ಕೊಂಡ್ ಬರುತಾಳೆ । ಸು । ಯಾರಾನ ಹೋಗಿರೊ । ಸು ।
ಹಿಟ್ಟೇನ ಕುಕ್ಕೇಯ । ಸು । ತಕ್ಕೊಂಡು ಬಂದಾರು । ಸು ।
ಬೇಸಾಯ ನಿಲಿಸಾರೆ । ಸು । ಅವರು-ಊಟವ ಮಾಡುತಾರೆ । ಸು ।

ಏಳುಜನ ಅಣ್ಣದೀರ್ಗೆ | ಸು | ಊಟಕೆ ನೀಡುತಾಳೆ | ಸು |
ಎಲ್ಲಕಿಂತ ಹಿರಿಯೋನು | ಸು | ಏನುಮಾತನಾಡುತಾನೆ | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ತಲೆಯಾಕೆ ಕೆದರ್‍ಯಾವೆ | ಸು |
ತಲೆಯಾಕೆ ಕೆದರ್‍ಯಾದೆ | ಸು | ಮೊಕವ್ಯಾಕೆ ಬಾಡ್ಯಾದೆ | ಸು |
ಕಗ್ಗಲ್ಲ ಕಣಿವೇಲಿ | ಸು | ಒಬ್ಬಳೆ ಬರುತಿದ್ದೆ | ಸು |
ಒಬ್ಬಾಳೆ ಬರುವಾಗ | ಸು | ಕರಡೀಯ ಬಂದೀತು | ಸು |
ಓಡೋಡಿ ಬಂದೇನು | ಸು | ಕಗ್ಗಲ್ಲ ಕಣಿವೇಲಿ | ಸು |
ಓಡೋಡಿ ಬರುವಾಗ | ಸು | ಮುಳ್ಳಾನೆ ತಗಲೈತೆ | ಸು |
ಅಂಗಂದ ಮಾತಿಗೆ | ಸು | ಅವರು-ಸುಮ್ಮನೆ ಆದರು | ಸು |
ಎಲ್ಲಕಿಂತ ಹಿರಿಯೋನು | ಸು | ಏನುಮಾತ ಹೇಳುತಾನೆ | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ಊರ ಮಗ್ಗಲೀಗೆ | ಸು |
ಕಣವೇ ತಟಾದು ಬನ್ನಿ | ಸು | ಬಿಟ್ಟುಬನ್ನಿರೊ ನೀವು | ಸು |
ಅಣ್ಣನು ತಂಗಿಯು | ಸು | ಹೊರಟಾರೊ ಬೇಗದಿಂದ | ಸು |
ಬೇಡರ ಬೊಮ್ಮೈಲಿಂಗಗೆ | ಸು | ಊಟಕೆ ನೀಡುತಾಳೆ | ಸು |
ಊಟಕೆ ಇಟ್ವಾಳು | ಸು | ಹೊರಟಾಳು ಬೇಗದಿಂದ | ಸು |
ಕಗ್ಗಲ್ಲ ತಟಾದು | ಸು | ಮುಂದಾಕೆ ಬಿಟ್ಟು ಬಿಟ್ಟು | ಸು |
ಅವರಣ್ಣ ಹಿಂದಿರುಗಿ ಬರುತಾನೆ | ಸು | ಅವಳರಮನೆಗೆ ಹೋದಾಳು | ಸು |
ಅರಮನೆಗೆ ಹೋದಾಳು | ಸು | ಹಿಟ್ಟೀನ ಕುಕ್ಕೇಯ | ಸು |
ಒಳೀಕೆ ಮಡಿಗ್ಯಾಳು | ಸು | ಹಿತ್ತಲಿಗೆ ಹೋದಾಳು | ಸು |
ಅವಳು ಒಳೀಕೆ ಬರಲಿಲ್ಲ | ಸು | ನುಗ್ಗೇಯ ಮರದಡಿ | ಸು |
ಮನಗವಳ್ ಹಿರಿದಿಮ್ಮವ್ವ | ಸು | ಏಳುಜನ ಅತ್ತಿಗೇರು | ಸು |
ಏನುಮಾತನಾಡುತಾರೆ | ಸು | ಚಿಕ್ಕೋಳ್ ಹಿರಿದಿಮ್ಮವ್ವ | ಸು |

ಹಿತ್ತಲಿಗೆ ಹೋದಾಳು | ಸು | ಯಾತಕೊ ಬರಲಿಲ್ಲ | ಸು |
ಏಳುಜನ ಅತ್ತಿಗೇರು | ಸು | ಹೋಗಿನ್ನ ನೋಡುವರು | ಸು |
ನುಗ್ಗೇಯಮರದಡಿ | ಸು | ಒಬ್ಬಳೆ ಮನಗವಳೆ | ಸು |
ಚಿಕ್ಕೋಳು ಹಿರಿದಿಮ್ಮವ್ವ | ಸು | ಇಲ್ಯಾಕೆ ಮನಗಿದ್ದಿ | ಸು |
ಏಳುಜನ ಅತ್ತಿಗೇರು | ಸು | ಕೇಳ್ಯಾರೆ ಬೇಗದಿಂದ | ಸು |
ಚಿಕ್ಕೋಳು ಹಿರಿದಿಮ್ಮವ್ವ | ಸು | ಮೈಯ್ಯಾನೆ ನೆರೆದವಳೆ | ಸು |
ನಾನ್ಯಾಕೊ ಬರವೊಲ್ಲೆ | ಸು | ಅಂಗಂದ ಮಾತಿಗೆ | ಸು |
ಏಳುಜನ ಅತ್ತಿಗೇರು | ಸು | ಬಾಳ ಸಡಗರದಿಂದ | ಸು |
ಬಾಳ ಹೆಚ್ಚಳದಿಂದ | ಸು | ಅವರಣ್ಣದೀರ ಹತ್ತಿರಕ್ಕೆ | ಸು |
ಬಾರೇಯ ಹೊಲತಾಕೆ | ಸು | ಅವರಾಳಾನೆ ಕಳಿವ್ಯಾರೆ | ಸು |
ಏಳುಜನ ಅಣ್ಣದೀರು | ಸು | ಚಿಕ್ಕೋಳ್ ಹಿರಿದಿಮ್ಮವ್ವ | ಸು |
ಮೈಯ್ಯಾನೆ ನೆರೆದಾಳೆ | ಸು | ಅಂಗಂದು ಹೇಳುಹೊತ್ಗೆ | ಸು |
ಏಳುಜನ ಅಣ್ಣದೀರು | ಸು | ಬಾಳ ಸಡಗರದಿಂದ | ಸು |

ಬಾಳ ಹೆಚ್ಚಳದಿಂದ | ಸು | ಬೇಸಾಯ್ನ ಬಿಟ್ಟುಕೊಂಡು | ಸು |
ಬಂದಾರಂದರಮನೆಗೆ | ಸು | ಬಂದಾರು ಬೇಗದಿಂದ | ಸು |
ಎತ್ತುಗಳ ಕಟ್ಟಬಿಟ್ಟು | ಸು | ಏನುಮಾತನಾಡುತಾರೆ | ಸು |
ಏಳುಜನ ಅಣ್ಣದೀರು | ಸು | ಚಿಕ್ಕೋಳ್ ಹಿರಿದಿಮ್ಮವ್ವಗೆ | ಸು |
ಗುಡ್ಲನ್ನೆ ಹಾಕಬೇಕು | ಸು | ಏಳುಜನ ಅಣ್ಣದೀರ್ಗೆ | ಸು |
ಒಬ್ಬಾಳೆ ತಂಗ್ಯಲ್ಲೊ | ಸು | ಬಾಳ ಅದ್ದೂರಿಯಾಗಿ | ಸು |
ಮಾಡಬೇಕು ನಾವೀಗ | ಸು | ಬಾಳ ಅದ್ದೂರಿಯಿಂದ | ಸು |
ಮಾಡುತಾರೆ ಅವರೀಗ | ಸು | ಗುಡಲನೆ ಹಾಕ್ಯಾರೆ | ಸು |
ಚಿಕ್ಕೋಳ್ ಹಿರಿದಿಮ್ಮವ್ವೆ | ಸು | ರಾತೂರೆ ಅವರೀಗ | ಸು |
ಕಾಯಿಕೊಂಡೆ ಮನಿಗವರೆ | ಸು | ಚಿಕ್ಕೋಳ್ ಹಿರಿದಿಮ್ಮವ್ವ | ಸು |
ಹಿಂಗೇಯೆ ಮಲಗಿದ್ರು | ಸು | ಬೇಡರ ಬೊಮ್ಮೇಲಿಂಗ | ಸು |
ಕೊಪರೀಯ ಎಸೆದಾನೆ | ಸು | ಚಿಕ್ಕೋಳು ಹಿರಿದಿಮ್ಮವ್ವಗೆ | ಸು |
ಗುಡಲಾನೆ ಒಳಕೀಗ | ಸು | ಕೊಪರೀಯ ಎಸೆದಾನೆ | ಸು |
ಗುಡಲೀಗೆ ಎಸೆದಾನೆ | ಸು | ಅವಳಾಚೀಗೆ ಎಸೆದಾಳೆ | ಸು |
ಆಚೀಗೆ ಎಸೆವಾಗ | ಸು | ಬಳೆಯು ಲಳೀರಂದೊ | ಸು |
ಏಳುಜನ ಅಣ್ಣದೀರು | ಸು | ಏನಂದುಕೊಳುತಾರೆ | ಸು |
ಚಿಕ್ಕೋಳೆ ಹಿರಿದಿಮ್ಮವ್ವ | ಸು | ಬಳೆಯಾಕೆ ಲಳಿರಂದೊ | ಸು |
ಅಂದಿನ್ನು ಕೇಳ್ಯಾರೆ | ಸು | ಅಂದಿನ್ನು ಕೇಳುವಾಗ | ಸು |
ಏನಂದು ಹೇಳುತಾಳೆ | ಸು | ತುಪ್ಪದ ಜಿಡ್ಡಿಗೆ | ಸು |
ಇರುಬೇಯು ಮುತ್ತಿದೊ | ಸು | ಇರುಬೇಯ ಕೊಡಬಿದೆ | ಸು |
ಬೇಡರ ಬೊಮ್ಮೇಲಿಂಗ | ಸು | ಬೆಲ್ಲಾದ ಉಂಡೇಯ | ಸು |
ಗುಡಲೀಗೆ ಎಸುದಾನೆ | ಸು | ಅವಳ್ ಹಿಂದಾಕೆ ಎಸುದಾಳೆ | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ಗೆಜ್ಜ್ಯಾಕೆ ಗಲಿರಂದೊ | ಸು |
ಅಂಗಂದು ಕೇಳುವಾಗ | ಸು | ಏನೆಂದು ಹೇಳುತಾಳೆ | ಸು |
ಬೆಲ್ಲಾದ ಜಿಡ್ಡಿಗೆ | ಸು | ಗೊದ್ದಾವೆ ಮುತ್ತೀದೊ | ಸು |
ಗೊದ್ದಾವ ಕೊಡವೀದೆ | ಸು | ಗೆಜ್ಜೇಯಗಲಿರಂದೊ | ಸು |
ಅಂಗಂದ ಮಾತಿಗೆ | ಸು | ಅವರು-ಸುಮ್ಮನೆ ಆದಾರೆ | ಸು |
ಏಳುಜನ ಅಣದೀರು | ಸು | ಮಾವಾನ ಕರಿಸಿಕೊಂಡು | ಸು |
ಸೋಬಾನ ಗೊತ್ತುಮಾಡಿ | ಸು | ಹದಿನಾರು ದಿವಸಕ್ಕೆ | ಸು |
ಸೋಬ್ಬಾನ ಮಾಡಿಕಳ್ಳಿ | ಸು | ನಾನು-ಸೋಬ್ಬಾವ ಮಾಡಿಬಿಟ್ಟು | ಸು |
ಕಣ್ಣಾಗೆ ನೋಡಬೇಕು | ಸು | ಹದಿನಾರುದಿವಸಕ್ಕೆ | ಸು |
ಅವರು ಸೋಬ್ಬಾವ ಮಾಡುತಾರೆ | ಸು | ಸೋಬ್ಬಾವ ಮಾಡಿದರು
ಏನುಮಾತನಾಡುತಾರೆ | ಸು | ನೆಂಟರೆಲ್ಲರ ಕಳಿಸಿ | ಸು |
ತಿಂಗಳು ನಾವಿನ್ನು | ಸು | ಎಷ್ಟುದಿನಕೆ ಮಾಡಬೇಕು | ಸು |
ಒಂದು ತಿಂಗಳು ಕಳುವಲ್ಲ | ಸು | ಅಂಗಂದು ಅವರೀಗೆ | ಸು |
ಮಾತಾನೆ ಆಡಿಕೊಂಡ್ರು | ಸು | ತಿಂಗಳು ತುಂಬಿತು | ಸು |

ಚಿಕ್ಕೋಳು ಹಿರಿದಿಮ್ಮವ್ವ | ಸು | ಕಳಿಸೀಯೆ ಕೊಡಬೇಕು | ಸು |
ಬೇಕಾದ ಅಡಿಗೂಟ | ಸು | ಮಾಡ್ಯಾರೆ ಬೇಗದಿಂದ | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ತಲೆಯಾನೆ ಬಾಚ್ಯಾರು | ಸು |
ಅರಿಸಣ ಕುಂಕುಮವಿಟ್ಟು | ಸು | ಹೊಸಸೀರೆ ಹೊಸರವಕೆ | ಸು |
ಇಟ್ಯಾರುಬೇಗದಿಂದ | ಸು | ಏಳುಜನ ಅತ್ತಿಗೇರೆ | ಸು |
ಒಬ್ಬಾಳೆ ನಾದೂನಿ | ಸು | ಅವರು ಮಾತಾನೆ ಆಡಿಕೊಂಡು | ಸು |
ಮಡಿಲಕ್ಕಿ ಹೂದಾರು | ಸು | ಮಡಲಕ್ಕಿ ಹುಯ್ದಿನ್ನ | ಸು |
ಸಾಗುಗಳುವ್ಯಾರೀಗ | ಸು | ಏಳುಜನ ಅಣ್ಣದಿರಿಗೆ | ಸು |
ಕಾಲೀಗೆ ಬಿದ್ದಾಳೆ | ಸು | ಏಳುಜನ ಅತ್ತಿಗೇರ್ಗೆ | ಸು |
ಕಾಲೀಗೆ ಬಿದ್ದಾಳೆ | ಸು | ಚಿಕ್ಕೋಳ್ ಹಿರಿದಿಮ್ಮವ್ವ | ಸು |
ಕಳಿಸೀಯೆ ಕೊಟ್ಟಾರೆ | ಸು |

## 2

ಗಂಡsನು ಹೆಂಡsತಿ ಸುವ್ವಲಾಲೆ
ಅವರಿಬ್ಬರೆ ಹೊರಟಾರು ಸುವ್ವಲಾಲೆ

ಹೋಗಂದು ಹೋಗುವಾಗ | ಸು | ಚಿಕ್ಕೋಳ್ ಹಿರಿದಿಮ್ಮವ್ವ | ಸು |
ಒಂದು ನಾಯಾನೆ ಸಾಕಿದ್ಲು | ಸು | ನಾಯೂವೆ ಹೊರಟೀತು | ಸು |
ನಾಯೂವೆ ಹೋಗುತಾದೆ | ಸು | ಬೇಡರ ಬೊಮ್ಮೆವಲಿಂಗ | ಸು |
ಬೆನ್ನಾಡಿ ಹೋಗುತಾನೆ | ಸು | ಅರೆದಾರೀಲಿ ಹೊರಟಾನೆ | ಸು |
ಬೆನ್ನಾಡಿ ಹೋಗುತಾನೆ | ಸು | ಎಷ್ಟಾನೆ ಹೇಳಿದರು | ಸು |
ಅವನು ಕೇಳೋದೆ ಇಲ್ಲವಲ್ಲ | ಸು | ನಾಯೂವೆ ಹೋಗುತದೆ | ಸು |
ಅವನೂವೆ ಹೋಗುತಾನೆ | ಸು | ಹೋಗೊಂದ ಹೋಗುತಾರೆ | ಸು |
ಆರಂದ ಅಡವೀಲಿ | ಸು | ಒಂದು ಬಾವಿಯ ತಾವು | ಸು |
ಕಲ್ಲು ಬಾವೀಯ ತಾವು | ಸು | ಬುತ್ತಿಯ ಉಣಲೆಂದು | ಸು |
ಅಂಗಂದು ಕುಳಿತಾರು | ಸು | ಕೈಕಾಲ ಮೊಕ ತೊಳೆದು | ಸು |
ಎಲಿಯಾಸಿ ಕೂತುಕೊಂಡು | ಸು | ಊಟಾವ ಮಾಡುವಾಗ | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ಬೇಡರ ಬೊಮ್ಮೇಲಿಂಗಗೆ | ಸು |
ಬುತ್ತಿಯ ನೀಡುತಾರೆ | ಸು | ಗಂಡಾಗು ಅವನೀಗು | ಸು |
ಚಿಕ್ಕೋಳು ಹಿರಿದಿಮ್ಮವ್ವ | ಸು | ಅವಳು ಬಿತ್ತೀಯ ನೀಡಿದಳು | ಸು |
ಅವಳು ಸುಮ್ಮನೆ ನಿಂತವಳೆ | ಸು | ಬೇಡರ ಬೊಮ್ಮೇಲಿಂಗ | ಸು |

ಚಂದ್ರಾಯ್ದು ತಕ್ಕೊಂಡು | ಸು | ಒಂದೇ ಏಟಿಗೆ ಹೊಡ್ದ | ಸು |
ಒಂದೇ ಏಟಿಗೆ ಕಡಿದ | ಸು | ಒಂದು ತುತ್ತು ಬಾಯಾಗೆ | ಸು |
ಒಂದು ತುತ್ತು ಕೈಯಾಗೆ | ಸು | ಎರಡೇಯ ತುಂಡೀಗೆ | ಸು |

ಕಡದೇಯೆ ಬುಟ್ಟನಲ್ಲೊ । ಸು । ಚಿಕ್ಕೋಳು ಹಿರಿದಿಮ್ಮವ್ವ । ಸು ।

ಏನುಮಾತ ಹೇಳುತಾಳೆ । ಸು । ನೀನೇಯೆ ಗಂಡಕಾಣೊ । ಸು ।

ನಾನೇಯೆ ಹೆಂಡ್ತಿ ಕಾಣೊ । ಸು । ಬೇಡರು ಬೊಮ್ಮೇಲಿಂಗ । ಸು ।

ಬುತ್ತೀಯ ಉಣಬಾರೊ । ಸು । ಊಟಾಕೆ ನೀಡ್ಯಾಳೆ । ಸು ।

ಊಟಾವ ಮಾಡುತಾನೆ । ಸು । ಚಂದ್ರಾಯ್ದ ತಕ್ಕೊಂಡು । ಸು ।

ಬೇಡರ ಬೊಮ್ಮೇಲಿಂಗ್ನ । ಸು । ಅವಳು ಕಡಿದೇಯೆ ಬಿಟ್ಟಾಳು । ಸು ।

ಗಂಡಾನ ಕಡಿದಾಗ । ಸು । ಹಿರಿದಿಮ್ಮಿ ಸಾಕಿದನಾಯಿ । ಸು ।

ನೆತ್ತರದಲ್ಲೊದ್ದಾಡಿ । ಸು । ಮನೆತಾಕೆ ಓಡೋಯ್ತು । ಸು ।

ಮನೆತಕ್ಕ ಓಡೋಗಿ । ಸು । ಏಳುಜನ ಅಣ್ಣದೀರ್‍ನ । ಸು ।

ಗುಯ್ಯ ಗುಯ್ಯ ಅನ್ನುತಾದೆ । ಸು । ಸುತ್ತಬಳಸಿ ಬರುತಾದೆ । ಸು ।

ಏಳುಜನ ಅಣ್ಣದೀರು । ಸು । ಏನು ಮಾತನಾಡುತಾರೆ । ಸು ।

ಇದು ಯಾರ ನಾಯಿ । ಸು । ಚಿಕ್ಕೋಳ್ ಹಿರಿದಿಮ್ಮವ್ವ । ಸು ।

ಸಾಕೀದ ನಾಯೀಯು । ಸು । ನೋಡ್ಯಾರೊ ಅವರೀಗ । ಸು ।

ಇದು ಏನು ಚೋಜಿಗವೊ । ಸು । ನಾಯಿ ನೆತ್ತರದಲ್ಲಿ । ಸು ।

ಒದ್ದಾಡಿ ಬಂದೈತೆ । ಸು । ಏಳು ಜನ ಅಣ್ಣದೀರು । ಸು ।

ಹುಡಿಕೊಂಡು ಬರುತಾರೆ । ಸು । ಚಿಕ್ಕೋಳ್ ಹಿರಿದಿಮ್ಮವ್ವ । ಸು ।

ಗಂಡನ ತಲೆಯಾನೆ । ಸು । ಮಡಿಲಾಗೆ ಕಟ್ಟಿಕೊಂಡು । ಸು ।

ಬೊಮ್ಮವಲಿಂಗನ ತಲೆಯ । ಸು । ಕಾಲಾಗೆ ಒದ್ದುಕೊಂಡು । ಸು ।

ಅತ್ತಲಿಂದ ಬರುತಾಳೆ । ಸು । ಅವರು ಏಳುಜನ ಅಣ್ಣದೀರು । ಸು ।

ಅವರು ಇತ್ತಲಿಂದ ಹೋಗುತಾರೆ । ಸು । ಅವರು ಏಳುಜನ ಅಣ್ಣದೀರು । ಸು ।

ಚಿಕ್ಕೋಳ್ ಹಿರಿದಿಮ್ಮವ್ವ । ಸು । ಹಿಂದಿರುಗಿ ಬರುತಾಳೆ । ಸು ।

ಇದು ಏನು ಚೋಜಿಗವೊ । ಸು । ಅಂದಿನ್ನ ಬಂದಾರೊ । ಸು ।

ಗಂಡಾನ ತಲೆಯನ್ನು । ಸು । ಮಡಿಲಾಗೆ ಕಟ್ಟಿಕೊಂಡು । ಸು ।

ಬೊಮ್ಮವಲಿಂಗನ ತಲೆಯ । ಸು । ಕಾಲಾಗೆ ಒದ್ದೊಕೊಂಡು । ಸು ।

ಬರುತಾಳೆ ಬೇಗದಿಂದ । ಸು । ಏಳುಜನ ಅಣ್ಣದೀರ್‍ಗ । ಸು ।

ಏನುಮಾತ ಹೇಳುತಾಳೆ । ಸು । ಸಿರಿಗಂಧದ ಸೌದೇಯ । ಸು ।

ತರಸೀರೊ ಬೇಗದಿಂದ । ಸು । ಕೆಂಡಕೊಂಡ ಆಗುತೀನಿ । ಸು ।

ಭೂಮಿಮ್ಯಾಲ್ ಇರೋದಿಲ್ಲ । ಸು । ಏನುಮಾತ ಆಡುತೀಯ । ಸು ।

ಏಳುಜನ ಅಣ್ಣದೀರು । ಸು । ನಾವು ಏಳು ತುತ್ತು ಅಂದರು । ಸು ।

ನಿನ್ನ ಕತೆ ಆಯಿತವ್ವ । ಸು । ಏಳುಜನ ಅಣ್ಣದೀರು । ಸು ।

ನೀನೊಬ್ಬ ತಮ್ಮ ಕಾಣೆ । ಸು । ಎಂಟುಜನ ಅಣ್ಣತಮ್ಮದೀರು । ಸು ।

ಅನ್ನತೀವಿ ಕಾಣವ್ವ । ಸು । ಅಂಗಂದು ಅಣ್ಣದೀರು । ಸು ।

ಹೇಳುತಾರೆ ಅವರೀಗ । ಸು । ಹೇಳುವಾಗ ಅವರಿನ್ನ । ಸು ।

ಈ ಜಲ್ಮ ನಾನೀಗ । ಸು । ಧರಣಿಮ್ಯಾಲೆ ಮಡಗೂದಿಲ್ಲ । ಸು ।

ಏಳುಗಾಡಿ ಸೌದೇಯ । ಸು । ತರಿಸ್ಯಾರೆ ಬೇಗದಿಂದ । ಸು ।

ಚಿಕ್ಕೋಳ್ ಹಿರಿದಿಮ್ಮವ್ವ | ಸು | ಕೆಂಡಕೊಂಡನಾಗುತಾಳೆ | ಸು |
ಗಂಡಾನ ತಲೆಯನ್ನು | ಸು | ತಲೆಕಡೆ ಮಡಿಕೊಂಡು | ಸು |
ಬೆಮ್ಮೆವಲಿಂಗನ ತಲೆಯ | ಸು | ಅವಳು ಕಾಲಕಡೆ ಮಡಿಕೊಂಡು | ಸು |
ಚಿಕ್ಕೋಳ್ ಹಿರಿದಿಮ್ಮವ್ವ | ಸು | ಕೆಂಡಕೊಂಡನಾದಾಳೆ | ಸು |

---

* ಚಿಕ್ಕೋಳು ಹಿರಿದಿಮ್ಮವ್ವ; ಪರಮಶಿವಯ್ಯ ಜೀ.ಶಂ. ಜಾನಪದ ಖಂಡ ಕಾವ್ಯಗಳು, ಶಾರದಾಮಂದಿರ, ಮೈಸೂರು-೧೯೭೮, ಪು.ಸಂ. : ೭೯-೮೭

## ೪೧. ಎಳೆಯನು ಕೆಂಗಪ್ಪ ಎಳಗನಾ ತಗರ ಸಾಕಿ *

ಎಳೆಯನು ಕೆಂಗಪ್ಪ ಎಳಗನಾ ತಗರ ಸಾಕಿ
ಎಳ್ಳು ಹೊಲದಲ್ಲಿ ಮಕಮನಸು-ಮಾಡಿಕೊಂಡು
ಹೋದನೆಲ್ಲಿನೂರ ದುರುಗಕೆ
ಎಲಿನೂರದಲ್ಲಿ ನೀರಿಲ್ಲ ನೆರಳಿಲ್ಲ
ಹಸುಮಗನೆ ಕೆಂಗಪ್ಪ ನೀನೆಂಗೆ ನೆಡದಿಯೊ

ಹಾಸಿಪ್ಪೇ ಮರದ ನೆರಳಾಗೆ ಕೆಂಗಪ್ಪ
ಹಸ್ ಅಂದು ಕುದುರೆಯ ಇಳಿದಾನೊ-ಕೆಂಗಪ್ಪ
ಅಲ್ಲಿ ಮಾಡ್ಯಾನೊ ಸುಕನಿದ್ರೆ

ಅಲ್ಲಿ ಕೆಂಗಪ್ಪಗೆ ಸುಕನಿದ್ರೆ ಆಗುವಾಗ
ಏಳು ಮಂದಿ ಸೂಳೇರು ನೀರಿಗ್ಹೋಗಿ-ಕೇಳ್ಯಾರಲ್ಲೊ
ಯಾವ ಸೀಮೆನಯ್ಯ ನೀನು

ಹಳ್ಳಿಕಾರನಲ್ಲ ಹಳ್ಳಿ ಗೌಡನಲ್ಲ
ಬದ್ರೆ ಚಿಕ್ಕಮ್ಮನ ಮಗ ಕಾಣೆ

ಬದ್ರೆ ಚಿಕ್ಕಮ್ಮನ ಮಗನಾದರೇನಾಯಿತು
ಹೋಗಾನ ನಡಿಯೊ ಅರಮನೆಗೆ

ಅರಮನೆಗೆ ಹೋಗಾಕೆ ಕುಲದಲ್ಲಿ ಬೇಡತಿಯಲ್ಲೆ
ನಂದಗೋಕುಲ ನಮದಲ್ಲೆ-ಬೇಡರ ಹುಡುಗಿ
ನಂದಗೋಕುಲ ನಮದಲ್ಲೆ

ನಂದ ಗೋಕುಲವೇ ನಮದಲ್ಲೆ ಹುಡುಗಿ
ಹಿಂದವರೆ ನಮ್ಮ ಹಿರಿಯೋರು-ಬೇಡರ ಹುಡುಗಿ
ನ್ಯಾಯವು ಬಂದಾವು ಕುಲದಲ್ಲಿ

ನ್ಯಾಯ ಬಂದರೆ ಮಾಯಮಾಡೋದು ಬಲ್ಲೆ
ಹೋಗಾನ ನಡಿಯೊ ಅರಮನಿಗೆ

ಅರಮನಿಗೆ ಹೋಗಾಕೆ ಕುಲದಲ್ಲಿ ಬೇಡತಿಯಲ್ಲೆ
ಕೃಷ್ಣ ಗೋಕುಲವೆ ನಮದಲ್ಲೆ

ಏಟ ಹೇಳಿದರೂ ಕೇಳನಲ್ಲೆ ಈ ಗೊಲ್ಲ
ಏನು ಮಾಡಲಿ ಇವನೀಗೆ

ನಾಗಳ ಹೂವ ಹಾಸ್ಯಾಳೊ ನಾಗಳ ಹೂವ ಹರಡ್ಯಾಳೊ
ಸಾಲ ದೀವಿಗೆ ಉರಿಸ್ಯಾಳೊ - ಬೇಡರ ಹುಡುಗಿ
ಸಾಲ ಮಂಚಕೆ ಕರೆದಾಳೊ

ಇಕ್ಕಳ ಹೂವ ಹಾಸ್ಯಾಳೊ ಇಕ್ಕಳ ಹೂವ ಹರಡ್ಯಾಳೊ
ಸುತ್ತ ದೀವಟಿಗೆ ಉರಿಸ್ಯಾಳೊ-ಬೇಡರ ಹುಡುಗಿ
ಪಟ್ಟೆಮಂಚಕೆ ಕರೆದಾಳೊ

ಮಂಚದಾ ಗೌಡ ಮಂಚಕೆ ಬರುವಾಗ
ಮಂಚದ ಮೇಲೆ ಎರಡು ಅರಗಿಣಿ-ಕೂತುಗಂಡು
ಮಂಚಕೆ ಕೆಂಗಪ್ಪ ಬರಬೇಡ-ಬೇಡರ ಹುಡುಗಿ
ಲಂಚದಿಂದ ತಲೆಯ ಹೊಡಿಸ್ಯಾಳೊ

ಸೂಳೆಯ ಹೋಗದಿರೊ ಸುಲಿವಲ್ಲ ಕೆಂಗಪ್ಪ
ಅರುವರ ಮನೆಯ ಗೌಡಿಯ - ಹೋಗಕಿಂತ
ಹಲ್ಲ ಮಕ್ಕಳಿಸಿ ಉಗಿಯಯ್ಯ

ಬೇಡತಿ ಸಂಗ ಬ್ಯಾಡ ಕಾಣೊ ಕೆಂಗಪ್ಪ
ಬೇಡತಿ ನಮ್ಮ ಬೆಡಗು ಅರಿಯಳು-ಸಭೆಯರ ಮುಂದೆ
ಬಾರೆಂದೇ ಸೆರಗ ಹಿಡದಾಳು

ಸೂಳೆಮನೆ ಮುಂದೆ ಸುಳಿದಿರೊ ಕೆಂಗಪ್ಪ
ಆನೆ ಕಟ್ಯಾಳೊ ನಿನ ಮೇಲೆ-ಅಡಿಕೆಯ
ಹೋಳ ಕಟ್ಯಾಳೊ ಸೆರಗೀಗೆ

ಅರು ಕಾಲೇಣಿ ಏರಿ ಹುವ್ವ ಕುಯ್ಯೋನೆ
ಯಾರ್‍ಯಾರಿಗೆ ಹುವ್ವ ಕುಯ್ಯುತಿರೊ-ಎಲೆನೂರ
ಹಾ ಬೇಡರ ಹುಡುಗಿಯ ತುರುಬಿಗೆ

ಆಚೆ ಕೇರಿಲ್ಲಿ ಸೋಜಿಗವೇನಮ್ಮ
ಚೂಜಿಯ ಮೇಲೆಗಳು ಬೀಸಿ-ಕೆಂಗಪ್ಪ
ಸೂಳಿಗೆ ಕಟ್ಟಿಸ್ಯಾನೊ ಅರಮನೆಯ

ಸೂಳಿಯ ಮನೆಗೆ ದಾಳಿಂಬೆ ಕದವೇಕೊ
ಜಂಬುಲೋಕದ ಅಗಣಿಯಾಕೊ-ಕೆಂಗಪ್ಪ
ಬಾಸೆ ಯಾಕೊ ನಿನ್ನ ಬಲಗೈಲಿ

ಕಟ್ಟೆ ಹಿಂದಲಕ ತೋಟ ಇಪ್ಪೆ ಹೂವಿನ ನಾತ
ಹೊಂದಿಕೊಂಡವನೆ ಬಿಡಿರಮ್ಮ
ಏರಿ ಹಿಂದಲ ತೋಟ ಹೀರೆ ಹೂವಿನ ನಾತ
ಸೇರಿಕೊಂಡವನೆ ಬಿಡರಮ್ಮ

ಬಿಡಿ ನಮ್ಮ ಈರನಾ ಬಿಡಿ ನಮ್ಮ ಸೂರನಾ
ಸೇರಕ್ಕಿ ಉಣ್ಣೊ ಚಲುವನ-ಕೆಂಗಪ್ಪನ
ಬಿಡಿರೇ ಬಳ್ಳಾರಿ ಬಸವೀರ

ವಪ್ಪಿ ಮಾಡಿಸಿದ ಪಟ್ಟೆಮಂಚದ ಮೇಲೆ
ನಿಸ್ತ್ರೇರ ಕೂಡಿ ಪಗಡೆಯ-ಚಂಡಾಡುವಾಗ
ಕತ್ತಿ ಮಸ್ತಾರೊ ಒಳಮಲ್ಲಿ

ಹೇಳಿ ಮಾಡಿಸ್ದ ಸಾಲಿ ಮಂಚದ ಮೇಲೆ
ನಾರಿಯ ಕೂಟೆ ಪಗಡೆಯ ಚಂಡಾಡುವಾಗ
ಚೂರಿ ಮಸ್ತಾರೊ ಒಳಮಲ್ಲಿ

ಸೂಳೆಗೆ ಹೋದೋನು ಸುಮ್ಮಗೆ ಬರಲಿಲ್ಲ
ಸೂಳೇರ ಅಣ್ಣದೀರ ಸುಣ್ಣಕಾಯಿ ಕದ್ದುಕೊಂಡು
ಕಲ್ಲುಬಾವಿಯ ಇಳಿದನೊ

ಕಲ್ಲುಬಾವಿಯ ಇಳಿದು ನೋಡುವಾಗ
ಸೂಳೇರಣ್ಣದೀರು ಬರುತಾರೆ ಕೆಂಗಪ್ಪ
ಕೆಟ್ಟೆನೆಂದು ಬಾಯ ಬಿಡುತಾನೆ

ಹುತ್ತದ ಮರೆಯ ಸುತ್ತಿದ್ದಂತ ಬೇಡ
ಸುತ್ತಿ ಬಂದು ಅಂಬಗೆ ಇರಿದಾನೊ

ಸುತ್ತಿ ಬಮದು ಅಂಬಾಗಿ ಇರಿದಾಗ-ಕೆಂಗಪ್ಪ
ಅಯ್ಯಯ್ಯೊ ಅಂದನು ಕೆಟ್ಟೆನೆಂದು

ಬಾಯ ಬಾಯ ಬಿಡುತಾನೆ-ಕೆಂಗಪ್ಪನ
ಹೊಟ್ಟೆಯ ಕಳ್ಳು ಸುರದಾವೊ

ಹೊಂಟಂತ ಕಳ್ಳ ಹೊಟ್ಟೆಗೆ ತುಂಬಿಕೊಂಡು
ಹಾಳ ನೂಲಿನೂರು ಮೇಗಲ ಏಣಿನಾಗೆ-ಬೇಡರು
ಕೆಂಗಪ್ಪನ ಮಡಿದರೊ-ಬೇಡರು
ಕೆಂಗಪ್ಪನ ಮಡಿದನನ್ನೊ ಸುದ್ದಿ
ತಾಯಿ ಚಿಕ್ಕಮ್ಮಗೆ ತಿಳಿಸ್ಯಾರೊ

ಆ ಹಳ್ಳ ಹತ್ಯಾಳೆ ಈ ಹಳ್ಳ ಇಳಿದಾಳೆ
ಎಲ್ಲಿ ಅವನೆ ನನ್ನ ಮಗನ-ಮಕ ತೋರಿ

ಮುದ್ದು ಗಂಬಳಿಯ ಹೊದ್ದುಕೊಂಡು
ನಿದ್ದೆ ಬಂದವನಂಗೆ ಮನಿಗವನೆ-ಕೆಂಗಪ್ಪ
ಮುದ್ದು ಮಗನೆ ಏಳೊ ದುರುತಕೆ

ಕರಿಯ ಕಂಬಳಿಯ ಕಾಲಿಗೆ ಹೊದ್ದುಕೊಂಡು
ಹಸುಮಗನಂತೆ ಮನಿಗ್ಯವನೆ-ಕೆಂಗಪ್ಪ
ಹಸುಮಗನೆ ಏಳೊ ದುರುತಕೆ

ಹಾಲಿನ ಹರಬಿಯ ಹೊತ್ತಾಳೆ ಚಿಕ್ಕಮ್ಮ
ಹಳ್ಳದ ಮುಂದೆ ಇಳಿಕ್ಯಾಳೆ-ಕೆಂಗಪ್ಪನ
ಸಾಲಿಯ ನೋಡಿ ಅಳುತಾಳೆ

ತುಪ್ಪದ ಹರಬಿಯ ಹೊತ್ತಾಳೆ ಚಿಕ್ಕಮ್ಮ
ಉಕ್ಕಡದ ಮುಂದೆ ಇಳಿಸ್ಯಾಳೆ-ಕೆಂಗಪ್ಪನ
ಎಕ್ಕಡವ ನೋಡಿ ಅಳುತಾಳೆ

ಹಳ್ಳಕೆ ಯಾಕ್ಹೋದೊ ಚೆಳ್ಳುಗರ ಕೆಂಗಪ್ಪ
ಹಳ್ಳದ ಮೇಲೆ ಮಳೆ ಮೋಡ-ನಿಮ್ಮವ್ವ
ಹಳ್ಳಕೆ ವಾಲಿ ವಾಲಿ ಅಳುತಾಳೆ

ಕಟ್ಟಿಗೆ ಯಾಕೋದೊ ಬಟ್ಟುಗಳ ಕೆಂಗಪ್ಪ
ಕಟ್ಟೆಯ ಮೇಲೆ ಮಳೆ ಮೋಡ-ನಿಮ್ಮವ್ವ
ಕಟ್ಟಿಗೆ ವಾಲಿ ವಾಲಿ ಅಳುತಾಳೆ

ಹಾಳ ನೂಲಿನೂರು ಮೇಗಲ ಏಣಿನಾಗ
ಕೆಂಗಪ್ಪ ಮಡಿದನನ್ನೊ ಸುದ್ದಿ
ತಾಯಿ ಚಿಕ್ಕಮ್ಮಗೆ ತಿಳಿಸ್ಯಾರೆ

ಯಾರು ನನ್ನ ಮಗನೀಗೆ ಇರಲಿಲ್ಲವ
ದೊಡ್ಡ ಮದುರೆ ಏಣಿನ ಮೇಲೆ ಮನಿಗಿದ್ಯಾ

ಈರನು ಮಡುತ್ತಾವಾ ಚೂರಿ ಪಲ್ಲಣಿಸ್ಯಾವೆ
ಈರ ಕೆಂಗ ಮಡುತ್ತಾವಾ ಬೇಡರು
ನೀರೆಂದು ಕುಡಿದರೈತವಾ

ಬಂಟನು ಮಡುತ್ತಾವ ಕತ್ತಿ ತಲ್ಲಣಿಸ್ಯಾವೆ
ಬಂಟ ಕೆಂಗಪ್ಪ ಮಡುತ್ತಾವ-ಬೇಡರು
ತುಪ್ಪಂದೆ ಕುಡಿದರು ರಕುತವ

ಜಾಣ ಕೆಂಗಪ್ಪ ಜಾರಿ ಬಿದ್ದಿತ್ತಾವ
ಜಾವಕೆ ತತ್ತೀನಿ ಕುದುರೆಯ-ನುಲಿಯನೂರ
ಕೋವೆಲ್ಲ ರಾಮರೈತವು

ನುಲಿಯನೂರು ಶೆಟ್ಟಿ ಕೆಂಗಪ್ಪ ಬಿದ್ದತ್ತಾವ
ವತ್ತಿಗೆ ತತ್ತೀನಿ ಕುದುರೆಯ-ನುಲಿಯನೂರ
ತಿಟ್ಟೆಲ್ಲ ರಾಮರೈತವು

ಸುತ್ತೋನು ಕೆಂಗಪ್ಪ ಸತ್ತನು ಅನ್ನದೀರಿ
ಸತ್ತೇಳು ದಿನಕೆ ಬರುತೀನಿ-ಬೇಡರ
ಹುಟ್ಟನೆಲ್ಲ ಉರಕೊಂಡು

ಹಾಲೊಲೆಯ ಮೇಲೆ ಬಾನ ಕೆಂಡದ ಮೇಲೆ
ಬಾಳೆಯ ಹಣ್ಣ ಮಡಲಿಗೆ-ಚಿಕ್ಕಮ್ಮ
ಬಾಲನ ಬೀದ್ಯಾಗೆ ಕರದಾಳೊ

ಈರ ಓಎನ್ನೊ ಈರಣ್ಣ ಓಎನ್ನೊ-ನನ್ನಪ್ಪ
ಈರಣ್ಣ ಓಯೆನ್ನೊ

ಅಕ್ಕಿ ಒಲೆಯ ಮೇಲೆ ತುಪ್ಪ ಕೆಂಡದ ಮೇಲೆ
ಕಿತ್ತಲಿ ಹಣ್ಣು ಮಡಲಿಗೆ-ಚಿಕ್ಕಮ್ಮ
ಪುತ್ರನ ಬೀದಿಗೆ ಕರೆದಾಳೊ

ಅಪ್ಪ ಓಎನ್ನೋ ಅಪ್ಪಾಜಿ ಓ ಎನ್ನೋ
ಕಟ್ಟಿಕೊಡಾಕೆ ಕರದಾಳೊ-ನಿಮ್ಮವ್ವ

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು**

೧) ಬ್ಯಾಡ ಕಣೋ ಈರಣ್ಣ ಬ್ಯಾಡತಿಸಂಗ; ಕಂಬಾಳು ಸಿದ್ಧಗಂಗಯ್ಯ, ಮಾತಾಡುಮಲ್ಲಿಗೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೩, ಪು.ಸಂ. ೪೬-೪೯.

೨) ನಿಚ್ಚ ಮಾದಿಗರೆಣ್ಣೆ ಬಚ್ಚಣದಾ ಬೊಮ್ಮೆ; ಅಂದನೂರು ಶೋಭ, ಕೊಂಬೆ ರೆಂಬೆಲ್ಲ ಎಳಗಾಯಿ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೮, ಪು.ಸಂ. ೨೫-೨೮.

---

* ಎಳೆಯನು ಕೆಂಗಪ್ಪ ಎಳೆಗನ ತಗರ ಸಾಕಿ; ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೯೭, ಪು.ಸಂ. ೨೭೪-೨೭೮.

## ೪೨. ಬಪ್ಪಿಂಗ - ಬಮ್ಮಿಂಗ*

ಬಪ್ಪಿಂಗ್ನೋ ಬಂಮ್ಮಿಂಗ್ನೋ
ಏನೆಂದ ೧ಪಂತ ಮಾಡಿದರು
"ಪಗದೆ ಆಟ ಆಡಬೇಕು
ನೀ ಸೋತರೆ ನಿನ ತಂಗಿ
ನನಗೆ ಆದರೆ ಕೊಡಬೇಕು
ನಾ ಸೋತರೆ ನನ ತಂಗಿ
ನಿನಗೆ ಆದರೆ ಕೊಡತೇನೆ"
ಅಂದೇಳಿ ಪಂತ ಮಾಡಿಕೊಂಡು
ಪಗಡಿ ಆಟ ಹೂಡಿದರು
ಬಪ್ಪಿಂಗ್ನೋ ಬ್ರಾಹ್ಮಣ
ಬಮ್ಮಿಂಗ್ನೋ ಹೊಲೆಯನು
ಬಮ್ಮಿಂಗ ೨ಪಗಡೆಲೂಡಿದ
ಬಪ್ಪಿಂಗ್ನ ಕೈಯಲ್ಲಿ
ಗೆಲಲಿಕ್ಕೆ ಆಗಲಿಲ್ಲ

ಯೆರಡಂಬು ಪಗಡೆ ಹೂಡಿದ
ಗೆಲಲಿಕ್ಕೆ ಆಗಲಿಲ್ಲ
ಮೂರಂಬು ಪಗಡೆ ಹೂಡಿದ
ಬಪ್ಪಿಂಗ್ನ ಕೈಯಲಿ
ಗೆಲಲಿಕ್ಕೆ ಆಗಲಿಲ್ಲ
ಬಪ್ಪಿಂಗ್ನ ಹೂಡಿದ (ಆಟ)
ಬಮ್ಮಿಂಗು ಗೆದ್ದಿದಾಲೊ
ಎರಡಂಬು ಪಗಡೆ ಹೂಡಿದ
ಬಮ್ಮಿಂಗ್ನು ಗೆದ್ದಿದಾಲೆ
ಮೂರಂಬು ಪಗಡೆ ಹೂಡಿದ
ಬಮ್ಮಿಂಗ್ನು ಗೆದ್ದಿದಾಲೊ
"ನೀ ಆಡಿದ ಮಾತಿನ ಪರಕಾರ
ಲಗ್ನಕೆ ಯಾವಾಗ ಬರಬೇಕೊ ?"
"ಮೇಲೆ ಬರುವ ಸುಕ್ರವಾರ
ದಿಬ್ಬಣತಕ್ಕಡ್ಂ ಬಾರಪ್ಪ
ನನ್ನsಲು ತಂಗಿನ
ಲಗ್ನಮಾಡಿ ಕೊಡುತೇನೆ
ಅಂದೇಳಿ ಬಪ್ಪಿಂಗ್ನು
ಮನೆಗೆಂದು ನಡೆದಾನ
ಕೋಣೆಯ ವಳಗೋಗಿ
ಕರಿಯ ಕಂಬಳಿ ಮುಸುಕಿಟ್ಟಿ
ಮಂಚದ ಮೇಲೆ ಮಲಗಿದ
ತಾಯಿಯು ಅಂಬೋಳು
ಒಳಗೋಗಿ ನೋಡಿತು
ಕೇಳಲ್ಲೊ ನನ್ನ ಮಗನೆ
ಯಾಕಿನ್ನು ಮಲಗಿದೆ ?
ಊಟಕ್ಕಾದರು ಏಳಪ್ಪ
ಯಾರು ನಿನಗೆ ಬೈದಾರು ?
ಯಾರು ನಿನಗೆ ಹೊಡೆದಾರು ?
ಊಟಕ್ಕಾದರು ಏಳು ಮಗನೆ,
"ಯಾರು ನನಗೆ ಹೊಡಿಲಿಲ್ಲ
ಯಾರು ನನಗೆ ಬೈಯಲಿಲ್ಲ
ಪಗಡೆ ಆಟಕೆ ಕುಂತಿದೆ
ಗೆಲಲಿಕ್ಕೆ ಆಗಲಿಲ್ಲ
ಬಮ್ಮಿಂಗ ಅಂಬೊನಿಗೆ
೨ಬಾಶೆಯ ಕೊಟ್ಟಿದೆ

ತಂಗಿಯ ಕೊಡುತೇಳಿ
ಕೇಳಲ್ಲೆ ನನ್ನ ತಾಯಿ"
ಅಷ್ಟಂಬು ಮಾತಿಗೆ
"ಚಿಂತೆಯ ಮಾಡಬೇದ
ಲಗ್ನಮಾಡಿ ಕೊಡುತೆನ್ನು
ಊಟಕ್ಕಾದರು ಏಳಪ್ಪ"
ಅಷ್ಟಂಬು ಮಾತು ಕೇಳಿ
ಸ್ನಾನಕ್ಕೆ ನಡೆದಾನು
ಸಾನವ ಮಾಡಿದ
ಊಟಕ್ಕೆ ನಡೆದಿದ
ತಾಯಿ ಮಗನು ಇಬ್ಬರು
ಊಟವ ಮಾಡಿದರು
ಸುಕ್ರವಾರ ದಿನದಲ್ಲಿ
ಬಮ್ಮಿಂಗ ಅಂಬವನು
ದಿಬ್ಬಣ ತಕ್ಕಂಡ್ ಬಂದಿದ
ದಿಬ್ಬಣ ಬಂದದು ನೋಡಿದನು
ತಂಗಿನಾದರು ಕರೆದಿದಾನು
ಸೃಂಗಾರವ ಮಾಡಿದ
ಲಗ್ನಮಾಡಿ ಕೊಡುವನು
"ಕರಕಂಡ ಹೋಗಪ್ಪ"
ಅಂದೇಳಿ ನುಡಿದಾನು
ದಿಬ್ಬಣಾರು ಹೋಗಿತು
ಅತ್ತೆಯು ಅಂಬೋಳು
ಸೊಸೆಯ ಕುಡಿನ್ನೆ
"ಊಟನಾದರೂ ಮಾಡಂತು"
ಊಟಕಾದರೂ ಹೋಗಿತು
ವಂದಂಬು ತುತ್ತು ಕಲಸಿತು
ಕೈತಪ್ಪಿ ಬಿದ್ದಿತು
ಎರಡಂಬು ತುತ್ತು ಕಲಸಿತು
ಬಾಯಿಗೆ ಹೋಗಲಿಲ್ಲ
ಮೂರಂಬು ತುತ್ತು ಕಲಸಿತು
ಉಣಲಿಕ್ಕೆ ಆಗಲಿಲ್ಲ
ಕೈ ಬಾಯಿ ತೊಳದಿತು
ಅಪ್ಪನ ಮನೆಗೀಗೆ
ಹಿಂತುರುಗಿ ಬಂದಾಳು
"ಕೇಳಕೆ ನನ ತಾಯಿ,

ಹೊಟ್ಟೆ ಹಸು ಆಗತದೆ

ಊಟಕಾದರು ಬಡಸವ್ವ”

ಅಂದೇಳಿ ನುಡಿದಾಳು

“ಹೊಟ್ಟೆ ಹಸು ಆದರೆ

ಹಾದಿ ಮಣ್ಣು ತಿನ್ನವ್ವ

ಕೊಟ್ಟವನ ಮನೆಗೆ ಹೋಗವ್ವ”

ಅಂದೇಳಿ ತಾಯಿ ನುಡಿದಾಳು

ಕದವನ್ನೇ ಹಾಕಿತು

ಒಳಗೇಯ ಕುಂತಾಳು

ಮಗಳೀಗೆ ಏನ ಮಾಡಿತು ?

ತಾಯಿ ಬೇಡದಿಂದ ಮಗಳೀಗೆ

ಜೀವಿದ್ದು ಪಲವೇನು ?’

ಅಂದೇಳಿ ಬಾವಿಲಿ ಬಿದ್ದಿತ್ತು

ಪ್ರಾಣವು ಹೋಗಿತ್ತು

**(ಪ್ರತಿ ಸಾಲಿಗೂ ಲೋಲೊಲೊಲದುಂಬೆ ಅನ್ನಬೇಕು)**

**ಪಾಠಾಂತರಗಳು :**

೧) ಅಕ್ಕಮಹಾದೇವಿಯ ಹಾಡು; ಕಾಪಸೆ ರೇವಪ್ಪ, ಮಲ್ಲಿಗೆದಂಡೆ, ಸಮಾಜ ಪುಸ್ತಕಾಲಯ, ಧಾರವಾಡ - ೧೯೭೦ ಪು.ಸಂ. ४३-४೫

೨) ನೀಲಗಂಗ-ಮಾದ್ರಮಲ್ಲ; ಕೃಷ್ಣಯ್ಯ ಎಸ್.ಎ. ಬಾಚಿಗೊಂಡನಹಳ್ಳಿ ಮತ್ತು ಏಣಗಿ

ಬಸಾಪುರದ ಜನಪದ ಗೀತೆಗಳು, ಪ್ರಾದೇಶಿಕ ಜನಪದ ರಂಗ ಕಲೆಗಳ ಅಧ್ಯಯನ ಕೇಂದ್ರ, ಉಡುಪಿ - ೧೯೯೨ ಪು.ಸಂ. ೧೩೭-೧೩೮

೩) ಸಣ್ಣಮ್ಮ; ನಾಯಕ ಎನ್.ಆರ್. ಪಾಠಾಂತರ ಕಥನ ಕವನಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೧೯೯೭ ಪು.ಸಂ. ४೭-೫೯

४) ಹರಿಗೋಲು; ಚಂದ್ರಯ್ಯ ಬಿ.ಎನ್. ಜಾನಪದ ಕಥನಗೀತೆಗಳು, ಶರತ್ ಪ್ರಕಾಶನ  ಮೈಸೂರು - ೧೯೭೯ ಪು.ಸಂ. ೭೧-೭೭

೫) ನಡಿ ಹೆಣ್ಣೆ ನಮ್ಮ ಮನಿಗೋಗಾನಾ; ಹಿರಿಯಣ್ಣ ಅಂಬಳಿಕೆ, ತಂಬೂರಿ ಸಂಪ್ರದಾಯದ ಕಾವ್ಯಗಳು - ೧೯೮೦ ಪು.ಸಂ. ३೭೧-೭३

೬) ನಿನ ಮಕವ ಸಿಗಲಿಲ್ಲ; ಹಕಾರಿ ದೇವೇಂದ್ರಕುಮಾರ, ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೮೫, ಪು.ಸಂ. ೩೯೦-೩೯೩.

---

* ಬಪ್ಪಂಗ - ಬಮ್ಮಿಂಗ; ಹೆಗಡೆ ಎಲ್.ಆರ್. ಮುಕರಿ ಮತ್ತು ಹೊಲೆಯರ ಪದಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-೧೯೭೯ ಪು.ಸಂ. ೫೧-೫४.

## ೪೩. ಸೂಳೇರ ಬ್ರಮ್ಮಣ್ಣ ಸತ್ತ ಸುದ್ದಿ ಕೇಳಿ*

ಅಗಸಾರ ವುಡುಗಿ ಕಡುಚೆಲ್ವೆ ನಾರಿ
ಮಡಿಯಾನ ಎತ್ತಿಕಂಡು । ಓಡೋಡಿ
ಈಗ ವೊರಟಾಳೆ ನಾರಿ ।

ಸೂಳೆ ಬ್ರಮ್ಮಣ್ಣ ಇಬ್ಬರು ಸೇರಿ
ಓಡೋಡಿ ವನಕೆ ವೋದರು ನಾರಿ ।

ವೋದೋರು ವೋದಂಗೆ ವೂವಿನ ವನದಾಗೆ
ಓಡೋಡಿ ಓಡೋಡಿ ವೋದರು ನಾರಿ ।

ಅಡಕೇಯ ತ್ವಾಟಕ್ಕೆ ವೋದಾನೆ ಬ್ರಮ್ಮಣ್ಣ
ಅಡಕೇಯ ತ್ವಾಟ ನೋಡುತಾಳೆ ನಾರಿ ।

ನಿಂಬೆಯ ವನಕೆ ವೋದಾನೆ ಬ್ರಮ್ಮಣ್ಣ ।
ರೆಂಬೇರು ಇಬ್ಬರು ಅಲ್ಲೆ ಅವ್ರೆ ನಾರಿ ।

ಬಾಳೆಯ ತ್ವಾಟಕ್ಕೆ ಪೋದನೆ ಬ್ರಮ್ಮಣ್ಣ
ಅಕ್ಕದೀರು ಇಬ್ಬರು ಅಲ್ಲೆ ಅವ್ರೆ ನಾರಿ ।

ಎಲ್ಲಾನು ನೋಡವನೆ ಓಡೋಡಿ ಬಂದವನೆ
ವೂವಿನ ತ್ವಾಟಕ್ಕೆ ಬಂದವ್ನೆ ನಾರಿ ।

ವೂವಿನ ವನದಾಗೆ ಬಂದಾರೆ ಅವರಿಬ್ರು
ಕೂತೂ ಪಗಡೇಯನಾಡುತಾರೆ ನಾರಿ ।

ಬ್ರಮ್ಮಣ್ಣನಾ ಜತೆ ದಾಯ ಪಗಡೆನಾಡುವಾಗ
ಬಂಗಾರದ ಬಳೆ ನುಗ್ಗುನುರಿ ನಾರಿ ।

ಓಡೋಡಿ ಬಂದಾಳೆ ಏನೊಂದ ಏಳುತಾಳೆ
ಅತ್ತ್ಯಮ್ಮ ಆಗಲೇ ಏನಂದೆ ನಾರಿ ।

ಉಟ್ಟಿದ್ದ ಸೀರೆಯ ನೆರಿಗೆಲ್ಲ ಕಲಕಿದ್ದೋ
ಬಂಗಾರದಾಬಳಿ ಯಾಕೆ ಒಡದೋ ನಾರಿ ।

ಅಣ್ಣ ರಾಮಣ್ಣನ ಮನೆಯಿಂದೆ ಕುಂತಿದ್ದೆ
ಆಳಾದ ಎಮ್ಮೆಯ ಕೊಂಬ ತಗಲಿ ನಾರಿ ।

ಆಳಾದ ಎಮ್ಮೆಯ ಕಂಬು ತಗಲಿ ನನ
ಬಂಗಾರದ ಬಳೆ ಒಡೆದೋದೊ ನಾರಿ।

ಎಮ್ಮೇ ಕರಸಿರಿ ಎಮ್ಮೆಯ ನಿಲಸಿರಿ
ಏನಂದೆ ಅವಳು ಏಖತಾಳೆ ನಾರಿ।

ನನ್ಯಾಕೆ ಕರಸೀರಿ ನನ್ಯಾಕೆ ನಿಲಸೀರಿ।
ಬಂಗಾರದ ಬಳೆಗಳ ಯಾಕೆ ಒಡದೆ ಎಮ್ಮೆ।

ಸೂಳೇರ ಬ್ರಮ್ಮಣ್ಣ ದಾಯ ಪಗಡೆನಾಡುವಾಗ
ಬಂಗಾರದಾ ಬಳೆ ನುಗ್ಗು ನುರಿ ನಾರಿ।

ಉಟ್ಟಿದ್ದ ಸೀರೆಯ ನರಿಗೇನೆ ಕಲಕಿದ್ದೋ
ನನ್ಯಾಕೆ ನೀವು ಕರಸೀರಿ ನಾರಿ।

ಏನೊಂದೆ ಸಾಪವ ಕೊಡುತಾಳೆ ಕಡುಚಲ್ವೆ
ಕುಡಿನೀರು ಕುಗ್ಗಲಿ ಮಡಿಹುಲ್ಲು ಬಾಡಾಲಿ
ಮಲಗಿದ್ದ ಮಗ್ಗುಲೆ ಗೆದ್ದಲತ್ತಿ ನಾರಿ।

ಎಮ್ಮೇಯ ಸಿಗಸೀರಿ ಎಮ್ಮೇಯ ಬಗಸೀರಿ
ಕಲ್ಲೂಗಾಣಾ ಕಾಕಿ ಅರಸೀರಿ ನಾರಿ।

ನನ್ಯಾಕೆ ಸಿಗುಸೀರ ನನ್ಯಾಕೆ ಬಗಸೀರ
ಕಲ್ಲಗಾಣಾಕ್ಹಾಕಿ ಅರಸ್ತೀರ ನಾರಿ।

ಸೂಳೆ ಬ್ರಮ್ಮಣ್ಣ ದಾಯಪಗಡೆನಾಡುವಾಗ
ಬಂಗಾರದ ಬಳೆಗಳೆನುಗ್ಗನುರಿ ನಾರಿ।

ಚೆನ್ನದ ಸಿವಡೂಡಿ ರನ್ನದ ಕೊಡವೊತ್ತು
ಓಡೋಡಿ ನೀರಿಗೆ ವೋಗುತಾಳೆ ನಾರಿ।

ಓದೋಳು ಓದಂಗೆ ಆಗಲೆ ಅಳಿಚ್ಯಾಳೆ
ಏಳುಮಾರುದ್ದ ಮಂಡೆಗಳ ನಾರಿ।

ಬಿಚ್ಚೇದ ಮಂಡೇಲಿ ಒಂದೆ ಕೂಡಲ ಕಿತ್ತು
ಕುಣಿಕೇಯ ಮಾಡ್ಯಾಳೆ ಕಡು ಚಲ್ವೆ ನಾರಿ।

ಕೊಡಗಳ ಅವಳು ಎಳೆದಾಳು ಕಡುಚಲ್ವೆ
ವೊತ್ತುಕೊಂಡು ಅವಳು ಬರುತಾಳೆ ನಾರಿ।

ಕೊಡಗಳ ವೊತ್ತುಕೊಂಡು ಬರುವಾಗ್ಗೆ ಬೀದ್ಯಾ।
ಸೂಳೇಬ್ರಮ್ಮಣ್ಣ ಸತ್ತ ಸುದ್ದಿ ನಾರಿ।

ಸೂಳೇ ಬ್ರಮ್ಮಣ್ಣ ಸತ್ತ ಸುದ್ದಿ ಕೇಳ್ಯಾಳೆ
ವೊತ್ತಿದ್ದ ಕೊಡವ ನೆಲಕೊಗದು ನಾರಿ।

ನೆಲಕಾನೆ ಒಗುದಾಳೆ ಸಿವದುಕ್ಕ ಮಾಡ್ಯಾಳೆ
ಸೀತೆಯ ಗೋಳ ಮಾಡ್ಯಾಳೆ ನಾರಿ।

ಸಿವಗೋಳ ಮಾಡುವಾಗ ಸೀತೆ ದುಕ್ಕ ಮಾಡುವಾಗ
ಸಿವನೂ ಪಾರ್ವತೆ ಬಂದರಾಗ ನಾರಿ।

ಬಂದೋರು ಬಂದಂಗೆ ಏನೊಂದು ಕೇಳುತಾರೆ
ಯಾಕಲ ಕಡುಚೆಲ್ವೆ ಸಿಮದುಕ್ಕ ನಾರಿ।

ಅತ್ತೆ ಕಾಣದಂಗೆ ಮಾವ ನೋಡದಂಗೆ
ಯಾರೊಂದ ಕಾಣದಾಂಗೆ ಮಡಗಿದ್ದೆ ನಾರಿ।

ಯಾರೊಂದ ಕಾಣದಂಗೆ ಮಡಗಿದ್ದೆ ಕೊಡಗಳು
ಈವತ್ತೆ ಬಿದ್ದು ಒಡದೋದೋ ನಾರಿ।

ಮಣ್ಣೀನ ಕೊಡಗಳು ಅಲ್ಲಾವೆ ಕಡು ಚಲ್ವೆ
ಸೂಳೆ ಬ್ರಮ್ಮಣ್ಣ ಸತ್ತ ಸುದ್ದಿ ನಾರಿ।

ಸೂಳೇರ ಬ್ರಮ್ಮಣ್ಣ ಸತ್ತ ಸುದ್ದಿ ಕೇಳಿನ್ನ
ಗೋಳುದುಕ್ಕ ನೀನು ಮಾಡುತೀಯ ನಾರಿ।

---

* ಸೂಳೇರ ಬ್ರಮ್ಮಣ್ಣ ಸತ್ತ ಸುದ್ದಿ ಕೇಳಿ; ಕಂಬಾಳು ಸಿದ್ಧಗಂಗಯ್ಯ ಬಿ, ಮಾತಾಡು ಮಲ್ಲಿಗೆ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೧೯೭೩, ಪು.ಸಂ. ೪೩-೪೫.

# ೪೪. ಗೊರವಯ್ಯ*

ಹಿತ್ತಲ್ಹೀರಿ ಕಾಯೇ ಬಚ್ಚಲ ಬದನೀ ಕಾಯೇ
ಚಪ್ಪರಕೆ ಹಬ್ಬಿರುವ ಘನ ಜ್ಯವಳಿ

ಚಪ್ಪರಕೆ ಹಬ್ಬಿರುವ ಘನ ಜ್ಯವಳೀ ಪಲ್ಯೇವೆ
ನಿತ್ರೆ ನೀಲವ್ವ ಸವದಾಳೇ

ನಿತ್ರೇನೇ ನೀಲವ್ವಾ ಸವದಂತಾ ಪಲ್ಯೇವ
ಹದಬಂದು ಕಣಕಾಲಿಗೆ ಇಳಿವ್ಯಾಳೆ

ಮುಕ್ಕಾ ಹೆಸರೀನಾಕೇ ಅಕ್ಕೀಯ ಸುರಿವಾಳೇ
ಮತ್ತೊಂದಾ ಕಣಕಾಲಿಗೆ ಇಳಿವ್ಯಾಳೆ

ಸದಾ ಹೆಸರೀನಾಕೇ ಅಕ್ಕೀಯ ಸುರಿವಾಳೇ
ಮತ್ತೊಂದಾ ಕಣಕಾಲಿಗೆ ಇಳಿವ್ಯಾಳೆ

ಆ ಉರಿಗ್ಯಾಳಾ ನೀರೇನೇ ಹಾರೂತಾ ತೋರೂತಾ
ಏನಕ್ಕಿನ್ಹಾ ಕೀ ಸುಳಿಯಾ - ಮಳ್ಳಲಿ

ಏಲಕ್ಕೀನೇ ಹಾಕಿ ಸುಳಿ - ಮಳ್ಳಿದಾ ನೀರೂಗಳಾ
ದಾರಿ ಬಚ್ಚಿಲಿಗೇ ಹಿಡುದಾಳೇ

ದಾರೇನೇ ಬಚ್ಚಲಿಗೇ ಹಿಡುದಂತಾ ನೀರುಗಳೇ
ನಿಂಗಣ್ಣ ಜಳಕಾವಾ ಮಾಡುತ್ತಾನೇ

ನಿಂಗಣ್ಣ ಜಳಕಾವಾ ಮಾಡ್ಯಾನೇ ಆಗಿನ್ನ
ದೇವರೂ ಮನಿಯಾಕೇ ಬರುತಾನೇ

ದೇವಾರಾ ಮನಿಯಾಕೇ ಬಂದಾನೆ ನಿಂಗಣ್ಣ
ಕೋರೀಯಾ ಅಂಗಿ ತೊಟ್ಟಿದ್ದಾನೇ

ಎಲ್ಲಾರೂ ಮಾಡ್ಯಾರೇ ಲಿಂಗ ಪೂಜೆ ಲಿಂಗ ಪೂಜೆ
ನಮ್ಮ ಗೊರುವಯ್ಯ ಮಾಡ್ಯಾನೆ ಹೆಂಗುಸರ ಪೂಜೆ
ಲಿಂಗಯ್ಯ ಮಾತನಾಡೂ || ಲಿಂಗಯ್ಯ ದಯವಾಗೂ ||

ಹಿಂಡಾಕ ಎಮ್ಮೀ ಎಲ್ಲಾ ಹಿಂಡೆಮ್ಮ ತರುತೇನೇ
ಹಂಗ್ಸರಿಂಬಾಲಾ ಬರುಬಾರಾದೇ - ಲಿಂಗಣ್ಣ ದಯವಾಗೂ ||

ಹಿಂಡೇನೆ ಎಮ್ಮಿಗೇ ನಮಿಗೇನೂ ಕಡಿಮೆ ಇಲ್ಲಾ
ಸುಮ್ಮನಾ ನಾ ಬಾರೊ ಹಿಂದಾಕ್ಕೆ ಲಿಂಗಣ್ಣ ದಯವಾಗೂ ||

ಹಿಂಡಾಕ ಆಕಳಿಲ್ಲ ಹಿಂಡು ಆಕಳ ತರುತೀನೀ
ಹಂಗ್ಸರಿಂಬಾಲಾ ಬರೂಬಾರಾದೇ ಲಿಂಗಣ್ಣ ದಯವಾಗೂ ||

ಹಿಂಡೇನೇ ಆಕಳಿಗೆ ನಮಿಗೇನೂ ಕಡಿಮಿಲ್ಲಾ
ಸುಮ್ಮನಾ ಬಾರೋ ಹಿಂದಾಕೆ ಲಿಂಗಣ್ಣ ದಯವಾಗೂ ||

ನಿಂತಲ್ಲಿ ನೀಲವ್ವನಾ ಸ್ರಾಪುಣಿಕ ಲಿಂಗಣ್ಣ ದಯವಾಗು
ತೆಗ್ಗೊಂದಾ ಹತ್ಯಾನೆ ತವರೊಂದಾ ಇಳುದಾನೆ
ಕರಿ ಆಲದ ಮರನಾ ಬಯಲಾಗೆ ದೊರಿ ಬಾಗಲಾಗೇ ||
ಹಿಡಿರೊ ಮೋಜಿನ ಕಾಹಳಿಯಾ ||

ನೀರ ತೋರೊ ಅಣ್ಣುಗಳಾ ನೀರ ತೋರೊ ತಮ್ಮಗಳಾ
ಕೋಮಲಾಗೇ ಸೋತೆ ಹೇಳಬೇಕೂ - ದೊರಿ ಬಾಗಲಾಗೇ
ಆಕೇನೆ ನೋಡಿದರೆ ಶೀಲನಂತರ ಮಗಳೂ
ನೀನಾ ನೋಡಿದರೆ ಗೊರುವಯ್ಯ - ದೊರಿ ಬಾಗಲಾಗೇ
ಊರಾಕಾ ಗೊರುವಯ್ಯ ಹೋಗುತಾನೇ - ದೊರಿ ಬಾಗಲಾಗೇ
ಕೋಮಾಲಿ ಮನೆಗೆ ಹೋಗಿದ್ದಾನೆ - ದೊರಿ ಬಾಗಲಾಗೇ
ಬ್ಯಾಳೀ ನೀಡಿದರೆ ಒಲ್ಲ, ಬೆಲ್ಲಾ ನೀಡಿದರೆ ಒಲ್ಲಾ
ಮತ್ತೇನ ನೀಡಬೇಕೂ ಗೊರವಯ್ಯಾ - ದೊರಿ ಬಾಗಿಲಾಗೇ
ಏಳೇಳು ಕೋಮಾಲಿ ವ್ಯಾಳೇವೂ ಆಗ್ಯಾವೇ
ಬೇಗಾನೇ ನೀರಾ ತರ ಹೇಳಿ

ನಾ ನೀರಾ ತರಾಕೇ ಹಂಗಾ ಬಂದವಳಲ್ಲಾ
ನಮ್ಮಪ್ಪ ಗೌಡ್ಯೀರನಾ ಕಳಿವ್ಯಾನೇ
ನಿಮ್ಮೇನೆ ಗೌಡೀನೇ ಹಾಲ ಬಾನುಣ್ಣಿಸೀ
ಸಾಮ ಸಾಲ್ಯಾಗೇ ಮಲಗ್ವಾಸೆ
ಏಳೇಳೆ ಕೋಮಾಲೇ ವ್ಯಾಳೇವೂ ಆಗ್ಯಾವೇ
ಬೇಗಾನೇ ನೀರಾ ತರ ಹೇಳಿ

ನಾ ನೀರಾ ತರಾಕೇ ಹಂಗಾ ಬಂದವಳಲ್ಲಾ
ನಮ್ಮಪ್ಪ ಗೌಡ್ಯೀರನಾ ಕಳಿವ್ಯಾನೇ

ನಿಮ್ಮೇನೇ ಗೌಡ್ಯೀರನಾ ತುಪ್ಪಾ - ಬಾನುಣ್ಣಿಸೀ
ಪಟ್ಟೆ ಮಂಚಾಕೇ ಮಲಗೂಸೇ

ನಾವೇನೇ ನೀರುಗಳಾ ಎಂದೆಂದೂ ತಂದಿಲ್ಲಾ
ಕಾಯೇ ಕರ್ಪೂರಾ ತಾರಲೀ ಬೇಕೂ

ಅಂಗ್ದೀಗೇ ಕೋಮಾಲೀ ಹೋಗುತ್ತಾಳೆ
ಕಾಯಿ ಕರ್ಪೂರಾ ಕೊಂಡಿದ್ದಾಳೇ

ಕಾಯಿನೇ ಕರ್ಪೂರಾ ಕೊಂಡಾಳೇ ಕೋಮಾಲೀ
ಅರಮನಿಗೆ ತಾನೇ ಬರುತಾಳೆ

ನೀರುಗಳಾ ನಾ ಇನ್ನಾ ಎಂದೆಂದೂ ತಂದಿಲ್ಲಾ
ಇದು ಏನೂ ಗ್ರಾಚಾರಾ ಬಂತೂ ಎನಗೆ

ಓಣಿ ಒಳ ಅಣ್ಣುಗಳಾ ಓಣಿ ಒಳ ತಮ್ಮುಗಳಾ
ನೀವಾ ನೀರೀಗೆ ಬರುತೀರೇನು

ಆಗಾಲಾ ತಂದೀವೀ ಈಗಲೂ ಇಳಿದೀವಿ
ನಾವ ನೀರೀಗೆ ಬರದಿಲ್ಲಾ

ಓಣ್ಯಾಳ ಅಕ್ಕಗಳಾ ಓಣ್ಯಾಳ ಅವ್ವುಗಳಾ
ನೀವು ನೀರೀಗೇ ಬರತೀರೇನೆ

ಆಗಾಲಾ ತಂದೀವಿ ಈಗಲಾ ಎಳೆದೀವಿ
ನಾವ ನೀರೀಗೇ ಬರೋದಿಲ್ಲಾ

ನೀರೀಗೆ ಕೋಮಾಲಿ ಹೋಗುತ್ತಾಳೆ - ಕೋಲೆನ್ನಾ ಕೋಲೆ

ಕೋಮಾಲಿ ಬರುವೂದೇ ಗೊರುವಯ್ಯಾ ನೋಡ್ಯಾನೇ
ಈರ ಕ್ಯಾಕೀಯ ಹೊಡೆಯುತ್ತಾನೆ
ಈರಾನೇ ಕ್ಯಾಕೀಯಾ ಹೊಡುದಾನೆ ಗೊರುವಯ್ಯಾ
ಕೊಕ್ಕಾರ ಮೀಸಿ ತಿರುವುತಾನೇ

ಕೊಕ್ಕಾರ ಏ ಮೀಸೀ ತಿರುವಾನೇ ಗೊರುವಯ್ಯಾ
ಈರಾ ಕ್ಯಾಕೀಯಾ ಹೊಡವುತಾನೆ

ಈರ್ಯಾನೇ ಕ್ಯಾಕೀಯಾ ಹೊಡುದಾನೆ ಗೊರುವಯ್ಯಾ
ಕೋಮಲಿ ಬಾವೀಗೀ ಬರೂತ್ತಾಳೇ

ಕೋಮಾಲೀ ಬಾವೀಗೇ ಬಂದಾಳೇ ಆಗಿನ್ನ
ಕೈಕಾಲು ಮ್ವಾರಿ ತೊಳೆದಾಳೇ

ಕೈಕಾಲೂ ಏ ಮ್ವಾರಿ ತೊಳೆದಾಳೇ ಕೋಮಾಲಿ
ಗಂಗಮ್ಮನ ಪೂಜೆ ಮಾಡುತ್ತಾಳೆ

ಗಂಗಮ್ಮನಾ ಪೂಜೆ ಮಾಡ್ಯಾಳೇ ಕೋಮಾಲೀ
ತೆರಿ ಒಡದೂ ಕೂಡ ತುಂಬುತ್ತಾಳೆ

ತೆರಿ ಒಡದು ಎ ಕೂಡಾ ತುಂಬ್ಯಾಳೇ
ನೆಲ ಬಿಟ್ಟು ಮೇಲಕ್ಕಾ ಏಳ-ವಲ್ಲದೇ

ಬಾವಿ ಕಟ್ಟೀ ಮ್ಯಾಲೇ ಗೊರುವಯ್ಯಾ ಕುಂತಾನೇ ಏನೇನಾ ಮೋಡಿ
ಒಗುದಾನೇ (ಏನೇನಾ ಮಂತ್ರ ಜಪಿಸ್ಯಾನೆ)
ಇನ್ನೊಮ್ಮೆ ಪೂಜೆ ಮಾಡಲಿ ಬೇಕೇ
ಮತ್ತೊಮ್ಮೆ ಪೂಜೆ ಮಾಡುತ್ತಾಳೆ

ಮತ್ತೊಮ್ಮೆ ಏ ಪೂಜೇ ಮಾಡ್ಯಾಳೇ ಕೋಮಾಲೇ
ತರಿ ಒಡದೂ ಕೊಡ ತುಂಬುತ್ತಾಳೆ

ತೆರಿ ಒಡೆದೂ ಏ ಕೊಡಾ ತುಂಬ್ಯಾಳೇ ಕೋಮಾಲೇ
ನೆಲಬಿಟ್ಟು ಮೇಲಕ್ಕಾ ಏಳವಲ್ಲಾದೇ

ಇದು ಏನ ಗಾಚಾರಾ ಬಂತೂ ಎನಗೆ
ದುಂಡೀಲಿ ಕೊಡ ಒಡಿಯಲಿ ಬೇಕೇ

ದುಂಡೀಯಾ ತಂದಾಳೇ ಕೊಡದಾ ಮ್ಯಾಲೆ ಹಾಕಿಯಾಳೇ
ದುಂಡೊಡಿತೂ ಕೊಡ ಒಡಿಯಲಿಲ್ಲಾ

ಇದು ಏನ ಗಾಚಾರಾ ಬಂತೂ ಎನಗೆ
ಕೊಡಗಾಳಾ ಬಿಟ್ಟು ಹೋಗಲಿ ಬೇಕೇ

ಮುಂದಾಕಾ ಮುರ್ಛೆಜ್ಜೆ ಹೋಗ್ಯಾಳೇ ಕೋಮಾಲೀ
ಕೊಡಗಳಿಂಬ್ಹಾಲ ಬರುತಾವೆ

ಇದು ಏನ ಗಾಚಾರಾ ಬಂತವ್ವ ಎನಗೆ - ಕೋಲೆನ್ನಾ ಕೋಲೆ

ಬಾವಿಯಾ ಹತ್ಯಾಳೇ ಸುತ್ತ ಮುತ್ತಾ ನೋಡ್ಯಾಳೇ
ಬಾವಿ ಕಟ್ಟಿ ಮ್ಯಾಲೇ ಗೊರವಯ್ಯಾ

ಬಾವಿನೇ ಕಟ್ಟಿ ಮೇಲೇ ಗೊರವಯ್ಯಾ ಕುಂತಾನೇ
ಬಾರೋ ಅಣ್ಣಯ್ಯಾ ಕೊಡಾ ಹೊರುಸೊ

ಅಣ್ಣೀನೇ ಏ ಅಂತಾ ಕರಿಬ್ಯಾಡೇ ಕೋಮಾಲೀ
ಮಾವಾಂತಾ ಕರಿಯಲೆ ಬೇಕೇ

ನಿಮ್ಮಪ್ಪ ನನಗೇ ಸೋದರ ಮಾವ
ಬಾರೊ ಮಾವಯ್ಯಾ ಕೊಡ ಹೊರಸೊ

ಕೊಡಾನಾ ಹೊರಿಸ್ಯಾನೇ ಮುಂದಾಕಾ ಬಿಟ್ಟಾನೇ
ಹಿಂದಾಲಾ ಸೆರಗಾ ಹಿಡುದಾನೇ

ಯಾಕೋ ಮಾವಯ್ಯಾ ಸೆರಗ್ಹಿಡುದೀ
ಈವತ್ತ ರಾತ್ರಿ ತಿರೂಗಿ ಬರಾಲೇಬೇಕೇ
ಬರುತ್ತೇನೆ ಮಾವಯ್ಯ ಬಿಡೂ ಸೆರಗಾ

ಗಂಗಮ್ಮನ ಆಣಿ ಇಟ್ಟುಕೋಳೇ
ಗಂಗಮ್ಮನ ಆಣಿ ಬರುತೀನಿ ಮಾವಾ
ಕೊಡಗಳಾ ಆಣಿ ಇಟ್ಟುಕೋಳೇ
ಕೊಡಗಳಾ ಆಣಿ ಬರುತೀನಿ ಮಾವಾ
ಡಬ್ಬೀಯಾ ಆಣಿ ಇಟ್ಟುಕೋಳೆ
ಡಬ್ಬೀಯಾ ಆಣಿ ಬರುತೀನಿ ಮಾವಾ

ಹನುಮಪ್ಪನ ಗುಡಿಗೇ ಬಾರಲೀ ಬೇಕೇ
ಬರುತ್ತೇನೆ ಮಾವಯ್ಯ ಬಿಡು ಸೆರಗಾ

ಊರಾಗಾ ಗೊರವಯ್ಯಾ ಹೋಗುತ್ತಾನೆ । ದೊರಿ ಬಗಲಾಗೇ
ಅಂಗಾಡಿ ಮನೆಗೆ ಹೋಗುತ್ತಾರೆ । ದೊರಿ ಬಾಗಲಾಗೇ

ಎಲಿ-ಗಳಾ ಕೊಂಡಾನೇ ಅಡಿಕೆಗಳಾ ಕೊಂಡಾನೇ
ಜಾಯಿಕಾಯಿ ಸತ್ತೂರಿ ಕೊಂಡಿದ್ದಾನೆ । ದೊರಿ ಬಾಗಲಾಗೇ

ಜಾಯಕಾಯ ಪತ್ತೂರಿ ಕೊಂಡಾನೇ ಗೊರುವಯ್ಯಾ
ಹನುಮಪ್ಪನ ಗುಡಿಗೆ ಹೋಗುತ್ತಾನೆ । ದೊರಿ ಬಾಗಲಾಗೇ

ಹಾಸೀಗಿನಾದಾರೇ ಏನೆಂದೂ ಹಾಸ್ಯಾನೇ
ಕೋಮಾಲಿಗೆ ಏನೆ ನನಗೇನ | ದೊರಿ ಬಾಗಲಾಗೇ

ಅಡಿಕೆಗಳಾ ಐದಾವೇ ಎಲೆಗಳಾ ಐದಾವೆ
ಕೋಮಾಲಿ ಸುಣ್ಣ ತರಲಿಲ್ಲ | ದೊರಿ ಬಾಗಲಾಗೇ

ಮುಂಗೋಳಿ ಕೂಗ್ಯಾವೆ ಮೂಡಲ ಹರೂದಾವೇ
ಸತ್ತಂಗ ಗೊರವಯ್ಯ ಬಿದ್ದಿದ್ದಾನೇ | ದೊರಿ ಬಾಗಲಾಗೇ

ಊರಾಳಾ ಗೌಡಾರಾ ರೈತರ ಸ್ಯಾನಾಬಾವಾ
ಅವರೆಲ್ಲರ ಬಂದು ನೋಡುತ್ತಾರೇ | ದೊರಿ ಬಾಗಲಾಗೇ

ಯಾವೂರಾ ಗೊರವಯ್ಯ ಸತ್ತಿದ್ದಾನೆ | ದೊರಿ ಬಾಗುಲಾಗೇ
ಒಳ್ಳೇಯ ಕಟ್ಟೀಗೆ ತರಸ್ಯಾರೇ | ದೊರಿ ಬಗುಲಾಗೇ

ಒಳ್ಳೇಯಾ ಏ ಕಟ್ಟೀಗೇ ತರಿಸ್ಯಾರೇ ಅವರಿನ್ನಾ
ಸಿದಗೀಯಾ ಅವರು ಕಟ್ಟುತ್ತಾರೆ | ದೊರಿ ಬಾಗುಲಾಗೇ

ಸಿದಗೀಯದರಕ ಗೊರವಯ್ಯನ ಇಡುತಾರೇ | ದೊರಿ ಬಾಗುಲಾಗೇ

ಸಿದಿಗ್ಯಾಕೆ ಗೊರವಯ್ಯನಾ ಇಟ್ಟಾರೆ ಅವರಿನ್ನೂ
ಕೋಮಾಲೆ ತಿಪ್ಪೀಗೀ ಹೊರುತಾರೇ

ಕೋಮಾಲೇ ತಿಪ್ಪೀಗೀ ಹೊತ್ತಾರ ಅವರನ್ನೂ
ಕೋಮಾಲೆ ತಿಪ್ಪಾಗೇ ಹುಗುದಾರೇ

ಏಳೇಳೇ ಕೋಮಾಲೇ ವ್ಯಾಳೇವೂ ಆಗ್ಯವೇ
ಬೇಗಾನೆ ಸಗಣಿ ಬಳಿ ಏಳೇ

ಪಟ್ಟೇದಂಚಿನ ಸೀರೆ ಮೇಲಾಕೆ ಕಟ್ಯಾಳೇ
ಕೋಮಾಲಿ ಸೆಗಣಿ ಬಳಿತಾಳೆ

ಕೋಮಾಲೀ ಏ ಸಗಣೀ ಬಳುದಾಳೆ ಆಗಿನ್ನೂ
ಕೋಮಾಲೀ ತಿಪ್ಪೀಗಿ ಹೊರುತ್ತಾಳೆ

ಓಣಿಯೊಳ ಅಣ್ಣುಗಳಾ ಓಣಿಯೊಳಾ ತಮ್ಮುಗಳಾ
ನಮ್ಮ ತಿಪ್ಪೀಗೀ ಕಣ್ಣೀ ಬಂದಿದ್ದಾವೊ

ಓಣಿಯೊಳ ಅಕ್ಕಗಳಾ ಓಣಿಯೊಳ ಅವ್ವಗಳಾ
ನಮ್ಮ ತಿಪ್ಪೀಗೀ ಕಣ್ಣ ಬಂದಿದ್ದಾವ

ನೀನೇನೆ ನೋಡಿದರೇ ಬುದ್ಧಿವಂತರಾ ಮಗಳೂ
ಆ ಮೋಡಿ ನಮಗಾ ತಿಳಿಯೂವೆ

ಬುಟ್ಟೀಯ ಒಗುದಾಳೇ ಹಿಂದಾಕೆ ತಿರುಗ್ಯಾಳೇ
ಹಿಂದಲ ಸೆರಗಾ ಹಿಡುದಾನೇ

ಏನಂದು ನೀನು ಹೇಳಿದ್ದೆ ಲೇ
ಎಲ್ಲಾರಿದ್ದಿದು ಮನಿಯಾಗೆ
ಈರಿ ಬಳಾಕಾ ಬರಲೇ ಬೇಕೇ
ಬರುತ್ತೇನೆ ಮಾವಯ್ಯ ಬಿಡ ಜಡಿಯಾ
ನಿಂಬೆಣ್ಣ ಮಾಡಿ ಜಡಿಯಾಗಿಟ್ವಾ

ಗಂಗಾಳೂ ಐದಾವೇ ಚೆರಿಕಾಗಳೂ ಐದಾವೇ
ನಮ್ಮ ಕೋಮಾಲೀ ಇಲ್ಲಲ್ಲೇ ಮನಿಯಾಗೆ

ಹಂಡೇವು ಐದಾವೇ ಕೊಡಪಾನ ಐದಾವೇ
ನಮ್ಮ ಕೋಮಾಲೀ ಇಲ್ಲಲ್ಲೇ ಮನಿಯಾಗೆ

ಓಣಿಯೊಳಾ ಅವ್ವಗಳಾ ಓಣಿಯೊಳಾ ಅಕ್ಕಗಳಾ
ನಮ್ಮ ಕೋಮಾಲೀ ಇಲ್ಲಲ್ಲೇ ಮನಿಯಾಗೆ

ಊರಾಗೋಲಿಲೇ ಒಡದಿದ್ದಲ್ಲೇ
ನಿನ್ನ ಸೊಸಿಯಾ ಕಳ್ಳರೊಯಿದ್ರೆ

**ಪ್ರತಿ ಮೊದಲನೆಯ ಹಾಗೂ ಎರಡನೆಯ ಸಾಲಿನ ಅಂತ್ಯದಲ್ಲಿ "ಕೋಲೆನ್ನ ಕೋಲೆ" ಎಂದು ಹಾಡಲಾಗುತ್ತದೆ. ಚರಣದ ಅಂತ್ಯದಲ್ಲಿ "ದೊರಿ ಬಾಗಿಲಾಗೇ" ಸೂಚಿತವಾದಲ್ಲಿ "ಹಿಡಿರೋ ಮೋಜಿನ ಕಹಳಿಯಾ" ಎಂದು ಹಾಡಲಾಗುತ್ತದೆ.**

---

* ಗೊರವಯ್ಯ; ಕೃಷ್ಣಯ್ಯ ಎಸ್.ಎ. ಬಾಚೆಗೊಂಡನಹಳ್ಳಿ ಮತ್ತು ಏಣಗಿ ಬಸಾಪೂರದ ಜನಪದ ಗೀತೆಗಳು ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ - ೧೯೯೨ ಪು.ಸಂ. ೮೭-೯೪

## ೪೫. ಚಿಕ್ಕಿ ಉಂಗುರಕೆ ನಾರಿ ಮನಸೋತಳೋ ! *

ಕೋಲು ಕೋಲೇ, ಕೋಲನ್ನ ಕೋಲೆ, ಕೋಲು ಕೋಲೆ ‖ ಪ ‖

ಚಿನ್ನದ ಸಿಂಗಿನಾದ, ರನ್ನಾದ ಪಾತರೆ
ಪನ್ನಂಗದ ಹರಿನಾಮ ತಿರಿಶೂಲವೊ-ಸಣ್ಣನಾಮ ‖ ಅಪ ‖

ಅಣ್ಣಯ್ಯ ನೀನು ಪಡಿಮಾಡು, ಕೋಲು ಕೋಲೆ ...
ಆಚೆ ಕೇರಿಲಿ ಒಬ್ಬ ಜೋಗಿ ದೇವರಾಡುತಾರೆ
ಓಡಿಬನ್ನಿ ದೇವರೆಲ್ಲ ನೋಡಿ ಬರುವಾಣ ಕೋಲು ಕೋಲೆ ...
ನೋಡಿಬಂದ ಬಾಲರೆಲ್ಲ ಮರದಲ್ಲಿ ಪಡಿದಾನ ತಂದು
ಕೊಳ್ಳೋ ಜೋಗಪ್ಪ ನಿನ್ನ ಪಡಿದಾನ, ಕೋಲು ಕೋಲೆ ...
ಅಲ್ಲಲ್ಲಿ ದಾನವು ಅಲ್ಲಲ್ಲಿ ಧರ್ಮವು
ತಂದಿಡೆ ನಾರಿ ನೀ ಇತ್ತಿತ್ತವ, ಕೋಲು ಕೋಲೆ ...
ಅತ್ತತ್ತ ಬಂದರೆ ಅತ್ತೆ ಮಾವದಿರು ಬೈಯ್ಯುತ್ತಾರೆ
ಕೊಳ್ಳೋ ಜೋಗಪ್ಪ ನಿನ್ನ ಪಡಿದಾನ, ಕೋಲು, ಕೋಲೆ ...
ಇತ್ತಿತ್ತ ಬಂದರೆ ಅತ್ತೆ ಮಾವದಿರು ಬೈಯಲಿಕ್ಕೆ
ಆನೆಸಾಲು ಕದ್ದೆನೇನೆ? ಕುದುರೆ ಸಾಲು ಕದ್ದೆನೇನೆ,
ಹೆರರ ಹೆಣ್ಣಿಗೆ ನಾ ಬಿದ್ದೆನೇನೆ? ಕೋಲು ಕೋಲೆ ...
ಚಗಡಿ ಕಾಯಂಗೆ ಚಿಗ್ತಾವು ಕಿರಿಜಡೆ
ಭಕ್ತರೊಳಗೆ ನಮ್ಮ ಜೋಗಿ ಚಲುವನೆಂದಳೊ, ಕೋಲು ಕೋಲೆ
ಭಕ್ತರೊಳಗೆ ನಮ್ಮ ಜೋಗಿ ಚಲುವಾನ ಕೈಯಾಳ
ಚಿಕ್ಕಿ ಉಂಗುರಕೆ ನಾರಿ ಮನಸೋತಳೋ ಕೋಲು ಕೋಲೆ
ಉದ್ದಿನ ಕಾಯಂಗೆ ತಿದ್ಯಾವೆ ಕಿರಿಜಡೆ
ಸಿದ್ಧರೊಳಗೆ ನಮ್ಮ ಜೋಗಿ ಚಲುವಾ ಕೋಲು, ಕೋಲೆ ...
ಸಿದ್ಧರೊಳಗೆ ನಮ್ಮ ಜೋಗಿ ಚಲುವಾನ ಕೈಯ್ಯಾಳ
ಮುದ್ರೆ ಉಂಗುರಕೆ ನಾರಿ ಮನಸೋತಳೊ, ಕೋಲು, ಕೋಲೆ ...
ಇದ್ದ ಬದ್ದ ಬಟ್ಟೆನೆಲ್ಲ ಗಂಟು ಮಟ್ಟೆ ಕಟ್ಟಿಕೊಂಡು
ಎದ್ದಾಳು ಜೋಗಿ ದೇವರಿಂದುಗಡೆ, ಕೋಲು ಕೋಲೆ ...
ಕೊತ್ನಗಟ್ಟ ಕೋರಿಗಟ್ಟ ಹತ್ತಲಾರೆ ಇಳಿಯಲಾರೆ ...
ಹೊತ್ತು ಕೊಳ್ಳೆ ನಾರಿ ನನ್ನ ಗಂಟು ಮೊಟ್ಟೆಯ ಕೋಲು, ಕೋಲೆ ...
ಮುದ್ದಿನಂಥ ಮನೆಯ ಬಿಟ್ಟೆ, ಗೆಜ್ಜೆ ಕಾಲಿನ ಮಗುವ ಬಿಟ್ಟೆ
ಲಜ್ಜೆಗೆಟ್ಟ ಜೋಗಿ ಕುಟ್ಟೆ ನಾ ಬರಬಹುದೆ, ಕೋಲು, ಕೋಲೆ ...
ಎಂಟೂರ ತಿರುಗಿದೆ ಸೊಂಟ ಕೊಂದು ಅರಿಬಿಲ್ಲ
ಗಂಟುಮೋರೆ ಜೋಗಿ ಕೊಟ್ಟೆ ನಾ ಬರಬಹುದೆ, ಕೋಲು, ಕೋಲೆ ...
ಏಳೂರ ತಿರುಗಿದೆ ಹೋಳು ಸೆರೆ ಹುಟ್ಟಲಿಲ್ಲ

ಹಾಳುಮೋರೆ ಜೋಗಿ ಕುಟ್ಟಿ ನಾ ಬರಬಹುದೇ, ಕೋಲು ಕೋಲೆ ...
ಬೀಸೋತೊಳು ಬೆರಗಾದೊ ನಡೆಯೊ ಕಾಲು ಹಪ್ಪಳಾದೊ
ಬಾಯಳು ತಂಬುಲವೆಲ್ಲ ಹುಡಿ, ಹುಡಿ, ಕೋಲು ಕೋಲೆ ...
ಬಾಯಳು ತಂಬುಲವೆಲ್ಲ ಹುಡಿ ಹುಡಿ ಜೋಗಪ್ಪ
ಎಲ್ಲಿ ಜೋಗಪ್ಪ ನಿನ್ನರಮನೆ, ಕೋಲು ಕೋಲೆ ...
ಕೊತ್ನಗಟ್ಟ ಕೋಟೆಗಟ್ಟ ಎಪ್ಪತ್ತು ಏಳು ಗಟ್ಟ ...
ಅಲ್ಲಿ ಕಾಣೆ ನಾರಿ ಸುಖದರಮನೆ, ಕೋಲು, ಕೋಲೆ ...

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು :**

೧) ಜೋಗಿಯ ಹಿಂದ್ಹೋದ್ರೆ; ಕಂಬಾಳು ಸಿದ್ಧಗಂಗಯ್ಯ, ಮಾತಾಡು ಮಲ್ಲಿಗೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೩ ಪು.ಸಂ. ೫೦-೫೧.

೨) ಜೋಗಿಯ ಜೊತೆಗಾತಿ; ಮತಿಘಟ್ಟ ಕೃಷ್ಣಮೂರ್ತಿ, ಕನ್ನಡ ಜನಪದ ಸಾಹಿತ್ಯ ಭಂಡಾರ ಗುರುಮೂರ್ತಿ ಪ್ರಕಾಶನ ಬೆಂಗಳೂರು ೧೯೭೫ ಪು.ಸಂ. ೧೬೦-೧೬೧.

---

* ಚಿಕ್ಕಿ ಉಂಗುರಕೆ ನಾರಿ ಮನ ಸೋತಳೋ; ಹಕಾರಿ ದೇವೇಂದ್ರಕುಮಾರ, ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೫ 'ಪು.ಸಂ. ೩೬೩-೩೬೪.

## ೪೬. ದಂಡ ಬಂತವ್ವಾ ದಂಡ*

ದಂಡ ಬಂತವ್ವ ದಂಡ ಸೊಲ್ಲಾಪುರದ ದಂಡ ।
ದಂಡ ನೋಡಿ ಬರತ ಹಡದವ್ವಾ । ಕೋಲೆನ್ನ । ॥ ಕೋಲ ॥

ಹುಟ್ಟಿದ ಮಗಳವ್ವ ಕಟ್ಟಿಕಲ್ಲ ಇಳಿದಿಲ್ಲ ।
ಭ್ಯಾಡ ನನ ಮಗಳ ಹೊರಿಯಾಕ । ॥ ಕೋಲ ॥

ಭ್ಯಾಡ ಭ್ಯಾಡಂದರ ಭಿರಿಭಿರಿ ಹೋಗ್ಯಾಳ ।
ಹೋಗಿ ಅಗಸ್ಯಾಗ ನಿಂತಾಳ । ॥ ಕೋಲ ॥

ಧೇರ್ಯಾದ ಮ್ಯಾಲಕಿಯ ಬೆಳಕ । ॥ ಕೋಲ ॥

ಮುಗಲಿಲ್ಲ ಮಾಡಿಲ್ಲ ಮಿಂಚ ಗದ್ದರಣಿಲ್ಲ ।
ಇದು ಯಾತಕ ಬೆಳಕ ಕರಣೀಕ । ॥ ಕೋಲ ॥

ಒಬ್ಬರ ಹೋಗಂದ್ರ ಇಬ್ಬರ ಹೋಗಿದಾರ ।
ಓಡ್ಹೋಗಿ ಆಕಿನ ಹಿಡದಾರ । ॥ ಕೋಲ ॥

ಇಪ್ಪತ್ತು ವರುಷದ ತುಪ್ಪುಂಡ ಕೂದಲ ।
ನಾರಿ ನಿನಗಾಗಿ ಕಾಯ್ದಿದಾಳೇನ । ॥ ಕೋಲ ॥

ಹನ್ನೆರಡು ವರುಷದ ಎಣ್ಣುಂಡ ಕೂದಲ ।
ಮಿತ್ರಿ ನಿನಗಾಗಿ ಕಾಯ್ದಿದಾಳೇನೆ । ॥ ಕೋಲ ॥

ನಾರಿ ನಿನಗಾಗಿ ಕಾಯ್ದಿದಾಳೇನ ಸೊಲ್ಲಪುರದ ।
ದಂಡೀಗಿ ಧಾರಿ ಎರೆದೀದನೇನ । ॥ ಕೋಲ ॥

ಅಂಗಳದಾಗಿನ ತನುವ ಶಾವಂತಿಗ್ಹೂವ ।
ಹೂ ಬಾಡಿದಾಗೊಮ್ಮ ನೆನೆಯವ್ವ । ॥ ಕೋಲ ॥

ಕುಂಬಿಯ ಮ್ಯಾಲಿನ ದುಂಡ ಶಾವಂತಿಗ್ಹೂವ ।
ಹೂ ಬಾಡಿದಾಗೊಮ್ಮ ನೆನೆಯವ್ವ । ॥ ಕೋಲ ॥

---

* ದಂಡ ಬಂತವ್ವಾ ದಂಡ, ಕಾಪಸೆ ರೇವಪ್ಪ, ಮಲ್ಲಿಗೆದಂಡೆ, ಸಮಾಜ ಪುಸ್ತಕಾಲಯ ಧಾರವಾಡ ೧೯೭೦, ಪು.ಸಂ. ೫೨.

## ೪೭. ಹೂಗಿನ ಮಲ್ಲು*

ಕೇರೀ ಕಾಳಯ್ಯ ಗೌಡ
ಅವ್ನಿಗೊಬ್ಬಳು ಮಗಳ್ ಹುಟ್ಟಿ
ಹಾಲುಂಬಾ ಯೇಳಿದಲ್ಲಿ
ತಾಯಿಯಾರು ಸಂದೇಹೋಳು

ಅಪ್ಪ ಕಾಳಯ್ಯ ಗೌಡಾ
ಸಾಕೀದ ಸಲಗೀದಾ
ಹುಟ್ಟಿ ಮೂರು ವರುಸಾವ್ಕೇ
"ಕೇಳಿಕೇಳಿ ಅಪ್ಪಯ, ಕೇಳೀ

ನಾ ಹೀಗೇ ವಿದ್ದೂ ಚಂದವಲ್ಲಾ
ನಾ ಹುಟ್ಟಿ ಕಸಬಾ ಮಾಡಲುಬೇಕೇ"

ಲಂದೂ ಲಮ್ಮೆ ಹೇಳೂಲಂಗೂ
ನಂಗ್ಯೇಳೂ ಶಾರಾ ಹೂಗಿನ ಶಾರಾ

ಹೂಗಿನಾ ಶರವಾ ಕಡದೀ ಕೋಡೂ
ಹೂಗಿನಾ ಶರವಾ ಕಡದೀ ಕೊಟ್ಟಾ
ಸಾಗರ ಪೇಟೇಗೆ ಹೋಗೋ ನೀನು
ಹೂಗಿನ ಗಿಡವಾ ಕೊಂಡೇ ಬಾರೋ

ಹೂಗಿನ ಗಿಡವಾ ಕೊಂಡೇ ಬಂದಾ
ಗನಾ ಮಾಡೀ ನೆಟ್ಟಿಕೊಟ್ಟಾ
ಹೂಗಿಗೆ ನೀರಾ ಹೊಯ್ತೇಲಿದ್ಲು
ನೀರ ಹೊಯ್ದು ಮೊಕೆಯಾದೋ

"ಕೇಳೋ ಕೇಳೋ ಲಪ್ಪಯ, ಕೇಳೀ
ಹೂಗೆಲ್ಲಾ ಮೊಗ್ಗೆ ಬಂದೋ
ನನಗೆ ಹೂಗಿನ ಶಿಬ್ಬಲು ಬೇಕೋ
ಹೂಗನಾರೂ ಹೊತ್ತೀ ಹೋಪಕೇ

ಲಷ್ಟು ಮಾತಾ ಕೇಂಬರಾಗೇ
ಹೂಗಿನ ಶಿಬ್ಬಲ ಕೊಂಬಲ್ ಹೋದಾ
ಸಾಗರ ಪೇಟೆಗೆ ಸೆಡೀದಾಸೇ
ಹೂಗಿನ ಶಿಬ್ಬಲ ಕೊಂಡೀಕೊಂಡಾ

ಹೂಗಿನ ವಸ್ತು ಕೊಂಡೀಕಂಡಾ
ಮನೀಗಾರೂ ಬರೂವನೇ
ಕೇರೀ ಕಾಳಯ್ಯ ಗೌಡನು
ಮಗಳೂ ಹೂಗಿನ ಮಲ್ಲೂ

ಹೂಗಂಬ್ ಹೂಗಾ ಕೊಯ್ದಳು
ಕಟ್ಟೇ ಶಿಬ್ಬಲ ತಂದೀಕೊಂಡೊ
ಶಿಬ್ಬಲ ತುಂಬಾ ಹೂಗಾತುಂಬೀ
ಬಿಶಲಿಗೇ ಸುತ್ತುಗಿ ಹಿಡುಕಂಡು

ಹೂಗಿನ ಶಿಬ್ಬಲ್ ಹೊತ್ತೀಕಂಡೂ
ಸಾಗರ ಪೇಟೀಗ್ ಹೋಗೂವಾಕೇ
ಸೌನಿ ಅವಳಾ ನಡೀದಾಳ
ಆನೀ ಮಾವ್ತಾ ಲಂಬನ್ನಾ

ಆನಿಗ ಶರಪಳಿ (ಸರಗೀ) ಹಾಕೀಕೊಂಡು
ಆನೀ ಸರಪಳಿ ದಾಟಿ ಹೋಳು
"ಕೇಳೀ, ಕೇಳೀ ಅರ್ಸಗಳ, ಕೇಳಿ
ನಾ ಪಟ್ಟಾದಾ ಮರಿಯಾನೆ

ಹುಲ್ಲಾ ನೀರಾ ಹುಟ್ಟಲಿಲ್ಲೇ
ಜೋಯ್ಸರ ಮನಿಗೋಡೀ ಹೋದಾ
ಕೇಳೀ ಕೇಳೀ ಜೋಯ್ಸರೆ, ಕೇಳೀ
ನನ ಪಟ್ಟದು, ಮರೀಯಾನೀ

ಹುಲ್ಲಾ ನೀರಾ ಮುಟ್ಟಾಲಿಲ್ಲಾ
ಆಗೇಲೇನಾ ಮಾಡಾಲಂದಾ
"ಕೇಳೀ ಸ್ವಾಮೀ" ಲಂದೂ ಹೇಳೀ
ಆಗೇಲಾರೂ ಹೇಳೂವಾರೂ

"ಆನೇಯಾರೂ ಲಂಬಾರೀಗಾ
ಕೇಳೀ ಕಾಳಯ್ ಗೌಡ್ನಾರೂ,
ಮಗಳೂ ಹೂಗಿನ ಮಲ್ಲೂ
ಆನೀ ಸರಪಳಿ ದಾಟೀ ಹೋಳು

ಆನೆ ಅವ್ವ ಮೇನೆ ಮನಸಾ ಹೊತ್ತ
ಆನೀಗಾರೂ ಕೊಡಬೇಕೂ"
ಎಂದೂಲಾರೂ ಹೇಳೂವಾಗೂ
ಲಷ್ಟು ಮಾತಾ ಕೇಳಿಕಂಡೂ

ನಾ ಅರದಾರಾಜೀ ಬಿಡುತೇನಿ
ಅವಳಾ ನೀವ್ ಆಸ್ತೀ ಕೊಡುಬೇಕೇ
ಆ ಊರಂತಾ ಅರಸೂ ಅವ
ಕಾಳಯ್ಯಗೌಡಾಗೆ ಕರಿಯಾ ಬಿಟ್ತು

ಕೇಳಾ ಕೇಳಾ ಕಾಳಯ್ ಗೌಡಾ
ನಿನ್ನ ಮಗಳೇ ಹೂಗಿನಮಲ್ಲು
ಆನೀಗಾಪ್ತೀ ಕೊಡಲು ಬೇಕು
ಲಂದು ವಮ್ಮೋ ಹೇಳುವಾರು

"ಕೇಳಿ ಕೇಳಿ ಸ್ವಾಮೀ, ಕೇಳೀ
ನನ್ನಾ ಮಗಳೇ ಹೂಗಿನ ಮಲ್ಲು

ಆನೀಗ್ ಆವ್ತೀ ಕೊಡಲಾರೆ"
ಲಂದೂಲಾರೂ ಹೇಳೂವಾಗೇ

ನಿನ್ಗೆ ರಕ್ತದ ರಾಜು ಬಿಟ್ಟಿ ಕೊಡುವೆ
ಕಳಸೀ ಬಿಚ್ಚೀ  ಹೊನ್ನಲಳವೇ"
ಕೇರೀ ಕಾಳಯ್ಯಗೌಡ
ಮನಿಗೊಮ್ಮೆ ಬರತೇಲಿದ್ದಾ

ಯಂತಾಕ್ ಕರದೀಯಪ್ಪಾ ?
ನಿನ್ನ ಮಗಳೆ ಹೂಗಿನ ಮಲ್ಲು
ಆನೀಗ್ ಆವ್ತೀ ಕೊಡುಲಂದ್ರೂ
"ನೀ ಹೆದ್ರಲಾ ಬಾರಾ ತಂದೇ

ಕಳಸೀ ಬಿಚ್ಚೀ ಹೊನ್ನಾಲಳಸೋ
ಅರದರಾಜು ಬಿಡಿಸಿಕೋಳೋ
ಲಂದೂಲೆಮ್ಮೆ ಹೇಳೀ ಕೊಂಡಾ
ಅರದಾ ರಾಜೂ ಬಿಟ್ಟು ಕೊಡುವೆ

ಕಳಶೀಲೆ ಹೊನ್ನಾ ಅಳಸೀಕಂಡಾ
ಮನಿಗಾರೂ ಬಂದಾನಾಗ
ಹೂವಮ್ಮ ಹೂಗಿನ ಮಲ್ಲು
ಹೂಗಿನ ಶಿಬ್ಬಲ ಹೊತ್ತಿಕಂಡೂ

ಬೇಕಂಬ್ ಹೂಗಾ ಮುಡುಕಂಡೂ
ಹೂಗಿನ ಶಿಬ್ಬಾಲ್ ಹೊತ್ತಿಕಂಡ್ಲು
ಕೇರಿ ಮೇನೇ ನೆಡೂವಾಂಗೇ
"ಯಾರಪ್ಪಾ ಲಾನೀ ಮಾವ್ತಾ ?

ಆನೀ ಶರಿಂಗ ಕಡಿಯೋ ಬಾರೋ'
ಅಂದುಲೊಮ್ಮೆ ಹೇಳುವಾಂಗೋ
ಆನೀ ಶರಿಯಾ ಕಡದಾ ಬಿಟ್ಟಾ
ಪಟ್ಟಾದಾ ಮರೀಯಾನೇ

ಅವಳ ಬೆನ್ನಕೂಡೀ ಹೋದವಾನೀ
ಮೂರಾ ಹರಳಾ ಹಕ್ಕೀ ಕಂಡಾ
ಮಂತರಸೀ ಲಿಟ್ಟಲವಳೂ
ಮಾದೊಡ್ಡ ಪರ್ವತವಾದೋ

(ಅವಳ್ ಹೆಕ್ಕಂಡ್ಲು)
ಆಗ್ ಹತ್ತೀ ಹತ್ತೀ ಸೋತೇ ಬಿಟ್ಟು
ಬೆನ್ನಗೂಡೀ ಹೋದವಾನೀ
ಹಿಂತಿರಗೀ ನೋಡೀಳಾಗೇ
ಆನೆ ಹತ್ತೀ ಸೋತೀ ಬಿಟ್ಟ :

ಹಿಂದ ತಿರಗೀ ನೋಡೀಳಾನೀ
ಮುಂದೆ ಮುಂದೆ ಹೋಗೂವಂಗೇ
ಆನೆ ಬೆನ್ನಗೂಡೀ ಹೋದವಾಲೇ
ಆನೆ ಹಿಂತಿರ್ಗ್ ನೋಡೀಕಂಡೂ

ಮತ್ತೊಂದೆ ಹರಳಾ ಹೊಡದೇ ಬಿಟ್ಲು
ಅಲ್ಲೊಂದ್ ಹೊಳಿಯೇ ಆಗೀ ಹೋಯ್ತೊ
ಹೊಳೀಕಿಂದ ಲಚೇ ಅವಳೂ
ಹೊಳ್ಯಕಿಂದೆ ಲೀಚೇಲಾನೀ
"ಕೇಳೆ ಕೇಳೆ ತಾಯೇ, ಕೇಳೇ

ನಾ ಹೊಳಿಕಿಂದೆ ಲೀಚೆ ನೀನೂ
ಹೊಳ್ಯಕಿಂದೆ ಆಚೇ ನಾನು
ನೀನೇ ನನ್ನಾ ಯೇರೀ ಬಾರೆ
ನಾ ನಿನ್ನಾ ಪಡದಾ ಮಗಾ
ನೀನೇ ನನ್ನ ಪಡದಾ ತಾಯೀ

ಮನೀಗ್ ಹೋಪೋ "ಲಂದವಾನೀ
"ಪಟ್ಟದಾ ಮರಿಯಾನೇ
ನಿನ್ನ ನಂಬಗಿ ನನಗಿಲ್ಲ"
"ಕೇಳೆ ಕೇಳೆ ತಾಯೇ, ಕೇಳೇ

ಆನೇ ಆರೂ ಹೇಳೂವಾಗೂ
"ಕೇಳೊ ಕೇಳೋ ಲಾನಿ ಮಾವ್ತಾ,
ಆನೆಗೆ ಶರಿಯಾ ಲಾಕೋ ಬಾರೋ"
ಆನೆಯಾರೂ ಸೋತೇ ಹೋದೋ
ಪೇಟೇ ಮೇನೇ ಬರೂವಾಂಗೇ

ಆನೆ ಸೋತೂ ಬಂದಾವಾಲೇ"
ಅಷ್ಟು ಮಾತಾ ಕೇಳೀಕಂಡಾ

ಆನೇ ಸರಿಯಾ ಹಾಕೀ ಬಿಟ್ಟಾ
ಕಳಸೀ ಬಿಚ್ಚೀ ಹೊನ್ನಾನಳದೋ

**ಪ್ರತಿ ಸಾಲಿನ ತುದಿಗೆ ತಂದನಾನಾ ಅನ್ನಬೇಕು.**

---

* ಹೂಗಿನ ಮಲ್ಲು; ಹೆಗಡೆ ಎಲ್.ಆರ್. ಮಾಚಿಯ ಕಥನಗೀತೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೨೦೨ ಪು.ಸಂ. ೧೦೨-೧೦೬

## ೪೮. ಬರದ ಹಾಡು*

ಮೊನ್ನಿಽನ ಬರದಾಗ ಕುಸುಬಿಽಯ ಮಾರಿದರಲ್ಲ | ಕೋಲು ಕೋಲಣ್ಣ ಕೋಲ
ಅಣ್ಣಾಗಾದರು ಮಕ್ಕಳಿಲ್ಲ ತಮ್ಮಽಗಾದರೂ ಮಕ್ಕಳಽವ | ಕೋ

* * * *

ಏ ಅಣ್ಣಾ ಏ ಅಣ್ಣಾ ಸೊಲಗಿ ಜ್ವಾಳಾ ಕಡಾ ಕೊಡು | ಕೋ
ಸೊಲ್ಲಿಗಿ ಜ್ವಾಳಾ ಕಡನೆ ಕೊಟ್ಟಽರ ನಟ್ಟ ಕಡಿಯಽಲಿ ಹ್ವಾದೇನಂದಾ | ಕೋ
ಬಿರಿ ಬಿರಿ ಹ್ವಾದಽನಲ್ಲ ಗಾದ ಮೆತ್ತಿಗಿ ತಗೆದಽನಲ್ಲ | ಕೋ
ಗಾದ ಮೆತ್ತಗಿ ತಗೆದಽನಲ್ಲ ಸೊಲ್ಲಿಗಿ ಜ್ವಾಳಾ ಕೊಟ್ಟಽನಲ್ಲ | ಕೋ
ಸೊಲ್ಲಿಗಿ ಜ್ವಾಳಾ ಒಯ್ದುಕೇರಿ ಹೆಣತಿ ಕೈಯಲಿ  ಕೊಟ್ಟಾನಲ್ಲಾ | ಕೋ
ಒಲೀಮ್ಯಾಲ ಎಸಽರಿಟ್ಟು ಒಡಿಲಾಕಾದರು ಕುತ್ತಽಳಲ್ಲ | ಕೋ
ನೆರಮನಿ ನೆಗಿಯಾಣಿ ಬೆಂಕಿಗಾದರು ಬಂದಾಳಽಲ್ಲ | ಕೋ
ಬೆಂಕಿಽಗಾದರು ಬಂದಽಳಲ್ಲಽ ಜ್ವಾಳದ ಗುರುತಾ ಹಿಡಿಽದಳಲ್ಲಽ | ಕೋ
ಒಲಿಮ್ಯಾಲಿನ ಎಸಽರದಾಗ ಹಿಡಿಗಲ್ಲ ವಗೆದಽಳಲ್ಲ | ಕೋ
ಬೀಸಿದ ಹಿಟ್ಟಿನಾಗ ಬೂದಿ ಮಣ್ಣಾ ಕಲಸ್ಯಾಳಲ್ಲ | ಕೋ
ಮರದಾಗಿನ ಜ್ವಾಳಗೋಳು ಉಡಿಯಲ್ಲಾದರು ತಕ್ಕೊಂಡಽ | ಕೋ

* * * *

ಎಂಟು ಮಕ್ಕಳ ಕರಕೊಂಡು ತವರಮನಿಗಿ ಹೋಗೀದಾಳ | ಕೋ
ಏ ಅತಿಗಿ ಏ ಅತಿಗಿ ಸೇರ ಜ್ವಾಳಾ ಕಡಾ ಕೊಡ | ಕೋ
ಸೇರ ಜ್ವಾಳಾ ನಮ್ಮಲ್ಲಿಲ್ಲಾ ಹೇರ ಜ್ವಾಳಾ ನಮ್ಮಲ್ಲಿಲ್ಲಾ | ಕೋ |
ಅಟ್ಟು ಮಕ್ಕಳ ಕೈಽಯಾ ತುತ್ತ ರೊಟ್ಟಿ ಕೊಡು ಅವ್ವಾ | ಕೋ
ತುತ್ತ ರೊಟ್ಟಿ ಬೇಡಲಿಕ್ಕ ಬೆಕ್ಕಿಗಾರೆ ಒಂದಿದಿಯಾನ | ಕೋ

ಅಸೂ ಮಕ್ಕಳೆ ಕರೆದುಕೊಂಡು ಅಳೂತ ಕರೂತ ಮನೀsಗಿ ಬಂದ್ಳ | ಕೋ
ತಾಳಿನಾರೆ ತಗೊಂಡಾಳ ಅಂಗೀಡಗಾರೆ ಹೋಗಿದಾಳ | ಕೋ
ಅದ್ದನಕ್ಕಿ ಕೊಡಿರೆಪ್ಪಾ ದುಡ್ಡಿsನಿಸಾ ಕೊಡಿರೆಪ್ಪಾ | ಕೋ
ಅದ್ದsನಕ್ಕಿ ಯಾರಿsಗವ್ವಾ ದುಡ್ಡಿsನಿಸಾ ಯಾರಿsಗವ್ವಾ | ಕೋ
ಅದ್ದನಕ್ಕಿ ಮಕ್ಕಳಿಗೆಪ್ಪಾ ದುಡ್ಡಿನಿಸಾ ಹೆಗ್ಗಣಿಗೆಪ್ಪಾ | ಕೋ
ಅದ್ದನಕ್ಕಿ ತಕ್ಕೊಂಡಾಳೆ ಮನೀsಗಾರೆ ಬಂದೀದಾಳ | ಕೋ
ಕುದುಕುದು ಬಾನಿನಾಗ ದುಡ್ಡಿsನಿಸಾ ಸುರುವೀದಾಳ | ಕೋ
ನೀಲವ್ವ ನಿಂಬೆವ್ವ ಒಂದೇ ಎಡಿ ಮಾಡಿದಾಳ | ಕೋ
ಗಂಗವ್ವ ಗೌರವ್ವ ಒಂದೇ ಎಡಿ ಮಾಡಿದಾಳ | ಕೋ
ಬೀಮಣ್ಣಗ ಕಾsಮಣ್ಣಗ ಒಂದೇ ಎಡಿ ಮಾಡಿದಾಳ | ಕೋ
ರಾಮಣ್ಣಾ ಲಕ್ಷ್ಮೀಮಣಗ ಒಂದೇ ಎಡಿ ಮಾಡಿದಾಳ | ಕೋ
ಗಂಡ ಹೆಂಡsರ ನಡುವ ಒಂದೇ ಎಡಿ ಮಾಡಿದಾಳ | ಕೋ
ನೀಲವ್ವ ನಿಂಬೆವ್ವ ತನ್ನ ಬಲಕ ಹಾಕಿದಾಳ | ಕೋ
ಗಂಗವ್ವ ಗವರವ್ವ ತನ್ನ ಎಡಕ ಹಾಕಿದಾಳ | ಕೋ
ರಾಮಣಗ ಲಕ್ಷುಮಣಗ ಗಂಡನ ಬಲಕ ಹಾಕಿದಾಳ | ಕೋ
ಬೀಮಣಗ ಕಾಮಣಗ ಗಂಡನ ಎಡಕ ಹಾಕಿದಾಳ | ಕೋ
ಗಂಡ ಹೆಂಡsರಿಗಿ ನಟ್ಟ ನಡು ಹಾಕಿದಾಳ | ಕೋ

* * * *

ಬಾಗಿಲಿಕ್ಕsಲಕ್ಹೋಗಿ ಏನಂತಾಳ ನೀಲವ್ವಾ | ಕೋ
ಮಾಯsದ ನನ್ನ ಅಣ್ಣಾ ಮಲ್ಲಡಕಾರೆ ಹೋಗಿದಾನ | ಕೋ
ದಿಕ್ಕಿಗಿಲ್ಲದ ಬರ ನಮ್ಮ ಮಕ್ಕಳ ಸುತ್ತ ಬಂದಿತ್ತೇನ | ಕೋ
ರಾಜಾಕಿಲ್ಲದ ಬರ ನಮ್ಮ ರಾಯರ ಸುತ್ತ ಬಂದಿತ್ತೇನ | ಕೋ

* * * *

ಏ ಅವ್ವಾ ಏ ಅವ್ವಾ ನೀಲಾನ ಸುದ್ದಿ ಕೇಳಿರೇನ | ಕೋ
ಮೊನ್ನೆ ಯಾರೆ ಬಂದಿದಳವ್ವಾ ಸೇರ ಜ್ವಾಳಾ ಬೇಡಿದಳಪ್ಪಾ | ಕೋ
ಸೇರ ಜ್ವಾಳಾ ಬೇಡಿದರ ಹೇರ ಜ್ವಾಳಾ ಕೊಡುದಿತ್ತ | ಕೋ
ಮಕ್ಕುವಳsಗಿತ್ತಿ ಬಡಿವ್ಯಾದರ ಇದ್ವಾಳವ್ವ ಕೋ
ಹೇರು ಜ್ವಾಳಾ ತೆಗೆದುಕೊಂಡು ತಂಗೀ ಊರಿಗೆ ಹೋಗಿದಾನ | ಕೋ
ನೀರಿಗಿ ಬಂದ ಅವ್ವಗಳಿರ್ಯಾ ನೀಲನ ಸುದ್ದಿ ಕೇಳಿದಿರೇನ | ಕೋ
ಆಕಿ ಸುದ್ದಿ ಕೇಳಿಲ್ಲಪ್ಪಾ ಆಕಿ ಮನಿಗಿ ಹೋಗಿಲ್ಲಪ್ಪಾ | ಕೋ
ಹೇರ ಜ್ವಾಳಾ ತೆಗೆದುಕೊಂಡು ತಂಗಿ ಮನಿಗಿ ಬಂದಿದಾನ | ಕೋ
ಹೊತ್ತುಹೊಂಟು ಇಟ್ಹೊತ್ತಾಯ್ತು ತಂಗಿ ಸುಳಿವ ಕಾಣಲಿಲ್ಲ | ಕೋ

ಬೆಳsಗನಾಗಿ ಇಟ್ಟೊತ್ತಾಯ್ತು ಬೀಗನ ಸುಳುವ ಕಾಣಲಿಲ್ಲ | ಕೋ
ಬಿಸsಲ ಬಿದ್ದು ಇಟ್ಟೊತ್ತಾಯ್ತು ಮಕ್ಕಳ ಸುದ್ದಿ ಕಾಣಲಿಲ್ಲ | ಕೋ
ಬಾಗಿಲ ತೆರಿದು ನೋಡೂತಾನಾ ಹತ್ತು ಹೆಣ ಬಿದ್ದೀದಾವ | ಕೋ
ಹತ್ತರ ಗೂಡ ಹನ್ನೊಂದಂತ ಪೇಟಗಟಾರ ಮಾಡಿಕೊಂಡ | ಕೋ
ನೀಲವ್ವನ ನಿಂಬೆವ್ವನ ನಿಂಬಿ ಬನದಾಗಿಟ್ಟಿದಾರ | ಕೋ
ಗಂಗವ್ವನ ಗೌರವ್ವನ ಬಾಳೀ ಬನದಾಗಿಟ್ಟಿದಾರ | ಕೋ
ರಾಮಣಗ ಲಕ್ಷ್ಮೀಮಣಗ ತೆಂಗಿನ ಬನದಾಗಿಟ್ಟಿದಾರ | ಕೋ
ಗಂಡಹೆಂಡsರನೊಯ್ದು ಶಿವನ ಪಾದದಲಿಟ್ಟೀದಾರ | ಕೋ
ಮಾಯsದ ಅಣ್ಣನ ಒಯ್ದು ತಂಗೀ ಪಾದದಲಿಟ್ಟಿದಾರ | ಕೋ

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು :**

೧) ಬರಗಾಲದ ಬವಣೆ; ಮತಿಘಟ್ಟ ಕೃಷ್ಣಮೂರ್ತಿ, ಕನ್ನಡ ಜನಪದ ಸಾಹಿತ್ಯ ಭಂಡಾರ, (ಸಂ. ೧) ಗೀತೆಗಳು, ಗುರುಮೂರ್ತಿ ಪ್ರಕಾಶನ, ಬೆಂಗಳೂರು, ೧೯೭೫ ಪು.ಸಂ. ೨೧೫-೨೧೬.

೨) ಬರದ ಹಾಡು, ನಾಗೇಗೌಡ ಎಚ್.ಎಲ್. ದುಂಡಮಲ್ಲಿಗಿ ಹೂವ ಬುಟ್ಟೀಲಿ ಬಂದಾವ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು ೧೯೯೫, ಪು.ಸಂ. ೧೫೪-೧೫೭.

೩) ಮಳೀಹಾಡು, ಕಾಪಸೆರೇವಪ್ಪ ಮಲ್ಲಿಗೆದಂಡೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೦, ಪು.ಸಂ. ೩೧-೩೨.

* ಬರದ ಹಾಡು, ಕಾಪಸೆ ರೇವಪ್ಪ, ಮಲ್ಲಿಗೆದಂಡೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೦, ಪು.ಸಂ. ೪೬-೪೯.

## ೪೯. ಬರಗಾಲ ದೇಶದ ವ್ಯಾಪಾರ*

ವಂದಲs ಅರಸೂಗ್ಯೆs ತಂದ್ರನಾssನಾs
ಯೋಳುಜನ  ಮಗದೀರೊ
ಯೋಳಜನಕೆ ಲಗ್ಗನ ಮಾದ್ರಾs
ಯೋಳಜನಕೆ ಯೋಳೇ ಹಡಗೋ
ಗೆಯ್ಸೀಗೆ ಕೊsಟ್ಟಿದಾs
“”ಹಡ್ಗಿನಾ ಯಾಪಾರ ಮಾಡsಬೇಕೊ”
ಅಂದ್ಹೇಳಿ ಅರಸು ನುಡಿದಾನೇ
ಲೂಟ ಉಪಚಾsರಾ ಮುಗೂssಸ್ಯಾರೋ
ಹಡ್ಗನ ಬಂದ್ರಕ್ಕೆs ನಡೂsದಾರೋ
ಹಡುಗಿಗೆ ಸಾಮಾನಾs ತುಂಬೂsಸಿದಾs

ಕಿರ್‍ಯಮಗನೆ ಯೇನಾ ಹೇಳಿದಾs?
“”ಕೇಳಲ್ಲೊ ಕೇಳೊ ಅಪ್ಪಯ್ಯs, ನೀನು
ವಳ್ಳ | ನನ್ನ ಹಡಗೀಗೆ ಅಕ್ಕಿsಯ ಚೀಲಾs
ತುಂಬಸಬೇಕೊ ಅಪ್ಪಯ್ಯ, ನೀನು”
ಅಟ್ಟಂಬೂ ಮಾತೇ ಕೇಳಿದ ಅರಸೂss
ಕಿರ್‍ಯಮಗನಾs ಹುಡುಗೀssಗೋs
ಅಕ್ಕಿಚೀಲವೆ ತುಂಬೂsಸೀದಾs
ಹಡುಗಿಗೆ ಪೂಜಾವ ಮಾಡಿದರೋ
ಆ ಹುಡ್ಗ ಬಿಟಕಂಡೆ ನಡದಾರೋ
ಆರು ಜನ | ಅಣದೀರ ಹಡಗೇ
ವಂದೇ ಲಳವಿಲಿ” ಹೋssಗಿತೇss
ಕಿರ್‍ಯತಮನಾs ಹಡೂಗ್ವೊಂದೇ
ಬರಗಲ ದೇಸಕೆ ಹೋಗಿತೋ
ಬರಗಲ ದೇಸದಾs ಬಂದರಕ್ಹೋಗೇs
ತಾsಡಿತೆ ಹsಡುಗ್ವೊಂದೂs
ಶದ್ನ ಕೋವಿಯಾs ಹೊಡುವಾನೊ
ಬರಗಲ ದೇಸದ ರಾsಜಾsನೂs
ಅಸದ್ದೂs ಕೇಳೇsಕಂಡೇss
ಆಳಗಳಾs ಕsರೂಕಂಡೇss
ಬಂದರಕೇs ಬರೂsವನೋ
ಅಕ್ಕಿ ಚೀಲಾವ ತೋಡಿಕಂಡಾs
“”ಕೇಳಲ್ ಕೇಳಲ್ಲೊ ಅರಸೂಮಗನೇ,
ಅಕ್ಕಿ ಹಣವೇs ಯೇಗೆಲ್ಲಾs
ವಂದು ತೆಂಗಿಳ ಮೇsಲೆsಗೇs
ಕಳುಸೇಗೇs ಕೊಡುತೀನೋss”
ಅಟ್ಟಂಬೂ ಮಾತಾs ಕೇಳಿದ ಅರಸೂ
ಹಿಂತಿರ್‍ಗಿ ಹಡುಗಾs ಬಿsಡೊವಾನೋs
ಆರುಜsನ ಅಣದೀsರ್ ಹಡುಗೇs
ಮುಂದಾಗೀ ಬರವಾssದೋs
ಅವ್ರಾ ಬೆನ್ನಿಲೆ ಇವ್ನಲೊ ಹಡಗೇ
ಬಿಟ್ಟೀಕಂsಡಿ ಬsರುsವನೋ
ಬಂದೇ ಬಂದೇಯ ಬಂದ್ರಕೆ ತಾಡೇ
ಸದ್ನ ಕೋವಿsಯ ಹೊಡುವಾರೋ
ಅರಸೂ ಯೇಗೆ ಕೇಳಿದನೋs
ಅಳುಗಳಾs ಕರದಿಕಂಡಾs
ಹಗ್ಗನ ಬಂದ್ರಕೆ ಬರುsವನೆ

ಬಂದು ಹಡಗು ನೋಡಿದಽನೊ
ಆರು ಜನ ಮಗದೀರ್ ಹಡಗೇ
ಸಾಮಾನ್ ತುಂಬೆ ಬಂದ್ ನಿಂತದ್ಯೋ
ಕಿರ‍್ಯಮಗನಾಽ ಹಡುಗ್ವೊಂದೇಽ
ಕಾಲೀಬಂದೆ ನಿಂಽಽತದ್ಯೋ
ಅಟ್ಟಂಬೂದ ನೋಡಿದ ಅರಸೂಽ
ಸಾಮಾಽನೆಲ್ಲ ತೋಡಿಸಿಕಂಡಾಽ
ಆರು ಜನ ಮಗ್ರಿರ ಕರುಽಕಂಡಾ
ಹಿಂತಿರ‍್ಗಿ ಮನ್ಗೆ ಬಽರುಽವನೋ
ಅವ್ರ ಬೆನ್ಗೆ ಕಿರ‍್ಯ ಮಗನೂಽ
ಹಿಂದಿಂದೆ ಬಽರುವಽ ನೋಽ
ಮನಿಗೇ ಗೆ ಬಂದೇಕಂಡೇ
ಕೈಕಾಲು ಮೋರಿ ತೊಳುಽವಾರೋ
ಕಿರ‍್ಯ ಮಗನೂ ಮಾತಾಡ್ಸಾಲೆಲ್ಲಾಽ
ಜಗ್ಲಿಗೆ ಬಂದೇ ಕುಂತುಕಂಡಾಽ
ಆರುಽಜಽನ ಲಣ್ಣಾದೀರೂಽ
ಅಪ್ಪಽನೂ ಅಂ ಬವ್ನೂಽ
ಲೂಡಕಾಽರೂ ನೆಡುದಾರೋಽ
ಕಿರ‍್ಯಮಗ್ಗೆ ಮಾತಾಡ್ಸ್‌ಲೆಲ್ಲಾಽ
ಲೂಟಕೆ ಬಾರೆಂದು ಹೇಳುಲಿಲ್ಲಾ
ಸುಮ್ಮನೆ ಬದ್ಯಲ್ಲಿ ಕುಂತೆಕಂಡಾಽ
ಲೂಟಽ ಲ್ಲಾ ಮಾಡಿದ್ದಾರೋ
ಶಂಜಿಯಿ ಗೆ ಆಽಯಿತೋ
ಅವ್ರವ್ರ್ ಕೋಣಿಗ್ ಹೋಗೆ ಮಲ್ಗ್‌ದ್ರೋ
ಕಿರ‍್ಯ ಮಗ್ನೂ ಯೇನಽ ಮಾಡ್ದಾಽಽ?
ನನ್ನ ಮಡುದೀಽದ್ದ ಕೋಽಣೀಽಗೇಽ
ಹೋಗಿಽದ್ದ ಯೇಽಗಿಽನ್ನೇಽ
ಮಡುದಿ ಅಂಬವ್ನ ಯೇಽನಂತೋಽ?
“”ಕೇಳಲ್ಲೆ ಸ್ವಾಽಮ್ಯವ್ರಾಽ,
ನನ್ನ ಕೋಣೆಗೆ ನೀವ್ ಬರುಬೇಡಿ
ಬೇಕಾದ್ ಕಡಿಗೆ ಹೋಗೂಬವ್ದೋ”
ಅಂದ್ದೇಽಳಿ ನುಡೂದಳೂಽ
ಅಟ್ಟಂಬು ಮಾತೂಽ ಕೇಳೀದಽನೂ
ಕುಂತೇ ಯೇಗೆ ಬೆಳ್ಗುಮಾಡ್ದಾಽ
ಬೆಳ್ಗೂ ಮೂಡಿ ಬೆಽಳುಗಾಯ್ತೋ
ಯೆದ್ದೇ ಯೇಗೆ ಹೆರಗೇ ಬಂದಾಽ

ಕೈಕಾಲು ಮೋರೀs ತೊsಳುದಾsನೋ
ದೇವರಿಗೆ ಕಯ್ಯಾ ಮುsಗುದಾsನೋ
ಅಂಗೀದೋತ್ರಾ ಹಾಕಿಕಂದಾs
ಜಗುಲಿಗೆ ಬಂದೇ ನಿಂತೀ ದs
ತಾಯಿ ಅಂಬವ್ವ್ ಯೇsನ್ ಹೇಳ್ತೋ?
“”ದೇಸಂತ್ರ ಹೋಗೊ ಮಗನೆ” ನೀನೂ
ನಾವಂದು ಬುತ್ತೀ ಕಟ್ಟೀ ಕೊಡುತೀ
ಆ ಬುತ್ತಿ ನೀನು ತಕ್ಕೊಂಡ್ ಹೋಗೋ
ಅಂದ್ಹೆಳಿ ತಾಯೀ ನುಡುsದಳೆದೇ
ಮೂರು ಬೊಗಸೂ ಹೊನ್ನಾ ಮುಗಿತೋ
ಬುತ್ತಿಯೇಗೆ ಕsstಟ್ಟಿತೋss
ಮಗ್ನಾ ಕಯ್ಯಲಿ ಕೊsಟ್ಟಿತೋ
ಕೊಟ್ಟಾs ಬುತ್ತಿ “”ತಟ್ಟೀಕಂಡಾss
ದೇಸಾಂತರೇಗೇ ನೆಡುದ್ಯಾನೋ
ದೇಸಾಂತರೇಗೇ ಹೋಗುsವಾಗೇ
ಅವ್ನ ಮನ್ಸಿನಲ್ ಯೇನಾss ಯಣ್ದಾ?
“”ಯೋಳುಜನ ನೆಡವಿಲೀ ವಂದಾಲೂ ಅಕ್ಕಾs
ಅದ್ರ ಮನಿಗೆ ನಾ ಹೋಗೊಬೇಕೋ
ಬಾಳ ಹಸ್ವೇ ನಾನ್ನಾಗುತೀದೋ
ಊಟ ಮಾಡೇ ಮುಂದೆ ಹೋಗೊಬೇಕೋ”
ಅಂದ್ಹೇಳಿ ಆಲಚ್ಚನಿ ಮಾsಡಿದನೋ
ಅಕ್ಕನ ಮನಿಗೆ ಹೋಗೂವನೋ
ತಮ್ಮಾ ಬರುದಾರಿ ನೋಡಿತೆ ಅಕ್ಕಾ
ಸುಮ್ಮನೆ ಬದ್ಯಲ್ಲಿ ಕುಂತಲುಕಂತೋ
“”ಅಕ್ಕ”ಂತೆ ಕರ್ಯುತೆ ಹೋದಾs
“ವೋ’ ಯೆನ್ನಾಲೆಲ್ಲಾ ವsಳುಗಿದ್ದೇ
ಬಾಳs ಹಸ್ವೇ ಅಗೂsತಿದೇ
ಲೂಟಕೆ ನನ್ಗೆ ಬಡ್ಸೂಬೇಕೇ”
ಅಟ್ಟ ಮಾತು ಕೇಳಿತೆ ಅಕ್ಕಾs
ಹಿತ್ಲಾಕಡ್ಗೆ ನೆಡೂದsಳೂ
ಕೆಸ್ನಾ ಯೆಲ್ಯs ಕೊಯ್ದೇತಂತೋ
ಮೂರು ದಿವ್ಸನ “”ಹುಳ್ಯಾಗಂಜೀ
ಮೂರು ದಿವ್ಸನ ಹುಳ್ಯಾಲುಗಂಜೀ
ಮೂರು ದಿವ್ಸನ ಹುಳ್ಯಾಲುಗಂಜೀ
ಕೆಸ್ನಾ ಕೀಳೀಲೀ ಬಡುಸೇಲಿನ್ನೆ
ಯೆದ್ಯಲು ಮಾಡೇ ತಂದ್‌ಕೊಟ್ಟಳೊ

ವಂದಂಬು ತುತ್ತೇ ಕಲುಚೇ ಉಂಡಾs
ಯೆಯ್ದಂಬ ತುತ್ತೇ ಕಲುಚೇ ಉಂಡಾs
ಮಾರಂಬು ತುತ್ತೇ ಹೊಟ್ಟ ಹೇಸಿತೋ
ಹಾಗೇ ಯಡ್ಯಲು ಬುತ್ತಿ ಕಟ್ಟಿದ
ಅಕ್ಕನ ಮಗನಾ ಗೊಬ್ರು ಕುಳಿಲೋ
ಹೊಂಡ ತೋಡೇ ಮುಚ್ಚಿದsನೋ
ಹಾಂಗೆ ದೇಸಾಂತ್ರ ನೆಡುsದಾನೋ
ಹೋಗಿ ಹೋಗೇಲೂ ಸಂಜೀಯಾಯೇ
ಕಟ್ಟಮೇಲೇಯ ಮಲುಗೆ ಕಂಡಾs
ಆ ಊರ ಅರಸೂ ಮನಿಯ್ಗೋ
ಕಳ್ಳsರೂ ಕದ್ದೇssಕಂಡೆss
ಕಟ್ಟಿಕೆಳಗೇ ತಂದಿಟ್ಟ ಕಂಡ್ರೇ
ಪಾಲನ್ನೇ ಹಾsಕಂತೇs
ಕಟ್ಟಿ ಕೆಳಗೆ ಕುಂತಲುಕಂಡ್ರೋ
ಕಟ್ಟಿಮೇಲೆ ಮಲಗಿದರಸೂ
ಯೇನಂತೆ ಹೇಳಿದಾನೋ?
“”ಕೇಳಲ್ ಕೇಳಲ್ಲೊ ಅಣುದೀರ, ನೀವು
ಗುಲ್ಲು ಬೊಬ್ಬಿಯ ಮಾಡಲುಬೇಡಿ
ಬೇಗಂದಿದೆಯ ಪಾಲ್ಹಾsಕಂಡೇ
ನಿಮ್ಮ ನಿಮ್ಮಾಲು ಮನಿಗೆ ಹೋಗೀ”
ಅಂದ್ದೆಳಿ ಅರಸೂ ನುಡೂದಾನೋ
ಕಟ್ಟಿ “”ಹತ್ತೆಯ ನೋಡಿದ್ದಾರೋ
ಕತ್ತಲಾದರೂ ತೆಗ್ದೆಕಂಡ್ರೋ
ಇವ್ನಾs ತಲ್ಯನೆ ಕಡ್ಯಲುಬೇಕೋ
“”ಕೇಳಲ್ ಕೇಳಲೊ ಅಣ್ಣಲುದೀರಾs,
ತಲ್ಯಲಾರೂ ಕಡೀಲಕ್ಕೀs
ನನ್ನ ತಾಯೀ ವಂದೂ ಬುತ್ತೀs
ಕಟ್ಟೀಗೇ ಕೊsಟ್ಟೀದೋ
ನಾನೂ ದೇಸಂತ್ರಾs ಬರೂsವಾsಗೇ
ಆ ಬುತ್ತೀನಾವೇssಗೇss
ಮೂರೂಮಂದೀ ಕೂಡೂಟಮಾಡ್ವಾ”
ಅಂದ್ಹೇಳೇs ನುಡುದಾನೋ
ಆ ಬುತ್ತಿಯನ್ನೇ ಬೇಡೇಕಂಡ್ರೂs
ಹಣ್ವಾಗಳೆಲ್ಲಾs ತsಕ್ಕಂಡ್ರೂs
ತಮ್ಮ ತಮ್ಮ ಮನಿಗೇ ನೆಡೂದರೂ
ಬೆಳ್ಳೂ ಮೂಡೇs ಬೆಳೂಗಾಯ್ತೂs

ಬೆಳ್ಳೂ ಮೂಡೇಯ ಬೆಳುಗೇ ಆಯ್ತೋ
ಯದ್ದೆ ಅರಸೂ ಕುಂತೆಯಕಂಡಾs
ದೇಸಾಂತರ ಮುಂದೇ ಹೋದಾs
ವಂದೂ ಅಜ್ಜಿ ಮನೆಗೆss ಹೋದಾs
ಮೊಮ್ಮ ಬಂದದ್ ನೋಡಿಕೆ ಅಜ್ಜೀ
“”ಯಾವಾs ದೇಸವೊ ಆಯ್ತೋ ಮಗನೇ?”
ಬೇಡಿ ತಂದಕ್ಕೀ ಅಡುಗೇಯಾ ಮಾಡ್ತೇ,
ಮೊಮ್ಮಗಗೆ ಊಟಕೆ ಬಡ್ಸ್ತೋ
ಊಟ ಅನ್ನಾ ಮಾಡೇsಕಂಡಾs
ಅಜ್ಜಿಕೋಡೇ ಯೇನಾ ಕೇಳ್ದಾ?
“”ಕೇಳಲೆ ಕೇಳಲೆ ನನ್ನಾs ಅಜ್ಜಿ
ನಿಮ್ಮ ಊರಲ್ಲೆ ಯೇನ ಸುದ್ದಿಯೇ?”
“”ಕೇಳಲೊ ಕೇಳಲ್ಲೊ ಮೊಮ್ಮಗ್ನೆ, ನೀನು
ನಮ ಊರನ ಅರಸೂಮನ್ಯೂs
ನಮ ಊರಲೆ ಅರಸುಮನಿಯಾ
ಅರಸುಗಾದರೆ ಮುಪ್ಪಿನ ಕಾಲs
ರಾಜಿ ಆಳ್ವರು ಯಾರೂ ಇಲ್ಲವೋ
ಅರಸೂssವ ಹೂಡೂಗೀಯೋ
ಬೆಳ್ಳಿ ಬೆತ್ತಾs ಈಟ್ಟನ್ಯೋ
ಬೆಳ್ಳಿ ಬೆತ್ತಾs ಯೆತ್ತೀದವ್ರಿಗ್
ಅವ್ರಾsಲು ಮಗುಳಿನ್ನೇ
ದರ್ಮದ್‌ದಾರೀ ಯರ್ದೇ ಕೊಡ್ತೀ”
ಅಂದ್ದೇsಳಿ ನುಡುದರೋ
ದೇಸದೇಸದ ರಾಜಾsರೆಲ್ಲಾs
ಬಂದೆ ಸೋತೇಯ ಹೋಗಿದ್ದಾರೋ”
“”ಕೇಳಲ್ ಕೇಳಲ್ಲೆ ನನ್ನಾ ಅಜ್ಜೀ
ನಾನೇsಗೆ ಹೋಗೆ ಬರುತೇs
ಬೇಗೆದಿಂದೆ ಅಡುಗಿ ಮಾಡೇ”
ಅಂದ್ದೇಳಿ ನುಡುದನೂs
ಅಡುಗೀsಯ ಮಾsಡಿತೋs
ಊಟಕೆs ಬsಡುಸಾಳೋ
ಊಟ್ಯಾನೆ ಮಾsಡೆಕಂಡಾs
ಅರಸೂ ಮನ್ಗೆ ಹೋಗಿದ್ದಾನೋ
ಬೆಳ್ಳೆ ಬೆತ್ತಾs ಈಟ್ಟರ್ಯೋ
ಅದ್ರಾಲು ಮೇನಿನ್ನೇ
ಯೇನ್ದೇsಳಿ ಬsರು ದಾರೇs?

“”ಬೆಳ್ಳಿ ಬೆತ್ತಾs ನೆಗೂದವ್ರೀಗ್
ನನ್ನಾ ಲು ಮಗುಳಿನ್ನೇs
ದರ್ಮದ್ ದಾರೀ ಯೆರ್ದೇ ಕೊಡುತೇs”
ಅಂದ್ಹೇಳೀ ಹsಚ್ಚರ್ಯೋ
ಹೋಗೇsಗೆ ಅರಸೂ ಮಗನೂ
ಬೆಳ್ಳಿ ಬೆತ್ತಾs ಯೆsತ್ತಿದನೋ
ಅರಸೂsವ ಮಗುಳೀಗೇ
ತಟ್ಟಕಂಡಾ ಮಾsಲೀಯೋ
ಅವ್ನಾ ಕೊರುಳೀಗ್ ಈಟ್ಟಳೇ
ಅರಸೂ ಯೇನಾs ಮಾಡೀದಾs?
ಬಟ್ಟಾsರಾ ಕsರೂದಾನ
ಅರಸೂವ ಮಗನಿಗೇ
ದಾರೀಯಾs ಯೆರುದಾನೋ
ದಾರೀsಯಾ ಯೆರೂದೇಗೇ
ಕೊಡ್ವಾsನೋ ಅರಸೂs
ತನ್ನಾಲು ರಾsಜ್ಯಾವೇ
ಅಳಿಯಾಗೆ ಪsಟ್ಟಾsವೇs
ಅಳಿಯಾsಗೇ ಪಟ್ಟ ಕಟ್ಟಿದ ಅರಸೂ
ಸುಕದಿಂsದೆ ರಾಜಿ ಆಳ್ತೇ
ಇರುವಾsನೊ ಯೇಗಿನ್ನೆ
ಇತ್ತಾsಲಾಗ್ಯೇನಾಯ್ತೋ?
ಆರೂಜsನ ಅಣ್ಣಾದಿರೂ
ಆರೂಜsನ ಲತ್ತಗದೀರೂ
ತಾಯಿತಂದಿ ಯೆರಡೂ ಮಂದೀ
ಹೆರ್ಯಹೆಂಡತಿ ಯಂsಬವ್ರೂs
ದೊಂಬರ್ಯಾಟ ಆsಡಿತೆ
ದೇಸ ಎಲ್ಲ ತಿರಿಕಂತೇ
ಅವ್ನಾ ರಾಜ್ಯಕ್ ಹೋsಗಿದ್ರೋ
ಅಲ್ಲೆಯ ಬಿಡುರ ಬಿsಟರೊ
ಆ ರಾsಜ್ಯದ ಅರಸೂss
ಪೇಟೆsಗೆ ಬಂದಿsದನೊ
ಅರಸೂ ಕೊಡೆಯೆನ ಹೇಳದ್ರೂs?
“”ಈ ರಾಜ್ಯದ ಅರಸರೆ ನೀವು?
ನಾವು ನಿಮ್ಮನ್ನೆ ಬsರುತ್ತೇವೆ
ಅಲ್ಲೊಂದು ಆsಟಾs ಆಡುತೇವೆ”
ಅಂದ್ಹೇsಳಿ ನುಡುದಾರೋ

ಅವ್ನಾ ಗುರ್ತಾ ಯಾರು ಮಾಡೂಲಿಲ್ಲ
ಆ ಅರಸು ಯೇsಗಿನ್ನೇ
ಇವ್ರಾ ಗುರುತಾs ಮಾsಡಿದನೋ
ನನ್ನಣ್ಣದೀರೂ ಇವ್ರಾ ಹೌದೊ
ನನ್ನತ್ತಗದೀರು ಇವ್ರಾ ಹೌದೊ
ನನ್ನ ತಾಯಿತಂದೀ ಇವ್ರಾ ಹೌದೊ
ನನ್ನ ಹೆರ್ಯಾ ಮಡುದೀ ಇವಳೇಯs"
ಅಂದ್ವೇಳಿ ಗುರುತಾ ಮಾಡೇಕಂಡೇ
ತನ್ನ ಮನಿಗೆ ಕರುಕುಂಡಿ ಹೋದಾs
""ಈವತ್ತೆ ನೀವು ಯೇsಗಿನ್ನೆs
ಆಟಾs ಇನ್ನೆ ಆಡುದು ಬೇಡಾs
ನಾಳೆ ಆಟಾs ಅಡೂಬವ್ದೋ"
ಅಂವ್ದೇsಳಿ ನುಡುದಾನೋ
ಬೆಳ್ಳೂ ಮೂಡೇ ಬೆಳsಗಾಯ್ತೋ
ದೊಡ್ಡಸಬ್ಯಾs ಕೂಡೂಸೀದಾs
ಆ ಸಬ್ಯಾ ವಳುಗೇ ಯೇನಹೇಳ್ದಾ?
""ಇವ್ರೇ ಹೌದೋ ನಮಣ್ಣದೀರೂ
ನನ್ನ ತಾಯೀತಂದೀ ಇವ್ರೇ ಹೌದೋ
ನನ್ನ ಹೆರ್ಯಮಡುದೀ ಇದೇ ಹೌದೋ"
ಅಂದ್ವೇsಳಿ ನುsಡೂದಾನೋ
""ನನ್ನ ಮನ್ಯಲ್ಲೆ ಕೆಲಸಾ ನೀವೇ
ಮಾಡುಕಂತೆ ಇsರsಬೇಕೋ"
ಇತ್ಲಾsಗೆ ಯೇನಾsಯ್ತೋ
ಅಕ್ಕಾನೂ ಅಂsಬವ್ಳೊ
ತಮ್ಮsನಿಗೆ ರಾsಜಿಯಾ
ಸಿಕ್ಕೀದಂಬೂ ಸುದ್ದೀ ಕೇಳೇs
ಪತ್ರಾsವ್ಯಾs ಕsಳೂಸೀತೂs
""ನನ್ನಾsಲು ಮsನೀಗೀಗೇs
ವಂದೂ ದೀವ್ಸನ ಮಾತಿಗೀಗೇ
ಒಂದೇsಯ ಹೋಗುಬೇಕೋ
ಅಟ್ಟಂಬು ಸುದ್ದೀ ಕೇಳಿಕಂಡಾs
ಕುದುರೀsಯ ಹತ್ತೇಕಂಡಾ
ಅಕ್ಕಾ ಮನಗೆ ಬsರೂವಾನೋ
ತಮ್ಮs ಬರ್ವದಾs ನೋsಡೀತೋ
ಪಾದಕೆ ನೀರಾs ತಂದೇಕೊಟ್ತೋ
ಚಣ್ಣದ ಹಾಸುಗೀ ಹಾsಸೀತೋ

ಆಸ್ರಿಗೆ ಹಾsಲs ಇsಡೂವಾಳೋ
ಅಟ್ಟೊಂದು ಮಾsತೂ ಕೇಳಿದ ತಮ್ಮಾs
“”ಕೇಳಾsಲೆ ನನ್ನ ಅಕ್ಕಾs
ನೀ ಹೇಳಿದಟ್ಟೆ ಸಂತೋಸಾಯ್ತೇ
ನಾನೇ ದೇಸಾsತ್ರ ಹೋಗುವಾಗೇs
ನಿನ್ನ ಕೈಲೆ ನಾsನೇಗೇs
ಊಟ್ಯಾಕೆ ಬಡ್ಸೂ ಹೇಳಿದೆ
ಊಟಕಾsದ್ರೆ ಬs ಬsಡೂಸಿದೇ
ನಿನ್ಗೆ ಕಡ್ಮಿಯೇಕೆ ಅsದಾsರೇs
ನನ್ಗೆ ಬಡ್ಸೀದ್ದ ಯಡಿಯನ್‌ದೇ
ಬುತ್ತೀsಯ ಕsಟ್ಟಿಟ್ಟ
ನಿನ್ಗೆ ಕಢ್ಮೀsಯ ಬಿsದ್ದಲ್ಲೇ
ಕೊಟ್ಟಿಕ್ ಹೋಗ್ವಾಅಂದೆ ಬಂದೇ”
ವಳ್ಳ ಬುತ್ತೀ ಲೆಕ್ಕಬಂದೇ ಕೊಟ್ಟಾs
ಹತ್ತಿದ ಕೊದ್ರೀ ಇಳ್ಯಾಲಿಲ್ಲs
ಹಿಂತಿರ್ಗೆ ಮನೆ ಹೋಗುವಾsಗೇs
ಕೇಳೇ ಕೇಳಲೊ ನನ್ನಾ ತಮ್ಮಾs,
ನಂದ್ ಯೆಟ್ಟೂವ ತsಪ್ಪsಲೂs
ಕೇಮಿssಸಬೇಕೋ ನೀನೂss
ತಪ್ಪು ಮಾಡ್‌ದ್ರೆ ವಪ್ಪೊಕಳ್ಳೋ”
ಅಂದ್ಹೇಳಿ ನುಡೂದಳೂ
“ನಿನ್ನ ಮನ್ಗೆ ನಾನೇ ಬತ್ತೀ’
ಅಂದ್ಹೇಳಿ ದುಕ್ಕಾನ ಮಾsಡಿತೋ
ಅಟ್ಟೊಂದು ಮಾತೂ ಕೇಳಿದ ತಮ್ಮs
“ಕೇಳಾsಲೆ ನನ್ನ್ಯಾ ಅಕ್ಕಾs,
ನನ್ನ ಮನಿಗೇ ನಿಟನೇಗೇ
ಬರ್ವದಾsದ್ರೆ ಅsಡ್ಡೆಳೇ
ಕೊದ್ರೀಮನೆ ಕುಂತೆsಕಳ್ಳೇ”
ಅಂದ್ಹೇಳಿ ನುಡೂದಾನೋ
ಅಕ್ಕನ ಮುಂದೆ ಕುಳ್ಳೇ ಕಂಡಾs
ತನ್ನsಮನ್ಗೆ ಕರುಕಂಡ ಹೋದಾನ
ಕರಕಂಡೆ ಹೋsಗಿನ್ನೇ
ಬೇಕಾದ್ದ ಉಚಯ ಮಾಡ್ದಾsನೆ
ಅಕ್ಕಾ””sಗೆ ಯೇ”ಗಿನ್ನೇ
ಪಟ್ಟೇ ಪೀತಾಂಬ್ರ್ ತೆಗಿಸೆಕೊಟ್ಟಾ
ಹಿಂತಿರ್ಗೆ ಮನೆಗೆ ಕಳುಸೇ ಕೊಟ್ಟಾ

ಇತ್ಲಾꞏಗೆ ಯೇನಾꞏಯ್ತೊ?
ಬರ್ಗಲದೇಸದ ರಾꞏಜನು
ಅಕ್ಕಿಕೊಟ್ಟಾ ಹಣವೇಯೇಗೇ
ಅವ್ನ ಇದ್ದಲಿ ಕಳುಗಾನೆ
ಹಣವ್ಯಾꞏಲು ತೆಗ್ದೆ ಕಂಡಾꞏ
ತನ್ನಾꞏಲು ಮನಿಯಲ್ಲೇ
ಸಂತೋಸದಿಂದೆ ಇꞏರುತಾನೋ

---

* ಬರಗಾಲ ದೇಶದ ವ್ಯಾಪಾರ; ಹೆಗಡೆ ಎಲ್.ಆರ್. ಮುಕ್ರಿ ಮತ್ತು ಹೊಲೆಯರ ಪದಗಳು ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೯, ಪು.ಸಂ. ೩೨-೪೩.

## ೫೦. ತುಂಬಿದ ಬಳ್ಳಾರಿ ವಳಗೆ*

ತಂದೆ ಕರಿಬಸಪ್ಪ
ತಾಯಿ ಚನ್ನಬಸಮ್ಮ
ಅತ್ತೆ ಗುರುಶಾಂತದೇವಿ
ಮಗನು ಗುರುಶಾಂತಪ್ಪ
ಬಲು ದೊಡ್ಡ ಸಾವುಕಾರಿ
ಅಯ್ಯಾ ಬುದ್ಧಿಯಿಂದ
ಓದೋ ಮಠಕೆ ಕಳಿಸಿ
"ಒಂಟಿ ಲೆಕ್ಕ ಜೋಡಿ ಲೆಕ್ಕ
ಮನದೊಳು ಲೆಕ್ಕ
ಗಟ್ಟಿಯ ಮಾಡಿ
ಸಾಯಂಕಾಲ ಮೂರು ಗಂಟೆವಳಗೆ
ಊರಿಗೆ ಬಾರೊ ಎನ್ನ ಮಗನೆ !"

ಹಂಗಂದು ಹೇಳಿದ ಮ್ಯಾಲೆ
ತಂದೆ ಕರಿಬಸಪ್ಪ
ತಾಯಿ ಚನ್ನಬಸಮ್ಮ
ಅತ್ತೆ ಗುರುಶಾಂತ ದೇವಿ
ಮಗನ ಸಂತುರಣೆ ಮಾಡಿ
ಐನೂರು ರೂಪಾಯಿ ಕೊಟ್ಟು
ರೇಶ್ಮೆ ವಸ್ತ್ರವ ಕೊಟ್ಟು

[ಬಂಗಾರದುಡುದಾರ ಕೊಟ್ಟು
ಸೊಂಟಕ್ಕೆ ನಡುಕಟ್ಟು ಕೊಟ್ಟು
ಕುಸ್ತಿ ಇಜಾರ ಕೊಟ್ಟು
ಒಂಟಿ ಬಾವಲಿ ಕೊಟ್ಟು
ಕಂಟಿ ಹಾರವ ಕೊಟ್ಟು
ಪುತ್ರನ ಕರಡಿಗೆ ಕೊಟ್ಟು
ಕಾಲಿಗೆ ಪಾಪಾಸ ಕೊಟ್ಟು
"ಹೋಗಿಬಾರೊ ಎನ್ನ ಮಗನೆ] ಸುಕ್ರವಾರ ಅದು ಪ್ಯಾಟೆ
ಸಂತೆ ಬಜಾರಕೆ ಹೋಗಿ
ಅಯ್ಯ ಸಂಗದ ಹುಡುಗರ
ಜೊತಿಯ ವಳಗೆ
ಮನದೊಳು ಲೆಕ್ಕವ ಗಟ್ಟಿಯಮಾಡಿ
ಸಾಯಂಕಾಲದ ಮೂರು ಗಂಟೆಯ ವಳಗೆ
ಊರಿಗೆ ಬಾರೊ ಎನ್ನ ಕಂದ
ಅಯ್ಯ ಹಂಗಂದ ಮಾತಿಗೆ
ತಂದೆ ಕರಿಬಸಪ್ಪ
ಮಗನ ಕರಕೊಂಡು ಬಂದ
ಶುಕ್ರವಾರ ಅದು ಪ್ಯಾಟೆ
ಸಂತೆ ಬಜಾರಿಗೆ ಬಂದು
ಅಂಗಡಿ ಸಾಲಿಗೆ ಹೋಗಿ
ಕಡಲೆ ಬೆಲ್ಲವ ಕೊಡಿಸಿ
ಮಗನ ಪುಂಜಿಯ ಮಾಡಿ
ಓದೊ ಮಠಕೆ ಹೋಗಿ
ನೋಡೊ ಒಳಗೆ
ಮೇಸ್ತ್ರೀ ಬಂದಿರಲಿಲ್ಲ
ಸಂಗದ ಹುಡುಗರ ಜೊತಿ ಒಳಗೆ
ಮನದೊಳು ಲೆಕ್ಕವ ಗಟ್ಟಿ ಮಾಡಿ
ಸಾಯಂಕಾಲ ಮೂರು ಗಂಟೆ ವಳಗೆ
ಊರಿಗೆ ಬಾರೊ ಎನ್ನ ಮಗನೆ
ಹಂಗಂದೇಳಿದ ಮ್ಯಾಲೆ
ತಂದೆ ಕರಿಬಸಪ್ಪ
ಮಗನ ಸಂತರುಣೆ ಮಾಡಿ
ಓದೋ ಮಠದಲ್ಲಿ ಬಿಟ್ಟು
ಊರಿಗೆ ಬಂದಾನು ನೋಡು
ಊರಿಗೆ ಬರುವೊ ಕಾಲದಲ್ಲಿ
ಗುದುಗೂರು ಚನ್ನಣ್ಣ ಬಂದು

ತನ್ನ ತೂಕ ಮಾಡಿ
ಮಗನ ಪೂಜೆಯ ಮಾಡಿ
ಮಗನಿದ್ದ ಚಂದಾವ ನೋಡಿ
ಮಗನಿದ್ದಂದಾವ ನೋಡಿ
"ಅಯ್ಯಯ್ಯೊ ಗುರುಶಾಂತಪ್ಪ
ನಿಮ್ಮಪ್ಪ ಸೋದರುಮಾವ
ಇಲ್ಲಾಕೆ ಬಂದೆ ನೀನು ?
ಇಷ್ಟು ಬಂಗಾರನಿಟ್ಟು
ಇಷ್ಟು ಆಭರಣ ತೊಟ್ಟು
ಓದೊ ಮಠಕೆ ಬಂದು
ವಳಗೆ ಒಬ್ಬಾನೆ ಹೋಗುತೀಯ
ಬಾರಪ್ಪ ಎನ್ನ ಮಗನೆ
ಮೂವರು ಮಕ್ಕಳಲ್ಲಿ
ನೀನೊಬ್ಬ ಮಗನೆ ಹೊರತು'

ಹಂಗಂದು ನೋಡಯ್ಯ
ಮಗನ ಪುಂಜಿಯ ಮಾಡಿ
ಮಗನ ಮಡಲಿಗೆ ಕಟ್ಟಿ
ಬಿಲ್ಲೂರ ಸ್ವಾಮಿತಕ್ಕೆ
ಮಗನ ಕರಕೊಂಡು ಬಂದು
ಸೊಂಟದೊಳ್ಳ ಕಾವು ಬಿಚ್ಚಿ
ಕಂದನ ಕೈಕಾಲು ಕಟ್ಟಿ
ಐನೂರು ರೂಪಾಯಿ ತೆಗೆದ
ರೇಶ್ಮೆ ವಸ್ತ್ರಾವ ತೆಗೆದ
ಬಂಗಾರದ ಉಡುದಾರ ತೆಗೆದ
ಸೊಂಟದ ನಡುಕಟ್ಟ ತೆಗೆದ
ಕುಸ್ತಿ ಇಜಾರ ತೆಗೆದ
ಒಂಟಿ ಬಾವಲಿ ತೆಗೆದ
ಪುತ್ರನ ಕರಡಿಗೆ ತೆಗೆದ
ಮುಂಗೈ ಗಿಲಕಿಯ ತೆಗೆದ
ಮಂಡೆ ರುಮಾಲು ತೆಗೆದ
ಕಾಲೊಳ್ಳ ಪಾಪಾಸ ತೆಗೆದ
'ದಮ್ಮಯ್ಯ ಕಾಣೊ ಚನ್ನಮಾವ
ಬಾವೀಗೆ ಹಾಕು ಬ್ಯಾಡ
ಮೂವರು ಮಕ್ಕಳಲ್ಲಿ
ನಾನೊಬ್ಬ ಮಗನೆ ಹೊರತು

ಎಂದು ಬೇಡಿದ ಕಂದ
ಎಷ್ಟು ಬೇಡಿದರೂ
ಕೇಳದಲೆ ನೋಡಯ್ಯ
ಗುದಗೂರು ಚನ್ನಣ್ಣಸ್ವಾಮಿ
ಬಾವೀಲಿ ಹಾಕಿದ ನೋಡು ।

ತುಂಬಿದ ಬಳ್ಳಾರಿ ವಳಗೆ
ಕಂದ ಮಾಯವಾಯಿತೆಂದು
ಊಜೆ ಹೋಯಿತು
ಮೋಸ ಮಾಡಿ ಎಮ್ಮನ್ನ ।

---

* ತುಂಬಿದ ಬಳ್ಳಾರಿ ವಳಗೆ; ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೧೯೭೬

## ೫೧. ಊರ ಪೋರ*

೧ಸಿಂಬೀ ಹಾಕಿದಾs ಬಳ್ಳಿಯಾ ತಡುದಿದಾs
ಕೇರಿಯ ಮೇನೇss ಹೊರಟೀದಾ ॥ ಊರ ಪೋರಾs
ಬೆಳ್ಳೀಯಾ ಬೆತ್ತಾss ಹಿಡುದೀದಾ ॥
ದೊಡ್ಡವರಾ ಮನಿಯೇs ಹಿಡುದೀದಾ ॥
"ಯಾರಪ್ಪಾ ನೀನೂ ? ಯಾವೂರು ಆಯಿತ್ಹೇಳುs
ನಮ್ಮನಿ ಆಳಾಗೀs ವಳಿವ್ಯೇನೂ ?' ।
"ಕೆಲಸಾನಾ ಕೇಳುತೇs ಬಂದಿದೇ ಈಗಲೇ
ನಿಮ್ಮನಿ ಆಳಾಗೀs ದುಡಿವೆನೆs' ।
ಅಂತಾ ಮಾತು ಕೇಳೀs ಸಂತೋಸೂ ಪಡುದಾರೂ
ಕೀಲಿಯ ಬೀಗಾs ಕೊಡುವರೂ ॥
ಕೀಲಿಯ ಬೀಗಾs ಕೈಯಲ್ಲಿ ಬೇಡಿಕೊಂಡಾs
ವಳುಗಲು ಕೋಣೆಗೇ ನೆಡವನೂ ॥ ಊರ ಪೋರಾ
೩ತಜುರಿಯಾs ಬೀಗಾs ಮುರಿದೀದಾs ॥ ಊರ ಪೋರಾ
ಹೊನ್ನಲು ಬಂಗಾರವೇs ತಗದೀದಾs ॥ ಊರ ಪೋರಾ
ಹಿಂತಿರುಗೀ ಮನಿಗೇs ಬರುವನೂ ॥ ಬರುವಟ್ಟಾ ಹೊತ್ತಿಗೇ
ಕಯ್ಯಾಗೂ ಬೇಡಿಯೇs ಹಿಡವರೂ ॥
"ಯಾರು ಮನಿಗ್ಹೊಗುಲೆಲ್ಲಾs ಯಾವ ಕಳೂ ಮಾಡಲೆಲ್ಲಾs

ಳಸೊಂಟಿಗೇ ಬೇಡೀss ಇಡಬೇಡೀ ||
ಸೊಂಟಿಗುವಾs ಬೇಡೀs ಲಟ್ಟದುಂಟಾsದರೇs
ಜಚೆಂಡಿಯಲ್ಡಾರಿಸುವೇs ಆರೂಗಳಿಗೇs ||
ಚಂದಕೂ ಚಾಕು ಕೊಟ್ಟ ಬೆನ್ನಿಗೂ ಬೇಡಿ ಹಿಡಿದಾ ||
ವಂದಾಳಾ ರಾಗಿಯಾs (ಯೇ) ಕರುಕಂಡಾs || ಕರುಕಂಡೀ ಬರವಾಗೂ

ಸೊಂಟೀಗಿದು ಚಾಕೂss ತಗದೀದಾs || ತಗುದೀ ಯೇ ನಂಬೂವ ?
"ಕಯ್ಯನು ವಾಚೂss ಕೊಡು ಬೇಗಾss ||'
೧ವಾಚಿನ ಕೇಳುವಾಗೇs ಪಿಸ್ತೂಲೂ ನೆಗುವಾಗೇ
ಕತ್ತೀ ತೆಗದ ಹಾರುಸಿದಾs ಲರುಗಳಿಗೇ ||
ಊರ ಪೋರನಾss ಹುಡುಕುತೀ ಬರುವಾಗೂs
ದೊರಗೊಳು ಮನಿಯಲ್ಲೀs ಇರುಲಿಲ್ಲಾ ಸುದ್ದಿ ಕೇಳೀ
೨ಜೀಪೂ ಕಾರೆಲ್ಲಾs ಹೊರಡೂರೂ || ಹೊರಡುವಾ ಹೊತ್ತಿಗೂs
ಊರು ಪೋರಾ ಬಿದ್ದೀs ವೋಡುವಾಗೇss
ಊರು ಪೋರಾ ಬಿದ್ದೀs ವೋಡುದಟ್ಟಾs ಹೊತ್ತಿಗೂs
ಮುನಸಿಪರು ಬಂದೀss ಹಿಡವರೂ || ಹಿಡವಟ್ಟಾ ಹೊತ್ತಿಗೂs
ಕಯ್ಯಾನs ಬೇಡೀss ಹಿಡವರೂ || ಬಿಡಸೂರೂ ||
ಕಯ್ಯಾನs ಬೇಡೀss ಬಿಡುಸೀ ಯೇನಂಬೂರೂ ?
"ಸೊಂಟೀಗಿದ್ದು ಚಾಕೂss ಕೊಡು' ಅಂದೀs ||
"ನೀ ತಿನ್ನುವಾs ಹಣ್ಣುs ಯಾವದು ಲಂದೆ ಪೇಳುs
ಬೇಕಾದಾs ಹಣ್ಣುs ಕೊಡಸೂತೇs || ಕೊಡಸುವೆ ಪೂರಾ ಪೋರಾ,
ತಾಯಿತಂದಿ ಗುರುತಾss ನನುಗ್ಹೇಳೂs ||
"ತಾಯಿತಂದಿ ಗುರುತ್ ಹೇಳುಕೇs ಹಾದಿ ತಪ್ಪಿ ಬರುಲಿಲ್ಲಾs
ಊರಾ ೩ಬಸುವಾಗೀs ಕೊಣಿಲಿಲ್ಲಾs"
"ಸೊಕ್ಕಿನೂ ಮಾತೂs ನಮ್ಮೊಡನೇs ಹೇಳಲು ಬೇಡಾ
ಕೊಡುವೆ ನೇs ನಿನಗೇ ಹಣುಗಳಾ
"ನಿಮ್ಮಲಿ ಕೇಳುಕೇs ಊರು ಬಸುವಾಗಿ ಬರುಲೆಲ್ಲಾs
ಬೇಡುತೆ ನಿಮ್ಮನಿಗೂs ಬರುಲಿಲ್ಲಾs ||
ಕಳ್ಳನು ನಾನಲ್ಲಾs ಸುಳುಗಾsರನಲ್ಲಾ
ಮೋಸ ಮಾಡುವೆ ನಾನೂsಲರುಗಳುಗೇs ||"
"ಕೂರ್ತಾ ಕುರ್ಚೆ ಬಿಟ್ಟೀs ಬರವಾs ಬೇಂಚು ಬಿಟ್ಟೀs
ಳಬೇಲೀಪರ ಕೊಟ್ಟೀss ಕರತರವೇs || ಲೂರು ಪೋರಾs

ಪೌದ್ದಾರನ ಮೋಸೂಗೈದಿದೇ | ಲೂರುಪೋರಾ,
ನನುಮೋಸುಕು ಬಂದೇ ಲರುಗಳಿಗೇs ಲಂದಿಕಂಡೀss
ಬೆಳುಗಾವಕೂ ತಾರೂs ಹೊಡುದಿರೂs ||

ಬೆಳುಗಾವಕೂ ತಾರೂs ಯೇನಂದೀ ಹೊಡುದಿರೂ ?
ಊರುಪೋರಾ ಮೋಸಾs ಗೈದಿದಾs ನಮ್ಮುರಲ್ಲಿs
ಇವ್ನಾರುವಾ ಪರುಜಿಲ್ಯಲ್ಲೀss ಕೊಡುವಬದೂ ||

---

* ಊರಪೋರ; ಹೆಗಡೆ ಎಲ್.ಆರ್. ಮುಕರಿ ಮತ್ತು ಹೊಲೆಯರ ಪದಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು - ೧೯೭೯ ಪು.ಸಂ. ೮೧-೮೨.

## ೫೨. ಹಲಸಿನ ಹಕ್ಕಿ*

ಹೊತ್ತರಾ ಮುಂಚೇ ಎದ್ದೀತ್ ಹಕ್ಕಿ ಹಲ್ಸೀನಾ ಹಕ್ಕೀ ನಾರೀನಾರಾಯ್ಣ
ಮೂಡುಮುಖ ಹೋಯಿತ್ ಹಕ್ಕಿ ಹಲ್ಸೀನಾ ಹಕ್ಕೀ ನಾರೀನಾರಾಯ್ಣ**
ಮೂರೇ ಚೆಪ್ಪು ತಂದೀತ್
ಅಡ್ಡಾದಿಡ್ಡೀ ಬೆಚ್ಚೀತ್
ಗೂಡನಾರೂ ಕಟ್ಟೀತ್
ಒಂದೇ ದಿವ್ಸ ಬಿಟ್ಟೀತ್
ಒಂದೇ ಮೊಟ್ಟೇ ಇಟ್ಟೀತ್
ಮತ್ತೊಂದೇ ದಿವ್ಸ ಬಿಟ್ಟೀತ್
ಮತ್ತೋಂದೇ ಮೊಟ್ಟೆ ಇಟ್ಟೀತ್
ಮತ್ತೊಂದೇ ದಿವ್ಸ ಬಿಟ್ಟೀತ್
ಮತ್ತೊಂದೇ ಮೊಟ್ಟೆ ಇಟ್ಟೀತ್
ಮೂರೇ ಮೊಟ್ಟೆ ಆಯಿತೀಗ
ಮತ್ತೆಂಟೇ ದಿವ್ಸ ಬಿಟ್ಟೀತ್
ಕಾವಿಗಾರೂ ಕೂತೀತೀಗ
ಮರೀನಾರೂ ಒಡ್ಡಿತ್
ಮರೀಗೆ ಮೇವ್ ತಂದ್ ಕೊಡ್ತ್
ಅತ್ತೆ ಇತ್ತೆ ಆಡುತ್ತಿದ್ದೊ
ಅತ್ತೆ ಇತ್ತೆ ಹಾರೂತ್ತಿದ್ದೊ
ಮರನಾ ಒಳಗೇ ಬಿದ್ದೇ ಹೋದೋ
ಮೇವು ಆರೂ ತಂದೀತ್
ಅರಿಸೀ ಆರೂ ನೋಡೀತ್
ಒಂದೂ ಮರಿಯೂ ಇಲ್ಯಾಲಂತ್
ಆಚಾರೀ ಮನೇ ನಡೀತ್

"ಆಚಾರೀ ಹುಡ್ಗಾ ಆಚಾರೀ ಹುಡ್ಗಾ
ಮರಾ ಒಂದೇ ಕಡ್ದೇ ಕೊಡ್ಯಾ'

"ದೊಡ್ಡೋರ್ ಬೆಟ್ಟೀನ್ ಮರಾ ಆದ್
ನನ್ನಿಂದಾರೇ ಸಾಗಾದಪ್ಪ"
ಅಷ್ಟು ಮಾತೂ ಕೇಂಡೀತ್
ಅಲ್ಲಿಂದಾರೂ ಎದ್ದೀತ್
ನಾಯಿ ಬುಡಕ್ಕೆ ಓಡಿತ್
"ನಾಯೇ ನಾಯೇ
ಆಚಾರೀ ಕಾಲು ಕಚ್ಚಿಕೊಡು"
"ನನ್ನಿಂದಾರೂ ಸಾಗಾದಪ್ಪ
ದೊಡ್ಡೋರ್ ಬೆಟ್ಟೀನ್ ಆಚಾರೀ ಆವ್ನ್'
ಅಷ್ಟೇ ಮಾತು ಕೆಂಡೀತೀಗ
ಅಲ್ಲಿಂದಾರೂ ಎದ್ದೀತೀಗ
ಕೋಲು ಬುಡಕ್ಕೆ ಓಡೀತ್
"ಕೋಲೇ ಕೋಲೇ
ನಾಯಿ ಕಾಲು ಮುರ್ದ್ದೆಕೊಡು"
"ನನ್ನಿಂದಾರೂ ಸಾಗಾದಪ್ಪ
ದೊಡ್ಡೋರ್ ಬೆಟ್ಟೀನ್ ನಾಯಿ ಅದು"
ಅಷ್ಟು ಮಾತು ಕೇಂಡೀತ್

ಅಲ್ಲಿಂದಾರೂ ಎದ್ದೀತ್
ಬೆಂಕೀ ಬುಡಕ್ಕೆ ಓಡೀತ್
"ಬೆಂಕಿಯೇ ಬೆಂಕಿಯೇ
ಕೋಲಾನಾರೂ ಸುಟ್ಟೀಕೊಡು'
"ನನ್ನಿಂದಾರೂ ಸಾಗಾದಪ್ಪ
ದೊಡ್ಡೋರು ಬೆಟ್ಟನಾ ಕೋಲು ಅದು'
ಅಷ್ಟೇ ಮಾತು ಕೇಂಡೀತ್
ಅಲ್ಲಿಂದಾರೂ ಎದ್ದೀತ್
ನೀರ್ ಬುಡಕ್ಕೆ ಓಡೀತ್
"ನೀರೇ ನೀರೇ
ಬೆಂಕಿನಾರೂ ನಂಗ್ಸಿಕೊಡು"
"ನನ್ನಿಂದಾರೂ ಸಾಗಾದಪ್ಪ
ದೊಡ್ಡೋರ್ ಬೆಟ್ಟೀನ್ ಬೆಂಕ್ಯಾಲ್ದಾ'
ಅಷ್ಟೇ ಮಾತು ಕೇಂಡಿತ್
ಅಲ್ಲಿಂದಾರೂ ಎದ್ದೀತ್

ಬಸವನ ಬುಡಕ್ಕೆ ಓಡಿತ್
“ಬಸವಣ್ಣ ಬಸವಣ್ಣ
ನೀರಾರೂ ಕುಡ್ದೆಕೊಡು'
“ನನ್ನಿಂದಾರೂ ಸಾಗಾದಪ್ಪ
ದೊಡ್ಡೋರ ಬೆಟ್ಟೀನ್ ನೀರ್ ಅಲ್ದಾ”
ಅಷ್ಟೇ ಮಾತು ಕೇಂಡೀತ್
ಅಲ್ಲಿಂದಾರೂ ಎದ್ದೀತ್
ಬಳ್ಳೀ ಬುಡಕ್ಕೆ ಓಡಿತ್ ಹಕ್ಕಿ
“ಬಳ್ಳೀಯೇ ಬಳ್ಳೀಯೇ
ಬಸವನಾರೂ ಕಟ್ಟಿಕೊಡು'
“ನನ್ನಿಂದಾರೂ ಸಾಗಾದಪ್ಪ
ದೊಡ್ಡೋರ್ ಬೆಟ್ಟೀನ್ ಬಸವಾ ಅಲ್ದಾ'
ಅಷ್ಟೇ ಮಾತು ಕೇಂಡೀತ್ ಹಕ್ಕಿ
ಅಲ್ಲಿಂದಾರೂ ಎದ್ದೀತ್
ಹೆಗ್ಗುಳನ ಬುಡಕ್ಕೆ ಓಡೀತ್
“ಹೆಗ್ಗುಳಣ್ಣೊ ಹೆಗ್ಗಳಣ್ಣೊ
ಬಳ್ಳೀ ಒಂದೇ ಕತ್ತರಿಸಿಕೊಡು'
“ನನ್ನಿಂದಾರೂ ಸಾಗಾದಪ್ಪಾ
ದೊಡ್ಡೋರ್ ಬೆಟ್ಟೀನ್ ಹೆಗ್ಗೂಳಾದ'
ಅಷ್ಟೇ ಮಾತೂ ಕೇಂಡ್ಡೀಂತ್ ಹಕ್ಕಿ
ಅಲ್ಲಿಂದಾರೂ ಎದ್ದೀತ್
ಬೆಕ್ಕೀನ ಬುಡಕ್ಕೆ ಓಡಿತ್
“ಬೆಕ್ಕೇ ಬೆಕ್ಕೇ
ಹೆಗ್ಗುಳನಾ ಹಿಡ್ದೇ ಕೊಡ್ಯಾ'
“ನನ್ನಿಂದಾರೂ ಸಾಗಾದಪ್ಪ
ದೊಡ್ಡೋರ್ ಬೆಟ್ಟೀನ ಬೆಕ್ಕ್ ಅಲ್ದಾ”
ಅಷ್ಟೇ ಮಾತು ಕೇಂಡೀತ್
ಅಲ್ಲಿಂದಾರೂ ಎದ್ದೀತ್
ಬಾಳಾ ಸಿಟ್ಟ್ ಬಂದೀತ್
ಹೆಗ್ಡೇರ್ ಬುಡಕ್ಕೆ ಹೋಯಿತ್
ದೂರನಾರೂ ಕೊಟ್ಟೀತ್
ಹೆಗ್ಡೇರ್ಗ್ ಸಿಟ್ಟ್ ಬಂದ್ಹೋಯ್ತು
ಹೆಗ್ಗಡ್ತೇರಿಗೆರಡು ಗಾಂಡ್ ಬಿತ್ತ್
ಹೆಗ್ಗಡ್ತೇರಿಗಾರೂ ಸಿಟ್ಟೇ ಬಂತ್
ಬೆಂಕೀಗೆರಡು ಗಾಂಡಿಗೇ ಬಿತ್ತ್
ಬೆಕ್ಕೇ ಹೋಯಿ ಹೆಗ್ಗಳಾ ಹಿಡೀತ್

ಹೆಗ್ಗಳಾ ಹೋಯಿ ಬಳ್ಳಿಯೇ ಕತ್ತರ್ಸ್ತ್
ಬಸವಾ ಹೋಯಿ ನೀರೇ ಕುಡೀತ್
ಬೆಂಕಿ ಹೋಯಿ ಕೋಲೇ ಸುಡ್ತ್
ನಾಯಿ ಹೋಯಿ ಕಾಲೂ ಕಚ್ತ್
ಆಚಾರೀ ಹೋಗಿ ಮರಾ ಕಡ್ದಾ
ಹಕ್ಕೀ ಮರಿ ತೆಗ್ದ್ ಕೊಟ್ಟ

---

** ಪ್ರತಿಪಾದಾಂತ್ಯದಲ್ಲೂ "ಹಲ್ಸೀನಾ ಹಕ್ಕೀ ನಾರೀನಾರಾಯ್ಣ" ಎಂದು ಸೇರಿಸಿಕೊಳ್ಳಬೇಕು.

---

* ಹಲಸಿನ ಹಕ್ಕಿ, ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಯ, ಹಾಡಿಗೆ ಹನ್ನೆರಡು ಕಬರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು - ೧೯೭೩ ಪು.ಸಂ. ೧೪೯,೧೫೧

## ೫೩. ಮಾಡಿದಾಕಿ ಉಣತಾಳ ಮಣಿಯಂತ ಕಡಬೂ*

ಅತ್ತೀಮನಿಗೆ ಸೊಸಿ ಬಂದಳ
ಬಾಳಪ್ರೀತೀಲಿ ಬಾಳೆವ ಮಾಡ್ವದಕೆ ||೧||

ಅತ್ತಿಕೊಲ್ಲಲಿಕೆ ಬೇತ ಮಾಡತಳ
ಮನ್ಯಾನ ವೈವಟ ನೋಡಾಕೆ ||೨||

ಮುಪ್ಪಾನ ಮುದಕೀ ಮುಂಜಾಲೆಯೆದ್ದು
ನೂಲಕ ಕುಂತಳ ಕೋಣ್ಯಾಗೆ ||೩||

ಸೊಸೆ ಹರಕೀಗೂಡಿತು ಎಂದೂ |
ಬಂದಾಳತ್ತಿಯ ಹಂತ್ಯಾಕೇ ||೪||

ಗಂಡ ಹೊಲಕ ಹೂಡಾಕ ಹೋಗಿದ್ದ |
ಮನ್ಯಾಗ್ಯಾರಿಲ್ಲ ಯಾಳ್ಯಾಕೇ ||೫||

ಬಡಬಡ ಬಂದೂ ಅಂಗಾತ ಕೆಡವೀ |
ಯೆದಿ ಮೇಲೆ ಕುಂತಾಳ ಕ್ಷಣಕ ||೬||

ಅತ್ತಿ ಅನ್ನತಾಳ ಹೀಂಗ್ಯಾಕ |
ಬಂದಿದಿ ಜೀವಾ ಕೊಲ್ಲಾಕೇ ॥೭॥

ಕೊಲ್ಲಬ್ಯಾಡ ನಿನ್ನ ಕಾಲ ಬೀಳತೀನೀ ॥
ಜಿಂದಗೆನ ಕೊಡತಿನಿ ವೈವಟಕೇ ॥೮॥

ಅಷ್ಟ ಹೇಳಿದ್ರ ಬರಲಿಲ್ಲ ಕರಣಾ |
ಕುಂತಳ ಕುತಗೀ ಮುರಿಯಾಕ ॥೯॥

ಬಾಯಿ ಮಾಡಾಳಂತ ಬಾಯ್ತುಂಬ ಅಳ್ಳಿಯ |
ತುರ್ಕುತಾಳ ಗಂಟಲ ತನಕಾ ॥೧೦॥

ಗಂಡ ಬಂದ ಸುದ್ದೀ ಕೇಳ್ಯಾಳ |
ಮನಿಮಾರ ಮಾರಟ ಮಾಡ್ತಾಳ್ರೀ ॥೧೧॥

ಈಗ ಸದ್ಯಕ್ ತಿಂತಾಳ ಕೋಣ್ಯಾಗ |
ಕರದೆ ಎದ್ದು ತೋರ್ಯಾಳ ಗಂಡಾಗ ॥೧೨॥

ಮಗ್ಗಕಂಡಿ ತಾಯಿ ಸೊನ್ನಿ ಮಾಡತಳ |
ಬಾಯಾನಳ್ಳೀ ತಗಿಯಾಕ ॥೧೩॥

ತಾಯಿ ಮಾಡಿದ್ ಸೊನ್ನಿ ಮಗ್ಗ ತಿಳೀಲಿಲ್ಲ |
ಹೆಂಡ್ತಿಗೆ ಕೇಳ್ತಾನಾವಾಗ ॥೧೪॥

ಹೆಣ್ತಿ ಅನ್ನತಳ ಇನ್ನಷ್ಟ ಅಳ್ಳೀ |
ತುಂಬಂತಾಳ ಬಾಯಾಗ ॥೧೫॥

ಕಳ್ಳ ನನ್ನ ಸಂವ್ತಿ ಹಾಳ ಮಾಡತಾಳು |
ಹೊತಗೊಂಡ ಹೋಗ ಚಲ್‌ಬಾವ್ಯಾಗ ॥೧೬॥

ಆಗ ಹೆಂಡ್ತಿಯಾ ಮಾತ ಕೇಳಿ |
ತಾಯಿಗೆ ಕಟ್ಯನ ಕಂಬಳ್ಯಾಗ ॥೧೭॥

ತಡಾಯಿಲ್ಲದೇ ಬಡಬಡ ಬಂದವ |
ತಾಯಿಗೆ ವಗದನು ಬಾವ್ಯಾಗ ॥೧೮॥

ತಾಯಿ ಮಾಡ್ದಪುಣ್ಯಾವದಗಿ ಬಂದೈತಿ |
ಮಾದೇವ್ರು ಇಳ್ದಾರು ಬಾವ್ಯಾಗ ॥೧೯॥

ಬಾವ್ಯಾದ ಹೆಣಾ ಕಡೀಗ ತೆಗದ ।
ಮುದ್ಕ್ಯಾನ ಕೇಳ್ತಾರಾವಾಗ ॥೧೦॥

ನಿನ್ನ ಹೊಟ್ಟೆಮಗ ನಿನ್ಗ ಮುನದನಾ ।
ಯಿನ್ನ ಹೋಗಬೇಡಾ ನಿಮ್ಮನಿಗ ॥೧೧॥

ಕೊಡ್ವಾನ ರುಪಾಯ ಕೊಡ್ತೆನಿ ಮಗಳಾ ।
ಬೇಕಾದ್ದ ಕೊಂಡುಣ್ಣಡವ್ಯಾಗ ॥೧೧॥

ಶಿವಕೊಟ್ಟ ಹೋದ ಕೈಲಾಸ್ಗೆ ।
ಮುದ್ಕಿ ಅಕಲ ಹಾಕತಾಳ ಹ್ಯಾಂಗ ॥೧೩॥

ವಯ್ದು ಕೊಡ್ಬೇಕು ನನ್ನ ಮಗನೀಗೆ ।
ಡೌಲನ್ನ ಆಗ್ಲಿ ಊರಾಗ ॥೧೪॥

ಹೊತ್ಕೊಂಡು ಬಂದ್ಲು ಆವಾಗ ।
ಸೊಸಿ ನೋಡಿ ಹೇಳ್ತಾಳ ಗಂಡಂಗೆ ॥೧೫॥

ಮತ್ತೆ ದಿಮ್ಯಾಗೆ ಬರತಾಳ ನಮಗ ।
ಹೊಡಿ ಕತ್ತರ್ಸಿ ಬೀಳುವ ಹಾಂಗ ॥೧೬॥

ಆಗೆ ಹೆಂಡ್ತಿಯಾ ಮಾತ ಕೇಳೀ ।
ತಾಯಿಗೆ ಹೊಡೆದನು ಬಲ್ಲಾಂಗ ॥೧೭॥

ಹೊಡಿಬ್ಯಾಡ ಮಗನೇ ಕಾಲಬೀಳ್ತೀನೇ ।
ಗಂಡ ಹೊಡ್ಯದೂ ಸೊಸಿ ಬಿಡ್ಸಿಕಂಡು
ಅತ್ಯವ್ವ ಕೇಳ್ತಾಳಾವಾಗ ॥೧೮॥

ಕೊಡಪಾನ ಹೊನ್ನೂ ಯಾವಲಿತಂದ್ರೀ ? ।
ವತಾರ ಮಾಡಿ ಹೇಳವ್ರ ನನಗೆ ॥೧೯॥

ಅಯ್ಯ ನನ್ನ ಸೊಸಿಯೇ ನಾ ಬಿದ್ದ ಬಾವ್ಯಾಗ ।
ಕೊಡ್ದಾನ್ಯೆದವು ಬಲ್ಲಾಂಗ ॥೨೦॥

ಅಯ್ಯ ನನ್ನ ಗಂಡಾ, ನನಗೂ ವಗ್ಯನಡಿ ।
ಅತ್ತಿಯ ವಗಿದ ಬಾವ್ಯಾಗ ॥೨೧॥

ಹಂಡಿವ ರುಪಾಯ ಬಡಕೊಂಡು ಬರತಿನಿ ।
ದೌಲೋ ರಾಗುವನು ಊರಾಗ ॥೩೧॥

ಆಗ ಹೆಂಡ್ತಿಯಾ ಮಾತಾ ಕೇಳಿ ।
ಹೆಂಡ್ತಿಗೆ ಕಟ್ಯಾನ್ ಕಂಬ್ಯಾಗ್ ॥೩೩॥

ತಡಾಯಿಲ್ಲದೇ ಬಡಬಡ ಬಂದೂ ।
ಯೆತ್ತಿ ಹಾಕ್ಯನೂ ಬಾವ್ಯಾಗ ॥೩೪॥

ಹುಡ್ಗವಗದ ನಿಂತ ಭಾದೂರಾ ।
ವಗ್ದ ಹುರುಪಿಗೆ ಕುಡ್ದಾಳ ನೀರಾ ॥೩೫॥

ಮುಣಮುಣ್ಗೆ ಮಾಡ್ತಾಳವಸರಾ ।
ಗಂಡಾಗ ತಿಳಿತ ಮಜಕೂರ ॥೩೬॥

ಅಷ್ಯಾಕ ಬಿಡವಿದೀ ಬೋರಾ ।
ಸಣದೊಂದು ತಕಂಡ ಬರ ಹಗರಾ ॥೩೭॥

ಮುಣ್ಗಿದ ನಾರೀ ಮ್ಯಾಲಕೇಳಲಿಲ್ಲಾ ।
ತಾಯಿಗೆ ಕೇಳ್ತಾನಾವಾಗ ॥೩೮॥

ತಾಯಿ ಯನ್ನತಾಳ "ಹೊನ್ನ ಬಳೀತಾಳೋ ।
ಗುರಳಿಯ ಬಿಡತಳ ನೀರಾಗ ॥೩೯॥

ಬಿದ್ದ ಮೂರ ದಿನ್ಕ ಬರತಾಳೊ ಮಗನೇ ।
ಕರಕೊಂಡ್ ಹೋಗ್ಬೇಕು ನಮ್ಮನಾ ॥೪೦॥

ಅತ್ತಿಮ್ಯಾಗ ಸೊಸಿ ತಿರಗಿ ಬಿದ್ದರೇ ।
ಮೋಕ್ಷದಾರಿ ಅವರೀಗಿಲ್ಲಾ ॥೪೧॥

ಮಾಡಿದಕಿ ಉಣತಾಳ ಮಣಿಯಂತ ಕಡಬೂ ।
ಇದೆಯೇನ ಮಾತೇನ ಸುಳ್ಳಲ್ಲಾ ॥೪೨॥

ಬಂಗಾರ ಊರು ರಂಗಲಾಲಾ ।
ಸಣ್ಣ ಹುಡಗ ತುಕಾರಾಮು ಬಾಲ ॥೪೩॥

ಅವ ತಗಿದನು ಹಾಡೀನ ಕಲಾ ।
ಬಲಭೀಮನ ದಯಾದ ಮ್ಯಾಲ ॥೪೪॥

**ಪಾಠಾಂತರಗಳು ಮತ್ತು ಸಮಾನ ಆಶಯದ ಪಠ್ಯಗಳು :**

**೧. ಅತ್ತೆ ಸೊಸೆ; ಲಿಂಗಯ್ಯ ಡಿ. ಕರ್ನಾಟಕ ಜನಪದ ಕಾವ್ಯಗಳು, ದಿನಕರ ಪ್ರಕಾಶನ ಬೆಂಗಳೂರು – ೧೮೭೬ ಪು.ಸಂ.**

**೨. ಸತ್ಯವಂತೆ ಹಡೆದವ್ವ; ಜಯಲಕ್ಷ್ಮಿ ಸೀತಾಪುರ, ನಮ್ಮ ಸುತ್ತಿನ ಜನಪದ ಕಥನಗೀತೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು – ೧೯೯೪ ಪು.ಸಂ. ೬೯-೭೧.**

---

* ಮಾಡಿದಾಕಿ ಉಣತಾಳ ಮಣಿಯಂತ ಕಡಬೂ; ಹೆಗಡೆ ಎಲ್.ಆರ್. ಲೋಕಗೀತ ಮಂಜರಿ ಪ್ರಾದೇಶಿಕ ರಂಗಕಲೆಗಳ ಕೇಂದ್ರ ಉಡುಪಿ ೨೦೦೨, ಪು.ಸಂ. ೩೪-೩೬.

## ೫೪. ನೂಲೊಲ್ಲ್ಯಾಕ ಚೆನ್ನೀ ?*

ಗಂಡ - ನೂಲಲ್ಯಾಕ ಚೆನ್ನೀ !
ನೂಲಲ್ಯಾಕ ಚೆನ್ನೀ !

ಹೆಂಡತಿ - ರಾಟಿಲಿಲ್ಲೋ ಜಾಣಾ !
ರಾಟಿಲಿಲ್ಲೋ ಜಾಣಾ !

ಕತೆಗಾರ- ಮನಿಯಾನ ಬಂಡೀ ಮುರಸಿ
ಮನಿಯಾನ ಬಂಡೀ ಮುರಸಿ

ರಾಟಿ ಮಾಡಿಸಿಕೊಟ್ಟಾ
ರಾಟಿ ಮಾಡಿಸಿಕೊಟ್ಟಾ

ಗಂಡ - ನೂಲಲ್ಯಾಕ ಚೆನ್ನೀ
ನೂಲಲ್ಯಾಕ ಚೆನ್ನೀ

ಹೆಂಡತಿ - ಕದರಿಲ್ಲೋ ಜಾಣಾ !
ಕದರಿಲ್ಲೋ ಜಾಣಾ !

ಕತೆಗಾರ- ಕೈಯಾನ ಗುದ್ದಲಿ ಮುರಸಿ
ಕೈಯಾನ ಗುದ್ದಲಿ ಮುರಸಿ

ಕದರ ಮಾಡಿಸಿ ಕೊಟ್ಟಾ
ಕದರ ಮಾಡಿಸಿ ಕೊಟ್ಟಾ

ಗಂಡ - ನೂಲಲ್ಲ್ಯಾಕ ಚೆನ್ನೀ
ನೂಲಲ್ಲ್ಯಾಕ ಚೆನ್ನೀ

ಹೆಂಡತಿ - ಚೆಲ್ಲಿಲ್ಲೋ ಜಾಣಾ
ಚೆಲ್ಲಿಲ್ಲೋ ಜಾಣಾ

ಕತೆಗಾರ- ಮನಿಯಾನ ಕೋಣವು ಕಡಿಸಿ
ಮನಿಯಾನ ಕೋಣವು ಕಡಿಸಿ

ಚಲ್ಲ ಮಾಡಿಸಿ ಕೊಟ್ಟಾ
ಚೆಲ್ಲು ಮಾಡಿಸಿ ಕೊಟ್ಟಾ

ಗಂಡ - ನೂಲಲ್ಲ್ಯಾಕ ಚೆನ್ನೀ !
ನೂಲಲ್ಲ್ಯಾಕ ಚೆನ್ನೀ !

ಹೆಂಡತಿ - ಹಮ್ಮಿಗಿಲ್ಲಲೊ ಜಾಣಾ
ಹಮ್ಮಿಗಿಲ್ಲೆಲೊ ಜಾಣಾ

ಕತೆಗಾರ- ನಡುವಿನ ಉಡದಾರ ಕಡಿದು
ನಡುವಿನ ಉಡದಾರ ಕಡಿದು

ಹಮ್ಮಿಗಿ ಮಾಡಿಸಿ ಕೊಟ್ಟಾ
ಹಮ್ಮಿಗಿ ಮಾಡಿಸಿ ಕೊಟ್ಟಾ

ಗಂಡ - ನೂಲಲ್ಲ್ಯಾಕ ಚೆನ್ನೀ
ನೂಲಲ್ಲ್ಯಾಕ ಚೆನ್ನೀ

ಹೆಂಡತಿ - ಕಟ್ಟಿ ಇಲ್ಲಲೋ ಜಾಣಾ
ಕಟ್ಟಿ ಇಲ್ಲಲೋ ಜಾಣಾ

ಕತೆಗಾರ- ಊರಾನ ವಡ್ಡರ ಕರಿಸಿ
ಊರಾನ ವಡ್ಡರ ಕರಿಸಿ

ಕಟ್ಟಿ ಕಟ್ಟಿಸಿಕೊಟ್ಟಾ
ಕಟ್ಟಿ ಕಟ್ಟಿಸಿಕೊಟ್ಟಾ

ಗಂಡ - ನೂಲೊಲ್ಲ್ಯಾಕ ಚೆನ್ನೀ।
ನೂಲೊಲ್ಲ್ಯಾಕ ಚೆನ್ನೀ।

ಹೆಂಡತಿ -        ಗೆಳತ್ಯಾರಿಲ್ಲೊ ಜಾಣಾ।
ಗೆಳತ್ಯಾರಿಲ್ಲೊ ಜಾಣಾ।

ಕತೆಗಾರ-        ಓಣ್ಯಾಗಿನವರ ಕರಿಸಿ
ಓಣ್ಯಾಗಿನವರ ಕರಿಸಿ

ಗೆಳತ್ಯಾರ ಕೂಡಿಸಿ ಕೊಟ್ಟಾ
ಗೆಳತ್ಯಾರ ಕೂಡಿಸಿ ಕೊಟ್ಟಾ

ಗಂಡ   -        ನೂಲಲ್ಯಾಕ ಚೆನ್ನೀ
ನೂಲಲ್ಯಾಕ ಚೆನ್ನೀ

ಹೆಂಡತಿ -        ಗುಗ್ಗರಿಲ್ಲೋ ಜಾಣಾ
ಗುಗ್ಗರಿಲ್ಲೋ ಜಾಣಾ

ಕತೆಗಾರ-        ಗೋಧಿ ಕಡ್ಲಿ ತರಿಸಿ
ಗೋಧಿ ಕಡ್ಲಿ ತರಿಸಿ

ಗುಗ್ಗರಿ ಹಾಕಿಸಿ ಕೊಟ್ಟಾ
ಗುಗ್ಗರಿ ಹಾಕಿಸಿ ಕೊಟ್ಟಾ

ಗಂಡ   -        ನೂಲಲ್ಲ್ಯಾಕ ಚೆನ್ನೀ
ನೂಲಲ್ಲ್ಯಾಕ ಚೆನ್ನೀ

ಹೆಂಡತಿ -        ನನಗೆ ಬರೋದಿಲ್ಲೋ ಜಾಣಾ।
ನನಗೆ ಬರೋದಿಲ್ಲೋ ಜಾಣಾ।

---

* ನೂಲೊಲ್ಲ್ಯಾಕ ಚೆನ್ನೀ ?; ಲಿಂಗಯ್ಯ ಡಿ ಮತ್ತು ಸಂಧ್ಯಾ ರೆಡ್ಡಿ ಕೆ.ಆರ್. ಜಾನಪದ ಸ್ವರೂಪ ಮತ್ತು ಸಾಹಿತ್ಯ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೯೭ ಪು.ಸಂ. ೨೧೦-೨೧೨.

# ೫೫. ಇಡ್ಲಿ ಮಾದಮ್ಮ*

ತಾಲಲಲೇ ಮಾಯೀ ತಾಲಲಲೇ ||ಪಲ್ಲವಿ**||
ಕೊಲ್ಲಂಪುರದ ಪಟ್ಟಣದೊಳಗೆ
ಇಡ್ಲಿ ಮಾದಮ್ಮ ಇದ್ದಳಣ್ಣ
ಅವಳು ಇಡ್ಲಿನಾದರು ಮಾಡ್ತಾಳೆ
ಕಾಫಿನಾದರು ಕಾಯಿಸ್ತಾಳೆ
ಇಡ್ಲಿ ಮಾದಮ್ಮನ ಜಾತ್ಯವನು
ಮಾತುಗಾರ ಮಲ್ಲಣ್ಣನಣ್ಣ
ಇಡ್ಲಿ ಮಾರುವ ಮಾದಮ್ಮನಿಗೆ
ಕರೀಂ ಸಾಬರು ಸ್ನೇಹಿತರಣ್ಣ

ಕೊಲ್ಲಂಪುರದ ಇಡ್ಲಿ ಮಾದಮ್ಮನವರು ಮುಸುರೆ ವ್ಯಾಪಾರ. ಅದೇ ಊರಿನ ಮಲ್ಲಣ್ಣನದು ಎತ್ತು ಎಮ್ಮೆ ದಳ್ಳಾಳಿ ವ್ಯಾಪಾರ. ಕರೀಂ ಸಾಬರದು ಫುಟ್‌ಪಾತ್ ವ್ಯಾಪಾರ. ಇಡ್ಲಿ ಮಾದಮ್ಮನೂ ಕರೀಂ ಸಾಬರೂ ಚಿಕ್ಕಂದಿನಿಂದಲೂ ಸ್ನೇಹಿತಗಾರರು ಮಾದಮ್ಮನ ಜಾತಿಯವ ಮಲ್ಲಣ್ಣ. ಎಲ್ಲರನ್ನೂ ಬಿಟ್ಟು ಸಾಬರ ಜೊತೆ ಹಾಕ್ಕಂಡವಳೆ ಅಂತ ಅವನಿಗೆ ಹೊಟ್ಟೆ ಉರಿ. ಒಂದಿನ ಮಲ್ಲಣ್ಣನೂ ಕರೀಂ ಸಾಬರೂ ಮರಳ್ಳಿ ಸಂತೆಗೆ ವ್ಯಾಪಾರಕ್ಕೆ ಹೋದರು. ದೊಡ್ಡ ಸಂತೆ, ಜೋರಾಗಿತ್ತು ವ್ಯಾಪಾರ. ಮಲ್ಲಣ್ಣನ ದಳ್ಳಾಳಿ ವ್ಯಾಪಾರ ಬೇಗ ಮುಗಿತು. ಊರಿಗೆ ಬಂದ, ದಳ್ಳಾಳಿ ಆಸೇಲಿ ಹೋಟಲಿಗೆ ಹೋಗಿ ನಾಷ್ಟ ಮಾಡೋದೂ ಮರೆತೋಯ್ತು. ಇಡ್ಲಿ ಮಾದಮ್ಮನ ನೆನಸಿಕೊಂಡು ಬಂದು ಕೇಳಿದ :

ಸಾಬರ ಮೆಟರೆ ಹಿಡಿದುಕಂಡು
ಹಿಸುಕಿ ಹಿಸುಕಿ ಬಿಟ್ಟನಣ್ಣ |

ಹಿಂದಕ್ಕೆ ಮುಂದಕ್ಕೆ ಸೂಲು ಬರದ ಕರೀಂ ಸಾಬರಿಗೆ ಪ್ರಾಣ ಹೋಗಿಬಿಟ್ಟಿತು. ಕುರ್ಚಿಯಿಂದ ಕೆಳಕ್ಕೆ ಬಿದ್ದುಕೊಂಡರು. ಮಾದಮ್ಮ ಸ್ನೇಹಿತನಿಗೆ ಹಾಲು ಕಾಯಿಸಿಕೊಂಡು ಬಂದು ನೋಡಿದಳು.

ಹಾಲ್ ಕಾಯಿಸ್ಕಂಡ್ ನಾ ಬಂದಿ
ಹಲ್ ಕಿರಿಕಂಡು ನೀ ಬಿದ್ದೀ

ಅಲುಗಾಡಿಸಿದಳು. ಏಳಲಿಲ್ಲ. ಸತ್ತಿದ್ದಾನೆ ಅಂತ ಗೊತ್ತಾಯಿತು.

ಇವರಪ್ಪನ ತಿನ್ನ ಕರೀಂಸಾಬರು
ಇಲ್ಲೆ ಬಂದು ಸಾಯಲು ಬೇಕಾ ?

ಸಾಬರು ಸತ್ತಿದ್ದಾರೆ. ಏನು ಮಾಡುವುದು ? ಸಾಬರವನ ಇಟ್ಕೊಂಡವಳೆ ಅಂತ ಮೊದಲೇ ಊರಿಗೆಲ್ಲ ಹಗೆ. ಮನೆ ಜಗಲಿಯಲ್ಲಿ ಮಲ್ಲಣ್ಣ ಮಲಗಿದ್ದುದು ಜ್ಞಾಪಕಕ್ಕೆ ಬಂತು. ಬಂದು ಅವನನ್ನು ಎಬ್ಬಿಸಿದಳು :

“ಮಲ್ಲಣ್ಣ ಮಲ್ಲಣ್ಣಾ, ಸಂದೆಲ್ಲ ಬಂದು ನೀನು ಇಡ್ಲಿ ಕೊಡು ಅಂದೆ, ಇರ್ನಿಲ್ಲ ಕೊಡ್ನಿಲ್ಲ. ಜಾತಿಯವನು. ಹಸ್ಕಂದು ಮನ್ಗವನಲ್ಲಾಂತ ಈಗ ಮಾಡಿವ್ನಿ, ಬಾ ತಿನ್ನು”.

ಮಲ್ಲಣ್ಣ ಏನೂ ಮಾತಾಡಲಿಲ್ಲ. ಹೋಗಿ ಕುರ್ಚಿ ಮೇಲೆ ಕುಳಿತ, ಪ್ರೀತಿಯಿಂದ ಮಾದಮ್ಮ ಇಡ್ಲಿ ಕೊಟ್ಟಳು, ತಿಂದ ಎದ್ದು ಬರುವಾಗ ಎಡವಿಬಿದ್ದು, “ಇದೇನ್ ಇದು ? ಬಿದ್ದಿರುದು ?” ಅಂದ.

“ಮಲ್ಲಣ್ಣ ಮಲ್ಲಣ್ಣ, ನಿನ್ನ ದಮ್ಮಯ್ಯ ಅಂತಿನಿ, ಕೂಗ್ಕ ಬ್ಯಾಡ, ಹಾಳಾದವ್ನು ಕರೀಂ ಸಾಬರು ಇಲ್‌ಬಂದು ಸತ್ತೋಗವರೆ. ಯಾರ್‍ಗೂ ತೂಕ್ಕಿಲ್ಲ ದಂಗೆ ಇವರ ಹೆಣ ಸಾಗಿಸ್‌ಬುಡು”.

“ಹೋಗಮ್ಮಾಮೋ, ನಾನೇನ್ ಹೆಣ ಹೊರವ್ನು ಅಂತ ತಿಳ್ಕಂಡ್ಯಾ, ದಳ್ವಾಳಿ ಮಾಡ್ಕ ಬಂದಿವ್ನಿ, ಆಯಾಸ ಆಗ್ಯೆತಿ, ಮನಿಕಬೇಕು”

“ದಮ್ಮಯ್ಯ ಮಲ್ಲಣ್ಣಾ, ನೀನೇನು ಹಂಗೆ ಮಾಡ್‌ಬ್ಯಾಡ, ನೂರು ರೂಪಾಯಿ ಕೊಡ್ತೀನಿ, ಯಾರ್‍ಗೂ ಕಾಣ್ದಂಗ ಮಣ್ ಮಾಡ್‌ಬುಡು”

“ಇಡ್ಲಿ ಮಾದಮ್ಮ ಬೋ ಹಸ್ವಾಗದೆ. ಒಂದು ದುಡ್ಡಿಗೆ ಇಡ್ಲಿಕೊಡು”.

“ಅಲ್ಲಕನ ಮಲ್ಲಣ್ಣಾ. ಸಂಜೆ ಆರ್‌ಗಂಟೆ ಆಗದೆ. ಈಗ ಬಂದು ಇಡ್ಲಿ ಕೇಳ್ತಿದ್ದಿಯಲ್ಲಾ ? ಎಲ್ಬಂತು ಇಲ್ಲ”.

ಮಾದಮ್ಮ ಸುಳ್ಳು ಹೇಳ್ತಾ ಅವಳೆ ಅನ್ನಿಸಿತು. ಕರೀಂ ಸಾಬಿ ಬಂದು ಕೇಳಿದ್ದರೆ ಕೊಡದೆ ಇರ್ತಿದ್ದಳಾ, ನೋಡುವಾ ಅಂತ, “ಇಡ್ಲಿ ಕೊಡ್ದಿದ್ರೆ ಹೋಕ್ಕಳ್ಳಿ, ಹೆಂಗೂ ಸಂಜೆ ಆಗದೆ. ಇಲ್ಲೆ ಮನಿಕತ್ತಿನಿ ವಸಿ ಜಾಗ ಕೊಡ” ಅಂದ.

“ಜಾತುಳ್ಳ ಜಾತ್ಯವನು, ನಿಂಗಿಲ್ಲ ಅನ್ನುಕಾದದ ? ಮನಿಕ್ಕೊ “ಅಂದಳು ಮಲ್ಲಣ್ಣ ಇಡ್ಲಿ ಮಾದಮ್ಮನ ಹಟ್ಟಿ ಜಗಲಿ ಮೇಲೆ ಮಲಿಕಂಡ.

ಮರಳ್ಳಿ ಸಂತೆಯ ಬಿಟ್ಟನಣ್ಣ
ಹೆರಕು ಚಡಾವ ಮೆಟ್ಟನಣ್ಣ
ಸರಕ ಪುರಕನೆ ಬಂದನಣ್ಣ
ಕೊಲ್ಲಂಪುರಕೆ ಬಂದನಣ್ಣ

ವ್ಯಾಪಾರ ಮುಗಿಸಿಕಂಡು ಕರೀಂ ಸಾಬರು ಊರಿಗೆ ಬರೋ ಹೊತ್ತಿಗೆ ರಾತ್ರಿ ಮೀರಿತ್ತು. ಸ್ನೇಹಿತಗಾತಿ ಮನೆಗೆ ಬಂದು ಕದ ಬಡಿದ. ಬಂದವರು ಯಾರು ಅಂತ ಗೊತ್ತಾಯಿತು. ಮಾದಮ್ಮ ಕದ ತಗಿದಳು. ಕರೀಂಸಾಬರು ಕುರ್ಚಿ ಮೇಲೆ ಹೋಗಿ ಕುಳಿತರು. ಸ್ನೇಹಿತನಿಗಾಗಿ ಒಂದು ಬುಟ್ಟಿ ಇಡ್ಲಿ ತುಂಬಿ ಅಟ್ಟದ ಮೇಲೆ ಮಡಗಿದ್ದಳು.

ಇಡ್ಲಿನಾದರು ತಗದಳಣ್ಣ
ಸಾಬರ ಮುಂದೆ ಇಟ್ಟಳಣ್ಣ

“ಇಡ್ಲಿ ತಿನ್ತಾ ಇರು. ಹಾಲ್ ತಕ್ಕಬತ್ತಿನಿ” ಅಂತ ಮಾದಮ್ಮ ಒಳಕ್ಕೆ ಹೋದಳು. ಕರೀಂ ಸಾಬರು ಕುಳಿತಿದ್ದ ಕಡೆ ಗಾಳಿ ಹವಕ್ಕೆ ಒಂದು ಕಿಟಕಿ ಇತ್ತು. ಎಚ್ಚರವಾಗಿಯೇ ಇದ್ದ ಮಲ್ಲಣ ಎದ್ದು ನೋಡಿದ, ಕುರ್ಚಿ ಮೇಲೆ ಸಾಬರು. ಮುಂದೆ ಒಂದು ಬುಟ್ಟಿ ತುಂಬಾ ಇಡ್ಲಿ. ಇಂದು ಇಡ್ಲಿ ಮುರಿದು ಸಾಬಿ ಬಾಯಿಗೆ ಹಾಕ್ಕಂಡನೋ ಇಲ್ಲವೋ ಮಲ್ಲಣ್ಣ –

ಕಿಟಕಿ ಒಳಗೆ ಕೈಯ ಹಾಕಿ
ಸಾಬರ ಮೇಟರೆ ಹಿಡಿದನಣ್ಣ

“ನೂರು ರೂಪಾಯ್ಗೆ ನನ್ಕೈಲಿ ಆಗಲ್ಲಕಪ್ಪಾ, ಯಾರ್ಗಾನ ಕಂಡ್ರೆ ಏನ್‌ಗತಿ ? ಊರವರ್ರು ಸುಮ್ನೆ ಬುಟ್ಟರಾ ?………

“ಇನ್ನೂರ್ ರೂಪಾಯಿ ಕೊಡ್ತೀನಿ, ಮಲ್ಲಣ್ಣಾ ಯಾರ್ಗೂ ಹೇಳ್ ಬ್ಯಾಡ, ತಕ್ಕಂದೋಗಿ ಮಣ್ ಮಾಡ್‌ಬುಡು………..

ಕರೀಂ ಸಾಬರ ಹೊತ್ತಿಕಂಡ
ಪಟೇಲರ ಮನೆಗೆ ಬಂದನಣ್ಣ
ಪಟೇಲರ ಮನೆಗೆ ಬಂದೀಗ
ಖಜಾನೆ ಬೀಗ ಹಿಡಿಸಿದನಣ್ಣ

ಎಲ್ಲರನ್ನೂ ಬಿಟ್ಟು ಸಾಬರ ಸಂಗ ಮಾಡಿದ್ದಳು. ಮಾದಮ್ಮನಿಗೆ ಬುದ್ಧಿ ಕಲಿಸ್ತೀನಿ ಅಂತ ಮಲ್ಲಣ್ಣ ಕರೀಂ ಸಾಬರ ಹೆಣ ಹೊತ್ತುಕಂಡು ಊರ ಪಟೇಲರ ಮನೆಗೆ ಬಂದು ಹಣದ ಪೆಟ್ಟಿಗೆ ಹತ್ತಿರ ನಿಲ್ಲಿಸಿ, ಪುನಃ ಬಂದು ಮಾದಮ್ಮನ ಜಗಲಿಯ ಮೇಲೆ ಮಲಗಿಕೊಂಡ.

ಪಟೇಲರ ಮನೆಯನ್ನು ಇಬ್ಬರು ಆಳು ಕಾವಲು ಕಾಯುತ್ತಿದ್ದರು. ರಾತ್ರಿ ಹೊತ್ತು. ಯಾರೋ ಬಿಳಿಬಟ್ಟೆ ಉಟ್ಟುಕೊಂಡು, ಖಜಾನೆಗೆ ಕೈಹಾಕಿದ್ದುದು ಕಾಣಿಸಿತು.

ಬೀಡದೊಣ್ಣೆ ತೆಗೆದರಣ್ಣ
ಬುರುಡೆ ನೋಡಿ ಬಿಟ್ಟರಣ್ಣ
ಬುರುಡೆ ನೋಡಿ ಬಿಟ್ಟರೀಗ
ದುಬ್ಬನೆ ಕೆಳಗೆ ಬಿದ್ದಿತಣ್ಣ

ನಿಂತಿದ್ದವನು ಕೆಳಗೆ ಬಿದ್ದ ಮೇಲೆ ಬ್ಯಾಟರಿ ಹಾಕಿ ನೋಡಿದರು. ಕರೀಂ ಸಾಬರು. ಉಸಿರೇ ಇಲ್ಲ ! ಏನ್ ಮಾಡುದು ? ನಾವೇ ಕೊಂದವರು ಅಂತ ಗೊತ್ತಾದರೆ ಊರವರು ಸುಮ್ಮನೆ ಬಿಟ್ಟಾರ ? ಪಟೇಲರೂ “ಯಾಕರ್ಲಾ ಸಾಯಿಸಿದ್ರಿ, ಹಂಗೇ ಹಿಡ್ಕಂಬರ್ಬೇಕಿತ್ತು. ಮನೆ ಕಾಯಿರಿ ಅಂದ್ರೆ ಜನ ಸಾಯಿಸಿದ್ದೀರಿ” ಅಂತ ತಪ್ಪು ಹೊರಿಸುತ್ತಾರೆ. ಅವರಲ್ಲಿ ಒಬ್ಬನಿಗೆ ತಲೆ ಓಡಿತು. “ನೋಡ್ಲಾ, ಹೆಂಗೂ ಕರೀಂ ಸಾಬರ್ಗೂ ಇಡ್ಲಿ ಮಾದಮ್ಮನ್ಗೂ ಸೋಜನ್ಕೆ ಅದೆ. ಅಲ್ಗೆ ತಕ್ಕಂದೋಗಿ ಮನಿಗಿಸ್ಬಿಡ್ಮಾ. ತಪ್ಪು ನಮ್ಮೇಲೆ ಬರಾಕಿಲ್ಲ” ಅಂದ. ಅದೇ ಸರಿ ಅನ್ನಿಸಿತು :

ಕರೀಂ ಸಾಬರ ಹೊತ್ತರಣ್ಣ
ಇಡ್ಲಿ ಮಾದಮ್ಮನ ಮನೆತಾಕೆ

ಸದ್ದಾಗದಂತೆ ಮಾದಮ್ಮನ ಜಗಲಿ ಮೇಲೆ ಸಾಬರ ಹೆಣವನ್ನು ಮಲಗಿಸಿಬಿಟ್ಟರು. ನಾಳೆಗೆ ಇಡ್ಲಿ ವ್ಯಾಪಾರ ನಿಲ್ಲಿಸಿಬಿಟ್ಟರೆ ಊರಿನ ಜನರಿಗೆ ಗುಮಾನಿ ಬರುತ್ತೆ ಅಂತ ಹೊತ್ತು ನೋಡುಕೆ ಹೊರಕ್ಕೆ ಬಂದಳು ಮಾದಮ್ಮ :

ಹಟ್ಟಿಯ ಕದವ ತಗದಳಣ್ಣ
ಸಾಬರ ಬುರುಡೆ ಕಂಡಳಣ್ಣ

ಸಾಬರ ಸಂಗ ಅಭಿಮಾನ ಭಂಗ
ಸಾವಿರ ಕೊಟ್ಟರೂ ಬ್ಯಾಡಕಣೋ

ಮಲ್ಲಣ್ಣನನ್ನು ಕೂಗಿ ಎಬ್ಬಿಸಿದಳು : "ಮಲ್ಲಣ್ಣ, ಮಲ್ಲಣ್ಣಾ ಇನ್ನೂರ್ ರೂಪಾಯಿ ಕೊಟ್ಟೆ. ಸಾಬರ ಮಣ್ ಮಾಡು ಅಂತ. ಇಲ್ಲೆ ಬಂದದೆ ನೋಡು ಹೆಣ'.

"ಮೂರು ಮೈಲಿ ತಕ್ಕಂದೋಗಿ, ಮೂರಾಳುದ್ದ ಗುಂಡಿ ಕಿತ್ತು, ಮೂರು ಗಾಡಿ ಮಣ್ ಅಗ್ತು ಬಂದಿ. ಹಾಲ್ಕಾಯ್ಸಿ ಸಕ್ರೆ ಜಾಸ್ತಿ ಹಾಕಿ ರುಚಿ ತೋರಿಸ್ದಿ, ನಿನ್‌ಮ್ಯಾಲೆ ಪಿರುತಿ ಜಾಸ್ತಿ ಅದ್ಕೆ ಬಂದದೆ'.

"ಅಣ್ಣಾ ಮಲ್ಲಣ್ಣಾ, ಊರವರ್ಗೆ ಗೊತ್ತಾದ್ರೆ ನನ್ನ ಬುಡುಕಿಲ್ಲ. ಇನ್ನೊಂದಪ ತಕ್ಕಂದೋಗಿ ಹೊತ್ತುಬುಟ್ಟು ಬಾ'.

"ಹೋಗಮ್ಮಮೋ ನಾ ನಿದ್ದೆ ಮಾಡ್ಬೇಕು. ಸತ್ತೆಣ ಹೊರುಕೆ ನನ್ಕೈಲಿ ಆಗಾಕಿಲ್ಲ. ಸತ್ತೋದ್ರೂ, ಅವನ್ನ ಬುಟ್ಟು ನೀನಿರೆ, ನಿನ್‌ಬುಟ್ಟು ಅವನಿರ, ನಾನೇನ್ ಮಾಡ್ಲಿ'.

"ಹಂಗನ್‌ಬ್ಯಾಡಕಣ್ಣಾ, ಇನ್ನೊಂದ್ ನೂರ್ ಕೊಡ್ತೀನಿ, ತಕ್ಕಂದೋಗಿ ಮಣ್ ಮಾಡ್‌ಬುಡು;.

ಕರೀಂ ಸಾಬರ ಹೊತ್ತನಣ್ಣ

ಶಾನುಬೋಗರ ಮೆಣಸಿನ ತೋಟ್ಕೆ

ಹೆಣ ಹೊತ್ತುಕೊಂಡು ಊರ ಶ್ಯಾನುಭೋಗರ ಮೆಣಸಿನ ತೋಟಕ್ಕೆ ಬಂದ, ದೀಪಾವಳಿ ತಿಂಗಳು, ಮೆಣಸಿ ಚೆನ್ನಾಗಿ ಬೆಳೆದಿತ್ತು. ಮೆಣಸಿ ಹಣ್ಣು ತೂಗಿ ಬಾಗಿತ್ತು. ಇದೂ ಒಂದು ತಮಾಷೆ ನೋಡೋಣ ಅಂದುಕೊಂಡು, ಹೆಣದ ಕತ್ತಿಗೆ ಕವಡು ಕೋಲು ಕೊಟ್ಟು ಮೆಣಸಿ ಗಿಡದ ಪಕ್ಕದಲ್ಲಿ ಕೂರಿಸಿದ. ಎಂದಿನಂತೆ ಬಂದು ಮಾದಮ್ಮನ ಜಗಲಿಯ ಮೇಲೆ ಮಲಗಿಕೊಂಡ.

ರಾತ್ರಿ ಗಂಗಮ್ಮ ಹರಿಯೋದನ್ನು ನಿಲ್ಲಿಸುವ ಹೊತ್ತು. ಶ್ಯಾನುಭೋಗರ ಆಳುಗಳು

ತೋಟ ಕಾಯುವುದಕ್ಕೆ ಬಂದರು. ಬಿಳಿ ಮಲ್ ಜುಬ್ಬ ಹಿಕ್ಕಂಡು ಯಾರೋ ಮೆಣಸಿನ ಹಣ್ಣು ಕೀಳುತ್ತಿದ್ದಾರೆ !

ಹಿತ್ತಲ ಬೇಲಿ ನೆಗೆದರಣ್ಣ
ರಡ್ಡೆ ದೊಣ್ಣೆ ತಗದರಣ್ಣ
ಬುರುಡೆ ನೋಡಿ ಬಿಟ್ಟರಣ್ಣ
ದುಬ್ಬನೆ ಸಾಬಿ ಬಿದ್ದನಣ್ಣ

ಕೆಳಗೆ ಬಿದ್ದವನನ್ನು ನೋಡಿದರು. ಕರೀಂಸಾಬಿ ಸತ್ತೇ ಹೋಗಿದ್ದಾನೆ. ಕೊಂದವರು ಯಾರು ಅಂತ ಗೊತ್ತಾಗಿಬಿಟ್ಟರೆ ಊರಿನವರು ಬಿಡ್ತಾರಾ ? ಆಳು ಮಾತಾಡಿಕೊಂಡರು : "ಕರೀಂ ಸಾಬರ್ಗೂ ಇಡ್ಲಿ ಮಾದಮನ್ಗೂ ದೋಸ್ತಿ. ಇಡ್ಲಿ ಚಟ್ನಿಗೆ ಮೆಣ್ಸಿಕಾಯಿ ತತ್ತಾ ಅಂದಿರಬೈದು. ಅದ್ಕೆ ಸಾಬ್ರು ಬಂದು ಕುಯ್ತಿದ್ರು. ಮಾದಮ್ನ ಮನೆತಾಕೇ ಹೆಣ ಸಾಗಿಸ್ಬುಡ್ರಾ, ನಮ್ಮೇಲೆ ತಪ್ಪು ಬರಾಕಿಲ್ಲ".

ಕರೀಂ ಸಾಬರ ಹೊತ್ತರಣ್ಣ
ಇಡ್ಲಿ ಮಾದಮ್ನ ಮನೆತಾಕೆ

ಕೋಳಿ ಕೂಗು ಹೊತ್ತಾಗಿತ್ತು. ಇಡ್ಲಿ ಮಾಡದಿದ್ದರೆ ಊರಿನವರಿಗೆ ಸಂಶಯ ಬರುತ್ತದೆ ಎಂದುಕೊಂಡ ಮಾದಮ್ಮ ಸೌದೆ ತೆಗೆದುಕೊಳ್ಳುವುದಕ್ಕೆ ಮನೆಯಿಂದ ಹೊರಗಡೆಗೆ ಬಂದಳು.

ಬಾಗಿಲನಾದರು ತಗದಳಣ್ಣ
ಸಾಬರ ಬುರುಡೆ ಕಂಡಳಣ್ಣ
ಇವರಪ್ಪನ ತಿನ್ನ ಕರೀಂಸಾಬರು
ಇಲ್ಲೇ ಬಂದು ಮಲಗವನಲ್ಲ !

ಗಾಬರಿಯಿಂದ ಮಲ್ಲಣ್ಣನನ್ನು ಎಬ್ಬಿಸಿದಳು. "ಬೆಳಗಾನ ನಿದ್ದೆ ಮಾಡುಕೆ ಬುಡಲ್ಲಮ್ಮಾ" ಅನ್ನುತ್ತಲೇ ಎದ್ದ ಅವನು.

"ಏನ್ ಮಲ್ಲಣ್ಣಾ ? ಕರೀಂ ಸಾಬ್ರು ಇಲ್ಲೇ ಬಂದು ಮಲ್ಗವರ್ರೆ ?"

"ನಾನೇನ್ಮಾಡ್ಲಮ್ಮ ? ನಿನ್ಮೇಲೆ ಪಿರುತಿ ಜಾಸ್ತಿ ಅದ್ಕೇ ಬಂದವ್ನೆ ?"

"ಮಲ್ಲಣ್ಣಾ, ಬೆಳ್ಕರಿ ಹೊತ್ತಾಯ್ತು, ಯಾರ್ಗಾನ ಗೊತ್ತಾದ್ರೆ ನಾನ್ ಉಳಿವಂಗಿಲ್ಲ"

"ಹೆಂಗಾರ ಮಾಡ್ಕೋ, ನಾನ್ ಮಾತ್ರ ಪುನಃ ಹೊತ್ಕಂಡು ಹೋಗಾಕಿಲ್ಲ. ನಾನು ಮನಿಕಬೇಕು".

"ನೋಡ್ ಮಲ್ಲಣ್ಣ, ಇನ್ನ ನೂರ್ ಕೊಡ್ತೀನಿ. ಎಲ್ಲಾರ ಹಾಳ್ ಹೆಣದ ಮರೆ ಮಾಡ್‌ಬುಡು"

"ಇದೊಂದ್‌ದಪ ಹೊತ್ಕಂಡೋಯ್ತೀನಿ. ಒಂದು ಪಲ್ಲದ ಚೀಲಕೊಡು'.

ಮಾದಮ್ಮ ಚೀಲ ಕೊಟ್ಟಳು
ಕರೀಂ ಸಾಬರ ತಗದನಣ್ಣ
ಕುಮ್ಮಿನಾದರು ಕಟ್ಟಿದನಣ್ಣ
ಕರೀಂ ಸಾಬರ ಹೊತ್ತನಣ್ಣ
ಕೆಂಪಾಂಬುಧಿ ಕರೆತಾಕೆ

ಹೆಣ ಭಾರವಾಗಿತ್ತು. ಕೆರೆ ಏರಿ ಮೇಲೆ ಮೂಟೆ ಮಡಗಿ ಕುಳಿತುಕೊಂಡ, ಆ ಕಡೆಯಿಂದ ಒಬ್ಬ ಈರುಳ್ಳಿ ಮೂಟೆ ಹೊತ್ತುಕೊಂಡು ವ್ಯಾಪಾರಕ್ಕಾಗಿ ಬರುತ್ತಿದ್ದ. ಇಬ್ಬರೂ ಪರಿಚಯ ಮಾಡಿಕೊಂಡರು :

"ನಿನ್ದು ಯಾಪಾರ ಏನು ?
"ನಂದು ಈರುಳ್ಳಿ ಯಾಪಾರ. ನಿಂದು ?'
"ನಂ....ನಂದು ತೆವಟ್ಗೆ ಗೆಣಸಿನ ಯಾಪಾರ !'

“ಹಂಗಾರೆ ನಿಂದು ಹೊಸ ಯಾಪಾರ’

“ಹೂ’

ಹೊತ್ತು ಹುಟ್ಟುವ ಸಮಯ, ಮಾತಾಡುತ್ತಾ ಇಬ್ಬರೂ ತಮ್ಮ ಮೂಟೆಗಳನ್ನು ಒಂದು ಕಡೆ ಇಟ್ಟು ಮುಖ ತೊಳೆಯುವುದಕ್ಕೆ ಕೆರೆಗೆ ಇಳಿದರು. ಮಲ್ಲಣ್ಣ ಮುಖ ತೊಳೆದ ಹಾಗೆ ಮಾಡಿ, ಬೇಗ ಮೇಲಕ್ಕೆ ಬಂದು ತನ್ನ ಮೂಟೆ ಬಿಟ್ಟು ಈರುಳ್ಳಿ ಮೂಟೆ ಹೊತ್ತುಕೊಂಡು ಹೊರಟು ಹೋದ. ಈರುಳ್ಳಿ ವ್ಯಾಪಾರಿ ಬಂದು ನೋಡಿದ, ತನ್ನ ಮೂಟೆ ಇಲ್ಲ “ಮುಂಡೆ ಮಗ ಮೂಟೇನ ಅದ್ಲಿ ಬದ್ಲಿ ಮಾಡವನೆ. ಈರುಳ್ಳಿಲಿ ಎಷ್ಟ್ ಸಿಕ್ಕದು ? ಹೆಂಗೂ ತವಟ್ಗೆ ಗೆಣ್ಸು ಹೊಸ ಯಾಪಾರ. ಇದ್ನೇ ಮಾರ್ತ್ಮ” ಅಂತ ಮೂಟೆ ಹೊತ್ತುಕೊಂಡ.

ಕರೀಂ ಸಾಬರ ಹೊತ್ತನಣ್ಣ
ಕೊಲ್ಲಂಪುರಕೆ ಬಂದನಣ್ಣ

ಒಳಗೆ ಇರುವುದು ಹೆಣ ಅಂತ ಗೊತ್ತಾಗಲಿಲ್ಲ. “ತೆವಟ್ಗೆ ಗೆಣ್ಸು, ತೆವಟ್ಗೆ ಗೆಣ್ಸು’ ಅಂತ ಸಾರಿದ. ಹೊಸ ಪದಾರ್ಥ ಅಂತ ಊರಿನವರೆಲ್ಲ ಮುತ್ತಿಕೊಂಡರು. ಎಲ್ಲರಿಗೂ ಹೇಗೆ ಮಾರುವುದು ಎಂದೇ ಗೊತ್ತಾಗಲಿಲ್ಲ. ಇಡ್ಲೀ ಮಾದಮ್ಮನ ವಿಷಯ ಅವನಿಗೂ ಗೊತ್ತಿತ್ತು. ಅವಳೂ ವ್ಯಾಪಾರದವಳು. ತಾನು ನಾಷ್ಟ ಮಾಡುತ್ತಾ ಮಾದಮ್ಮನ ಕೈಲೇ ಮಾರಿಸೋಣ ಅಂತ ಜನರನ್ನೂ ಕರೆದುಕೊಂಡು ಮಾದಮ್ಮನ ಹತ್ತಿರಕ್ಕೆ ಬಂದ.

“ಅಮ್ಮ ಅಮ್ಮ ಮಾದಮ್ಮ, ನನಗಿದು ಹೊಸ ಯಾಪಾರ. ತೆವಟ್ಗೆ ಗೆಣ್ಸು ಬೇಕೂಂತ ಊರವರೆಲ್ಲ ಬಂದವರೆ. ಹೆಂಗೂ ನಿಮ್ಮೂರವರು. ನೀನೇ ಮಾರು ನಂಗೆ ಐವತ್ ಕೊಟ್‌ಬಿಡು. ಉಳಿದ್ನೆಲ್ಲ ನೀನೇ ಇಟ್ಕೊ’.

ತೆವಟಿಗೆ ಗೆಣಸು ಅನ್ನುತ್ತಲೇ ಮಾದಮ್ಮನಿಗೂ ಆಸೆಯಾಯಿತು. “ಹೆಂಗೂ ರಾತ್ರಿ ಮುನ್ನೂರ್ ಕಳ್ಕಂಡಿವ್ನಿ, ಇದರಿಂದ್ಲಾರ ನಾಕ್ ಕಾಸ್ ಬರ್‍ಲಿ’ ಅಂತ, ಗೆಣಸು ಮಾರುವುದಕ್ಕೆ ಒಪ್ಪಿಕೊಂಡಳು.

ಕುಮ್ಮೆನಾದರು ಬಿಚ್ಚಿದಳಣ್ಣ
ಸಾಬರ ಬುರುಡೆ ಕಂಡಳಣ್ಣ
ಸಾಬರ ಬುರುಡೆ ಕಂಡಾಗ
ಬಾಯಿ ಬಾಯಿ ಬಡಿದಳಣ್ಣ

ಊರು ಕೇರಿಯೆಲ್ಲ ಒಂದಾಯಿತು. ನೋಡಿದರೆ ಕರೀಂಸಾಬರ ಹೆಣ. ಕರೀಂ ಸಾಬರನ್ನು ಕೊಂದು ಗೆಣಸು ಅಂತ ತಂದವನೆ ವ್ಯಾಪಾರಿ ಅಂತ ಅವನನ್ನು ಕಟ್ಟಿ ಹಾಕಿದರು. ಹೆಣವನ್ನು ಗೆಣಸು ಅಂತ ಮಾರುವುದಕ್ಕೆ ಬಂದಳು ಅಂತ ಮಾದಮ್ಮನನ್ನು ಕಟ್ಟಿ ಹಾಕಿದರು. ವಿಚಾರಣೆಗೆ ಸೇರಿದರು ಗೌಡರು. ಅಷ್ಟರಲ್ಲಿ “ಬಡಪಾಯಿ ಈರುಳ್ಳಿ ಯಾಪಾರ್‍ಗೆ ಏನಾಯ್ತೋ ಅಂತ’ ಮಲ್ಲಣ್ಣ ಇನ್ನೊಂದು ಬೀದಿಯಲ್ಲಿ “ಈರುಳ್ಳಿ ಬೇಕಮ್ಮೋ ಈರುಳ್ಳಿ’ ಅಂತ ಸಾರಿದ. ಅವನ ದನಿ ಕೇಳಿ ಕಟ್ಟಿ ಹಾಕಿದ್ದ ವ್ಯಾಪಾರಿ “ಸ್ವಾಮಿ ಸ್ವಾಮಿ ಆ ಈರುಳ್ಳಿ ಯಾಪಾರಿ ಕೂಗ್ರಿ, ನನ್ದು ತಪ್ಪಿಲ್ಲ. ಅವನ್ನೇ ಬೇಕಾರೆ ಕೇಳುರಿ’ ಎಂದು ಗೋಗರಿದ. ಬಿಡಿ ಎಲ್ಲನೂ ಹೇಳ್ತೀನಿ” ಅಂದ. ಜನ ಹಾಗೇ ಮಾಡಿದರು. ಊರ ಪಟೇಲರು ಕೇಳಿದರು:

“ಕರೀಂ ಸಾಬ್ರಯಾರ್ ಕೊಂದರು ?’

ಮಲ್ಲಣ್ಣ ಎಲ್ಲವನ್ನೂ ಹೇಳಿ, "ಮಾದಮ್ಮ ಸಾಬರಿಗೆ ಇಡ್ಲಿ ಕೊಟ್ಟಳು, ಕುಡಿಯುವುದಕ್ಕೆ ನೀರು ಕೊಡಲಿಲ್ಲ. ಮಾದಮ್ಮ ಕೊಟ್ಟ ಇಡ್ಲಿ ತಿನ್ನುತ್ತಾ ತಿನ್ನುತ್ತಾ ಕರೀಂ ಸಾಬರು ಸತ್ತುಹೋದರು' ಎಂದು ಸುಳ್ಳು ಹೇಳಿದ. ಇಡ್ಲಿ ಮಾದಮ್ಮ ಲಬೋ ಲಬೋ ಅಂತ ಬಾಯಿ ಬಾಯಿ ಬಡಿದುಕೊಂಡಳು.

ನನ್ನ ಮಾತು ಸುಳ್ಳಾದರೆ
ಪಟೇಲರ ಮನೆ ಆಳ ಕೇಳಿ

ಪಟೇಲರಿಗೆ ದಿಗಿಲಾಯಿತು. ಅವನ ಆಳುಗಳು ನಡೆದ ಸಂಗತಿ ತಿಳಿಸಿದರು. ಸಾಬರನ್ನು ಕೊಂದ ತಪ್ಪು ತನ್ನ ತಲೆಗೂ ಬಂತಲ್ಲಾ ಎಂದು ಪಟೇಲರು ಸಭೆ ಬಿಟ್ಟಿದ್ದರು :

ಉಟ್ಟಿರು ಪಂಚೆ ಕಳೆದುಕಂಡು
ಬಿದ್ದುಕದ್ದು ಓಡಿದರಣ್ಣ.

ಪಟೇಲರು ಓಡಿಹೋದ ಮೇಲೆ ಶ್ಯಾನುಭೋಗರು "ಮುಂದೇನಾಯ್ತು ಹೇಳು" ಅಂದರು. ಮುಂದಿನ ಕತೆ ಹೇಳಿ ಮಲ್ಲಣ್ಣ :

ನಾನ್ ಮಾತು ಸುಳ್ಳಾದರೆ
ಶ್ಯಾನುಬೋಗರ ಆಳು ಕೇಳಿ !

ಶ್ಯಾನುಭೋಗರಿಗೂ ದಿಗಿಲಾಯಿತು. ಅವನ ಆಳುಗಳು ನಡೆದ ಸಂಗತಿ ತಿಳಿಸಿದರು. ಕರೀಂಸಾಬರನ್ನು ಕೊಂದ ತಪ್ಪು ತನ್ನ ತಲೆಗೂ ಬಂತಲ್ಲಾ ಎಂದುಕೊಂಡು ಶ್ಯಾನುಭೋಗರು ಸಭೆ ಬಿಟ್ಟಿದ್ದರು :

ಗಡಗಡನೆ ಒದರಿದರಣ್ಣ
ಗಂಜಳನಾದರೆ ಉದರಣ್ಣ
ಗಂಜಳನಾದರೆ ಉದುಕಂಡು
ಬಿದ್ದು ಕೆದ್ದು ಓಡಿದರಣ್ಣ !

ಶ್ಯಾನುಭೊಗರು ಓಡಿಹೋದ ಮೇಲೆ ಊರಿನ ಮಧ್ಯಸ್ತರು "ಮುಂದ್ಕೇನಾಯ್ತು" ಅಂತ ಕೇಳಿದರು ಮಲ್ಲಣ್ಣ ಮುಂದಿನ ಕತೆಯನ್ನೆಲ್ಲ ಹೇಳಿದ.

ಕರೀಂ ಸಾಬರನ್ನು ಕೊಂದ ಇಡ್ಲಿ ಮಾದಮ್ಮನಿಗೆ "ಊರಿನವರು ಮುನ್ನೂರು ರೂಪಾಯಿ ಜುಲ್ಮಾನೆ ಹಾಕಿದರು. ಮೂರು ತಿಂಗಳ ಸಜಾ ವಿಧಿಸಿದರು. ಈರುಳ್ಳಿ ವ್ಯಾಪಾರಿಯನ್ನು ಬಿಟ್ಟುಬಿಟ್ಟರು.

ಕರೀಂ ಸಾಬರ ಹೆಣ ಹೊತ್ತು ಇಡ್ಲಿ ಮಾದಮ್ಮನಿಂದ ಮೂನ್ನರು ರೂಪಾಯಿ ಸಂಪಾದಿಸಿದ ಮಲ್ಲಣ್ಣ ಸುಖವಾಗಿದ್ದ.

---

** ಮುಂದಿನ ಪದ್ಯ ಭಾಗದಲ್ಲಿ ಎರಡು ಸಾಲುಗಳಿಗೊಮ್ಮೆ ಪಲ್ಲವಿಯನ್ನು ಹಾಡಿಕೊಳ್ಳಬೇಕು.

* ಇಡ್ಲಿ ಮಾದಮ್ಮ, ಲಿಂಗಯ್ಯ ಡಿ. ಕರ್ನಾಟಕ ಜನಪದ ಕಾವ್ಯಗಳು. ದಿನಕರ ಪ್ರಕಾಶನ ಬೆಂಗಳೂರು ೧೯೭೬ ಪು.ಸಂ.

# ೫೬. ಕಿವುಡರು*

ತಾಲಲಲೇ ಮಾಯೀ ತಾಲಲಲೇ ||ಪಲ್ಲವಿ||
ಮೂಡು ಸೀಮೆ ಒಳಗೆ ಒಬ್ಬ
ಹೊನ್ನಾಲಪ್ಪ ಕಿವುಡ ಗೌಡ
ದಾರಿ ಹೊಲವ ಮಾಡವನಂತೆ
ಜೋಳನಾದರು ಬಿತ್ತವನಂತೆ
ಅಟ್ಟಣನಾದರು ಹಾಕಿದನಂತೆ
ಹೊಲವನಾದರು ಕಾದವನಂತೆ
ಕಣಿವೆ ಕೆಳಗಲ ಕೊಂಗರು
ಎತ್ತಿನ ಯಾಪಾರ್ಕೆ ಬಂದರು

ಬಂದವರು, ಕಿವುಡ ಗೌಡನ್ನ ಕಂಡು, "ಈ ದಾರಿ ಎಲ್ಲಿಗೋದ್ದು?" ಅಂತ ಕೇಳಿದರು. ಗೌಡ ಕಿವುಡ. ಅವರು ಕೇಳಿದ್ದು ಗೊತ್ತಾಗ್ನಿಲ್ಲ. ಗೌಡ ಚೆನ್ನಾಗಿ ಬೆಳೆ ಮಾಡಿದ್ದ. ಜೋಳದ ತೆನೆಯೂ ವೈನಾಗಿದ್ದುವು. ಅದನ್ನೇ ಕೊಂಗರು ಕೇಳಿದರು ಅಂತ ತಿಳ್ಕೊಂಡ. "ಏನೋ ಮುಂಡೇ ಮಕ್ಕಳೇ, ಹೋಗವರು ಬರವರು ಎಲ್ಲ ನನ್ನೊಲದಲ್ಲಿ ದಪ್ಪ ಸಣ್ಣ ದಪ್ಪ ಸಣ್ಣ ಬೆಳೆದದೆ ಅಂತ ಕೇಳ್ತೀರಾ ? ಹೋಗರಯ್ಯ, ಕಷ್ಟ ಮಾಡಿ ಬೆಳೆದಿವ್ನೀ" ಅಂದ. ಇಂತಾ ಕಿವುಡ್ನೊಂದ್ಗೆ ಇನ್ನೇನ್ ಮಾತಾಡದು ಅಂತ ಕೊಂಗರು ಹೊಂಟೋದ್ರು. "ನಾನು ದಾರಿ ಹೊಲ ಮಾಡ್ಕಂಡದ್ದು ಭಾಳ ಯರ್ತ ಆಗ್ಬುಡ್ತು. ಇದನ್ನ ಹೆಡ್ತಿಗೆ ಹೇಳ್ಬೇಕು" ಅಂತ ಗೌಡ ಮನ್ಗೆ ಬಂದ. ಗೌಡ್ನ ಹೆಡ್ತೀನೂ ಕಿವುಡಿ.

ಅಟ್ಣನಾದರು ಬಿಟ್ಟನಂತೆ
ಮನೆಗೆನಾದರು ಬಂದನಂತೆ
ಮನೆಲಿರು ಹೆಡ್ತಿ ಕೂಡ

ಗಂಡನಿಗಿಂತ ಹೆಚ್ಚಿನ ಕಿವುಡಿ
ನಿಂಗಿ ನಿಂಗಿ ಅಂದನಂತೆ
ನಿಂಗಿನಾದರು ಕೂಗಿದನಂತೆ

"ನೋಡಮ್ಮಿ, ದಾರಿ ಹೊಲ ಮಾಡ್ಕಂದಿಮಿ. ತಿರಗಾಡ ಜನವೆಲ್ಲ ಜೋಳದ ತೆನೆ ದಪ್ಪ ಸಣ್ಣ ಅಂತ ಕಣ್ಣೆಸರು ಮಾಡ್ತಾರೆ. ಹೊಲ ಮಾರ್ಬಿಡಮೋ ಇಲ್ಲ ತೆನೆ ಕೂಧ್ಬಿಡಮೋ" ಅಂತ ಕೇಳಿದ. ಕಿವುಡು ಹೆಡ್ತಿಗೆ ಗಂಡ ಹೇಳಿದ್ದು ಸರಿಯಾಗಿ ಕೇಳ್ನಿಲ್ಲ. "ದಪ್ಪ ಸಣ್ಣ" ಅಂದದ್ದು ಮಾತ್ರ ಗೊತ್ತಾಯ್ತು. ಮೊದಲಿಂದ್ಲೂ ಅವಳ್ಗೆ ಒಡ್ವೆ ಆಸೆ. ನನ್‌ಗಂಡ, ಒಂದ್‌ಸಾವಿರ ಪಲ್ಲ ಜ್ವಾಳ ಆಯಿತ್ತೇ, ನೂರ್ ಪಲ್ಲ ಸಂಸಾರ್ಕೆ ಮಡಿಕಂಡು, ಮಿಕ್ಕಿದ ಮಾರಿ, ನನ್ಗೆ ದಪ್ಪ ಗುಂಡು ಸಣ್ಣ ಗುಂಡು ಮಾಡಿಸ್ತೀನಿ ಅಂತ ಅವನೆ ಅಂದ್ಕಂಡಳು. ಹರಾಯದಲ್ಲಿಲ್ಲ, ಪರಾಯದಲ್ಲಿಲ್ಲ ಅರ್ಧ ವಯಸ್ಸಾಯ್ತು. ಊರು ಹೋಗು ಅಂತದೆ, ಕಾಡು ಬಾ ಅಂತದೆ. ಇಂಥ ಕಾಲದಲ್ಲಿ ಮಾಡಿಸ್ತೀನಿ ಅಂತಾನೆ, ಈಗಾರ ಮಾಡಿಸ್ಲೀ, ದಪ್ಪ ಗುಂಡಾದರೇನು, ಸಣ್ಣ ಗುಂಡಾದರೇನು ? ಅಂದ್ಕಂಡು –

ಸಣ್ಣ ಗುಂಡ್ನಾದರು ಮಾಡಿಸು ಗೌಡ
ದೊಡ್ಡ ಗುಂಡ್ನಾದರು ಮಾಡಿಸು ಗೌಡ
ನೀನೊಪ್ಪಿದ ಗುಂಡ ಮಾಡ್ಸಿದಾರೆ
ಅಕ್ಕಳಿಕ್ಕೆ ರೆಡಿಯಾಗಿವ್ನೀ,

ಅಂದಳು, ಗಂಡನ ಮಾತು ಹೆಡ್ತಿಗೆ ಹೆಡ್ತಿ ಮತು ಗಂಡನ್ಗೆ ಗೊತ್ತಾಗ್ನಿಲ್ಲ. ಗಂಡ ಒಡವೆ ಮಾಡಿಸ್ತಾನೆ ಅಂತ್ಲೇ ಅವಳು ತಿಳ್ಕಂಡು ಮಗಳಿಗೆ ಹೇಳಿದ್ಳು.

ಗುಡು ಗುಡುನೆ ಬಂದಾಳಂತೆ
ಮಗಳನಾದರು ಕೂಗಿದಳಂತೆ
ಹೊಟ್ಟೆಲುಟ್ಟಿದ ಮಗಳು ಕೂಡ
ಅವ್ವನಿಗಿಂತ ಹೆಚ್ಚಿನ ಕಿವುಡಿ

"ನೋಡಮ್ಮೀ, ನಿಮ್ಮಪ್ಪ ಈಗ ನಂಗೆ ಸಣ್ಣ ಗುಂಡು ದೊಡ್ಡ ಗುಂಡು ಮಾಡಿಸ್ತೀನಿ ಅಂದ ನೋಡ್ದಾ, ಹರಾಯದಲ್ಲಿಲ್ಲ ಪರಾಯದಲ್ಲಿಲ್ಲ, ಮುಪ್ಪಿನ ಕಾಲ್ದಲ್ಲಿ ಮೂರಂಗ ಅಂತ ಈಗ ಮಾಡಿಸ್ತೀನಿ ಅಂತಾನೆ' ಅಂದಳು. ಆ ಹುಡ್ಗಿಗೆ "ಹರಾಯ ಪರಾಯ' ಅನ್ನುದು ಮಾತ್ರ ಗೊತ್ತಾಯ್ತು. ಮದುವೆಗೆ ಬಂದಿದ ಹುಡ್ಗಿ ಅದು. ಅವ್ವ ಬಂದು ನನ್ನ ಮುದ್ಕನ್ಗೆ ಮದ್ವೆ ಮಾಡ್ಲೋ ಹರಾಯದವನ್ಗೆ ಪರಾಯದವನ್ಗೆ ಮದ್ವೆ ಮಾಡ್ಲೋ ಅಂತ ಕೇಳ್ತಾ ಅವಳೆ. ಯಾರ್ನಾಂತ ಹೇಳ್ಲಿ ಅಂತ ಯೋಚ್ನೆ ಮಾಡಿ -

ಅಮ್ಮ ಮುದ್ಕನ್ನಾಗಿದ್ರೂ ಮಾಡೋಗವ್ವ
ಪ್ರಾಯದವನ್ನಾಗಿದ್ರೂ ಮಾಡೋಗವ್ವ
ನೀವು ಒಪ್ಪಿ ಮದ್ವೆ ಮಾಡುವವನ
ಮದ್ವೆ ಆಗುಕೆ ರೆಡಿಯಾಗಿವ್ನೀ

ಅಂದಳು. ತನಗೆ ಮದ್ವೆ ಮಾಡ್ವ ಸುದ್ದಿ ಕೇಳಿ ಹುಡ್ಗಿಗೆ ಖುಷಿ ಆಯ್ತು. ಇದ್ನ ಅಜ್ಜಿಗೆ ಹೇಳೋಣಾಂತ ಹೋದಳು.

ಗುಡು ಗಡುನೆ ಬಂದಳಂತೆ
ಅಜ್ಜಿ ಮುಂದೆ ನಿಂತಳಂತೆ

"ಅಜ್ಜ ಅಜ್ಜೀ ನನಗೆ ಈ ವರ್ಷ ಮದ್ವೆ ಮಾಡ್ತಾರಂತೆ. ಮುದ್ಕನ್ಗೆ ಮಾಡ್ಲೋ ಪರಾಯದವನ್ಗೆ ಮಾಡ್ಲೋ ಅಂತ ಅವ್ವ ಕೇಳಿದ್ಲು ಯಾರ್ಗಾನ ಮಾಡಿ ಅಂದೆ" ಅಂತಂದಳು. ಅಜ್ಜೀನು ಕಿವುಡಿ. ಅವಳ್ಗೆ ಊಟದೊತ್ತಾಗಿ ಹೊಟ್ಟೆ ಹಸಿದಿತ್ತು. ಹುಡ್ಗಿ ಮದ್ವೆ ಹೇಳಿದರೆ, ಮುದ್ಕಿ ಮೊಮ್ಮಗಳು ಬಂದು ನಿಂಗೆ ಬಿಸಿಟ್ಟು ಇಕ್ಕಲೋ ತಂಗ್ಳಿಟ್ಟು ಇಕ್ಕಲೋ ಅಂತ ಕೇಳ್ತಾ ಅವಳೆ. ನಾನು ಯಾವ ಹಿಟ್ಟು ಅಂತ ಕೇಳ್ಲೀ ಅನ್ಕಂಡು -

ಅಮ್ಮಿ ತಂಗಳಿಟ್ಟನಾರು ಇಕ್ಕು ಹೋಗು
ಬಿಸಿಟ್ಟನಾರು ಇಕ್ಕುಹೋಗು
ಯಾವ ಊಟ ಇಕ್ಕಿದರು
ಉಣ್ಣುದುಕೀಗ ರೆಡಿಯಾಗಿವ್ನಿ

ಅಂದಳು. ಈ ಹುಡುಗಿ ಜಯಮಾನ್ಕೆ ಪಕ್ಕದೂರಿನವರು ನೋಡುಕೆ ಬಂದರು, ನಡುಮಲ್ಲಿ ಕುಂತ್ಕಂಡರು. ಕಿವುಡು ಗೌಡ್ನ ಹೆಡ್ತಿ ಕಿಮಿ ಕೇಳ್ದಿದ್ರೂ ಭಾಳ ಚಮತ್ಕಾತಿ. "ಹೆಣ್ಣು ಕೇಳುಕೆ ನೆಂಟರು ಬಂದು ನಡ್ಮಲ್ಲಿ ಕೂತವರೆ. ನೆಂಟರ ಎದುರ್ಗೆ ಮನೇಲಿ ಸಾಮಾನಿಲ್ಲ ಅಂದ್ಬುಟ್ರೆ ಬಡವರ ಮನೆ ಹೆಣ್ಣು ಅಂದ್ಬುಡ್ತಾರೆ, ಜೋರಾಗಿ ಕೂಗಿದ್ರೆ ಕಿವುಡರ ಮನೆ ಹೆಣ್ಣು ಅಂದ್ಬುಡ್ತಾರೆ' ಅಂದ್ಕಂಡು-

ಅಣ್ಣ ಕಾಲ್ ಸನ್ನೆ ಮಾಡ್ತಾಳೆ
ಕೈ ಸನ್ನೆ ಮಾಡ್ತಾಳೆ
ಕಾಲ್ ಸನ್ನೆ ಕೈಸನ್ನೆ ಮಾಡಿ
ಗಂಡನ ದಂಡಕೆ ಕರೆದಾಳಣ್ಣ

ಗಂಡ ಬಂದ. "ಯಜಮಾನ ಹೆಣ್ ಕೇಳುಕೆ ನೆಂಟರು ಬಂದು ನಡ್ಮಲ್ಲಿ ಕೂತವರೇ, ಮಲ್ಲಿ ಏನಂದ್ರೆ ಏನಿಲ್ಲ. ಈ ಹತ್ರುಪಾಯಿ ತಕ್ಕೊಂಡೋಗಿ ಪೇಟೇಲಿ ಸಾಮಾನು ತಕ್ಕಬನ್ನಿ' ಅಂದಳು. ಕಿವುಡು ಗೌಡ್ನಿಗೆ ಹೆಡ್ತಿ ಹೇಳಿದ್ದು ತಿಳಿನಿಲ್ಲ "ನೋಡ್ದಾ, ನೀನು ಇದೂವರ್ಗೆ ನನ್ನ ಮಗಳ ಮದ್ವೆ ಆಗಲ್ಲ. ಹತ್ರುಪಾಯಿ ತಕ್ಕಂಡು ದೇಶಾಂತರ ಹೋಗಿ ಮಗಳ ಮದ್ವೆ ಆಯಿತ್ಲೇ ಬಾ ಅಂತಾ ಹೇಳ್ತಾ ಅವಳೆ. ನಂಗೆ ಈ ಬೊಗಟೆಗೆ ಬದ್ಕು, ಮಕ್ಕಳು ಯಾಕೆ' ಅನ್ಕಂಡು ಹೊರಟೇಬಿಟ್ಟ !

ಹಳೆಯ ಕಂಬಳಿ ತಗದನಣ್ಣ
ಹತ್ತು ರೂಪಾಯಿ ಈಸಿಕಂಡ
ದೇಶಾಂತರ ಹೊರಟೇಬಿಟ್ಟ.

ಊರಿಂದಾಚೆ ಕುಂಬಳಗೂಡಿಗಂಟ ಹೊಂಟೋದ. ಪಕ್ಕದಲ್ಲಿ ಒಳಗೆರೆ. ಒಂದು ಮರ್ದ ಕೆಳಗೆ ಕುಂತ್ಕಂಡ. ಕುಂಬಳಗೂಡವರು ಕುರುಬಗೌಡರು ಎಂಟ್ನೂರು ಕುರಿ ಹೊಡ್ಕಂಡು ಅಲ್ಲಿಗ್ಬಂದ್ರು. ಹನ್ನೆರ್ಡ್ ಗಂಟೆ ಆಯ್ತು. ಊಟ ಆಗಿರ್ನಿಲ್ಲ. ಊಟಕ್ಕೆ ಹೊಗ್ಬೇಕಾದ್ರೆ ಕುರಿ ನೋಡ್ಕಾಕೆ ಒಬ್ರು ಬೇಕಾಗಿತ್ತು. ಹೊನ್ನಾಲಪ್ಪ ಮರದಡಿ ಕುಂತಿದ್ದನ್ನ ನೋಡಿ, ಕುರಿಗೆ ನೀರ್ ಕುಡಿಸಿ, ಒಳಗೆರೆಲಿ ಬಿಟ್ಟು ಗೌಡ್ನ ಹತ್ರ ಬಂದು, "ಊಟ ಮಾಡ್ಕ ಬರೂವರ್ಗೆ ನಮ್ ಕುರಿಯ ಹುಷಾರಾಗಿ ನೋಡ್ಕಂಡ್ರೆ ಎಂಟ್ನೂರ್ ಕುರಿ ಒಳಗೆ ಒಂದ್ ಕುಂಟ್ ಕುರಿ ಕೊಡ್ತೀಮಿ" ಅಂದರು. ಗೌಡ ಮಾತಾಡ್ದೆ "ಏನು" ಅನ್ನುವಂಗೆ ಮೇಲ್ಕೆ ಅಂತಿ ನೋಡ್ದ. ಗೌಡ ಸುಮ್ಗಿದ್ನ ಕಂಡು ಕುರಿ ಮೇಯಿಸುಕ್ಕೆ ಒಪ್ಕಂಡ ಅಂತ ತಿಳ್ಕಂಡು ಅವರು ಊಟಕ್ಕೆ ಹೊಂಟೋದ್ರು. ಕುರಿ ಬುಟ್ಬುಟ್ಟು ಇವರ್‍ಯಾಕೆ ಹೊಂಟೋದ್ರು ಅಂತ ಯೇಚ್ನೆ ಮಾಡ್ತ ಗೌಡ ಕುಂತಿದ್ದ. ವಸಿ ಹೊತ್ತಾಯ್ತು, ಊಟ ಮಾಡ್ಕ ಬಂದು ಕುರಿ ಲೆಕ್ಕ ಹಾಕಿದ್ರು. ಎಲ್ಲ ಸರಿಯಾಗಿದ್ದೊ. ಒಂದೂ ಕಡ್ಮೆ ಇರ್ನಿಲ್ಲ. ಹಿಂದಿನ ಕಾಲ್ದವರು ಆಡಿದ ಮಾತ ಕಳ್ಕ ಬಾರ್ದು ಅಂತ -

ಎಂಟುನೂರು ಕುರಿಯ ಒಳಗೆ
ತಡಕಿ ಹುಡುಕಿ ಹಿಡಿದರಣ್ಣ
ಕುಂಟು ಕುರಿಯ ಹಿಡಿದರಂತೆ
ಗೌಡನ ತಕೆ ತಂದರಂತೆ

"ಗೌಡಾ, ಒಂದೂ ಕಡ್ಮೆ ಆಗದಂಗೆ ಕುರಿ ನೋಡ್ಕಂಡಿದ್ದಯಿ. ಆಡಿದ ಮಾತ್ನಂಗೆ ತಕೋ ಕುರಿಯ" ಅಂದ್ರು. ಕುಂಟುಕುರಿ ನೋಡಿ ಗೌಡನಿಗೆ ಕೋಪ ಬಂತು. "ನೋಡ್ದಾ ಇವರಾ, ನಾನು ಕುಂತ ಜಾಗಬಿಟ್ಟು ಮೇಲ್ಕೆ ಎದ್ದೋಗ್ನಿಲ್ಲ. ಕುರಿ ಕಾಲು ಮುರಿದಿದ್ದೀ ಅಂತ ಬಂದವರಲ್ಲಾ'

ಅಂತ -

ಕಲ್ಲು ನಾನು ತಗಿಯಾನಿಲ್ಲ
ಕುರಿಯ ಕಾಲು ಒಡಿಯಾನಿಲ್ಲ

ನನ್ನಾಣುಗು ನಾನು ಒಡಿಯಾನಿಲ್ಲ
ಕಣ್ಣಾಣಗು ನಾನು ಒಡಿಯಾನಿಲ್ಲ

ಅಂದ. ಅವರು ಇನ್ನೂ ಹೆಚ್ಚಿನ ಕಿವುಡರು. "ಕುರಿ ಕಾದಿದ್ಕೆ ಗೌಡ ಒಳ್ಳೆ ಕುರಿ ಕೇಳ್ತಾ ಅವ್ನೆ' ಅಂದ್ಕಂಡು -

ಅಣ್ಣ ಇಷ್ಟವಾದರೆ ತಕ್ಕಳಬಹುದು
ಕಷ್ಟವಾದರೆ ಬಿಟ್‌ಬಿಡಬಹುದು

ಅಂದರು, ಕೊನ್ಗೆ ಅವರ್ಗೂ ಗೌಡನಿಗೂ ಜಗಳ ಅಂಟ್ಕತು, ಕಿವುಡ ಕಿವುಡರ ಜಗಳ ದೊಡ್ಡದಾಯ್ತು. ಊರ ಮುಂದ್ಲ ಶ್ಯಾನುಭೋಗನ ತಾಕೆ ಬಂದರು.

ಅಣ್ಣ ಊರ ಮುಂದಾಲ ಶಾನುಭೋಗ್ನ
ಮನೆಗಾದರು ಬಂದರಣ್ಣ

ಶಾನುಭೋಗನೂ ಕಿವುಡ. ಶ್ರಾವಣ ಶನಿವಾರ ದೇವರ ಪೂಜ್ಗೆ ದಾರಿಲಿ ತುಳಸಿ ಎತ್ತಿದ್ದ. "ಬುದ್ಧಿ ಬುದ್ಧೀ, ನಾನು ಕುಂತ್ ಜಾಗ ಬುಟ್ಟು ಏಳ್ನಿಲ್ಲ. ಕುರಿ ಕಾಲು ಮುರಿದಿದ್ದೀ ಅಂತ ಅವ್ರೆ' ಅಂದ ಗೌಡ -

ಸ್ವಾಮಿ ನನ್ನಾಣುಗು ನಾನು ಒಡಿಯಾನಿಲ್ಲ
ಕಣ್ಣಾಣುಗು ನಾನು ಒಡಿಯಾನಿಲ್ಲ.

ಕುರುಬ ಗೌಡರೂ ದೂರು ಹೇಳಿದರು : "ನೋಡಿ ಬುದ್ಧೀ, ನಾಮು ಹೇಳಿದ್ದು ಕುಂಟುಕುರಿ, ಇವನೀಗ ಒಳ್ಳೆ ಕುರಿ ಕೇಳ್ತಾ ಅವ್ನೆ. ಎಲ್ಲಿಂದ ಕೊಡ್ಲಾ" ಶಾನುಭೋಗನಿಗೆ ಇವರು ಹೇಳಿದ್ದು ಅವನು ಹೇಳಿದ್ದು ಯಾವುದೂ ಸರಿಯಾಗಿ ಕೇಳ್ನಿಲ್ಲ. ತುಳಸಿ ಎತ್ತೂದ್ ಕಂಡು ಬೈತಾ ಅವ್ರೆ ಅನ್ಕಂಡ. "ಏನ್ರೋ, ದಾರಿವಳಗೆ ನನ್ನ ತುಳಸಿ ಎತ್ತಬೇಡಿ ಅಂತೀರಾ ? ಬ್ರಾಮ್ಮರನ ಕಂಡ್ರೆ ರೈತರಿಗೆ ಭಾಳ ಸರಾಗ. ತುಳ್ಸಿ ಗಿಡ್ಕೆ ನಿಮ್ಮಿಡ್ತಿರಾಗ್ಲೀ ನಿಮ್ತಾಯಿ ತಂದೇರಾಗ್ಲೀ ನೀರಾಕಿ ಬೆಳೆದಿದ್ರಾ ? ದಾರಿಲಿ ಬೆಳೆದಿತ್ತು. ಎತ್ಕತಾ ಇವ್ನಿ. ನಿಮ್ಗೇನ್ ನಷ್ಟ ? ಬನ್ನಿ ಮನೇ ಮೂಲೇಲಿ ನ್ಯಾಯ ತೀರಿಸ್ತೀನಿ' ಅಂದ. ಅವರು ಬಂದ್ರು. ಹುಷಾರುಗಾರ ಶ್ಯಾನುಭೋಗ. ಅವರ್ನೆಲ್ಲಾ -

ಮನೆಯ ಮೂಲ್ಗೆ ಸೇರಿಸ್ಕಂಡು
ಬೀಡೆ ದೊಣ್ಣೆ ಎಳೆದೇಕಂಡ
ಬೀಡೆ ದೊಣ್ಣೆ ಎಳದನಂತೆ
ಬುರುಡೆ ನೋಡಿ ಬುಟ್ಟನಂತೆ
ಬೀಡೆ ದೊಣ್ಣೆ ಏಟು ಬಿದ್ದು

ಆ ಊ ಎಂದರಂತೆ
ಟುಮ್ಮ ಟುಮ್ಮನೆ ಕುಣಿದರಂತೆ
ತಕ್ಕ ತಕ್ಕನೆ ನೆಗೆದಾರಂತೆ
ದೊಣ್ಣೆ ಏಟು ಬಿದ್ದವಂತೆ
ಕಿವುಡು ಅಲ್ಲಿ ಇಳಿದೇ ಹೋಯ್ತು.

* ಕಿವುಡ, ಲಿಂಗಯ್ಯ ಡಿ. ಕರ್ನಾಟಕ ಜನಪದ ಕಾವ್ಯಗಳು, ದಿನಕರ ಪ್ರಕಾಶನ ಬೆಂಗಳೂರು ೧೯೭೬ ಪು.ಸಂ.

# ೫೭. ಹೊಗೆಸೊಪ್ಪಿನ ತೆವಲು*

ತಾಲಲಲೇ ಮಾಯೀ ತಾಲಲಲೇ ‖ಪಲ್ಲವಿ**‖
ಕೊಳೆತೂರು ಬೊಮ್ಮಣ್ಣನವನು
ಹೊಗೆಸೊಪ್ಪಿನ ಯಾಪಾರ್‌ಗಾರ
ಅಟ್ಟದ ಪುರ ಬೆಟ್ಟದ ಪುರ
ಒಟ್ಟಿಗೆ ಗುತ್ತಿಗೆ ಮಾಡಿದೆನಣ್ಣ
ಗಾಡಿನಾದರು ಕಟ್ಟಿದನಣ್ಣ
ಬೆಟ್ಟದ ಪುರಕೆ ಹೋದನಣ್ಣ
ಹೊಗೆಸೊಪ್ಪು ಕಿತ್ತನಣ್ಣ
ಗಾಡಿಗಾದರು ತುಂಬಿದನಣ್ಣ
ಗಾಡಿಗಾದರು ತುಂಬಿಕಂಡು
ಊರಿಗಾದರು ಬಂದನಣ್ಣ

ಕೊಳತೂರು ಬೊಮ್ಮಣ್ಣ ಗುತ್ತಿಗೆ ಹಿಡಿದ ಹೊಗೆಸಪ್ಪೆನೆಲ್ಲ ಗಾಡಿಲಿ ತುಂಬಿಕಂಡು ಮನೆಗೆ ಬಂದು, ಲಾಭದನ್ನೆಲ್ಲ ಪೆಟ್ಟಿ ಕಟ್ಟಿ ಅಟ್ಟಕ್ಕೆ ತುಂಬಿ, ಅಸಲಿನ ಹೊಗೆಸೊಪ್ಪನ್ನು ಮಾರುವುದಕ್ಕೆ ಅಂತ ಗಾಡಿಗೆ ತುಂಬಿದ, ಮರಳ್ಳಿ ಸಂತೆಗೆ ಮಾರುವುದಕ್ಕೆ ಹೊರಟಾಗ -

ಹೆಡ್ತಿನಾದರು ಕರದುಕೊಂಡು
ಹೆಡ್ತಿಗೆ ಬುದ್ಧಿ ಹೇಳಿದನಣ್ಣ
"ಮಡದಿ ಮರಳ್ಳಿ ಸಂತೆಗೆ ಹೊಯ್ತೀನಿ
ಹೆಣ್ಣೆ ಹಟ್ಟಲಿರುವ ದನವು ಜ್ವಾಕೆ
ಕೊಟ್ಟಿಗೆಲಿರುವ ಕುರಿಯು ಜ್ವಾಕೆ

ಬೆಟ್ಟದ ಪುರದ ಹೋರಿ ಜ್ವಾಕೆ
ಗುಳಿಯಲ್ಲಿರುವ ಜ್ವಾಳ ಜ್ವಾಕೆ
ಅಟ್ಟದಲ್ಲಿರುವ ಸೊಪ್ಪು ಜ್ವಾಕೆ
ಪರಾಯದೆಣ್ಣೆ ನೀನು ಜ್ವಾಕೆ
ನೀನುಟ್ಟಿರುವಂಥ ಸೀರೆ ಜ್ವಾಕೆ
ಮನೆಯಲಿ ಜ್ವಾಕೆ" ಎಂದನಣ್ಣ
ಹೆಡ್ತಿಗೆ ಬುದ್ಧಿ ಹೇಳಿದನಣ್ಣ
ಗಾಡಿನಾದರು ಕಟ್ಟಿದನಣ್ಣ
ಮರಳ್ಳಿ ಸಂತೆಗೆ ಹೊರಟನಣ್ಣ

ಸಂತೆಗಾದರು ಬಂದನಣ್ಣ
ಗಾಡಿನಾದರು ಬಿಟ್ಟನಣ್ಣ
ಯಾಪಾರನಾದರು ಮಾಡಿದನಣ್ಣ
ತಂದಿದ್ದ ಮಾಲ ಮಾರಿದನಣ್ಣ

ಬೊಮ್ಮಣ್ಣ ಮರಳ್ಳಿ ಸಂತೆಗೆ ಹೋದ ಮೇಲೆ, ಅವನ ಹೆಂಡತಿ ನೀರಿಗೆ ಹೊರಟಳು.

ಕಂಕಳಲ್ಲಿ ಕೊಡವ ಇರಿಕಿದಳಣ್ಣ
ಬಾವಿಯು ನೀರಿಗೆ ಹೊರಟಳಣ್ಣ
“ಅಂಡುಗಾಲಿನ ಹನುಮಕ್ಕ
ದುಂಡು ಮುಸುಡಿ ಚೌಡಕ್ಕ
ಬಾವಿ ನೀರಿಗೆ ಬಂದೀರಕ್ಕ
ಕಟ್ಟೆ ನೀರಿಗೆ ಬಂದೀರಕ್ಕ ?’
ಸಂಗಡಗಾತಿರ ಕರದಳಣ್ಣ
ನೀರಿಗಾದರು ಹೊರಟಳಣ್ಣ.

ಬೊಮ್ಮಣ್ಣನ ಹೆಂಡತಿ ಸ್ನೇಹಿತೆಯರು ಹೊಗೆಸೊಪ್ಪಿನ ತೆವಲುಗಾತಿರು ನೀರಿಗೆ ಹೋಗುತ್ತಿದ್ದಾಗ, ಅವರು -

ತರಗೆಲೆ ಗೋಟಡಕೆ ತಗದರಣ್ಣ
ಕಟುಮ ಕಟುಮನೆ ಕಡಿದರಣ್ಣ

ಬೊಮ್ಮಣ್ಣನ ಹೆಂಡತಿಗೂ ಗ್ಯಾನವಾಯಿತು.

“ಅವುಸಿಗಂಡ್ ಅವುಸಿಗಂಡ್ ತಿನ್ನಬೇಡಿ
ನನಗೆ ಸ್ವಲ್ಪ ಕೊಡಿರಕ್ಕ’

ಅಂತ ಕೇಳಿದಾಗ, ಅವರಿಗೆ ಸಿಟ್ಟು ಬಂತು. “ಅಯ್ಯೋ ಬಂಗದ ನನ್ ಸವ್ತೀ, ನಾವೇನ್ ಆವಿಸ್ಕ ತಿಂದವು ? ಇಷ್ಟಗಲ ತರಗೆಲೆ, ಎರಡು ಗೋಟಕೆ ಕಡಿತಾ ಇಮಿ’ ಅಂದರು. ಅವರೆಲ್ಲ ಬಾಯಾಡಿಸುವುದನ್ನು ಕಂಡು ಸುಮ್ಮನಿರಲಾರದೆ ಬೊಮ್ಮಣ್ಣನ ಹೆಂಡತಿ, “ಅದ್ನೇ ನಂಗೂ ವಸಿ ಕೊಡಿ” ಅಂತ ಕೇಳಿದಳು.

ತರಗೆಲೆ ಗೋಟಡಕೆ ತಗದರಣ್ಣ
ಅವಳಿಗೆ ಸ್ವಲ್ಪ ಕೊಟ್ಟರಣ್ಣ
ತರಗೆಲೆ ಗೋಟಡಕೆ ಅಗಿದಳಣ್ಣ
ನಾಲಿಗೆ ನೀಟಿ ನೋಡಿದಳಣ್ಣ

ಎಲೆ ಅಡಿಕೆ ಅಗಿದುದರಿಂದ ನಾಲಗೆ ಕೆಂಪಾಗಿತ್ತು. ಖುಷಿಯಾಯಿತು. “ಅಕ್ಕಾ, ಅಂಡುಗಾಲಿನ ಹನುಮಕ್ಕಾ, ಚೆಂದಾಗಿ ಕೆಂಪಾಗೈತೆ. ನೀಮು ಕಡೆ ಮೇಲೆ ಹಾಕ್ಕಂಡ್ರಲ್ಲಾ ಅದೊಸಿ ಕೊಡಿ’ ಅಂದಳು.

ಬಣ್ಣದಂಥ ನೆರಿಯ ಒಳಗೆ
ಬಂಗಾರದಂಥ ಹೊಗೆಯಸೊಪ್ಪು
ಹೊಗೆಯಸೊಪ್ಪ ತಗದರಣ್ಣ
ಅವಳಿಗೆ ಸ್ವಲ್ಪ ಕೊಟ್ಟಳಣ್ಣ
ಮುಂಬಲ್ಲ ಮೇಲೆ ಮಡಿಗಿದಳಣ್ಣ
ಕುರುಕಿ ಕುರುಕಿ ನೋಡಿದಳಣ್ಣ
ರಸಾನಾದರು ಕುಡಿದಳಣ್ಣ
ನೆತ್ತಿಗಾದರು ಏರಿತಣ್ಣ
ಬಾವಿ ನೀರ ಹೊತ್ಕಂಡಾಗ
ಮನೆಗಾದರು ಬಂದಃಳಣ್ಣ

ಎಂದೂ ಹೊಗೆಸೊಪ್ಪು ಹಾಕಿಕೊಂಡವಳಲ್ಲ, ಮನೆಗೆ ಬಂದ ಮೇಲೆ ತೆವಲು ಹತ್ತಿತು. ಜೊತೆಗಾತಿಯರು ಕೊಟ್ಟಿದ್ದ ಸೊಪ್ಪು ಒಂದು ಸಾರಿಗೇ ಮುಗಿದು ಹೋಗಿತ್ತು. ಬೆಳಿಗ್ಗೆ ಎದ್ದಕೂಡಲೇ ಪುನಃ ಅವರ ಹತ್ತಿರಕ್ಕೆ ಹೋಗಿ ಕೇಳಿದಳು.

ಅಂಡುಗಾಲ ಹನುಮಕ್ಕನ ಮನೆಗೆ
ದುಂಡು ಮುಸುಡಿ ಚೌಡಿ ಮನೆಗೆ
ಪಕ್ಕದ ಮನೆಗೆ ಹೋದಳಣ್ಣ
ಹೊಗೆಯ ಸೊಪ್ಪು ಕೇಳಿದಳಣ್ಣ
“ಏಳುಕೆ ಮುಂಚೆ ಕೇಳುಕೆ ಬಂದ್ಯಾ
ವಾಣಿಗೆಟ್ ನನ್ನೈದನ ಮಗಳೆ ?”

ಜೊತೆಗಾತಿಯರೆಲ್ಲ, “ನಿನ್ ಗಂಡ ಮಾಡುದೇ ಹೊಗೆಸೊಪ್ನ ಯಾಪಾರ. ಮಲ್ಲಿ ಬೇಕಾದಂಗೆ ಮಡಗವನೆ. ತಕ್ಕಂದು ಆಕನಾರದೆ ನಮ್ಮ ಬಂದು ಕೇಳ್ತಾ ಇದ್ದಯಾ ?' ಅಂತ ಬೈದರು. ತಮ್ಮ ಮನೆಯಲ್ಲಿರುವುದೂ ಅದೇ ಹೊಗೆಸೊಪ್ಪು ಅಂತ ಆಗ ಅವಳಿಗೆ ಅರಿವಾಯಿತು. ತಮ್ಮಲ್ಲೇ ಇರುವುದ್ಕೆ ಇನ್ನೊಬ್ಬರನ್ನ ಯಾಕೆ ಕೇಳಬೇಕು ಅಂತ ಬಿರಬಿರನೆ ಮನೆಗೆ ಬಂದಳು.

ಸಂಗಡಗಾತಿರ ಮಾತ ಕೇಳಿ
ಮನೆಗಾದರು ಬಂದಳಣ್ಣ
ಅಟ್ಟಣಿ ಏಣಿ ಹಾಕಿದಳಣ್ಣ
ಹೊಗೆಸೊಪ್ಪು ಇಳಿಕಿದಳಣ್ಣ
ಎಪ್ಪತ್ತು ಕಟ್ಟ ಹೊಗೆಸೊಪ್ಪು
ಒಪ್ಪದಲ್ಲಿ ಇಳಿಕಿದಳಣ್ಣ
ಎಪ್ಪತ್ತು ಕಟ್ಟ ಹೊಗೆಸೊಪ್ಪ
ಹೋಯ್ತಾ ಬತ್ತಾ ತಿಂದಳಣ್ಣ

ಗಂಡ ಅಟ್ಟದ ಮೇಲಿಟ್ಟಿದ್ದ ಎಪ್ಪತ್ತು ಕಟ್ಟು ಹೊಗೆ ಸೊಪ್ಪು ತಿಂದರೂ ಅವಳಿಗೆ ತೆವಲು ತೀರಲಿಲ್ಲ. ಮನೇಲಿದ್ದುದು ಮುಗಿದು ಹೋಗುತ್ತಲೆ ಅಕ್ಕ ಪಕ್ಕದ ಮನೆಯವರನ್ನು ಕೇಳುವುದಕ್ಕೆ ಹೋದಳು.

ಆಚೆ ಕೇರಿಗೆ ಹೋದಳಣ್ಣ
ಈಚೆ ಕೇರಿಗೆ ಬಂದಳಣ್ಣ
“ಚಿಕ್ಕ ನಿಂಗಕ್ಕ ದೊಡ್ಡ ನಿಂಗಕ್ಕ
ನೀವೊಂದು ಸ್ವಲ್ಪ ಕೂಡಿರಕ್ಕ”

ಅವರು ಕೊಡಲಿಲ್ಲ “ಏನ್ ಬಂಗದ ನನ್‌ಸವ್ತಿ ಹಟ್ಟೆಲಿ ಗುಳಿವಳಗೆ ಜ್ವಾಳ ತುಂಬದೆ. ಕೊಟ್ಟೆಗೇಲಿ ದನ ಕುರಿ ಅವೆ. ಹೊಗೆಸೊಪ್ಪು ತಕ್ಕಕಾಗುದಿಲ್ವಾ ? ನಾವು ಕಂಬಳ ಕೂಲಿ ಮಾಡವರು. ನಮ್ಮ ಕೇಳುಕೆ ಬಂದಿದ್ದೀ ?’ ಅಂತ ಬೈದರು. ಬೊಮ್ಮಣ್ಣನ ಹೆಂಡತಿ ಯೋಚನೆ ಮಾಡಿದಳು. ಮನೇಲಿಬೇಕಾದಷ್ಟಿತ್ತು. ಇವರಿಗಿಂತ ಕಡಮೆಯ ನಾನು ಅಂತ ಮನೆಗೆ ಬಂದು -

ಜ್ವಾಳದ ಗುಳಿಯ ತಗದಳಣ್ಣ
ಜ್ವಾಳನಾದರು ತುಂಬಿದಳಣ್ಣ
ಅಂಗಡಿಗಾದರೆ ಅಳೆದಾಳಣ್ಣ
ಹೊಗೆಯಸೊಪ್ಪ ತಂದಾಳಣ್ಣ
ಕೊಳತೂರು ಬೊಮ್ಮಣ್ಣನೆಡ್ತಿ
ಹೊಗೆಸೊಪ್ಪಿನ ತೆವಲುಗಾತಿ

ಮೊದಲೇ ತೆವಲು ಹತ್ತಿದವಳು. ತಂದ ಸೊಪ್ಪು ಮುಗಿಯುತ್ತಲೂ ಇನ್ನೂ ಇನ್ನೂ ತಿನ್ನೋಣ ಅನ್ನಿಸಿತು

ಕಟುಕನಾದರೆ ಕರೆದಾಳಣ್ಣ
ಕೊಟ್ಟಿಗೆ ಕುರಿಯ ಮಾರಿದಳಣ್ಣ
ಕುರಿಯ ಮಾರಿದ ಹೊಗೆಸೊಪ್ಪು
ಕುರಿ ಬುಡುಹೊತ್ಗೆ ತಿಂದಳಣ್ಣ
ಕಣಿವೆ ಕೆಳಗಲ ಕೊಂಗರ ಕರ್ದು
ಹಟ್ಟೆಲಿರುವ ದನವ ಮಾರ್ದ
ದವನ ಮಾರಿ ತಂದ ಸೊಪ್ಪ
ದನಬುಡು ಹೊತ್ಗೆ ತಿಂದೇಬಿಟ್ಟ
ಹೋರಿ ಮಾರ್ದ ಹೊಗೆಯಸೊಪ್ಪ
ಹೊಯ್ತಾ ಬತ್ತಾ ತಿಂದೇ ಬಿಟ್ಟ
ಕಂಚುಮುಟ್ಟ ತಗದಳಣ್ಣ
ಕಂಚುಗಾರಿಗೆ ಮಾರಿದಳಣ್ಣ
ಕೊಳತೂರು ಬೊಮ್ಮಣ್ಣನೆಡ್ತಿ
ಹೊಗೆಸೊಪ್ಪಿನ ತೆವಲುಗಾತಿ
ಕೈಯಲ್ಲಿದ್ದ ಕಡಗ ಕಳದು

ಕಾಗಲೋಡಿಗೆ ಮಾರಿದಳಣ್ಣ
ಮೂಗಲ್ಲಿದ್ದ ಮೂಗ್ತಿ ಬಿಚ್ಚಿ
ಮೂಗೂರಿಗೆ ಮಾರಿದಳಣ್ಣ

ಕತ್ತಿನಲ್ಲಿದ್ದ ತಾಳಿ ಬಿಚ್ಚಿ
ತಾಯೂರಿಗೆ ಮಾರಿದಳಣ್ಣ
ಉಟ್ಟಿರುವಂಥ ಸೀರೆ ಬಿಚ್ಚಿ
ಮಾರವಾಡಿಗೆ ಮಾರಿದಳಣ್ಣ
ಗೋಣಿಪಟ್ಟೆ ಉಟ್ಟಕಂಡು
ತಣ್ಣಗೆ ನುಣ್ಣಗೆ ಕುಂತಳಣ್ಣ
ಕೊಳತೂರು ಬೊಮ್ಮಣ್ಣನೆದ್ದಿ
ಹೊಗೆಸೊಪ್ಪಿನ ತೆವಲುಗಾತಿ
ಮರಳ್ಳಿ ಸಂತೆಗೆ ಹೋಗಿದ್ದವನು
ಕೊಳತೂರು ಬೊಮ್ಮಣ್ಣನವನು
ಗಾಡಿನಾದರು ಅಟ್ಟಿಕಂಡು
ಊರಿಗಾದರು ಬಂದನಣ್ಣ
ಗಾಡಿನಾದರು ಬಿಟ್ಟು ಬಿಟ್ಟು
ಹೆಡ್ತಿನಾದರು ಕೂಗಿದನಣ್ಣ
"ಹೆಣ್ಣೆ ಯಾರ್ ಮನೆಯಲ್ಲಿ ?
ಹೆಣ್ಣೆ ಕಾಲಿಗೆ ನೀರ್ ತತ್ತಾ
ಹೆಣ್ಣೆ ಯಾರ್ ಮನೆಯಲ್ಲಿ ?
ಹೆಣ್ಣೆ ಕೈಯಿಗೆ ನೀರ್ ತತ್ತಾ'
ಗಂಡನ ಸದ್ದ ಕೇಳಿದಳಣ್ಣ
ದಡಕನೆ ಕದವ ತಗದಳಣ್ಣ
ಮೊಗೆಯಲಿ ನೀರ ತುಂಬಿದಳಣ್ಣ
ಗಂಡಗೆ ನೀರ ತಂದಳಣ್ಣ
"ಹೆಣ್ಣೆ ಉಟ್ಟಿದ್ದುದು ನೂಲಿನ ಸೀರೆ
ಈ ಬೆಡಗಿನ ಸೀರೆ ಎಲ್ಲಿಂದ್ ಬಂತೆ ?'
"ಸೀರೆ ಸೆಣೆದು ಸೂರಿಗೆ ಕಟ್ಟಿದ್ದಿ
ಸುಂಟರಗಾಳಿ ಎತ್ಕಂಡೋಯ್ತು
ಅದ್ಲಿ ಬದ್ಲಿ ಸೀರೆ ಇಲ್ಲಾ
ಗೋಣಿಪಟ್ಟಿ ಸುತ್ತಿಕಂಡೆ"
"ಸೀರೆ ಹೋದರು ಹೋಗಲಿ ಹೆಣ್ಣೆ
ಕೈಯಲ್ಲಿದ್ದ ಕಡಗ ಎಲ್ಲಿ ?'
ಮೂಗಲ್ಲಿದ್ದ ಮೂಗ್ತಿ ಎಲ್ಲಿ ?
ಕತ್ತಲಿದ್ದ ತಾಳಿ ಎಲ್ಲಿ ?
"ತಾಳಿ ಕಳ್ದು ಗೂಡಲಿಟ್ಟು
ತಾನನಾದರು ಮಾಡುತಿದ್ದಿ
ಸುಂಡಣ ಭಾವ ಕಚ್ಚಿಕಂಡು
ಬಿಲಕಾದರೆ ಹೊಂಟೇ ಹೋದ

“ತಾಳಿ ಹೋದರು ಹೋಗಲಿ ಹೆಣ್ಣೆ
ಕೊಟ್ಟಿಗೆಯಲಿದ್ದ ಕುರಿಯು ಎಲ್ಲಿ ?’
“ಕುರಿ ಬುಟ್ಕಂಡು ಒಳಗೆರೆಲಿದ್ದಿ
ತೋಳಣ್ಣ ಬಂದು ತಿಂದೆಬಿಟ್ಟ”
“ಕುರಿಹೋದರು ಹೋಗಲಿ ಹೆಣ್ಣೆ
ಹಟ್ಟಿಲಿದ್ದ ದನವು ಎಲ್ಲಿ ?’
“ಮೂಡಲ ಗಿಡವಿಗೆ ಹೊಡಿದಿದ್ದಿ ರಾಯ
ಕಿರುಬಣ್ಣ ಬಂದು ತಿಂದೆ ಬಿಟ್ಟ’
“ದನವು ಹೋದರು ಹೋಗಲಿ ಹೆಣ್ಣೆ
ಗುಳಿಲಿದ್ದ ಜ್ವಾಳ ಎಲ್ಲಿ ?”
“ಅಟ್ಟದ ಪುರದ ಬೆಟ್ಟದ ಪುರದ
ನಂಟರು ಬಂದು ಉಣ್ಕಂಡೋದರು”
“ಎಲ್ಲ ಹೋದರು ಹೋಗಲಿ ಹೆಣ್ಣೆ
ಹೊಗೆಯ ಸೊಪ್ಪು ಎಲ್ಲಿ ಹೋಯ್ತು ?”

ಎಷ್ಟೂ ಅಂತ ಸುಳ್ಳು ಹೇಳುವುದು ? ನಡೆದದ್ದನ್ನೆಲ್ಲ ಕೊನೆಗೆ ಹೇಳಿಬಿಟ್ಟಳು.

“ಎಪ್ಪತ್ತು ಕಟ್ಟು ಹೊಗೆಸೊಪ್ಪು
ಹೋಯ್ತಾ ಬತ್ತ ತಿಂದೆಬಿಟ್ಟೆ
ಕಟುಕಗಾರ್ ನನ್ನೈದನ ಸೊಪ್ಪು
ಕುರಿಯನಾದರೆ ಮಾರಿಸ್ತಯ್ಯ
ಕಣಿವೆ ಕೊಂಗ್ ನನ್ನೈದನ ಸೊಪ್ಪು
ದನವನಾದರೆ ಮಾರಿಸ್ತಯ್ಯ
ಕಂಚುಗಾರ್ ನನ್ನೈದನ ಸೊಪ್ಪು
ಕಂಚು ಮುಟ್ಟ ಮಾರಿಸ್ತಯ್ಯ
ಕಾಗಲೋಡಿ ನನ್ನೈದನ ಸೊಪ್ಪು
ಕಡಗನಾದರೆ ಮಾರಿಸ್ತಯ್ಯ
ಮೂಗೂರ ನನ್ನೈದನ ಸೊಪ್ಪು
ಮೂಗ್ತಿನಾದರೆ ಮಾರಿಸ್ತಯ್ಯ
ತಾಯೂರ ನನ್ನೈದನ ಸೊಪ್ಪು
ತಾಳಿನಾದರೆ ಮಾರಿಸ್ತಯ್ಯ
ಮಾರವಾಡಿ ನನ್ನೈದನ ಸೊಪ್ಪು
ಸೀರೆನಾದರೆ ಮಾರಿಸ್ತಯ್ಯ

ಮನೆಯಲ್ಲಿದ್ದುದನ್ನೆಲ್ಲ ಹಾಳು ಮಾಡಿದ ಹೆಂಡತಿಯ ಮೇಲೆ ಬೊಮ್ಮಣ್ಣನಿಗೆ ಸಿಟ್ಟು ಬಂತು.

ಬೀಡದೊಣ್ಣೆ ಎಳೆದುಕೊಂಡ
ಮನೆಯ ಮೂಲ್ಗೆ ಸೇರಿಸಿಕಂಡ
ಬೀಡೆ ದೊಣ್ಣೆ ಏಟು ಬಿದ್ದು
ಟಮ್ಮ ಟುಮ್ಮನೆ ಕುಣಿದಳಣ್ಣ

ಇನ್ನೊಂದು ಸಾರಿ ಹೊಗೆಸೊಪ್ಪಿನ ಸಿಂತೆಗೆ ಹೋಗುವುದಿಲ್ಲ ಎನ್ನುವವರೆಗೆ, ಮೈಕೈ ಎಲ್ಲಾ ಬಾಸುಂಡೆ ಬರುವ ಹಾಗೆ ಬಾರಿಸಿದ. ಅಂದಿನಿಂದ ಬೊಮ್ಮಣ್ಣನ ಹೆಂಡತಿಗೆ ಹೊಗೆಸೊಪ್ಪಿನ ತೆವಲು ಇಳಿದು ಹೋಯಿತು.

---

** ಮುಂದೆ ಬರುವ ಪದ್ಯ ಭಾಗದ ಪ್ರತಿ ಎರಡು ಸಾಲುಗಳ ಕೊನೆಯಲ್ಲಿ ಈ ಪಲ್ಲವಿಯನ್ನು ಹಾಡಿಕೊಳ್ಳಬೇಕು.

---

* ಹೊಗೆಸೊಪ್ಪಿನ ತೆವಲು; ಲಿಂಗಯ್ಯ, ಡಿ. ಕರ್ನಾಟಕ ಜನಪದ ಕಾವ್ಯಗಳು, ದಿನಕರ ಪ್ರಕಾಶನ ಬೆಂಗಳೂರು - ೧೯೭೬ ಪು.ಸಂ.

## ೫೮. ಮೀನಿನೆಸರು*

ರಾಯ ಮೀನಿಗೋಯ್ತಾರೆ
ರಾಯ ನಗರದ ಕೆರೆಗೆ ಮೀನಿಗೋಯ್ತಾರೆ | ಸೊಲ್ಲು |

ಚೆಬ್ಬಲು ಪುಟ್ಟಿ ತೆಗೆಯಮ್ಮ
ದೊಡ್ಡ ಬಲೆಯ ತೆಗೆಯಮ್ಮ
ಚೆಬ್ಬಲು ಪುಟ್ಟಿ ತೆಗೆದಾಳೊ
ದೊಡ್ಡ ಬಲೆಯ ತೆಗೆದಾಳೊ
ನಗರದ ಕೆರೆಗೆ ಮೀನಿಗ್ಹೊರಟಾರೊ
ಅವರು ಮೀನಿಗ್ಹೊರಟಾರೊ

ಮುಳುಗಿ ಮುಳ್ಗಿ ಎದ್ದಾನೊ
ದಪ್ಪದಪ್ಪ ಮೀನ್ ಹಿಡಿದಾನೊ
ಕೋಡಿ ಬಾಯಿಗೆ ಬಂದಾನೊ
ಮತ್ತಷ್ಟೊಗರ ಹಾಕಿನೊ
ಉಜ್ಜಿ ಕೆರೆದು ತೊಳೆದಾನೊ
ಉಜ್ಜಿ ಕೆರ್ದು ತೊಳ್ದುಕೊಂಡು
ಅವರು ಮನೆಗೆ ಬಂದಾರೊ

ಮನೆಗೆ ಬಂದು ಸಂಬಾರೇಳಿರಿ
ರಾಯ ಮನೆಗೆ ಬಂದು ಸಂಬಾರೇಳಿರಿ
ದಂಡೆ ಮನೇರ್ ಕೇಳಮ್ಮಿ
ಪಕ್ಕುದ್ ಮನೇರ್ ಕೇಳಮ್ಮಿ
ನೀಲಕ್ಕ ನಿಂಗಕ್ಕ
ಮಾದಕ್ಕ ಮಲ್ಲಕ್ಕ
ಅವ್ವ ಕೂದ ಮೀನಿಗೆ ಸಂಬಾರೇಳಿರಿ
ಅವ್ವ ಸಂಬಾರೇಳಿರಿ
ಅಮ್ಮಿ ಆರುಬಳ್ಳ ಮೆಣ್ಸುನ್‌ಕಾಯಿ ಅರ್ದಾಕು
ಮೂರು ಬಳ್ಳ ಮೆಣ್ಸಿನ್‌ಕಾಯ್ ಮುರ್ದಾಕು
ಒಂದು ಗುಂಡು ಹುಣ್ಸಯ್ಯ ಕದರುಯ್ಯಿ
ಮೂರು ಬಿಂದ್ಗೆ ನೀರ ಬೆರಸೆತ್ತು
ಅಮ್ಮಿ ಒಲೆ ಮ್ಯಾಲ್ಮಡಗಮ್ಮಿ
ಅಮ್ಮಿ ಬೆಂಕಿ ಒಟ್ಟಮ್ಮಿ
ಬೆಂಕಿ ಹಾಕಮ್ಮಿ ಅಮ್ಮಿ
ಚೆನ್ನಾಗಿ ಬೇಯ್ಸಮ್ಮಿ ಅಮ್ಮಿ
ನೆಕ್ಕಿ ನೋಡಮ್ಮಿ ಅಮ್ಮಿ
ಅವ್ರು ಸಂಬಾರೇಳಿರೊ ಅವರು
ಸಮಕಟ್ಟೇಳಿರೊ

ಹೆಣ್ಣು ಸಂಬಾರಾಕಿದೋ
ಹೆಣ್ಣು ಒಲೆ ಮ್ಯಾಲಿಟ್ಟಾದೋ
ಮೀನು ಕೊತ ಕೊತ ಬೆಂದಾದೊ
ಎಸ್ರು ಗಮಗಮ್ಮೆಂದಾದೊ
ಗಮ್ ಗಮ ಗುಟ್ಟಿದೊ

ಅಟ್ಲಿಗೇಣಿ ಹಾಕೀಳೊ
ಹರುಕಲು ಚಟ್ಟೆ ತಗಿದಾಳೊ
ದಪ್‌ದಪ್ ಕಡಿಯ ತುಂಬೀಳೊ
ಹಾಯ್ಗಡಿಯ ಆದಾಳೋ
ಕೂಯ್ಗಡಿಯ ಕೂದಾಳೊ
ಅಟ್ಟಲ ಮೇಲೆ ಮಡಗೀಳೊ
ಹೆಣ್ಣು ಅಮಸಿ ಮಡಿಗೀಳೊ

ಚವುಡಿಲಿ ಮನಗಿದ್ದು ಬಂದ ರಾಯರ್ಗೆ
ತಪ್ಪಲೇಲಿ ನೀರ ಕೊಟ್ಟಾಳೊ

ತಣಗೆನಾದರೆ ಮಡಗೀಳೊ
ಹರಕಲ ಗುಂಡೇಡಿಕ್ಕೀಳೊ
ತಲೆ ಬಾಲೆರಡ ಹಾಕೀಳೊ
ಅಮ್ಮಿ ದಂಡೆ ಕಡಿಯೆಲ್ಲಿ
ಅಮ್ಮಿ ಪಕ್ಕದ ಕಡಿಯೆಲ್ಲಿ

ರಾಯ ನಾನೇನು ಬಲ್ಲೆ ರಾಯ
ರಾಯ ನಾನೇನು ಬಲ್ಲೆ ರಾಯ
ಮಾಡಿದಳಗುಣವೊ ಮಡಕೆ ಗುಣವೊ
ಹೋಜಿ ಮಾಡಿದ ಸಟ್ಗದ ಗುಣವೊ
ತಿಟ್ಟೇಮೇಲಿರುವ ಪಟ್ಟಲದಮ್ಮನಿಗೆ
ತಪ್ಪದೆ ಒಂದೊತ್ತಿರುವೆನು
ನಾನೇನು ಬಲ್ಲೆ ಗಂಡರಾಯ
ಕೋನೆ ದೇವಾರು ಬಲ್ಲಾದು
ನನಗೊಂದು ತಿಳಿಯಾದು

ಅಟ್ಟಲಿಗೇಣಿ ಹಾಕೀನೋ
ಹರಕಲಚಟ್ಟ ತೆಗೆದಾನೊ
ಅಮ್ಮಿ ಯಾರಿಗೆ ಮಡಗಿದ್ದಿ
ಅಮ್ಮಿ ಯಾತಕ ಮಡಗಿದ್ದಿ

ತಂಗಳಿಗೆ ಮಡಗಿದ್ದೆ
ರಾಯ ತಂಗಳಿಗೆ ಮಡಗಿದ್ದೆ
ರಾಯ ನಿನಗೂ ಎರಡಾವೆ
ರಾಯ ಮಕ್ಕಳಿಗೆರಡಾವೆ
ರಾಯ ತಂಗಳಿಗೆರಡಾವೆ
ತಂಗಳಿಗೆರಡಾವೆ

ಜೋಬಿಗೆ ಕೈಯ ಹಾಕೀನೊ
ಪರಂಗಿ ಚಾಕ ತಗಿದಾನೊ
ಮೂಗ ಕೂದಾನೊ ಮೂಗಿನ
ಹೊಳ್ಳೆ ಕೂದಾನೊ

ಕೂದ ಮೂಗ ಬಿಂದಿಗೆಗಾಕ್ಕೊಂಡು
ಹೆಣ್ಣು ಬಾವಿಗೆ ಹೊರಟಾದೊ
ಬಿಂದಿಗೆನಾದರೆ ಮಡಗೀಳು
ಬಾವಿ ಬಗ್ಗಿ ಬಗ್ಗಿ ನೋಡೀಳು

ಅವ್ವಾ ನನ್ನ ಗಂಡ ಕೂದನವ್ವ
ಮೂಗ ಕೂದನವ್ವ

ಅವ್ವ ಅಂದಕೆ ಕೂದಾನೆ
ಅವ್ವ ಚಂದಕೆ ಕೂದಾನೆ
ಅವ್ವ ದಂಡೆ ಮನೆಯವರೆ
ಅವ್ವ ಪಕ್ಕದ ಮನೆಯವರೆ
ಅವ್ವ ಕೂದ ಮೂಗೀಗೆ ಔಷದಿ ಹೇಳೀರಿ
ಅವ್ವ ಔಷದಿ ಹೇಳಿರಿ

ಮೂರು ಬಳ್ಳ ಮೆಣಸಿನ ಕಾಯ
ಅರದು ಒತ್ತಮ್ಮಿ ಅಮ್ಮಿ
ಆರು ತಬ್ಬ ಚುರುಕನ ಸೊಪ್ಪ
ಕಲಸಿ ಮೆತ್ತಮ್ಮಿ ಅಮ್ಮಿ
ಅಮ್ಮಿ ಮೂಗಿಗೆ ಮೆತ್ತಮ್ಮಿ
ಮೂಗಿನ ಹೊಳ್ಳೆಗೆ ಮೆತ್ತಮ್ಮಿ

ಹೆಣ್ಣು ಹಾಗೆ ಮಾಡೀದೋ
ಶಿವನೆ ಹಾಗೆ ಮಾಡೀದೊ

ಹೆಣ್ಣು ಉರಿ ಉರಿ ಅಂದಾದೊ
ಹೆಣ್ಣು ಜೀವ ಬಿಟ್ಟೀದೊ
ಏಳೂರ ಸೊಳ್ಳೆ ಸೇರೀವೊ
ಸೇರಿ ನ್ಯಾಯ ಮಾಡೀವೊ

**ಪಾಠಾಂತರ ಮತ್ತು ಸಮಾನ ಆಶಯ ಪಠ್ಯ**

**೧. ಮೀನಿನ ಬಯಕೆ; ಲಿಂಗಯ್ಯ ಡಿ. ಕರ್ನಾಟಕ ಜನಪದ ಕಾವ್ಯಗಳು, ದಿನಕರ ಪ್ರಕಾಶನ ಬೆಂಗಳೂರು ೧೯೭೬ ಪು.ಸಂ. ೧೬೯-೧೭೪.**

---

* ಮೀನಿನೆಸರು; ರಂಗಣ್ಣ ವಿ.ಎಸ್. ಕೋಲ್ ಕೋಲ್ ಕೂಡಿ ಬರಲಿ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೭೬ ಪು.ಸಂ. ೬೬-೬೯

# ೫೯. ತ್ವಾಡನ್ಗೆ ತೋಳಬಂದಿ ಹೆಗ್ಗಣಕೆ ಎಡಕಟ್ಟು*

ತ್ವಾಡನ್ಗೆ ತೋಳ್ ಬಂದಿ
ಹೆಗ್ಗಣಕೆ ಎಡಕಟ್ಟು

ತ್ವಾಡಣ್ಣನ್ ಮೇಲಾಸೆ
ಅವಳಾರು ತಿಂಗಳ್ ಬಿಮ್ಮನಸೆ
ಅವಳ್ ಮೂರು ತಿಂಗಳ್ ಬಾಣಂತಿ

ದಪ್ಪಕ್ಕಿ ಅನ್ನ
ಅವಳೊಲ್ಲಲಂತೆ ಗಿಲ್ಲಲಂತೆ

ತ್ವಾಡನ್ಗೆ ತೋಳ್ ಬಂದಿ
ಹೆಗ್ಗಣಕೆ ಎಡಕಟ್ಟು

ಸಣ್ಣಕ್ಕಿ ಅನ್ನ
ಅವಳೊಲ್ಲಲಂತೆ ಗಿಲ್ಲಲಂತೆ

ಅವಳ್ ಮಂಡೆ ಹೂವೀನ್ ಹಾಸೀಗೆ
ತುಂಬಿ ಹೂವ್ನ ತಲೆದಿಂಬು

ತ್ವಾಳನ್ಗೆ ತೋಳ್ ಬಂದಿ
ಹೆಗ್ಗಣಕೆ ಎಡಕಟ್ಟು

ಅದಷ್ಟನ್ನೆ ಉಂಡಾಳಂತೆ
ಅವಳು ಗುಡಸಲ್ಮ್ಯಾಲೆ ವರಗಳಂತೆ

ಚಿಕ್ಕೇನ ಹಳ್ಳಿ ಬಯಲೆಲ್ಲ
ತುದಿಗೆಂಪುವಾದಾವು

ತ್ವಾಡನ್ಗೆ ತೋಳ್ಬಂದಿ
ಹೆಗ್ಗಣಕೆ ಎಡಕಟ್ಟು
ತೋಡಣ್ಣ ದಿಬ್ಬಾಕೆ

ಕತ್ತರಿಸಿ ಉತ್ತರಿಸಿ
ಅವಳ್ ದಿಬ್ಬಾಕೆ ತುಂಬುಕಂಡ

ಗದ್ದೇಯ ಗೌಡ್ರುಂದ
ಅವರ್ ಗದ್ದೇನೆಲ್ಲ ನೋಡುತಾರೆ

ತೋಡನ್ಗೆ ತೋಳ್ ಬಂದಿ
ಹೆಗ್ಗಣಕೆ ಎಡಕಟ್ಟು

ವಡ್ಡರಳ್ಳಿ ವಡ್ಡಾರು
ಅವರ್ನ ಬೇಗದಲ್ಲಿ ಕರೆಸಾರೆ

ಬೇಗದಲಿ ಬರುತಾರೆ
ಅವ್ರು ದಿಬ್ಬನಾರೆ ಅಗಿತಾರೆ

ತಿಮ್ಮಸುಟ್ಟ ಎಳಕಂಡು
ತ್ವಾಡಣ್ಣ ಓಡೋಯ್ತನೆ
ಅವ್ರು ಹಿಡಕಂಡು ಬಂದ್ರಂತೆ

ತ್ವಾಡನ್ಗೆ ತೋಳಬಂದಿ
ಹೆಗ್ಗಣಕೆ ಎಡಕಟ್ಟು

ಅಲ್ಲೇಳಿರೆ ಇಲ್ಲೇಳಿರೆ
ಬಲ್ಲಂತ ಜಾಣೇರು ತಿಳಿದೇಳೀರೆ

ಅಯ್ಯಯ್ಯೊ ತ್ವಾಡಣ್ಣ
ನಿನ್ಬಾಲೆಲ್ಲ ಈಜೋದೊ

ಮೈಸೂರ ಸೂಳೇರು ಕೇಳೆ ಹೆಣ್ಣೆ
ಅವ್ರು ಸರಸಕೆ ಬಂದಿದ್ರು ಕೇಳೆ ಹೆಣ್ಣೆ

ಸರಸಕೆ ಬಂದಿದ್ರು ಕೇಳೆ ಹೆಣ್ಣೆ
ನನ್ಬಾಲವೆಲ್ಲ ಈಜೋದೊ ಕೇಳೇ ಹೆಣ್ಣೆ

ಯಾಕಲ ತ್ವಾಡಣ್ಣ
ನಿನ್ನಲ್ಲೆಲ್ಲ ಮುರುದೋದೊ

ತ್ವಾಡನ್ಗೆ ತೋಳ ಬಂದಿ
ಹೆಗ್ಗಣಕೆ ಎಡಕಟ್ಟು

ಬೆಂಗಳೂರು ಸೂಳೇರು ಕೇಳೇ ಹೆಣ್ಣೆ
ಒಂದ್ ಗೋಟಡಕೆ ಕೊಟ್ಟಾರು ಕೇಳೇ ಹೆಣ್ಣೆ
ಗೋಟಡಿಕೆ ಕೊಟ್ಟಿದ್ರು ಕೇಳೆ ಹೆಣ್ಣೆ

ಯಾಕಲ ತ್ವಾಡಣ್ಣ
ನಿನ್ ಮಿಸೆಯೆಲ್ಲ ಸೀದೋದೊ

ಆ ಚೆನ್ನಪಟ್ಣದ ಸೂಳೇರು ಕೇಳೇ ಹೆಣ್ಣೆ
ಬಂಗೀಯ ಕೊಟ್ಟಿದ್ರು ಕೇಳೆ ಹೆಣ್ಣೆ

ಬಂಗೀಯ ಕೊಟ್ಟಿದ್ರು ಕೇಳೇ ಹೆಣ್ಣೆ
ನನ್ ಮೀಸೆಲ್ಲಾ ಸೀದೋದೊ ಕೇಳೇ ಹೆಣ್ಣೆ

ಅಲ್ಲೇಳಿರೆ ಇಲ್ಲೇಳಿರೆ
ಬಲ್ಲಂಥ ಜಾಣೇರು ತಿಳಿದೇಳಿಗೆ

ಕೆಮ್ಮಣ್ಣ ಗುಂಡೀಲಿ ವಂಟಿದರ್ ಕಾಣಕ್ಕ
ನೆಲ್ಲುಲ್ ಗುಂಡೀಲಿ ಸೀದರ್ ಕಾಣಕ್ಕ
ಚಿನ್ನದ ಚೂರೀಲಿ ಈದರ್ ಕಾಣಕ್ಕ
ರನ್ನದ್ ಮಂಕ್ರೀಲಿ ಹಾಕಿದರ್ ಕಾಣಕ್ಕ
ಕೊಡಗನ್ ಮಡಕೇಯ ತಂದರ್ ಕಾಣಕ್ಕ
ಚಿಗಟೂರ ಮೆಣಸಿನ ಕಾಯಿ ತಂದರ್ ಕಾಣಕ್ಕ
ಬೆಂಗಳೂರ್ ಬೆಳ್ಳುಳ್ಳಿ ತಂದರ್ ಕಾಣಕ್ಕ
ಚೆನ್ನಪಟ್ಣದ ಈರುಳ್ಳಿ ತಂದರ್ ಕಾಣಕ್ಕ

ಕೊತ್ನಳ್ಳಿ ಕೊತ್ಮೀರಿ ತಂದರ್ ಕಾಣಕ್ಕ
ಮೈಸೂರ್ ತುಪ್ಪವ ಹಾಕಿದರ್ ಕಾಣಕ್ಕ

ಗಾಣಿಗರ್ ಹಟ್ಟಿ ಎಣ್ಣೆ hUದರ್ ಕಾಣಕ್ಕ
ಡರ್‌ಬರ್ನೆ ಹುರಿದರ್ ಕಾಣಕ್ಕ
ಬಡದೋರತ್ಕಾಳು ತಿಂದರ್ ಕಾಣಕ್ಕ

* ತ್ವಾಡನ್ಗೆ ತೋಳಬಂದಿ ಹೆಗ್ಗಣಕೆ ಎಡಕಟ್ಟು; ಕಂಬಾರ ಚಂದ್ರಶೇಖರ ಮತ್ತು ಬರಗೂರು ಜಯಪ್ರಕಾಶ್, ಮುತ್ತು ಮುತ್ತಿನ ತ್ವಾಟ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು - ೧೯೮೧. ಪುಸಂ. ೧೦೭-೧೦೯

# ೭೦. ಕಾಟಿವಕ್ಕಲ ಕೊಣವೇಗೌಡ*

ಆಗ......ಕಾಟಿವಕ್ಕಲ ಕೊಣವೇಗೌಡ
ನೀಟುಗಾರ ನಮ್ಮಾರೇಗೌಡ
ಕುಲದಲ್ಲವನು ಕುರುಬರಗೌಡ
ಮತದಲ್ಲವನು ಮದ್ಗಿರಿಗೌಡ
ಅಯ್ಯೊ ಕಾಟಿವಕ್ಕಲ ಕೊಣವೇಗೌಡ
ನೀಟುಗಾರ ನಮ್ಮಾರೇಗೌಡ
ಅತಿ ಪುಣಿವಂತ ಕೊಣವೇಗೌಡ
ಅತಿ ಪುಣಿವಂತ ಮಾರೇಗೌಡ
ಅಯ್ಯೊ ಬಚ್ಚಲುಕಲ್ಲೆ ಬೆಳ್ಳಿಬಂಗಾರ
ಹಸಿಯ ಕಲ್ಲೆ ರವರತ್ನ
ರನ್ನದ ಕಣಜ ಚಿನ್ನದ ಕಣಜ
ಅತಿ ಪುಣಿವಂತ ಕೊಣವೇಗೌಡ
ಆಗ......ಕಾಟಿವಕ್ಕಲ ಕೊಣವೇಗೌಡ
ನೀಟುಗಾರ ನಮ್ಮಾರೇಗೌಡ
ಆರು ಹಿಂಡು ಹೆಗ್ಗಣಮರಿ ಸಾಲು
ಮೂರು ಹಿಂಡು ಇಲಿಮರಿ ಸಾಲು
ನಲವತ್ತಿಂಡು ಆಡಿನ ಸಾಲು
ಅರವತ್ತಿಂಡು ಕುರಿಗಳ ಸಾಲು
ಹತ್ತು ಹಿಂಡು ದನಗಳ ಸಾಲು
ಇಪ್ಪತ್ತಿಂಡು ಎಮ್ಮೆಯ ಸಾಲು
ಇಷ್ಟು ಪುಣಿವಂತ ಕೊಣವೇಗೌಡ
ಇಷ್ಟು ಪುಣಿವಂತ ಮಾರೇಗೌಡ
ಕೊಣವೇಗೌಡ ತಾನಾದು ಮೇಲೆ
ದಾನಧರ್ಮ ಮಾಡುವೊನಲ್ಲ
ದಾನಧರ್ಮ ಕೊಡುವೊನಲ್ಲ
ದಾನಧರ್ಮ ಕಲಿತೋನಲ್ಲ
ಹಸ್ತೊರಿಗನ್ನ ಇಕ್ಕಿದೋನಲ್ಲ
ಕುಡಿಯಲು ನೀರ ಕೊಟ್ಟವನಲ್ಲ
ಕೇಳೆ ಕೇಳೆ ಕೊಡಗಿನ ಮಾರಿ
ಕೇಳೆ ಕೇಳಲೆ ನನ್ನಯ ನಾರಿ
ಸರೀಕರಂತೆ ನಾವು ಬಾಳಬೇಕು
ಸದುದೋರಂತೆ ನಾವು ಬಾಳಬೇಕು
ಐದು ಜನ ಹೆಣ್ಣುಮಕ್ಕಳಲ್ಲಿ
ಒಬ್ಬಳ ಮದುವೆ ಮಾಡಲು ಬೇಕು

ಶಿವನೆ, ಮಕ್ಕಳು ಮದುವೆ ಮಾಡಲು ಗೌಡ
ಮದುವೆಲ್ಲನ್ನ ಇಕ್ಕಿದವನಲ್ಲ
ಕುಡಿಯಕು ನೀರ ನೀಡಿದೋನಲ್ಲ
ಸಭೆಯಲಿ ಈಳ್ಯ ಕೊಟ್ಟೋನಲ್ಲ
ಕಾಟಿವಕ್ಕಲ ಕೊಣವೇಗೌಡ
ಹೆಂಡ್ತಿಗೆ ಬುದ್ಧಿ ಏನೇಳುತಾನೆ
ಹರುಕರ ಕಾಟ ತಿರುಕರ ಕಾಟ
ಊರು ವಳಗೆ ನಮ್ಮನೆಯು
ಹರುಕಲು ತಿರುಕರು ಮನಿಗೆ ಬಂದ್ರೆ
ಯಾರಿಲ್ಲಂತ ಕದವ ತಗಿಬ್ಯಾಡ
ಅದಕೂ ಮೀರಿ ಬಂದ್ರೆ
ಅದಕೊಂದ್ಯುಕ್ತಿ ಹೇಳ್ತೀನಿ ಕೇಳೆ
ಮಾದಿಗರತ್ರ ಮಾತಾಡುವೋಣ
ಹೊಲಿಯರತ್ರ ಮನೆ ಕಟ್ಟುವೋಣ
ಮಾದಿಗರಂತ ಯಾರೂ ಬರೋದಿಲ್ಲ
ಹೊಲಿಯರಂತ ಯಾರೂ ಬರೋದಿಲ್ಲ
ಅದಕೂ ಮೀರಿ ನಮ್ಮನಿಗೆ ಬಂದ್ರೆ
ಅದೆಂತ ಯುಕ್ತಿ ಹೇಳಯ್ಯ ಗೌಡ
ಅದಕೂ ಮೀರಿ ಬಂದರೆ ಈಗ
ಕೇಳೆ ಕೇಳೆ ಕೊಡಗಿನ ಮಾರಿ
ಕಡಿಯೋ ನಾಯ ಮನೆ ಮುಂದೆ ಕಟ್ಟೆ
ಹಾಯೋ ಹಸವ ಬಾಕ್ಲಲ್ಲಿ ಕಟ್ಟೆ
ಅದಕೂ ಮೀರಿ ನಮ್ಮನಿಗೆ ಬಂದ್ರೆ
ಇನ್ನೊಂದು ಬುದ್ಧಿ ಹೇಳ್ತೀನಿ ಕೇಳೆ
ಕೇಳೆ ಕೇಳೆ ಕೊಡಗಿನ ಮಾರಿ
ಕೇಳೆ ಕೇಳೆಲೆ ನನ್ನಯ ನಾರಿ
ವಕ್ಕಡೆ ಗೋಡೆ ಬಿಟ್ಟುಕೊಳೆ ನಾರಿ
ಮುಂದಲ ಬಾಗಿಲಿಗೆ ಮುಳ್ಳೆಳೆಯೆ ನಾರಿ
ಅದಕೂ ಮೀರಿ ಬಂದರೆ ಗೌಡ
ಮಾಡೋದೇನು ಹೇಳಯ್ಯ ಗೌಡ
ಅದಕೂ ಮೀರಿ ಬಂದರೆ ಈಗ
ಹಾಳು ಗ್ವಾಡೇಲಿ ವಾಸ ಮಾಡುವಾನ
ಅದಕೂ ಮೀರಿ ಬಂದರೆ ಈಗ
ಇನ್ನೊಂದು ಯುಕ್ತಿ ಹೇಳುತೀನಿ ಕೇಳು
ಅಂಬಲಿ ಕೊಡಂತ ಅಮರಿಕೊತ್ತಾರೆ
ಸಪ್ಪು ಕೊಡಂತ ತಗಲಿಕೊತ್ತಾರೆ

ಕೊಡದೇ ಹೋದರೆ ಕೇಳೆ ಕೇಳೆ
ಕೇಳೆ ಕೇಳೆಲೆ ಕೊಡಗಿನ ಮಾರಿ
ಊರು ಮುಂದೆ ಕುಂತುಕೊಂಡೀಗ
ಬಯ್ಕೊಂದಾದರೂ ಅದರೋಯ್ತಾರೆ
ಮೂರು ದಾರಿ ಕೊಡಿತ್ತಾಕೆ
ಮೂರು ಮಂಕರಿ ಮಣ್ಣೆರಚ್ತಾರೆ
ಮೂರು ಮಂಕರಿ ಮಣ್ಣೆರಚಿಬಿಟ್ರೆ
ಕೇಳೆ ಕೇಳೆ ಕೊಡಗಿನ ಮಾರಿ
ಕಡೆಗೂ ನಮಗೆ ಕರ್ಮವಲ್ಲವೆ ?
ಕಡೆಗೂ ನಮಗೆ ಪಾಪವಲ್ಲವೆ ?
ಕೇಳೆ ಕೇಳೆ ಕೊಡಗಿನ ಮಾರಿ
ಊರ ಮುಂದಲ ಹೊಲವಿದ್ರೆ
ಕಂದಾಯ ನಾವ್ ಕೊಡಬೇಕು
ಕಾಣಿಕೆಯನ್ನೇ ನಾವ್ ಕಟ್ಟಬೇಕು
ಹಿಟ್ಟು ಉಂಟು ಬಿಟ್ಟೀ ಉಂಟು
ಕೇಳು ಕೇಳೆಲೆ ಕೊಡಗಿನ ಮಾರಿ
ಅಯ್ಯೋ ಊರು ಮುಂದೆ ಹೊಲವಿದ್ರೆ
ಕೋಳಿ ಕೊಕ್ಕರೆ ಮೇಯುಕೊತ್ತವೆ
ಊರು ಮುಂದಲ ಹೊಲವೇ ಬೇಡ
ಊರು ವಳಗಲ ಮನಿಯೇ ಬೇಡ
ಏಳು ಬೆಟ್ಟದ ಗಿಡವೇ ಕಡಿದು
ಆರು ಗಾವುದ ಹೊಲವೇ ಮಾಡಿ
ಗಿಡವೇ ಗೆಂಡೆ ಕಡಿಸೋನೆಣ್ಣೆ
ಹೊಲವನಾದರೆ ನಾವು ಮಾಡೋನೆಣ್ಣೆ
ಪಾಳುಬೆಟ್ಟದ ನಡುವೆ ಸೇರಿದರೆ
ಕಂದಾಯ ಕಾಣಿಕೆ ಇಲ್ಲೇ ಇಲ್ಲ
ಹಿಟ್ಟು ಇಲ್ಲ ಬಿಟ್ಟೀ ಇಲ್ಲ
ಹೇಳುವರಿಲ್ಲ ಕೇಳುವರಿಲ್ಲ
ಕಂದಾಯವಿಲ್ಲ ಕಾಣಿಕೆ ಇಲ್ಲ
ನನ್ನ ಕೇಳೋರು ಮೊದ್ಲೆ ಇಲ್ಲ
ಇನ್ನೊಂದು ಬುದ್ಧಿ ಹೇಳ್ತಿನಿ ಕೇಳು
ಇನ್ನೊಂದು ಉಪಾಯ ಹೇಳ್ತೀನಿ ಕೇಳು :
ಹರುಕರು ತಿರುಕರು ಮನಿಗೆ ಬಂದ್ರೆ
ತಲೆಯನ್ನಾದರೆ ಕೆದರಿಕೊಳ್ಳೆಣ್ಣೆ
ತಲೆಯನ್ನಾದರೆ ಬಿಚ್ಚಿಕೊಳ್ಳೆಣ್ಣೆ,
ಕೆಂಗರುಗಣ್ಣ ಬುಟ್ಟುಕೊಳ್ಳೆಣ್ಣೆ ;

ಹಿತ್ತಲಿಗೆ ಹೋಗಿ ಬೆಯ್ತಿಲೆ ಬಾರೆ ;
ನಾಚಿಕಂದ ಓಡೋಯ್ತಾರೆ ;
ಮಕಮಾರೆ ಮೆಸಿಯ ಬಳಿಕೊಳ್ಳೆಣ್ಣೆ,
ನೋಡಕೆ ರಾಕ್ಷಸಿಯಂಗೆ ಆಗು ಹೆಣ್ಣೆ
ನಿನ್ನ ರೂಪು ಲಾವಣ್ಯ ನೋಡಿಬುಟ್ಟು
ಹೆದರಿಕೊಂಡೆ ಓಡೋಯ್ತಾರೆ !
ಅಡಿಗೆ ಮಾಡೊ ಬುದ್ದೇಳ್ತೀನಿ
ಕೇಳೆ ಕೇಳೆ ಕೊಡಗಿನ ಮಾರಿ
ಮೂರು ವರ್ಷದ ಮುಗ್ಗಿನ ಜೋಳ
ಆರು ವರ್ಷದ ಬುರುಡೆ ರಾಗಿ ೧
ಅಳದೆ ಮೂರು ಪಾವು ತಕ್ಕೊಳ್ಳೆಣ್ಣೆ
ಮಾಡಲಿ ಬೇಡ ಕೇರಲಿ ಬೇಡ
ಬಿಸಲಿಗಾಕಿ ಒಣಗಿಸಬೇಡ
ಗಾಳಿಗಾಕಿ ತೂರಲು ಬೇಡ
ಗುಬ್ಬ ಚಕ್ಕರ್ದ ತಿಂದೋಯ್ತುವೆ
ನನ್ನ ಹೊಟ್ಟೆಗೆ ಕಡಿಮ್ಯಾಗ್ತೈತೆ
ಮನಿ ಹಿಂದಲ ಹೊಲಕೆ ಹೋಗಿ
ಮೂರು ಮಂಕರಿ ಸೊಪ್ಪ
ತರುಕೊಂಡು ಬಾರೆ ಕೊಡಗಿನ ಮಾರಿ
ಮುರುಕೊಂಡು ಬಾರೆ ನನ್ನಯ ನಾರಿ
ಸೊಪ್ಪುಗಿಪ್ಪು ಸೋಸಿಯ ಜೋಕೆ
ಹುಳಗಿಳ ತಗದಿಯ ಜೋಕೆ
ಸೊಪ್ಪಿಗೆ ಉಪ್ಪೊಂದಾಕಿಯ ಜೋಕೆ
ನಮ್ಮಪ್ಪರಾಣೆ ಕೊಡಗಿನ ಮಾರಿ
ನನ್ನ ಮಾತು ಮೀರಿ ಉಪ್ಪಾಕಿಬುಟ್ರೆ
ಹಜಾಮರ ಕರಸೇನು ಕಂಡ್ಯ
ತಲೆ ಮೂರು ಪಟ್ಟೆ ಬೋಳಿಸೇನು ಕಂಡ್ಯ
ಸುಣ್ಣದ ಪಟ್ಟೆ ಹೊಡಿಸೇನು ಕಂಡ್ಯ
ಕೆಮ್ಮಣ್ಣು ಬರೆಯ ಎಳಿಸೇನು ಕಂಡ್ಯ
ಒಡಕಲು ತಮಟೆ ಹೊಡಿಸೇನು ಕಂಡ್ಯ
ಹಳೆ ಮರ ಛತ್ರಿ ಹಿಡಿಸೇನು ಕಂಡ್ಯ
ಕೇಳುಕೇಳೆಲೆ ಕೊಡಗಿನ ಮಾರಿ
ಗಂಡನ ಮಾತು ಮೀರೊ ಹೆಂಡ್ತ್ಯಲ್ಲ
ಹೆಂಡ್ತಿ ಮಾತು ಮೀರೊ ಗಂಡಲ್ಲ
ಕತ್ತೆಮ್ಯಾಲೆ ಕುಂಡ್ರಿಸೇನು ಕಂಡ್ಯ
ಮೆರವಣಿಗೆಯ ಮಾಡಿಸೇನು ಕಂಡ್ಯ

ನಿಮ್ಮ ಮಾತು ನಾ ಮೀರೋಳಲ್ಲ
ನಿಮ್ಮ ಮಾತು ನಾ ತಗಿಯೋಳಲ್ಲ
ಇಬ್ಬರ ದೃಡವೆ ಒಂದಾಗೈತೆ
ಅವರಿಬ್ಬರ ಗ್ಯಾನ ಒಂದಾಗೈತೆ
ಎತ್ತಿನಗುದಿಗೆ ಹೆಗಲಮೇಲಿಟ್ಟುಕೊಂಡು
ಹೊರಟು ಬಿಟ್ಟನು ಕೊಣವೇಗೌಡ
ಏಳು ಗಾವುದ ಗಿಡ ಕಡಿಸ್ಯಿವನೆ
ಆರು ಗಾವುದ ಹೊಲ ಮಾಡ್ಯವನೆ
ಏಳು ಬೆಟ್ಟದ ನಡುವೆ ಅವನು
ಆಗ ಮನೆಯನಾದುರೆ ಕಟ್ಟಿಸವನೆ
ಹಿಟ್ಟು ಇಲ್ಲ ಬಿಟ್ಟಿ ಇಲ್ಲ
ಹೇಳುವರಿಲ್ಲ ಕೇಳುವರಿಲ್ಲ
ಹೊಲವನಾದರೆ ಉಳುವುದಕಾಗ
ಮತ್ತೇನು ಯೋಚನೆ ಮಾಡುತಾನಾಗ
ಮುಂದಿನ ಅರಿಗೆ ಚಿನ್ನದ ನೊಗವು
ಹಿಂದಲ ಅರಿಗೆ ಬೆಳ್ಳಿ ನೊಗವು
ಮುಂದಲಾರಿಗೆ ತಮಟೆ ಶಿವನ
ಹಿಂದಲಾರಿಗೆ ಕೊಂಬು ಶಿವನ
ಸಾಲುಕೂಡೋ ಟೈಮಿನಲ್ಲಿ
ಬಡಬನಂತ ತಮಟೆ ಬಡಿತಾನೆ
ಕುಣಿಕುಣಿನಂತೆ ಕೊಂಬೂದುತಾನೆ
ಇಷ್ಟೊಂದು ಬುದ್ಧಿ ಮಾಡಿಬುಟ್ಟು
ಮನೆಗೆ ಗೌಡ ಬರುತಾನೆ
ಆಗ ಕಾಟಿವಕ್ಕಲ ಕೊಣವೇಗೌಡ
ನೀಟುಗಾರ ನಮ್ಮಾರೇಗೌಡ
ಮಾಡಲಿಲ್ಲ ಕೇರಲಿಲ್ಲ
ಹಂಗೆ ವಡೆದು ಅಂಬಲಿ ಕಾಸಿ,
ಮನೆ ಹಿಂದಲ ಹೊಲಕ್ಕೆ ಹೋಗಿ
ಮೂರು ಮಕ್ಕರಿ ಸೊಪ್ಪು ತಂದು
ಸೊಪ್ಪುಗಿಪ್ಪು ಸೋಸೆ ಇಲ್ಲ
ಸೊಪ್ಪಿಗೆ ಉಪ್ಪೊಂದಾಕೇ ಇಲ್ಲ
ಸೊಪ್ಪಿನಲ್ಲುಳ ತಗದೇ ಇಲ್ಲ
ಒಂದು ಕೊನೆ ಬೆಂದೇ ಇಲ್ಲ
ಒಂದು ಕಡ್ಡಿ ಬೆಂದೇ ಇಲ್ಲ
ಬೇಗನೆ ಬೇಗ ಸೊಪ್ಪನು ಮಾಡಿದಾಳು
ಚಿನ್ನದ ಚೆಂಬಲಿ ನೀರ ತಂದಿಟ್ಟಾಳು

ಅಯ್ಯೋ ಅಯ್ಯೋ ಕಟ್ಟ ಬಡ್ಡಿ ಮುಂಡೆ
ಎಷ್ಟು ಸವದೋಯ್ತೆ ಚಿನ್ನದ ಚೆಂಬು
ಎತ್ತಿನ ಗುದಿಗೇಲಿ ಮೂರಾರೇಟ
ಹೇರಿಬಿಟ್ಟನು ಕೊಣವೇಗೌಡ
ಚಿನ್ನದ ಚೆಂಬ ವಳಗಿಟ್ಟಾಳು
ಕಾಲುಮೊಗೆಲ್ಲಿ ನೀರು ತಂದಾಳು
ಕೈ ಕಾಲು ಮಕವ ತೊಳೆದುಕೊಂಡು
ಶಿವಪೂಜೆಗೆ ತಾನು ಕುಳಿತುಕೊಂಡವ್ನೆ
ಸ್ವಾಮಿ-ಮೂಲೆಲಿವ್ದ ಸುಂಡಣ್ಣನ್ನೋರು
ಗಿರ್ ಗಿರ್ ಮೀಸೆ ತಿರುವುತಾರಂತೆ
ಕೊಣವೇಗೌಡನ ಜೊತೆಯಲ್ಲಾಗ
ಶಿವಪೂಜೆಯ ಮಾಡ್ತಾರಂತೆ
ಮೂಲೆಲಿದ್ದ ಸುಂಡಣ್ಣನ್ನೋರು
ಮತ್ತೊಂದು ಕೆಲಸ ಮಾಡುತಾರಂತೆ
ಕೈಕಾಲು ಮಕವ ಬೇಗದಿಂದಲೆ
ತೊಳಕೊಂಡರು ಸುಂಡಣ್ಣಾಗ
ಸರಸತಿ ಗೂಡಿಗೆ ಹಾರಿ ಆಗ
ಕೈಗೆ ಮೈಗೆ ವಿಭೂತಿ ಬಳುಕೊಂಡಾಗ
ಕೊಣವೇಗೌಡನ ಬೆನ್ನಿನ ಮೇಲೆ
ಶಿವಪೂಜೆಯ ಮಾಡ್ಯಾರು ಶಿವನೆ
ಆಗ ಬಂಗಾರದಂತ ತಟ್ಟೆಯನ್ನು
ಬೆಳಗಿಕೊಂಡು ಊಟಕ್ಕಿಡುವಾಗ
ಅಯ್ಯೊ ಅಯ್ಯೊ ಕೊಡಗಿನ ಮಾರಿ
ಎಷ್ಟು ಸವದೋಯ್ತೆ ಬಂಗಾರದ ತಟ್ಟೆ
ಕಳ್ಳರು ಗಿಳ್ಳರು ಕಂಡುಬುಟ್ರೆ
ಕದ್ದುಕೊಂಡಾದರು ಹೋಯ್ತುರೆ ಕಣೆ
ಎತ್ತಿನ ಗುದಿಗೆ ಹೆಗಲೆಲಿಟ್ಟು
ಮೂರಾರೇಟ ಹಾಕ್ಯಾನು ಗೌಡ
ಬಂಗಾರದಂತ ತಟ್ಟೆ ತೆಗೆದು
ಕಣಜಕಾದುರೆ ಹಾಕೆಬುಟ್ಟು
ಮತ್ತೊಂದು ಪೂಜೆ ಮಾಡ್ತಾನೆ ಗೌಡ
ಮಗದೊಂದು ಸಾರಿ ಪೂಜೆ ಮಾಡ್ತಾನೆ ಗೌಡ
ಮನೆ ಹಿಂದಲ ಕೊಟ್ಟಿಗ್ಹೋಗಿ
ಮೂರು ಮಂಕರಿ ಮುದೆಮ್ಮೆ ಸಗಳಿ
ಮೂರು ಮಂಕರಿ ಮುದೆಮ್ಮೆ ತೊಪ್ಪೆ
ದೊಡ್ಡ ದೊಡ್ಡ ತೊಪ್ಪೆ ಎತ್ತಿಕೊಂಡ್ ಬಂದು

ನಡುಮಲ್ಲವಳು ಕಟ್ಟೆ ಕಟ್ಯಾಳು
ನಡುಮಲ್ಲವಳು ಕಟ್ಟೆ ಕಟ್ಟಿ
ಕಟ್ಟಿಗೆ ತಂದು ಸೊಪ್ಪಾಕ್ಯಾಳು
ಕಟ್ಟೆಗೆ ತಂದು ಸೊಪ್ಪು ಸುರಿದಾಳು
ಆಗ ಊಟಕಾದರೆ ಕೂತವ್ನಲ್ಲೋ
ಕಾಟಿ ವಕ್ಕಲ ಕೊಣವೇಗೌಡ
ಊಟಕಾದರೆ ಕೂತಗಂಡವ್ನು
ಇನ್ನೊಂದು ಕೆಲಸ ಮಾಡುತಾನೆ ಗೌಡ
ಕೈಯಿಲಿ ತಿಂದ್ರೆ ಕೈಗಾಯ್ತೆತೆ,
ಬಾಯಿಲಿ ತಿಂದ್ರೆ ಎಂಜಲಾಗ್ತೆತೆ
ಅರಬಗ್ಗ ಬಗ್ಗಿದ ಗಔಡ
ನಾಯಿ ನೆಕ್ಕಿದಂಗೆ ನೆಕ್ಕುತನೆ ಗೌಡ
ನಾಯಿ ತಿಂದಂಗೆ ತಿಂದನೆ ಗೌಡ
ಕತ್ತೆ ತಿಂದಂಗೆ ತಿಂತಾನೆ ಸೊಪ್ಪ
ಸೊಪ್ಪು ತಿನ್ನೋ ಟೇಮಿನಲ್ಲಿ
ಹಾಳಾದ ನೊಣ ಎಲ್ಲಿತ್ತಪ್ಪ
ಹಾಳಾದ ನೊಣವು ಬಂದು ಶಿವನೆ
ಅಂಬಲಿ ವಳಿಕೆ ಬಿದ್ದೀತಪ್ಪ
ಓಡಿಬಾರೆ ಓಡಿಬಾರೆ ನೀ
ಓಡಿಬಾರೆ ಕೆಟ್ಟ ನನ್ನ ಹೆಣ್ಣೆ
ನೊಣವುನಾದರೆ ಅಂಬ್ಲಿ ಕುಡೀತಲ್ಲೆ
ನನ್ನ ಹೊಟ್ಟೆಗೆ ಸಾಲದು ಅಲ್ಲೇ
ಹಿಂದಲ ಕೊಟ್ಟಿಗ್ಗೆ ಮುಳ್ಳೆಳೆಯೇ
ಮುಂದಲ ಬಾಗಲಿಗೆ ಅಗಣಿ ಹಾಕಿ
ಎಂದು ಕೂಗಿದನು ಕೊಣವೇಗೌಡ
ನೊಣವನಾದುರೆ ಹಿಡುಕೊಂಡನು
ಹಾಳಾದ ನೊಣವೆ ಎಷ್ಟಂಬ್ಲಿ ಕುಡಿದೆ
ಹಾಳಾದ ನೊಣವೆ ಎಷ್ಟಂಬ್ಲಿ ಹೀರಿದೆ
ನನ್ನ ಹೊಟ್ಟೆಗೆ ಸಾಲದೆ ಬಂತು
ನನ್ನ ಹೊಟ್ಟೆಗೆ ಎಟಕದೆ ಬಂತು
ನೊಣವನ್ನಾದರೆ ಹಿಡಕೊಂಡನು
ಒಂದು ಜಬ್ಬಾಟ ಜಬ್ಬಿದನು
ಒಂದು ಜಬ್ಬಾಟ ಜಬ್ಬಿದ ಗೌಡ
ಒಂದು ಸೀಪಾಟ ಸೀಪಿದ ಗೌಡ
ಹೊಟ್ಟೆ ಎಂಬುದು ಗುಡಾಣವಾಯ್ತು
ಹಾಳಾದ ಕೆಮ್ಮು ಎಲ್ಲಿತ್ತೊ ಕಾಣೆ

ಒಂದು ಕೆಮ್ಮಾಟ ಕೆಮ್ಮಿದ ಗೌಡ
ಉಡುದಾರೆಂಬುದು ಭಡ್ಡಂದೋಯ್ತು
ಹೊಟ್ಟೆಯೆಂಬುದು ಗುಡಾಣವಾಯ್ತು
ನಡುಮಲ್ಲಾಗ ಬಿದ್ದನು ಗೌಡ
ನಿನ್ನ ನರಿಗೆ ಹುರಿಯ ತತ್ತಾರೆ
ನಿನ್ನ ನರಿಗೆ ದಾರ1 ತತ್ತಾರೆ
ಕೇಳಿ ಕೇಳಲೆ ಕೊಡಗಿನ ಮಾರಿ
ಕೇಳೆ ಕೇಳೆ ನನ್ನಯ ನಾರಿ
ಆಗ ನರಿಗೆಯ ದಾರ
ಕೊಡುತಾಳಲ್ಲೊ ಕೊಡಗಿನ ಮಾರಿ
ನರಿಗೆ ದಾರ ಸಾಲದೆ ಆಗ
ಕದಬೆ ಹೆಗ್ಗ ಕೊಟ್ಟಳು2 ಆಗ
ಮೂರು ಪಟ್ಟು ಸುತ್ತಿಕೊಂಡನೆಲ್ಲೊ
ಮೂರು ಸುತ್ತು ಸುತ್ತಿಕೊಡನಲ್ಲೊ
ಕಾಟಿವಕ್ಕಲ ಕೊಣವೇಗೌಡ
ನೀಟುಗಾರ ನಮ್ಮಾರೇಗೌಡ
ಆಗ ಹೊಲಕೆ ಬಿತ್ನೆ ಮಾಡಬೇಕು
ಅದಕ್ಕೆ ಹೊರಟಾನಲ್ಲೋ ಕೊಣವೇ ಗೌಡ
ಹಳೇದ ಬಿತ್ನ ಮಾಡಿದರೆ
ಆಯ್ತದೊ ಕಾಣೆ ಹೋಯ್ತದೊ ಕಾಣೆ
ನನ್ನ ಹೊಲಕೆ ಮಳೆ ಹೂದರೆ
ಕೇಳು ಕೇಳೊ ದೇವೇಂದ್ರರಾಯ
ಆರು ಕಾಲನು ಬೇಡಿ ಕೊಟ್ಟೇನು
ಮೂರು ಕಣ್ಣಗಳ ಸಾಲ ಮಾಡಿ ಕೊಟ್ಟೇನು
ಮೂರು ಪಾವು ಜೋಳವನ್ನೆ
ಬಿತ್ನೆ ಮಾಡಾಕೆ ಹೋದನು ಗೌಡ
ಮೂರು ಪಾವನೆ ತಕ್ಕೊಂಡಾಗ
ಬಿತ್ನೆಯನೆ ಮಾಡಿಬಂದವ್ನೆ ಗೌಡ
ಇದರ ಸತ್ಯಾವ ನೋಡಬೇಕೆಂದು
ದೇವೇಂದ್ರ ಮಳೆಯನಾದರೆ ಹುಯ್ಲೇ ಇಲ್ಲ
ಆಳನ್ನಾದರೆ ಕರಕೊಂಡಾಗ
ಮೂರು ಪಾವು ಜೋಳವನ್ನೆ
ಬಿತ್ನೆ ಮಾಡಿದ್ದ ಆಯಿಸಿ ಬಿಟ್ಟವ್ನೆ !
ಒಂದೂವರೆ ಸೇರು ಜೋಳ ತಕ್ಕೊಂಡು
ಹೊಲಕ್ಕೆ ಬಿತ್ನೆ ಮಾಡಿ ಬಂದವ್ನೆ
ತೇನೆ ಬಿಟ್ಟಂತ ಜ್ವಾಳದಲ್ಲಿ

ಹಾಳಾದ ಹಕ್ಕಿ ತಿಂದುಹೋಗ್ತಾವೆ
ಜ್ವಾಳದ ತೆನಿಯ ಕೀಳುತಾರೆ
ಹರಕರು ತಿರುಕರು ಬರುತಾರೆ
ಜ್ವಾಳದ ತೆನಿಯ ಕೇಳುತಾರೆ
ಗುಂಚಕ್ಕರ್ದ1 ತಿಂದೋಯ್ತುವೆ
ಹಕ್ಕಿಪಕ್ಕಿ ಮೆದೋಯ್ತುವೆ
ಜೋಳದ ತೆನಿಗೆ ಪು ಚೀಲವ
ಹೊಲೆಸಿಬಿಟ್ಟನು ಕೊಣವೇಗೌಡ l
ಜ್ವಾಳದ ತೆನಿಗೆ ಮುಸುಕನಾದರೆ
ಮಾಡಿಸಾನಲ್ಲೊ ಕೊಣವೇ ಗೌಡ
ನಾಯಿಗೆ ಸ್ವಲ್ಪ ಹಿಟ್ಟಾಕದಂತೆ
ಈ ರೀತಿ ಮಾಡಿದ ನಮ್ಮ ಕೊಣವೇಗೌಡ
ಹೆಂಡ್ತಿ ಮಾತು ಮೀರೊ ಗಂಡಲ್ಲ
ಗಂಡನ ಮಾತು ಮೀರೊ ಹೆಂಡ್ತಲ್ಲ
ಇಂತ ಬದುಕಿದಂತ ಕೊಣವೇ ಗೌಡನ
ಸತ್ಯವನ್ನೆ ನೋಡುಬೇಕೂ ಅಂತ
ಪರಮೇಶ್ವರನು ಆವಾಗ
ಕೊಣವೇಗೌಡನ ಭಕ್ತಿಯವಾಗನೋಡಬೇಕೂ ಅಂತ ದೇವರು
ಆಗ ಹಣ್ಣಣ್ಣಾದರು ಮುದುಕಾಗಿ
ಬಂದನಲ್ಲೊ ಶಿವನೇ ಶಿವನೇ
ಕೊಣವೇ ಗೌಡನ ಬಳಿಗೆ ಹೋಗಿ
ಜ್ವಾಳದ ತೆನಿಯ ಕೇಳ್ತವನಲ್ಲೊ
ಊಟ ಮಾಡೊತ್ತಿಗೆ ಊಟಕ್ಕೆ ಬಂದ್ರೆ
ಊಟವಾದರೂ ಕೊಡಿಸೇನು ನಿನಿಗೆ
ಈ ಜ್ವಾಳದ ತೆನೆ ನನ್ನದಲ್ಲ
ಈ ಜ್ವಾಳದ ಹೊಲ ನನ್ನೆದಲ್ಲ
ಹಾಗೆ ಆಗಲಿ ನಡಿಯಯ್ಯ ಗೌಡ
ಮುದ್ದೆನಾದರೆ ಕೊಡಿಸಪ್ಪ ಗೌಡ
ಓಡೋಡಿ ಓಡೋಡಿ ಓಡೋಡಿ ಗೌಡ
ಮನಿಯನಾದರೆ ಹೊಗುತಾನೆ
ಹರುಕರು ತಿರುಕರು ಬತ್ತಾರೆ
ನೀ ಬೀಗನಾದರೆ ಹಾಕಲೆ ಮಾರಿ
ಊಟ ಮಾಡೋತಕ್ಕೆ ಬಂದು
ಅಂಬ್ಲಿಕೊಡಂತ ಅಮರಿಕೊತ್ತಾರೆ
ಸೊಪ್ಪು ಕೊಡಂತ ತಗಲಿಕೊತ್ತಾರೆ
ಹಿಟ್ಟಕ್ಕಂತ ಹೊಡೆಯಾಕೆ ಬತ್ತಾರೆ

ನಾನೇನು ಮಾಡ್ಲಿ ಹೇಳಲ ಹೆಣ್ಣೆ
ನಾನೇನು ಮಾಡ್ಲಿ ಹೇಳಲ ನಾರಿ
ಗೌಡನ ಮಾತು ನಿಜವಂತ್ಹೇಳಿ
ಬೀಗನಾದರೂ ಹಾಕಿಕೊಂಡಳು
ಆಗ ಮಾಯದ ಶಿವನು
ಮಾಯವಾಗಿ ಮನಿಗೆ ಹೊಂಟ
ಈಗ ಕೇಳು ಕೇಳಲೆ ನಾರಿ
ಕೇಳು ಕೇಳಲೆ ಕೊಡಗಿನ ಮಾರಿ
ನಾನೇಳೊ ಮಾತ ಕೇಳಲೆ ನೀನು
ನನ್ನ ಸುದ್ದಿಯ ಕೇಳಲೆ ನೀನು
ಈಗ ದಾಸ ಜಂಗಮ ಬಂದರೆ
ನಾ ಸತ್ತಂಗೆ ಮಲಗಿಕೊತ್ತೀನಿ
ಒಂದು ಬಟ್ಟೆನಾದರೆ ಹೊಚ್ಚಿ ಹೆಣ್ಣೇ
ಚೆಲ್ಲದ ನೀರ ನನ್ನ ಮೇಲುಯ್ಯೆ
ಬೆಲ್ಲದ ಸೀಗೆ ನೊಣ ಆದರೆ
ಜೀಯಂತ ಮುತ್ತಿಕೊತ್ತವೆ
ಸತ್ತ್ಯೋಗವ್ನೆ ಅಂತ ನನ್ನ
ಬಿಟ್ಹೋಗುತಾನೆ ಬಿಕ್ಷಕನು !
ನನ್ನ ಜನ್ಮವು ಹೋದರು ನಾನು
ದಾನ ಧರ್ಮ ಮಾಡೊನಲ್ಲ !
ಆಗ ಸತ್ಯಕಾರಿ ಸದ್ಗುರುವಾಗ
ಮನಿಗೆ ಬೇಗ ಇಳುದಾನೆ
ಮಾಯಕಾರಿ ಜಗದೀಶ್ವರನು
ಮಾಯದಿಂದ ಮನಿಗೆ ಬಂದ
ಬೆಲ್ಲದ ನೀರ ಮೇಲೆಸ್ತವಳೆ
ಕೈಕಾಲನ್ನೆ ಮದುರವಳೆ
ಸತ್ತೋನಂಗೆ ಬಿದ್ದುಕೊಂಡವ್ನೆ
ಉಸಿರಿಲ್ಲದೊನಂಗೆ ಉಳ್ಳಿಕೊಂಡವ್ನೆ
ಅಯ್ಯೊ ಕೊಣವೇಗೌಡ ಕೊಣವೇಗೌಡ
ಮೇಲಕೇಳೊ ಕೊಣವೇಗೌಡ
ಶಿವನೆ, ಕೊಳ್ಳಿನಾದರೆ ಎಟ್ಟಿದರಿಲ್ಲ
ಮೇಲಕ್ಕಾದರು ಎದ್ದವನಲ್ಲ
ಕತ್ತೆ ಬಾಲಕು ಕಟ್ಟಿಸ್ಯಾನಲ್ಲೊ
ಸತ್ಯಾಚಾರಿ ಪರಮೇಶ್ವರನು
ಕತ್ತೆ ಬಾಲಕು ಕಟ್ಟಿಸ್ಯಾನಲ್ಲೊ
ಕೊಣವೇಗೌಡನ ಸತ್ಯಾಚಾರಿ ಶಿವನು

ಊರು ಮೂರು ಸುತ್ತು
ಮೆರವಣಿಗೆ ಮಾಡಿಸ್ಯಾನಲ್ಲೊ ।
ಮೆರವಣಿಗೆ ಮಾಡಿಸಿದರು
ಬಾಯನಾದುರೆ ಬಿಡಲಿಲ್ಲ
ರಕ್ತ ಎಂಬುದು ಹೊಳಿಯಾಗಿ
ಹರಿತೈತಾಲ್ಲೊ ಶಿವನೆ !
ಸತ್ಯಾಚಾರಿ ಜಗದೀಶ್ವರನು
ಶಾಪವಾದರೆ ಕೊಟ್ಟನಾಗ
ನೀನು ಎಷ್ಟು ಬೆಳೆದ ಕಾಲಕು
ಪರಮ ಲೋಭಿ ಆಗಯ್ಯ ನೀನು !
ದಾನ ಧರ್ಮ ಮಾಡಬೇಕಂತ
ಸತ್ತೋನಂಗೆ ಬಿದ್ದುಕೊಂಡ್ಯಲ್ಲೊ ?
ಶಾಪವನ್ನು ಕೊಟ್ಟರು ಶಿವನು
ಶಿವನಿಗಾದರೂ ಬಿಟ್ಟು ಕೊಡಲಿಲ್ಲ
ಧಾನ ಮಾಡದ ಕೊಣವೇಗೌಡ
ಕೈಲಾಸವ ಸೇರಿಕೊಂಡವ್ನೆ
ಕೊಣವೇಗೌಡನ ಕತೆಯನ್ನೀಗ
ಕೇಳಿರಣ್ಣ ಜನಗಳು ಎಲ್ಲ
ಮಾಡಿದ ಕರ್ಮ ಪರಿಹಾರ ಎಲ್ಲ ಶಿವನೆ
ಮಾಡಿದ ಪಾಪ ಪರಿಹಾರ ಎಲ್ಲ ಜಗದೀಶ.

**ಪಾಠಾಂತರ ಪಠ್ಯ :**

೧. **ಕೊಣವೇಗೌಡ; ಹನೂರು ಕೃಷ್ಣಮೂರ್ತಿ, ಜನಪದ ಮತ್ತು ಬುಡಕಟ್ಟು ಗೀತೆಗಳು ಸಾಹಿತ್ಯ ಅಕಾಡೆಮಿ ಬೆಂಗಳೂರು – ೧೯೯೮ ಪು.ಸಂ. ೧೫೩-೧೫೮**

---

* ಕಾಟಿವಕ್ಕಲ ಕೊಣವೇಗೌಡ; ನಾಗೇಗೌಡ ಎಚ್.ಎಲ್. ಪದವವೆ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ೧೯೭೬ ಪು.ಸಂ. ೨೧೫-೨೨೪

# ೬೧. ಹೊಸ್ಮಣ್‌ನಾಯ್ಕನಕತೆ*

ಒಂದ್ ಹಾರ್ತ ಕುಕ್ಕ ಒಂದ್ ಕೂರ್ತ ಕುಕ್ಕ
ಒಂದ್ ಬಡ್ತಿಗೆ ಇಟ್ರೆ ಒಂಬತ್ತ್ ಹೆಡ್ಗಿ ಮಾಯ್ನ್‌ಕಾಯ್ ಬಿತ್ತ್
ಚೊಟ್ಟಿಗ್ ಗೆಂಟ್ಲಾಕಿ ಮಂಡ್ಕಿಗ್ ಗೆಂಟ್ಲಾಕಿ ಮನಿಗ್ ತರ್‍ವಂಥವ್ನಾದ
ಹೆಣ್ಣೇ ಅಂದ್ರ್‌ಹೆಣ್ಣ್ ಮಾತಾಡ್ಲಿಲ್ಲೆ
ಥೂರಂಡೆ ಅಂದ್ರ್‌ಕೂಡ್ಲೆ ಏನ್ ಸ್ವಾಮಿ ಅಂದ್ ಕೇಳ್ದಳೋ !
ಏಳ್ ನಾಯೀನ್ ಕಟ್ಕಂಡ್ ಏಳ್ ಹೊಲನ ಬ್ಯಾಂಟೆಗ್ ಹೋದನೋ
ಹಿಡಿದಿ ಎಂದ್ರ್ ಹಿಡಿಲಿಲ್ಲೆ ಎಡಗಾಲಗೊದ್ದನೋ
ಏಳ್ ಮರಿ ಹೆಕ್ಕಿತೋ ಏಳ್ ಮಿಗೀನ್ ಹಿಡಿಯಿತೋ
ಕೋಡಿಗ್ ಗೆಂಟ್ಲಾಕಿ ಕೊಳ್ಚಿಗ್ ಗೆಂಟ್ಲಾಕಿ ಮನಿಗ್ಹೊತ್ತ್ ತಂದನೋ
ಹೆಣ್ಣೇ ಅಂದ್ರ್ ಹೆಣ್ಣ್ ಮಾತಾಡ್ಲಿಲ್ಲೆ
ಥೂ ರಂಡೆ ಅಂದ್ರ್ ಕೂಡ್ಲೆ ಏನ್‌ಸ್ವಾಮಿ ಅಂದ್ ಕೇಳ್ದಳೋ !
ಏಳ್ ಹರಿನೇ ಕಟ್ಕಂಡ್ ಏಳ್‌ಹೊಳಿ ಸಾನಕ್ಹೋದನೋ
ಏಳ್ ಹೆಡ್ಗಿ ಸಿಗ್ದಿ ಸಿಕ್ಕುವಂತಾಯಿತೋ
ಕಡ್ಡಕ್ ಗೆಂಟ್ಲಾಕಿ ಮೀಸೀಗ್ ಗೆಂಟ್ಲಾಕಿ ಮನಿಗ್ಹೊತ್ತ್ ತಂದನೋ
ಹೆಣ್ಣೆ ಅಂದ್ರ್ ಹೆಣ್ಣ್ ಮಾತಾಡ್ಲಿಲ್ಲೆ
ಥೂ ರಂಡೆ ಅಂದ್ರ್ ಕೂಡ್ಲೆ ಏನ್‌ಸ್ವಾಮಿ ಅಂದ್ ಕೇಳ್ದಳೋ !
ಒಂಬತ್ತ್ ಹೆಡ್ಗಿ ಮಾಯ್ನ್‌ಕಾಯಿ ಚಟ್ನಿ ಮಾಡಂತ್ಹೇಳ್ದನೋ
ಏಳ್ ಮಿಗೀನ್ ಕೋಡ್ ತೆಗ್ದೇ, ಕೊಳ್ಚಿ ತೆಗ್ದೇ ಪಲ್ಯ ಮಾಡಂತ್ಹೇಳ್ದನೋ
ಏಳ್ ಹೆಡ್ಗಿ ಸಿಗ್ದೀನ್ ಗಡ್ಡ ತೆಗ್ದೇ ಮೀಸಿ ತೆಗ್ದೇ ಪಲ್ಯ ಮಾಡಂತ್ಹೇಳ್ದನೋ
ಹತ್ತ್ ಖಂಡ್ಗ ಅಕ್ಕಿನ ಅನ್ನ ಮಾಡಂತ್ಹೇಳ್ದನೋ
ಹೂಂ ಸ್ವಾಮಿ, ಮಾಡಂತ್ಹೇಳೂಕ್ ಉಪ್ಪಿಲ್ಲ್ಯಲೆ ಮೆಣ್ಸಿಲ್ಲೆ
ಹಾಂಗೇ ಹೊಸ್ಮಣ್‌ನಾಯ್ಕ ಕರ್ತರ್ ಮನಿಗೆ ಹೋದನೋ
ಹೊಸ್ಮಣ್‌ನಾಯ್ಕ ಏನ್‌ಬಂದೆ ಅಂದ್ ಕರ್ತರ್ ಕೇಳ್ದರೋ
ಏನಿಲ್ಲೆ ಸ್ವಾಮಿ ಉಪ್ಪಿಲ್ದೆ ಮೆಣ್ಸಿಲ್ದೆ ಹಾಂಗೆ ಇತ್ತ್‌ಬಂದಿ ಎಂದನೋ
ಥೂ ಬಾಳ್ ತೀರಿದ ಸೂಳಿಮಗನೇ ಅಂದರು
ಬಾಳಿ ಇತ್ತು ತೊಂಡಿ ಇತ್ತು ಹೀರಿ ಇತ್ತು ಚಂಪ್ತಿ ಇತ್ತು
ಸನ್‌ವಾರ್ ಸನ್‌ವಾರ್ಕಾಗಿ ನಿಮ್ಗೊಂದ್ ಪಲ್ಯದ್ಕಾಯಿ ಕೊಡ್ವೆನು
ಥೂ ಹೀಸ್ ಮುರಿದ ಸೂಳಿಮಗನೇ ಅಂದರು
ಹೀಸಿತ್ತು ನೇಲಿತ್ತು ನೊಗವಿತ್ತು ಬ್ಯಾಸಾಯಿತ್ತು
ನಿಮ್ಗೊಂದ್ ಜೋಡ್ಗಂಟ ಎಬ್ವೆನು
ಹಾಂಗೇ ಹೊಸ್ಮಣ್‌ನಾಯ್ಕ ಮನಿಗ್ ಬಂದನೋ
ಹೆಣ್ಣೇ ಅಂದ್ರ್ ಹೆಣ್ಣ್ ಮಾತಾಡ್ಲಿಲ್ಲೆ
ಥೂರಂಡೆ ಅಂದ್ರ್ ಕೂಡ್ಲೆ ಎನ್‌ಸ್ವಾಮಿ ಅಂದ್‌ಕೇಳ್ದಳೋ
ಅಡ್ಗಿ ಎಲ್ಲಾ ಆಯ್ತಾ ಹೆಣ್ಣೇ ಅಂದ್ ಕೇಳ್ದನೋ

ಹೂಂ ಸ್ವಾಮಿ ಅಂದ್ ಹೇಳ್ದಳೋ
ಹಾಂಗೇ ಹೊಸ್ಮಣ್‌ನಾಯ್ಕ ಸಾನ ಸಂಜಾನ ಪೂರೈಸ್ದನೋ
ಒಂದ್ಹತ್ತಾನ್ ಗೈದ್ದಿ ಹರನ ಒಂದ್ ಬಾಳೆಲಿ ತಂದಿರ್‍ಸಿದ್ನೋ
ಒಂದ್ ಚೌಕದ ಮಣೇನ್ ತಂದಿರ್‍ಸಿದ್ನೋ
ಹೆಣ್ಣೇ ಅಂದ್ರ್ ಹೆಣ್ಣ್ ಮಾತಾಡ್ಲಿಲ್ಲೆ
ಥೂರಂಡೆ ಅಂದ್ರ್ ಕೂಡ್ಲೆ ಏನ್ ಸ್ವಾಮಿ ಅಂದಳೋ
ಎಲ್ಲಾನೂ ತಂದ್ ಬಳ್ಸ್ ಹೆಣ್ಣೇ ಅಂದ್ ಕೇಳ್ದನೋ
ಹತ್ತ್ ಖಂಡ್ಗ ಅಕ್ಕಿ ಅನ್ನ್ವ ಬಳ್ಸಿದಳೋ
ಏಳ್ ಮಿಗೀನ್ ಪಲ್ಯವ ಬಳ್ಸಿದಳೋ
ಒಂಬತ್ತ್ ಹೆಡ್ಗಿ ಮಾಯ್ನ್‌ಕಾಯ್ ಚಟ್ನೀನೆ ಬಳ್ಸಿದಳೋ
ಮತ್ತೇನಿತ್ತಂದಾ ಹೊಸ್ಮಣ್‌ನಾಯ್ಕ ಕೇಳ್ದನೋ
ಮಗೀಗ್ ಮೂರನ್ನ ಮಾತ್ರ ಬೆಚ್ಚಿದ್ದೆ ಅಂತ್ಹೇಳ್ದಳೋ
ಮಗೀನ್ ಬಾಯ್ಗ್ ಮಣ್ಣಾಕ್ ಅಂತ್ ಹೇಳ್ದನೋ
ಮತ್ತೇನಿತ್ತಂದ್ ಹೊಸ್ಮಣ್‌ನಾಯ್ಕ ಕೇಳ್ದನೋ
ಮತ್ತೇನಿಲ್ಲ ಹತ್ತ್‌ಖಂಡ್ಗ ಅಕ್ಕಿಯನ್ದ ತೆಳಿ ಇತ್ತೆಂದ್ ಹೇಳ್ದಳೋ
ಅದಷ್ಟ್ ತಂದ್ಹಾಕೆಂದ್ ಹೊಸ್ಮಣ್‌ನಾಯ್ಕ ಹೇಳ್ದನೋ
ಕಟ್ಟುಡ್ಡಾರ ಕಡ್ಡೇ ಹೋಯ್ತ್ ; ಹುಲುದಾರ ಹಕ್ಕೀ ಹೋಯ್ತ್
ಕರ್ತರ್‌ಮನಿಗ್ ಸುದ್ದಿ ಹೋಯ್ತ್.

---

* ಹೊಸ್ಮಣ್‌ನಾಯ್ಕನ ಕತೆ; ಐತಾಳ ಚಂದ್ರಶೇಖರ ಗುಂಡ್ಮಿ (ಸಂ) ಕೈಲಿಥಿ ಕರೆದ ನೊರೆಹಾಲು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦

## ಆಡು ಮಾತಿನ ಅರ್ಥ

ಅಗಲು – ಹಗಲಕ್ಕ
ಅಂದಲ – ಪಲ್ಲಕ್ಕಿ
ಅಂಬಗೆ – ಬಾಣದಲ್ಲಿ
ಅಟ್ಟಿದಾನೂ – ಇಟ್ಟಿದಾನೆ
ಅರಿ – ಕತ್ತರಿಸು
ಅಳಿ – ಅಚ್ಚು
ಅಳ್ಳಿ – ಅರಳಿ, ಹತ್ತಿ
ಆಲಚ್ನೆ – ಆಲೋಚನೆ
ಇನವಂದ – ವಿನೋದ
ಇಂಬೆ – ನಿಂಬೆ
ಇಸ್ತ್ರೆ – ಹೆಣ್ಣು

ಈಬತ್ತಿ - ವಿಭೂತಿ

ಉಳುಕಳಿ - ಉಳಿದುಕೊಳ್ಳಿ

ಏಡು - ಎರಡು

ಒತ್ತಿನಲಿ - ಪಕ್ಕದಲ್ಲಿ

ಒಳಮಲ್ಲಿ - ಒಳಮನೆಯಲ್ಲಿ

ಕಟವು - ಅದೃಷ್ಟ

ಕಣಕಲಿಕೆ - ಕೊಪ್ಪರಿಕೆ (ಕಿಡ್ಡೇರ ಅವ್ವಣ್ಣ)

ಕತ್ತೋದು - ಹಚ್ಚುವುದು

ಕದಬೆಹಗ್ಗ - ತೆಂಗಿನನಾರಿನ ಹಗ್ಗ

ಕರಕಂತೆ - ಕರೆದುಕೊಳ್ಳುವೆ

ಕಲುಚೇ - ಕಲಸಿ

ಕಾಲುದಲ್ಲಿ - ಕಾಲದಲ್ಲಿ

ಕೀಳಿ - ಎಲೆ

ಕುಡಿತಕ್ಕೂ - ಕುಡಿದಿರಬಹುದು

ಕುಮರಿ - ಬೆಟ್ಟದ ಬತ್ತಿನಲ್ಲಿ ಬೆಳೆಯನ್ನು ಬೆಳೆಯುವುದು

ಕುರ್ಬಾಲ - ಚಿಕ್ಕಬಾಗಿಲು

ಕುಲುಹಿಸ್ತೆ - ಕುಳ್ಳಿಸಿತ್ತು

ಕುವಾಲಿ - ಕುಲಾವಿ, ಟೊಪ್ಪಿಗೆ

ಕೆಸ್ನಾಯಲ್ಯಾ - ಕೆಸುವಿನ ಎಲೆ

ಕೇಸು - ಪೋಣಿಸು

ಕೇಂಡು - ಕೇಳು

ಕೊಡುಲು - ತಗ್ಗು, ಇಳಿಜಾರು

ಗನಾಮಾಡಿ - ಚೆನ್ನಾಗಿ

ಗಳಿಲೆಲ್ಲಾ - ಕಳೆಯಲಿಲ್ಲ

ಗಾಲಿ - ಒಂದು ತರಹಪಾತ್ರೆ

ಗುಟ್ಟಿಕೆ - ಗುಟರಿಕೆ

ಗುಡ್ಲು - ಮೈನೆರೆದ ಹೆಣ್ಣು ಮಕ್ಕಳಿಗೆ ಒಸಗೆ ಹಾಕಿ ಆಲದ ಹಸಿಯ ಸೊಪ್ಪಿನಲ್ಲಿ ಸೋದರ ಮಾವ ಕಟಟಿದ ಗುಡಿಸಲಲ್ಲಿ ಬಿಡುವರು

ಗ್ಯಾರಣ್ಯ - ಘೋರಾರಣ್ಯ

ಗುಗ್ಗರಿ - ತಿನ್ನುವುದಕ್ಕೆಂದು ಕುದಿಸಿ ಕಾಳುಗಳು

ಗೆಡ್ಸು - ಹಚ್ಚಿತಿಕ್ಕು

ಗೌಡಿ - ಸೂಳೆ

ಗೊಂಡ - ಕೆಂಪುವೀಳ್ಯದ ಅಗಿದಕವಳ

ಚಂಚರಣೆ - ಸಂಚಾರ

ಚಂದಿ - ಹಣೆಯ ಮೇಲೆ ಚಂದ್ರವಿರುವಕರು

ಚಿಗಳಿ - ಎಳ್ಳಿನಲ್ಲಿ ಮಾಡುವ ಸಿಹಿ ತಿಂಡಿ

ಚಿಲ - ಕದುರು ಹಾಕುವ ಕಿವಿ (ಚರ್ಮದ್ದು)

ಚೆಂಡಿ - ರುಂಡ

ಚೆಂಬುಳಿಗೆ - ಚಪ್ಪಲಿ

ಜೋಗಿಲ - ಧೋತರ

ತಕ್‌ಹಾಕಿ - ತೆಕ್ಕೆಹಾಕಿ

ತಗಟೇಲ - ಏಳು

ತಜೂರಿ - ತಜೋರಿ

ತಟ್ಯಾಗನ - ತಟ್ಟೆಯೊಳಗಿನ

ತಟ್ಟಿಕಂಡಾ - ತೊಟ್ಟುಕೊಂಡ

ತಿರಿಕಂತೆ - ತಿರುಗಿಕೊಳ್ಳುತ್ತ

ತೆರ - ವರನ ಕಡೆಯವರು ವಧುವಿಗೆ ಕಟ್ಟುವ ಹಣ

ತೊಲೆ - ತೊಳೆ

ತೋಲೊಡ್ಡೆ - ತೋಳಿನ ಮೇಲೆ

ದಗಾ>ದಗದ - ಕೆಲಸ

ದಾಟಿನಗುಂಡಿ - ಒಂದು ಗುಂಡಿಯನ್ನು ತೋಡಿ ಅದಕ್ಕೆ ಕಟ್ಟು ಮಾಡಿಸಿದರೆ ಆ ಗುಂಡಿ ದಾಟಿದವರಿಗೆ ಕೆಟ್ಟದಾಗುವದೆಂಬ ನಂಬಿಕೆ ಇದೆ

ದಾವುಣಿ - ದನಗಳನ್ನು ಸಾಲಾಗಿ ಕಟ್ಟುವ ಹಗ್ಗ

ದಿಂಬೆ, ದಿಂಬ - ದಿಬ್ಬ, ದಿನ್ನೆ

ದುಕ್ಕಲು - ದುಃಖ

ದೇಸಂತ್ರ - ದೇಶಾಂತರ

ದೋಸಿಗರಯ್ಯ - ಜೋಯಿಸ

ನಂದರು - ನನ್ನದಾದರೂ

ನಡವೀಲ - ನೆಡುವೆ

ನಡುಮಟ - ಸೊಂಟದವರೆಗೆ

ನಡುಮಲ್ಲರಬಿ - ನಡುಮನೆಯಲ್ಲಿ ಹರಬಿ

ನರಿಗೆದಾರ - ಸೀರೆಯನ್ನು ಸೊಂಟಕ್ಕೆ ಬಿಗಿಯುವ ದಾರ

ನಾಮಿದು - ನಪುಂಸಕ

ನಿದುರೆ - ನಿದ್ರೆ

ನೀರಡ್ಡೆ - ನೀರನ್ನು ತರುವ ಬಿದಿರ ಸಾಧನ

ನೆಗದಿ - ಎತ್ತಿ

ನೆಂಗು - ಆರು

ನೆರಿ - ನರಿ

ನೇಲಾ - ನೇಗಿಲು

ಪಾಪಸು - ಪಾದರಕ್ಷೆ

ಪೇಳು - ಹೇಳು

ಪುಂಜಿಯಮಾಡಿ - ತಬ್ಬಿ ಪ್ರೀತಿ ಮಾಡಿ

ಬಳಿ - ಕೂಡಿಸು

ಬಂಕ - ಆಸನ

ಬಟ್ಟಕೋಲ - ಭಟ್ಟರುಗಳ

ಬಲ್ಲಿ - ಬನ್ನಿ

ಬಸ್ವ - ಅಸವ

ಬಣ್ಣ - ಸೀರೆ

ಬಾಲಗಿಟು - ಬಾಲನಿಗಿಷ್ಟು

ಬಾಶಿ - ಭಾಷೆ

ಬಾನ - ಅನ್ನ

ಬಾಕಿ - ಎತ್ತರ ಪ್ರದೇಶ

ಬಾನಿ - ದನಕರುಗಳಿಗೆ ನೀರು ತುಂಬುವ ಸಾಧನ

ಬಿಟ್ಟಿತ್ತಾವು - ಬಿಟ್ಟ ಎಡೆಯಲ್ಲಿ

ಬೆಲ್ಲುಜಮಿ - ಬೆಳಗು ಮುಂಜಾನೆ

ಬೇಸಿ - ಬೇಯಿಸಿ

ಬೋಳಿ - ಕೋಡಿಲ್ಲದ ಆಕಳು

ಮಟ - ಶಾಲೆ

ಮಟ್ಟೆ - ಮೊಟ್ಟೆ

ಮದವರಿ - ಮರ್ಯಾದೆ

ಮಂಚದಾಗೌಡ - ಏನೂ ಅರಿಯದ ಗೌಡ

ಮನಿಕಣೀ - ಮುಳಗಿಕೊಳ್ಳು

ಮಸ್ತಾರೊ - ಮಸೆದರು

ಮರುಕಣೀ - ಮರೆತುಕೊಳ್ಳು

ಮರ್ಕು - ದುಃಖಪಡು

ಮಾಗಾಯ್ - ಮಾವಿನಕಾಯಿ ಆಕಾರದ ಆಭರಣ

ಮುಕ್ಕಾದ - ಒಡೆದ, ಬದಿಹೋದ

ಮುಗಿತ್ತೊ - ಮೊಗೆದಳು

ಮುನದ - ಸಿಟ್ಟಾದ

ಮುರಾವು - ಆಭರಣ ವಿಶೇಷ

ಮೂಡೆ - ಧಾನ್ಯ ತುಂಬುವ ಒಂದು ಬಗೆಯ ಹುಲ್ಲಿನ ಸಾಧನ

ಮೆಂದ - ಮೆಲಿದ

ರಗತ - ರಕ್ತ

ರಕ್ಕೂಲಿಸಿ - ಸಿಟ್ಟಾಗಿ

ರ್‍ಯಾಗುಟೆ - ಆಭರಣ ವಿಶೇಷ

ರಾಜುಣ - ಧ್ಯಾನ

ರಾಮರೈತ - ಬಹಳ ರಕ್ತ

ರುಲಿ - ಒಂದು ಆಭರಣ

ಲರುಗಿತ್ತೆ - ಎರಗಿತ್ತು

ಲಣ್ಣು - ಹಣ್ಣು

ಲತ್ತಗದೀರೂ - ಅತ್ತಿಗೆಯರು

ಲಬ್ಬರಗಿ - ಹಬ್ಬಸಿಗೆ ಎಂಬ ಕೆಂಪು ಹೂ

ಲಶುವಾದರೆ - ಹಸಿವಾದರೆ

ಲಶುವಂತ - ಅಶ್ವತ್ಥ

ಲತ್ತೆ - ಅತ್ತೆ

ಲಾದರಿಗಿತ್ತಿ - ಹಾದರಗಿತ್ತಿ

ಲಾರಣ್ಯ - ಅರಣ್ಯ

ಲಿಂದೊಮ್ಮೆ - ಹಿಂದೊಮ್ಮೆ

ಲೋಟಾ - ನೋಟ

ವನದೇಶ - ವನವಾಸ

ವಲುವೋಮ - ಅತ್ತಿತ್ತ ಒನೆಯುವುದು

ವಾಡೆ - ದಿನಸಿಯನ್ನು ತುಂಬುವ ಮಣ್ಣಿನ ಸಾಧನ

ಶಡಿ - ಸಿಡಿಸು

ಶಂಜಿ - ಸಂಜೆ

ಶಂಬೀ - ಚಂಬನ್ನು

ಶಮುದರ - ಸಮುದ್ರ

ಶರಿ - ಪರಪಳಿ

ಶಲುಸಿದ್ದೆ - ಸಲ್ಲಿಸಿದ್ದೆ

ಶವಣಿದ್ದೆ - ಸಿದ್ಧಳಾಗಿರುವೆ

ಶಾಲಕಣ್ಣನ್‌ನೆರಿ - ದೊಡ್ಡ ಕಣ್ಣಿನ ನರಿ, ತೋಳ

ಶಿನ್ನ - ಚಿನ್ನ

ಶುಮ್ಮನೆ - ಸುಮ್ಮನೆ

ಶೂಡಲು - ಸುಡಲಿಕ್ಕೆ

ಸಣ್ಣಗುಂಡು - ಆಭರಣ ವಿಶೇಷ

ಸಣ್ಣಾಡು - ಶರಣುಮಾಡು, ನಮಸ್ಕರಿಸು

ಸಾಲಿಯ - ನೇಯ್ದ ಬಟ್ಟೆ ಉಡುಪನ್ನು

ಸಿಕ್ಕೇದಂಬೂ - ಸಿಕ್ಕಿದೆ ಎನ್ನುವ

ಸದುರಿ - ಹಾಸಿಗೆ

ಸಪ್ಪರ - ಚಪ್ಪರ

ಸರುಪರಾಯ - ಸರ್ಪ

ಸವ್ರಿ - ಸವತಿ

ಸುಳಿಚಿಗುರು - ಬಲಿ, ದೊಡ್ಡದಾಗು

ಸುಳಿದಿರೋ - ಸುಳಿಯಬೇಡ

ಸೆರೆಮುಕ್ಕ - ಬೊಗಸೆಪೂರ್ತಿ ಇಲ್ಲದ

ಸೆಲ್ಯೆ - ಶಲ್ಯ

ಸೊರುದಂತಾ - ಸುರದಂಥ

ಸಂತುಣೆ - ಮುದ್ದಾನೆ

ಹಂಡ್ಹುಲಿ - ಪಟ್ಟೆಹುಲಿ

ಹೆಬ್ಬಾಗಿಲು - ದೊಡ್ಡಬಾಗಿಲು

ಹಮ್ಮಿಗಿ - ಚಕ್ರಕ್ಕೆ ಸುತ್ತುವ ದಾರ

ಹರಲಿ - ಅಪವಾದ

ಹರದೆರ - ಮುತ್ತೈದೆಯರ

ಹಲ್ಲಮುಕ್ಕಳಿಸಿ - ಬಾಯಿಮುಕ್ಕಳಿಸಿ

ಹಾರಕೊಡು - ಬಲಿಕೊಡು

ಹಾವ್ತಿ - ಆಹುತಿ

ಹಿರಿತನ - ಮನೆತನದ ಜವಾಬ್ದಾರಿ

ಹೂಡಾಕ - ಗದ್ದೆಉಳಲು

ಹೂ್ರಗಂಟ್‌ಹೂಗಾ - ಎಲ್ಲಾ ತರದ ಹೂಗಳನ್ನು

ಹೆರಗೆ - ಹೊರಗೆ

ಹೆರಟೇ - ಹೊರಡು

ಹಲ್ಲಿ - ಹಳ್ಳಿ

## ಬಳಸಿಕೊಂಡ ಸಂಕಲನಗಳು ಮತ್ತು ಗ್ರಂಥಗಳು


-ಅಂದನೂರು ಶೋಭ (ಸಂ), **ಕೊಂಬೆ ರೆಂಬೆಲ್ಲ ಎಳೆಗಾಯಿ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ೧೯೭೮.

-ಐತಾಳ ಚಂದ್ರಶೇಖರ ಗುಂಡ್ಮಿ (ಸಂ), **ಕೈಲಿಯ ಕರೆದ ನೊರೆ ಹಾಲು,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೦.

-ಐತಾಳ ಶಿವರಾಮ ಕೆ. (ಸಂ), **ದಕ್ಷಿಣ ಕನ್ನಡ ಜನಪದ ಸಾಹಿತ್ಯ,** ಶಾರದಾ ಮಂದಿರ, ಮೈಸೂರು ೧೯೭೧.

-ಕ.ರಾಕೃ. (ಸಂ), **ಹಾಡಿನಲ್ಲಿ ನಾಡಕತೆಗಳು,** ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೬೨.

-ಕ.ರಾಕೃ. (ಸಂ), **ಅಣಜಿ ಹೊನ್ನಮ್ಮ,** ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೬೪.

-ಕ.ರಾಕೃ. (ಸಂ), **ಗುಡ್ಡಾಡಿನ ಹಾಡ್ಗತೆಗಳು,** ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೬೪.

-ಕ.ರಾಕೃ. (ಸಂ), **ಸೂಸಿ ಹರಿದಾಳ ಶಿವಗಂಗೆ,** ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೬೪.

-ಕಾಪಸೆ ರೇವಪ್ಪ (ಸಂ), **ಮಲ್ಲಿಗೆ ದಂಡೆ,** ಸಮಾಜ ಪುಸ್ತಕಾಲಯ, ಧಾರವಾಡ ೧೯೭೦.

-ಕಾವ್ಯಜೀವಿ (ಸಂ), **ಹಾಡೇಳ ತಂಗಿ ದನಿ ಎತ್ತಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೯.

-ಕಾಳೇಗೌಡ ನಾಗವಾರ (ಸಂ), **ಬಯಲುಸೀಮೆಯ ಲಾವಣಿಗಳು,** ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು ೧೯೭೩.

-ಕಾಳೇಗೌಡ ನಾಗವಾರ (ಸಂ), **ಬೇಕಾದ ಸಂಗಾತಿ,** ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ೧೯೭೦.

-ಕೂಡಿಗೆ ಶ್ರೀಕಂಠ ಕೆ. (ಸಂ), **ಅಂಟಿಗೆ ಪಂಟಿಗೆ ಪದಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೩.

-ಕೃಷ್ಣಯ್ಯ ಎಸ್.ಎ. (ಸಂ), **ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದ ಗೀತೆಗಳು,** ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ ೧೯೯೨.

-ಕೆದ್ಲಾಯ ಕುಂಜಿಬೆಟ್ಟು ಸುಬ್ರಹ್ಮಣ್ಯ (ಸಂ), **ಹಾಡಿಗೆ ಹನ್ನೆರಡು ಕಬರು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೩.

-ಕೇಶವ ಭಟ್ಟ (ಸಂ), **ಹಾಡಿನ ಚೂಡಾಮಣಿ,** ಚಿರ ಪ್ರಕಾಶನ, ಬೆಂಗಳೂರು ೧೯೭೧.
-ಕಂಬಾರ ಚಂದ್ರಶೇಖರ ಮತ್ತು ಬರಗೂರು ಜಯಪ್ರಕಾಶ (ಸಂ), **ಮುತ್ತು ಮುತ್ತಿನ ತ್ವಾಟ,** ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ೧೯೮೧.
-ಕಂಬಾಳು ಸಿದ್ಧಗಂಗಯ್ಯ ಬಿ. (ಸಂ), **ಮಾತಾಡು ಮಲ್ಲಿಗೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ೧೯೭೩.
-ಖಾಡೆ ಜಿ.ಬಿ. (ಸಂ), **ಕಾಡು ಹೂಗಳು,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೩.
-ಖಂಡೋಬಾ ಪಿ.ಕೆ. (ಸಂ), **ಜನಪದ ಕಥನ ಗೀತೆಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೬.
-ಗದ್ದಿಗಿಮಠ ಬಿ.ಎಸ್. (ಸಂ), **ಜನತಾ ಗೀತೆಗಳು,** ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ ೧೯೫೬.
-ಗುಂಡಪ್ಪ ಎಲ್. (ಸಂ), **ನಾಡಪದಗಳು,** ಬೆಂಗಳೂರು ೧೯೪೭.
-ಗುರುಪ್ರಸಾದ ಸಿ.ಟಿ. (ಸಂ), **ಕೆರೆ ಹೊನ್ನಮ್ಮನ ಕಾವ್ಯ,** ಬ್ಯಾಲದಕೆರೆ ಪ್ರಕಾಶನ, ಬ್ಯಾಲದಕೆರೆ ೨೦೦೩.
-ಚಂದ್ರಯ್ಯ ಬಿ.ಎನ್. (ಸಂ), **ಜಾನಪದ ಕಥನ ಗೀತೆಗಳು,** ಶರತ್ ಪ್ರಕಾಶನ, ಮೈಸೂರು ೧೯೭೯.
-ಜಯಲಕ್ಷ್ಮಿ ಸೀತಾಪುರ, (ಸಂ), **ನಮ್ಮ ಸುತ್ತಿನ ಜನಪದ ಕಥನಗೀತೆಗಳು**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೪.
-ದೊರೆಸ್ವಾಮಿ ಹೊರೆಯಾಲ (ಸಂ), ನಾಲಿಗೆ ಅಕ್ಸರಕ ಒದುಗವ್ವ, ನುಡಿ ಪ್ರಕಾಶನ, ಮೈಸೂರು ೧೯೭೪.
-ನಳಿನಿ ಎಂ.ಬಿ. (ಸಂ) **ಕಾಡುಮಲ್ಲಿಗೆ,** ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೨.
-ನಾಗೇಗೌಡ ಎಚ್.ಎಲ್. (ಸಂ), **ಸೋಬಾನೆ ಚಿಕ್ಕಮ್ಮನ ಪದಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೨.
-ನಾಗೇಗೌಡ ಎಚ್.ಎಲ್. (ಸಂ), **ಪದವವೆ ನಮ್ಮ ಎದೆಯಲ್ಲಿ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೬.
-ನಾಗೇಗೌಡ ಎಚ್.ಎಲ್. (ಸಂ), **ದುಂಡಮಲ್ಲಿಗಿ ಹೂವ ಬುಟ್ಟೀಲಿ ಬಂದಾವ,** ಕರ್ನಾಟಕ ಜಾನಪದ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೫.
-ನಾಯಕ ಡಿ.ಬಿ. (ಸಂ), **ಬುಲಾಯಿ ಹಾಡುಗಳು,** ಬಂಜಾರ ಪ್ರಕಾಶನ, ಗುಲ್ಬರ್ಗಾ ೨೦೦೧.
-ನಾಯಕ ಎನ್.ಆರ್. (ಸಂ), **ಪಾಠಾಂತರ ಕಥನ ಕವನಗಳು,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭.
-ನಾಯಕ ಎನ್.ಆರ್. (ಸಂ), **ಕುಮಾರಪಂತರ ಕಥನ ಕವನಗಳು,** ಜಾನಪದ ಪ್ರಕಾಶನ, ಹೊನ್ನಾವರ ೨೦೦೪.
-ನೆಲ್ಲಿಸರ ಬಸವರಾಜ, (ಸಂ), **ಜನಪದ ಕಾವ್ಯ ಸಂಚಯ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೮೪.
-ಪರಮಶಿವಯ್ಯ ಜೀ.ಶಂ. (ಸಂ), **ಜಾನಪದ ಖಂಡ ಕಾವ್ಯಗಳು,** ಶಾರದಾ ಮಂದಿರ, ಮೈಸೂರು ೧೯೬೮.
-ಪಾಂಡುರಂಗ ಡಿ.ಆರ್. **ದಕ್ಷಿಣ ಕನ್ನಡ ಜಿಲ್ಲೆಯ ಭೈರರು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೬೮.
-ಬಸವರಾಜ ಮಲಶೆಟ್ಟಿ (ಸಂ), **ಇಜಿಯಣ್ಣನ ಹಾಡು,** ಯುವಕ ಸಂಘ, ರಾಮನಗರ ೧೯೮೨.
-ಬಳ್ಳಗೆರೆ ಹನುಮಂತಪ್ಪ (ಸಂ), **ಮದಗದ ಕೆಂಚಮ್ಮ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೪.
-ಭಟ್ ಎಲ್.ಜಿ. (ಸಂ), **ಹಾಲಕ್ಕಿ ಪಾಯಸ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೪.
-ಭಾನುಮತಿ ವೈ.ಸಿ. (ಸಂ), **ಪುಟ್ಟ ಮಲ್ಲಿಗೆ ಹಿಡಿತುಂಬ,** ಪ್ರಿಂಟಿಂಗ್ ಪ್ರೆಸ್, ಮೈಸೂರು ೨೦೦೧.
-ಮತಿಘಟ್ಟ ಕೃಷ್ಣಮೂರ್ತಿ (ಸಂ), **ಕನ್ನಡ ಜನಪದ ಸಾಹಿತ್ಯ ಭಂಡಾರ (ಸಂ), ಗೀತೆಗಳು,** ಗುರುಮೂರ್ತಿ ಪ್ರಕಾಶನ, ಬೆಂಗಳೂರು ೧೯೭೫.
-ಮಹದೇವ ನಾಯಕ ಸ.ಚ. (ಸಂ), **ಸಂಪಿಗೇ ಅರಳೀವೆ,** ಕಾವ್ಯಾಲಯ, ಪ್ರಕಾಶನ, ಮೈಸೂರು ೧೯೬೧.
-ಮೈಲಹಳ್ಳಿ ರೇವಣ್ಣ (ಸಂ), **ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೮೪.

-ರಮೇಶ ಜಿ.ಕೆ. (ಸಂ), **ನೀತ್ಯುಳ್ಳ ಜ್ಯೋತಿ ನಡೆಮುಂದೆ,** ಚಕೋರ ಪ್ರಕಾಶನ, ತೀರ್ಥಹಳ್ಳಿ ೧೯೯೭.

-ರಾಜಪ್ಪ ಟಿ.ಎಸ್. (ಸಂ.) **ರಾಯಚೂರು ಜಿಲ್ಲೆಯ ಜನಪದ ಗೀತೆಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೪.

-ರಾಜಪ್ಪ ಟಿ.ಎಸ್. (ಸಂ), **ಕೆರೆಹೊನ್ನಮ್ಮ ಮತ್ತು ಇತರ ಲಾವಣಿಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೪.

-ರಾಮಣ್ಣ ಕ್ಯಾತನಹಳ್ಳಿ (ಸಂ), **ಬೀದರ ಜಿಲ್ಲೆಯ ಜನಪದ ಗೀತೆಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೭.

-ರಾಮಣ್ಣ ಕ್ಯಾತನಹಳ್ಳಿ (ಸಂ), **ಐದು ಜನಪದ ಕಥನ ಗೀತೆಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೭.

-ರಾಮಸ್ವಾಮಿ ಎಸ್. ಮತ್ತು ನಟರಾಜ್ ಎಂ.ಬಿ. (ಸಂ), **ಹಾಡಾಕೆ ಬೈಗುಂಟೆ ಬೆಳಗುಂಟೆ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೭.

-ರಾಮಸ್ವಾಮಿ ಎಸ್. (ಸಂ), **ಹಳ್ಳಿಯ ಪದಗಳು,** ಸರಸ್ವತೀ ಪುಸ್ತಕ ಭಂಡಾರ, ಮಂಡ್ಯ ೧೯೪೦.

-ರಂಗಣ್ಣ ವಿ.ಎಸ್. (ಸಂ), **ಕೋಲ್ ಕೋಲ್ ಕೂಡಿ ಬರಲಿ.,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೭.

-ಲಿಂಗಯ್ಯ ಡಿ. (ಸಂ) **ಕರ್ನಾಟಕ ಜನಪದ ಕಾವ್ಯಗಳು,** ದಿನಕರ ಪ್ರಕಾಶನ, ಬೆಂಗಳೂರು ೧೯೭೭.

-ಸುಬ್ಬಣ್ಣ ಕೆ.ವಿ. (ಸಂ), **ಅವರು ನೀಡಿದ ದೀಪ,** ಅಕ್ಷರ ಪ್ರಕಾಶನ, ಸಾಗರ-ಶಿವಮೊಗ್ಗ ೧೯೫೮.

-ಸುಂಕಾಪುರ ಎಂ.ಎಸ್. (ಸಂ), **ಜೀವನ ಜೋಕಾಲಿ (ಕೋಲುಪದ),** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೭.

-ಹಕಾರಿ ದೇವೇಂದ್ರ ಕುಮಾರ, **ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೫.

-ಹನೂರು ಕೃಷ್ಣಮೂರ್ತಿ (ಸಂ), **ಕತ್ತಾಲದಾರಿ ದೂರ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೩.

-ಹನೂರು ಕೃಷ್ಣಮೂರ್ತಿ (ಸಂ), **ಜನಪದ ಮತ್ತು ಬುಡಕಟ್ಟು ಗೀತೆಗಳು,** ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೮.

-ಹಿರಿಯಣ್ಣ ಅಂಬಳಿಕೆ (ಸಂ), **ತೀರ್ಥಹಳ್ಳಿ ಸುತ್ತಿನ ಲಾವಣಿಗಳು,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೭.

-ಹಿರಿಯಣ್ಣ ಅಂಬಳಿಕೆ (ಸಂ), **ಕಾಡುಗೊಲ್ಲರ ಜನಪದ ಗೀತೆಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೮.

-ಹಿರಿಯಣ್ಣ ಅಂಬಳಿಕೆ (ಸಂ), **ಕಿನ್ನರಿ ಸಂಪ್ರದಾಯದ ಕಾವ್ಯಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೯.

-ಹೆಗಡೆ ಎಲ್.ಆರ್. (ಸಂ), **ಸುವ್ವೀ ಸುವ್ವೀ ಸುವ್ವಾಲೆ,** ಸಮಾಜ ಪುಸ್ತಕಾಲಯ, ಧಾರವಾಡ ೧೯೭೧.

-ಹೆಗಡೆ ಎಲ್.ಆರ್. (ಸಂ), **ಪರಮೇಶ್ವರಿಯ ಪದಗಳು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ೧೯೭೨.

-ಹೆಗಡೆ ಎಲ್.ಆರ್. (ಸಂ), **ಗುಮ್ಮನ ಪದಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೩.

-ಹೆಗಡೆ ಎಲ್.ಆರ್. (ಸಂ), **ಕೆಲವು ಲಾವಣಿಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೩.

-ಹೆಗಡೆ ಎಲ್.ಆರ್. (ಸಂ), **ಗುಮಟೆಯ ಪದಗಳು,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೮.

-ಹೆಗಡೆ ಎಲ್.ಆರ್. (ಸಂ), **ಮುಕರಿ ಪದಗಳು,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೯.

-ಹೆಗಡೆ ಎಲ್.ಆರ್. (ಸಂ), **ಮಾಚಿಯ ಕಥನಗೀತೆಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೨.

-ಹೆಗಡೆ ಎಲ್.ಆರ್. (ಸಂ), **ಲೋಕಗೀತೆ ಮಂಜರಿ-ಜಾನಪದ ಗೀತ ಸಂಕಲನ,** ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ ೨೦೦೨.

-ಹೆಬ್ಬಾಳೆ ಜಗನ್ನಾಥ (ಸಂ), **ಬುಲಾಯಿ ಹಾಡುಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೭.

-ಹೆಂಡಿ ಬಿ.ಬಿ. (ಪ್ರ.ಸಂ.) ಸುಂಕಾಪೂರ ಎಂ.ಎಸ್. (ಸಂ) **ಆಯ್ದ ಜನಪದ ಕಥನ ಗೀತೆಗಳು,** ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೯.